ಬೇಂದ್ರೆ ಸಾಹಿತ್ಯ: ವಿಮರ್ಶೆಯ ಸ್ವರೂಪ ಮತ್ತು ತಾತ್ವಿಕತೆ

(ದ. ರಾ. ಬೇಂದ್ರೆ ಸಾಹಿತ್ಯ ಕುರಿತ ವಿಮರ್ಶೆಗಳ ಅಧ್ಯಯನ)

ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ.) ಪದವಿಗಾಗಿ

ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಅಧ್ಯಯನ ಮಹಾಪ್ರಬಂಧ

ನೋಂದಣಿ ಸಂಖ್ಯೆ / ದಿನಾಂಕ :
೧೪೦೨೦೧೦೨೦೦೦೬/೨೨.೦೯.೨೦೧೪

ಸಂಶೋಧನಾ ಅಭ್ಯರ್ಥಿ

ರವಿಶಂಕರ ಎ. ಕೆ.

ಮಾರ್ಗದರ್ಶಕ

ಡಾ. ಕೆ. ಸಿ. ಶಿವಾರೆಡ್ಡಿ

ಕುವೆಂಪು ಕನ್ನಡ ಅಧ್ಯಯನ ಕೇಂದ್ರ, ಕುಪ್ಪಳಿ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩೨೭೬

೨೦೧೯

ಬೇಂದ್ರೆ ಸಾಹಿತ್ಯ: ವಿಮರ್ಶೆಯ ಸ್ವರೂಪ ಮತ್ತು ತಾತ್ವಿಕತೆ

(ದ. ರಾ. ಬೇಂದ್ರೆ ಸಾಹಿತ್ಯ ಕುರಿತ ವಿಮರ್ಶೆಗಳ ಅಧ್ಯಯನ)

ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ.) ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಅಧ್ಯಯನ ಮಹಾಪ್ರಬಂಧ

ನೋಂದಣಿ ಸಂಖ್ಯೆ / ದಿನಾಂಕ :

೧೪೦೨೧೦೨೦೦೦೬/೨೨.೦೯.೨೦೧೪

ಸಂಶೋಧನಾ ಅಭ್ಯರ್ಥಿ

ರವಿಶಂಕರ ಎ.ಕೆ.

ಮಾರ್ಗದರ್ಶಕ

ಡಾ. ಕೆ. ಸಿ. ಶಿವಾರೆಡ್ಡಿ

ಕುವೆಂಪು ಕನ್ನಡ ಅಧ್ಯಯನ ಕೇಂದ್ರ, ಕುಪ್ಪಳಿ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

೨೦೧೯

ಮಾರ್ಗದರ್ಶಕರ ದೃಢೀಕರಣ ಪತ್ರ

ರವಿಶಂಕರ ಎ. ಕೆ. ಇವರು ನನ್ನ ಮಾರ್ಗದರ್ಶನದಲ್ಲಿ **'ಬೇಂದ್ರೆ ಸಾಹಿತ್ಯ: ವಿಮರ್ಶೆಯ ಸ್ವರೂಪ ಮತ್ತು ತಾತ್ವಿಕತೆ'** ಎಂಬ ವಿಷಯವನ್ನು ಕುರಿತ ಪಿಎಚ್.ಡಿ. ಸಂಶೋಧನಾ ಮಹಾಪ್ರಬಂಧವನ್ನು ಸಿದ್ಧಪಡಿಸಿರುತ್ತಾರೆ. ಪ್ರಸ್ತುತ ಮಹಾಪ್ರಬಂಧವು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : 30.10.2019

ಸ್ಥಳ : ಬೆಂಗಳೂರು

[signature]

ಡಾ. ಕೆ.ಸಿ. ಶಿವಾರೆಡ್ಡಿ

ಮುಖ್ಯಸ್ಥ / ಪ್ರಾಧ್ಯಾಪಕ

ಡಾ. ರಾಜಕುಮಾರ್

ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು

ವಿಸ್ತರಣಾ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸಂಶೋಧಕರ ಪ್ರಮಾಣ ಪತ್ರ

'ಬೇಂದ್ರೆ ಸಾಹಿತ್ಯ : ವಿಮರ್ಶೆಯ ಸ್ವರೂಪ ಮತ್ತು ತಾತ್ವಿಕತೆ' ವಿಷಯವನ್ನು ಕುರಿತ ಪಿಎಚ್.ಡಿ. ಸಂಶೋಧನಾ ಮಹಾಪ್ರಬಂಧವನ್ನು **ಡಾ. ಕೆ.ಸಿ. ಶಿವಾರೆಡ್ಡಿ** ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತೇನೆ. ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಭಾಷಾ ನಿಕಾಯದ ಕುವೆಂಪು ಕನ್ನಡ ಅಧ್ಯಯನ ಕೇಂದ್ರ, ಕುಪ್ಪಳಿಯ ವಿಭಾಗಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ರವಿಶಂಕರ ಎ. ಕೆ.

ಸಂಶೋಧನಾ ಅಭ್ಯರ್ಥಿ

ಅಳಿಲುಘಟ್ಟ (ಅಂಚೆ)

ಗುಬ್ಬಿ ತಾಲ್ಲೂಕು

ತುಮಕೂರು ಜಿಲ್ಲೆ ೫೭೨೨೨೨

ಕರ್ನಾಟಕ ರಾಜ್ಯ

ಪರಿವಿಡಿ

* * * * *

ಅಧ್ಯಾಯ–೧

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಹಾಗೂ ವಿಧಾನ

೧.೧ ಪೀಠಿಕೆ

೧.೨. ಅಧ್ಯಯನದ ಉದ್ದೇಶ

೧.೩. ಅಧ್ಯಯನದ ಸ್ವರೂಪ

೧.೪. ಅಧ್ಯಯನದ ವ್ಯಾಪ್ತಿ

೧.೫. ಅಧ್ಯಯನದ ವಿಧಾನ

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಹಾಗೂ ವಿಧಾನ

೧.೧ ಪೀಠಿಕೆ

ಬೇಂದ್ರೆ ಅವರ ಸಾಹಿತ್ಯವನ್ನು ಕುರಿತು ಇದುವರೆಗೂ ನಡೆದಿರುವ ಅಧ್ಯಯನಗಳ ವಿಮರ್ಶಾ ಸ್ವರೂಪ, ತಾತ್ವಿಕ ಚಿಂತನೆಯನ್ನು ಅಧ್ಯಯನ ಮಾಡುವುದು ಈ ಪ್ರಬಂಧದ ಮುಖ್ಯ ಉದ್ದೇಶವಾಗಿದೆ.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ವಿಮರ್ಶೆಯ ಬೆಳವಣಿಗೆಯು ಇನ್ನಿತರೆ ಸಾಹಿತ್ಯ ಪ್ರಕಾರಗಳಂತೆಯೆ ವಿಕಾಸಗೊಂಡಿತು. ಹತ್ತೊಂಬತ್ತನೆಯ ಶತಮಾನದ ಕೊನೆಯ ದಶಕಗಳಲ್ಲಿ ವಸಾಹತುಶಾಹಿ ಆಕ್ರಮಣದೊಂದಿಗೆ ರಾಜಕೀಯ ಹಾಗೂ ಸಾಂಸ್ಕೃತಿಕವಾಗಿ ಅನೇಕ ಪಲ್ಲಟಗಳು ಜರುಗಿದವು. ಸಾಹಿತ್ಯದ ಮೇಲೆಯೂ ಪ್ರಭಾವ ಬೀರಿದವು. ಇದೇ ಸಮಯದಲ್ಲಿ ನಮ್ಮ ದೇಶಕ್ಕೆ ಪಾಶ್ಚಾತ್ಯ ಸಾಹಿತ್ಯ ಪ್ರವೇಶ ಪಡೆಯಿತು. ಕನ್ನಡ ಸಾಹಿತ್ಯದಲ್ಲೂ ಇದರ ಪ್ರಭಾವ ಕಂಡುಬಂದಿತು. ಈ ಹಿಂದಿನ ಸಾಹಿತ್ಯ ಕೂಡ ಭಿನ್ನವಾದ ಸಂವೇದನೆ, ಧೋರಣೆ, ಹಾಗೂ ವಿವಿಧ ಪ್ರಕಾರಗಳಲ್ಲಿ ಸಾಹಿತ್ಯ ಸೃಷ್ಟಿಯಾಗತೊಡಗಿತು. ಮಹಾಕಾವ್ಯವೇ ಪ್ರಧಾನವಾಗಿದ್ದ ಸಾಹಿತ್ಯ ಪರಂಪರೆಯಲ್ಲಿ ಹೊಸ ಸಾಹಿತ್ಯ ಪ್ರಕಾರಗಳಾಗಿ ಕವಿತೆ, ಕಾದಂಬರಿ, ಪ್ರಬಂಧ, ನಾಟಕ, ವಿಮರ್ಶೆ, ಆತ್ಮಕತೆ, ನಾಟಕ ಮೊದಲಾದ ಮಾಧ್ಯಮದಲ್ಲಿ ಸಾಹಿತ್ಯ ಸೃಷ್ಟಿಯಾಯಿತು.

ಕನ್ನಡದಲ್ಲಿ ಸೃಷ್ಟಿಗೊಂಡ ಸಾಹಿತ್ಯವನ್ನು ಗ್ರಹಿಸುವ ವಿಶ್ಲೇಷಿಸುವ ಕೆಲಸವನ್ನು ವಿಮರ್ಶೆ ವ್ಯವಸ್ಥಿತವಾಗಿ ಮಾಡುತ್ತಿದೆ. ಪತ್ರಿಕೆಗಳು, ಸಂಚಿಕೆಗಳು, ಲೇಖನಗಳು, ಭಾಷಣಗಳು, ಚರ್ಚೆ, ಗೋಷ್ಠಿಗಳಂತಹ ಹಲವು ಚಿಂತನೆಯ ಮಾರ್ಗದಲ್ಲಿ ಜನರಿಗೆ ಸಾಹಿತ್ಯ ಪರಿಚಯ ಆಗಲಾರಂಭಿಸಿತು. ಪ್ರಾಚೀನ ಸಾಹಿತ್ಯವನ್ನು ಗ್ರಹಿಸಲು ಸೃಷ್ಟಿಗೊಂಡ ಸಂಪಾದನೆ, ಟೀಕಾಬರಹ, ಸಾರಾಂಶ, ನಿಘಂಟು ಈ ರೂಪದ ಬರಹಗಳು ಹಾಗೂ ಅಧ್ಯಯನಗಳು ಪ್ರಾರಂಭವಾದವು. ಇಲ್ಲೆಲ್ಲಾ ವಿಮರ್ಶೆಯ ಪಾತ್ರವನ್ನು ಅತ್ಯಂತ ಸಹಜವಾಗಿಯೇ ಗುರುತಿಸಬಹುದು. ನವೋದಯ ಕಾಲಘಟ್ಟದಲ್ಲಿ ಬೆಳಕು ಕಂಡ ವಿಮರ್ಶಾ ಪ್ರಕಾರವು ನವೋದಯ ಪೂರ್ವದಲ್ಲಿಯೇ ಕನ್ನಡ ಸಾಹಿತ್ಯದಲ್ಲಿ ಮೊದಲ ಹೆಜ್ಜೆಗಳನ್ನು ರೂಪಿಸಿರುವುದನ್ನು ಗಮನಿಸಬಹುದು. 'ಕನ್ನಡದಲ್ಲಿ ವಿಮರ್ಶೆ' ಎಂಬ ಗ್ರಂಥದಲ್ಲಿ ಪ್ರಭುಶಂಕರ ಅವರು ಈ ರೀತಿ ಅಭಿಪ್ರಾಯಪಟ್ಟಿದ್ದಾರೆ.

> ಕನ್ನಡ ವಿಮರ್ಶೆ ಬೆಳೆಯಲು ಪ್ರಾರಂಭಿಸಿದ್ದು ಸಹಜವಾಗಿಯೇ ಸಂಸ್ಕೃತ ಕೃತಿಗಳನ್ನೂ ಪ್ರಾಚೀನ ಕನ್ನಡ ಗ್ರಂಥಗಳನ್ನೂ ಪರಿಚಯ ಮಾಡಿಕೊಡಲು ಪ್ರಾರಂಭ ಮಾಡಿದ್ದರಿಂದ ಈ ದಿಕ್ಕಿನಲ್ಲಿ ಬಹುಶಃ ಮೊಟ್ಟ ಮೊದಲ ಕೃತಿ ಮಂ. ಆ. ರಾಮಾನುಜ ಅಯ್ಯಾಂಗಾರ್ ಅವರ 'ಕವಿಚರ್ಕವರ್ತಿ

ರನ್ನನ ಜೀವನ ಚರಿತ್ರೆ, ಗ್ರಂಥ ವಿಮರ್ಶೆ ಇತ್ಯಾದಿ'(೧೯೪೫) ಈ ಗ್ರಂಥದಲ್ಲಿ ಲೇಖಕರು ರನ್ನನ ಜೀವನ ಚರಿತ್ರೆಯ ಜತೆಗೆ ಅವರ ಕೃತಿಗಳ ಪರಿಚಯಾತ್ಮಕ ವಿಮರ್ಶೆಯನ್ನು ಒದಗಿಸಿದ್ದಾರೆ. [ಚೆಂಬೆಳಕು-ಸೀತಾರಾಮಯ್ಯ ಎಂ.ವಿ(ಸಂ)೧೯೭೦].

ನಮ್ಮ ಪ್ರಾಚೀನ ಸಾಹಿತ್ಯದ ಕೊನೆಯ ಹಾಗೂ ಹೊಸಗನ್ನಡ ಸಾಹಿತ್ಯದ ಮುಂಗೋಳಿಯಾದ ಮುದ್ದಣ್ಣನ ಸಾಹಿತ್ಯ ರಚನೆಯಲ್ಲೂ ವಿಮರ್ಶಾ ಚಿಂತನೆ ಇದೆ.

ನವೋದಯ ಕವಿಗಳಾದ ಗೋವಿಂದ ಪೈ, ಬಿ.ಎಂ.ಶ್ರೀ., ಬೇಂದ್ರೆ, ಕುವೆಂಪು, ಪು.ತಿ.ನ, ಶಿವರಾಮಕಾರಂತ, ಮಾಸ್ತಿ ವೆಂಕಟೇಶ ಅಯ್ಯಾಂಗಾರ್ ಮೊದಲಾದವರು ಸಾಹಿತ್ಯ ರಚನೆಯೊಂದಿಗೆ ಜನಸಾಮಾನ್ಯರಿಗೆ ಪರಿಚಿತರಾದರು. ಇವರ ಸಾಹಿತ್ಯವು ಹಲವು ರೀತಿಯಲ್ಲಿ ಪ್ರಕಟಗೊಳ್ಳುತ್ತಾ ಪತ್ರಿಕೆ, ಭಾಷಣ, ಸಂವಾದ, ಗೋಷ್ಠಿ-ಚರ್ಚೆಗಳೊಂದಿಗೆ ಜನಪ್ರಿಯಗೊಂಡ ಬಗೆಯನ್ನು ಗ್ರಹಿಸಿದಾಗ ವಿಮರ್ಶೆಯ ಪ್ರವೇಶವು ಇಲ್ಲೆಲ್ಲಾ ಸ್ಪಷ್ಟವಾಗಿ ತಿಳಿಯುತ್ತದೆ. ಎ. ಆರ್. ಕೃಷ್ಣಶಾಸ್ತ್ರಿ, ಟಿ. ಎಸ್. ವೆಂಕಣ್ಣಯ್ಯ, ಎಂ. ಆರ್. ಶ್ರೀನಿವಾಸಮೂರ್ತಿ ಮೊದಲಾದವರು ಕೃತಿ ವಿಮರ್ಶೆ, ಕವಿ ವಿಮರ್ಶೆಗಳ ಕುರಿತ ಲೇಖನಗಳಲ್ಲಿ ಸಾಹಿತ್ಯದ ಸ್ವರೂಪ, ಮೌಲ್ಯ ನಿರ್ಣಯಗಳ ಮೂಲಕ ಚಿಂತನೆಯ ಪ್ರಶ್ನೆಗಳನ್ನು ಎತ್ತಿದರು. ಈ ಕಾಲಘಟ್ಟದಲ್ಲಿ ಸಾಹಿತ್ಯವೇ ವಿಮರ್ಶೆಯ ಸವಾಲುಗಳನ್ನು ಸ್ವೀಕರಿಸಿ ತಾನು ಗ್ರಹಿಸುವ ಹಾಗೂ ರಚಿಸುವ ಸಾಹಿತ್ಯ ಕುರಿತು ಅಗತ್ಯವಾದ ವಾತಾವರಣ ನಿರ್ಮಿಸಿಕೊಂಡಿತ್ತು.

ಈಗಾಗಲೇ ಬೇಂದ್ರೆ ಅವರ ಸಾಹಿತ್ಯ ಕುರಿತು ಅನೇಕ ವಿಮರ್ಶಕರು ಕಳೆದ ಶತಮಾನದಿಂದಲೂ ಅಧ್ಯಯನ ನಡೆಸುತ್ತಾ ಬಂದಿರುವರು. ನೂರಾರು ಕೃತಿಗಳಲ್ಲಿ ಈ ವಿಮರ್ಶೆಯು ಸಾವಿರಾರು ಪುಟಗಳಷ್ಟು ಪ್ರಕಟವಾಗಿದೆ. ಹೀಗೆ ಪ್ರಕಟವಾದ ಸಾಹಿತ್ಯ ವಿಮರ್ಶೆಯಲ್ಲಿ ವಿಮರ್ಶೆಯ ಸ್ವರೂಪ ಹಾಗೂ ತಾತ್ವಿಕ ಚಿಂತನೆಯನ್ನು ಕುರಿತು ಅಧ್ಯಯನ ಮಾಡುವ ಅಗತ್ಯವಿದೆ. ಬೇಂದ್ರೆ ಅವರ ಸಾಹಿತ್ಯ ರಚನೆಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ೧೯೧೬ರಿಂದ ೧೯೮೧ರವರೆಗೆ ವಿಭಿನ್ನ ಪ್ರಕಾರಗಳಲ್ಲಿ ಸಾಹಿತ್ಯ ರಚನೆಗೊಂಡಿತು. 'ಕವಿಕಲ್ಪನೆ'ಯಂತಹ ಕವನ 'ಪ್ರಭಾತ' ಪತ್ರಿಕೆಯಲ್ಲಿ ರಚನೆಗೊಂಡು ಇವರ ಸಾಹಿತ್ಯ ರಚನೆಗೆ ನಾಂದಿಯಾಯಿತು. ೧೯೨೨ರ ವೇಳೆಗೆ 'ಕೃಷ್ಣಕುಮಾರಿ'ಯಂತಹ ಕವನ ಸಂಕಲನ ನವೋದಯ ಸಾಹಿತ್ಯದ ಮೊದಲ ಸ್ವತಂತ್ರರಚನೆಯಾಯಿತು. ಹೀಗೆಯೇ ಕವಿ ತನ್ನ ಜೀವನವನ್ನು ಸಾಹಿತ್ಯ ಬದುಕಿಗಾಗಿ ಸವೆಸಿದರು. ಇವರು ಬರೆದ ಸಾಹಿತ್ಯವನ್ನು ಗಮನಿಸಿದಾಗ ಮೂವತ್ತಾನಾಲ್ಕು ಸಂಕಲನಗಳಾಗಿ ಕಾವ್ಯ ರಚನೆ, ಹದಿನೇಳು ಕೃತಿಗಳಾಗಿ ನಾಟಕ ರಚನೆ, ಆರು ಕೃತಿಗಳಾಗಿ ಅನುವಾದ ಸಾಹಿತ್ಯ ರಚನೆಗೊಂಡವು. ಇವರ ವಿಮರ್ಶಾ ಬರಹಗಳೇ ಸುಮಾರು ಹನ್ನೊಂದು ಕೃತಿಗಳಾಗಿ ರಚನೆಗೊಂಡಿದೆ. ಈ ಕನ್ನಡ ಸಾಹಿತ್ಯ ರಚನೆಯ ಜೊತೆಗೆ ಇಂಗ್ಲೀಷು ಮತ್ತು ಮರಾಠಿ ಭಾಷೆಯಲ್ಲೂ ಸಾಹಿತ್ಯ ರಚನೆಯನ್ನು ಕಾಣಬಹುದು. ಕವಿಯ ಈ ಸಾಹಿತ್ಯವನ್ನು ಓದುಗನಾದ ವಿಮರ್ಶಕ ಆಯಾ ಕಾಲಘಟ್ಟಗಳಿಗೆ ಅನುಗುಣವಾಗಿ ಪತ್ರಿಕೆ, ಲೇಖನ ಬರಹಗಳಲ್ಲಿ ಚರ್ಚೆ ಚಿಂತನೆಯಲ್ಲಿ ಹಾಗೂ ಕೃತಿರೂಪದ ಬರಹಗಳಲ್ಲಿ ಅಧ್ಯಯನ ಮಾಡುತ್ತಾ ಬಂದಿದ್ದಾರೆ. ಇದೆಲ್ಲವೂ ಕವಿಯ ಸಾಹಿತ್ಯವನ್ನು ಓದುಗ ತನ್ನ ವಿಮರ್ಶಾ ಚಿಂತನೆಯಲ್ಲಿ ಗ್ರಹಿಸಿರುವ ರೀತಿಯೇ ಆಗಿದೆ.

೧.೨. ಅಧ್ಯಯನದ ಉದ್ದೇಶ

ಓದು, ಚರ್ಚೆ, ಚಿಂತನೆ ಹಾಗೂ ಅಧ್ಯಯನಗಳ ಮೂಲಕ ಒಂದು ಕೃತಿಯ ವಿಮರ್ಶೆ ನಡೆಯುತ್ತದೆ. ಮೊದಲು ಆ ಕೃತಿಯ ಮುನ್ನುಡಿ, ಹಿನ್ನುಡಿ, ಪತ್ರಿಕಾಲೇಖನ, ವಿಚಾರ ಸಂಕಿರಣ-ಗೋಷ್ಠಿ, ಚರ್ಚೆ, ಸಂವಾದ, ಕಮ್ಮಟಗಳಲ್ಲಿ ಕೃತಿಯ ಭಿನ್ನ ಭಿನ್ನ ನೋಟದ ವಿಮರ್ಶೆಗಳು ಕಂಡುಬರುತ್ತಿವೆ. ಕೃತಿಯ ಓದುವಿನಿಂದ ದೊರೆತ ವಿಮರ್ಶೆಯು ಈ ರೀತಿಯಾದರೆ, ಅದರ ಅಧ್ಯಯನಗಳ ಫಲವಾಗಿ ದೊರಕುವ ವಿಮರ್ಶಾ ಲೇಖನಗಳು, ಕೃತಿಗಳು ಈ ಮೊದಲಾದ ರೂಪ ಪ್ರಕ್ರಿಯೆ ವಿಸ್ತಾರವಾದುದು. ಸಾಹಿತ್ಯ ಕ್ರಿಯೆಯು ಕೇವಲ ಒಂದೇ ರೀತಿಯ ಓದುವಿನ ಸ್ವರೂಪವಲ್ಲ, ಸಮಾಜ ಹಾಗೂ ವ್ಯಕ್ತಿ ಬದುಕಿನ ರೀತಿಗೆ ಓದಿಸಿಕೊಳ್ಳುತ್ತಾ ಹೊಸ ಆಲೋಚನೆ ನೀಡುತ್ತದೆ. ಸಾಹಿತ್ಯದ ಓದು ಹಾಗೂ ವಿಮರ್ಶೆ ಮನುಷ್ಯನ ವಿಕಾಸದ ಫಲ ಸ್ವರೂಪಿಯಾದ ಬದುಕಿನ ಅರ್ಥಪೂರ್ಣತೆಯನ್ನು ಅದರ ಇತಿ-ಮಿತಿಗಳನ್ನು ತಿಳಿಸುತ್ತದೆ. ಒಂದು ಕೃತಿ ಸಮಾಜಮುಖಿಯಾಗಿ, ವಿಶ್ವ ವ್ಯಾಪಕ ಚಿಂತನೆಯಾಗಿ ಕಟ್ಟಿಕೊಡುವಲ್ಲಿ ಎಲ್ಲಿ ವಿಫಲವಾಗಿದೆ, ಎಲ್ಲಿ ಸಫಲವಾಗಿದೆ ಎಂಬ ತಾತ್ವಿಕ ಚಿಂತನೆ ಇಂದು ಅವಶ್ಯಕವಾಗಿದೆ. ಈ ಸ್ವರೂಪಕ್ಕೆ ಅನುಗುಣವಾಗಿ ಕನ್ನಡ ಸಾಹಿತ್ಯದ ಪ್ರಮುಖ ಕವಿ ಬೇಂದ್ರೆ ಅವರ ಸಾಹಿತ್ಯ ಕುರಿತು ನಡೆದಿರುವ ವಿಮರ್ಶೆಗಳ ಅಧ್ಯಯನವೇ ಈ ಪ್ರಬಂಧದ ಪ್ರಮುಖ ಉದ್ದೇಶವಾಗಿದೆ.

ಬೇಂದ್ರೆ ಸಾಹಿತ್ಯ ಕುರಿತ ವಿಮರ್ಶೆಗಳ ಅಧ್ಯಯನವು ವ್ಯವಸ್ಥಿತವಾಗಿ ಇಲ್ಲಿಯವರೆಗೂ ನಡೆದಿಲ್ಲ. ಕವಿಯ ಸಾಹಿತ್ಯವನ್ನು ಕುರಿತು ಹಂತ ಹಂತವಾಗಿ ವಿಭಿನ್ನ ಚಿಂತಕರು ಅಧ್ಯಯನ ನಡೆಸಿರುವುದನ್ನು ಸಾಹಿತ್ಯದ ಕಾಲಘಟ್ಟಗಳಿಗೆ ಅನುಗುಣವಾಗಿ ಗ್ರಹಿಸಬಹುದು. ಈ ವಿಮರ್ಶಾ ಅಧ್ಯಯನಗಳಲ್ಲಿ ಬೇಂದ್ರೆ ಸಾಹಿತ್ಯದ ಮೌಲ್ಯವನ್ನು, ವಿಮರ್ಶಕರು ಗ್ರಹಿಸಿರುವ ವಿಮರ್ಶಾ ಸ್ವರೂಪವನ್ನು ಯಾವ ಯಾವ ತಾತ್ವಿಕ ಚಿಂತನೆಗಳಲ್ಲಿ ಗ್ರಹಿಸಿದ್ದಾರೆ ಎಂಬ ವ್ಯವಸ್ಥಿತ ಅಧ್ಯಯನ ನಡೆಸುವುದು.

ಬೇಂದ್ರೆ ಅವರ ಸಾಹಿತ್ಯವನ್ನು ವಿವಿಧ ಕಾಲಘಟ್ಟದ ಚಿಂತನೆಗಳಿಗೆ ಅನುಗುಣವಾಗಿ ಗ್ರಹಿಸಿದ ರೀತಿಯಲ್ಲಿ ಅಭಿಮಾನದ ಗ್ರಹಿಕೆ ಹಾಗೂ ವಿಮರ್ಶಾತ್ಮಕ ಚಿಂತನೆಯೊಂದಿಗೆ ವ್ಯಕ್ತಿ ಹಾಗೂ ಸಾಹಿತ್ಯದ ಭಿನ್ನ ನೆಲೆಗಳನ್ನು ವಿಶ್ಲೇಷಣೆ ಮಾಡುವುದು.

ವಸಾಹತುಶಾಹಿ ಪ್ರಭಾವದಿಂದ ಉಂಟಾದ ಸಾಹಿತ್ಯ ಪಲ್ಲಟಗಳಲ್ಲಿ ದೇಸಿ ಚಿಂತನೆ ಹಾಗೂ ಪಾಶ್ಚಾತ್ಯಧೋರಣೆಗಳ ಮೂಲಕ ವಿಮರ್ಶಕರು ಬೇಂದ್ರೆ ಅವರ ಸಾಹಿತ್ಯವನ್ನು ಅಧ್ಯಯನ ಮಾಡಿರುವ ಕ್ರಮವನ್ನು ಗಮನಿಸುವುದು.

ಕಾವ್ಯಮೀಮಾಂಸೆ ಮತ್ತು ಭಾಷಾವಿಜ್ಞಾನದ ಮೂಲಕ ನಡೆಸಿದ ಕಾವ್ಯ ಚಿಂತನೆಯನ್ನು ವಿವಿಧ ಕಾಲಘಟ್ಟದ ಚಿಂತನೆಗಳಿಗನುಗುಣವಾಗಿ ವ್ಯತ್ಯಾಸಗಳೊಂದಿಗೆ ಅರ್ಥೈಸುವುದು. ಬೇಂದ್ರೆ ಅವರ ಕಾವ್ಯದ ಸೋಲುಗಳನ್ನು ಹಾಗೂ ಅದರ ಗ್ರಹಿಕೆಯ ದೋಷಗಳನ್ನು ವಿವಿಧ ವಿಮರ್ಶೆಗಳ ಮೂಲಕ ತೌಲನಿಕ ಅಧ್ಯಯನ ಮಾಡುವುದು. ಈ ಗ್ರಹಿಕೆಗಳ ವ್ಯಾಪ್ತಿ ಹಾಗೂ ಸ್ಥಿತಿಗತಿಯನ್ನು ಚರ್ಚಿಸುವುದು.

೧.೩. ಅಧ್ಯಯನದ ಸ್ವರೂಪ

ಬೇಂದ್ರೆ ಸಾಹಿತ್ಯ ಕುರಿತ ವಿಮರ್ಶೆಗಳ ಅಧ್ಯಯನವು ಬೇಂದ್ರೆ ಸಾಹಿತ್ಯ ರಚನೆಯ ಕಾಲಘಟ್ಟದಿಂದಲೂ ನಡೆದಿದೆ. ಸ್ವತಂತ್ರಪೂರ್ವದಲ್ಲಿ ಸಮಾಜದ ಸ್ಥಿತಿ, ಬರಹಗಾರನ ಜವಾಬ್ದಾರಿಗಳು ಈ ಎಲ್ಲಾ ಕ್ರಮಗಳು ಅಧ್ಯಯನಕ್ಕೆ ಮುಖ್ಯವೆನಿಸುತ್ತವೆ. ಹೊಸಗನ್ನಡ ಸಾಹಿತ್ಯದ ಬರವಣಿಗೆಯ ಜೊತೆಗೆ, ಅನುವಾದ, ರೂಪಾಂತರ, ಗ್ರಂಥಸಂಪಾದನೆಯ ಮುಖ್ಯ ಕಾರ್ಯಗಳು ಸಾಕಷ್ಟು ನಡೆಯುವಾಗ ಈ ಕಾರ್ಯಗಳ ಕುರಿತು ಪರಿಶೀಲನೆ ಎಂಬುದು ಜ್ಞಾನಾರ್ಜನೆಯ ಮೂಲಕವೇ ಜರುಗಿತು. ಅದನ್ನು ಬೇಂದ್ರೆ ಅವರು ತಮ್ಮ ಕೃತಿಗಳ ಮುನ್ನುಡಿಯಲ್ಲಿ ಪ್ರವೇಶದ ಮಾದರಿಯಲ್ಲಿ ಗುರ್ತಿಸುತ್ತಾರೆ. 'ಸಹೃದಯ' ಅಧ್ಯಯನ ಮಾರ್ಗವಾಗಿ ಗಮನಿಸಬಹುದು.

೧.೪. ಅಧ್ಯಯನದ ವ್ಯಾಪ್ತಿ

ಬೇಂದ್ರೆ ಸಾಹಿತ್ಯ ಕುರಿತು ಹಲವು ವಿಮರ್ಶಕರು ಈಗಾಗಲೇ ಅಧ್ಯಯನ ನಡೆಸಿದ್ದಾರೆ. ಹಾಗೂ ಪ್ರಸ್ತುತ ಕೂಡ ಕವಿಯ ಸಾಹಿತ್ಯ ಕುರಿತು ವಿವಿಧ ಮಾದರಿಯಲ್ಲಿ ಅಧ್ಯಯನ ಮಾಡಲಾಗುತ್ತಿದೆ. ವಿಮರ್ಶೆಗಳನ್ನು ಬರೆಯುತ್ತಿದ್ದಾರೆ. ಇಂತಹ ಬರಹಗಳ ಅಧ್ಯಯನವೇ ನನ್ನ ಪ್ರಬಂಧದ ವ್ಯಾಪ್ತಿಯಾಗಿ ಕಂಡುಬರುತ್ತದೆ.

ಪತ್ರಿಕೆ ಮತ್ತು ಸಾಹಿತ್ಯ ಸಂಚಿಕೆಗಳು ಈ ವಿಮರ್ಶಾ-ಲೇಖಕರ ಬರಹಗಳಿಗೆ ವೇದಿಕೆಗಳಾಗಿದ್ದವು. ಅಂತಹ ಪ್ರಮುಖ ಪತ್ರಿಕೆಗಳಲ್ಲಿ ಜಯ ಕರ್ನಾಟಕ, ಪ್ರಬುದ್ಧ ಕರ್ನಾಟಕ, ವಾಗ್ಭೂಷಣ, ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಮಕರಂದ, ತಾಯಿನುಡಿ, ಶೂದ್ರ, ಅಂಕಣ, ರುಜುವಾತು, ವಿಶ್ವವಿದ್ಯಾಲಯಗಳ ಪತ್ರಿಕೆಗಳಾದ ಸಾಧನೆ, ಸಾಕ್ಷಿ, ಕನ್ನಡ ಅಧ್ಯಯನ, ಸಂಕ್ರಮಣ, ಮಯೂರ, ಕಸ್ತೂರಿ, ಸುಧಾ, ಪ್ರತಿಸ್ಪಂದ, ಕಾಂತಾವರ ಕನ್ನಡ ಸಂಘದ 'ನುಡಿಹಾರ', ಮೊದಲಾದ ಸಾಹಿತ್ಯ ಪತ್ರಿಕೆಗಳು, ದಿನಪತ್ರಿಕೆಗಳಾದ ಪ್ರಜಾವಾಣಿ, ವಿಜಯ ಕರ್ನಾಟಕ, ಕನ್ನಡಪ್ರಭ, ಉದಯವಾಣಿ, ವಿಜಯವಾಣಿ ಹಾಗೂ ಅಂತರ್ಜಾಲ ಬರಹಗಳು ಈ ಪ್ರಬಂಧದ ಅಧ್ಯಯನಕ್ಕೆ ಲೇಖನ ಸಾಮಗ್ರಿಗಳನ್ನು ಒದಗಿಸುತ್ತವೆ.

ಈ ಅಧ್ಯಯನ ಸಾಮಾಗ್ರಿಗಳೇ ಪ್ರಬಂಧದ ವ್ಯಾಪ್ತಿಯನ್ನು ಕೂಡ ಸೂಚಿಸುತ್ತದೆ. ಬೇಂದ್ರೆ ಸಾಹಿತ್ಯವನ್ನು ಕುರಿತು ಇದುವರೆಗೂ ನಡೆದಿರುವ ಎಲ್ಲಾ ರೂಪದ ಬರಹಗಳಲ್ಲೂ ವಿಮರ್ಶಾ ಚಿಂತನೆಯು ಇರುವುದರಿಂದ ಅಧ್ಯಯನದ ವ್ಯಾಪ್ತಿ ವಿಶಾಲವಾಗಿದೆ. ಇಪ್ಪತ್ತನೇ ಶತಮಾನದ ಅಧ್ಯಯನಕಾರರೆಲ್ಲರೂ ಕವಿಯೊಂದಿಗೆ ಬದುಕಿದವರು. ಅವರ ಸಾಹಿತ್ಯ ಬರಹವನ್ನು ಸೂಕ್ಷ್ಮವಾಗಿ ಗಮನಿಸಿದವರು. ಇನ್ನೂ ಕೆಲವರು ಕವಿಯ ಸಾಹಿತ್ಯವನ್ನು ಆಳವಾಗಿ ಅಧ್ಯಯನ ನಡೆಸಿದವರು. ಕೆಲವರಿಗೆ ಕರ್ತೃ ಮೇಲೆ ಅಪಾರ ಅಭಿಮಾನ ಉಂಟಾದರೆ ಕೆಲವರಿಗೆ ಕೃತಿ ಪ್ರಧಾನ. ಕವಿಯ ಸಾಹಿತ್ಯದಲ್ಲಿ ಕೆಲವು ಬರಹಗಳು ಓದುಗರಲ್ಲಿ ಹೊಸ ಹೊಸ ಅರ್ಥಗಳನ್ನು ಧ್ವನಿಸುವುದನ್ನು ಕುರಿತು ಕುತೂಹಲವಿದೆ. ಬೇಂದ್ರೆ ಅವರ ಸಾಹಿತ್ಯವನ್ನು ಸಮಕಾಲೀನ ಹಾಗೂ ಹಿರಿಯ, ಕಿರಿಯ ಕವಿಗಳ, ಲೇಖಕರ ಬರಹಗಳೊಂದಿಗೆ ಅಧ್ಯಯನ ಮಾಡಲಾಗಿದೆ. ಈ ತೌಲನಿಕ

ವಿಧಾನವನ್ನು ಅನುಸರಿಸಿ ವಿಶ್ಲೇಷಣೆ ಮಾಡಬಹುದು. ಆದರೆ ವಿಮರ್ಶಕರ ಚಿಂತನೆಗಳನ್ನು ಗಮನಿಸಿದರೆ ಕೆಲವು ವಿಮರ್ಶೆಗಳು ತೌಲನಿಕ ವಿಧಾನಕ್ಕೆ ಅಳವಡಿಕೆ ಆಗದೆ ಸ್ವತಂತ್ರ ವಿಶ್ಲೇಷಣೆಗೆ ಒಳಾಗಾಗುತ್ತವೆ ಎನಿಸುತ್ತದೆ. ಅಧ್ಯಯನ ಮಾಡಿದ ಎಲ್ಲಾ ವಿಮರ್ಶೆಗಳನ್ನು ಈ ಪ್ರಬಂಧದಲ್ಲಿ ಬಳಸಿಕೊಂಡಿಲ್ಲ. ಕಾರಣ ಪುನರಾವರ್ತನೆಯ ಬರಹಗಳು, ಅಧ್ಯಯನವೇ ಇಲ್ಲದ ಬರಹಗಳನ್ನು ನನ್ನ ಅಧ್ಯಯನ ವ್ಯಾಪ್ತಿಯ ಕಾರಣದಿಂದ ಮಿತಿಗೊಳಿಸಿದ್ದೇನೆ.

೧.೫. ಅಧ್ಯಯನದ ವಿಧಾನ

ಈ ಅಧ್ಯಯನದಲ್ಲಿ ವಿಮರ್ಶಾ ಲೇಖನಗಳು ಪ್ರವೇಶಿಸುವ ವಿವಿಧ ಮಾದರಿಯ ಅಧ್ಯಯನ ವಿಧಾನಗಳ ಮೂಲಕವೇ ತಿಳಿಯಲಾಗುವುದು. ವಿವರಣಾತ್ಮಕ ಮಾದರಿ, ವಿಶ್ಲೇಷಣಾ ಮಾದರಿ, ತೌಲನಿಕ ಮಾದರಿ, ರಾಚನಿಕ ವಿಮರ್ಶೆ, ವ್ಯಕ್ತಿನಿಷ್ಠ ವಿಮರ್ಶೆ, ವಸ್ತುನಿಷ್ಠ ವಿಮರ್ಶೆ ಇವುಗಳ ಜೊತೆಗೆ ಸಹೃದಯ ವಿಮರ್ಶೆ ಎಂಬ ಹೊಸ ವಿಧಾನದ ಗ್ರಹಿಕೆಯನ್ನು ಶೋಧಿಸಲಾಗಿದೆ.

ಈ ಅಧ್ಯಯನಕ್ಕೆ ಸಂಬಂಧಿಸಿದಂತೆ ಆಕರಗಳನ್ನು ಹುಡುಕುವುದು. ಸಂಗ್ರಹಿಸಿದ ಆಕರಗಳನ್ನು, ಅಧ್ಯಯನ ಮಾಡುವುದು. ಪ್ರತಿಯೊಬ್ಬ ವಿಮರ್ಶಕನು ಕವಿಯ ಸಾಹಿತ್ಯ ಕುರಿತ ವಿಮರ್ಶೆಯಲ್ಲಿ ಗ್ರಹಿಸಿರುವ ಸ್ವರೂಪ ಹಾಗೂ ತಾತ್ವಿಕ ಚಿಂತನೆಗಳನ್ನು ಅಧ್ಯಯನ ಮಾಡುವುದು ಈ ಪ್ರಬಂಧದ ಕಾರ್ಯವಾಗಿದೆ. ಜೊತೆಗೆ ವಿಮರ್ಶೆಗಳ ವಿಶ್ಲೇಷಣೆ ಮಾಡುತ್ತಾ ಹೊಸ ವ್ಯಾಖ್ಯಾನಗಳನ್ನು ನಿರೂಪಿಸುವುದು. ಕವಿಯ ಸಾಹಿತ್ಯದ ಮೌಲ್ಯವನ್ನು, ತಾತ್ವಿಕ ಚಿಂತನೆಗಳನ್ನು ವಿಮರ್ಶಕರ ವಿಮರ್ಶೆಗಳ ಅಧ್ಯಯನದ ಮೂಲಕ 'ಮರು ಓದುವಿನ ನಿರ್ಣಯ'ದೊಂದಿಗೆ ವಿಮರ್ಶೆಯನ್ನು ವ್ಯಕ್ತಪಡಿಸುವುದು ಪ್ರಸ್ತುತ ಈ ಪ್ರಬಂಧದ ಜವಾಬ್ದಾರಿಯಾಗಿದೆ.

* * * * *

ಅಧ್ಯಾಯ-೨

ಬೇಂದ್ರೆ ಸಾಹಿತ್ಯ ಕುರಿತ ವಿಮರ್ಶೆಗಳ ಅಧ್ಯಯನ ಸಮೀಕ್ಷೆ

ಮತ್ತು

ವಿಮರ್ಶಾ ಅಧ್ಯಯನಗಳ ಪೂರ್ವ ಪೀಠಿಕೆ

೨. ೧. ಬೇಂದ್ರೆ ಸಾಹಿತ್ಯ ಕುರಿತ ಅಧ್ಯಯನಗಳ ಸಮೀಕ್ಷೆ

೨. ೨. ವಿಮರ್ಶಾ ಅಧ್ಯಯನಗಳ ಪೂರ್ವ ಪೀಠಿಕೆ

೨. ೩. ಮುನ್ನುಡಿ ಬರಹಗಳು

ಬೇಂದ್ರೆ ಸಾಹಿತ್ಯ ಕುರಿತ ವಿಮರ್ಶೆಗಳ ಅಧ್ಯಯನ ಸಮೀಕ್ಷೆ
ಮತ್ತು
ವಿಮರ್ಶಾ ಅಧ್ಯಯನಗಳ ಪೂರ್ವ ಪೀಠಿಕೆ

ಬೇಂದ್ರೆ ಸಾಹಿತ್ಯ ಕುರಿತ ಅಧ್ಯಯನಗಳ ಸಮೀಕ್ಷೆ

ಬೇಂದ್ರೆ ಅವರ ಸಾಹಿತ್ಯವನ್ನು ಓದುಗನು ತನ್ನ ಅಧ್ಯಯನದ ಮೂಲಕ ಆಯಾ ಕಾಲಘಟ್ಟದ ಸಾಹಿತ್ಯ ಚಿಂತನೆಗಳಿಗೆ ಅನುಗುಣವಾಗಿ ಗಮನಿಸಿರುವುದನ್ನು ಕಾಣಬಹುದು. ಈ ಓದುವ ಕ್ರಮ ವಿಮರ್ಶೆ, ಲೇಖನ, ಸಂಶೋಧನೆ, ಕಮ್ಮಟ, ಕವಿತೆ ಹಾಗೂ ವಿವಿಧ ಬರಹಗಳ ಮಾದರಿಯಲ್ಲಿ ಅಭಿವ್ಯಕ್ತಗೊಂಡಿರುವುದನ್ನು ಗಮನಿಸಬಹುದು. ಮುನ್ನುಡಿ, ಪತ್ರಿಕಾ ಬರಹ, ಚರ್ಚೆ, ಸಂಶೋಧನೆ, ಹಾಗೂ ಕೃತಿರೂಪದಲ್ಲಿ ಅಧ್ಯಯನ ನಡಸಿದ್ದಾರೆ. ಹತ್ತೊಂಬತ್ತನೆಯ ಶತಮಾನದಲ್ಲಿ ಪ್ರಾರಂಭಗೊಂಡ ಆಧುನಿಕ ಸಾಹಿತ್ಯ ಚಿಂತನೆ ತನ್ನ ಜೊತೆಯಲ್ಲಿಯೇ ಪರಮಾರ್ಶನ ಕಾರ್ಯವನ್ನು ಕೂಡ ಬೆಳಸಿಕೊಂಡು ಬಂದಿತು.

ಇಪ್ಪತ್ತನೆಯ ಶತಮಾನದ ನವೋದಯ, ಪ್ರಗತಿಶೀಲ, ನವ್ಯ, ದಲಿತ–ಬಂಡಾಯ, ಮಹಿಳಾ ಚಿಂತನೆಗಳೆಂಬ ಅಧ್ಯಯನ, ಚಳುವಳಿ ರೂಪಗಳು ಸಾಹಿತ್ಯ ರಚನೆಯಲ್ಲಿ ತನ್ನದೇ ಕಾಲಘಟ್ಟದ ಸಾಹಿತ್ಯ ಪಂಥಗಳಾದವು. ಸಾಹಿತ್ಯ ರಚನೆಯ ಜೊತೆಗೆ ವಿಮರ್ಶಾ ಪರಿಕಲ್ಪನೆಗಳನ್ನು ಸೃಷ್ಟಿಸಿಕೊಂಡವು. ಇವುಗಳ ಪ್ರಾರಂಭದ ಬೆಳವಣಿಗೆಯಲ್ಲಿ ಪ್ರಾಚ್ಯ ಹಾಗೂ ಪಾಶ್ಚಾತ್ಯ ಸಾಹಿತ್ಯ ಅಧ್ಯಯನಗಳು ಹೊಸ ಚಿಂತನೆ ನೀಡಿದವು.

ಬೇಂದ್ರೆ ಸಾಹಿತ್ಯವನ್ನು ಅಧ್ಯಯನ ನಡೆಸಿ ರಚಿಸಿದ ವಿಮರ್ಶೆಗಳು ಲೇಖನ, ಕೃತಿ, ಸಂಶೋಧನಾ ಪ್ರಬಂಧಗಳ ಮಾದರಿಯಲ್ಲಿ ರಚನೆಗೊಂಡಿವೆ. ಈ ವಿಮರ್ಶಾ ಬರಹಗಳನ್ನೇ ಪ್ರತ್ಯೇಕವಾಗಿ ಯಾವುದೇ ಅಧ್ಯಯನಗಳು ನಡೆದಿಲ್ಲ. ಆದರೆ ರಂ. ಶ್ರೀ ಮುಗಳಿ, ಕೀರ್ತಿನಾಥ ಕುರ್ತಕೋಟಿ, ಜಿ. ಎಸ್. ಆಮೂರ, ಜಿ. ಕೃಷ್ಣಪ್ಪ ಇವರ ಅಧ್ಯಯನಗಳಲ್ಲಿ ವಿಷಯಗಳಿಗನುಗುಣವಾಗಿ ಇದುವರೆಗೂ ನಡೆದಿರುವ ವಿಮರ್ಶಾ ಚರ್ಚೆಗಳನ್ನು ಅಧ್ಯಯನಮಾಡಿದ್ದಾರೆ. ಈ ಅಧ್ಯಯನಗಳಿಂದ ವಿಮರ್ಶೆಗಳಲ್ಲಿ ಉಂಟಾದ ಲೋಪದೋಷಗಳನ್ನು ಕಂಡುಕೊಳ್ಳುವ ಜೊತೆಗೆ ಹೊಸ ಅಧ್ಯಯನಕ್ಕೆ ಮಾರ್ಗಗಳನ್ನು ಸೂಚಿಸುತ್ತಾರೆ. ರಂ. ಶ್ರೀ ಮುಗಳಿ ಅವರ 'ಬೇಂದ್ರೆ ಕಾವ್ಯ' ಕೃತಿಯು ವಿಷಯಗಳ ಅನುಗುಣವಾಗಿ ಬೇಂದ್ರೆ ಸಾಹಿತ್ಯದ ಸತ್ತ್ವಚಿಂತನೆಯ ವಿಮರ್ಶೆಗೆ ತೊಡಗಿದರೂ ಆ ವಿಷಯವನ್ನು ಇದುವರೆಗೂ ನಡೆದಿರುವ ಗ್ರಹಿಕೆಗಳ ಸೂಕ್ಷ್ಮ ಅವಲೋಕನವನ್ನು ಚರ್ಚಿಸಿದ್ದಾರೆ. ಕೀರ್ತಿನಾಥ

ಕುರ್ತಕೋಟಿ ಅವರು ವಿಚಾರದ ಚರ್ಚೆಯ ಸಂದರ್ಭಕ್ಕೆ ಅನುಗುಣವಾಗಿ ಬೇರೆ ಬೇರೆ ಅಧ್ಯಯನಗಳ ಗ್ರಹಿಕೆಗಳು ತರುತ್ತಾರೆ ಆದರೂ ಇವರ ವಿಮರ್ಶಾ ಮಾದರಿಯು ಅತ್ಯಂತ ಸ್ವತಂತ್ರವಾದುದು. ಬೇಂದ್ರೆ ಕಾವ್ಯದೊಂದಿಗೆ ಅತ್ಯಂತ ಹೆಚ್ಚು ಒಡನಾಡಿದ ಇವರು ಕುಮಾರವ್ಯಾಸನ ಕಾವ್ಯದ ಅಧ್ಯಯನ ವಿಮರ್ಶೆಗೆ ನೀಡಿದಷ್ಟು ಸೂಕ್ಷ್ಮವಾದ ವಿಮರ್ಶಾ ಶಕ್ತಿಯನ್ನು ಬೇಂದ್ರೆ ಸಾಹಿತ್ಯ ಅಧ್ಯಯನದಲ್ಲಿ ತೋರುವುದಿಲ್ಲ. ಆಮೂರ ಅವರ 'ಭುವನದ ಭಾಗ್ಯ' ಕೃತಿಯು ಬೇಂದ್ರೆ ಕಾವ್ಯವನ್ನು ವಿವಿಧ ನೆಲೆಗಳ ಮೂಲಕ ಗ್ರಹಿಸುತ್ತದೆ. ಇಲ್ಲಿ ಬೇಂದ್ರೆ ಕಾವ್ಯದ ವಿಷಯಗಳ ತಾತ್ವಿಕ ಚರ್ಚೆಯ ಸಂದರ್ಭದಲ್ಲಿ ವಿಶ್ಲೇಷಣಾ ಮಾದರಿಯ ಮೂಲಕ ಹಲವು ವಿಮರ್ಶಕರ ಅಭಿಪ್ರಾಯಗಳನ್ನು ಚರ್ಚಿಸಿದ್ದಾರೆ. ಜಿ. ಕೃಷ್ಣಪ್ಪ ಅವರದು ಪರಿಚಯಾತ್ಮಕ ವಿಮರ್ಶಾ ಮಾದರಿ. ಬೇಂದ್ರೆ ಸಾಹಿತ್ಯದ ಕೆಲವು ಪದಗಳ ಸೂಕ್ಷ್ಮ ಗ್ರಹಿಕೆಯಲ್ಲಿ ಉಂಟಾಗಿರುವ ದೋಷವನ್ನು ಗ್ರಹಿಸಲು ವಿವಿಧ ವಿಮರ್ಶೆಗಳ ಅಧ್ಯಯನವನ್ನು ಸೂಕ್ತವಾಗಿ ತರುತ್ತಾರೆ. ಅದಕ್ಕೆ ಸೂಕ್ತವಾದ ಅಧ್ಯಯನ ರೂಪವನ್ನು ಸ್ಪಷ್ಟಪಡಿಸುತ್ತಾ ಜನಪದ ನೆಲೆಯಲ್ಲಿ ಕಾವ್ಯದ ಒಳ ಅರ್ಥ ಶೋಧಿಸಬೇಕೆಂಬ ವಿಮರ್ಶೆ ಇವರದು. ಸಂಶೋಧನಾ ಕೃತಿಗಳು, ವಿವಿಧ ವಿಶ್ವವಿದ್ಯಾಲಯಗಳ ರಾಷ್ಟ್ರೀಯ ವಿಚಾರಸಂಕಿರಣದಲ್ಲಿ ಮಂಡಿತವಾದ ಸಂಶೋಧನಾ ಲೇಖನಗಳು ವಿಮರ್ಶೆಗಳನ್ನು ಬೇಂದ್ರೆ ಸಾಹಿತ್ಯವನ್ನು ಹೊಸಬಗೆಯಲ್ಲಿ ಅರ್ಥಮಾಡಿಕೊಳ್ಳಲು ಬಳಸಿದ್ದಾರೆ.

ಈ ಎಲ್ಲಾ ಬರಹಗಳು ನನ್ನ ಸಂಶೋಧನೆಯಲ್ಲಿ ಮುಖ್ಯ ಆಕರಗಳಾಗಿ ಅಧ್ಯಯನ ಸಾಮಗ್ರಿಗಳನ್ನು ಒದಗಿಸಿವೆ. ಇಲ್ಲಿ ಬರಹಗಳು ವಿವಿಧ ಮಾದರಿಗಳಲ್ಲಿ ದೊರಕುತ್ತವೆ. ಅನುಭವಗಳಾಗಿ, ಲೇಖನಗಳಾಗಿ, ಕೃತಿನಿಷ್ಠ, ಕವಿನಿಷ್ಠ ವಿಮರ್ಶಾ ಬರಹಗಳಾಗಿ ಕಂಡು ಬರುತ್ತವೆ. ಕೆಲವು ಕೃತಿಗಳು ಬೇಂದ್ರೆ ಸಾಹಿತ್ಯವನ್ನು ಅಧ್ಯಯನ ಮಾಡಿ ಕೆಲವು ಪರಿಕಲ್ಪನೆಗಳ ಮೂಲಕ ವಿವಿಧ ವಿಚಾರಗಳನ್ನು ಹಂಚಿಕೊಂಡಿದ್ದಾರೆ. ಬೇಂದ್ರೆ ಅವರ ಶೈಲಿ, ವಸ್ತು, ವಿವಿಧ ಆಯಾಮಗಳ ಮೂಲಕ ಮೀಮಾಂಸೆಯ ಒಳನೋಟಗಳೊಂದಿಗೆ ಚರ್ಚಿಸಿರುವ ಕೃತಿಗಳಿವೆ. ಕೆಲವು ಗೌರವ ಅರ್ಪಣೆಗಳು, ಅಭಿನಂದನಾ ಗ್ರಂಥಗಳಿವೆ. ಹೊಸವಿಚಾರಗಳೊಂದಿಗೆ ತೌಲನಿಕ ಅಧ್ಯಯನಗಳನ್ನು ಇಲ್ಲಿ ಬಳಸಿಕೊಳ್ಳಲಾಗಿದೆ. ಈ ಎಲ್ಲಾ ಅಧ್ಯಯನಗಳನ್ನು ಮುಖ್ಯವಾಗಿ ಗಮನಿಸಿ ಈ ಸಂಶೋಧನಾ ಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

ವಿಮರ್ಶಾ ಅಧ್ಯಯನಗಳ ಪೂರ್ವ ಪೀಠಿಕೆ

ಇಪ್ಪತ್ತನೆಯ ಶತಮಾನದ ಪ್ರಾರಂಭದ ವೇಳೆಗೆ ಸಾಹಿತ್ಯ ರಚನೆಯ ಜೊತೆಗೆ ಅಧ್ಯಯನದ ಜವಾಬ್ದಾರಿ ಕೂಡ ವಿಭಿನ್ನ ನೆಲೆಯಲ್ಲಿ ಕಂಡುಬಂದಿದೆ. ಆಂಗ್ಲ ಭಾಷೆಯ ಪ್ರಭಾವವೂ ಭಾರತೀಯ ಎಲ್ಲಾ ಭಾಷೆಗಳ ಮೇಲೆ ಉಂಟುಮಾಡಿದ ಸಾಹಿತ್ಯ ಕಾರ್ಯಗಳು ದೇಸಿಭಾಷೆಗಳಿಗೆ ಹೊಸ ರೂಪವನ್ನು ತಂದು ವಿಶಿಷ್ಟ ಅಧ್ಯಯನಕ್ಕೆ ದಾರಿ ತೋರಿತು. ಬೈಬಲ್ ಪ್ರಚಾರಕ್ಕೆ ಬಂದ ಆಂಗ್ಲ ವಿದ್ವಾಂಸರು ಮೊದಲು ಆಯಾ ದೇಸಿ ಭಾಷೆಗಳನ್ನು ಕಲಿತರು. ಭಾಷೆಯ ಕಲಿಕೆಯ ಜೊತೆಗೆ ಇಲ್ಲಿನ ಸಾಹಿತ್ಯ ಅವರನ್ನು ಆಕರ್ಷಿಸಿ ಹಲವು ಕಾರಣಗಳಿಂದ ಹಳಿದು ಹಂಚಿ ಹೋಗುತ್ತಿದ್ದ ಸಾಹಿತ್ಯ ಸಂಪತ್ತಿನ ಸಂಪಾದನಾ ಕಾರ್ಯ ಪ್ರಾರಂಭಿಸಿದರು. ಭಾಷೆಯ ಸಹಾಯಕ್ಕೆ ಸ್ಥಳೀಯ ವಿದ್ವಾಂಸರನ್ನೇ ಬಳಸಿದ ಇವರು ಭಾರತೀಯ ಸಾಹಿತ್ಯದ ಅರಿವನ್ನು ಉಂಟುಮಾಡಿದರು ಎನ್ನಬಹುದು. ಭಾರತೀಯ ದೇಸಿಯ ಭಾಷೆಗಳ ಮೇಲೆ ಶಿಕ್ಷಣದ ನೆಪದಲ್ಲಿ ಒದಗಿದ ಪಾಶ್ಚಾತ್ಯ ಜಗತ್ತು ಜ್ಞಾನದ ಅರಿವನ್ನು ವಿಸ್ತರಿಸಿದ್ದಲ್ಲದೆ ತಮ್ಮ ತಮ್ಮ ಭಾಷೆಗಳಿಗಿರುವ ಪ್ರಾಚೀನತೆಯನ್ನೂ ಅದರ ಪೂರ್ಣ ಸತ್ವವನ್ನು ಅರಿಯಲು ಪ್ರಾರಂಭಿಸಿದರು. ಅದು ಆಂಗ್ಲ ವಿದ್ವಾಂಸರಿಂದಲೇ ಮೊದಲುಗೊಂಡಿತು.

ಕನ್ನಡ ಭಾಷೆಯಲ್ಲಿಯೂ ಇಂತಹ ಅಧ್ಯಯನಕಾರ್ಯಗಳು ಪ್ರಾರಂಭಗೊಂಡಿದ್ದವು. ಮೊದಲು ಭಾಷಾದೃಷ್ಟಿಯಿಂದ ವ್ಯಾಕರಣ ಪುಸ್ತಕಗಳ ರಚನೆಗಳೊಂದಿಗೆ ಶಬ್ದಕೋಶಗಳನ್ನೂ ಕೂಡ ಪ್ರಾರಂಭಿಸಿದರು. ಓಲೆಗರಿ, ಕಡತ, ಶಾಸನಗಳಲ್ಲಿ ಸಾಹಿತ್ಯವನ್ನು ಸಂಗ್ರಹಿಸುವ ವ್ಯವಸ್ಥಿತವಾಗಿ ಸಂಪಾದಿಸುವ ಕಾರ್ಯವನ್ನು ಆಂಗ್ಲ ವಿದ್ವಾಂಸರು ದೇಸಿಯ ವಿದ್ವಾಂಸರ ಜೊತೆ ನಿರ್ವಹಿಸಿದರು. ಇದನ್ನು ಸಾಹಿತ್ಯದಲ್ಲಿ ಹೊಸಗನ್ನಡದ ಅರುಣೋದಯ ಚಿಂತನೆಯಾಗಿ ಗಮನಿಸಲಾಗಿದೆ. ಶಿಕ್ಷಣದೊಂದಿಗೆ ಪ್ರಾರಂಭವಾದ 'ಅಧ್ಯಯನ'ವೆಂಬುದು ಪತ್ರಿಕಾ ಬರಹಗಳೊಂದಿಗೆ ಸಾಮಾನ್ಯರ ಬಳಿಗೆ ಬಂದಿತು. ಸಮಾಜದೊಂದಿಗೆ ಅಕ್ಷರವೆಂಬುದು ಒಂದು ರೀತಿಯ ಶಿಕ್ಷಣ, ಸ್ವಾತಂತ್ರ್ಯ ಹೋರಾಟ ಹಾಗೂ ಸಾಹಿತ್ಯ ಪರಿಚಯದ ಉದ್ದೇಶದಲ್ಲಿ ಪತ್ರಿಕೆಗಳು ವಸಾಹತು ಶಾಹಿ ಪ್ರಭಾವವನ್ನು ಪರಿಚಯಿಸಲು ಪ್ರಾರಂಭಿಸಿದವು. ಸಂಸ್ಕೃತ, ಆಂಗ್ಲಭಾಷೆಯ ಅಧ್ಯಯನ, ಅನುವಾದ, ರೂಪಾಂತರ ದೊಂದಿಗೆ ಯೂರೋಪಿಯನ್ ಭಾಷೆಗಳ ಅಧ್ಯಯನ ಕೂಡ ಪ್ರಾರಂಭವಾಯಿತು. ಈ ಬೆಳವಣಿಗೆಯನ್ನು ಬಿ.ಎಂ. ಶ್ರೀಕಂಠಯ್ಯ ಅವರು

> ಇಂಡಿಯಾ ದೇಶದಲ್ಲಿ ಈಗ ಒಂದು ಪುನರುಜ್ಜೀವನದ ಕಾಲ. ಎಲ್ಲೆಲ್ಲಿಯೂ ಹೊಸ ಚೈತನ್ಯ ಹೊಸ ಆಸೆ ಪ್ರಯತ್ನ. ಅದರ ಪರಿಣಾಮವಾಗಿ ದೇಶದ ಭಾಷೆಗಳ ಪುನರುಜ್ಜೀವನ.[೧]

ಈ ರೀತಿ ಅರ್ಥೈಸಿದ್ದಾರೆ. ಪುನರುಜ್ಜೀವನ ಎಂಬುದನ್ನು ವ್ಯಾಖ್ಯಾನಿಸುತ್ತಾ..

> ಪುನರುಜ್ಜೀವನ ಏನೋ ಒಂದು ಬಗೆಯ ಧೈರ್ಯ ಕೂಡಿದ ವಿಚಾರ; ಹೊಸ ಹೊಸ ನಿರ್ಮಾಣ; ಮರುಹುಟ್ಟು; ಆಳವಾದ, ಸಮನ್ವಯ ಹೊಸದು, ಹಳದು, ನಮ್ಮದು, ಹೆರರದು ಎಲ್ಲವನ್ನು ಹೊಂದಿಕೆ ಮಾಡುವುದು.[೨]

ಈ ಪುನರುಜ್ಜೀವನ ಕಾಲವನ್ನು ಶ್ರೀನಿವಾಸ ಹಾವನೂರ ಅವರು ಸಾಹಿತ್ಯದ ಅರುಣೋದಯದ ಕಾಲವೆಂದು ಕರೆದಿದ್ದಾರೆ. ೧೮೮೯ರಲ್ಲಿ ಹೊಸಗನ್ನಡ ಗದ್ಯದಲ್ಲಿ ಬೈಬಲ್ ಅನುವಾದ ಬಂದಮೇಲೆ ಪಾಶ್ಚಾತ್ಯ ಪ್ರಭಾವದ ದೃಷ್ಟಿಯು ಪ್ರಾರಂಭವಾಯಿತು. ೧೮೯೯ರಲ್ಲಿ 'ಇಂದಿರಾಬಾಯಿ'ಯಂತಹ ಕಾದಂಬರಿಯು ಹೊಸಗನ್ನಡ ಸಾಹಿತ್ಯದ ಮುಖ್ಯ ಲಕ್ಷಣವನ್ನು ಸೂಚಿಸಿತು. ಆದ್ದರಿಂದ ೧೮೧೦ರಿಂದ ೧೮೯೯ರವರೆಗಿನ ಅವಧಿಯನ್ನು ಹೊಸಗನ್ನಡ ಸಾಹಿತ್ಯದ ಅರಣೋದಯ ಕಾಲವೆಂದು ಗುರುತಿಸಿದ್ದಾರೆ.

ಭಾರತಕ್ಕೆ ಬಂದ ವಿದ್ವಾಂಸರು ೧೮೪೦ರಲ್ಲಿ ಲಂಡನ್ ಮಿಷನರಿ, ೧೮೨೦ರಲ್ಲಿ ವೆಸ್ಲೆಯನ್ ಮಿಷನರಿ ಹಾಗೂ ೧೮೩೪ರಲ್ಲಿ ಬಾಸೆಲ್ ಮಿಷನರಿಗಳ ಮೂಲಕ ಶಿಕ್ಷಣಕ್ಕೆ ಹೆಚ್ಚು ಹೊತ್ತು ನೀಡಿ ವ್ಯಾಕರಣದಂತ ಕೋಶಗಳನ್ನು ರಚಿಸಿಕೊಂಡು ಗ್ರಂಥಸಂಪಾದನಕಾರ್ಯ ಪ್ರಾರಂಭಿಸಿದರು. ೧೮೪೦-೪೧ರ ವೇಳೆಗೆ ಪ್ರಾರಂಭವಾದವೆನ್ನಬಹುದಾದ ಮುದ್ರಣಾಲಯಗಳು ಪುಸ್ತಕ ಪ್ರಕಟಣೆಗೆ ಸಹಕರಿಸಿದವು. ಈ ಎಲ್ಲಾ ಕಾರ್ಯಗಳು ಕನ್ನಡ ಸಾಹಿತ್ಯ ಬೆಳವಣಿಗೆಗೆ ಸಹಕರಿಸಿದವು. ಮುದ್ರಣಕಾರ್ಯ, ಶಾಸನ ಶೋಧಕಾರ್ಯ, ಅನುವಾದ, ರೂಪಾಂತರ, ನಾಡಿನ ಇತಿಹಾಸ ನಿರ್ಮಾಣ ಈ ಎಲ್ಲಾ ಕಾರ್ಯಗಳಿಗೆ ಬಿ.ಎಲ್ ರೈಸ್, ಇ.ಪಿ ರೈಸ್, ಪ್ಲೀಟ್, ಕಿಟೆಲ್ ಮೊದಲಾದಂತ ವಿದೇಶಿ ವಿದ್ವಾಂಸರ ಸೇವೆ ಬಹಳ ಮುಖ್ಯವಾದ ಅಧ್ಯಯನವಾಗಿದೆ.

ಸಾಹಿತ್ಯ ರಚನಾಕಾರ್ಯದಲ್ಲಿ ಕವಿತೆ, ಕಾದಂಬರಿ, ಕಥೆ ಮೊದಲಾದ ಸಾಹಿತ್ಯ ಪ್ರಕಾರಗಳಂತೆ ವಿಮರ್ಶೆ ಎಂಬ ಅಧ್ಯಯನ ಬಗೆಯು ಬರಹ ರೂಪಕ್ಕೆ ಬರಲು ಶತಮಾನಗಳೇ ಬೇಕಾಯಿತು. ಇಪ್ಪತ್ತನೆಯ ಶತಮಾನದ ಎರಡನೇ ದಶಕದ ವೇಳೆಗೆ ಮಾಸ್ತಿ ಅವರು ವಿಮರ್ಶೆಗೆ ಹೊಸ ಅರ್ಥ ನೀಡಿದರು. ಇದು ಇಂದು ಪ್ರತ್ಯೇಕ ಅಧ್ಯಯನ ಶಿಸ್ತಾಗಿ ಬೆಳೆಯಲು ಅದರ ಉಗಮ ಹಾಗೂ ಬೆಳವಣಿಗೆಯೇ ಕಾರಣ ಎನ್ನಬಹುದಾದರೂ ವಿಮರ್ಶೆ ಎಂಬುದು ಸಾಹಿತ್ಯ ಉದಯಿಸಿದ ಕಾಲಕ್ಕೆ ರಚನಕಾರನಲ್ಲಿಯೇ ಪ್ರಾರಂಭಗೊಂಡಿತು ಎಂಬ ವಿಚಾರವನ್ನು ಇಲ್ಲಿ ಗಮನಿಸಬಹುದು. ವಿಮರ್ಶೆಯ ಕಾರ್ಯವನ್ನು ಪ್ರತ್ಯೇಕ ಅಧ್ಯಯನ ಶಿಸ್ತಾಗಿ ಇಪ್ಪತ್ತನೆ ಶತಮಾನದಲ್ಲಿ ಬೆಳವಣಿಗೆ ಕಾಣಲು ಹಲವಾರು ಕಾರಣಗಳಿವೆ. ಪಾಶ್ಚಾತ್ಯ ಸಾಹಿತ್ಯ ವಿಮರ್ಶೆ ಕನ್ನಡ ಸಾಹಿತ್ಯದ ಮೇಲೆ ಉಂಟು ಮಾಡಿದ ಹಲವು ರೀತಿಯ ಪರಿಣಾಮಗಳು ಮೊದಲ ಹೆಜ್ಜೆಗಳಾದವು. ಪಾಶ್ಚಾತ್ಯ ವಿದ್ವಾಂಸರ ಜೊತೆಗೆ ಕನ್ನಡ ವಿದ್ವಾಂಸರು ತೋರಿದ ಅಸ್ಥೆಯು ಸಾಹಿತ್ಯ ಅಧ್ಯಯನಕ್ಕೆ ಮೊದಲಾಯಿತು. ಪಾಶ್ಚಾತ್ಯ ವಿಮರ್ಶೆಗಳ ಅಧ್ಯಯನದಲ್ಲಿ ಅಲ್ಲಿನ ಸಾಹಿತ್ಯ ಕೃತಿಗಳು, ಅವುಗಳ ವಿಮರ್ಶೆ ಭಾರತೀಯ, ಕನ್ನಡ ಸಾಹಿತ್ಯದ ಜೊತೆ ಪ್ರಖರತೆಯ ಪರಿಣಾಮದ ಜೊತೆಗೆ ವೈಪಲ್ಯಗಳು ತೋರಿ ಬಂದಿರಬಹುದು. ಏಕೆಂದರೆ ವಿಮರ್ಶೆಗಿಂತ ಅವುಗಳ ಮೂಲತತ್ವಗಳನ್ನಷ್ಟೇ ಸ್ವೀಕರಿಸಿ ನಮ್ಮ ಸಾಹಿತ್ಯಕ್ಕೆ ಅಳವಡಿಸಿ ಅಧ್ಯಯನ ಮಾಡಲಾಯಿತು.

ಕನ್ನಡ ಸಾಹಿತ್ಯದಲ್ಲಿ ರಚನೆಗೊಂಡ ಕೃತಿಗಳ ಮೇಲೆ ವಿಮರ್ಶಾ ಮೂಲತತ್ವಗಳು ತಮ್ಮ ಅಧ್ಯಯನ ಸ್ವರೂಪವನ್ನು ಹೋಲಿಕೆ, ಆಳವಾದ ಅಧ್ಯಯನ, ಸಂಸ್ಕರಣೆ, ಅನುವಾದ, ರೂಪಾಂತರ

ಮೊದಲಾದ ಮಾದರಿಗಳಲ್ಲಿ ಅಧ್ಯಯನಕ್ಕೆ ಒಳಪಡಿಸಿದವು. ಕನ್ನಡದ ಮಹಾಕಾವ್ಯಗಳ ಮೇಲೆ ಪಾಶ್ಚಾತ್ಯ ಮಹಾಕಾವ್ಯಗಳ ಹೋಲಿಕೆ, ಏಕಸಂಭಾವನೀಯತೆಯ ಎಲ್ಲಾ ಲಕ್ಷಣಗಳನ್ನು ಗಮನಿಸಬಹುದು. ಕನ್ನಡ ಸಾಹಿತ್ಯದ ಆಧುನಿಕ ಸಾಹಿತ್ಯ ಪ್ರಕಾರವೆನಿಸಿಕೊಂಡ ಕಾದಂಬರಿ ಪ್ರಕಾರವನ್ನು ಶಿವರಾಮ ಪಡಿಕ್ಕಲ್ ಅವರು ತಮ್ಮ 'ನಾಡು ನುಡಿಯ ರೂಪಕ' ಎಂಬ ಸಂಶೋಧನಾ ಕೃತಿಯಲ್ಲಿ ಕಾದಂಬರಿ ಪ್ರಕಾರದ ಪ್ರಾರಂಭವನ್ನು ಕುರಿತು ತಿಳಿಸುತ್ತಾ ಅದೇ ಕಾಲಘಟ್ಟದಲ್ಲಿ ಪ್ರಾರಂಭಗೊಂಡ ವಿಮರ್ಶಾ ಪ್ರಕಾರದ ಅಸ್ತಿತ್ವ ಚಿಂತನೆ ಕುರಿತು ಈ ರೀತಿ ಅಭಿಪ್ರಾಯಪಟ್ಟಿದ್ದಾರೆ.

> ಕಳೆದ ನಾಲ್ಕು ದಶಕಗಳಲ್ಲಿ ಪ್ರಕಟವಾಗಿರುವ ಕನ್ನಡ ಕೃತಿನಿಷ್ಠ ವಿಮರ್ಶೆಯ ಅಂತಸ್ಥ ಕಲ್ಪನೆಗಳು ಪಾಶ್ಚಿಮಾತ್ಯ ಅಮೇರಿಕನ್ ಓಜಿತಿ ಅಡುಣುಭುಟ ಮತ್ತು ಮಾರ್ಡನಿಷ್ಟ್ ಸಾಹಿತ್ಯ ಸಿದ್ಧಾಂತಗಳಿಂದ ನಿರ್ದೇಶಿಸಲ್ಪಟ್ಟಿವೆ. ಕಲಾಕೃತಿಯನ್ನು ಅದರ ಸನ್ನಿವೇಶದಿಂದ ಬೇರ್ಪಡಿಸಿ, ಅದ ಇತಿಹಾಸಾತೀತ (Ahistorical) ಸತ್ವದ ಬಗೆಗಿನ ನಂಬಿಕೆಯಿಂದ 'ಶಬ್ದ ಶರೀರದ ಮಿತಿ'ಯಲ್ಲಿಯೇ ಅರ್ಥೈಸಿಕೊಳ್ಳುವುದು ಈ ವಿಮರ್ಶಕರ ಗುರಿಯಾಗಿದೆ. ವೈಯಕ್ತಿಕ ಅನುಭವ ಮತ್ತು ಆ ಅನುಭವದ ಅಥೆಂಟಿಟಿಯನ್ನು ಸಾಹಿತ್ಯದ ಒರೆಗಲ್ಲಾಗಿ ಈ ವಿಮರ್ಶಕರು ಪರಿಗಣಿಸುತ್ತಾರೆ. ಸಾಹಿತ್ಯ ಕೃತಿ ಮತ್ತು ಅದನ್ನು ಸೃಷ್ಟಿಸುವ ಪ್ರಜ್ಞೆಗಳೆರಡೂ ಸ್ವಾಯತ್ತ, ಸ್ವಯಂಭೂ ಹಾಗೂ ಐಕ್ಯ ಸ್ವರೂಪವುಳ್ಳವು ಎಂದು ಈ ವಿಮರ್ಶಕರು ಭಾವಿಸುತ್ತಾರೆ.[೩]

ಕಾದಂಬರಿ ಪ್ರಕಾರದ ರಚನೆಯ ವಾಸ್ತವ ನೆಲೆಯಲ್ಲಿ ವಿಮರ್ಶೆಯನ್ನು ಪರಿಗಣಿಸುವುದು ಇವರ ಮುಖ್ಯ ಉದ್ದೇಶವಾಗಿದೆ. ಶಿವರಾಮ ಪಡಿಕ್ಕಲ್ ಅವರ ದೃಷ್ಟಿಯಲ್ಲಿ ವಿಮರ್ಶೆ ಒಂದು ಸಾಹಿತ್ಯ ಪ್ರಕಾರವಾಗಿ ಸ್ಥಾಪಿತವಾಗದ ಚಿಂತನೆಗಳನ್ನು ಪ್ರಮುಖವಾಗಿ ಗಮನಿಸಿದ್ದಾರೆ.

ಮಾಸ್ತಿ ಅವರು ವಿಮರ್ಶೆಯ ಪ್ರಾರಂಭ ಕುರಿತು

> ಈಗ ನಾವು ವಿಮರ್ಶೆಯೆಂದು ಕರೆಯುವ ರೀತಿಯ ಬರವಣಿಗೆ ನಮ್ಮಲ್ಲಿ ಇನ್ನೂ ಹೊಸದು; ಅದರ ಹೆಸರೂ ಹೊಸದು. ಎಂದರೆ ಹಿಂದೆ ನಮ್ಮಲ್ಲಿ ವಿಮರ್ಶೆ ಇರಲಿಲ್ಲವೆಂದಲ್ಲ. ವಿಮರ್ಶೆ ಇಲ್ಲದೆ ಸಾಹಿತ್ಯವಾಗುವುದೂ ಇಲ್ಲ; ಬೆಳೆಯೂವುದೂ ಇಲ್ಲ.[೪]

ಎಂದು ವಿಮರ್ಶೆಯನ್ನು ಸಾಹಿತ್ಯದೊಂದಿಗೆ ತೌಲನಿಕವಾಗಿ ಅಧ್ಯಯನ ಮಾಡಿದ್ದಾರೆ. ಶ್ರೀವಿಜಯ, ಪಂಪ, ರನ್ನ ಮೊದಲಾದ ಕನ್ನಡ ಸಾಹಿತ್ಯದ ಆದಿಕವಿಗಳ ಕಾವ್ಯದಲ್ಲಿಯೇ ಸಾಹಿತ್ಯಕ್ಕೆ ವಿಮರ್ಶೆಯೆಂಬುದು ಅವಿನಾಭಾವ ಮಿಶ್ರಣದೊಂದಿಗೆ ಇರುವಂತಹದು ಅದು ಓದುಗರನ್ನು ತಲುಪಲು ಪ್ರೇರಕವೆಂಬ ಅಂಶಗಳನ್ನು ಕಾಣುತ್ತೇವೆ.

ಮೊದಲು ನಮ್ಮಲ್ಲಿ ವಿಮರ್ಶೆ ಎಂಬುದು ಅಲಂಕಾರಶಾಸ್ತ್ರ ಕುರಿತು ಅಧ್ಯಯನ ರೂಪದಲ್ಲಿ ಪ್ರಾರಂಭವಾಯಿತು ಎನ್ನಬಹುದು. ಹಳಗನ್ನಡ ಕಾವ್ಯಗಳಲ್ಲಿ ಇದ್ದಂತಹ ಸತ್ಕಾವ್ಯ ಪ್ರಶಂಸೆ ಹಾಗೂ ಕೆಟ್ಟ ಕಾವ್ಯದ ನಿಂದೆಗಳನ್ನು ಹಾಗೂ ಒಬ್ಬ ಕವಿ ಹಾಗೂ ಕಾವ್ಯದ ರೀತಿ, ಚೌಕಟ್ಟುಗಳನ್ನು ಅಲಂಕಾರ ಶಾಸ್ತ್ರ ಕೃತಿಗಳಲ್ಲಿ ಸ್ಪಷ್ಟಪಡಿಸಿರುವುದನ್ನು ಗಮನಿಸಿದರೆ ವಿಮರ್ಶೆಯ ಪ್ರಾರಂಭವನ್ನು ಸೂಕ್ಷ್ಮವಾಗಿ ಗಮನಿಸಬಹುದು.

ಕವಿರಾಜಮಾರ್ಗ, ಪಂಪಭಾರತ, ಆದಿಪುರಾಣ, ಸಾಹಸಭೀಮವಿಜಯಂ, ಯಶೋಧರ ಚರಿತೆ ಇಂತಹ ಪ್ರಾರಂಭದ ಕೃತಿಗಳಿಂದಲೂ ವಚನಸಾಹಿತ್ಯದ ಬೇರುಗಳೆಲ್ಲಾ ಇಂತಹ ವಿಮರ್ಶೆಯನ್ನು ತನ್ನೊಳಗೆ ಮೈಗೂಡಿಸಿಕೊಂಡು ಸಾಹಿತ್ಯಕ್ಕೆ ಆಧುನಿಕತೆಯನ್ನು, ವಿಮರ್ಶೆಯ ಅರಿವನ್ನು ತಂದಿರುವುದನ್ನು ಗಮನಿಸಬಹುದು. ರಾಘವಾಂಕ, ಹರಿಹರ, ಪುಲಿಗೆರೆಯ ಸೋಮನಾಥ, ಕುಮಾರವ್ಯಾಸನಂತಹ ಕವಿಗಳು ಜನಪದರ ಸಾಹಿತ್ಯವನ್ನು ಅಳವಡಿಸಿಕೊಂಡ ಹೊಸ ಬಗೆಯೊಳಗೆ ಶಾಸ್ತ್ರೀಯ ಸಾಹಿತ್ಯದ ಅಧ್ಯಯನ, ಪ್ರಾಚೀನ ಕೃತಿಗಳು ಹಾಗೂ ಸಂಸ್ಕೃತ ಕೃತಿಗಳ ಸಂಪಾದನೆ, ಅನುವಾದ ಈ ಕಾರ್ಯಗಳ ಜೊತೆಗೆ ವಿಮರ್ಶೆ ಎಂಬ ಹೊಸ ರೂಪಗಳ ಅಳವಡಿಕೆ ಬಂದುದೇ ಸಾಹಿತ್ಯದ ಮರು ಓದು. ಈ ದಿಕ್ಕಿನಲ್ಲಿ 'ರನ್ನಕವಿ ಪ್ರಶಸ್ತಿ' ಕೃತಿಯೊಳಗೆ ಸೇರಿರುವ ಮಂ. ಆ. ರಾಮಾನುಜ ಅಯ್ಯಂಗಾರ್ ಅವರ 'ಕವಿ ಚಕ್ರವರ್ತಿ ಕವಿ ರನ್ನನ ಜೀವನ ಚರಿತ್ರೆ, ಗ್ರಂಥ ವಿಮರ್ಶೆ ಇತ್ಯಾದಿ'(೧೮೯೫) ಎಂಬ ಲೇಖನ ರೂಪದ ಕೃತಿಯು ಮೊದಲಿಗೆ ಕಾವ್ಯದ ಹೊಸ ಅಧ್ಯಯನ ಪ್ರಾರಂಭಗೊಂಡಿತು.

ಪ್ರಾರಂಭದ ವಿಮರ್ಶೆಗಳನ್ನು ಗಮನಿಸಿದಾಗ ಮುರಿಗಾರಾಧ್ಯರ 'ಷಡಕ್ಷರದೇವಂ'(೧೯೦೬) ಬಿ. ಕೃಷ್ಣಪ್ಪನವರ 'ರಾಮಚಂದ್ರಚರಿತ ಪುರಾಣ ವಿಮರ್ಶೆ'(೧೯೨೩), ಜಿ.ಪಿ ರಾಜರತ್ನಂ ಅವರ 'ಶ್ರೀ ಕವಿ ಪಂಪ'(೧೯೩೧) ಎಂಬ ಕೃತಿಗಳಲ್ಲಿ ಸೂಕ್ಷ್ಮವಾದ ವಿಮರ್ಶೆಯನ್ನು ಕಾಣಬಹುದು. ತೀ. ನಂ. ಶ್ರೀಕಂಠಯ್ಯ ಅವರು 'ಪಂಪ'(೧೯೩೯) ಎಂಬ ಕಿರು ಹೊತ್ತಿಗೆ ರಚಿಸಿದರು. ಎಸ್. ವಿ ರಂಗಣ್ಣ ಅವರು ರಚಿಸಿದ 'ಕುಮಾರವ್ಯಾಸ'(೧೯೬೭) ಕೃತಿಯು ವಿಮರ್ಶೆಯ ಅಧ್ಯಯನ ಎನ್ನಬಹುದು. ಇದೇ ಸಮಯದಲ್ಲಿ ಮೈಸೂರು ವಿಶ್ವವಿದ್ಯಾಲಯ ಹಾಗೂ ಕರ್ನಾಟಕ ವಿಶ್ವವಿದ್ಯಾಲಯಗಳು ಅಧ್ಯಯನ ರೂಪದ ಚಿಕ್ಕ ಪುಸ್ತಕಗಳನ್ನು ಹಲವು ಭಾಷೆಯ ಕವಿ ಕಾವ್ಯಗಳನ್ನು ಪ್ರಚಾರ ಪುಸ್ತಕ ಮಾಲೆಯ ರೂಪದಲ್ಲಿ ಹೊರತಂದಿರುವುದನ್ನು ಅಧ್ಯಯನ ಮಾಡಬಹುದು. ಇವು ಸೂಕ್ಷ್ಮವಾಗಿ ವಿಮರ್ಶೆಯ ಅಧ್ಯಯನವನ್ನು ತಿಳಿಸುತ್ತವೆ ಎನ್ನಬಹುದು.

ರಂ. ಶ್ರೀ. ಮುಗಳಿ ಅವರ 'ರನ್ನನ ಕೃತಿರತ್ನ'(೧೯೪೬), ನಿಡುಮಾಮಿಡಿ ಚನ್ನಬಸವರಾಜದೇಶಿ ಕೇಂದ್ರ ಶಿವಾಚಾರ್ಯ ಅವರ 'ತಮ್ಮ ಹೆಮ್ಮೆಗಳು'(೧೯೪೮), ಚನ್ನಬಸವಪ್ಪ ಕವಲಿ ಮತ್ತು ಸಂ. ಮರಿದೇವ ಸ್ವಾಮಿ ಅವರ 'ಮರುಳ ಸಿದ್ಧಾಂಕ'(೧೯೪೯), ಡಿ. ವಿ. ಶೇಷಗಿರಿರಾಯರ 'ಪಂಪ ರಾಮಾಯಣ ಕಾವ್ಯ ಪರಿಚಯ'(೧೯೫೦), 'ನಾಗಚಂದ್ರನ ಕಾವ್ಯಗಳು'(೧೯೫೦), ವಿ. ಶಿವಾನಂದ ಅವರ 'ಸೀಮಾ ಪುರುಷ ಷಡಕ್ಷರದೇವ'(೧೯೬೬), ವಿ. ಸೀತಾರಾಮಯ್ಯ ಅವರ 'ಮಹಾಕವಿ ಪಂಪ'(೧೯೭೫) ಇಂತಹ ಹಲವು ಕೃತಿಗಳಲ್ಲಿ ಪ್ರಾಚೀನ ಕೃತಿಗಳ ಅಧ್ಯಯನವನ್ನು ಕಾಣಬಹುದು. ಇದೇ ಸಾಲಿಗೆ ಸೇರುವ ಕೃತಿಗಳಲ್ಲಿ ಕವಿ ಕೇಂದ್ರಿತ ಪ್ರಜ್ಞೆಯಲ್ಲಿ ಚರಿತ್ರೆಯನ್ನೂ ಕೃತಿಗಳ ಸಮಗ್ರತೆಯನ್ನು ವಿಮರ್ಶಾರೂಪದ ಅಧ್ಯಯನ ನಡೆಸುವುದನ್ನು ಕಾಣಬಹುದು ಅಂತಹ ಕೃತಿಗಳಲ್ಲಿ 'ಮುದ್ದಣ'(೧೯೨೬), 'ರನ್ನ ಕವಿ ಪ್ರಶಸ್ತಿ'(೧೯೨೮), 'ಕವಿ ಲಕ್ಷ್ಮೀಶ'(೧೯೩೩), 'ಅಭಿನವ ಪಂಪ'(೧೯೩೪), 'ಹರಿಹರ ದೇವ'(೧೯೩೭), 'ಕುಮಾರವ್ಯಾಸ ಪ್ರಶಸ್ತಿ'(೧೯೪೦),

'ಶ್ರೀ ಶಿವಯೋಗಿ ನಿಜಗುಣರ ಸ್ವರೂಪ ದರ್ಶನ'(೧೯೫೪), 'ಮಹಾತ್ಮ ಕನಕದಾಸ ಪ್ರಶಸ್ತಿ'(೧೯೬೫) ಇಂತಹ ಕೃತಿಗಳಲ್ಲಿ ಪ್ರಾಚೀನ ಕವಿಗಳನ್ನು ಕಾವ್ಯಾತ್ಮಕ ಚರಿತ್ರೆಯೊಂದಿಗೆ ನಡೆದ ಮರು ಓದು ವಸಾಹತುಶಾಹಿ ಚಿಂತನೆಯಲ್ಲಿಯೇ ಜರುಗಿದ ಸಾಹಿತ್ಯ ಕಾರ್ಯ ಎಂಬುದನ್ನು ಧನಾತ್ಮಕವಾಗಿ ಗುರ್ತಿಸಬಹುದು.

ಸಾಹಿತ್ಯ ಚರಿತ್ರೆಯ ನಿರ್ಮಾಣ ಎಂಬುದು ಕನ್ನಡ ಸಾಹಿತ್ಯದಲ್ಲಿ ೨೦ನೇ ಶತಮಾನದ ಹೊಸ ಮೈಲಿಗಲ್ಲು. ಟಿ. ಎಸ್. ವೆಂಕಣ್ಣಯ್ಯ ಅವರು ನಿರ್ಮಿಸಿದ ಸಂಶೋಧನಾ ಹಾದಿ ಚರಿತ್ರೆ ನಿರ್ಮಾಣಕ್ಕೆ ಹೊಸ ಬುನಾದಿಯಾಯಿತು. ಇವರ ಕನ್ನಡ ಸಾಹಿತ್ಯ ಚರಿತ್ರೆ ಮತ್ತು ಇತರ ಲೇಖನಗಳು(೧೯೩೮) ಎಂಬ ಬರಹ ಮೊದಲ ಅಧ್ಯಯನ. ಬಿ. ಎಂ. ಶ್ರೀ ಕಂಠಯ್ಯ ಅವರು ಕನ್ನಡ ಕೈಪಿಡಿಯ ಜೊತೆಗೆ ಕನ್ನಡ ಸಾಹಿತ್ಯ ಚರಿತ್ರೆಯ ಬರಹಕ್ಕೆ ಹೊಸ ಮಾದರಿ ಸೃಷ್ಟಿಸಿದರು ಎನ್ನಬಹುದು. ತೀ. ನಂ. ಶ್ರೀಕಂಠಯ್ಯ ಅವರ 'ಕಾವ್ಯ ಸಮೀಕ್ಷೆ' (೧೯೪೭), 'ಸಮಾಲೋಕನ' (೧೯೫೮), ಕುವೆಂಪು ಅವರ 'ಕಾವ್ಯವಿಹಾರ' (೧೯೪೬), 'ತಪೋನಂದನ' (೧೯೫೦), 'ವಿಭೂತಿಪೂಜೆ' (೧೯೫೩), 'ದ್ರೌಪದಿಯ ಶ್ರೀಮುಡಿ' (೧೯೬೦) 'ರಸೋವೈಸಃ' (೧೯೬೨), 'ಇತ್ಯಾದಿ' (೧೯೭೦). ದ. ರಾ. ಬೇಂದ್ರೆ ಅವರ 'ಸಾಹಿತ್ಯ ಸಂಶೋಧನೆ' (೧೯೪೦), 'ವಿಚಾರ ಮಂಜರಿ' (೧೯೪೫), 'ಕವಿ ಲಕ್ಷ್ಮೀಶನ ಜೈಮಿನಿ ಭಾರತಕ್ಕೆ ಮುನ್ನುಡಿ' (೧೯೫೪), 'ಮಹಾರಾಷ್ಟ್ರ ಸಾಹಿತ್ಯ'(೧೯೫೪), 'ಕಾವ್ಯೋದ್ಯೋಗ'(೧೯೬೨), 'ಕನ್ನಡ ಸಾಹಿತ್ಯದಲ್ಲಿ ನಾಲ್ಕು ನಾಯಕ ರತ್ನಗಳು'(೧೯೬೮), 'ಸಾಹಿತ್ಯದ ವಿರಾಟ್ ಸ್ವರೂಪ' (೧೯೭೪), 'ಕುಮಾರ ವ್ಯಾಸ ಪುಸ್ತಿಕೆ' (೧೯೭೬) ಇಂತಹ ಕೃತಿಗಳು ಸಾಹಿತ್ಯ ಚರಿತ್ರೆಯನ್ನು ಮಾತ್ರ ತಿಳಿಸದೆ ಸಾಹಿತ್ಯವನ್ನು ಓದುವ ಹೊಸ ವಿಧಾನಗಳನ್ನು ಪರಿಚಯಿಸಿತೆನ್ನಬಹುದು. ಎಸ್. ವಿ. ರಂಗಣ್ಣನವರ 'ಶೈಲಿ'(೧೯೪೪) ಮತ್ತು 'ಹೊನ್ನಶೂಲ'(೧೯೫೯) ಈ ಎರಡೂ ಕೃತಿಗಳು ಸಾಹಿತ್ಯ ಅಧ್ಯಯನವನ್ನು ಬೆಳಸಿದ ಮಹತ್ವದ ಕೃತಿಗಳೆನ್ನಬಹುಧು.

ಇದೇ ಮಾರ್ಗವನ್ನು ಮುಂದುವರೆಸಿದ ಕೃತಿಗಳೆಂದರೆ ಜಿ. ಎಸ್. ಶಿವರುದ್ರಪ್ಪ ಅವರ 'ಪರಿಶೀಲನ', 'ವಿಮರ್ಶೆಯ ಪೂರ್ವ ಪಶ್ಚಿಮ', 'ಕಾವ್ಯಾರ್ಥ ಚಿಂತನ', 'ಗತಿಬಿಂಬ', 'ಅನುರಣನ', 'ಪ್ರತಿಕ್ರಿಯೆ', 'ಕನ್ನಡ ಸಾಹಿತ್ಯ ಸಮೀಕ್ಷೆ', 'ಮಹಾಕಾವ್ಯ ಸ್ವರೂಪ', 'ಕನ್ನಡ ಕವಿಗಳ ಕಾವ್ಯ ಕಲ್ಪನೆ', 'ಹೊಸಗನ್ನಡ ಕವಿತೆಗಳ ಕಾವ್ಯ ಚಿಂತನ', 'ಕುವೆಂಪು: ಪುನರವಲೋಕನ', 'ಬೆಡಗು', 'ನವೋದಯ' ಹಾಗೂ ಇವರ ಪ್ರೌಢ ಪ್ರಬಂಧ 'ಸೌಂದರ್ಯ ಸಮೀಕ್ಷೆ' ಈ ಕೃತಿಗಳು ಸಾಹಿತ್ಯ ಅಧ್ಯಯನಕ್ಕೆ ಭಿನ್ನ ಮಾರ್ಗಗಳನ್ನು ರೂಪಿಸಿದವು ಎನ್ನಬಹುದು. ಈ ರೀತಿಯ ಅಧ್ಯಯನದ ವಿಸ್ತಾರವು ವಿಶಾಲವಾಗಿ ಬೆಳೆದಿದೆ ಪ್ರಸ್ತುತದವರೆಗೂ ಸಾಹಿತ್ಯ ವಿಮರ್ಶೆಯ ಕಾರ್ಯ ಹೊಸ ರೀತಿಯ ಅಧ್ಯಯನಗಳನ್ನು ರೂಪಿಸುತ್ತಿರುವುದನ್ನು ಗಮನಿಸಬಹುದು. ಉಳಿದ ಕೃತಿಗಳ ಸಮಗ್ರ ಅಧ್ಯಯನವನ್ನು ಪ್ರಬಂಧ ರಚನೆಯಲ್ಲಿ ಸೇರಿಸಲಾಗುವುದು.

೨.೩ ಮುನ್ನುಡಿ ಬರಹಗಳು

ಮುನ್ನುಡಿಗಳ ಬರಹಗಳಲ್ಲಿ ಈ ವಿಮರ್ಶಾ ಪರಿಕಲ್ಪನೆ ಬೆಳವಣಿಗೆ ಕಾಣುವುದು ಹೊಸ ಅಧ್ಯಯನದ ದಾರಿಯೇ ಆಗಿರುತ್ತದೆ. ಪಾಶ್ಚಾತ್ಯರ ಪ್ರಭಾವದೊಂದಿಗೆ ಮುಂದುವರೆದ ಸಂಪಾದನಾ ಕಾರ್ಯದಲ್ಲಿ ಇದರ ಪ್ರಭಾವವಿದೆ. ವಿದ್ವಾಂಸರು ತಾವು ಸಂಪಾದಿಸಿದ ಹಳಗನ್ನಡ ಕೃತಿಗಳಿಗೆ ಒಂದು ಸುದೀರ್ಘವಾದ ಮುನ್ನುಡಿ ಅಥವಾ ಪ್ರಸ್ತಾವನೆಯನ್ನು ರಚಿಸುತ್ತಿದ್ದರು. ಟಿಪ್ಪಣಿ, ಟೀಕೆ, ವ್ಯಾಖ್ಯಾನಗಳ ಜೊತೆಗೆ ಕೆಲವು ವಿದ್ವಾಂಸರು ಶಬ್ದಕೋಶಗಳನ್ನು ರಚಿಸಿದರು. ಇದೆಲ್ಲಾ ಅಧ್ಯಯನ ಮಾರ್ಗದ ಮೊದಲ ವ್ಯವಸ್ಥಿತ ಮಾರ್ಗಗಳು. ಅಂದಿನ ಯಾವುದೇ ಮುನ್ನುಡಿಗಳನ್ನು ಗಮನಿಸಿದರೂ ಸಾಹಿತ್ಯ ಕುರಿತು, ಕಾವ್ಯದ ಹೊಸಹಾದಿ ಕುರಿತು ತಮ್ಮದೇ ವ್ಯಾಖ್ಯಾನಗಳನ್ನು ಮಂಡಿಸುತ್ತಾ ಮುಂದಿನ ಅಧ್ಯಯನಕ್ಕೆ ಸೂಕ್ತ ವೇದಿಕೆಗಳನ್ನು ನಿರ್ಮಿಸಿರುವ ಬಗೆಯನ್ನು ಗಮನಿಸಬಹುದು. ಸಾಹಿತ್ಯದ ಮುಂದಿನ ಕಾರ್ಯ ಹಾಗೂ ವಿಮರ್ಶೆಯ ದಾರಿಯನ್ನು ಸಹೃದಯರ ಅಧ್ಯಯನಗಳ ಸೂಕ್ಷ್ಮತೆಯಲ್ಲಿ ಭಿನ್ನವಿಸುತ್ತಾರೆ.

ಬೇಂದ್ರೆ ಅವರು ತಮ್ಮ ಕವನಸಂಕಲನಗಳಿಗೆ ತಾವೇ ಮುನ್ನುಡಿ ಬರೆದು ಸಹೃದಯನನ್ನು 'ರಸಿಕ'ನೆಂಬ ಹೊಸ ಬಗೆಯಲ್ಲಿ ಗೌರವಿಸಿದ ರೀತಿ ಅವರದು. ಬೇಂದ್ರೆ ಅವರಿಗೆ ಕಾವ್ಯ ಅಧ್ಯಯನವೆಂಬುದು ಒಂದು ಲೀಲೆ ಆದರೆ ಡಿ.ವಿ.ಜಿ ಅವರಿಗೆ ಅದೊಂದು 'ಸಾಹಿತ್ಯ ಶಕ್ತಿ'. ಕುವೆಂಪು ತಮ್ಮ 'ಕಲಾಸುಂದರಿ' ಎಂಬ ಕವನ ಸಂಕಲನಕ್ಕೆ ಮುನ್ನುಡಿ ಬರೆಯುತ್ತಾ 'ಕಲಾಸುಂದರಿ ಸರಸಿಯಾದರೂ ಮಹಾತಪಸ್ವಿನಿ. ಆಕೆಯ ಬಹಿರಂಗದಲ್ಲಿ ತೇಜಸ್ಸಿರುವಂತೆಯೆ ಅಂತರಂಗದ ತಪಸ್ಸಿದೆ' ಎನ್ನುವಾಗ ಸಾಹಿತ್ಯವನ್ನು ಕಲಾಸುಂದರಿ ಎಂಬರ್ಥದಲ್ಲಿ ಗಮನಿಸಬಹುದು. 'ಕಲಾಸುಂದರಿ' ಕವನ ಸಂಕಲನದ ಮುನ್ನುಡಿಯಲ್ಲಿ ಕುವೆಂಪು 'ಕಲಾಸುಂದರಿಯ ಅವತಾರಗಳಲ್ಲಿ ಸರ್ವಶ್ರೇಷ್ಠವಾದುದೆಂದರೆ ಕವಿತೆ. ಕವಿತೆ ಇತರ ಕಲೆಗಳಿಗಿಂತಲೂ ಅತಿಶಯವಾದ ಗೌರವಕ್ಕೆ ಪಾತ್ರವಾಗಿದೆ. ಅದು ವಾಙ್ಮಯ ಶರೀರಿಯಾಗಿರುವುದರಿಂದ ರಾಗ ರಸ ಭಾವಗಳನ್ನು ಉದ್ದೀಪನಮಾಡಿ ಪವಿತ್ರಗೈಯುವಂತೆಯೇ ಮನಸ್ಸಿಗೆ ಜ್ಞಾನಜ್ಯೋತಿಯನ್ನು ದಾನಮಾಡಿ ಆತ್ಮವನ್ನು ಅತ್ಯುನ್ನತ ಸ್ಥಿತಿಗೆ ಕೊಂಡೊಯ್ಯುತ್ತದೆ. ನಮ್ಮನ್ನು ವ್ಯಕ್ತದ ಅಂಚಿಗೆ ಎಳೆದೊಯ್ದು ಅವ್ಯಕ್ತದ ಗಭೀರತೆಯನ್ನು ವೀಕ್ಷಿಸುವಂತೆ ಮಾಡುತ್ತದೆ' ಎಂದಿದ್ದಾರೆ. ಈ ವೀಕ್ಷಣೆಯೇ ತಾತ್ವಿಕವಾದ ಅಧ್ಯಯನ ಸ್ವರೂಪ ಎಂದು ಗಮನಿಸಬಹುದು. ಕುವೆಂಪು ಇಂತಹ ಸೂಕ್ಷ್ಮತೆಯನ್ನು 'ದರ್ಶನ'ವೆಂದು ಹೊಸ ಅರ್ಥದಲ್ಲಿ ತಿಳಿಸುವರು.

ಬೇಂದ್ರೆ ಅವರು ವಿಮರ್ಶೆ ಕುರಿತು ಎರಡು ಲೇಖನಗಳಲ್ಲಿ ಸ್ಪಷ್ಟಪಡಿಸಿದ್ದಾರೆ. ಅದರ ಸ್ವರೂಪದಲ್ಲಿಯೇ 'ಸಾಹಿತ್ಯ ವಿರಾಟ್ ಸ್ವರೂಪ' ಎಂಬ ವಿವಿಧ ವಿಮರ್ಶಾ ಲೇಖನಗಳ ಗ್ರಂಥವನ್ನು ರಚಿಸಿದ್ದಾರೆ. ವಿಮರ್ಶೆ ಕುರಿತು ಬೇಂದ್ರೆ ಅವರ ನಿಲುವನ್ನು ಈ ರೀತಿಯಲ್ಲಿ ಗಮನಿಸಬಹುದು.

> ಇಂದಿನ ವಿಮರ್ಶನ ಪ್ರಕಾರವು ಆಂಗ್ಲ ಸಾಹಿತ್ಯ ಸಂಸ್ಕಾರದಿಂದ ಬಂದುದು. ಅದರ ರೀತಿ-ನೀತಿಗಳು, ರೂಪ-ರೇಖೆಗಳು, ಸತ್ತ್ವ-ಸಾರಗಳು ಬಹುತರವಾಗಿ ಹೊಸವು.

ವಿಮರ್ಶೆಯು ಇಂದಿನೊಂದು ಸಾಹಿತ್ಯಭೇದವು. ಪ್ಲೇಟೋ, ಅರಿಸ್ಟೋಟಲ್‌ರಿಂದ ಹರಿದು ಬಂದೀ ತತ್ತ್ವಚಿಕಿತ್ಸಾಪ್ರವಾಹವು ಇಂದು ಬಹುರೂಪವನ್ನು ತಾಳಿರುವುದು. ಗಾಳಿಗೊಂದು ಮುರುಕ, ಗಾಳಿಗೊಂದು ಬಣ್ಣ-ಎಂಬಂತೆ ಇದರ ಸಚೇತನ ಚಾಂಚಲ್ಯವು ವಿಸಟಂಬರಿಯುತ್ತಿದೆ ಪಾಶ್ಚಿಮಾತ್ಯ ಸಾಹಿತ್ಯದೊಡನೆ ಅದರ ವಿಮರ್ಶೆಯ ಮೋಹ ಜಾಲದ ಚಕ್ರವ್ಯೂಹದಲ್ಲಿ ನಾವೂ ಸುತ್ತಾಡುತ್ತಿರುವೆವು. ...ಕನ್ನಡ-ಸಂಸ್ಕೃತ-ಆಂಗ್ಲ ಸಾರವನ್ನು ಹೀರಿ ಹೊಸ ಹಾದಿಯನ್ನು ಹಿಡಿಯಬೇಕಾದರೆ ಹೊಸ ಹೊಸ ಸಂಯೋಗಗಳು ಬೇಕು, ಸಮತೆಯಲ್ಲಿಯೂ ಸಂಯೋಗಬೇಕು, ಅದನ್ನು ಕಂಡು ಹಿಡಿಯಲು ತತ್ತ್ವದರ್ಶಕ ದೃಷ್ಟಿಬೇಕು. ಪಾಶ್ಚಿಮಾತ್ಯ ವಿಮರ್ಶೆಯ ಭವಿತವ್ಯತೆಯೂ ಅದನ್ನೇ ಕೋರುವುದು. ಫಲಪ್ರದವಾಗಬಹುದಾದ ಮಾರ್ಗವದೊಂದೆ ಎಂದು ತೋರುವುದು. ಅಂಥ ಆ ಭವ್ಯ ಮಂದಿರವನ್ನು ಕಟ್ಟಬಲ್ಲ ವಾಸ್ತುಶಿಲ್ಪಗಳ ಪಾದದ ಹಾಸುಗಲ್ಲಿನಂತೆ ಈ ಕೆಲ ವಿಮರ್ಶಾ ವಿಚಾರಗಳು ಆದರೂ ಸಾಕು.[೨]

ಸಾಹಿತ್ಯದಲ್ಲಿ ವಿಮರ್ಶೆಯ ಕಾರ್ಯ

ಪೂರ್ವಕವಿಗಳ ಕುರಿತು ಅಧ್ಯಯನ ಪ್ರಾರಂಭವಾದ ಹಿನ್ನಲೆಯಲ್ಲಿ ಪಂಪ, ರನ್ನ, ಕುಮಾರವ್ಯಾಸ, ಮುದ್ದಣ ಮೊದಲಾದ ಕವಿಗಳ ಕುರಿತು 'ನಾಡೋಜ ಪಂಪ', 'ರನ್ನಕವಿ ಪ್ರಶಸ್ತಿ', 'ಕುಮಾರವ್ಯಾಸ ಪ್ರಶಸ್ತಿ', 'ಮುದ್ದಣ ಗ್ರಂಥ ಪ್ರಶಸ್ತಿ' ಮೊದಲಾದ ಗ್ರಂಥಗಳು ವಿಮರ್ಶಾತ್ಮಕವಾಗಿ ರಚನೆಗೊಂಡವು.

ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ವಿಮರ್ಶೆ ಕುರಿತು ಪ್ರತ್ಯೇಕ ಕೃತಿಯನ್ನು ರಚಿಸಿದರು. ೧೯೨೬ರಲ್ಲಿ ರಚಿತವಾದ ಈ ಗ್ರಂಥವು ಮೊದಲಬಾರಿ ಸಾಹಿತ್ಯದೊಂದಿಗೆ ವಿಮರ್ಶೆಯ ಕಾರ್ಯವನ್ನು ಪರಿಚಯಿಸಲು ಪ್ರಯತ್ನಿಸಿದೆ. 'ಸಾಹಿತ್ಯದಲ್ಲಿ ವಿಮರ್ಶೆಯ ಕಾರ್ಯ' ಎಂಬ ಲೇಖನದಲ್ಲಿ ವಿಮರ್ಶೆ ಕುರಿತು ಪೂರ್ವಪೀಠಿಕೆಯನ್ನೇ ಸಿದ್ಧಪಡಿಸಲಾಗಿದೆ. ಇಲ್ಲಿ ವಿಮರ್ಶೆ ಕುರಿತ ಚಿಂತನೆಗಿಂತ ವಿಮರ್ಶೆಯ ಕಾರ್ಯವನ್ನು ಗ್ರಹಿಸುವುದೇ ಬಹು ಮುಖ್ಯ ಸಂಗತಿಯಾಗಿದೆ. ಇಪ್ಪತ್ತನೆ ಶತಮಾನದ ಆದಿಯಲ್ಲಿ ಉಂಟಾದ ಸಾಹಿತ್ಯಿಕ ಬದಲಾವಣೆಗಳು ಅದೇ ಕಾಲಘಟ್ಟದ ಸಾಮಾಜಿಕ ಜವಾಬ್ದಾರಿಗಳನ್ನು ಪೂರ್ಣವಾಗಿ ಗ್ರಹಿಸುವ ಹಾಗೂ ಉತ್ತರಿಸುವ ಜವಾಬ್ದಾರಿಯನ್ನೂ ಹೊಂದಿದ್ದವು. ಮಾಸ್ತಿಯವರು ಕವಿಗಳಿಗಿರುವ ಸ್ವತಂತ್ರ ಹಾಗೂ ಅವರ ಸಾಹಿತ್ಯಕ್ಕಿರುವ ವಿಪುಲ ಅವಕಾಶಗಳನ್ನು ಚರ್ಚಿಸಿದ್ದಾರೆ. ಇಲ್ಲಿ ಕವಿ ಹಾಗೂ ಓದುಗನ ನಡುವೆ ಒಂದು ಸೇತುವೆಯನ್ನು ನಿರ್ಮಿಸುತ್ತಾ ಸಾಹಿತ್ಯವನ್ನು ಗ್ರಹಿಸುವ ಪರಿಧಿಯನ್ನು ಸಂಕೇತಿಸಿದ್ದಾರೆ. ವಿಮರ್ಶೆಯ ಕಾರ್ಯವನ್ನು ಕವಿ ಹಾಗೂ ಸಹೃದಯ ಇಬ್ಬರೂ ನಿರ್ವಹಿಸುವ ಅಗತ್ಯವಿದೆ ಎಂದೂ ತಿಳಿಸುತ್ತಾ 'ಸಾಧ್ಯವಾದಷ್ಟು ಜಾಗ್ರತೆಯಲ್ಲಿ ಸಾಹಿತ್ಯದ ಸ್ವರೂಪವನ್ನೂ ಲಕ್ಷಣವನ್ನೂ ಜನರಿಗೆ ತಿಳಿಯುವಂತೆ ಮಾಡಿ ಒಳ್ಳೆಯ ಗ್ರಂಥಗಳ ರಚನೆ ಕವಿಗೂ ಅವುಗಳ ಪಠನ ಜನರಿಗೂ ಸುಲಭವಾಗುವಂತೆ ಮಾಡಬೇಕು; ಇದಕ್ಕೆ ವಿಮರ್ಶೆಯನ್ನು ಅಭಿವೃದ್ಧಿಗೆ ತರಬೇಕು.' ಎಂಬ ಮಾಸ್ತಿ ಅವರ ನಿಲುವು ಕುವೆಂಪು, ಬೇಂದ್ರೆ, ಗೋಕಾಕ್, ಕಾರಂತರಲ್ಲಿ ಸಾಹಿತ್ಯದ ಸತ್ವರೂಪವನ್ನು ಪಡೆಯಿತೆನ್ನಬಹುದು.

ವಿಮರ್ಶೆಯ ಕಾರ್ಯವೆಂಬುದು ಕಾವ್ಯದ ಅಧ್ಯಯನದಿಂದ ದೊರಕುವ ಸಂಸ್ಕಾರ ಓದುವವನಿಗೆ ಬರುವಂತೆ ಮಾಡುವುದು. ವಿಮರ್ಶಕನು ಕವಿಯ ಕಾವ್ಯದ ಒಳನೋಟ ಅರಿಯಬೇಕಿದೆ. ಓದುಗನಿಗೆ ಅರ್ಥವಾಗುವಂತೆ ಮಾಡುವುದರ ಜೊತೆಗೆ ಆ ಕೃತಿಯ ಆಶಯವನ್ನು ಸ್ಪಷ್ಟಪಡಿಸುವ ಜವಾಬ್ದಾರಿ ವಿಮರ್ಶಕನದು ಎನ್ನುವರು. ವಿಮರ್ಶೆಯ ಕಾರ್ಯವನ್ನು ಪ್ರಯತ್ನದ ನೆಲೆಯಾಗಿ ಗಮನಿಸುತ್ತಾ ಮಾಸ್ತಿ ಅವರು ಈ ರೀತಿ ಹೇಳಿದ್ದಾರೆ.

> ಸಾಹಿತ್ಯದಲ್ಲಿ ವಿಮರ್ಶೆಯ ಕಾರ್ಯ ಎಷ್ಟು ಕಷ್ಟ ಸಾಧ್ಯವಾದುದೆಂದು ನಾವು ಊಹಿಸಬಹುದು. ಅದಕ್ಕೆ ಬೇಕಾದ ತಿಳಿವೂ ಬುದ್ಧಿಶಕ್ತಿಯೂ ಎಂಥವು ಎಂದೂ ಯೋಚಿಸಬಹುದು. ಕವಿ ಎಂಥವನೇ ಆಗಲಿ ಅವನ ಅವಶ್ಯದ ವಿಷಯದಲ್ಲಿ ಯಾವ ವಿಮರ್ಶಕನಿಗಿಂತಲೂ ಅವನಿಗೇ ಹೆಚ್ಚು ತಿಳುವಳಿಕೆ ಇರಬೇಕಷ್ಟೆ. ಈ ತಿಳಿವಳಿಕೆಗೆ ಪ್ರತಿಯಾಗಿ ವಿಮರ್ಶಕನಲ್ಲಿ ಊಹೆಯೂ ಪ್ರತಿಭೆಯೂ ಇರಬೇಕಾಗುತ್ತದೆ. ಎಂದರೆ ಪ್ರಪಂಚದ ವಿಷಯದಲ್ಲಿ ಕವಿಗೆ ಯಾವ ಶಕ್ತಿ ಇರಬೇಕೋ ಕಾವ್ಯದ ವಿಷಯದಲ್ಲಿ ವಿಮರ್ಶಕನಿಗೆ ಆ ಶಕ್ತಿಯಿರಬೇಕು. ಈ ಶಕ್ತಿಯೊಂದಿಗೆ ಕವಿಯ ಆಶಯವನ್ನು ತಿಳಿಯುವುದಕ್ಕೆ ತಾಳ್ಮೆಯೂ ಔದಾರ್ಯವೂ ಇರಬೇಕು. ತಾಳ್ಮೆ ಔದಾರ್ಯಗಳಂತೂ ವಿಮರ್ಶಕನಲ್ಲಿ ಬಹಳ ಅವಶ್ಯಕವಾಗಿ ಇರಲೇಬೇಕಾದ ಗುಣಗಳು. ಕವಿಯಲ್ಲಿ ದೋಷವಿದೆ ಎಂದು ಹೇಳುವುದರಲ್ಲಿ ಅಂತೂ ಇವು ಎಷ್ಟು ಅವಶ್ಯಕವಾದುವೆಂದು ಹೇಳುವುದು ಸಾಧ್ಯವಲ್ಲ. ಭಾವಗ್ರಹಣ ಶಕ್ತಿಯೂ ಔದಾರ್ಯವೂ ಅಲ್ಲದೆ ವಿಮರ್ಶಕನಿಗೆ ಕಾವ್ಯ ತನ್ನಲ್ಲಿ ಉಂಟಾಗಿಸಿದ ಭಾವಗಳನ್ನು ವಿವರಿಸುವ ಶಕ್ತಿ ಇರಬೇಕು. ಕವಿಯ ಅಭಿಪ್ರಾಯಗಳನ್ನು ತಪ್ಪು ಎನ್ನುವುದಕ್ಕಾದರೆ ಕಾವ್ಯದಲ್ಲಿರುವ ವಿಚಾರವನ್ನು ಕುರಿತು ಅವನಿಗೆ ಕವಿಗೆ ತಿಳಿದಿರುವಷ್ಟು ವಿಚಾರವಾದರೂ ತಿಳಿದಿರಬೇಕು. ಎಂದರೆ ವಿಮರ್ಶೆ ಬರೆಯುವೆನೆನ್ನು ವವರಿಗೆ ಬಹಳ ಶಕ್ತಿಯೂ ಅನೇಕ ಗುಣಗಳೂ ಇರಬೇಕು ಎಂದ ಹಾಗಾಯಿತು.[೬]

ಈ ಎಲ್ಲಾ ವಿಮರ್ಶೆಯ ಕಾರ್ಯಗಳನ್ನು ಪ್ರಾಥಮಿಕ ಹಂತವಾಗಿಯೇ ನೋಡುವ ಮಾಸ್ತಿ ಅವರ ಚಿಂತನೆ ಅಂದಿನ ಕಾವ್ಯ ಕುತೂಹಲದ ಜವಾಬ್ದಾರಿಯನ್ನು ಸ್ಪಷ್ಟವಾಗಿ ವಿಸ್ತರಿಸಿದೆ. ಪ್ರಸ್ತುತ ಕೂಡ ಈ ಗ್ರಹಿಕೆಯಿಂದ ಹಲವು ಜವಾಬ್ದಾರಿಗಳು ಒಬ್ಬ ಬರಹಗಾರನಲ್ಲಿ ಇರಬೇಕೆಂಬುದನ್ನು ತಿಳಿಸುತ್ತವೆ.

ಬೇಂದ್ರೆ ಅವರು ವಿಮರ್ಶಕನನ್ನು ಕುರಿತು ಈ ರೀತಿ ತಿಳಿಸಿದ್ದಾರೆ.

> ನಿಜವಾದ ವಿಮರ್ಶಕನಿಗೆ ಸಹೃದಯತೆಯು ಬೇಕು. ದೂರದರ್ಶಕ ಯಂತ್ರವಿರದೆ ಜ್ಯೋತಿರ್ಮಂಡಲವನ್ನು ಹುಡುಕಾಡುವುದೂ ಹೃದಯವಿರದೆ ಕಾವ್ಯ ಸಾಗರವನ್ನು ಕಲಕಾಡುವುದೂ ಒಂದೇ. ಕೈಲಾಗದ ಕವಿಯು ಸಿಟ್ಟಿಗೆದ್ದ ಟೀಕಾಕಾರನಾಗುತ್ತಾನೆ– ಎಂದು ಒಬ್ಬ ಮಾತಿನ ಜಾಣರು ಹೇಳಿದ್ದುಂಟು. ತನಗೆ ಕಂಡದ್ದೇ ಅರ್ಥ ಎಂಬ ದರ್ಪವು ವಿಮರ್ಶಕನಿಗೆ ವಿಘಾತವು. ಕವಿಯ ಪ್ರತಿಭೆಯಂತೆ ವಿಮರ್ಶಕನ ಪ್ರತಿಭೆಗೂ ನವೋನವ ಅರ್ಥಗಳು ಏಕೆ ಹೊಳೆಯಬಾರದು? ಅಂತೂ ಒಳ್ಳೆಯ ವಿಮರ್ಶಕನಿಗೆ ಸಹೃದಯತೆ, ಸಮಯಜ್ಞತೆ, ವಿನಯಗಳು ಬೇಕು. ಆದರೆ ಇವೆಲ್ಲವಕ್ಕೂ ಹೆಚ್ಚಿನ ಗುಣವೊಂದಿದೆ. ಅದೆಂದರೆ

ಕವಿತ್ವ ನಿವೇದನ ಇಚ್ಛೆ.[೬]

ಪು.ತಿ.ನ ಅವರು 'ನಾದಲೀಲೆ' ಕುರಿತು ಮಾತನಾಡುತ್ತಾ ವಿಮರ್ಶೆಯ ತಾತ್ವಿಕ ನೆಲೆಯಲ್ಲಿ ಬೇಂದ್ರೆ ಸಾಹಿತ್ಯವು ಆಸ್ವಾದನೆಗೆ ದೊರಕುವ ಬಗೆಯನ್ನು ಈ ರೀತಿ ಸ್ಪಷ್ಟಪಡಿಸಿದ್ದಾರೆ.

> ಈಗಿನ ಸಾಹಿತ್ತಿಕ ಸಂದರ್ಭದಲ್ಲಿ ವಿಮರ್ಶೆಯ ಮನೋಭಾವ ಆಸ್ವಾದಕ್ಕಿಂತ ಹೆಚ್ಚು ವಿಶ್ಲೇಷಣಾತ್ಮಕವಾಗಿರುವಂತೆ ತೋರುತ್ತದೆ. ಆದರೆ ಕಾವ್ಯಾನುಭವದ ಲಕ್ಷಣವೇನು ಎಂಬ ವಿಷಯದಲ್ಲಿ ಕಾವ್ಯಾಸಕ್ತರು ಒಂದು ನಿರ್ದಿಷ್ಟ ನಿಲುವಿಗೆ ಬಂದಂತೆ ತೋರುವುದಿಲ್ಲ. ನನ್ನ ಮಟ್ಟಿಗೆ ಹೇಳುವುದಾದರೆ, ನಾನು ಕಾವ್ಯಗಳ ಓದಿನಿಂದ ಬಹು ಸುಖ ಪಟ್ಟಿದ್ದೇನೆ. ಬೇಂದ್ರೆಯವರ ಸಖ್ಯ, ಸಹವಾಸ ಕೇಳ್ಮೆ, ಪಾರ್ಮೆ ನನಗೆ ಬಹು ಹರ್ಷ ತಂದು ಆನಂದಿಯಾಗಿ ಮಾಡಿದೆ.[೭]

ಎಂದು ಒಂದು ಉತ್ತಮ ವಿಮರ್ಶೆಯ ಕೆಲಸವೇನು ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಆದರೆ ೧೯೮೮ರ ವೇಳೆಗೂ ಕಾವ್ಯಾಸಕ್ತರು ಕಾವ್ಯಾನುಭವದ ಲಕ್ಷಣಗಳ ಕುರಿತು ಒಂದು ನಿಲುವಿಗೆ ಬಂದಿಲ್ಲವೆಂಬ ಬೇಸರವನ್ನೂ ಸೂಚಿಸಿದ್ದಾರೆ.

ವಿಮರ್ಶೆ ಕುರಿತು ರಂ.ಶ್ರೀ ಮುಗಳಿ, ಕೀರ್ತಿನಾಥ ಕುರ್ತಕೋಟಿ ಮತ್ತು ಶೇಷಗಿರಿರಾವ್ ಎಲ್. ಎಸ್. ಇವರ ಅಧ್ಯಯನ ವಿಶೇಷವಾದುದು. ಸಾಹಿತ್ಯವನ್ನು ಅಧ್ಯಯನ ಮಾಡಲು ಒಂದು ವ್ಯವಸ್ಥಿತ ಶಿಸ್ತು ಮಾರ್ಗಗಳನ್ನು ಅಳವಡಿಸಿಕೊಂಡ ವಿಮರ್ಶಕರಲ್ಲಿ ಇವರು ಪ್ರಮುಖರು. ಸಾಹಿತ್ಯವನ್ನು ಒಂದು ಚರಿತ್ರೆಯ ರೂಪದಲ್ಲಿ ಅಧ್ಯಯನ ಮಾರ್ಗವನ್ನು ರೂಪಿಸಿ ಸಾಹಿತ್ಯ ಚರಿತ್ರೆಗಳನ್ನು ರಚಿಸಿದ್ದಾರೆ. ಇವರ ವಿಮರ್ಶಾ ನಿಲುವು ವಿಶೇಷವಾದುದು.

ರಂ.ಶ್ರೀ. ಮುಗಳಿ ಅವರು ವಿಮರ್ಶೆ ಕುರಿತು 'ಸಾಹಿತ್ಯ ವಿಮರ್ಶೆಯ ಮಾರ್ಗದರ್ಶಕ ಸೂತ್ರಗಳು', 'ವಿಮರ್ಶೆಯ ವ್ರತ' ಎಂಬ ಪ್ರತ್ಯೇಕ ಕೃತಿಗಳನ್ನು ರಚಿಸಿದ್ದಾರೆ. ಸಾಹಿತ್ಯ ವಿಮರ್ಶೆಯ ಸ್ವರೂಪವನ್ನು ಸ್ಪಷ್ಟಪಡಿಸುತ್ತಾ ಈ ರೀತಿ ತಿಳಿಸುತ್ತಾರೆ.

> ವಿಮರ್ಶೆಯೆಂದರೆ ನಿರ್ಮಿತಿ ಪ್ರಧಾನವಾದ ಸಾಹಿತ್ಯವನ್ನು ಕುರಿತು ಸಹೃದಯನ ಸಮಗ್ರ ಪ್ರತಿಕ್ರಿಯೆ. ಸಹೃದಯನೆಂದರೆ ಎಲ್ಲ ಚೆಲುವಿಗೆ ಎದೆಯನ್ನು ತೆರೆದಿಡಬಲ್ಲ ರಸಿಕ, ತಜ್ಞ ವಿಮರ್ಶಕ. ಸಾಹಿತ್ಯವನ್ನು ಓದಿದಾಗ ಅವನ ಮನಸ್ಸಿನಲ್ಲಿ ಉಂಟಾಗುವ ಬಿಡಿಯಾದ ಮತ್ತು ಇಡಿಯಾದ ಪ್ರತಿಕ್ರಿಯೆ ವಿಮರ್ಶೆಯ ರೂಪ ತಾಳುತ್ತದೆ. ಇದು ಸೌಂದರ್ಯ ನಿಷ್ಠ, ಹಾರ್ದಿಕ ಮತ್ತು ಬೌದ್ಧಿಕ ಈ ಮೂರು ಅಂಶಗಳನ್ನು ಒಳಗೊಂಡಿರುತ್ತದೆ. ಸಾಹಿತ್ಯ ಕೃತಿಯಲ್ಲಿ ಮೂಡಿರುವ ವಿಶಿಷ್ಟಸೌಂದರ್ಯವನ್ನು ಅದು ಅರಿತುಕೊಳ್ಳುತ್ತದೆ. ಅದರಿಂದ ಉಂಟಾಗುವ ಆನಂದವನ್ನು ಅನುಭವಿಸುತ್ತದೆ. ಹಾಗೂ ಈ ಸೌಂದರ್ಯ–ಆನಂದಗಳ ಕಾರಣವನ್ನು ಕಂಡುಹಿಡಿಯುತ್ತದೆ, ಅವುಗಳಲ್ಲಿ ತಲೆದೋರಿರುವ ಕೊರತೆಗಳನ್ನು ಗುರುತಿಸುತ್ತದೆ. ಹೀಗೆ ಸಾಹಿತ್ಯವು ಕೃತಿ ಇಲ್ಲವೆ ಕ್ರಿಯೆಯಾದರೆ ವಿಮರ್ಶೆ ಅದಕ್ಕೆ ಪ್ರತಿಕ್ರಿಯೆ ಮತ್ತು ಪ್ರಕ್ರಿಯೆಯಾಗಿರುತ್ತದೆ. ಕ್ರಿಯೆಯ ಸಂದರ್ಭದಲ್ಲಿ ವಿಮರ್ಶೆ ಪ್ರತಿಕ್ರಿಯೆ, ಆದರೆ ತನ್ನಷ್ಟಕ್ಕೆ ಸೌಂದರ್ಯದ ಸೂತ್ರಗಳನ್ನು ಶೋಧಿಸುವ ಒಂದು ಪ್ರಕ್ರಿಯೆ.[೮]

ವಿಮರ್ಶೆ ಎಂಬುದು ಸಹೃದಯನ ಕಾರ್ಯ. ಅದು ಅಧ್ಯಯನ ರೂಪವಾದ ವ್ರತದಂತೆ

ಎಂಬ ನಿಲುವನ್ನು ವ್ಯಕ್ತಪಡಿಸಿದ್ದಾರೆ. ಇವರ ಇನ್ನೊಂದು ಕೃತಿ 'ವಿಮರ್ಶೆಯ ವ್ರತ'ದಲ್ಲಿಯೂ ಸಾಕಷ್ಟು ವಿಚಾರಗಳು ಇಂದಿನ ವಿಮರ್ಶಾ ಅಧ್ಯಯನಕ್ಕೆ ಸೂಕ್ತ ದಾರಿಯನ್ನು ರೂಪಿಸುತ್ತವೆ. ವಿಮರ್ಶೆಗಳ ಅಧ್ಯಯನ, ರಚನೆ ಹಾಗೂ ಸಂಶೋಧನೆಗೆ ಈ ವಿಮರ್ಶೆ ಕುರಿತ ಚಿಂತನಾ ಬರಹಗಳು ಅಗತ್ಯ ಪೂರ್ವ ಸಿದ್ಧತೆಗಳನ್ನು ಒದಗಿಸಬಲ್ಲವು.

ಕೀರ್ತಿನಾಥ ಕುರ್ತಕೋಟಿ ಅವರು ವಿಮರ್ಶೆ ಎಂದರೇನು, ಅದರ ಕಾರ್ಯಗಳೇನು, ಕನ್ನಡ ಸಾಹಿತ್ಯದಲ್ಲಿ ವಿಮರ್ಶೆಯ ಚರಿತ್ರೆಯ ವಿಸ್ತಾರವಾದ ಪೀಠಿಕೆಯನ್ನು ಚರ್ಚಿಸಿದ್ದಾರೆ. ಇಂಗ್ಲಿಷ್ ಸಾಹಿತ್ಯ ಹಾಗೂ ನಮ್ಮ ಸ್ವಭಾಷೆಯ ಜಾಗೃತಿ ಈ ಎರಡರ ನಡುವಿನ ಸಂಘರ್ಷದಿಂದ ವಿಮರ್ಶೆಯ ಬೆಳವಣಿಗೆಯನ್ನು ಗುರ್ತಿಸಿದ್ದಾರೆ.

> ಇಂಗ್ಲಿಷ್ ಸಾಹಿತ್ಯದ ತೀವ್ರವಾದ ಪ್ರಭಾವ ಹಾಗೂ ಸ್ವಭಾಷೆ, ಸ್ವದೇಶಗಳ ಜಾಗೃತ ಅಭಿಯಾನ ಇವೆರಡರ ಸಂಘರ್ಷದಲ್ಲಿ ಹೊಸ ಸಾಹಿತ್ಯ ಮೆಲ್ಲಗೆ ರೂಪುಗೊಳ್ಳತೊಡಗಿತು. ಇಂದಿಗೂ ಈ ಸಂಘರ್ಷವೇ ನಮ್ಮ ಸಾಹಿತ್ಯದ ಕೇಂದ್ರ ಶಕ್ತಿಯಾಗಿದೆ. ಹೊಸ ಸಾಹಿತ್ಯ ಪ್ರಕಾರಗಳ ಬಗ್ಗೆ ವಿವರಣೆ, ಬದಲಾಗಿದ್ದ ಸೌಂದರ್ಯ ದೃಷ್ಟಿ, ವಾಸ್ತವಿಕತೆಯ ಸಮರ್ಥನೆ, ಸಾಮಾನ್ಯ ಅನುಭವಗಳ ಮಹತ್ವ, ಸರಳ ಶೈಲಿಯ ಅನುಕೂಲತೆ ಮೊದಲಾದ ಅಂಶಗಳ ಬಗ್ಗೆ ಚರ್ಚೆ ವಿಚಾರಗಳು ಆ ಕಾಲದ ಯಾವುದೇ ಕೃತಿಯ ಮುನ್ನುಡಿಯನ್ನು ಓದಿದರೂ ಸಿಗುತ್ತವೆ. ಪರಂಪರಾಗತವಾಗಿ ಬಂದ ಹಳೆಯ ಸಾಹಿತ್ಯಕ್ಕಿಂತ ತೀರ ಭಿನ್ನವಾದ ಹೊಸ ಸಾಹಿತ್ಯ ಜನರಿಗೆ ತಿಳಿದಿರಬೇಕೆಂಬುದೇ ಈ ವಿಮರ್ಶೆಯ ಉದ್ದೇಶವಾಗಿತ್ತು. ಆದರೆ ಈ ವಿಮರ್ಶೆ ಆಗಾಗ ಕೆಲವು ಮಿಂಚು ಮಾತುಗಳಲ್ಲಿ, ವೈಯಕ್ತಿಕ ಪ್ರಸ್ತಾವನೆಗಳಲ್ಲಿ ಪ್ರಕಟವಾಯಿತೇ ಹೊರೆತು ಒಂದು ಸಿದ್ಧಾಂತದ ಸ್ವರೂಪದಲ್ಲಲ್ಲ. ಹೊಸ ಸಾಹಿತ್ಯ ಬಹಳ ಮಟ್ಟಿಗೆ ಇಂಗ್ಲಿಷ್ ಸಾಹಿತ್ಯದ ಅನುಕರಣವಾಗಿದ್ದದ್ದೇ ಇದಕ್ಕೆ ಕಾರಣವಾಗಿರಬಹುದಾಗಿದೆ. ಹಿಂದಕ್ಕೆ ಸಂಸ್ಕೃತ ಕಾವ್ಯಮೀಮಾಂಸಕರ ಸೂತ್ರಗಳೇ ನಮ್ಮವರಿಗೆ ಮಾರ್ಗದರ್ಶಕವೆನಿಸಿದವು.[೧೦]

ಕುರ್ತಕೋಟಿ ಅವರು ವಿಮರ್ಶಾ ಸ್ವರೂಪವನ್ನು ಕುರಿತು ಈ ರೀತಿಯಲ್ಲಿ ಚರ್ಚಿಸಿದ್ದಾರೆ. ಸಾಹಿತ್ಯದ ಪ್ರಭಾವದ ಆಧಾರದ ಮೇಲೆ ವಿಮರ್ಶೆಯನ್ನು ಗುರ್ತಿಸುವ ಕುರ್ತಕೋಟಿ ಅವರು ಭಾರತೀಯ ಸಾಹಿತ್ಯ ಪರಂಪರೆಯಲ್ಲಿ ವಿಮರ್ಶೆಯ ಇತಿಹಾಸವನ್ನು ಗಮನಿಸುವುದೇ ಇಲ್ಲ. ಪದಶಃ ವಿಮರ್ಶೆಯು ಪಾಶ್ಚಾತ್ಯರ ಕೊಡುಗೆಯಂತೆ ಕಂಡುಬಂದರೂ ಅದರ ಪೂರ್ಣ ಸ್ವರೂಪ ಭಾರತೀಯ ಸಾಹಿತ್ಯದಲ್ಲಿ ಸಾಕಷ್ಟು ಬೆಳವಣಿಗೆಯನ್ನು ತನ್ನ ಭದ್ರ ಬುನಾದಿ ವಿಸ್ತರಿಸಿಕೊಂಡಿದೆ. ಈ ಎಲ್ಲಾ ವಿಚಾರಗಳ ಮೂಲಕ ವಿಮರ್ಶೆಯೆಂಬುದು ಸಹೃದಯರ ಅಧ್ಯಯನ ಫಲವೆಂದು ಅದರ ವಿವಿಧ ಆಯಾಮಗಳನ್ನು ಹಲವಾರು ವಿಮರ್ಶಾ ಬರಹಗಳು ರೂಪಿಸುವ ಹೊಸ ಸಾಧ್ಯತೆಗಳನ್ನು ಅಧ್ಯಯನದಲ್ಲಿ ಗಮನಿಸಬಹುದು. ಈ ಎಲ್ಲಾ ದೃಷ್ಟಿಕೋನದಲ್ಲಿ ಬೇಂದ್ರೆ ಅವರ ಸಾಹಿತ್ಯವನ್ನು ಪ್ರವೇಶಿಸಿದಾಗ ನಮಗೆ ದೊರಕುವ ವಿಮರ್ಶೆಯ ಸ್ವರೂಪ ಮತ್ತು ತಾತ್ವಿಕತೆಯನ್ನು ಈ ಪ್ರಬಂಧದಲ್ಲಿ ಗಮನಿಸಬಹುದು.

ಕೊನೆಟಿಪ್ಪಣಿಗಳು

೧. ರಾಘವೇಂದ್ರ ರಾವ್ ಹೆಚ್. ಎಸ್., ೨೦೦೧., ಶತಮಾನದ ಸಾಹಿತ್ಯ ವಿಮರ್ಶೆ., ಶ್ರೀಕಂಠಯ್ಯ ಬಿ.ಎಂ., ಕನ್ನಡದ ಪುನರುಜ್ಜೀವನ., ಪುಟ ಸಂಖ್ಯೆ ೦೭

೨. ಅದೇ... ಪುಟಸಂಖ್ಯೆ ೦೭

೩. ಶಿವರಾಮ ಪಡಿಕ್ಕಲ್., ೨೦೦೧., ನಾಡು-ನುಡಿಯ ರೂಪಕ., ಪುಟಸಂಖ್ಯೆ ೩-೪.

೪. ಮಾಸ್ತಿ ವೆಂಕಟೇಶ ಅಯ್ಯಂಗಾರ್., ೧೯೨೬, ೨೦೦೦., ವಿಮರ್ಶೆ., ಸಾಹಿತ್ಯದಲ್ಲಿ ವಿಮರ್ಶೆಯ ಕಾರ್ಯ., ಪುಟಸಂಖ್ಯೆ ೦೭.

೫. ದ. ರಾ. ಬೇಂದ್ರೆ., ೧೯೭೪., ಸಾಹಿತ್ಯದ ವಿರಾಟ್ ಸ್ವರೂಪ; ವಿಮರ್ಶೆ, ಪುಟಸಂಖ್ಯೆ ೩೦೩-೩೦೬

೬. ಮಾಸ್ತಿ ವೆಂಕಟೇಶ ಅಯ್ಯಂಗಾರ್., ೧೯೨೬, ೨೦೦೦., ವಿಮರ್ಶೆ., ಸಾಹಿತ್ಯದಲ್ಲಿ ವಿಮರ್ಶೆಯ ಕಾರ್ಯ., ಪುಟಸಂಖ್ಯೆ ೧೮

೭. ಬೇಂದ್ರೆ ದ. ರಾ., ೧೯೭೪., ಸಾಹಿತ್ಯದ ವಿರಾಟ್ ಸ್ವರೂಪ : ಆಧುನಿಕ ಕವಿತೆ ಮತ್ತು ವಿಮರ್ಶಕರು, ಪುಟ ೨೪೪

೮. ವಾಮನ ಬೇಂದ್ರೆ(ಸಂ)., ೨೦೦೩., ಔದುಂಬರಗಾಥೆ., ಅಂಬಿಕಾತನಯ ದತ್ತರ ಸಮಗ್ರ ಕಾವ್ಯ, ಸಿದ್ಧಾಂತ ಸಂಪುಟ ೬., ಪುಟಸಂಖ್ಯೆ

೯. ರಾಘವೇಂದ್ರ ರಾವ್ ಎಚ್. ಎಸ್ (ಸಂ)., ೨೦೧೩., ರಂ. ಶ್ರೀ. ಮುಗಳಿ ಸಮಗ್ರ ಸಾಹಿತ್ಯ ಸಂಪುಟ ಮೂರು., ಸಾಹಿತ್ಯ ವಿಮರ್ಶೆಯ ಮಾರ್ಗದರ್ಶಕ ಸೂತ್ರಗಳು., ಪುಟಸಂಖ್ಯೆ ೮೬

೧೦. ಗಿರಡ್ಡಿ ಗೋವಿಂದರಾಜ(ಸಂ)., ೨೦೧೦., ಕೀರ್ತಿನಾಥ ಕುರ್ತಕೋಟಿ ಸಮಗ್ರ ಸಾಹಿತ್ಯ ಸಂಪುಟ-೨, ಯುಗಧರ್ಮ ಹಾಗೂ ಸಾಹಿತ್ಯ ದರ್ಶನ ಸಾಹಿತ್ಯ ಮತ್ತು ಸಾಹಿತ್ಯ ಪ್ರಜ್ಞೆ., ಪುಟಸಂಖ್ಯೆ ೨೬೯-೨೭೦

* * * * *

ಅಧ್ಯಾಯ–೩

೩. ವಸಾಹತು ಕಾಲದ ವಿಮರ್ಶೆಗಳು

(ಬೇಂದ್ರೆ ಸಾಹಿತ್ಯ ಕುರಿತು ಆರಂಭದಿಂದ ೧೯೫೦ರವರಗಿನ ವಿಮರ್ಶೆಗಳು)

೧. ಬೇಂದ್ರೆಯವರ ಸಾಹಿತ್ಯ ಆಧ್ಯಯನ

೧. ೧. ಗರಿ, ಸಖೀಗೀತ ಕುರಿತು ಪ್ರಾರಂಭದ ಅಧ್ಯಯನಗಳು

೧. ೨. ಮಾಸ್ತಿ ಅವರ ಮುನ್ನುಡಿ ಬರಹದ ಚಿಂತನೆ

೧. ೩. 'ದತ್ತವಾಣಿ' ಕಾವ್ಯ ಚಿಂತನೆ

೨. ಆಪ್ತವಲಯದ ಮೂಲಕ ಕವಿ–ಕೃತಿ ಚಿಂತನೆ

೩. 'ಕವಿವರ ಬೇಂದ್ರೆ'ಯಾಗಿ ಕಂಡ ಸ್ಮೃತಿ ಚಿತ್ರಗಳು

೩. ೧. ಗೋಕಾಕರು ಕಂಡ 'ಗೆಳೆಯರ ಗುಂಪಿ'ನ ಸ್ವಾನುಭವ

೩. ೨. ಗೊರೂರರು ಪರಿಚಯಿಸಿದ ವ್ಯಕ್ತಿತ್ವ ಸಾಹಿತ್ಯ

೪. 'ದತ್ತ ಸಾಹಿತ್ಯ' ಒಡನಾಟದ ಸೂಕ್ಷ್ಮ ಬರಹಗಳು

೫. ಬೇಂದ್ರೆ ಸಾಹಿತ್ಯ : ವಾಙ್ಮಯ ದರ್ಶನದ ಅಧ್ಯಯನಗಳು

೫. ೧. ಛಂದಸ್ಸು ಕುರಿತ ಚಿಂತನೆಗಳು

೫. ೨. ಪ್ರಗತಿಶೀಲ ಲೇಖಕರ ಚಿಂತನೆಗಳು

೫. ೩. ರಸ–ಧ್ವನಿ–ಪ್ರತಿಭೆಗಳ ವಿಚಾರದಲ್ಲಿ ವಾಙ್ಮಯ ದರ್ಶನ

೬. ಬೇಂದ್ರೆ ಸಾಹಿತ್ಯದ ವಿಶೇಷಾಂಕವಾಗಿ 'ಜೀವನ ಪತ್ರಿಕೆ'

ವಸಾಹತು ಕಾಲದ ವಿಮರ್ಶೆಗಳು

(ಬೇಂದ್ರೆ ಸಾಹಿತ್ಯ ಕುರಿತು ಆರಂಭದಿಂದ ೧೯೫೦ರವರಗಿನ ವಿಮರ್ಶೆಗಳು)

ಬೇಂದ್ರೆ ಅವರ ಬದುಕಿನ ವೈಯಕ್ತಿಕ ಅನುಭವ ಮತ್ತು ವಸಾಹತುಶಾಹಿಯ ಸಾಂಸ್ಕೃತಿಕ, ಸಾಹಿತ್ಯಿಕ ಹಾಗೂ ಚಾರಿತ್ರಿಕ ಒತ್ತಡಗಳ ಸಂಘರ್ಷವನ್ನು ಅವರ ಕಾವ್ಯದಲ್ಲಿ ಕಾಣುತ್ತೇವೆ. ಈ ಕಾಲಮಾನದ ಅಧ್ಯಯನಗಳೆಲ್ಲವೂ ಓದುಗರನ್ನು ಸಾಹಿತ್ಯ ಅಭಿರುಚಿವಂತರನ್ನಾಗಿಸುವ ಧ್ಯೇಯದೊಂದಿಗೆ ಪ್ರಾರಂಭವಾಯಿತು. ಆರಂಭದ ವಿಮರ್ಶೆಗಳೆಲ್ಲವೂ ಪರಿಚಯದ ನೆಲೆಯಲ್ಲೇ ಕಂಡುಬಂದು ಕೃತಿಯನ್ನು ಪರಿಚಯಿಸುವ ಸೂಕ್ಷ್ಮನೆಲೆಯಲ್ಲೇ ಕವಿಯೊಂದಿಗೆ ಆದರ್ಶ ರೀತಿಯ ಸಂಬಂಧ ಹೊಂದಿರುವುದನ್ನು ಕಾಣಬಹುದು. ಬೇಂದ್ರೆ ಅವರ ಸಾಹಿತ್ಯ ಕುರಿತ ಚಿಂತನೆಯಲ್ಲಿ ಇದನ್ನು ಪೂರ್ಣವಾಗಿ ಗಮನಿಸಬಹುದು. ವಿಮರ್ಶೆಯ ಸ್ವರೂಪವು ಒಂದು ಆದರ್ಶನೆಲೆಯಲ್ಲಿ ಮೂಡಿಬಂದಿದೆ. ಬೇಂದ್ರೆ ಅವರು ತಮ್ಮ ಸಾಹಿತ್ಯ ಹಾಗೂ ಬದುಕನ್ನು ವಸಾಹತು ಚಿಂತನೆಗಳ ವಿರುದ್ಧವಾಗಿ ತೆರೆದುಕೊಂಡರು. ಆದರೆ ಸ್ವಾತಂತ್ರ್ಯಕಾಲಘಟ್ಟದವರೆಗೂ ಬೇಂದ್ರೆ ಅವರ ಸಾಹಿತ್ಯದೊಳಗಿನ ಈ ಅಂಶಗಳನ್ನು ಅಧ್ಯಯನದ ತೆಕ್ಕೆಗೆ ಗಮನಿಸಿರುವುದು ಅತ್ಯಂತ ವಿರಳ. ಮಾಸ್ತಿ ಅವರು 'ನಾದಲೀಲೆ' ಕೃತಿಗೆ ಬರೆದ ಮುನ್ನುಡಿ, ತೀನಂಶ್ರೀ ಅವರು 'ಗರಿ' ಸಂಕಲನ ಕುರಿತು 'ಜಯಕರ್ನಾಟಕ' ಪತ್ರಿಕೆಯಲ್ಲಿ ನೀಡಿದ ವಿಮರ್ಶೆ, 'ಪ್ರಬುದ್ಧಕರ್ಣಾಟಕ'ದಲ್ಲಿ 'ಅಂಬಿಕಾತನಯದತ್ತ: ಸಖೀಗೀತ' ಎಂಬ ಸಖೀಗೀತ ಸಂಕಲನ ಕುರಿತು ಬಂದ ಕೃತಿ ಕೇಂದ್ರಿತ ವಿಮರ್ಶೆಗಳು ಮಾತ್ರ ವಿಶಿಷ್ಟ ಅಧ್ಯಯನಗಳಾಗಿ ಗಮನಿಸಬಹುದು. ೧೯೪೬ರ ವೇಳೆಗೆ ಬೇಂದ್ರೆ ಅವರು ಕನ್ನಡ ಸಾಹಿತ್ಯದ ಹಾಗೂ ಧಾರವಾಡ ಪರಿಸರಕ್ಕೆ ಸಾಹಿತ್ಯದ ಮುಖವಾಣಿಯಾಗಿ ಕಂಡುಬಂದಿದ್ದರು. ಹೆಚ್ಚು ಓದುಗರು ಅವರ ಸಹೃದಯ ಬಳಗದೊಳಗೆ ಸಿಲುಕಿ ಅಭಿಮಾನದ ಗೌರವವನ್ನು ಬೇಂದ್ರೆ ಅವರಿಗೆ ಸಲ್ಲಿಸಲು ಯತ್ನಿಸಿದ ಕಾಲವದು.

ಕನ್ನಡ ಸಾಹಿತ್ಯದಲ್ಲಿ ಕವಿಯೋರ್ವ ಅಭಿಮಾನದ ಗೌರವಕ್ಕೆ ಒಳಗಾದ ಮೊದಲ ಪಂಕ್ತಿಯಲ್ಲಿ ಬೇಂದ್ರೆ ಅವರು ಕಂಡುಬರುತ್ತಾರೆ. ಬೇಂದ್ರೆ ಸತ್ಕಾರ ಸಮಿತಿಯು ಧಾರವಾಡದಲ್ಲಿ ಸ್ಥಾಪಿತವಾಗಿ ಐವತ್ತನೇ ಹುಟ್ಟು ಹಬ್ಬದ ಕಾರಣವಾಗಿ ಬೇಂದ್ರೆ ಅವರ ಒಡನಾಡಿಗಳೆಲ್ಲಾ ಸೇರಿ ಲೇಖನಗಳನ್ನು ರಚಿಸಿದರು. ಮಾಸ್ತಿ ಅವರ ಸಂಪಾದನೆಯಲ್ಲಿ ಪ್ರಕಟವಾಗುತ್ತಿದ್ದ 'ಜೀವನ' ಪತ್ರಿಕೆಯು ೧೯೪೬ರ

ಜೂನ್‌ನಲ್ಲಿ ಬೇಂದ್ರೆ ಅವರಿಗಾಗಿ ವಿಶೇಷ ಸಂಚಿಕೆಯನ್ನು ಹೊರತಂದಿತು. ಲಲಿತ ಸಾಹಿತ್ಯ ಮಾಲೆಯ ೧೫ನೇ ಕುಡಿಯಾಗಿ 'ಕವಿವರ ಬೇಂದ್ರೆ' ಎಂಬ ಕೃತಿಯನ್ನು ಗೋ. ವೆ. ಚುಳಕಿ ಅವರು ಸಂಪಾದಿಸಿದ್ದಾರೆ. ಎಚ್. ಜಿ. ಜೋಶಿ ಅವರು 'ಬೇಂದ್ರೆ ವಾಙ್ಮಯ ದರ್ಶನ' ಎಂಬ ಕೃತಿಯನ್ನು ಸಂಪಾದಿಸಿದರು. ಇದೇ ಯೋಜನೆಯಲ್ಲಿ ಸಾಧನ ಮುದ್ರಣಾಲಯದಿಂದ ಸಿಂ. ಪಿ. ಲಿಂಗಣ್ಣ ಅವರು 'ದತ್ತ ಸಾಹಿತ್ಯ' ಎಂಬ ಕೃತಿಯನ್ನೇ ರಚಿಸಿದರು. ಇದೇ ಮುದ್ರಣಾಲಯದ ಶ್ರೀ ಶೇಷಗಿರಿರಾಯರು ಬೇಂದ್ರೆ ಅವರನ್ನು ಕುರಿತು ರಚಿಸಿದ ಕವಿತೆಗಳನ್ನೆಲ್ಲಾ ಒಂದು ಕೃತಿಯಾಗಿ ಸಂಪಾದಿಸಿದರು. ಶಂಬಾ ಜೋಷಿ ಅವರು ಜಯಕರ್ನಾಟಕ ಪತ್ರಿಕೆಯಲ್ಲಿ 'ಬೇಂದ್ರೆಯವರ ತಪಸ್ಸು' ಎಂಬ ಲೇಖನ ರಚಿಸಿದರು. ಈ ಎಲ್ಲಾ ಬರಹಗಳನ್ನು ಇಲ್ಲಿ ವಿವಿಧ ಚಿಂತನೆಗಳ ರೂಪದಲ್ಲಿ ವರ್ಗೀಕರಿಸಿ ಅಧ್ಯಯನ ಮಾಡಲಾಗುವುದು.

ಮಾಸ್ತಿ ಅವರ 'ಹರಕೆ', ಮಹಿಷಿ ಅಶ್ವತ್ಥರಾಯ ಅವರ 'ಬೇಂದ್ರೆಯವರ ಮನೆತನ', ಶ್ರೀಧರ ಖಾನೋಳಕರ ಅವರ 'ಗೆಳೆಯ ಬೇಂದ್ರೆ', ಸ.ಪ. ಗಾಂವಕರ ಅವರ 'ನಾ ಕಂಡ 'ದತ್ತು', ವಿ. ಕೃ. ಗೋಕಾಕ ಅವರ 'ಗೆಳೆಯರ ಗುಂಪಿನ ಕಣಸು', ಮಧುರಚೆನ್ನ ಅವರ 'ಅಣ್ಣನ ಕಾರ್ಯ', ಸ. ವೆಂಕೋಬಾಚಾರ್ಯ ಅವರ 'ಕವಿಬೇಂದ್ರೆ' ಎಂಬ ಕವನ, ಸಿಂ. ಪಿ. ಲಿಂಗಣ್ಣ ಅವರ 'ನಾನೂ ಶ್ರೀ. ಬೇಂದ್ರೆಯವರೂ', ಮ. ಗೋಪಾಲಕೃಷ್ಣ ಅವರ 'ವಿಚಿತ್ರ ಬೇಂದ್ರೆಯವರು', ಗೊರೂರು ರಾಮಸ್ವಾಮಿ ಅಯ್ಯಂಗಾರ ಅವರ 'ಬೇಂದ್ರೆಯವರ ವ್ಯಕ್ತಿತ್ವ', ಸಿ.ಜಿ ಕುಲಕರ್ಣಿ ಅವರ 'ಅಪೇಕ್ಷೆ', ಗೋ. ವೆ. ಚುಳಕಿ ಅವರ 'ಗೆಳೆಯರ ಗುಂಪಿನ ಮೊದಲು', ನಾ. ಶ್ರೀ. ರಾಜ ಪುರೋಹಿತ ಅವರ 'ಮುಮುಕ್ಷು ಬೇಂದ್ರೆ', ಬಿ. ಎಚ್ ಶ್ರೀಧರ ಅವರ 'ಶ್ರೀ ಬೇಂದ್ರೆಯವರಿಗೆ' ಎಂಬ ಕವನ ಈ ಎಲ್ಲಾ ಬರಹಗಳನ್ನು ಧಾರವಾಡದ ಲಲಿತ ಸಾಹಿತ್ಯ ಮಾಲೆಯಲ್ಲಿ 'ಕವಿವರ ಬೇಂದ್ರೆ' ಎಂಬುದಾಗಿ ಗೋ. ವಿ. ಚುಳಕಿ ಅವರು ಸಂಪಾದಿಸಿದ್ದಾರೆ.

ಜಾತವೇದ ಅವರ 'ಬೇಂದ್ರೆ' ಎಂಬ ಕವಿತೆ, ವಂ. ಕೇಶವಶರ್ಮ ಗಲಗಲಿ ಅವರ 'ಬೇಂದ್ರೆಯವರ ಕವಿತ್ವ' 'ಬೇಂದ್ರೆಯವರ ಪ್ರತಿಭಾವಿಲಾಸ' ದತ್ತರ ದೈವ ವಿವೇಚನೆ', ಎಚ್. ಜಿ. ಜೋಶಿ ಅವರ 'ಅಂಬಿಕಾತನಯರ ಅಲಂಕಾರಗಳು' 'ರತಿದರ್ಶನ', ಶಾಂತ ಗಲಗಲಿ ಅವರ 'ರಸಸಿದ್ಧಿ' 'ನಾದಲೀಲೆ', ಎಸ್. ಎಮ್. ಸೋಲಾಪೂರ ಅವರ 'ಅನ್ನದೇವರು' ಈ ಎಲ್ಲಾ ಲೇಖನಗಳನ್ನು ಎಚ್. ಜಿ. ಜೋಶಿ ಅವರು 'ಬೇಂದ್ರೆ ವಾಙ್ಮಯ ದರ್ಶನ' ಎಂಬ ಕೃತಿಯನ್ನು ಸಂಪಾದಿಸಿದ್ದಾರೆ.

ಈ ಎಲ್ಲಾ ಲೇಖನಗಳ ಜೊತೆಯಲ್ಲಿ ಮಾಸ್ತಿಯವರು 'ನಾದಲೀಲೆ'ಗೆ ಬರೆದ ಮುನ್ನುಡಿ, ತೀ.ನಂ.ಶ್ರೀ ಅವರು ಬರೆದ 'ಗರಿ', 'ಸಖೀಗೀತ' ಸಂಕಲನಗಳ ಕುರಿತ ವಿಮರ್ಶೆ ಇಷ್ಟು ಬರಹಗಳನ್ನು ಈ ಅಧ್ಯಾಯದಲ್ಲಿ ಅಧ್ಯಯನಕ್ಕೆ ಒಳಪಡಿಸಿದ್ದೇನೆ.

'ಸಹೃದಯ ವಿಮರ್ಶೆ' ಎಂಬುದು ಒಂದು ಕೃತಿ ಹಾಗೂ ಕವಿಯನ್ನು ಸಮಾಜಕ್ಕೆ ಇನ್ನೂ ವಿಸ್ತರಿಸುತ್ತದೆ. ಸಾಕಷ್ಟು ಓದುಗರಿಗೆ ತಲುಪಿಸುತ್ತದೆ. ಅದು ಅಭಿಮಾನದಿಂದ ಬರುವ ಗೌರವ

ಆಗಬಹುದು. ಒಬ್ಬ ಕವಿಯ ಸಾಹಿತ್ಯದ ಅಧ್ಯಯನವೂ ಅಭಿಮಾನದ ಸೋಂಕಿಗೆ ತಲುಪಿಸಬಹುದು. ಇಲ್ಲಿ ಬೇಂದ್ರೆ ಅವರ ಐವತ್ತನೇ ಹುಟ್ಟುಹಬ್ಬದ ಪ್ರಯುಕ್ತ ಬರೆದ ವಿಭಿನ್ನ ಬಗೆಯ ಲೇಖನಗಳಲ್ಲಿ ಇಂತಹ ಅಭಿಮಾನವಿದೆ. ಇನ್ನು ಈ ಬರಹಗಳ ಇನ್ನೊಂದು ನೋಟದಲ್ಲಿ ಅಭಿಮಾನದ ಜೊತೆಗೆ ಒಡನಾಟದ ಅನುಭವವಿದೆ. ಕರ್ತೃಕೇಂದ್ರಿತ ವಿಮರ್ಶೆಯಾಗಲಿ, ಕೃತಿಕೇಂದ್ರಿತ ವಿಮರ್ಶೆಯಾಗಲಿ, ಪ್ರಾಯೋಗಿಕ ವಿಮರ್ಶೆಯಾಗಲಿ ಇಲ್ಲಿ ನಿಖರವಾಗಿ ಕಾಣುವುದು ಕಷ್ಟ. ಆದ್ದರಿಂದ ಇದನ್ನು ಸಹೃದಯ ವಿಮರ್ಶೆ ಎಂದು ಪರಿಗಣಿಸಬಹುದು. ಸಹೃದಯ ಎಂಬ ಪದವನ್ನು ಸಾಹಿತ್ಯದೊಳಗೆ ಮುಖ್ಯ ವಿಚಾರವಾಗಿ ಬೇಂದ್ರೆ ಅವರು ಮೊದಲು ಪರಿಚಯಿಸುತ್ತಾರೆ. ಕಾವ್ಯದ ಓದುಗನನ್ನು 'ಸಹೃದಯ' ಎಂದು ತಮ್ಮ ಕೃತಿಗಳ ಮುನ್ನುಡಿಗಳಲ್ಲಿ ಪುನರಾವರ್ತಿಸಿದ್ದಾರೆ. ಮೊದಲಘಟ್ಟದ ಓದುಗರು ಬೇಂದ್ರೆ ಅವರ ಸಾಹಿತ್ಯವನ್ನು ಸಹೃದಯ ದೃಷ್ಟಿಯಿಂದ ಗಮನಿಸಿರುವುದನ್ನು ಸ್ಪಷ್ಟವಾಗಿ ಗಮನಿಸಬಹುದು. ವಿಮರ್ಶಕನನ್ನು ಸಹೃದಯನಿಗೆ ಹೋಲಿಕೆ ಮಾಡಿ ಅಧ್ಯಯನ ವಿಸ್ತಾರವನ್ನು, ಜವಾಬ್ದಾರಿಯನ್ನು ಅರ್ಥೈಸಿದರು.

'ಆಧುನಿಕ ಕವಿತೆ ಮತ್ತು ವಿಮರ್ಶಕರು' ಎಂಬ ಲೇಖನದಲ್ಲಿ ಬೇಂದ್ರೆ ಅವರು ವಿಮರ್ಶಕನ ಕುರಿತು ಈ ರೀತಿ ಹೇಳಿದ್ದಾರೆ.

> ನಿಜವಾದ ವಿಮರ್ಶಕನಿಗೆ ಸಹೃದಯತೆಯು ಬೇಕು. ದೂರದರ್ಶಕ ಯಂತ್ರವಿರದೆ ಜ್ಯೋತಿರ್ಮಂಡವನ್ನು ಹುಡುಕುವುದೂ, ಹೃದಯವಿರದೆ ಕಾವ್ಯ ಸಾಗರವನ್ನು ಕಲಕಾಡುವುದು ಒಂದೇ. ಕೈಲಾಗದ ಕವಿಯು ಸಿಟ್ಟಿಗೆದ್ದ ಟೀಕಾಕಾರನಾಗುತ್ತಾನೆ. ಎಂದು ಒಬ್ಬ ಮಾತಿನ ಜಾಣರು ಹೇಳಿದ್ದುಂಟು. ತನಗೆ ಕಂಡದ್ದೇ ಅರ್ಥ ಎಂಬ ದರ್ಪವು ವಿಮರ್ಶಕನಿಗೆ ವಿಘಾತವು. ಕವಿಯ ಪ್ರತಿಭೆಯಂತೆ ವಿಮರ್ಶಕನ ಪ್ರತಿಭೆಗೂ ನವೋನವ ಅರ್ಥಗಳು ಏಕೆ ಹೊಳೆಯಬಾರದು? ಅಂತೂ, ಒಳ್ಳೇ ವಿಮರ್ಶಕನಿಗೆ ಸಹೃದಯತೆ, ಸಮಯಜ್ಞತೆ, ವಿನಯಗಳು ಬೇಕು. ಆದರೆ ಇವೆಲ್ಲಕ್ಕೂ ಹೆಚ್ಚಿನ ಗುಣವೊಂದಿದೆ. ಅದೆಂದರೆ ಕವಿತ್ವ ನಿವೇದನ ಇಚ್ಛೆ. ದೇವನಿಗಿಂತ ಗುರುವು ಹೆಚ್ಚಿನವನು ಎಂದು ಹೇಳುವುದುಂಟು. ಹಾಗೆಯೆ ಕವಿಗಿಂತ ವಿಮರ್ಶಕನು ಹೆಚ್ಚಿನವನು ಎಂದು ಹೇಳಬಹುದು. ಏಕೆಂದರೆ ಕವಿತ್ವವನ್ನು ಕಾಣುವ, ಕಂಡು ಹಿಗ್ಗುವ ಬುದ್ಧಿಯೂ, ಹೃದಯವೂ ಇಲ್ಲದಿದ್ದರೆ ಕವಿತ್ವವು ಜಗದಲ್ಲಿದ್ದೂ ಇಲ್ಲದಂತೆ ಸಾಮಾನ್ಯವಾಚಕರಿಗೂ ಕವಿಗಳಿಗೂ ವಿಮರ್ಶಕನು ಸೇತುವೆ ಇದ್ದಂತೆ. ಈ ವಿಮರ್ಶಕನ ಅಭಾವದಲ್ಲಿ ಕವಿಯು ಈ ದಂಡೆಗೆ, ವಾಚಕರು ಆ ದಂಡೆಗೆ.[೧]

ಎಂಬ ವಿಚಾರವನ್ನು ಓದುಗ ನೆಲೆಯಿಂದ ವಿಮರ್ಶೆಯ ಶಕ್ತಿ ಹಾಗೂ ಕವಿಯ ಕವಿತ್ವದ ಸೂಕ್ಷ್ಮ ಚರ್ಚೆಗಳನ್ನು ನೀಡಿದ್ದಾರೆ ಎನ್ನಬಹುದು. ಇದು ನವೋದಯ ಸಾಹಿತ್ಯದ ಪ್ರಮುಖ ಧೋರಣೆಯೆಂದು ಕೂಡ ಗಮನಿಸಬಹುದು. ತಾನು ಬರೆದ ಸಾಹಿತ್ಯವನ್ನು ತನ್ನ ವ್ಯಾಪ್ತಿಯಲ್ಲಿ ಅರ್ಥೈಸುವ ಜವಾಬ್ದಾರಿಯು ಪೂರ್ವ ಸಾಹಿತ್ಯದ ಸಂಪಾದನೆಯ ತೊಡಕುಗಳಿಂದ ಓದುಗನೆಲೆಗೆ ಪರಿಚಯಿಸುವ ಪರಿಯಲ್ಲಿ ರೂಢಿಸಿಕೊಂಡರು. ಇದು ನವ್ಯ ಚಿಂತನೆಯಿಂದ ದೂರವಾಯಿತು. ಇನ್ನೊಂದು ಮುಖ್ಯ ವಿಷಯ ಎಂದರೆ ನವೋದಯ, ಪ್ರಗತಿಶೀಲ, ನವ್ಯ, ದಲಿತ–ಬಂಡಾಯ

ಮತ್ತು ಸ್ತ್ರೀವಾದಿ ಚಿಂತನೆಗಳೆಲ್ಲವೂ ಆಯಾ ಕಾಲಮಾನದ ತುರ್ತುಗಳಾಗಿ ಸಾಹಿತ್ಯದಲ್ಲಿ ಕಾಣಿಸಿಕೊಂಡವು. ಆದರೆ ಎಂದಿಗೂ ಕೊನೆಗೊಳ್ಳಲಿಲ್ಲ. ಪ್ರಸ್ತುತ ಸಾಹಿತ್ಯ ಚಿಂತನೆಯ ಕಾರ್ಯಗಳು ಎಲ್ಲಾ ಧೋರಣೆಗಳಲ್ಲೂ ಅಭಿವ್ಯಕ್ತಗೊಳ್ಳುತ್ತಿರುವುದು ಸಹಜವೇ ಸರಿ. ಈ ಎಲ್ಲಾ ಚಿಂತನೆಯನ್ನು ಸಹೃದಯನನ್ನು ವಿಶಿಷ್ಟವಾಗಿ ತಲುಪುವ ಪ್ರಯತ್ನವೆನ್ನಬಹುದು. ವಿಮರ್ಶೆಗೆ ಒಳಪಡಿಸುವವನು ಅಂತಿಮವಾಗಿ ಸಹೃದಯನೇ ಆಗಿರುತ್ತಾನೆ.

ಬೇಂದ್ರೆ ಸತ್ಕಾರ ಸಮಿತಿಯಿಂದಲೇ ರಚನೆಗೊಂಡ ಕಾರಣದಿಂದ ಕವಿಯನ್ನು ಕುರಿತ ಅಧ್ಯಯನ ಅನುಭವ ಮುಖೇನವೇ ಹೊರಹೊಮ್ಮಿದೆ. ಇಲ್ಲಿ ಲೇಖನಗಳನ್ನು, ಕವಿತೆಗಳನ್ನು ರಚಿಸಿದ ಎಲ್ಲರೂ ಕವಿಯನ್ನು ನೇರವಾಗಿ ಕಂಡವರು. ಅಭಿಮಾನ ಹೊಂದಿದವರು. ಬಹಳ ಮುಖ್ಯವಾಗಿ 'ಗೆಳೆಯರ ಗುಂಪಿ'ನ ಪರಿಧಿಯೊಳಗೆ ಹಾದು ಹೋದವರು, ದೂರದಲ್ಲೇ ಕಂಡವರು. ಗೆಳೆಯರ ಗುಂಪು' ತನ್ನದೇ ಆದ ಇತಿಹಾಸವನ್ನು ಸೃಷ್ಟಿಸಿ ಹಲವು ಸಾಹಿತ್ಯ ಕಾರ್ಯಗಳನ್ನು ನಿರ್ವಹಿಸಿ ಮುಕ್ತಾಯಗೊಂಡರೂ ಕೂಡ ಸಾಕಷ್ಟು ಅಧ್ಯಯನಗಳಿಗೆ ಒಳಗಾಯಿತು. ಬೇಂದ್ರೆ ಅವರು ಸಮಾಜಮುಖಿಯಾಗಲು 'ಗೆಳೆಯರ ಗುಂಪು' ಮೊದಲ ವೇದಿಕೆಯೆಂದರೂ ತಪ್ಪಾಗಲಾರದು. ೧೯೨೨ರಿಂದ ೧೯೩೭ರ ವೇಳೆಗೆ ತನ್ನ ಇರುವಂತಿಕೆಯಾದರೂ ಸಾಹಿತ್ಯದಲ್ಲಿ ಈ ಗುಂಪಿನ ಕಾರ್ಯವನ್ನು ಸೂಕ್ಷ್ಮವಾಗಿ ಗಮನಿಸಬಹುದು. ಹೊಸಗನ್ನಡ ಸಾಹಿತ್ಯ ಉದಯವಾಗುವ ವೇಳೆಗೆ ಒಂದು ಭಾಗದ ಜನ ಸಮುದಾಯವನ್ನು, ಓದುಗ-ಸಾಹಿತ್ಯಾಭಿರುಚಿಯ ವಲಯವನ್ನು ಅಭಿರುಚಿವಂತರನ್ನಾಗಿಸುವ ಸೂಕ್ಷ್ಮಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಿರುವುದು ಹಲವು ಬರಹಗಳನ್ನು ಅಧ್ಯಯನ ಮಾಡಿದಾಗ ತಿಳಿಯುತ್ತದೆ. ಇಂದಿಗೂ ಸಾಹಿತ್ಯದಲ್ಲಿ ಗುಂಪುಕಾರ್ಯಗಳು ಸಾಗುತ್ತಿರುವ ಪರಿಯನ್ನು ಗಮನಿಸಿದರೆ ಗೆಳೆಯರಗುಂಪು ನಿಂತು ಹೋಯಿತು ಎನ್ನಲಾಗದು ಏಕೆಂದರೆ ಕನ್ನಡ ಸಾಹಿತ್ಯದಲ್ಲಿಯೇ ಸಹೃದಯರನ್ನು ಮೊದಲಿಗೆ ಒಂದು ಕಡೆ ಚಿಂತನೆ ಮಾಡಲು ಯತ್ನಿಸಿದ ಪ್ರಯತ್ನವಿದು. ಆದ್ದರಿಂದ ಗೆಳೆಯರ ಗುಂಪನ್ನು ಕಂಡು ಒಡನಾಡಿದ ಅನೇಕ ಸಹೃದಯರ ಬರಹಗಳು ಅಭಿಮಾನದ ಮುಖೇನ ಬೇಂದ್ರೆ ಹಾಗೂ ಅವರ ಸಾಹಿತ್ಯವನ್ನು ಕಾಣಲು ಸಾಧ್ಯವಾಗಿರುವುದು. ಕೀರ್ತಿನಾಥ ಕುರ್ತಕೋಟಿ ಅವರು ಗೆಳೆಯರಗುಂಪಿನ ಕಾರ್ಯದ ಮುಂದುವರಿಕೆಯನ್ನು ಕುರಿತು ಈ ರೀತಿ ಅಭಿವ್ಯಕ್ತಪಡಿಸಿದ್ದಾರೆ.

> ಧಾರವಾಡದ 'ಗೆಳೆಯರ ಗುಂಪು' ಮುರಿದದ್ದು ೧೯೩೩ರಲ್ಲಿ, ಗುಂಪಿನ ಸದಸ್ಯರ ಸಂಖ್ಯೆ ಸಾಕಷ್ಟು ದೊಡ್ಡದಾಗಿತ್ತು. ಗೆಳೆಯರ ಗುಂಪು ಮುರಿದುಹೋದ ಮೇಲೆ ಕೂಡ ಈ ಸದಸ್ಯರು ಮಾಡಿದ ಸಾಹಿತ್ಯ ಸೃಷ್ಟಿ ಸಣ್ಣದೇನಲ್ಲ. ಬೇಂದ್ರೆ ಅವರ ಕವನ ಸಂಕಲನಗಳು ಪ್ರಕಟವಾದದ್ದು ಆಮೇಲೆ ಎಂದು ಗಮನಿಸಬಹುದು. ಗೋಕಾಕರ ಕಾವ್ಯ ಮತ್ತು ಕಾದಂಬರಿಗಳು, ಮುಗಳಿಯವರ ಕಾವ್ಯ ಮತ್ತು ವಿಮರ್ಶೆ, ಶಂ. ಬಾ. ಜೋಶಿ ಅವರ ಸಂಶೋಧನೆಯ ಗ್ರಂಥಗಳು, ಬೆಟಗೇರಿ ಕೃಷ್ಣಶರ್ಮರ ಕಾವ್ಯ, ಸಣ್ಣಕತೆ ಮತ್ತು ಪತ್ರಿಕಾ ವ್ಯವಸಾಯ ಇವೆಲ್ಲ ನಂತರದ ಸಾಹಿತ್ಯದ ಕಾರ್ಯಗಳಾಗಿವೆ. ಅಲ್ಲದೆ ಬೆಟಗೇರಿ ಅವರ ಪ್ರಖ್ಯಾತವಾದ 'ಜಯಂತಿ' ಪತ್ರಿಕೆ, ಜಡಭರತರ 'ಮನೋಹರ ಗ್ರಂಥಮಾಲೆ', ದ. ಬಾ.

ಕುಲಕರ್ಣಿ ಅವರ 'ಲಲಿತ ಸಾಹಿತ್ಯ ಮಾಲೆ', ಇವು ಕೂಡ 'ಗೆಳೆಯರ ಗುಂಪಿ'ನ ಪ್ರೇರಣೆಯ ಫಲವಾಗಿವೆ. ಅಂದರೆ 'ಗೆಳೆಯರ ಗುಂಪಿ'ನ ಅಂತಃಸತ್ವ, ಗೆಳೆಯರಿರುವ ತನಕ, ಒಂದಿಲ್ಲೊಂದು ರೂಪದಲ್ಲಿ ತನ್ನ ಅಭಿವ್ಯಕ್ತಿಯನ್ನು ಪಡೆದುಕೊಂಡೇ ಬಂದಿದೆ.[೨]

ಸಮಾಜದ ಕಳಕಳಿಯೊಂದಿಗೆ ಪ್ರಾರಂಭಗೊಂಡ ಇಂತಹ ಸಾಹಿತ್ಯ ಸಂಘಟನೆಗಳು ನಿಂತುಹೋದರೂ ಕೂಡ ವೈಯಕ್ತಿಕವಾದ ಸಮಾಜದ ಕಾರ್ಯಗಳನ್ನು ಮುಂದುವರೆಸಿದರು. ಗುಂಪಿನ ಪ್ರತಿಯೊಬ್ಬ ಸದಸ್ಯರೂ ಕೂಡ ಕನ್ನಡ ಸಾಹಿತ್ಯ ನಿರ್ಮಿತಿಯಲ್ಲಿ ತಮ್ಮದೇ ಆದ ಕೊಡುಗೆಗಳನ್ನು ನೀಡಿರುವುದು ವಿಶೇಷವಾಗಿದೆ. ಅಧ್ಯಯನದ ಗುರಿಯೊಂದಿಗೆ ಪ್ರಾರಂಭವಾದ ಸಹೃದಯರ ಈ ಕಾರ್ಯ ಸದಾ ಮುಂದುವರೆಯುತ್ತಾ ಕನ್ನಡ ಸಾಹಿತ್ಯವನ್ನು ಹೊಸ ಚಿಂತನೆಗಳಿಗೆ ಸಾಧ್ಯ ಮಾಡಿದ ಕೆಲಸಗಳು ವಿಶೇಷವಾದುದು. ಬೇಂದ್ರೆ ಅವರ ಸಾಹಿತ್ಯ ರಚನೆಯಂತೆಯೇ ಅಧ್ಯಯನವೂ ವಿಶಾಲವಾದುದು. ಇವರ ಸಾಹಿತ್ಯವನ್ನು ಅಧ್ಯಯನ ಮಾಡಿದ ಸಮೂಹವೂ ವಿಶಾಲವಾದುದು. ಧಾರವಾಡದಿಂದ ಪ್ರಾರಂಭವಾಗಿ ಕರ್ನಾಟಕದ ಎಲ್ಲಾ ದಿಕ್ಕುಗಳನ್ನು ಪ್ರವೇಶಮಾಡುವ ಜೊತೆಗೆ, ಮಹಾರಾಷ್ಟ್ರದ ಸಾಹಿತ್ಯ ಅಧ್ಯಯನಕಾರರ ಓದುವಿಗೆ ಕಾರಣವಾದುದು ಕೂಡ ವಿಶೇಷವಾದುದು. ಈ ಅಧ್ಯಯನ ರೂಪಗಳಾಗಿ ಹಲವು ವಿಮರ್ಶಾ ಬರಹಗಳು ಸೃಷ್ಟಿಗೊಂಡವು. ಈ ಎಲ್ಲಾ ಅಂಶಗಳು ಈ ಅಧ್ಯಯನಕಾರರ ಬರವಣಿಗೆಗಳ ಮೂಲಕ ಓದುವಿನ ಹೊಸ ಸಾಧ್ಯತೆಗಳನ್ನು ಗಮನಿಸಲು ಸಾಧ್ಯವಾಗುತ್ತದೆ.

೩.೧ ಬೇಂದ್ರೆ ಅವರ ಸಾಹಿತ್ಯ ಅಧ್ಯಯನ

ಬೇಂದ್ರೆ ಅವರ ಸಾಹಿತ್ಯ ಕುರಿತು ಇಪ್ಪತ್ತನೇ ಶತಮಾನದ ಎರಡನೇ ದಶಕದಿಂದಲೂ ಕೆಲವರು ತಮ್ಮ ಅಭಿಪ್ರಾಯ ಮಂಡಿಸಿರಬಹುದು. ಪತ್ರಿಕೆಗಳಲ್ಲಿ ಅನಿಸಿಕೆ ಬರೆದಿರಬಹುದು. ಅವುಗಳನ್ನು ಅವಲೋಕಿಸುವುದು ಮುಖ್ಯವೇ ಸರಿ. ಆದರೆ ಅವುಗಳು ದೊರಕುವುದು ಅತಿ ಕಷ್ಟದ ವಿಚಾರ. ವಾಮನ ಬೇಂದ್ರೆ ಅವರು ಕೂಡ ಸಮಗ್ರ ಅಧ್ಯಯನದಲ್ಲಿ ಎಲ್ಲಿಯೂ ಆ ಬರಹಗಳ ಲಭ್ಯ ಕುರಿತು ಚಿಂತನೆ ಮಾಡಿಲ್ಲ. ದೊರೆತ ತಕ್ಷಣದಲ್ಲೇ ಇದೇ ಭಾಗದಲ್ಲಿ ಚರ್ಚಿಸುವ ಅಗತ್ಯವೂ ಇದೆ.

೧.೧. ಗರಿ, ಸಖೀಗೀತ ಕುರಿತ ಪ್ರಾರಂಭದ ಅಧ್ಯಯನಗಳು

೧೯೩೨ರಲ್ಲಿ ತೀ.ನಂ.ಶ್ರೀ. ಅವರು 'ಗರಿ' ಸಂಕಲನ ಕುರಿತು ಬರೆದ ವಿಮರ್ಶೆಯೇ ಇಲ್ಲಿ ಮೊದಲ ಸಾಹಿತ್ಯ ಅಧ್ಯಯನವಾಗಿ ಗಮನಿಸಬಹುದು. ಹೊಸಗನ್ನಡ ಸಾಹಿತ್ಯದ ಪ್ರಾರಂಭವು ಜನಸಾಮಾನ್ಯರಿಗಾಗಿ ತಲುಪುವಾಗ ಪತ್ರಿಕೆ ಒಂದು ಸೇತುವೆ ಕೆಲಸ ಮಾಡಿದೆ. 'ಪ್ರಬುದ್ಧಕರ್ಣಾಟಕ', 'ಜಯ ಕರ್ನಾಟಕ', 'ಜೀವನ' ಮತ್ತು 'ಪರಿಷತ್ಪತ್ರಿಕೆ' ಮೊದಲಾದ ಪತ್ರಿಕೆಗಳು ಇಂತಹ ಕೆಲಸವನ್ನು ನಿರ್ವಹಿಸಿದವು.

ತೀ.ನಂ.ಶ್ರೀಕಂಠಯ್ಯ ಅವರು ಈ ವಿಚಾರವನ್ನು ಸ್ಪಷ್ಟಪಡಿಸುತ್ತಾ..

> ಕನ್ನಡ ಕವಿತೆಯಲ್ಲಿ ಹೊಸ ಮಾರ್ಗವು ತೆರೆದು ಸುಮಾರು ಕಾಲು ಶತಮಾನಕ್ಕೆ ಬಂದಿತೆನ್ನಬಹುದು. ಮೊದಮೊದಲು, ಜನತೆಯ ಮೆಚ್ಚಿಕೆ ದೊರಕೀತೋ ಇಲ್ಲವೋ ಎಂಬ ಅಳುಕಿನಿಂದ ಹೊಸಬಗೆಯ ಕವನಗಳು ಬಿಡಿಬಿಡಿಯಾಗಿ ಅಲ್ಲೊಂದು ಇಲ್ಲೊಂದು ಪತ್ರಿಕೆಯಲ್ಲಿ ತಲೆಹಾಕುತ್ತಿದ್ದವು. ಭಾಷೆ, ವಿಷಯ, ಛಂದಸ್ಸು ಈ ಮೂರರಲ್ಲೂ ಹೊಸದಾದ ಇಂತಹ ಕವನಗಳು ಕನ್ನಡಿಗರಿಗೆ ಒಗ್ಗಬೇಕಾದರೆ ಸಹಜವಾಗಿ ಕೆಲವು ಕಾಲ ಹಿಡಿಯಿತು.[೩]

ಬೇಂದ್ರೆ ಅವರು 'ಕೃಷ್ಣಕುಮಾರಿ'ಯನ್ನು ಪ್ರಕಟಿಸಿದರೂ ಕೂಡ 'ಗರಿ' ಸಂಕಲನವನ್ನು ಮೊದಲ ಸಂಕಲನದಂತೆ ಸ್ವೀಕರಿಸಿದ್ದಾರೆ. ಖಂಡಕಾವ್ಯದಿಂದ ಹೊಸಗನ್ನಡ ಕಾವ್ಯ ಲಯದೊಳಗೆ, ಸ್ವತಂತ್ರ ಛಂದೋ ವಿನ್ಯಾಸವನ್ನು ಅನುಸರಿಸಿದ ಬಗೆ ಇಲ್ಲಿ ವಿಶಿಷ್ಟವಾದುದು.

ತೀ.ನಂ.ಶ್ರೀಕಂಠಯ್ಯ ಅವರು ಪ್ರತಿಕ್ರಿಯಿಸುತ್ತಾ 'ಪ್ರಥಮಕೃತಿಗಳಲ್ಲಿ ಕೆಲವನ್ನು ಬಿಟ್ಟು, ಉಳಿದೆಲ್ಲವನ್ನೂ ವಿಷಯಾನುಗುಣವಾಗಿ ಜೋಡಿಸಿದ್ದರೆ, ಗ್ರಂಥದ ಆದಿಭಾಗದಲ್ಲಿ ವಾಚಕರಿಗೆ ಉಲ್ಲಾಸವು ಕಂಡಹಾಗೆ ಹೆಚ್ಚುತ್ತಿತ್ತು.' ಒಂದು ಕೃತಿ ಜನಸಾಮಾನ್ಯರನ್ನು ತಲುಪಬೇಕಾದರೆ ಅನುಸರಿಸಬೇಕಾದ ಕ್ರಮದ ಅರಿವು ಸೂಚಿಸುತ್ತಲೇ ಪ್ರವೇಶಿಕೆ ಪಡೆಯುತ್ತಾರೆ. ಎಲ್ಲಾ ಕವಿತೆಗಳನ್ನು ಮೂರು ನಾಲ್ಕು ಗುಂಪುಗಳಲ್ಲಿ ವಿಂಗಡಿಸಿ ಗಮನಿಸಿದ್ದಾರೆ. ರಚನೆಯ ಕಾಲದ ದೃಷ್ಟಿಯಿಂದ ದೊರಕುವ 'ರಾಷ್ಟ್ರೀಯ ಗೀತಗಳು' ಎಂಬ ಮೊದಲ ವಿಂಗಡಣೆಯಲ್ಲಿ ವಸಾಹತುಶಾಹಿಗೆ ಸ್ಪಂದಿಸಿದ ಕವನಗಳ ವಿಮರ್ಶೆ ಇಲ್ಲಿ ಗಮನಿಸಬಹುದು. ಗತಜೀವನದ ಸ್ಮರಣೆಯಲ್ಲಿ ಭಾರತದ ಸ್ಥಿತಿ, ಅಷ್ಟೇ ಪ್ರಮಾಣದಲ್ಲಿ ಕನ್ನಡ ನಾಡಿನ ಸ್ಥಿತಿಯೂ ಕೂಡ ಬೇಂದ್ರೆ ಅವರ ಕವಿತೆಗಳು ಪ್ರತಿನಿಧಿಸಿದ್ದು ವಿಶೇಷ. ಬೇಂದ್ರೆ ಸಾಹಿತ್ಯವು ಸಹೃದಯರನ್ನು ಮುಟ್ಟಬೇಕಾದ ಅಂಶಗಳನ್ನು ತನ್ನೊಳಗೆ ಮುಕ್ತವಾಗಿ ಅಡಗಿಸಿಕೊಂಡ ಬಗೆಯನ್ನು ಒಬ್ಬ ಸಹೃದಯನಾಗಿ ತೀ. ನಂ. ಶ್ರೀ ಅವರು ಗುರುತಿಸುತ್ತಾರೆ.

> ಜನಪದ ಪ್ರಕಾರಗಳ ಸಂಪಾದನಾ ಕಾರ್ಯವನ್ನು ಇಪ್ಪತ್ತನೇ ಶತಮಾನದ ಮುಖ್ಯಕಾರ್ಯವಾಗಿ ನಿರ್ವಹಿಸಲಾಯಿತು. ಇಂತಹ ಕಾರ್ಯದಲ್ಲಿ ಬೇಂದ್ರೆ ಅವರ ಕೊಡುಗೆಯನ್ನು ತೀ.ನಂ.ಶ್ರೀಕಂಠಯ್ಯ ಅವರು ಈ ರೀತಿ ಗುರ್ತಿಸಿದ್ದಾರೆ.
>
> ಹಳ್ಳಿಯ ಲಾವಣಿ ಸಾಂಗತ್ಯಗಳನ್ನು ಉತ್ಸಾಹಶಾಲಿಗಳು ಹೊಸದಾಗಿ ಕೂಡಿಸಿ ಪ್ರಕಟಿಸಿದಾಗಲೆಲ್ಲ ಸಾಹಿತ್ಯದ ಬೆಳವಣಿಗೆಗೆ ಮಹೋಪಕಾರವಾಗಿದೆ. ಇಂಗ್ಲೆಂಡ್ ಮೊದಲಾದ ದೇಶಗಳಲ್ಲಿ ಈ ಬಗೆಯ ಕಾರ್ಯವು ಕವಿತೆಯ ಪುನರುಜ್ಜೀವನಕ್ಕೆ ಸಹಕಾರಿಯಾಯಿತು. ನಮ್ಮ ಸಾಹಿತ್ಯದಲ್ಲಿಯೂ ಅದಕ್ಕೆ ನಿದರ್ಶನವು ಆಗಲೇ ಅಂಬಿಕಾತನಯದತ್ತರ ಹಲವು ಪ್ರಣಯಗೀತಗಳಲ್ಲಿ ಕಾಣಬರುತ್ತಿದೆ. ಜನಪದ ಸಾಹಿತ್ಯದ ಸಂಗ್ರಹ ಪ್ರಕಟನ ಕಾರ್ಯಗಳಲ್ಲಿ ಧಾರವಾಡದ ಗೆಳೆಯರ ಗುಂಪಿಗೆ ಒಬ್ಬ ಪ್ರೇರಕರಾಗಿ ನಿಂತ ಈ ಕವಿಗಳು ಹಳ್ಳಿಯ ಪದಗಳ ಜೀವಾಳವನ್ನು ಚೆನ್ನಾಗಿ ಹೀರಿ, ಅದನ್ನೇ ತಮ್ಮ ವಾಣಿಯಲ್ಲಿ ಆಡಿಸುತ್ತಿರುವುದು ಆಶ್ಚರ್ಯವೇನೂ ಅಲ್ಲ... ಹಳ್ಳಿಗನ ಮಾತಿನಲ್ಲಿ ಹಳ್ಳಿಗರ ಪ್ರಣಯವನ್ನು ಅವರು ವರ್ಣಿಸಲೂ ಬಲ್ಲರು; ಕೃತಕತೆ ಎಳ್ಳಷ್ಟೂ ತೋರದಂತೆ, ಅದರೊಂದಿಗೆ ಕವಿಕಲ್ಪನೆಯ ತೆಳುಪೊರೆಯೊಂದನ್ನು ನೇಯಲೂ ಬಲ್ಲರು.[೪]

ಬೇಂದ್ರೆ ಹಾಗೂ ಗೆಳೆಯರ ಗುಂಪು ಒಂದು ಕಾಲದಲ್ಲಿ ನಿರ್ವಹಿಸುತ್ತಿದ್ದ ಕಾರ್ಯವನ್ನು ಸಂಕ್ಷಿಪ್ತವಾಗಿ ಹಿಡಿದಿಟ್ಟಿದ್ದಾರೆ. ಅವರ ಕಾವ್ಯ ಹಾಗೂ ಸಾಹಿತ್ಯದಲ್ಲಿ ಅಭಿವ್ಯಕ್ತಗೊಳ್ಳುವ ಕ್ರಮವನ್ನು ತಾವು ಒಗ್ಗಿಸಿಕೊಂಡ ಪದ ರಚನೆಯಲ್ಲೇ ಗಮನಿಸಬಹುದು. ಲೇಖಕರು ಇಲ್ಲಿ 'ರಾಗರತಿ' ಎಂಬ ಕವಿತೆಯ ಉದಾಹರಣೆಯೊಂದಿಗೆ ವಿಸ್ತರಿಸಿರುವುದನ್ನು ಗಮನಿಸಬಹುದು. ಜಿ. ಕೃಷ್ಣಪ್ಪ ಅವರ ಸುಮಾರು ಮೂರು ದಶಕಗಳ ಸಂಶೋಧನೆಯಲ್ಲಿ ಮೂಡಿರುವ 'ಬೇಂದ್ರೆ ಕಾವ್ಯ ಪದನಿರುಕ್ತ'ದಲ್ಲಿ ಇಂತಹ ಜನಪದ ಸಾಹಿತ್ಯವನ್ನು ಬೇಂದ್ರೆ ಹೇಗೆ ತಮ್ಮ ಶಬ್ದಕೋಶವನ್ನಾಗಿ ನಿರ್ಮಿಸಿಕೊಂಡಿದ್ದರು ಎಂಬುದನ್ನು ಗಮನಿಸಲು ಸಹಾಯಕವಾಗಿದೆ.

ಕಾವ್ಯವು ತನ್ನದೇ ಆದ ಸಂಕೋಲೆಗಳನ್ನು ಹೊಂದಿ ವಿಶ್ವಸಾಹಿತ್ಯದ ನೆಲೆಗೆ ಮೊದಲಬಾರಿಗೆ ಬೇಂದ್ರೆ ಸಾಹಿತ್ಯ ಹೆಜ್ಜೆ ಹಾಕಿದ್ದನ್ನು ಅವರ 'ಹಕ್ಕಿ ಹಾರುತಿದೆ ನೋಡಿದಿರಾ' ಎಂಬ ಕವಿತೆ ವಾಚನವನ್ನೇ ಮೊದಲ ವಿಶ್ವ ನೆಲೆಯಾಗಿ ತೀ.ನಂ.ಶ್ರೀ. ಗುರ್ತಿಸಿದ್ದಾರೆ. ಕವಿಗೆ ಅನಂತಕಾಲದ ನಿರ್ಣಯ ಒಳಗೊಂಡ ಬಗೆಯ ಅರಿವು ಮುಖ್ಯವೆನಿಸಿದೆ. ಇದೇ ಸಂದರ್ಭದಲ್ಲಿ 'ಹಕ್ಕಿ ಹಾರುತಿದೆ ನೋಡಿದಿರಾ' ಕವಿತೆಯು ವಿಶ್ವ ತತ್ತ್ವ ಸಾರಿದರೆ ಇದೇ ಕವಿ 'ಬೆಕ್ಕು ಹಾರುತಿದೆ ನೋಡಿದಿರಾ' ಎಂಬ ಅಣಕವಾಡು ನಿರ್ಮಿಸಬಾರದಿತ್ತೆಂಬ ಬೇಸರವನ್ನೂ ಲೇಖಕರು ಅಭಿವ್ಯಕ್ತಪಡಿಸಿದ್ದಾರೆ. 'ತುತ್ತಿನ ಚೀಲ' ಕವಿತೆಯು ಇದೇ ಹಾದಿಯಲ್ಲಿ ವಿಶ್ವ ದೃಷ್ಟಿಯನ್ನು ವಿಸ್ತರಿಸಿದ ಬಗೆಯಲ್ಲಿ ವಸಾಹತು ಪ್ರಜ್ಞೆಯು ಕೇವಲ ಶೈಕ್ಷಣಿಕವಲ್ಲದೆ ಆರ್ಥಿಕ ಚಿಂತನೆಯ ಬಗೆಯಾಗಿಯೂ ಒಡಮೂಡಿದ ನೆಲೆಯನ್ನು ಗಮನಿಸಿದ್ದಾರೆ. 'ಕುಣಿಯೋಣು ಬಾರ' ಎಂಬ ಕವಿತೆಯು ವಿಶ್ವದೃಷ್ಟಿಯ ಕವನಗಳಲ್ಲೇ ಒಂದು ಮಾಣಿಕ್ಯ' ಎಂಬುದಾಗಿ ಗುರ್ತಿಸುತ್ತಾ ಕವಿ ವಿಶ್ವವನ್ನೇ ಒಂದು ನಾಟ್ಯಶಾಲೆಯಾಗಿ ನಿರೂಪಿಸಿದ ಬಗೆಯನ್ನು ಚರ್ಚಿಸಿದ್ದಾರೆ.

> ವಿಶ್ವದ ಮೂಲನಾಡಿಯನ್ನು ಹಿಡಿದಿರುವ ಈ ಹಾಡಿನಲ್ಲಿ ಯಾವ ಅಂಶವನ್ನು ಹೊಗಳುವುದು, ಯಾವುದನ್ನು ಬಿಡುವುದು! ಮೊದಮೊದಲಲ್ಲಿ, ಬಾಳಿನ ಗೋಳನ್ನು ಸಡಿಲಿಸಿ, ನಾಟ್ಯದ ನಾಚಿಕೆಯನ್ನು ತೊಲಗಿಸಿ, ಅದರ ಹುಚ್ಚು ಸೆಳೆತಕ್ಕೆ ತನುಮನಗಳನ್ನೊಪ್ಪಿ, ಬಳಿಕ ವಿಶ್ವ ತಾಂಡವದಲ್ಲೇ ನಮ್ಮನ್ನು ಒಂದುಗೂಡಿಸುವ ಈ ಹಾಡಿನ ಪ್ರೇರಣೆಯನ್ನು ಅನುಭವಿಸಿಯೇ ಅರಿಯಬೇಕು. ಇಲ್ಲಿ ಆನಂದವೇ ಸಂಸ್ಕಾರ, ಸಂಸ್ಕಾರವೇ ಆನಂದ; ಒಂದರೊಳಗೊಂದು ಲೀನವಾಗಿದೆ. ಇದು ಕಲೆಯ ಪರಮಾವಧಿ. 'ಕುಣಿಯೋಣು ಬಾರ' ವಿಶ್ವಸಾಹಿತ್ಯಕ್ಕೇ ಸೇರುವ ಕವನ.[೫]

ಬೇಂದ್ರೆ ಅವರು ತಮ್ಮ ಕಾವ್ಯವನ್ನು ದುಡಿಸಿಕೊಂಡ ಬಗೆಯನ್ನು ಕಾವ್ಯಮೀಮಾಂಸೆಯ ನೆಲೆಯೊಳಗೆ ಒಂದು ಪ್ರವೇಶವನ್ನು ತಂದು ತೀ. ನಂ. ಶ್ರೀಕಂಠಯ್ಯ ಅವರು ಲೇಖನ ಮುಗಿಸಿದ್ದಾರೆ. ವಿಚಾರದ ಕಾಳಜಿಯಲ್ಲಿ ಕವನದ ರಸ ಚಿಂತನೆಯಲ್ಲಿ ಬೇಂದ್ರೆ ಕಾವ್ಯವು ಕೊರತೆಯನ್ನು ಕಾಣುತ್ತಲೇ ಅತಿ ಬೇಗ ವಾಕ್‌ಸಿದ್ಧಿ ಪಡೆದು ಕಾವ್ಯಾಲಂಕಾರವನ್ನು ರಸ ಹಾಗೂ ರೂಪಕ ಚೌಕಟ್ಟಿನಲ್ಲಿ ಉಜ್ವಲಗೊಳ್ಳುವ ಬಗೆಯಿದೆ. 'ನಗೀನವಿಲು', 'ಬಾಳ ಕರವಾಳ',

‘ತುತ್ತಿನ ಚೀಲ’ ಇಂತಹ ಕವಿತೆಯೊಳಗೆ ಅಡಗಿರುವ ರೂಪಕ ಜಗತ್ತನ್ನು ಲೇಖಕರು ಪರಿಚಯಿಸುತ್ತಾರೆ. ಕವಿ ವಹಿಸುವ ಸ್ವತಂತ್ರ ಛಂದಸ್ಸಿನ ಸಾಂಸ್ಥಿಕ ರೂಪವನ್ನು ಗಮನಿಸಲಾಗಿದೆ.

ತೀ.ನಂ. ಶ್ರೀಕಂಠಯ್ಯ ಅವರ ಮತ್ತೊಂದು ವಿಮರ್ಶೆ ೧೯೪೪ರಲ್ಲಿ ಬೇಂದ್ರೆ ಅವರ ‘ಸಖೀಗೀತ’ ಸಂಕಲನವನ್ನು ಕುರಿತು ‘ಪ್ರಬುದ್ಧ ಕರ್ಣಾಟಕ’ದ ವಿಕ್ರಮ ಸಂವತ್ಸರ ಕಾಮನ ಸಂಚಿಕೆಯ ಕಾವ್ಯಾವಲೋಕನ ಭಾಗದಲ್ಲಿ ಪ್ರಕಟಗೊಂಡಿದೆ. ಇದರ ಪೀಠಿಕೆಯಲ್ಲಿ ಬೇಂದ್ರೆ ಅವರ ಕವಿತೆಗಳ ಕುರಿತು ಈಗಾಗಲೇ ಇಂಗ್ಲೀಷ್ ಹಾಗೂ ಕನ್ನಡದಲ್ಲಿ ವಿಮರ್ಶೆಗಳು ಬಂದಿವೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಈ ನನ್ನ ಪ್ರಬಂಧ ರಚನೆಯಲ್ಲಿ ಅಂತಹ ವಿಮರ್ಶೆಗಳು ದೊರೆತ ತಕ್ಷಣ ಸೇರ್ಪಡಿಸುವೆ. ‘ಸಖೀಗೀತ’ ಸಂಕಲನ ಕುರಿತು ಇಲ್ಲಿ ಪರಿಚಯಾತ್ಮಕ ವಿಮರ್ಶೆಯನ್ನು ಅಭಿಪ್ರಾಯ ಎಂಬಂತೆ ತೀ.ನಂ.ಶ್ರೀ ನೀಡಿದ್ದಾರೆ. ಬೇಂದ್ರೆ ಅವರು ತಮ್ಮ ಬಹುಪಾಲು ಸಂಕಲನಗಳಿಗೆ ತಾವೇ ಮುನ್ನುಡಿಯ ರೂಪದಲ್ಲಿ ಸಹೃದಯ ಜಗತ್ತಿಗೆ ತನ್ನ ಕಾವ್ಯ ಪ್ರವೇಶಿಕೆಯನ್ನೂ, ಸಹೃದಯವಹಿಸಬೇಕಾದ ಜವಾಬ್ದಾರಿಗಳನ್ನು ನೀಡುತ್ತಿದ್ದ ಕಾಲಘಟ್ಟವಾಗಿ ಎಲ್ಲಾ ಕೃತಿಗಳ ಪೀಠಿಕೆಗಳಲ್ಲೂ ಇಂತಹ ಸೂಕ್ಷ್ಮತೆಗಳನ್ನು ಕಾಣಬಹುದು.

ವಿಮರ್ಶಾ ಕಾರ್ಯಕ್ಕಿಂತ ಅಧ್ಯಯನ ಕಾರ್ಯಕ್ಕೆ ಹೆಚ್ಚು ಮನ್ನಣೆ ಇರುವಾಗ ಸಹೃದಯ ಓದುವಿನ ಕಾರ್ಯವನ್ನು ಹೆಚ್ಚಿಸಿದ ಅಂಶಗಳನ್ನು ತೀ.ನಂ.ಶ್ರೀ ನೆನೆಯುವರು. ಇಲ್ಲಿ ಕೆಲವು ಕವಿತೆಗಳನ್ನು, ಅವುಗಳ ಛಂದೋಮಾದರಿಯನ್ನು, ಕವಿ ರಸಿಕರು ಮೆಚ್ಚಲು ಬಳಸಿರುವ ಜಾಣ್ಮೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದ್ದಾರೆ. ‘ಹುಬ್ಬಳ್ಳಿಯಾಂವ’, ‘ಪುಟ್ಟವಿಧವೆ’ಯಂತಹ ಕವಿತೆಗಳು ಒಳಗೊಳ್ಳುವ ಭಾವಕೋಶವು, ಅಲಂಕಾರ ಚಮತ್ಕಾರವೂ ಕವಿಯನ್ನು ಸಂಪನ್ನಗೊಳಿಸುವ ಬಗೆಯನ್ನು ಲೇಖಕರು ಅರ್ಥೈಸಿದ್ದಾರೆ. ಆದರೆ ಸಂಕಲನದ ಇನ್ನೊಂದು ಮುಖದಂತೆ ರಚನೆಗೊಂಡಿರುವ ‘ಸಖೀಗೀತ’ ಎಂಬ ನೀಳ್ಗವನ ಕುರಿತ ಚರ್ಚೆಗಳೇ ಕನ್ನಡ ಸಾಹಿತ್ಯದಲ್ಲಿ ಒಂದು ಆಯಾಮ ಮೂಡಿಸಿವೆ. ಇದನ್ನು ಬೇಂದ್ರೆ ಅವರ ಆತ್ಮಚರಿತ್ರೆ ಎಂಬಂತೆಯೂ ವಿಮರ್ಶಿಸಿದ್ದಾರೆ. ಇಲ್ಲಿ ತೀ.ನಂ.ಶ್ರೀ ಅವರ ಈ ಒಂದೆರಡು ಮಾತುಗಳು ಮೊದಲ ವಿಮರ್ಶೆಯಾಗಿ ಪರಿಗಣಿಸಬಹುದು.

> ಆತ್ಮಕಥೆಯನ್ನು ಹದಗೆಡಿಸದೆ ಬರೆಯುವುದು ಕಠಿನ. ಅದನ್ನು ಗೀತವಾಗಿ ಹಾಡಿ ರಸವುಕ್ಕಿಸುವುದಂತೂ ಅತಿ ಕಠಿನ. ಇಂತಹ ಕಾರ್ಯವನ್ನು ‘ಸಖೀಗೀತ’ದಲ್ಲಿ ಬೇಂದ್ರೆಯವರು ಮನೋಹರವಾಗಿ ಸಾಧಿಸಿದ್ದಾರೆ.[೬]

ಇಂತಹ ಸ್ವಾನುಭಾವವನ್ನು ಬೇಂದ್ರೆ ತಾನೇ ನಾಯಕನಾಗಿ ಅದರಲ್ಲೂ ಕಾವ್ಯದ ರಾಗವನ್ನು ಮಂಡಿಸುವ ಈ ‘ಪೂರ್ವಾನುರಾಗ’ ನುಡಿಯು ಮುಂದಿನ ಭಾಗದ ಕುತೂಹಲವನ್ನು ಹಿಡಿದಿಡುವ ಬಗೆಯನ್ನು ಗಮನಿಸಿದ್ದಾರೆ. ಒಟ್ಟಾರೆ ತೀ.ನಂ.ಶ್ರೀ ಅವರು ಬೇಂದ್ರೆ ಅವರನ್ನು ಕುರಿತು ಬರೆದ ಈ ಎರಡು ಲೇಖನಗಳು ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟ ಬರಹಗಳು. ಮುಂದಿನ ವಿಮರ್ಶೆಗಳಿಗೆ ಬಹುಮುಖ್ಯ ಪೀಠಿಕೆಗಳು.

ಮಿರ್ಜಿ ಅಣ್ಣಾರಾಯ ಅವರ ‘ಸಖೀಗೀತ’ ಕುರಿತು ಚಿಂತನೆ ಈ ರೀತಿ ಇದೆ. ಬೇಂದ್ರೆ ಅವರ ಕಾವ್ಯ ಪ್ರವೇಶಕ್ಕೆ ಒಂದು ಪೀಠಿಕೆ ಸಿದ್ಧಪಡಿಸುವ ಇವರು ವಿಶ್ವ ಮಟ್ಟದಲ್ಲಿ ಪ್ರತಿನಿಧಿಸುವ

ಕಾವ್ಯ ಇದೆಂದು 'ಸಖೀಗೀತ'ವನ್ನು ಪ್ರವೇಶ ಮಾಡುತ್ತಾರೆ. ಪ್ರತಿ ಸಾಲಿನ ಆನಂದವನ್ನು ಸಹೃದಯರ ರಸ ಚಿಂತನೆಯಂತೆ ನೀಡುತ್ತಾರೆ. ಪ್ರಕೃತಿ, ಕಾಲ, ಕವಿಯ ಮನಸ್ಸು ಈ ಮೂರು ಅಂಶಗಳನ್ನು ಅವಲೋಕಿಸುವ ಅಣ್ಣಾರಾಯರು ಜನಸಾಮಾನ್ಯರಲ್ಲೂ ಒದಗಬಹುದಾದ ದಾಂಪತ್ಯದ ಒಲವು ಈ ಕಾವ್ಯದಲ್ಲಿದೆ ಎಂದು ಗುರ್ತಿಸುತ್ತಾರೆ.

'ಸಖೀಗೀತ', 'ಕುಣಿಯೋಣು ಬಾ' ಈ ಕವಿತೆಗಳು ಆತ್ಮಚರಿತ್ರೆಯಂತಹ ಹೊರವಿನ್ಯಾಸಗಳ ಕುರಿತು ಇಂದಿಗೂ ವಿಮರ್ಶೆಗಳು ಕಂಡುಬರುತ್ತಿದ್ದರೂ ೧೯೪೫ರ ವೇಳೆಗೆ ಈ ಕವಿತೆಗಳ ಪ್ರತಿನಿಧಿಕರಣವನ್ನು ಮಿರ್ಜಿ ಅಣ್ಣಾರಾಯರು ಈ ರೀತಿಯಲ್ಲಿ ಸ್ಪಷ್ಟಪಡಿಸಿದ್ದಾರೆ.

> ಅರ್ಥವು ಸೂಚ್ಯವಾಗಿದ್ದು, ಲೋಕೋಕ್ತಿ ತನ್ನಿಂದ ತಾನೇ ತೇಲಿ ಬಂದಷ್ಟೂ ಕಾವ್ಯದ ಘನತೆ ಹೆಚ್ಚುವುದು. ಅಂತಹ ಮಾತುಗಳೆಷ್ಟೋ ಸಖೀಗೀತದಲ್ಲಿ ಬಂದಿವೆ. 'ಬಡವರ ಸಿಂಗಾರ ಬಯಕೆಗೆ ಮೂಲ' 'ಮಾತಿಗೂ ಮೌನಕ್ಕು ಯಾತರ ಒಗೆತನ' 'ಭೀತಿಯ ಹುಟ್ಟಿಸುವ ಪ್ರೀತಿಯು ಪ್ರೀತಿಯೆ' ಇವೆ ಮೊದಲಾದವುಗಳಲ್ಲದೆ ಇನ್ನೂ ಹಲವಾರು ನುಡಿಗಳು ಚಿರಸ್ಥಾಯಿಯಾಗಿ ನಿಲ್ಲುವವು. 'ಕುಣಿಯೋಣು ಬಾ'ಎಂದು ಹಾಡಿದ ಬೇಂದ್ರೆ ಅವರು 'ಸಖೀಗೀತ'ದಲ್ಲಿ ಕುಣಿತ ಎಂತಹದೆಂಬುದನ್ನು ಮನೋಹರವಾಗಿ ಚಿತ್ರಿಸಿದ್ದಾರೆ. ಗೀತದ ಅಸ್ಥಿಪಂಜರದಂತಿರುವ ಆತ್ಮ ಚರಿತ್ರೆಯು ಆಧಾರ ಮಾತ್ರವಾಗಿದೆ. ಕಾವ್ಯದ ಸೌಂದರ್ಯವೆಲ್ಲ ವಿಶ್ವವ್ಯಾಪಿಯಾದ ಒಂದು ಜೀವನ ಸಮಸ್ಯೆಯಿಂದ ರೂಪುಗೊಂಡಿದೆ. ಅದಕ್ಕೆ ಒಪ್ಪವಿಕ್ಕುವ ರೀತಿಯಲ್ಲಿ ಉತ್ತರ ಕೊಟ್ಟ ಬಗೆಯೂ ಬಹು ಮಾರ್ಮಿಕವಾಗಿದೆ. ಉತ್ತರದಲ್ಲಿ ಉತ್ತರೋತ್ತರವನ್ನು ಕಾಣುವ ಕವಿಯ ಹಂಬಲವು ಬೇಗನೆ ಸಫಲವಾಗಲಿ; ಕನ್ನಡಕ್ಕೆ ಕೀರ್ತಿ ತರಲಿ.[೭]

ಈ ಆಶಯವು ಅಣ್ಣಾರಾಯರ ಕಾವ್ಯದ ಆಸ್ವಾದನೆಯಾಗಿದೆ. ಒಂದು ಕವಿತೆಯನ್ನು ಅತ್ಯಂತ ಬಿಡಿ ಬಿಡಿಯಾಗಿ ತನಗೆ ರುಚಿಸುವ ಸಾಲುಗಳನ್ನು ವಾಸ್ತವದ ಸಮಸ್ಯೆಗಳೊಂದಿಗೆ ವಿಮರ್ಶಿಸುವ ಶೈಲಿ ಇವರದು. 'ಸಖೀಗೀತ' ಕುರಿತು ಹಲವು ವಿಮರ್ಶೆಗಳು ಬಂದಿವೆ. ಕವಿಯ ಸಿದ್ಧಾಂತದಂತೆ, ಕವಿಯ ಆತ್ಮಚರಿತ್ರೆಯಂತೆ ಹಾಗೇಯೇ ಹೊಸ ಕಾವ್ಯ ಅನ್ವೇಷಣೆಯಂತೆ ಬೇಂದ್ರೆ ಅವರ 'ಸಖೀಗೀತ' ಸಂಕಲನವನ್ನು ವಿಮರ್ಶೆ ಮಾಡಿದ್ದಾರೆ.

೨. ಮಾಸ್ತಿ ಅವರ ಮುನ್ನುಡಿ ಬರಹದ ಚಿಂತನೆ

ಮಾಸ್ತಿ ವೆಂಕಟೇಶ ಅಯ್ಯಾಂಗಾರ್ ಅವರು ಬೇಂದ್ರೆ ಅವರ ಬದುಕಿಗೆ ಆಧಾರವಾಗಿದ್ದವರು. 'ಗೆಳಯರಗುಂಪಿ'ನ ಕಾರ್ಯಕ್ಕೆ ಸ್ಫೂರ್ತಿಯಾಗಿದ್ದವರು. ಬೇಂದ್ರೆ ಅವರ ಸಾಹಿತ್ಯವನ್ನು ಅಮೂಲಾಗ್ರವಾಗಿ ಅಧ್ಯಯನಮಾಡಿದವರು. ಬೇಂದ್ರೆ ಸಾಹಿತ್ಯ ಕುರಿತು ಅತ್ಯಂತ ಕಡಿಮೆ ಬರಹಗಳನ್ನು ಬರೆದಿದ್ದರೂ ಮೌಲ್ಯಯುತವಾಗಿವೆ. ಈ ಬರವಣಿಗೆಗಳು ಮುಂದಿನ ಅಧ್ಯಯನಗಳಿಗೆ ಮಾರ್ಗದರ್ಶಿಯಾಗಿವೆ.

ಬೇಂದ್ರೆ ಅವರ 'ನಾದಲೀಲೆ' ಕವನಸಂಕಲನಕ್ಕೆ ಮಾಸ್ತಿ ವೆಂಕಟೇಶ ಅಯ್ಯಾಂಗಾರ್ ಅವರು ಮುನ್ನುಡಿ ಬರೆದಿದ್ದಾರೆ. ಅಣ್ಣನಂತೆ ಸಲಹಿದ ಮಾಸ್ತಿ ಇಲ್ಲಿ ಒಬ್ಬ ಸಾಹಿತ್ಯ ವಿಮರ್ಶಕನಾಗಿ ಕಾರ್ಯನಿರ್ವಹಿಸಿದ್ದಾರೆ. ಬೇಂದ್ರೆ ಅವರು ನಿರ್ವಹಿಸುತ್ತಿದ್ದ ಕಾವ್ಯ ಜಗತ್ತನ್ನು ವಸಾಹತು ಹಿನ್ನಲೆಯಲ್ಲಿ ಕಾಲಧರ್ಮ ಗ್ರಹಿಸಿದ ರೀತಿಯನ್ನು ಮಾಸ್ತಿ ಈ ರೀತಿ ಅಭಿವ್ಯಕ್ತಪಡಿಸಿದ್ದಾರೆ.

> ಪ್ರಪಂಚದ ಸಾಹಿತ್ಯದಲ್ಲಿ ಸ್ಥಾನವನ್ನು ಪಡೆಯಬಹುದಾದ ಕೃತಿಗಳು ನಮ್ಮ ಸಾಹಿತ್ಯದಲ್ಲಿ ಒದಗುವುದು ಹೀಗೆ. ಇಂಥ ಕಾವ್ಯದ ಪರಿಚಯಕ್ಕಾಗಿಯೇ ಬೇರೆ ದೇಶದ ಜನರು ಆಸೆ ಪಡುವುದು. ಬೇರೆ ನಾಡಿನ ಜನರು ಅರಿತರೆ ಅರಿಯಲಿ, ಅರಿಯದಿದ್ದರೆ ಬಿಡಲಿ ಅವರು ಅರಿಯ ಬೇಕಾದ ಮಟ್ಟಕ್ಕೆ ನಮ್ಮ ಕವಿತೆ ಮುಟ್ಟಲಿ ಎನ್ನುವುದು ನಮ್ಮೆಲ್ಲರಿಗೂ ಇರುವ ಆಶೆ.[೮]

ಇಂತಹ ವಿಶ್ವಮಾನ್ಯಗೊಳ್ಳುವ ಸದಾಶಯದಲ್ಲಿ ಬೇಂದ್ರೆ ಅವರ ಕಾವ್ಯ ಜಗತ್ತಿನ ಕೆಲವು ಕವಿತೆಗಳನ್ನು ಪರಿಚಯಿಸುತ್ತಾರೆ. ಮಾಸ್ತಿ ಅವರು ತಮ್ಮೊಂದಿಗೆ ಬೇಂದ್ರೆ ಅವರ ನಂಟನ್ನು ಪರಿಚಯಿಸಿದ 'ಬೆಳಗು' ಕವಿತೆಯ ವಿಶಿಷ್ಟ ಬರಹದ ನೆನಪು ಕವಿ ಅಸಮಾನ್ಯತೆಯನ್ನು ಸೂಕ್ಷ್ಮ ದರ್ಶನವೆಂಬಂತೆ ಕಣ್ಣರಳಿಸಿದ್ದಾರೆ. 'ಹಕ್ಕಿ ಹಾರುತಿದೆ ನೋಡಿದಿರಾ' ಇಂತಹ ಕವಿತೆಗಳು ಬೇಂದ್ರೆ ಅವರು ತಮಗೆ ಹಾಗೂ ನಾಡಿಗೆ ಹತ್ತಿರವಾಗಲು ರಚನೆಗೊಂಡ ಕಾವ್ಯ ಸಂಪತ್ತು ಎಂಬುದಾಗಿ ಪರಿಚಯಿಸಿದ್ದಾರೆ.

ಈ ಸಂಕಲನದ ಕವಿತೆಗಳನ್ನು ದೇಶಪ್ರೇಮದ ಗೀತಗಳು, ಊಹೆಯ ವಿಲಾಸದಿಂದ ಉದ್ಭವಿಸಿದ ಪದ್ಯಗಳು, ಸಮಾಜದ ಸ್ಥಿತಿಗತಿ ಕುರಿತವು, ಬಾಳುವೆ ಗೀತಗಳು, ಬುದ್ಧಿಯ ಅಥವಾ ಆತ್ಮದ ಅರಿವಿಗೆ ಮಾತನ್ನು ಕೊಡುವ ಗೀತಗಳು, ವಿಡಂಬನಾ ಕಾವ್ಯಗಳು ಹೀಗೆ ಸಂಕಲನದ ಓದನ್ನು ಒಂದು ದೃಷ್ಟಿಕೋನದ ಮುಖೇನ ನೋಡಿರುವುದನ್ನು ಗಮನಿಸಬಹುದು. ತರುಣ ಕವಿಯ ಕಾವ್ಯದ ಬಲವನ್ನು ಕವಿ ಕಾವ್ಯದಲ್ಲಿ ತಂದಿರುವ ಭಾವನೆಗಳ ಆಧಾರದ ಮೇಲೆ ಗುರ್ತಿಸುತ್ತಾರೆ. ಪ್ರಕೃತಿಯನ್ನು ಕುರಿತು ಕಾವ್ಯ ರಚನೆಗೊಳ್ಳುತ್ತಿದ್ದ ಆ ಸಂದರ್ಭದಲ್ಲಿ ಕವಿ ಜೀವಚೈತನ್ಯಗೊಳಿಸಿದ ಕವಿಯ ಅರಿವು ಇಲ್ಲಿ ಸಾಕ್ಷೀ ಪ್ರಜ್ಞೆಯಾಗಿ ಮಾಸ್ತಿ ಗ್ರಹಿಸಿದ್ದಾರೆ. ಕನ್ನಡದ ಕಾವ್ಯ ಸಂದರ್ಭವನ್ನು, ಸಾಹಿತ್ಯದ ಜವಾಬ್ದಾರಿಯನ್ನು ಕೇಂದ್ರೀಕರಿಸುವ ಸಾಲುಗಳು ಇಲ್ಲಿವೆ.

> ಗಿಡದ ಆನಂದ, ತನ್ನ ಆನಂದ, ಗಿಡದಲ್ಲಿ ಕುಳಿತ ಹಕ್ಕಿಯ ಆನಂದ, ಬೀಸುವ ಗಾಳಿಯ ಆನಂದ ಇವು ಬೇರೆ ಬೇರೆ ಎಂದು ತಿಳಿದವನು ಅದನ್ನು ಬಿಡಿಸಿ ಬಿಡಿಸಿ ಹೇಳುತ್ತಾನೆ. ಇವುಗಳೆಲ್ಲಾ ಒಂದು ಆನಂದ, ನಾಲ್ಕು ಕಡೆ ಕಂಡೆ ಕಂಡಿರತಕ್ಕದ್ದು ಎಂದು ಬುದ್ಧಿಯಿಂದ ತಿಳಿಯುವವನು ಇದೊಂದು ವಿಚಾರ ಎಂಬಂತೆ ಹೇಳುತ್ತಾನೆ. ಇದಕ್ಕೂ ಮುಂದಿನ ಒಮ್ಮೈ ಅರಿತವನು ಬೇಂದ್ರೆಯವರು ಹೇಳಿರುವಂತೆ 'ಗಿಡಗಂಟೆಯ ಕೊರಳು' ಆನಂದದಿಂದ ಹಾಡಿತು ಎನ್ನುತ್ತಾನೆ. ಬಾಳೆಲ್ಲ ಒಂದು ಎನ್ನುವುದು ತಿಳಿವಿಗೆ ಮಾತ್ರ ಕಂಡಾಗ ಅಲ್ಲ, ಅನುಭವದಿಂದ ಕಂಡಾಗ ಮಾತ್ರ ಈ ಮಾತು ಪ್ರಯತ್ನವಿಲ್ಲದೆ ಬರುತ್ತದೆ. ಇದು ಬರುವ ರೀತಿಯಲ್ಲಿ ಕವಿಗೆ ತನ್ನ ಮಾತು ಎಂಥ ಸ್ಥಿತಿಯ ಮಾತು ಎಂದು ತಿಳಿದಿದೆಯೇ ಇಲ್ಲವೇ ಎನ್ನುವಂತಹ ಸಹಜತೆ ಇರುತ್ತದೆ.[೯]

ಈ ಸಾಲುಗಳು ಕನ್ನಡ ಸಾಹಿತ್ಯದಲ್ಲಿಯೇ ಮಾರ್ಗಸೂಚಿಯಾದ ನುಡಿಗಳು. ಬೇಂದ್ರೆ ಅವರ ವಿಶಿಷ್ಟ ಕವಿತೆಗಳ ಚರ್ಚೆಗೆ ಬಂದಾಗ ಈ ಸಾಲುಗಳನ್ನು ಗಮನಿಸಬೇಕೆನ್ನುವ ಅರ್ಥ ಹೊಂದಿದೆ. 'ನಾದಲೀಲೆ' ಸಂಕಲನದ ಮುನ್ನುಡಿಯಲ್ಲಿ ಮಾಸ್ತಿ ಅವರು ಈ ಸಂಕಲನದ ಪೂರ್ವ ಕೃತಿಗಳಲ್ಲಿ ಒಂದಾದ 'ಗರಿ' ಸಂಕಲನವನ್ನು ಗಮನಿಸುತ್ತಾರೆ. 'ಗರಿ' ಸಂಕಲನದ 'ಬೆಳಗು' ಕವಿತೆಯನ್ನು ಕುರಿತು ವಿಮರ್ಶಿಸುತ್ತಾರೆ. ಇಲ್ಲಿ ಕಾವ್ಯ ಗ್ರಹಿಕೆಯ ಕೀಲಿಗಳನ್ನು ಕವಿ ಕಾಲಮಾನದ ತುರ್ತಿಲ್ಲದೆ ನೀಡಿರುತ್ತಾನೆ ಎಂಬುದಕ್ಕೆ ಸಾಕ್ಷಿ ಇದು. ಈ ವಿಮರ್ಶೆಯಲ್ಲಿ ಮೂರು ರೀತಿಯಾಗಿ ಕವಿತೆ ಕಟ್ಟುವ, ಸಾಹಿತ್ಯ ರಚಿಸುವ, ಅಭಿವ್ಯಕ್ತಗೊಳಿಸುವವರನ್ನು ಮಾಸ್ತಿ ಅವರು ವಿಂಗಡಿಸಿದ್ದಾರೆ. ಬೇಂದ್ರೆ ಅವರ ನಿಜವಾದ ಗ್ರಹಿಕೆಯು ವಿಚಾರ ಚಿಂತನೆಯನ್ನು ಮೀರಿದ್ದು ಎಂಬ ಅಂಶದ ಜೊತೆಗೆ ಇಂತಹ ಕಾವ್ಯ ನಮ್ಮ ಸಮಾಜಕ್ಕೆ ಅಗತ್ಯವಿದೆ ಎಂಬ ಸೂಚನೆ ನೀಡುತ್ತಾರೆ.

'ನಾದಲೀಲೆ'ಯಲ್ಲಿ ಬೇಂದ್ರೆ ಅವರ ಕಾವ್ಯಶಕ್ತಿಯನ್ನು ಅರ್ಥೈಸುತ್ತಾ ಕವಿ ಹಾಗೂ ಸಹೃದಯರ ನಡುವಿನ ರಸಸೇತುವೆಯನ್ನು ಈ ರೀತಿ ತಿಳಿಸಿದ್ದಾರೆ.

> ಒಲಮೆಯನ್ನು ಕುರಿತ ಗೀತಗಳಲ್ಲಿ ಬೇಂದ್ರೆಯವರು ತರುವ ರಸ ಹೀಗೆಯೇ ವಿಲಕ್ಷಣವಾದುದು. ಉದಯದ ವ್ಯಾಪಾರಗಳನ್ನು ಕಣ್ಣು ತೆರೆದು, ಮನಸ್ಸು ತೆರೆದು ನೋಡಿರುವಂತೆ ಇವರು ಜನದ ಬಾಳುವೆಯಲ್ಲಿ ಪ್ರೇಮ ಹರಿಯುವ ರೀತಿಯನ್ನು ಕಣ್ಣು ತೆರೆದು ಮನಸ್ಸು ತೆರೆದು ನೋಡಿದ್ದಾರೆ. ಆದ್ದರಿಂದ ಇವರ ವಿವರಣದಲ್ಲಿ ಮಾತು ನಿಜವನ್ನು ಹೇಳುತ್ತದೆ. ಮನಸ್ಸನ್ನು ಮುಟ್ಟುತ್ತದೆ, ಹೃದಯದಲ್ಲಿ ರಸದ ಊಟೆಯನ್ನು ಹುಕ್ಕಿಸುತ್ತದೆ. ದೇಶ ಪ್ರೇಮದ ಗೀತೆಗಳಾದರೂ ಇಂಥದೇ ಒಂದು ತೀವ್ರವಾದ ಅನುಭವದಿಂದ ಬಂದಿರತಕ್ಕವು. ಹೀಗೆಯೇ ಸಮಾಜದ ಸ್ಥಿತಿಗತಿಯನ್ನು ಕುರಿತ ಗೀತೆಗಳು. ಇಲ್ಲಿಯ ತೀವ್ರ ಅನುಭವ, ವಿಪುಲ ಭಾವ ಕವಿತೆಯಲ್ಲಿ ಸಾಗರದ ಅಲೆಯ ಮಾಲೆಯಂತೆ ಮೇಲೆ ಮೇಲೆ ಉರುಬಿ ಬರುತ್ತದೆ. ಇದೇ ಕ್ರಮವೇ ಸಂಸಾರದ ಅನುಭವ ಗೀತೆಗಳಲ್ಲಿ ಬರುತ್ತದೆ. ಇಲ್ಲಿ ಕಾಣವುದು ದೊಡ್ಡ ಕಲ್ಲುಗಳನ್ನು ಮೇಲೆ ಮೇಲೆ ಹೇರಿ ಕಟ್ಟಿದ ಒಂದು ಹರ್ಮ್ಯ ಪ್ರಾಕಾರದ ಕಟ್ಟಡದ ರೀತಿ. ... ಕವಿತೆ ಉತ್ತಮವಾಗಬೇಕಾದರೆ ಅದು ಬಾಳ ಆಳದಿಂದ ಬರಬೇಕು. ಹಾಗೆ ಬಂದ ಕವಿತೆ ಈ ರೀತಿಯಲ್ಲಿ ಕವಿಯ ಟಂಕೆಯಿಂದ ತಾನೇ ಒಂದು ಜಾತಿಯದಾಗಿ ಕಾಣುತ್ತದೆ. ಬೇಂದ್ರೆಯವರ ಕೃತಿಯಲ್ಲಿ ಅವರ ಟಂಕೆ ಸ್ಪಷ್ಟವಾಗಿ ಬಿದ್ದಿರುತ್ತದೆ.[೧೦]

ಒಬ್ಬ ಕವಿ ಸತ್ವ ಪಡೆಯುವ ಹೆಜ್ಜೆಗಳ ಸೂಕ್ಷ್ಮಗ್ರಹಿಕೆಯನ್ನು ಅವರ ಕವಿತೆಗಳ ಪ್ರಸ್ತಾಪದೊಂದಿಗೆ ಒಂದು ಪ್ರಾಸ್ತಾವಿಕ ನುಡಿಯಂತೆ ಇಲ್ಲಿ ಪರಿಚಯಿಸಿದ್ದಾರೆ.

೧. ೩. 'ದತ್ತವಾಣಿ' ಕಾವ್ಯ ಚಿಂತನೆ

ಮಿರ್ಜಿ ಅಣ್ಣಾರಾಯರು ಬರೆದ 'ದತ್ತವಾಣಿ' ಎಂಬ ಕೃತಿಯು ಬೇಂದ್ರೆ ಅವರ ಕಾವ್ಯದ ಅಧ್ಯಯನದ ಜೊತೆಗೆ ಸಾಕಷ್ಟು ಸಾಹಿತ್ಯದ ಒಳಗೂ–ಹೊರಗೂ ಚರ್ಚಿಸಿದ ವಿಶಿಷ್ಟ ಕೃತಿಯಾಗಿದೆ. 'ಕವಿವರ್ಯ'., 'ದತ್ತವಾಣಿಯಲ್ಲಿ ರಾಷ್ಟ್ರೀಯ ಉದ್ಬೋಧನೆ', 'ಪ್ರಕೃತಿಯ ಮಡಿಲಲ್ಲಿ ಬೇಂದ್ರೆ',

‘ಬೇಂದ್ರೆ ಅವರ ಸಾಮಾಜಿಕ ಕವನಗಳು’, ‘ಅಂಬಿಕಾತನದತ್ತರ ಆಧ್ಯಾತ್ಮಿಕತೆ’., ‘ಬೇಂದ್ರೆಯವರ ಪ್ರೇಮಗೀತೆಗಳು’, ‘ಸಖೀಗೀತ’, ‘ಮೂರ್ತಿ’ ಈ ವಿಚಾರಗಳ ಕುರಿತು ಸಂಕ್ಷಿಪ್ತವಾಗಿ ಚರ್ಚಿಸಿದ್ದಾರೆ. ವಸಾಹತು ಧೋರಣೆಯಿಂದ ರಾಜಕೀಯವಾಗಿ ಉಂಟಾದ ಪಲ್ಲಟಗಳನ್ನು ರಾಷ್ಟ್ರೀಯ ಉದ್ಬೋದನೆಯಲ್ಲಿ ಗಮನಿಸಿದ್ದಾರೆ. ಬೇಂದ್ರೆ ಅವರ ಕವಿತೆಗಳಲ್ಲಿ ಕೇವಲ ದೇಶಾಭಿಮಾನವಿರದೆ ಭಾರತ ತಾಯಿಗೆ ಉಂಟಾಗಿರುವ ತೊಂದರೆಗಳನ್ನು ದಬ್ಬಾಳಿಕೆ, ನೋವು, ಹಿಂಸೆಯ ಪ್ರತೀಕವಾಗಿ ಪ್ರಶ್ನಿಸುತ್ತಾರೆ. ನಾಡದೇವಿಯನ್ನು ಪ್ರಶ್ನಿಸುವ ಆಪ್ತತೆಯನ್ನು ಮಿರ್ಜಿ ಅಣ್ಣಾರಾಯ ಅವರು ಈ ರೀತಿ ಅರ್ಥೈಸಿದ್ದಾರೆ.

> ಬೇಂದ್ರೆಯವರು ನಾಡದೇವಿಯನ್ನು ದೂರಿನಿಂದ ಕಂಡು ಹಿಂದಿರುಗಿದವರಲ್ಲ. ಅವಳ ಸಮೀಪಕ್ಕೆ ಹೋಗಿ ‘ಯಾರು ನಿಂದವರಲ್ಲಿ ತಾಯೆ? ಹೆಸರು ಹೇಳು. ಮುತ್ತೈದೆಯೇ? ನಿನಾರ ಮನೆಯವಳು? ನಿನಗೆ ಆಪ್ತೇಷ್ಟರಿಲ್ಲವೆ? ಮಕ್ಕಳಿಲ್ಲವೆ? ಇರಲು ಮನೆಯಿಲ್ಲವೆ? ಪರದೇಶಿಯೇನು?’ ಎಂದು ಮುಂತಾದ ಪ್ರಶ್ನೆಗಳನ್ನು ಕೇಳಿ, ಅವಳ ಸ್ಥಿತಿಗತಿಗಳನ್ನೆಲ್ಲ ವಿಚಾರಿಸಿದವರು. ... ಬೇಂದ್ರೆಯವರು ಮಾಡುವ ರಾಷ್ಟ್ರೀಯತ್ವದ ಬೋಧೆಯಲ್ಲಿ ಎಂಥ ನಿರ್ವೀರ್ಯರಲ್ಲಿಯೂ ನವಚೇತನವನ್ನು ತುಂಬುವ ಕುಶಲ ಕಲೆಯಿದೆ; ಎಂಥ ಮನಸ್ಸನ್ನಾದರೂ ಹುರಿದುಂಬಿಸುವ ಮಹಾಶಕ್ತಿಯಿದೆ.; ನಾಡಿನ ನಾಡಿಗಳನ್ನು ಹಿಡಿದು ನೋಡಿ, ಪರೀಕ್ಷಿಸಿ ಯೋಗ್ಯ ಉಪಾಯವನ್ನು ಜನತೆ ಹೇಗೆ ಮಾಡಬೇಕೆಂಬುದನ್ನು ಹೇಳುವ ಅವರ ಹವಣನ್ನು ಓದಿಯೇ ತಿಳಿಯಬೇಕು.[೧೧]

ಬೇಂದ್ರೆ ಅವರ ಕವಿತೆಗಳ ಮೂಲಕವೇ ಕಾವ್ಯ ಶೈಲಿಯನ್ನು, ವಸ್ತು ಪ್ರತಿರೂಪವನ್ನು ಅರಿಯುವ ಕಲೆ ಮಿರ್ಜಿ ಅಣ್ಣಾರಾಯ ಅವರದು. ಕವಿಯ ಕಣ್ಣನ್ನು, ಆತನ ಮನಸ್ಸಿನ ಅಂತರಾಳವನ್ನು ಮೇಳೈಸುವ ರೀತಿಯನ್ನು ದರ್ಶನಮಾಡುತ್ತಾರೆ. ‘ಪ್ರಕೃತಿಯ ಮಡಿಲಲ್ಲಿ’, ‘ಬೇಂದ್ರೆಯವರ ಸಾಮಾಜಿಕ ಕವನಗಳು’, ‘ಬೇಂದ್ರೆಯವರ ಪ್ರೇಮಗೀತೆಗಳು’ ಈ ಮೂರು ಲೇಖನಗಳು ವಸ್ತು ಪ್ರತಿರೂಪದ ವಿಮರ್ಶೆಗಳು ಇಲ್ಲಿ ಕವಿತೆಗಳೇ ಕಾವ್ಯ ಕುತೂಹಲವನ್ನು ಮಂಡಿಸುತ್ತವೆ. ಸಹೃದಯನಿಗೆ ಸುಲಭವಾಗಿ ಅರ್ಥವಾಗುತ್ತದೆ ಎಂಬುದನ್ನು ಪರಿಚಯಿಸಿದ್ದಾರೆ.

> ಬೇಂದ್ರೆಯವರ ಆತ್ಮವು ಪ್ರಕೃತಿಯ ಆತ್ಮದೊಡನೆ ಏಕಾತ್ಮವಾಗಿ ಹೋಗಿ ಬಿಟ್ಟಿದೆ. ವ್ಯಕ್ತ ಜಗತ್ತಿನ ಸಮಸ್ತ ಮಾಧುರ್ಯವೂ ಅವರ ಅಂತರ್‌ದೃಷ್ಟಿಯಲ್ಲಿ ಕೇಂದ್ರೀಕೃತವಾಗಿದೆ. ಮಾನವ ಜೀವನದ ಭಿನ್ನ ಭಿನ್ನ ಅವಸ್ಥೆಗಳನ್ನೆಲ್ಲ ಪ್ರಕೃತಿಯಲ್ಲಿ ಕಾಣುವುದಕ್ಕೆ ಕಾರಣವೂ ಇದೇ ಆಗಿದೆ. ಇದು ಕವಿಯ ಸೌಂದರ್ಯ ವೃತ್ತಿಗೆ ಸೃಷ್ಟಿಯು ಸಾಂಕೇತಿಕವಾಗಿರುವಾಗ ಮತ್ತೂ ಸ್ಫುಟವಾಗಿದೆ. ಈ ಸಂಕೇತ ಕಾರಣ ಹೀಗಿದೆ. ಬೇಂದ್ರೆ ಅವರು ಪ್ರಕೃತಿಯ ಪ್ರತಿ ಅಣುವಿನಲ್ಲಿಯೂ ಆ ಪರಮ ಅವ್ಯಕ್ತ ಸತ್ತೆಯ ಅಖಂಡ ವಿಶ್ವವ್ಯಾಪಿ ಸೌಂದರ್ಯದ ಸಾಕ್ಷಾತ್ಕಾರ ಮಾಡಿಕೊಂಡಿದ್ದಾರೆ. ಅದರಿಂದ ತಮ್ಮ ಸೌಂದರ್ಯ ದೃಷ್ಟಿಯನ್ನು ಉಜ್ವಲಗೊಳಿಸಿಕೊಂಡಿದ್ದಾರೆ. ಆ ಉಜ್ವಲತೆಗೆ ಪ್ರಕೃತಿಯ ರೂಪರಾಗಗಳಲ್ಲೊಂದು ಆಕಾರ ಬಂದಿದೆ. ಈ ಸಾಧನೆಯ ಮೂಲದಲ್ಲಿ ಕವಿಯು ಸರ್ವಮನಸ್ಸಿನ ಅವಸ್ಥೆಗಳಲ್ಲಿ ಪ್ರಕೃತಿಯನ್ನು ಕಂಡ ಕುರುಹು ಕಾಣುತ್ತದೆ. ಇದಕ್ಕೆ ಲಕ್ಷ್ಯವಾಗಿ ಬೇಂದ್ರೆಯವರ ‘ಮೂಡಲಮನೆಯಾ

ಮುತ್ತಿನ ನೀರಿನ ಎರಕವ ಹೊಯ್ದಾ' ಎಂಬ ಚರಣದಲ್ಲಿ ಅಧ್ಯಾಹೃತವಾಗಿರುವ ಕರ್ತೃವಿನ ಕಲ್ಪನೆಯನ್ನೂ ಸಂಜೆಯ ವರ್ಣನೆಯನ್ನೂ ನೋಡಬೇಕು.[೨]

ಅಣ್ಣಾರಾಯರು ಒಂದು ಕವಿತೆಯ ಸಾಲನ್ನು ಪ್ರವೇಶಿಸಲು ನಡೆಸುವ ಪೂರ್ವತಯಾರಿಯು ಒಂದು ಕವಿತ್ವದ ಬಗೆಯನ್ನು ಕಟ್ಟಿಕೊಡುತ್ತದೆ. ದೀರ್ಘವಾದ ಪೀಠಿಕೆಯಲ್ಲಿ ಸ್ಪುಟವಾದ ವಿವರಣೆಯನ್ನು ನೀಡುತ್ತಾರೆ. ಸಾಮಾಜಿಕ ಕವಿತೆಗಳನ್ನು ವಿವೇಚಿಸುತ್ತಾ ಬ್ರಿಟಿಷ್ ರಾಜ್ಯದ ದಬ್ಬಾಳಿಕೆ ಒಂದು ಕಡೆಯಾದರೆ ಗಾಂಧಿಯ ಶಾಂತಿಯ ಮಂತ್ರ ಇನ್ನೊಂದು ಕಡೆಗೆ. ಈ ಎರಡರ ನಡುವೆ ಸಮಾಜದ ಮೇಲೆ ವಸಾಹತುಶಾಹಿಯ ಪ್ರಭಾವ ಅತ್ಯಂತ ಘೋರತರವಾಗಿದೆ. 'ಭೂಮಿ ತಾಯಿಯ ಚೊಚ್ಚಿಲ ಮಗ', 'ಅನ್ನಾವತಾರ', 'ಕೆಲಸವಿಲ್ಲದವರ ಹಾಡು', 'ತುತ್ತಿನ ಚೀಲ', 'ನರಬಲಿ' ಈ ಎಲ್ಲಾ ಕವಿತೆಗಳು ಅಂದಿನ ವಾಸ್ತವ ಸತ್ಯಗಳನ್ನು ತೆರೆದಿಟ್ಟ ಕವಿತೆಗಳು. ಬಂಡವಾಳಶಾಹಿಯ ಅಧಿಕಾರದ ವಿರುದ್ಧ ಸಾಮಾಜಿಕ ಎಚ್ಚರಗಳನ್ನು ಈ ಕವಿತೆಗಳಲ್ಲಿ ನೀಡುವುದನ್ನು ವಿವರಿಸಿದ್ದಾರೆ. ಕವಿಗೆ ಕವಿತೆ ಕೇವಲ ಬರಹವಾಗಿ ಮಾತ್ರ ರೂಪುಗೊಳ್ಳದೆ ಅದೊಂದು ಆ ಕಾಲದ ಜವಾಬ್ದಾರಿ ಎಂಬಂತೆ ರಚಿಸಿರುವುದನ್ನು ಗಮನಿಸಿದ್ದಾರೆ.

೨. ಆಪ್ತವಲಯದ ಮೂಲಕ ಕವಿ-ಕೃತಿ ಚಿಂತನೆ

ಬೇಂದ್ರೆ ಅವರ ಸಾಹಿತ್ಯವು 'ಕಟ್ಟುವಿಕೆ'ಯ ನೆಲೆಯಲ್ಲಿ ರೂಪಿತವಾಗಿದೆ. ಇಲ್ಲಿ ಸ್ನೇಹಿತರು, ಪರಿಚಿತರು, ಅಭಿಮಾನಹೊಂದಿದವರು ಇವರೆಲ್ಲಾ ತಮ್ಮ ಕ್ಷೇತ್ರದ ವಿವಿಧ ಆಯಾಮಗಳೊಂದಿಗೆ ಚರ್ಚಿಸುತ್ತಾ ಬಂದಿದ್ದಾರೆ. ಧಾರವಾಡದಿಂದ ಪುಣೆಯವರೆಗೆ ಇಂತಹ ಓದುಗವಲಯದ ವಿಸ್ತಾರವಾದ ಅಧ್ಯಯನವನ್ನು ಕಾಣಬಹುದು.

ಬೇಂದ್ರೆ ಅವರ ಸಾಹಿತ್ಯ ಕುರಿತು 'ಜೀವನ ಪತ್ರಿಕೆ'ಯಲ್ಲಿ ನಡೆಸಿದ ಅಧ್ಯಯನಗಳನ್ನು ಈ ರೀತಿ ಗಮನಿಸಬಹುದು. ಮಾಸ್ತಿ ಅವರ ಜೀವನ ಪತ್ರಿಕೆಯಲ್ಲಿ ಜೂನ್ ೧೯೪೬ರ ವಿಶೇಷ ಸಂಚಿಕೆಯಾಗಿ ಕೆಲವು ಲೇಖನಗಳು ಪ್ರಕಟಗೊಂಡವು. ಹತ್ತೊಂಬತ್ತು ಲೇಖನಗಳಲ್ಲಿಯೂ ಕೂಡ ಕವಿಯನ್ನು ತಾವು ಕಂಡ ಆಪ್ತತೆಯಲ್ಲಿ ಉಲ್ಲೇಖಿಸಿದ್ದಾರೆ. ಡಿ.ವಿ.ಜಿ, ಗೋವಿಂದ ಪೈ, ಡಿ. ವಿ ಕರ್ವೆ ಇವರು ತಮ್ಮ ಹರಕೆಯನ್ನು ನುಡಿದಿದ್ದಾರೆ. ಪ್ರಾರಂಭದಲ್ಲಿ ಶ್ರೀ ಅರವಿಂದರ ಆಶೀರ್ವಾದವಿದೆ. ಅರವಿಂದರಿಗೂ ಬೇಂದ್ರೆ ಅವರಿಗೂ ಗುರುಕಾರುಣ್ಯದ ನಂಟು. ವಾಮನ ಬೇಂದ್ರೆ ಅವರು ತಮ್ಮ ಸಂಪಾದಕರ ಭೂಮಿಕೆಯಲ್ಲಿ ಈ ರೀತಿ ಪರಿಚಯಿಸಿದ್ದಾರೆ.

> ಬೇಂದ್ರೆಯವರು ಅವರ ಹತ್ತನೆಯ ವರ್ಷದಿಂದಲೇ-ರವೀಂದ್ರನಾಥ ಟಾಗೋರ, ರಾಮಕೃಷ್ಣ ಪರಮಹಂಸ, ರಾಮತೀರ್ಥ, ದಯಾನಂದ, ಸಮರ್ಥ ರಾಮದಾಸ, ಶ್ರೀ ಬ್ರಹ್ಮಚೈತನ್ಯ ಗೋಂದವಲೇಕರ ಮಹಾರಾಜ ಅವರ ಜೀವನ ಮತ್ತು ಸಾಹಿತ್ಯಕ್ಕೆ ಆಕರ್ಷಿತರಾಗಿದ್ದರು. ಆಧ್ಯಾತ್ಮಿಕ ವಾತಾವರಣ ಅಜ್ಜಿ ಮತ್ತು ತಾಯಿಯ ಸಹವಾಸದಿಂದ ಲಭಿಸಿತ್ತು. ೧೯೧೪ರಲ್ಲಿ ಪುಣೆ ತಲುಪಿ, ಕಾಲೇಜ ವಿದ್ಯಾಭ್ಯಾಸ ಮಾಡಲು ತೊಡಗಿದ ಬೇಂದ್ರೆಯವರಿಗೆ ಶ್ರೀ ಅರವಿಂದರ 'ಆರ್ಯ' ಪತ್ರಿಕೆ ಲಭಿಸಿತು. ಅದರಲ್ಲಿ ಪ್ರಕಟಗೊಂಡ ಎಲ್ಲ ಸಾಹಿತ್ಯ ಓದಿ

> ಬೇಂದ್ರೆಯವರು ಶ್ರೀ ಅರವಿಂದರನ್ನು ತಮ್ಮ ಆಧ್ಯಾತ್ಮಿಕ ಮಾರ್ಗದ ಸದ್ಗುರುಗಳೆಂದು ಸ್ವೀಕರಿಸಿದರು [೧೩]

ತಮ್ಮ ಸಂಪಾದನಾ ಭೂಮಿಕೆಯಲ್ಲಿ ಈ ರೀತಿ ಪರಿಚಯಿಸಿದ್ದಾರೆ. ಮುದವೀಡು ಕೃಷ್ಣರಾವ್ ಅವರು ಬೇಂದ್ರೆ ಅವರನ್ನು 'ನನ್ನ ಮುದ್ದು ಮೋಹಕ ಕವಿ' ಎಂದು ಸಮರ್ಥಿಸಿದ್ದಾರೆ. ತರುಣ ಬೇಂದ್ರೆ ಅವರನ್ನು ಭೇಟಿಯಾದ ನೆನಪುಗಳಲ್ಲಿ ಪ್ರತಿಭೆಯ ದರ್ಶನವನ್ನು ಆಲೂರು ವೆಂಕಟರಾಯರ ಜೊತೆಗೂಡಿ ಪಡೆದ ರಸಜ್ಞತೆಯನ್ನು ಈ ಲೇಖನದಲ್ಲಿ ತಿಳಿಸಿದ್ದಾರೆ. ಕನ್ನಡ ಸಾಹಿತ್ಯದಲ್ಲಿ ಬೇಂದ್ರೆ ಅವರ ಸ್ಥಾನವನ್ನು ಮುದವೀಡರು ಅಂದಿನಿಂದ ತಾವು ಗಮನಿಸಿದಂತೆ ಯಾವುದೇ ಹೊಗಳಿಕೆ ಇಲ್ಲದೆ ಪರಿಚಯಾತ್ಮಕ ನೆಲೆಯಲ್ಲಿ, ಹಿರಿತನದ ಆಪ್ತತೆಯಲ್ಲಿ ಹೇಳುತ್ತಾರೆ. ತಾವು ಗಮನಿಸಿದಂತೆ ಕವಿಯನ್ನು ಮೆಚ್ಚುವವರ ಜೊತೆ ಕುವಿಚಾರದೊಂದಿಗೆ ಹೀಗಳೆಯುವ ಓದುಗರನ್ನು ಇಲ್ಲಿ ನೆನಪಿಸಿಕೊಳ್ಳುತ್ತಾ ಅದರ ಮೂಲ ಕಾರಣವನ್ನು ಇಲ್ಲಿ ಈ ರೀತಿ ಚಿಂತಿಸಿದ್ದಾರೆ.

> ಬೇಂದ್ರೆಯವರ ಪ್ರತಿಭೆಯನ್ನು, ಕವಿತ್ವವನ್ನು ಕಾವ್ಯಗಳನ್ನು ಅಣಕಿಸಿ ಉಪಹಾಸ ಮಾಡುತ್ತಿದ್ದ ಕಾಲವೊಂದು ಇದ್ದುದನ್ನು ನಾನು ಕಣ್ಣಾರೆ ಕಂಡಿದ್ದೇನೆ. ಯಥಾರ್ಥ ಪರಿಜ್ಞಾನದ ಅಭಾವದ ಮೂಲಕವೋ ಪರ ಪ್ರತ್ಯಯನೇಯ ಬುದ್ಧಿ ಪ್ರಭಾವದಿಂದಲೋ, ಬೇಂದ್ರೆಯವರ ಗುಣಗಳನ್ನು ಮೊದಮೊದಲು ಅರಿಯದವರಾಗಿದ್ದ ಎಷ್ಟೋ ಜನರು ಅವರ ಕೃತಿಗಳಿಗೆ ಮೋಹಗೊಂಡು ಮನಸೋತು ಮರುಳಾಗಿರುವ ದೃಷ್ಟಾಂತಗಳೂ ಉಂಟು.[೧೪]

ಕಾವ್ಯದ ಅಭ್ಯಾಸಿಗಳಿಗೆ ಬೇಂದ್ರೆ ಸಾಹಿತ್ಯ ತೋರಿದ ರೀತಿ, ಬದಲಾವಣೆಗಳನ್ನು ಕೆಲವು ಸೂಕ್ಷ್ಮತೆಗಳೊಂದಿಗೆ ಪರಿಚಯಿಸುತ್ತಾರೆ. ಅಧ್ಯಯನವಿಲ್ಲದ ಅಭಿಪ್ರಾಯಗಳು ವ್ಯರ್ಥವೆಂಬುದು ಪ್ರಸ್ತುತ ಕೂಡ ಸಾಹಿತ್ಯ ಕ್ಷೇತ್ರವನ್ನು ಗಮನಿಸಬೇಕಾದ ಅಗತ್ಯತೆಗಳನ್ನು ಇಲ್ಲಿ ಸ್ಪಷ್ಟಪಡಿಸಿರುವರು.

ಆರ್ಯೆಯರ್ ಶ್ರೀನಿವಾಸೈಂಗಾರ್ ಅವರು ಬೇಂದ್ರೆ ಅವರನ್ನು 'ಉಪಾಸಕ ಬೇಂದ್ರೆ' ಎಂದು ಪರಿಗಣಿಸಿ ಆರಾಧನಾ ದೃಷ್ಟಿಯಲ್ಲಿ ವರ್ಣಿಸಿದ್ದಾರೆ. ಇಲ್ಲಿ ಕವಿ ಕೇಂದ್ರಿತ ದೃಷ್ಟಿಯಿಂದ ಸಾಹಿತ್ಯವು ನಗಣ್ಯವಾಗಿದೆ ಎನ್ನಬಹುದು. ನಿಜವಾದ ಓದುಗನು ಕವಿಯ ಮುಖೇನ ಸಾಹಿತ್ಯವನ್ನು, ಇಲ್ಲವೇ ಸಾಹಿತ್ಯ ಮುಖೇನ ಕವಿಯನ್ನು ದರ್ಶನ ಮಾಡುವ ಆಪ್ತಚಿಂತನೆಯು ಕಂಡು ಬರುತ್ತದೆ. ಆದರೆ ಕೆಲವು ಬರಹಗಳು ಅಭಿಮಾನದ ನೆಲೆಯಲ್ಲಿಯೇ ನಿಂತುಹೋಗುವ ಕಾರಣಗಳಿವೆ.

ಅನಂತಪದ್ಮನಾಭರಾವ್ ಎಂ. ಎಸ್. ಅವರ ದೃಷ್ಟಿಯಲ್ಲಿ ಬೇಂದ್ರೆ ಅವರು 'ತಪಸ್ವಿ'ಯಂತೆ ಕಂಡಿದ್ದಾರೆ. ಕನ್ನಡ ಸಾಹಿತ್ಯದೊಂದಿಗೆ ಬೇಂದ್ರೆ ಅವರ ಸಂಬಂಧವನ್ನು ಅಪೂರ್ವ ಕಾಣಿಕೆ ಎಂಬಂತೆ ಕಂಡಿದ್ದಾರೆ. ಸಾಮಾನ್ಯರಿಗಿಂತ ಕವಿ ಇಲ್ಲಿ ವಿಶೇಷತೆ ಪಡೆಯುತ್ತಾರೆ. ಇವರ ಜ್ಞಾನ ಪುಟಕ್ಕಿಟ್ಟ ಚಿನ್ನದಂತೆ ಪ್ರಕಾಶ! ಭೂಮಿಗೆ ಆಗಮಿಸುವ ತಪಸ್ವಿಯ ವರ್ಣನೆ ಪುರಾಣ ಕಥೆಗಳಂತೆ ವರ್ಣಿತವಾಗಿದೆ.

'ಮನೋಭಾವನೆಯ ಬಳ್ಳಿ' ಎಂದು ವರ್ಣಿಸುವ ದೇಸಾಯಿ ದತ್ತಮೂರ್ತಿ ಅವರು ಬೇಂದ್ರೆ ಎಂಬ ಕವಿಯು ತನ್ನೊಳಗೆ ದರ್ಶನವಾಗುವ ಆಪ್ತತೆ, ಪೂರ್ವಕವಿಗಳೊಂದಿಗೆ ಬೆಸೆಯುವ ನಂಟು, ಸಮಕಾಲೀನ ಲೇಖಕರು ಪಡೆದುಕೊಂಡ ಸಾಹಿತ್ಯ ಸ್ಪರ್ಷ ಇಲ್ಲಿ ಉಲ್ಲೇಖಿಸಿದ್ದಾರೆ.

ವಾಸುದೇವ ಭೂಪಾಲಂ ಅವರು ಬೇಂದ್ರೆ ಅವರನ್ನು 'ಮಾತುಗಾರ ಬೇಂದ್ರೆ'ಯಾಗಿ ಗಮನಿಸಿದ್ದಾರೆ. ಕವಿಯ ಧ್ವನಿಯ ಶಕ್ತಿಯನ್ನು ತಿಳಿಸುತ್ತಾ ಸ್ಫೂರ್ತಿ, ತೀಕ್ಷ್ಣಬುದ್ಧಿ, ಉದ್ರೇಕಗಳ ತ್ರಿವೇಣಿ ಸಂಗಮ ಎಂದು ಸೂಚಿಸುತ್ತಾರೆ. ಬೇಂದ್ರೆ ಅವರು ಸಾಹಿತ್ಯ ರಚನೆ ಮಾತ್ರವಲ್ಲದೇ ತನ್ನ ರಚನೆಯ ಸಾಹಿತ್ಯದಂತೆಯೇ ಬದುಕಿದ್ದರು ಎಂಬ ಸೂಕ್ಷ್ಮತೆಗಳನ್ನು ಗಮನಿಸುವಲ್ಲಿ ಯಶಸ್ವಿಯಾಗಿದ್ದಾರೆ.

ದೇಸಾಯಿ ಎಸ್. ಎಂ. ಅವರ 'ಕವಿ ಬೇಂದ್ರೆಯವರ ಹೃದಯ ಮತ್ತು ಮನಸ್ಸು' ಎಂಬ ಲೇಖನವು ವಿಮರ್ಶಾತ್ಮಕ ಚಿಂತನೆಯಾಗಿ ಅಧ್ಯಯನ ಮಾಡಬಹುದು. ಸಾಹಿತ್ಯ ಓದು ಒಂದು ಆಪ್ತತೆಯ ಸೇತುವೆಯಲ್ಲಿ ಹೊಂದಾಣಿಕೆ ಮಾಡಿಕೊಂಡಿದೆ. ಕನ್ನಡ ಸಾಹಿತ್ಯದಲ್ಲಿ ಬೇಂದ್ರೆ ಅವರ ಚಿಂತನೆಯೊಂದಿಗೆ ಹೋಲಿಕೆಯಾಗುವ ಕುವೆಂಪು ಅವರೊಂದಿಗೆ ತೌಲನಿಕ ಅಧ್ಯಯನಮಾಡಿ ಇವರನ್ನು 'ಹುಟ್ಟುಕವಿಗಳು' ಎಂದು ಗಮನಿಸಿದ್ದಾರೆ. ಬೇಂದ್ರೆ ಅವರ ವ್ಯಕ್ತಿತ್ವವನ್ನು ಅರ್ಥೈಸುತ್ತಾ ವಿ. ಸೀತಾರಾಮಯ್ಯ ಅವರು ಪ್ರಬುದ್ಧಕರ್ಣಾಟಕ ಪತ್ರಿಕೆಯ ಸಂಪಾದಕರಾಗಿ ಆಡಿದ ಮಾತುಗಳನ್ನು ಇಲ್ಲಿ ಸ್ಮರಿಸಲಾಗಿದೆ. 'ಪ್ರತಿಭೆ, ಹೃದಯಸ್ಪರ್ಶಿಯಾದ ಮಾತಿನ ಮೊನೆ-ಬೆಡಗು, ಬಳ್ಳಿಮಿಂಚಿನಂತೆ ಬೆಳಗುವ ಚಿತ್ರಭಾವಗಳ ವೈಖರಿ, ನಾಡತಾನಗಳ ಮತ್ತು ಜನಪದ ಧಾಟಿಗಳ ಛಂದೋವಿಹಾರಗಳಲ್ಲಿ ತಾಂಡವವಾಡುವ ಅವರ ಕವಿತಾವಿಲಾಸ, ನಿಂತ ಕಡೆ, ನುಡಿದ ಕಡೆ ಕಲ್ಪನೆಯ ಕೈಲಾಸವನ್ನೂ, ಅಚ್ಚಕವಿತೆಯ ಕೈವಲ್ಯಗಳನ್ನೂ ತೋರಿಸಬಲ್ಲ ಚಾತುರಿ ಕವಿತೆಯ ರುಚಿಯರಿತ ಸಹೃದಯರಿಗೆಲ್ಲ ಪರಿಚಿತವಾದವು'. ಇಲ್ಲಿ ಪ್ರತಿಭೆ ಕಾವ್ಯತತ್ತ್ವವಾಗಿ, ಅದೊಂದು ವಿಲಾಸವಾಗಿ ತನ್ನ ಪರಮೋಚ್ಚ ಉನ್ನತಿಯನ್ನು ಸಾಧಿಸಿ ಸಹೃದಯ ಓದುಗರಿಗೆ ರುಚಿಸುವ ಬಗೆಯು ಒಂದು ಛಂದಸ್ಸಿನ ಕ್ರಮದಲ್ಲಿ ನಿಯತವಾಗುವ ಪರಿಯನ್ನು ಗಮನಿಸಲಾಗಿದೆ.

ಬೇಂದ್ರೆ ಅವರ ಸಾಹಿತ್ಯ ಅಧ್ಯಯನವನ್ನೇ ಮುಖ್ಯವಾಗಿಸಿಕೊಂಡು ಶ್ರೀ. ಚಿಚ್ಚಕೋರ ಅವರು 'ಇಂದಿನ ಮಾನವನ ಬಾಳು' ಎಂಬ ಲೇಖನ ಸಿದ್ಧಪಡಿಸಿದ್ದಾರೆ. ಇಂದಿನಯುಗ, ಮಾನವನ ಬಾಳು, ಬಡವರ ಗೋಳು, ಭೌತಿಕ ಸಾಧನ, ಆಧ್ಯಾತ್ಮಿಕ ಸಾಧನ ಈ ಐದು ಅಂಶಗಳಲ್ಲಿ ಬೇಂದ್ರೆ ಅವರ ಸಾಹಿತ್ಯ ಪ್ರತಿಕ್ರಿಯಿಸುವುದನ್ನು ಗಮನಿಸಿದ್ದಾರೆ. ರಚನಾತ್ಮಕ ವಿಮರ್ಶಾ ದೃಷ್ಟಿಕೋನದಲ್ಲಿ ಕೆಲವು ಅಂಶಗಳು ಇಲ್ಲಿ ಅಧ್ಯಯನ ಮಾಡಬಹುದು.

'ಸಾಹಿತ್ಯಯೋಗಿ'ಯಾಗಿ ಬೇಂದ್ರೆ ಅವರನ್ನು ಗಮನಿಸಿದ ಶ್ರೀ. ಅಯ್ಯಂಗಾರ್ ನ. ಶ್ರೀನಿವಾಸೈಯಂಗಾರ್ ಅವರು ಪರಿಚಯಾತ್ಮಕ ನೆಲೆಯಲ್ಲಿ ಬೇಂದ್ರೆ ಅವರ ವ್ಯಕ್ತಿತ್ವವನ್ನು ಅರ್ಥೈಸಿದ್ದಾರೆ. ಕವಿಯಾಗಿ, ಲೇಖಕನಾಗಿ, ವಿಮರ್ಶಕನಾಗಿ ಬೇಂದ್ರೆ ಅವರು ಹೊಸಗನ್ನಡ ಸಾಹಿತ್ಯವನ್ನು ಪರಿಪರಿಯಾಗಿ ಬೆಳೆಸಿರುವ 'ಕನ್ನಡ ಕುಲ'ದ ಕವಿಗಳಲ್ಲಿ ಹಿರಿಯ ಹೆಸರು ಎಂಬುದು ಇವರ ಅಭಿಪ್ರಾಯ. ಈ ಅಂಶಕ್ಕೆ ಬೇಕಾಗುವ ಕವಿಯ ಸಾಹಿತ್ಯ ಸೃಜನಶೀಲತೆಯ ಹಲವು ಆಯಾಮಗಳನ್ನು, ಅಧ್ಯಯನದ ವಿವಿಧ ದೃಷ್ಟಿಕೋನಗಳೊಂದಿಗೆ ಬೇಂದ್ರೆ ಅವರು 'ಅಂಬಿಕಾತನಯದತ್ತ'ರಾದ ಪರಿಯನ್ನು ವ್ಯಕ್ತಿತ್ವದ ಹಿನ್ನಲೆಯಲ್ಲಿ ಪರಿಚಯಿರುವರು.

ಬೇಂದ್ರೆ ಅವರ ಕಾವ್ಯದ ತತ್ವವನ್ನು ಅತ್ಯಂತ ಸೂಕ್ಷ್ಮವಾಗಿ ಪರಿಗ್ರಹಿಸಿದವರು ಗೌರೀಶಕಾಯ್ಕಿಣಿ ಅವರು. ಇವರು ರಚಿಸಿದ 'ಕಂಪಿನ ಕರೆ' ಎಂಬ ವಿಮರ್ಶಾ ಕೃತಿಯ ಪೂರ್ವಪೀಠಿಕೆಯಂತೆ 'ಕವೀಂದ್ರ ಬೇಂದ್ರೆ' ಎಂಬ ಲೇಖನ ಸಿದ್ಧಗೊಂಡಿದೆ. ಬೇಂದ್ರೆ ಅವರನ್ನು ಕರ್ನಾಟಕದ ರವೀಂದ್ರರು, ಕನ್ನಡದ ಕವೀಂದ್ರರು ಎಂದು ಕರೆಯುವ ಜೊತೆಗೆ ಅದಕ್ಕೆ ಕೆಲವು ಸಾಕ್ಷ್ಯಾಧಾರವೆಂಬಂತೆ ಭಾರತೀಯ ನೆಲೆಯಲ್ಲಿ ಬೇಂದ್ರೆ ಅವರಲ್ಲಿ ತಾಳಿದ ವಸಾಹತುಶಾಹಿ ಚಿಂತನೆಗಳನ್ನು ಹಾಗೂ ಕನ್ನಡಿಕರಿಸುವ ಕಾವ್ಯದ ಸೂಕ್ಷ್ಮತೆಗಳನ್ನು ಓದುಗರ ರಸಿಕ ಮನೋವೃತ್ತಿಯಾಗಿ ಗಮನಿಸಿರುವರು. ಬೇಂದ್ರೆ ಅವರಲ್ಲಿ ನಿಹಿತವಾಗಿದ್ದ ಚಮತ್ಕಾರಿಕ ಪ್ರತಿಭೆ, ಐಶ್ವರ್ಯ ಸಂಪನ್ನವಾದ ಅವರ ಕವಿತ್ವ, ಶಬ್ದಶಕ್ತಿ, ರೂಪಕ ಉತ್ಪ್ರೇಕ್ಷೆಗಳ ವಿಪುಲ ವಿಲಾಸ ಇದು. ಕನ್ನಡದ ಜೊತೆಗೆ ಮರಾಠಿ ಭಾಷೆಯೊಂದಿಗೆ ಬೆರೆತ ಪರಿಪಕ್ವತೆ. ಇವೆಲ್ಲಾ ಬೇಂದ್ರೆಯವರ ಸಾಹಿತ್ಯ ದರ್ಶನದ ಮುಖಗಳಂತೆ ಅರ್ಥೈಸಿದ್ದಾರೆ. ಅತ್ಯಂತ ಪ್ರಭಾವಿಯಾದ ಚಮತ್ಕಾರಿಕ ಪ್ರತಿಭೆಯ ಅಲೌಕಿಕ ಸೊಗಸುಗಾರಿಕೆಯ ವ್ಯಕ್ತಿತ್ವ, ಐಶ್ವರ್ಯ ಸಂಪನ್ನವಾದ ಅವರ ಕವಿತ್ವ ಹಾಗೂ ಸವ್ಯಸಾಚಿಯಾದ ವಿದ್ವತ್ತೆ ಈ ಅಂಶಗಳೊಂದಿಗೆ ಬೇಂದ್ರೆ ಅವರ ಕಾವ್ಯದಲ್ಲಿನ ಪ್ರತಿಭೆ, ಔಚಿತ್ಯ ಶೈಲಿಯ ವಿಭಿನ್ನ ಸ್ವರೂಪವನ್ನು ಸಮಕಾಲೀನ ವಿವಿಧ ಕವಿಗಳ ಕಾವ್ಯದ ಹಿನ್ನಲೆಯಾಗಿ ಗ್ರಹಿಸಿ ಅರ್ಥೈಸಿದ್ದಾರೆ ಎನ್ನಬಹುದು.

ಕನ್ನಡ ಸಾಹಿತ್ಯದ ಕಾವ್ಯಕ್ಷೇತ್ರದಲ್ಲಿ ಬೇಂದ್ರೆ ಅವರು ಮೂಡಿಸಿದ ವಿಶಿಷ್ಟ ಛಾಪನ್ನು ರಾಘವೇಂದ್ರ ಇಟಗಿ ಅವರು 'ಕವಿಬೇಂದ್ರೆ'ಯಾಗಿ ಸಾಹಿತ್ಯದ ಪರಂಪರೆಯೊಳಗೆ ಸೇರಿರುವ ಕ್ರಮವನ್ನು ಅವರ ಕಾವ್ಯಶಕ್ತಿಯ ಮೂಲಕ ಚಿಂತನೆ ನಡೆಸಿದ್ದಾರೆ. ಕವಿತ್ವಗಳಿಸಲು ಬೇಂದ್ರೆ ಋಷಿಯರೂಪ ವಾಗುತ್ತಾರೆ ಎಂಬುದನ್ನು ಪ್ರತಿಪಾದಿಸುತ್ತಾ ಕಾವ್ಯ ಬಗೆಗೊಳ್ಳುವ ನೆಲೆಯನ್ನು ಆಪ್ತವಾಗಿ ಪರಿಚಯಿಸುತ್ತಾರೆ. ಅದೊಂದು ಕಾವ್ಯದ ಶಕ್ತಿಯನ್ನು ನವೋದಯದ ಚಿಂತಕರು ತನ್ನ ಒಳಗಣ್ಣಿನ ಉಪಾಸನೆಯಂತೆ ಗಮನಿಸಿದರು. ವಿಮರ್ಶಕರಿಗೆ ಅದೊಂದು ಆದರ್ಶಸಾರವೆಂಬಂತೆ ತಲೆದೋರಿ ನವೋದಯದ ಕವಿಗಳನ್ನೆಲ್ಲಾ ಆರಾಧನೆ ಮತ್ತು ಆದರ್ಶದಲ್ಲಿ ತೀರ್ಮಾನಿಸಲು ಯತ್ನಿಸುತ್ತಾರೆ. ಪಾಶ್ಚಾತ್ಯ ಚಿಂತನೆಗಳು ನವೋದಯದ ತಾತ್ವಿಕತೆಯ ಮೂಸೆಯಲ್ಲಿ ಒಂದು ಅಧ್ಯಯನ ಇಲ್ಲವೇ ಅನುವಾದ ರೂಪಾಂತರವಾಗಿ ಒಪ್ಪಿಕೊಳ್ಳುವ ಪರಿಯಾಗಿ ಮೂಡಿ ಬಂದಿರುವುದು ಸಹಜ.

> ಪಂಪ ಆಸ್ಥಾನಕವಿಯಾದ, ನಾರಾಣಪ್ಪ 'ಗುಡಿ'ಯ ಕವಿಯಾದ ಮುದ್ದಣ ನಲ್ಲೆಯ
> ಕವಿಯಾದ ಬೇಂದ್ರೆ ಜನತೆಯ ಕವಿಯಾಗಿದ್ದಾರೆ. ಆದರೆ ಎಲ್ಲರೂ ನುಡಿಯುಪಾಸಕರೆ![೧೫]

ಬೇಂದ್ರೆ ಅವರು ದಿನ ಬಳಕೆಯ ಭಾಷೆಯಲ್ಲಿ ಸಾಹಿತ್ಯ ರಚಿಸಿ ಜನತೆಗೆ ಹತ್ತಿರವಾದರು. ಇಲ್ಲಿ ಲೇಖಕರು ಕವಿಯನ್ನು ಆರಾಧನಾ ವ್ಯಾಯೋಗದಲ್ಲಿ ನಿರ್ವಚಿರುವುದು ಪ್ರತಿ ಪದದಲ್ಲೂ ಗಮನಿಸಬಹುದು. ಕವಿ ಬೇಂದ್ರೆ ಅವರು ಕನ್ನಡ ಸಾಹಿತ್ಯವನ್ನು ಕಂಡಂತೆ ವಿಶ್ವಸಾಹಿತ್ಯವನ್ನು ತನ್ನ ಅನುಭವ ತೆಕ್ಕೆಗೆ ತೆಗೆದುಕೊಂಡದ್ದು ಸಹಜ. ಆದ್ದರಿಂದಲೇ ಅನುವಾದ, ರೂಪಾಂತರಗಳು ಕನ್ನಡಿಸುವ ಶಕ್ತಿಗೆ ದಕ್ಕಿದ್ದು. ಕವಿಯನ್ನು ಒಂದು ಭಾಷೆಗೆ ಸೀಮಿತಗೊಳಿಸುವ ಅರಾಧನೆಯ ಅಧ್ಯಯನಗಳು ಕಡಿಮೆಯಾಗಬೇಕಾದ ಅನಿವಾರ್ಯತೆ ಇದೆ.

ಕೃಷ್ಣಕುಮಾರ ಅವರು ಕನ್ನಡ ಸಾಹಿತ್ಯಕ್ಕೆ ಗೆಳೆಯರ ಗುಂಪಿನ ನೆಲೆ–ಬೆಲೆಯನ್ನು ತಾತ್ವಿಕಗೊಳಿಸುತ್ತಾ ಅದರ ಹಾದಿಯು 'ಕವಿ ಬೇಂದ್ರೆಯವರ ಆದರ್ಶ ದೃಷ್ಟಿ' ಎಂಬುದನ್ನು ಪ್ರತಿಪಾದಿಸಿದ್ದಾರೆ. ಒಬ್ಬ ಕವಿ ಕನಸುಗಾರನಾಗಿ ಬೌದ್ಧಿಕ ಸಂಪತ್ತನ್ನು ಒಂದು ಗುಂಪಾಗಿ ರೂಪಿಸುವ ಪರಿಯು ಏಂದಿಗೂ ಹಾಳಾಗದು ಎಂಬುದು ಇವರ ವಾದ. ಹಳ್ಳ ಹಿಡಿದರೂ ಸಾಧನೆಗಳ ಸೃಷ್ಟಿ ಸಾಕ್ಷೀಭೂತವಾಗಿ ನಿರ್ವಹಿಸುತ್ತವೆ ಎಂಬುದನ್ನು ಚರ್ಚಿಸುತ್ತಾರೆ. ರವಿಂದ್ರರು ವಿಶ್ವ ಭ್ರಾತೃತ್ವದ ಆದರ್ಶವನ್ನು ಎತ್ತಿ ಹಿಡಿದು ವಿಶ್ವಭ್ರಾಂತಿಯನ್ನು ರೂಪಿಸಿದ ಬಗೆಯು ಕನ್ನಡದ ಗೆಳೆಯರ ಗುಂಪಿಗೆ ಇತ್ತು ಎಂಬುದನ್ನು ಸ್ಪಷ್ಟಪಡಿಸುತ್ತಾರೆ. ಇವರೂ ಸಹ ಗೆಳೆಯರ ಗುಂಪಿನ ಬೆಳಕು ಕಂಡವರಾಗಿ ತಮ್ಮ ಅಭಿಪ್ರಾಯವನ್ನು ಈ ರೀತಿ ತಿಳಿಸಿದ್ದಾರೆ.

> ಈ ಬೆಳಕಿನ ಝಳಕನ್ನು ಸ್ವಲ್ಪವಾದರೂ ಕಂಡವರಲ್ಲಿ ನಾನೊಬ್ಬ ಎಂದು ಭಾವಿಸಿಕೊಂಡಿದ್ದೇನೆ. ನಾನು ಸ್ವಲ್ಪಮಟ್ಟಿಗೆ ವ್ಯಕ್ತಿತ್ವವಾದಿಯಾದುದರಿಂದಲೋ ಏನೋ ಗೆಳೆಯರ ಗುಂಪು ಒಡೆಯುವ ಮುನ್ನವೇ ನಾನೊಬ್ಬನೇ ಹೊರಬೀಳುವ ಪ್ರಸಂಗ ಬಂತು. ಗುಂಪಿನವರು ನನ್ನನ್ನು ಸಿಡಿದು ಹೋದನೆಂದು ಭಾವಿಸಿದರು; ಕೆಲವರು ಒಳ್ಳೆಯದೇ ಆಯ್ತೆಂದರು. ಆದರೆ ಹೊರಬಿದ್ದ ನನಗೂ ಎಂತಾದರೂ ಗುಂಪಿನ ಆದರ್ಶ ಕೈಗೂಡಲಿ ಎಂದೇ ಅಂತರಾಸೆ ಇತ್ತು. .... ಬೇಂದ್ರೆಯವರೋ ಅನೇಕ ಮೌಲಿಕ ವಸ್ತುಗಳನ್ನೂ ಕಳೆದುಕೊಂಡೂ ಅವುಗಳ ಕಳೆ ಉಳಿಸಿಕೊಂಡಿದ್ದಾರೆ; ಹಾಗೇ ಗೆಳೆಯರ ಗುಂಪು. ಎಲ್ಲ ಹಿರಿಯರಾದರ್ಶಗಳ ಸೋಲಿನಲ್ಲೇ ಅವುಗಳ ಮುಂದಿನ ಗೆಲುವೂ ಮಡಗಿರುವುದಂತೆ. ಗೆಳೆಯರ ಗುಂಪಿನ ಕನಸೂ ಇನ್ನೂ ಎಷ್ಟೋ ತಲೆಮಾರುಗಳಾಚೆಯ ಕನ್ನಡಕುವರರಿಗಾಗಿ ಮೀಸಲಾಗಿದೆಯೆನ್ನುವ.[೧೬]

ಇಲ್ಲಿ ಲೇಖಕರು ಕೆಲವು ಸೂಕ್ಷ್ಮಗಳನ್ನು ಬೇಂದ್ರೆ ಅವರು ಬದುಕಿದ್ದಾಗಲೇ ಅವರಿಗರ್ಪಿಸಿದ ಲೇಖನವಾಗಿಯೇ 'ಗೆಳೆಯರ ಗುಂಪು' ಎಂಬುದು ಮುಂದಿನ ಪೀಳಿಗೆಯ ಕೈಪಿಡಿಯಾಗುವ ಪರಿಯಲ್ಲಿ ಅದರ ವ್ಯಕ್ತಿಗಳು ದೂರಾದರೂ ಅದರ ಆದರ್ಶ ಅಳಿಯದು ಎಂಬ ಸಂಕೇತವನ್ನು ರೂಪಿಸುತ್ತಾರೆ. ಪ್ರಸ್ತುತ ಕನ್ನಡ ಸಾಹಿತ್ಯಕ್ಕೇ ಮೀಸಲಾದ ನೂರಾರು ಗುಂಪುಗಳು ಬರಲು ಗೆಳೆಯರ ಗುಂಪಿನ ಆದರ್ಶ ಅತ್ಯಂತ ಸೂಕ್ತ ವೇದಿಕೆಯಾಗಿ ಚಿಂತಿಸುವುದನ್ನು ಕಾಣಬಹುದು.

ಬೇಂದ್ರೆ ಅವರಿಗೆ ಮಹಾರಾಷ್ಟ್ರದ ಸಂಬಂಧ ಅತ್ಯಂತ ಆಪ್ತವಾಗಿಯೇ ಇದ್ದುದನ್ನು ಅವರ ಮರಾಠಿ ಸಾಹಿತ್ಯ ಹಾಗೂ ಅಲ್ಲಿನ ನಂಟುಗಳ ಅಧ್ಯಯನ ಮಾಡಿದಾಗ ಸ್ಪಷ್ಟವಾಗಿಯೇ ತಿಳಿಯುತ್ತದೆ. ಶ್ರೀ ಪ್ರಭಾಕರ ಹರಿ ಖಾಡಿಲಕರ ಅವರು ಮರಾಠಿಯಲ್ಲಿ ರೂಪಿಸಿದ 'ಶಾರದ ಮಂಡಳ'ವು ಕನ್ನಡದಲ್ಲಿ ಗೆಳೆಯರ ಗುಂಪಾಗಿ ಜಯಕರ್ನಾಟಕದಂತಹ ಪತ್ರಿಕೆಯ ಜೀವವಾಗಿ ಹೊಸ ಹುಟ್ಟು ಕಂಡ ಬಗೆಯನ್ನು ಆಶಯದಂತೆ ಕಂಡಿರುವರು. ಇಲ್ಲಿ ಬೇಂದ್ರೆ ಅವರು ಕರ್ನಾಟಕ ಏಕೀಕರಣಕ್ಕಾಗಿ ಶ್ರಮಿಸಿದ ಶ್ರಮವನ್ನು ಸ್ಮರಿಸುತ್ತಲೇ ದ್ರಾವಿಡ ಮೂಲವಾದ ಮಹಾರಾಷ್ಟ್ರ ಹಾಗೂ ಕರ್ನಾಟಕಗಳು ಒಂದೇ ಪ್ರದೇಶವಾದರೆ ತುಂಬಾ ಒಳಿತೆಂಬ ಚಿಂತನೆಯನ್ನು ೧೯೧೨ರಿಂದ ಎರಡೂ ರಾಜ್ಯಗಳನ್ನು ತಾವು ಗ್ರಹಿಸಿದ ನೆಲೆಯನ್ನು ಸ್ಪಷ್ಟಪಡಿಸಿದ್ದಾರೆ.

ಒಂದಿಷ್ಟು ಭಾಷಾಭಿನ್ನತ್ವವು ಇದ್ದರೂ ಸಾಂಸ್ಕೃತಿಕ, ಭೌಗೋಳಿಕ, ಆರ್ಥಿಕ, ಅಖಂಡತ್ವದ ಪ್ರಮಾಣವು ಬಹಳೇ ದೊಡ್ಡದಾಗುತ್ತದೆ. ಆದ್ದರಿಂದ ಕರ್ನಾಟಕ ಮತ್ತು ಮಹಾರಾಷ್ಟ್ರಗಳು ನಾಳೆ ಎಂದಾದರೊಮ್ಮೆ ಹತ್ತಿಪ್ಪತ್ತು ವರ್ಷಗಳಲ್ಲಿ ಒಂದಾಗಬಹುದೆಂಬ ನನ್ನ ಮನಸ್ಸಿನೆದುರು ಕಾಣ ಬರುತ್ತಿದೆ. ನನ್ನ ಮತ್ತು ಬೇಂದ್ರೆಯವರ ಸ್ಥಳಾಂತರವನ್ನೂ ಮತಾಂತರವನ್ನೂ ಲಕ್ಷ್ಯದಲ್ಲಿಟ್ಟುಕೊಂಡೇ ನಮ್ಮಿಬ್ಬರಲ್ಲಿರುವ ಸಮವಿಚಾರ ಪರಂಪರೆಯು ಇರುವುದರಿಂದ ಬೇಂದ್ರೆಯವರ ಕಾವ್ಯ ಪ್ರತಿಭೆಯು ನನ್ನ ಸ್ವಪ್ನಕ್ಕೆ ಮೂರ್ತರೂಪಕೊಟ್ಟೀತೆಂದು ನಾನು ನಂಬಿದ್ದೇನೆ.[೧೭]

ಇಲ್ಲಿ ಬೇಂದ್ರೆ ಅವರ ಕನ್ನಡ ಸಾಹಿತ್ಯದ ಜೊತೆಗೆ ಮರಾಠಿ ಸಾಹಿತ್ಯವು ಎರಡೂ ರಾಜ್ಯಗಳನ್ನು ಬೆಸೆಯುವ ಏಕೀಕರಣ ಚಿಂತನೆಯು ಇರುವ ಸಾಹಿತ್ಯ ಗ್ರಹಿಕೆಯು ಆಪ್ತವಾಗಿ ಇಲ್ಲಿ ನಿರೂಪಿಸಿರುವ ಬಗೆಯನ್ನು ಕಾಣಬಹುದು. ಈ ವಿಶೇಷಾಂಕದಲ್ಲಿ ವಿ.ಕೃ. ಗೋಕಾಕರ 'ಬೇಂದ್ರೆಯವರ ಕಾವ್ಯದಲ್ಲಿ ಪ್ರೀತಿಯ ರೂಪುರೇಷೆಗಳು' ಎಂಬ ಲೇಖನ ಕಳೆದ ಸಂಚಿಕೆಯಿಂದ ಈ ಸಂಚಿಕೆಯಲ್ಲಿ ಮುಂದುವರೆದಿದೆ. ಹಾಗೂ ಆರ್. ಜಿ. ಕುಲಕರ್ಣಿ ಅವರ 'ಕವೀಂದ್ರ ಶ್ರೀ ದ. ರಾ. ಬೇಂದ್ರೆಯವರ ಕಾವ್ಯದರ್ಶನ' ಈ ಲೇಖನವೂ ಕೂಡ ಮುಂದುವರೆದಿದೆ. ಈ ಎರಡೂ ಲೇಖನಗಳು ಬೇಂದ್ರೆ ಅವರ ಕುರಿತು ಅವರ ಕವಿತೆಗಳ ಮೂಲಕ ಚರ್ಚಿಸುವ ವಿಮರ್ಶಾ ದೃಷ್ಟಿಕೋನವನ್ನು ಮಂಡಿಸಿದ್ದಾರೆ. ವಿ. ಕೃ. ಗೋಕಾಕ್ ಅವರು 'ಸಖೀಗೀತ', 'ಗಿಳಿ ಹೇಳ' ಮತ್ತು 'ಬಿಸಿಲುಗುದುರೆ' ಎಂಬ ಕವಿತೆಗಳನ್ನು ಸ್ವಾರಸ್ಯ ದೃಷ್ಟಿಕೋನದಿಂದ ವಿಮರ್ಶೆ ಮಾಡಿದ್ದಾರೆ. ಆರ್. ಜಿ. ಕುಲಕರ್ಣಿ ಅವರ 'ಕವೀಂದ್ರ ಶ್ರೀ ದ.ರಾ. ಬೇಂದ್ರೆಯವರ ಕಾವ್ಯದರ್ಶನ' ಈ ಲೇಖನದಲ್ಲಿ ಬೇಂದ್ರೆ ಅವರ ಕಾವ್ಯವನ್ನು ವಿವಿಧ ದೃಷ್ಟಿಕೋನದಲ್ಲಿ ಚರ್ಚಿಸಿದ್ದಾರೆ. ಅಲೌಕಿಕ ಗೀತೆಗಳಾಗಿ ವಿಂಗಡಿಸಿ ಅದರಲ್ಲಿ ಪ್ರೇಮಗೀತೆಗಳು, ಆಧ್ಯಾತ್ಮಿಕ ಗೀತೆಗಳು, ದೇಶಭಕ್ತಿಗೀತೆಗಳು ಹಾಗೂ ಲೌಕಿಕ ಗೀತೆಗಳಲ್ಲಿ ಸಾಮಾಜಿಕ ಗೀತೆಗಳು, ಚಿಂತನಪರ ಗೀತೆಗಳು, ಊಹಾವಿಲಾಸದ ಗೀತೆಗಳು ಎಂಬುದಾಗಿ ಬೇಂದ್ರೆ ಅವರ ಕವಿತೆಗಳನ್ನು ಗ್ರಹಿಸಿದ್ದಾರೆ. ಪ್ರತಿ ಕವಿತೆಯ ಕಾರಣದ ಹಿಂದೆ ಸಮಾಜದ ಕಳಕಳಿಯುಂಟುಮಾಡುವ ಪರಿಣಾಮಗಳನ್ನು ಕುರಿತು ಚರ್ಚಿಸಿದ್ದಾರೆ. ಇಲ್ಲಿ ಕೆಲವು ಲೇಖನಗಳನ್ನು ಕುರಿತು ಚರ್ಚಿಸದಿದ್ದರೂ ವಿಚಾರಗಳನ್ನು ಗ್ರಹಿಸಲಾಗಿದೆ. ಈ ವಿಶೇಷಾಂಕಕ್ಕೆ ಅರವಿಂದರ ಆಶೀರ್ವಾದದ ಬರಹವಿದೆ. ಇಲ್ಲಿ ಅರವಿಂದರು ತಿಳಿಸಿದ ಸಂದೇಶದ ನಾಲ್ಕು ಸಾಲುಗಳು ಬೇಂದ್ರೆ ಮತ್ತು ಅರವಿಂದರ ನಡುವಿನ ವಿಶ್ವಾಸವನ್ನು ಅರ್ಥೈಸುತ್ತದೆ. ಈ ವಿಚಾರವನ್ನು ಪ್ರತ್ಯೇಕವಾಗಿ ಅಧ್ಯಯನ ಮಾಡಲಾಗಿದೆ.

ಶಂ.ಬಾ ಜೋಶಿ ಅವರು ೧೯೪೬ರಲ್ಲಿ 'ಜಯ ಕರ್ನಾಟಕ' ಪತ್ರಿಕೆಯಲ್ಲಿ ಬೇಂದ್ರೆ ಅವರ ವ್ಯಕ್ತಿತ್ವವನ್ನು ಪರಿಚಯಿಸುವ 'ಬೇಂದ್ರೆಯವರ ತಪಸ್ಸು' ಎಂಬ ಲೇಖನ ರಚಿಸಿದ್ದಾರೆ. ಐವತ್ತು ವರ್ಷ ತುಂಬಿದ ಬೇಂದ್ರೆ ಅವರಿಗೆ ಧಾರವಾಡದ 'ಬೇಂದ್ರೆ ಸತ್ಕಾರ ಸಮಿತಿ' ಈಗಾಗಾಲೇ ಸಾಹಿತ್ಯ ಸನ್ಮಾನ ನಡೆಸಿರುವ ಸಂದರ್ಭದಲ್ಲಿ ಒಬ್ಬ ಕವಿಗೆ ಇಷ್ಟೊಂದು ಗೌರವಗಳು ಈ ಕಾಲಘಟ್ಟದಲ್ಲಿ ದೊರಕಲು ಕವಿಯ ಮೌಲ್ಯವೇನು? ಹಾಗಾದರೆ ಕವಿಯು ಸಾಧಿಸಿರುವ ತಪಸ್ಸು ಎಂಥಹದು ಎಂಬ ಆಲೋಚನೆಗಳನ್ನು ಈ ಲೇಖನದಲ್ಲಿ ಗಮನಿಸಿದ್ದಾರೆ.

> ಮಹತ್ವಾಕಾಂಕ್ಷೆ ಮತ್ತು ಮಹತ್ವದ ಆಕಾಂಕ್ಷೆಗಳನ್ನು ತಮ್ಮ ಏಳ್ಗೆಗಾಗಿ ಕಾಲಕ್ಕೆ ಸರಿಯಾಗಿ ಹೇಗೆ ಬಳಸಿಕೊಳ್ಳಬೇಕೆಂಬ ಹದವು ಬೇಂದ್ರೆಯವರಿಗೆ ಚೆನ್ನಾಗಿಯೆ ಸಾಧಿಸಿದೆ. ಇದ್ದರಲ್ಲಿ ಅವರು ಸಿದ್ಧಪುರುಷರು. ಈ ಕೌಶಲ್ಯದಲ್ಲಿ ಬೇಂದ್ರೆಯನ್ನು ಸರಿಗಟ್ಟುವವರು ಕಂನಾಡಿನಲ್ಲಂತೂ ತೀರ ವಿರಳ.[೧೮]

ಅಭಿಮಾನ ಪ್ರಿಯ ಬೇಂದ್ರೆ ಅವರಾಗಿ ಮುಂದಿನ ಕೆಲವು ವಿಮರ್ಶೆಗಳೇ ಬಂದಿವೆ. ಆದರೆ ದೊರೆತ ಅಭಿಮಾನವನ್ನು ಉಳಿಸಿಕೊಳ್ಳುವ ಆಕಾಂಕ್ಷೆ ಇಲ್ಲಿಯದು. ಬೇಂದ್ರೆ ಯಾವ ಉದ್ಯೋಗವೂ ಇಲ್ಲದೇ, ಬಡತನವೇ ಅತಿಯಾದ ನೋವಾಗಿದ್ದರೂ ತನ್ನ ಮಹತ್ವದ ಆಕಾಂಕ್ಷೆಗೆ ಎಲ್ಲಿಯೂ ನೋವುಕೊಡಲಿಲ್ಲ. ಸಾಹಿತ್ಯ ಹಾಗೂ ಸಾಮಾಜಿಕ ನಾಯಕತ್ವದಲ್ಲಿ ತೋರಿದ ಧೈರ್ಯ ಬೇಂದ್ರೆ ಅವರನ್ನು ಇಷ್ಟು ಗೌರವಿಸುವಂತೆ ಮಾಡಿದೆ ಎಂಬುದನ್ನು ಜೋಶಿ ಅವರು ಅದನ್ನು ಒಂದು ತಪಸ್ಸು ಎಲ್ಲರಿಂದ ಸಾಧ್ಯವಾಗದು ಎಂದು ಸೂಚಿಸಿದ್ದಾರೆ.

ವ್ಯಕ್ತಿತ್ವವನ್ನೇ ಕೇಂದ್ರೀಕರಿಸಿದ ಈ ಲೇಖನವು ಬೇಂದ್ರೆ ಅವರಲ್ಲಿ ಈ ಮಹತ್ವಾಕಾಂಕ್ಷಿತನ ಬರಲು ಸೂಕ್ತ ಕಾರಣವೇನು ಎಂಬುದನ್ನು ಗುರ್ತಿಸುತ್ತಾ 'ವಾಕ್ ಮಹಿಮೆ ಹಾಗೂ ಅದರ ಉಪಾಸನೆ' ಈ ಅಂಶವನ್ನು ಬೇಂದ್ರೆ ಅವರು ನಿರ್ವಹಿಸಿದ ಬಗೆಯಲ್ಲೇ ಅವರ ಏಳಿಗೆಯ ಕಾರಣವನ್ನು ಗುರ್ತಿಸಿದ್ದಾರೆ. ಗುರುಗಳಾಗಿ ಅರವಿಂದರ ಆಯ್ಕೆ, ತಮ್ಮ ಬೀಳುಗಾಲವನ್ನೇ ಏಳಿಗೆಗಾಲವನ್ನಾಗಿ ನಿರ್ಮಿಸುವ ತಂತ್ರಗಾರಿಕೆ ಎಂದು ಜೋಶಿ ಅಭಿಪ್ರಾಯ ಪಡುತ್ತಾರೆ. ಬೇಂದ್ರೆ ಅವರ ಕಾವ್ಯದ ಪ್ರತಿ ಅಧ್ಯಯನದಲ್ಲೂ ಜೋಶಿ ಅವರು ಸೂಚಿಸುವ ಸೂಕ್ಷ್ಮ ಒಳಹುಗಳು ಕಾಣುತ್ತವೆ. ಬೇಂದ್ರೆ ಅವರ ವಸಾಹತುಶಾಹಿಯ ಎಲ್ಲಾ ಅಧಿಕಾರಗಳಿಗೆ ನೀಡುವ ಉತ್ತರಗಳು, ಬಡತನ, ಹಸಿವು, ಸಾವು ಇವುಗಳ ನಡುವೆ ಇವುಗಳಿಂದ ಆಚೆ ಬರುವ ತಂತ್ರವಾಗಿ ಬಳಸಿಕೊಂಡ ನಲ್-ಸ್ನೇಹ ಮುಖದ ಕಾರ್ಯ ಜಗತ್ತು ಒಡೆದು ಹೋದರೂ ಒಂದು ಮಹತ್ವದ ಸಂಘಟನೆಯಾಗಿ ಕನ್ನಡ ಸಾಹಿತ್ಯ ಹಾಗೂ ಅದರಾಚೆಗೂ ಸಾಕಷ್ಟು ಉತ್ತಮ ಚಿಂತಕರನ್ನು ನೀಡಿದ 'ಗೆಳೆಯರ ಗುಂಪಿ'ನ ಕಾರ್ಯ. ವಿ. ಕೃ. ಗೋಕಾಕ್, ಗೊರೂರು, ಮಾಸ್ತಿ ಹಾಗೂ ಸಾಕಷ್ಟು ಲೇಖಕರು ಈ ಕುರಿತು ಈಗಾಗಲೇ ಸ್ಮರಿಸಿದ್ದಾರೆ. ಈ ಎಲ್ಲಾ ಅಂಶಗಳನ್ನು ಗಮನಿಸಿ ಬೇಂದ್ರೆ ಅವರ ಬಹುತ್ವ ನೆಲೆಯ ಸ್ಥಾಪಿತ ಮೌಲ್ಯಗಳು ಜಂಗಮ ರೂಪ ಪಡೆದ ಬಗೆ ವಿಶಿಷ್ಟವಾಗುತ್ತದೆ.

ಬೇಂದ್ರೆಯಂತಹ ಮಹತ್ವಾಕಾಂಕ್ಷಿ ನಿಲುವು ಹೊಂದಿದ ಕವಿಗೆ ಇರುವ ಜವಾಬ್ದಾರಿಗಳನ್ನೂ, ಅಂತಹ ಶ್ರೇಷ್ಠ ಕನಸೊತ್ತ ಮನಸ್ಸಿನಲ್ಲಿ ಜಾಗೃತಗೊಂಡಿರುವ ಸ್ವಾಭಾವಿಕ ಚಿಂತನೆಯನ್ನೂ ಚರ್ಚಿಸಿದ್ದಾರೆ. ಜೋಶಿ ಅವರ ಚಿಂತನೆ ಅರ್ಥಪೂರ್ಣವಿದೆ. ಬೇಂದ್ರೆ ಅವರು ತಾವು ಬೇಂದ್ರೆಯಾಗಲು ಬೆಂದೆನೆಂಬ ಪರಿಗೆ ಸೂಕ್ತವಾಗಿದೆ. ತಾವು ಸೋತಾಗ ಸೋಲಿಗೆ ಹಲವು ನೆಲೆಯ ಉತ್ತರಗಳನ್ನು ಸೃಜಿಸಿಕೊಂಡ ಬೇಂದ್ರೆ ಸೃಷ್ಟಿಸಿದ್ದು ಸಹೃದಯರನ್ನು ಆದ್ದರಿಂದ ಸಮಾಜ ಇವರನ್ನು ಆದರ್ಶವಾಗಿಯೇ ಸ್ವೀಕರಿಸಿತು. ಇದೊಂದು ವಿಶಿಷ್ಟ ಬಗೆಯ ಲೇಖನವಾಗಿದೆ. ಕವಿಯನ್ನಾಗಲೀ, ಕವಿಯ ಕಾವ್ಯ ಜಗತ್ತನ್ನಾಗಲೀ ಚರ್ಚಿಸದೆ ಕವಿಯ ಸಮಕಾಲೀನತೆಗೆ ಕಾರಣಗಳನ್ನು ಹುಡುಕುವ ಚಿಂತನೆಯು ಆಧ್ಯಾತ್ಮದ 'ಆತ್ಮಪರಿನಿರ್ವಾಣ'ದ ಆಯೋಜಕ ಪರಿಕಲ್ಪನೆಯಲ್ಲಿ ಗಮನಿಸಬಹುದು.

ಬೇಂದ್ರೆ ಸತ್ಕಾರ ಸಮಿತಿಯಿಂದ 'ದತ್ತ ಸಾಹಿತ್ಯ' ಹಾಗೂ 'ಕವಿವರ ಬೇಂದ್ರೆ' ಎಂಬ ಎರಡು ಕೃತಿಗಳು ಪ್ರಕಟಗೊಂಡವು. ಇಲ್ಲಿ ಸಮಕಾಲೀನ ಸನ್ನಿವೇಶಗಳಿಗೆ ಯಾವುದೇ ಸಂಪರ್ಕಗಳು ದಟ್ಟವಾಗಿ ಇರದಿದ್ದ ಕಾಲಮಾನದಲ್ಲಿ ಹಾಗೂ ಬ್ರೀಟಿಷರ ದಬ್ಬಾಳಿಕೆಯಿಂದ ಎಚ್ಚೆತ್ತ ಭಾರತೀಯರು ಸ್ವಾತಂತ್ರ್ಯ ಹಂಬಲ ತುಂಬಿಕೊಂಡ ಆ ಸಂದರ್ಭವು ಒಂದು ತುರ್ತುಪರಿಸ್ಥಿತಿಯ ಸನ್ನಿವೇಶವಾಗಿತ್ತು. ಬದುಕುವುದೇ ಕಷ್ಟವೆನ್ನುವ ಸನ್ನಿವೇಶದಲ್ಲೂ ಬರಹದೊಂದಿಗೆ ಅರಿವು ಮೂಡಿಸಿದ ಬೇಂದ್ರೆ ಭಾರತ ಹಾಗೂ ಭಾರತದಾಚೆಯ ಜನರಿಗೂ ಅರಿವಿದ್ದ ಕವಿಯಾಗಿ ದಕ್ಕಿದ್ದು ವಿಶೇಷ ಅನಿಸುತ್ತದೆ. ಸುಭಾಷ್ ಚಂದ್ರ ಬೋಸ್ ಅವರ ಚಳುವಳಿಯ ದಿಕ್ಕಿನಲ್ಲಿ ಜರ್ಮನಿಯಲ್ಲೂ ಕನ್ನಡಿಗರು ಇದ್ದರೆಂಬುದು ಅವರಿಗೆ ಒಬ್ಬ ಪ್ರಸಿದ್ಧ ಬರಹಗಾರ ಬೇಂದ್ರೆ ಪರಿಚಯವಿದ್ದರು ಎಂಬ ಮಾತನ್ನು ಗೊರೂರು ರಾಮಸ್ವಾಮಿ ಅಯ್ಯಾಂಗಾರರು ತಮ್ಮ ಸ್ನೇಹಿತರಿಂದ ತಿಳಿದು ಇಲ್ಲಿ ಅಭಿಪ್ರಾಯ ಹಂಚಿಕೊಳ್ಳುತ್ತಾರೆ. ಬೇಂದ್ರೆ ಅವರು ಭಾರತೀಯ ಹಲವು ಭಾಷೆಗಳಲ್ಲಿ ಆ ಕಾಲಕ್ಕೆ ಪರಿಚಿತರಾದವರು. ವಸಾಹತು ಧೋರಣೆಯ ವಿರುದ್ಧ ಬರಹವನ್ನೇ ಅಸ್ತ್ರವಾಗಿಸಿಕೊಂಡ ಈ ಕವಿಯು ಬಡತನವೇ ಉತ್ತರವಾಯಿತು. ಆದರೆ ಈ ಸ್ವಾಭಿಮಾನಿ ದೊರೆತ ಬಡತನವನ್ನು ಕಾವ್ಯವಾಗಿಸಿ ಜನರ ಸಹೃದಯರಲ್ಲಿ ಹೆಜ್ಜೆ ಇಟ್ಟ ಬಗೆಯನ್ನು ಇಲ್ಲಿ ಹಲವು ಲೇಖಕರು ನೆನೆಯುವ ಪರಿಯಲ್ಲಿ ಗಮನಿಸಬಹುದು.

೩. 'ಕವಿವರ ಬೇಂದ್ರೆ'ಯಾಗಿ ಕಂಡ ಸ್ಮೃತಿ ಚಿತ್ರಗಳು

'ಕವಿವರ ಬೇಂದ್ರೆ' ಕೃತಿಯು ಕನ್ನಡದಲ್ಲಿ ವಿಶಿಷ್ಟ ಲೇಖಕರನ್ನು ತಮ್ಮ ಬರಹಗಳ ಮೂಲಕ ಪರಿಚಯಿಸಿತು. 'ಜೀವನ' ಪತ್ರಿಕೆಯಲ್ಲಿ ಬೇಂದ್ರೆ ಅವರನ್ನು ಕುರಿತು ಬರೆದ ಹಲವು ಲೇಖಕರು ಕನ್ನಡ ಸಾಹಿತ್ಯದಲ್ಲಿ ಪರಿಚಯವಾಗಲೇ ಇಲ್ಲ. ಆದರೆ 'ಕವಿವರ ಬೇಂದ್ರೆ' ಈ ಕೃತಿಯ ಎಲ್ಲಾ ಲೇಖಕರು ಸಾಹಿತ್ಯದ ಒಂದೊಂದು ಕ್ಷೇತ್ರದಲ್ಲಿ ಪ್ರಸ್ತುತ ಕೂಡ ಪರಿಚಿತ ಸಾಹಿತ್ಯ ಉಳಿಸಿ ಹೋಗಿದ್ದಾರೆ. ಗೋ. ವೆ. ಚುಳಕಿ ಅವರು ಸಂಪಾದಕರ ಬಿನ್ನಹದಲ್ಲಿ ಕೃತಿ ಕುರಿತು ಈ ರೀತಿ ಅಭಿಪ್ರಾಯ ಪಡುತ್ತಾರೆ.

> ಈ ಹೊತ್ತಿಗೆಯಲ್ಲಿ ಕವಿವರ ಬೇಂದ್ರೆ ಅವರನ್ನು ಕುರಿತು ಬರೆದ ಅನೇಕ ಮಹನೀಯರ ಲೇಖನಗಳ ಸಂಗ್ರಹವನ್ನು ಪ್ರಕಟಿಸಿದ್ದೇವೆ. ಕವಿತಿಲಕರಾದ ಬೇಂದ್ರೆಯವರ ಸಾಹಿತ್ಯವನ್ನು ಜನರು ಮೆಚ್ಚಿ ಹೇಗೆ ಕೊಂಡಾಡುವರೋ ಹಾಗೇಯೆ ಅವರ ಬಗ್ಗೆ ಬರೆದ ಲೇಖನಮಾಲೆಯನ್ನೂ ಓದಿ ಮನಾನಂದ ಪಡದೆ ಇರಲಾರರೆಂದು ಭಾವಿಸಿದ್ದೇನೆ[೯]

ಸಂಪಾದಕರ ನುಡಿಯಲ್ಲೇ ಜನರು ಮೆಚ್ಚಲು, ಮನದಾನಂದ ಪಡಲು ಈ ಲೇಖನಗಳು ಅತಿ ಹೆಚ್ಚು ಸಹಕರಿಸುತ್ತವೆ ಎಂಬುದೂ ಕೂಡ ಗಮನಿಸಬಹುದು.

ಈ ಕೃತಿಯಲ್ಲಿ ಅನುಭವ, ನೆನಪು, ಬರಹ ಈ ಎಲ್ಲಾ ಮಾರ್ಗ ರೂಪಗಳು ಸಾಹಿತ್ಯವನ್ನೇ ಜೀವಾಳವಾಗಿಸಿಕೊಂಡ ಕಥನಗಳಾಗಿವೆ. ಕತೆಯಂತೆ ನಿರೂಪಿಸಲ್ಪಟ್ಟಿವೆ. ಅನುಭವಗಳು ಇಲ್ಲಿ ದಾಖಲಾಗಿವೆ. ವಸಾಹತು ಚಿಂತನೆಯ ಪ್ರಭಾವವು ಒಬ್ಬ ಬರಹಗಾರನ ಮೇಲೆ ಪ್ರಭಾವಿಸುವ

ರೀತಿಯನ್ನು ಚರ್ಚಿಸಲು ಇಲ್ಲಿ ಯಾವುದೇ ಲೇಖಕರು ಪೂರ್ಣ ಪ್ರಯತ್ನ ಮಾಡಿಲ್ಲ. ಆದರೆ ಕವಿತೆಗಳಲ್ಲಿ ಕುರುಡು ಕಾಂಚಾಣ, ಬೆಳಗು ಮೊದಲಾದ ಕವಿತೆಗಳು ಪ್ರಸ್ತಾಪವಾದರೂ ಆ ಕವಿತೆಗಳು ನಿರೂಪಿಸಿದ ಅಧಿಕಾರ, ಶೋಷಣೆ ಮತ್ತು ಹಿಂಸೆಗಳ ರೂಪದ ರಾಷ್ಟ್ರೀಯ ಸಂಬಂಧಗಳ ಧ್ವನಿಯನ್ನು ನಿರೂಪಿಸಲಾರವು. ಇದಕ್ಕೆ ಕಾರಣಗಳನ್ನು ಗಮನಿಸಿದಾಗ ಇಲ್ಲಿನ ಬರಹಗಾರರೆಲ್ಲರೂ ಬೇಂದ್ರೆ ಅವರ ಒಡನಾಡಿಗಳೇ ಆಗಿದ್ದಾರೆ. ಅಂದು ಸಾಹಿತ್ಯವೆಂಬುದು ಒಂದು ಅಧ್ಯಯನ ರೂಪದ ಪರಿಚಯ ಧ್ವನಿಯೇ ಆಗಿ ತನ್ನ ಕಾರ್ಯ ನಿರ್ವಹಿಸುತ್ತಿತ್ತು. ಈ ಬರಹಗಳನ್ನು 'ಬೇಂದ್ರೆ ಸತ್ಕಾರ ಸಮಿತಿ'ಯು ಬೇಂದ್ರೆ ಅವರಿಗೆ ಪರಿಚಿತವಿದ್ದ ಧಾರವಾಡ, ಮಹಾರಾಷ್ಟ್ರ ಹಾಗೂ ಇತರೆ ಪ್ರದೇಶದ ಹಲವು ಪ್ರಮುಖ ಲೇಖಕರಲ್ಲಿ ಲೇಖನಗಳನ್ನು ಬರೆಸಿರುವ ಕಾರಣದಿಂದ ಗೌರವ ರೂಪದಲ್ಲೇ ಕವಿಯ ಕಾವ್ಯದ ಸತ್ತ್ವಕ್ಕಿಂತ ಒಡನಾಟಕ್ಕೆ ಅತಿ ಹೆಚ್ಚು ಒತ್ತು ನೀಡಲಾಗಿದೆ. ಈ ಕಾಲಘಟ್ಟವು ಸ್ವಾತಂತ್ರ್ಯ ಪೂರ್ವದ ಬ್ರಿಟಿಷ್ ಆಳ್ವಿಕೆಯಲ್ಲಿ ಇಂತಹ ಅಧಿಕಾರದ ವಿರುದ್ಧ ಧ್ವನಿಗೆ ಮನಸ್ಸು ನೀಡದೇ ಕೇವಲ ಅಧ್ಯಯನ ರೂಪದ ಅಭಿಪ್ರೇರಣೆಯನ್ನು ಒದಗಿಸಿದ್ದಾರೆ. ೧೯೩೮ ಹಾಗೂ ೧೯೪೨ರ ಕಾಲಘಟ್ಟದಲ್ಲಿ ಪ್ರಗತಿಶೀಲ ಸಾಹಿತ್ಯ ಚಿಂತನೆಯು ಒಂದು ಚಳುವಳಿಯಾಗಿ ಭಾರತದಾದ್ಯಂತ ಕ್ರಾಂತಿಯನ್ನೇ ಉಂಟುಮಾಡಿತು. ಕಥೆ, ಕಾದಂಬರಿ ಹಾಗೂ ಕೆಲವು ಕವಿತೆಗಳು ಈ ಚಳುವಳಿಯ ಮುಖ್ಯ ಭಾಗವೆಂಬಂತೆ ತಮ್ಮ ಸ್ವತಂತ್ರ ಬಯಸುವ ಜನತಾ ಧೋರಣೆ ಬಂದಿತು.

ಈ ವೇಳೆಗಾಗಲೇ ಬೇಂದ್ರೆ ಅವರ ಕವಿತೆಗಳಲ್ಲಿ ಪ್ರಗತಿಶೀಲ ಚಿಂತನೆ ಹೇರಳವಾಗಿ ಮೂಡಿತ್ತು. ಅದಕ್ಕಾಗಿ ಜೈಲುವಾಸವನ್ನೂ ಅನುಭವಿಸಿದ್ದು, ಸರ್ಕಾರದ ವೃತ್ತಿಯಿಲ್ಲದ ಬೇಂದ್ರೆಯನ್ನು ಕೇವಲ ಚರಿತ್ರೆಯಾಗಿ ದಾಖಲಿಸುವ ಅಥವಾ ಮಾನವೀಯ ಕಾಳಜಿ ಅಭಿವ್ಯಕ್ತಿಸುವ ಬರಹಗಳಷ್ಟೇ ಕಂಡುಬಂದವು. ಆದರೆ ವಸಾಹತುಶಾಹಿ ಚಿಂತನೆಗೆ ತಕ್ಕ ಉತ್ತರ ನೀಡಿದ ಬೇಂದ್ರೆ ಸಾಹಿತ್ಯ ಆ ಕಾಲದಲ್ಲಿ ಮರೆಯಾಗಿ ಗೌರವ ಪಾತ್ರವಾಯಿತೇ ಹೊರೆತು ಕ್ರಿಯೆಗೆ ಸಹಕರಿಸಲಿಲ್ಲ ಎಂಬುದನ್ನು ಗಮನಿಸಬಹುದು. ಬೇಂದ್ರೆ ಸಾಹಿತ್ಯವು ಆಯಾ ಕಾಲಘಟ್ಟದ ತುರ್ತುಗಳಿಗೆ ಸ್ಪಂದಿಸಿದ ಎಲ್ಲಾ ಆಯಾಮಗಳನ್ನು ಕಂಡುಕೊಳ್ಳಲು ನವ್ಯ ಸಾಹಿತ್ಯದ ಧೋರಣೆಗಳ ಪ್ರಭಾವದ ಬರಹಗಳು ಬರುವವರೆಗೂ ಕಾಯಬೇಕಾಯಿತು. ಆದರೆ ಬೇಂದ್ರೆ ಸಾಹಿತ್ಯದ ವಿಮರ್ಶೆಗೆ ನವೋದಯ, ನವ್ಯ, ದಲಿತ ಬಂಡಾಯವೆಂಬ ಆಧುನಿಕ ಸಾಹಿತ್ಯ ಕಾಲಘಟ್ಟಗಳ ಯಾವುದೇ ಸಿದ್ಧಾಂತಗಳು ಅಗತ್ಯವಿಲ್ಲದಂತೆ ಅಧ್ಯಯನ ನಡೆದಿರುವುದನ್ನು ಗಮನಿಸಬಹುದು. ೧೯೭೦ರ ನಂತರ ಬೇಂದ್ರೆ ಸಾಹಿತ್ಯ ಕುರಿತ ವಿಮರ್ಶೆಗಳು ಹಲವು ಆಯಾಮಗಳೊಂದಿಗೆ ತೆರೆದುಕೊಂಡಿದೆ. ಮುಂದಿನ ಅಧ್ಯಾಯಗಳಲ್ಲಿ ಈ ಎಲ್ಲಾ ಅಂಶಗಳನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಲಾಗುವುದು.

'ಕವಿವರ ಬೇಂದ್ರೆ' ಎಂಬ ಕೃತಿಯಲ್ಲಿ ಮಾಸ್ತಿ ಅವರು ತಮ್ಮ ಹರಕೆಯ ನುಡಿಯಲ್ಲಿ

> ಬೇಂದ್ರೆ ಅವರ ಕಾವ್ಯ ದೃಷ್ಟಿ ತೀವ್ರವಾದುದು. ಶ್ರೇಷ್ಠ ವರ್ಗದ್ದು; ವಿಲಕ್ಷಣವಾದುದು. ಜೊತೆಗೆ ಅವರ ಜೀವನ ಅವರಿಗೆ ತೀವ್ರವಾದ, ಶೇಷ್ಟವಾದ, ವಿಲಕ್ಷಣವಾದ ಅನುಭವವವನ್ನೂ ತಂದಿದೆ. ಇದರಿಂದ ಅವರ ಕೃತಿಯಲ್ಲಿ ಇದೇ ಲಕ್ಷಣ ಮೂಡಿವೆ; ಅವರ ಕಾವ್ಯದ ಬಣ್ಣ ಲೋಕದ ಅತ್ಯುತ್ತಮ ಬಣ್ಣವಾಗಿದೆ.[೨೦]

ಕವಿಯ ಸಾಹಿತ್ಯ ಚಿಂತನೆಯನ್ನು ವಿಕಾಸದ ನೆಲೆಯಲ್ಲಿ ನಾದಲೀಲೆಗೆ ಬರೆದ ಮುನ್ನುಡಿಯ ನಂತರ ಬೇಂದ್ರೆ ಅವರನ್ನು ಗೌರವಿಸಿದ ರೀತಿ ಇದು. ಮಹಿಷಿ ಅಶ್ವತ್ಥರಾಯರು ತಮ್ಮ ಲೇಖನದಲ್ಲಿ 'ಬೇಂದ್ರೆ ಅವರ ಮನೆತನ'ವನ್ನು ದೀರ್ಘವಾಗಿ ಪರಿಚಯಿಸಿದ್ದಾರೆ. ಹಿರಿಯರ ಕಣ್ಣಲ್ಲಿ ಬೇಂದ್ರೆ ಅವರು ಕಾಣುವ ವೈಯಕ್ತಿಕ ಅಂಶಗಳು ಇಲ್ಲಿವೆ. ತಮ್ಮ ಮೂಲ ಊರು, ಮನೆತನ, ಅವರ ಕುಟುಂಬದ ಕಾರ್ಯಗಳು ಹಾಗೂ ವಿದ್ಯಾಭ್ಯಾಸ ಮಾಡಿ ಕನ್ನಡದ ಕವಿಯಾಗಿ ಸೇವೆ ಸಲ್ಲಿಸಿದ ಪರಿಯಂತೂ ಅಶ್ವತ್ಥರಾಯರಿಗೆ ತಮ್ಮ ಕನಸೇ ಹೀಡೇರಿದಂತೆ ಸಂತಸ ಪಡುತ್ತಾರೆ.

ಶ್ರೀಧರ ಖಾನೋಳಕರ ಅವರ 'ಗೆಳೆಯ ಬೇಂದ್ರೆ' ಎಂಬ ಲೇಖನವು ಬಾಲ್ಯದಿಂದಲೂ ಜೊತೆಯಾಗಿ ಬೆಳೆದು, ಶಿಕ್ಷಣವನ್ನು ಕಲಿತು, ಇಂದು ಕವಿವರ ಬೇಂದ್ರೆಯಾಗುವ ಹಿಂದಿನ ಎಲ್ಲಾ ಶ್ರಮಗಳನ್ನು ತಮ್ಮ ಆತ್ಮೀಯ ದನಿಯಲ್ಲಿ ಹಂಚಿಕೊಂಡಿದ್ದಾರೆ. ಸಾಹಿತ್ಯ ಕುರಿತ ಅಭಿಪ್ರಾಯ ತಿಳಿಸುತ್ತಾ

> ಕಾವ್ಯವೆಂದರೊಂದೇ ಮಾದರಿಯದಿರುವದಿಲ್ಲ. ಹಲವು ತರಹದ ಕಾವ್ಯದ ಶೈಲಿಗಳಿರುವವು. ಇದು ಹೌದು ಅಂದರೆ ಅದು ಅಲ್ಲ ಎನ್ನುವ ಹಾಗಿಲ್ಲ. ಬೇಂದ್ರೆಯವರ ಕಾವ್ಯವು ಇಂಗ್ಲಿಷದಲ್ಲಿ ರಾಬರ್ಟ ಬ್ರಾವುನಿಂಗನ ಕಾವ್ಯವನ್ನು ಹೋಲುತ್ತಿದೆ. ಕಾಲೇಜದಲ್ಲಿರುವಾಗ ಬೇಂದ್ರೆಯವರ ಕಾವ್ಯ ಗುರುವೆಂದರೆ ಬ್ರಾವುನಿಂಗನೇ! ಅಮೇಲೆ ರವೀಂದ್ರನಾಥರು. ಇವರ ಶೈಲಿಯ ಮೇಲೆ ಮರಾಠಿ ನಾಟಕಕಾರರಾದ ಗಡಕರಿಯವರ ಮುದ್ರೆಗಳನ್ನು ಈಗಲೂ ಕಾಣಬಹುದು. ಗಡಕರಿಯವರು ಶಬ್ಧಪ್ರಭುಗಳಿದ್ದರು. ಮರಾಠಿಯಲ್ಲಿ ಶಬ್ಧಗಳ, ರಸಗಳ, ಭಾವಗಳ, ಸ್ವೈರವಿಲಾಸವನ್ನು ನೋಡಬೇಕೆನ್ನುವವರು ಗಡಕರಿಯವರ ನಾಟಕಗಳನ್ನು ಓದಬೇಕು. ಬೇಂದ್ರೆಯವರಲ್ಲಿಯ ಶಬ್ಧವಿಲಾಸವು ಗಡಕರಿಯವರಂತೆ ಸ್ವೈರವಾಗಿಲ್ಲ ಶಬ್ಧರಚನಗೆ ಬಂಧವಿದೆ. ಶಬ್ಧಗಳಲ್ಲಿ ಆಯ್ಕೆಯಿದೆ. ಶಬ್ಧಗಳಲ್ಲಿ ಪೂರ್ಣ ಅರ್ಥವನ್ನು(ರಸವನ್ನು ಸಹ) ತರುವ ಸಾಮರ್ಥ್ಯವಿದೆ. ಈ ಶಬ್ಧ ರಚನೆಯ ಜೀವಾಳವೆಂದರೆ ವೇದಾಂತ. ಜೀವನ ವೇದಾಂತ ಕೂಡಿದ ಬೇಂದ್ರೆಯವರ ಕಾವ್ಯವು ಉಪನಿಷತ್ತುಗಳಾಗಬೇಕೆಂಬ ಹಂಬಲದಿಂದ ಹರಿಯುತ್ತಲಿದೆ ಎಂಬುದನ್ನು ಮರೆಯಕೂಡದು. ಬೇಂದ್ರೆಯವರ ಕಾವ್ಯವೆಂದರೆ ಮನೋರಂಜನೆಯಲ್ಲ- ಅಭ್ಯಾಸ ಸ್ವಲ್ಪ ಟೊಂಕಕಟ್ಟಿ ಓದಿದರೆ ಅಗಾಧವಾದ ಆನಂದವನ್ನು ಕೊಡುವುದು.[೨೧]

ಎಂದು ತಮ್ಮ ಒಡನಾಡಿಯಾಗಿದ್ದು ಸಾಹಿತ್ಯದ ಪಥಗಳನ್ನು ತಾನು ಪಡೆದು ದುಡಿಸಿಕೊಂಡ ಬಗೆಯನ್ನು ತಿಳಿಸುತ್ತಾರೆ. ಬೇಂದ್ರೆ ಅವರು ಬಂಗಾಳಿ, ಮರಾಠಿ ಹಾಗೂ ಪಾಶ್ಚಾತ್ಯ ಸಾಹಿತ್ಯದ ಅಭಿರುಚಿಯನ್ನು ತಾನು ಸೃಜಿಸಿಕೊಂಡ ಬಗೆಯನ್ನು ಸ್ನೇಹದ ನೆಲೆಯಲ್ಲಿ ಸೂಚಿಸಿದ್ದಾರೆ.

ಅಂಕೋಲೆಯ ಸ. ಪ ಗಾಂವಕರ ಅವರ 'ನಾ ಕಂಡ ದತ್ತು' ಎಂಬ ಲೇಖನವು ಬೇಂದ್ರೆ ಅವರನ್ನು ಒಬ್ಬ ಸಾಮಾಜಿಕ ಸಂಸ್ಕಾರ ಮನೋಧೋರಣೆಯಿಂದ ಸಾಕ್ಷೀಕರಿಸುವ ಕೆಲವು ಸೂಕ್ಷ್ಮಗಳನ್ನು ಸಂಕಲನಗೊಳಿಸಿದ್ದಾರೆ. ಬೇಂದ್ರೆ ಅವರನ್ನು ಸಾಹಿತ್ಯದ ಆಚೆಯ ಜಗತ್ತಿನಿಂದಲೇ ಗಮನಿಸುತ್ತೇನೆಂಬ ಆಶಯದಲ್ಲಿ ಬೇಂದ್ರೆ ಅವರ ಸರಳತೆಯನ್ನು ಒಬ್ಬ ಗುರುವಾಗಿ ವಿದ್ಯಾರ್ಥಿ ದೆಸೆಯಿಂದ ದತ್ತುವಿನ ಎಲ್ಲಾ ಚಲನವಲನಗಳನ್ನು ಅಂದಿನ ಧಾರವಾಡದ ಪರಿಸರದೊಂದಿಗೆ ಪರಿಚಯಿಸುತ್ತಾರೆ.

ವಂಗಭಂಗ ಸಂಘರ್ಷದಿಂದ ಎದ್ದ ಕಿಡಿ ಕನ್ನಡ ನಾಡಿನ ನಾಲ್ಕೂ ಕಡೆಗೂ ಹರಡಿ ಆಳರಸರ ಬಗ್ಗೆ ಹಾವಳಿಗೈದು ಸ್ವದೇಶಿ ವ್ರತದ ಆದೇಶವನ್ನು ವಿಧವಿಧವಾಗಿ ವಿವರಿಸಿದರೂ ಧಾರವಾಡದ ಧಾರಾತೀರ್ಥದ ದೃಶ್ಯವು ಮಾತ್ರ ಕನ್ನಡ ನಾಡ ಇತರ ನಗರಗಳ ದೃಶ್ಯಕ್ಕಿಂತ ಭಿನ್ನವಾಗಿತ್ತಲ್ಲದೆ ಭಾವೀ ಕನ್ನಡ ನಾಡ ರಚನಾತ್ಮಕ ಕಾರ್ಯಗಳ ದೃಷ್ಟಿಯಿಂದ ಸಂಪನ್ನವಾಗಿ ದರ್ಶನೀಯವಾಗಿತ್ತೆಂದರೆ ಅತ್ಯುಕ್ತಿಯೆನಿಸದು. ಭಾವ ಜೀವಿಗೆ ಭಾಗ್ಯ ಸಂಪನ್ನವಿತ್ತು.[೨೨]

ಸ್ವಾತಂತ್ರ್ಯ ಪೂರ್ವದ ಧಾರವಾಡ ಪರಿಸರವು ವಸಾಹತು ಧೋರಣೆಗಳಿಗೆ ಸ್ಪಂದಿಸಿದ ಬಗೆಯು ಇಲ್ಲಿ ಅಭಿವ್ಯಕ್ತಗೊಂಡಿದೆ. ಅಂದು ಸಾಹಿತ್ಯ ಕಾರ್ಯಗಳಿಗೆ ಇದ್ದ ಬೆಲೆಯು ಒಂದು ಬಾಂಧವ್ಯದ ರಸವಾಗಿ ಜನರಲ್ಲಿ ಆಪ್ತವಾಗಿ ಪ್ರತಿಕ್ರಿಯಿಸುತ್ತಿತ್ತು. ಈ ಎಲ್ಲಾ ಅಂಶಗಳನ್ನು ಸ. ಪ ಗಾಂವಕರರು ಪರಿಚಯಿಸುತ್ತಾರೆ.

೩. ೧. ಗೋಕಾಕರು ಕಂಡ 'ಗೆಳೆಯರ ಗುಂಪಿ'ನ ಸ್ವಾನುಭವ

'ಗೆಳೆಯರ ಗುಂಪಿ'ನ ಕಣಸು ಎಂಬ ಲೇಖನವನ್ನು ಗೆಳೆಯರ ಗುಂಪಿನ ಸದಸ್ಯರಾದ ವಿ. ಕೃ. ಗೋಕಾಕ್ ಅವರು ಬರೆದಿದ್ದಾರೆ. ಇದೊಂದು ವಿಶಿಷ್ಟ ಲೇಖನವಾಗಿಯೂ ಕೆಲವಂಶಗಳಲ್ಲಿ ಗೋಚರಿಸುತ್ತದೆ. ಗೆಳೆಯರಗುಂಪು ಸೃಷ್ಟಿಗೊಂಡ ಪ್ರಾರಂಭದಿಂದಲೂ ಅದರ ಸಾಹಿತ್ಯ ಕಾರ್ಯಗಳನ್ನು ಅದರ ಉದ್ದೇಶ, ವ್ಯಾಪ್ತಿಯ ಹಿನ್ನಲೆಯಲ್ಲಿ ಚರ್ಚಿಸಿದ್ದಾರೆ. ಫಲಾನುಫಲವನ್ನೂ ಒಂದು ವಿಮರ್ಶೆಯಂತೆ ಗಮನಿಸಿದ್ದಾರೆ.

ಶ್ರೀ ಬೇಂದ್ರೆಯವರು ನವಕರ್ನಾಟಕದ ಅತ್ಯುತ್ತಮ ಕವಿಗಳಲ್ಲೊಬ್ಬರಾಗಿದ್ದಾರೆ. ಶ್ರೀ ಸಾಲಿ ಅವರು ಇನ್ನೊಬ್ಬ ವಿಶಿಷ್ಟ ತರಹದ ಕವಿಗಳು. ಆನಂದಕಂದರು ಪ್ರಖ್ಯಾತ ಕವಿಗಳೂ ಆಗಿದ್ದಾರೆ. ಮತ್ತು ಕೃಷ್ಣಕುಮಾರರ ಸಣ್ಣಕತೆಗಳು ಎಲ್ಲ ಕನ್ನಡಿಗರ ಮೆಚ್ಚುಗೆಗೆ ಪಾತ್ರವಾಗಿವೆ. ಕವಿತೆ, ಕಾದಂಬರಿ ಮತ್ತು ವಿಮರ್ಶಾರಂಗಗಳಲ್ಲಿ ಶ್ರೀಮಾನರಾದ ಕೊಣ್ಣೂರ, ಖಾನೋಳಕರ, ಸಂಗಮ(ಶಾಂತಿನಿಕೇತನದ ಕಲಾವಿದರು), ಮುಗಳಿ ಮುಂತಾದವರ ಕಾರ್ಯವು ಗಮನಾರ್ಹವಾಗಿದೆ. ಚೆನ್ನಮಲ್ಲರು ಇತಿಹಾಸ ಸಂಶೋಧನೆಗೆ ತಮ್ಮ ಕಾಣಿಕೆಯನ್ನರ್ಪಿಸಿದ್ದಾರೆ.[೨೩]

ಗೆಳೆಯರ ಗುಂಪು ಎಂಬುದು ಒಬ್ಬ ನಾಯಕನ ಮುಂದಾಳುತನದಲ್ಲಿ ಬರದೆ ಒಂದು ಗುಂಪಿನ ಕಾರ್ಯವಾಗಿ ನಿರ್ವಹಿಸಿದ ಬಗೆಯನ್ನು ಜಗತ್ತಿನ ಹಲವು ಗುಂಪುಗಳ ಕಾರ್ಯ ವೈಖರಿಯೊಂದಿಗೆ ಚರ್ಚಿಸಿದ್ದಾರೆ. ಸಾಕ್ರಟೀಸ್ ಕಾಲದ ಶೋಧ, ಅನುಭವ ಮಂಟಪದಲ್ಲಿ ಬಸವಣ್ಣ, ಅಲ್ಲಮರ ಧ್ಯೇಯ, ಎಲಿಜಬತ್ ಕಾಲದ ಯೂನಿವರ್ಸಿಟಿ ವಿಟ್ಸ್‌ನ ಗುಂಪು ಚಟುವಟಿಕೆಗಳನ್ನು ಐರಿಷ್ ರಿವಿವಲ್‌ಗೆ ಲೇಖಕರು ಹೋಲಿಸುತ್ತಾ ಅದೊಂದು 'ಹೊಸ ಚಳುವಳಿಯು ಜನ್ಮತಾಳಿ ಪ್ರಗತಿಹೊಂದಿದ ಕಾಲ'ವೆಂದು ನಿರ್ಧರಿಸುತ್ತಾರೆ.

ಕನ್ನಡ ಸಾಹಿತ್ಯದಲ್ಲಿ 'ಗೆಳೆಯರ ಗುಂಪು' ಕೂಡ ಇದೇ ಹಾದಿಯಲ್ಲಿ ಪ್ರಾರಂಭಗೊಂಡು ಸಾಹಿತ್ಯ ರಚನೆ, ಸಂಪಾದನಾಕಾರ್ಯ, ಪತ್ರಿಕಾಚಟುವಟಿಕೆಗಳು ಈ ಎಲ್ಲಾ ಅಂಶಗಳನ್ನು ವಿಸ್ತರಿಸುತ್ತಾರೆ. ಗೋಕಾಕ್ ಅವರು ಬೇಂದ್ರೆ ಅವರ ಜೊತೆಯ ಸಂಬಂಧವನ್ನು ಕಾವ್ಯಗುರುವಾಗಿ,

ಒಬ್ಬ ಆಕರ್ಷಿತ ಚಿಂತಕನಾಗಿ ಸ್ವೀಕರಿಸಿದ ಬಗೆಯನ್ನೂ ಹಂಚಿಕೊಂಡಿದ್ದಾರೆ. ಅದು ಗೋಕಾಕ್ ಅವರನ್ನು ಕನ್ನಡ ಸಾಹಿತ್ಯ ಅಧ್ಯಯನಕ್ಕೆ, ಸಾಹಿತ್ಯ ರಚನೆಗೆ ಜೊತೆಗೆ ಒಬ್ಬ ವಿಮರ್ಶಕ ಜ್ಞಾನದ ಸ್ವತಂತ್ರ ಆಲೋಚನೆಗೆ ಸೂಕ್ಷ್ಮಗೊಳಿಸಿದ ಸಾಣೆಯ ಸಂವೇದನೆಯಂತೆ ತನ್ನನ್ನು ಆಂಗ್ಲ ವ್ಯಾಮೋಹದಿಂದ ಕನ್ನಡದ ಕಡೆಗೆ ತಂದರು ಎಂಬ ನಮ್ರತೆಯನ್ನು ಸೂಚಿಸುತ್ತಾರೆ. 'ಗೆಳೆಯರ ಗುಂಪು' ಒಂದು ಸಾಂಸ್ಥಿಕ ರಚನೆಯಾಗಿ ರೂಪಿತವಾದ ತನ್ನ ಜಗತ್ತಿನ ವಿಸ್ತಾರವನ್ನು ಅರ್ಥೈಸಿದ್ದಾರೆ. ಗೋಕಾಕ್ ಅವರ ದೃಷ್ಟಿಯಲ್ಲಿ ಗೆಳೆಯರ ಗುಂಪು ಕೊನೆಗೊಂಡಿಲ್ಲ. ಅದರ ಕಾರ್ಯಗಳು ನಿಂತಿಲ್ಲ. ಬೇರೆ ಬೇರೆಯ ಅವತಾರಗಳಲ್ಲಿ, ವ್ಯಕ್ತಿಗಳ ಮೂಲಕ ಸದಾ ಚಲನೆಗೊಳ್ಳುತ್ತಿದೆ ಎಂಬ ಚಾರಿತ್ರಿಕ ಅಂಶಗಳನ್ನು ತೀರ್ಮಾನಿಸಿದ್ದಾರೆ. ಗೋ. ವೆ. ಚುಳಕಿ ಅವರ 'ಗೆಳೆಯರ ಗುಂಪಿ'ನ ಮೊದಲು ಎಂಬ ಲೇಖನವು ವಿ. ಕೃ. ಗೋಕಾಕ್ ಅವರ ವಿಚಾರಗಳ ಪೂರ್ವ ಅನುಭವಗಳು ಇಲ್ಲಿ ದಾಖಲಾಗಿವೆ. ಗೆಳೆಯರ ಗುಂಪು ಒಂದು ಸಾಂಘಿಕ ಸ್ವರೂಪವನ್ನು ಪಡೆಯಲು ಸಾಹಿತ್ಯದ ಚಿಂತನೆಯು 'ತಿಲಕ ಸಂಘ'ದ ಪ್ರೇರಣೆಯ ಮೂಲಕ ಮುಖ್ಯವಾಹಿನಿಯಾಗಿ ಕಂಡು ಬಂದಿತು. ಸ್ನೇಹವೇ ಮುಖ್ಯ ವೇದಿಕೆಯಾಗಿ ಅದು ಅರವಿಂದರ, ರವೀಂದ್ರರ ಪೌರಾತ್ಯ ಚಿಂತನೆಯನ್ನು ಬೆಳೆಸಲು ಹಾಗೂ ಷೆಲ್ಲಿ, ಕೀಟ್ಸ್, ಬ್ರೌನಿಂಗ್ ಮೊದಲಾದ ಪಾಶ್ಚಾತ್ಯರ ಸಾಹಿತ್ಯ ಅಧ್ಯಯನಕ್ಕೂ ವೇದಿಕೆಯಾಗಿ ಮುಂದೆ ಗೆಳೆಯರ ಗುಂಪಾಗಲು ಮುಖ್ಯ ಕಾರಣಗಳನ್ನು ನೆನೆಪಿನ ಸೂಕ್ಷ್ಮಗಳನ್ನು ಹಂಚಿಕೊಂಡಿದ್ದಾರೆ.

> ನಾಡಿನ ನಾಡಿಯನ್ನು ಹಿಡಿದು ಅದರ ಜೀವಜೀವಾಳವನ್ನು ತಮ್ಮ ಹಾಡಿನಲ್ಲಿಯೂ, ಪಾಡಿನಲ್ಲಿಯೂ, ವೈಯಕ್ತಿಕವಾಗಿಯೂ, ಸಾಂಘಿಕವಾಗಿಯೂ ಪಡಿಮೂಡಿಸಿ ನಾಡಿನ ಮೇಲ್ಮೆಯನ್ನು ಸಾಧಿಸಲು ಪ್ರತ್ಯಕ್ಷವಾಗಿಯೂ, ಅಪ್ರತ್ಯಕ್ಷವಾಗಿಯೂ ಹವಣಿಸಿದವರು ಅಣ್ಣ ಬೇಂದ್ರೆಯವರು.[೨]

ಮಧುರಚೆನ್ನ ಅವರು ಸ್ವತಂತ್ರ ಪೂರ್ವದಲ್ಲಿಯೇ ಬೇಂದ್ರೆ ಅವರ ಸಾಹಿತ್ಯದ ಜಾಡನ್ನು ಆಪ್ತವಾಗಿ ಗಮನಿಸಿದವರು. ಇದೇ ರೀತಿ ಕೀರ್ತಿನಾಥ ಕುರ್ತಕೋಟಿ ಅವರು ಕೂಡ ಬೇಂದ್ರೆ ಅವರ ಸಾಹಿತ್ಯದ ಆಳ ಅಭ್ಯಾಸಿಗಳಲ್ಲಿ ಒಬ್ಬರಾಗಿದ್ದಾರೆ. ಇಂತಹ ಸಾಂಘಿಕ ದೃಷ್ಟಿಕೋನದಲ್ಲಿ ಬೇಂದ್ರೆಯವರ ಎರಡು ಪತ್ರಗಳನ್ನು ಉದಾಹರಿಸಿ ಮಧುರಚೆನ್ನರು ತಮ್ಮ ಅನುಭಾವ ಚಿಂತನೆಯನ್ನು ಸ್ಪಷ್ಟಪಡಿಸಿದ್ದಾರೆ.

ಪ. ವೆಂಕೋಬಾಚಾರ್ಯರ 'ಕವಿ ಬೇಂದ್ರೆ' ಕವಿತೆ, ಸಿಂ. ಪಿ ಲಿಂಗಣ್ಣನವರ 'ನಾನೂ ಶ್ರೀ ಬೇಂದ್ರೆಯವರೂ', ಮ. ಗೋಪಾಲಕೃಷ್ಣ ಅವರ 'ವಿಚಿತ್ರ ಬೇಂದ್ರೆಯವರು' ಈ ಮೂರು ಬರಹಗಳೂ ಕೂಡ ಬೇಂದ್ರೆ ಅವರ ವ್ಯಕ್ತಿತ್ವ ಕುರಿತ ತಮ್ಮ ಅನುಭವದ ನೆಲೆಯಲ್ಲಿಯೇ ವಿಸ್ತರಿಸುವ ಅಭಿಪ್ರಾಯಗಳಾಗಿ ಗಮನಿಸಬಹುದು. ಬೇಂದ್ರೆ ಅವರ ಪರಿಚಯ, ಕಾವ್ಯದ ಆಕರ್ಷಣೆ, ಬಾಂಧವ್ಯಗಳು ಮೂಡಿದ ಬಗೆ ಈ ಅಂಶಗಳೆಲ್ಲಾ ಗೆಳೆಯರಗುಂಪಿನ ಒಂದಲ್ಲೊಂದು ಕಾರ್ಯ ಸಂಜಾತವಾಗಿ ಒದಗಿದ ಕೃಷಿಯೆಂಬಂತೆ ಪರಿಚಿತವಾದ ಬಗೆಗಳನ್ನು ಪರಿಚಯಿಸಿರುವುದನ್ನು ಕಾಣಬಹುದು.

೩. ೨. ಗೊರೂರರು ಪರಿಚಯಿಸಿದ ವ್ಯಕ್ತಿತ್ವ ಸಾಹಿತ್ಯ

'ಕವಿವರ ಬೇಂದ್ರೆ' ಎಂಬ ಕೃತಿಯಲ್ಲಿಯೇ ವಿಶಿಷ್ಟವಾದ ಲೇಖನವೆಂದರೆ ಗೊರೂರು ರಾಮಸ್ವಾಮಿ ಅಯ್ಯಾಂಗಾರ ಅವರ 'ಬೇಂದ್ರೆಯವರ ವ್ಯಕ್ತಿತ್ವ'. ಬೇಂದ್ರೆ ಅವರು ವಸಾಹತುಶಾಹಿಕಾಲಘಟ್ಟದ ತಲ್ಲಣಗಳಿಗೆ ಉತ್ತರಿಸಿದ ಬಗೆಯಿಂದ ಒಬ್ಬ ರಾಷ್ಟ್ರೀಯ ಕವಿಯಾಗಿ ಹೊರಹೊಮ್ಮಿದ ಅಂಶಗಳನ್ನು ಪರಿಚಯಿಸುತ್ತಾರೆ. ಜರ್ಮನಿಯಂತಹ ವಿದೇಶದಲ್ಲಿಯೂ, ಭಾರತದ ವಿವಿಧ ಪತ್ರಿಕೆಗಳಲ್ಲೂ ಇವರ ಸಾಹಿತ್ಯ ಕುರಿತು ವಿಮರ್ಶೆಗಳು ಬೆಳಕು ಕಂಡು ಇನ್ನೂ ವ್ಯಾಖ್ಯಾನಿಸುವ ಕಾಲವೆಂದು ಗೊರೂರರು ಸ್ಪಷ್ಟಪಡಿಸಿದ್ದಾರೆ. ಬೇಂದ್ರೆ ಒಬ್ಬ ಬರಹಗಾರನಾಗಿ ಮಾತ್ರ ಉಳಿಯದೇ ನಾಡಿನಾದ್ಯಾಂತ ತಮ್ಮ ಕಾವ್ಯಶಕ್ತಿಗೆ ತಾವೇ ಧ್ವನಿಯಾಗಿ ಕಿಂದರಜೋಗಿಯಂತೆ ಕನ್ನಡದ ನೆಲವನ್ನು ಸವೆಸಿದ ಬಗೆಯ ಹಿನ್ನಲೆಯಲ್ಲಿ ವ್ಯಕ್ತಿತ್ವದ ಬಹುಮುಖಿ ಚಿಂತನೆಯನ್ನು ಸಹೃದಯ ವಿಮರ್ಶೆಯ ನೆಲೆಯಲ್ಲಿ ವಿಸ್ತರಿಸಿದ್ದಾರೆ. ನಿಟ್ಟೂರು ಶ್ರೀನಿವಾಸರಾಯರು, ಮಾಸ್ತಿ ಮೊದಲಾದವರ ಒಡನಾಟದಲ್ಲಿ ಬೇಂದ್ರೆ ಅವರ ನಾಡ ಪ್ರಯಾಣ ಎಂದಿಗೂ ಬೇಸರಿಸದ ಉತ್ಸಾಹದ ಚಿಲುಮೆಯಾಗಿತ್ತೆಂಬುದಕ್ಕೆ ಈ ಒಡನಾಟಗಳ ನಡುವಿನ ಕೆಲವು ಹಾಸ್ಯಗಳನ್ನು ದಾಖಲಿಸಿದ್ದಾರೆ. ಈ ತಮ್ಮ ಒಡನಾಟದಲ್ಲಿ ಬೇಂದ್ರೆ ಅವರ ಸಹೃದಯತೆ, ಬಡತನದ ಆಪ್ತತೆ ಹಾಗೂ ಸರಳತೆಯಲ್ಲಿ ಗಾಂಧಿಯನ್ನೇ ಆದರ್ಶ ಮಾಡಿಕೊಂಡ ಕಾಲದಲ್ಲಿ ಬೇಂದ್ರೆ ಅವರಲ್ಲಿಯೂ ಇಂತಹ ಸರಳತೆ ಸಹಜವಾಗಿತ್ತೆಂಬ ಅರಿವನ್ನೂ ತನ್ನ ಬರಹದಲ್ಲಿ ಗೊರೂರರು ಸ್ಪಷ್ಟಪಡಿಸಿದ್ದಾರೆ. ಬೇಂದ್ರೆ ಅವರು ನೇರವಾಗಿ ಉತ್ತರಿಸುವ ಗುಣವನ್ನು ಶಿವಮೊಗ್ಗ ಸಾಹಿತ್ಯ ಸಮ್ಮೇಳನದಲ್ಲಿ ಕೆಲವು ಪ್ರಶ್ನೆಗಳಿಗೆ ಉತ್ತರಿಸಿ, ಮೈಸೂರಿನವರ ಕೆಲವು ಟೀಕೆಗಳಿಗೆ ಅಖಂಡ ಕರ್ನಾಟಕದ ತತ್ತ್ವವನ್ನು ಧೀಮಂತವಾಗಿ ಸಾರಿದ ಬಗೆಯನ್ನು ದಾಖಲಿಸಿದ್ದಾರೆ. 'ಅದು ಎಚ್ಚರವಲ್ಲ, ಅರಿವು' ಎಂಬ ಸಂಕೇತವನ್ನೂ ಸ್ಪಷ್ಟಪಡಿಸಿದ್ದಾರೆ.

ಗೊರೂರು ರಾಮಸ್ವಾಮಿ ಅಯ್ಯಾಂಗಾರರು ತಮ್ಮ ಲೇಖನದಲ್ಲಿ ವ್ಯಕ್ತಿತ್ವ ಪರಿಚಯದ ಜೊತೆಗೆ ಬೇಂದ್ರೆ ಅವರು ರಚಿಸಿದ ಸಾಹಿತ್ಯದ ನೆಲೆ–ಬೆಲೆಯನ್ನೂ ಕುರಿತು ಪರಿಚಯಿಸಿದ್ದಾರೆ. ಬೇಂದ್ರೆಯಂತಹ ಕವಿಯು ವಸಾಹತುಶಾಹಿ ಧೋರಣೆಗೆ ಸ್ಪಂದಿಸಿದ ಬಗೆಯನ್ನೂ, ಸ್ವಿಕರಿಸಬೇಕಾದ ಮನೋಸಾಮರ್ಥ್ಯವನ್ನೂ ಗುರ್ತಿಸಿರುವುದನ್ನು ಕಾಣಬಹುದು.

> ಬೇಂದ್ರೆಯವರ ಕಾವ್ಯ ಕನ್ನಡದಲ್ಲಿ ಸಾಧಿಸಿರುವ ಕಾರ್ಯವನ್ನು ಅಂದರೆ ರಾಜಕೀಯವಾದ ಕ್ರಾಂತಿಯನ್ನು ಜನಜಾಗ್ರತೆಯನ್ನು ಮತ್ತಾವ ಕವಿಯೂ ಸಾಧಿಸಿಲ್ಲ. ಇವರ ಪದ್ಯಕ್ಕಾಗಿಯೇ ಸರ್ಕಾರ ಇವರನ್ನು ಬಂಧನದಲ್ಲಿಟ್ಟಿತು. ಕವಿಯು ಸ್ವೇಚ್ಛೆಯಿಂದ ಹಕ್ಕಿಯಂತೆ ತನಗೆ ತೋರಿದುದನ್ನು ಹಾಡಿದುದಕ್ಕಾಗಿ ಅವನನ್ನು ಬಂಧನದಲ್ಲಿಟ್ಟ ಉದಾಹರಣೆ ಭಾರತದಲ್ಲಿ ಮತ್ತೆಲ್ಲಿಯೂ ಇಲ್ಲ. ಅಂದರೆ ಕವಿಗಳ ಮೇಲೆ ಸರಕಾರದ ವಕ್ರ ದೃಷ್ಟಿ ಬಿದ್ದಿಲ್ಲವೆಂದಲ್ಲ. ಆದರೆ ಅವರನ್ನು ಸರ್ಕಾರ ಬಂಧಿಸಿದುದು ಅವರು ರಾಜಕೀಯವಾಗಿ ಪ್ರವೇಶಿಸಿ ಮಾಡಿದ ಚಳುವಳಿಗಾಗಿ. ಆದರೆ ಬೇಂದ್ರೆಯವರನ್ನು ಅವರು ರಾಜಕೀಯವಲ್ಲದ ಪದ್ಯಗಳನ್ನು ಬರೆದು ಹಾಡಿಕೊಳ್ಳುತ್ತಿದ್ದುದಕ್ಕಾಗಿಯೇ ಬಂಧಿಸಿದರು. ಅಂದರೆ ರಾಜಕೀಯ ಚಳುವಳಿಗಾರನಲ್ಲದವನು

> ಬರದರೂ ಅವುಗಳ ಕ್ರಾಂತಿಯ ಸ್ವಭಾವ ಹಾಗೇ ಇದ್ದವು. ಇನ್ನು ಬೇಂದ್ರೆಯವರು ರಾಜಕೀಯ ಆಂದೋಳನಕ್ಕಾಗಿಯೇ ಪ್ರಚಾರ ಸಾಹಿತ್ಯವನ್ನು ಬರೆದಿದ್ದರೆ ಅದರ ಫಲ ಹೇಗೆ ಆಗುತ್ತಿದ್ದಿತೆಂಬುದು ಊಹನೆಯಿಂದ ಮಾತ್ರ ಅರಿಯಬಹುದಾದ ಮಾತು. ಬೇಂದ್ರೆಯವರು ಮಗುವಿನಂತೆ ಕೋಮಲವಾಗಿರುವಂತೆಯೇ ಅವರ ಮಾತುಗಳು ಅವಶ್ಯಕವಾದಾಗ ಗಂಡುಮೆಟ್ಟಾಗುತ್ತವೆ. ವೀರವಾಣಿ ಸಿಡಿಲು ಗುಡುಗು ಬಾಂಬು ಆಗುತ್ತವೆ. 'ಮೂವತ್ತ ಮೂರುಕೋಟಿ' ನಮ್ಮವರ ಹೃದಯವನ್ನು ಕೆಣಕಿದಂತೆ ಪರರ ಕಣ್ಣನ್ನೂ ಕೆರಳಿಸಿದವು. 'ತುತ್ತಿನ ಚೀಲ' ನಮ್ಮ ಎದುರಾಳಿಗಳ ಕಣ್ಣಿಗೆ ಮದ್ದಿನ ಚೀಲವೇ ಆಯಿತು. ನರಬಲಿ 'ಇದುವೆ ಕಾಳಿಯ ಪೂಜೆಯು ಶುದ್ಧ, ಇದಕ್ಕೆ ಹುಂಬರು ಎಂಬರು ಯುದ್ಧ' ಸದ್ಕಾರವನ್ನೇ ಬೇಂದ್ರೆಯವರ ಮೇಲೆ ಕೆಡವಿತು. ಸರ್ಕಾರ ಇವರ ಕೆಲಸ ಕಿತ್ತುಕೊಂಡಿತು. ಮುಗದಿನಲ್ಲಿ ಇವರನ್ನು ಬಂಧನದಲ್ಲಿರಿಸಿತು. ಅದೇನೂ ಆಶ್ಚರ್ಯವಲ್ಲ. ಸರ್ಕಾರಗಳು ಮತ್ತೇನನ್ನೂ ಮಾಡಲರಿಯದವು. ಸರ್ಕಾರ ಕವಿಯ ಸ್ವಾತಂತ್ರ್ಯವನ್ನು ಅಪಹರಿಸಿತೇ ಹೊರೆತು ಕವಿಯ ಕವಿತಾ ಶಕ್ತಿಯನ್ನು ಅಪಹರಿಸಲಿಲ್ಲ.[೨೫]

ಆಯಾ ಕಾಲಧರ್ಮದ ತುರ್ತುಗಳಿಗೆ ತನ್ನ ಬರಹದ ಮೂಲಕ ಸಮಾಜವನ್ನು ಎಚ್ಚರಿಸುವ ಕಾರ್ಯವನ್ನು ಕವಿಗಳು ಪಂಪನಾದಿಯಿಂದ ಇಂದಿನವರೆಗೂ ನಿರ್ವಹಿಸುತ್ತಾ ಬಂದಿದ್ದಾರೆ.

ಹತ್ತೊಂಬತ್ತು ಹಾಗೂ ಇಪ್ಪತ್ತನೇ ಶತಮಾನದ ಬಹುಮುಖ್ಯ ಜವಾಬ್ದಾರಿಯೆಂದರೆ 'ಸ್ವಾತಂತ್ರ್ಯ' ಎಂಬ ಪದಕ್ಕೆ ಪ್ರತಿಕ್ರಿಯೆ ನೀಡುವುದು. ಆ ಪ್ರತಿಕ್ರಿಯೆ ಯುದ್ಧರೂಪದಲ್ಲಾದರೂ ಸರಿಯೇ, ಶಾಂತರೂಪದಲ್ಲಾದರೂ ಸರಿಯೇ, ಇದು ಸಮಾಜದೊಳಗಿನ ಕ್ರಿಯೆಯಾದರೆ ಒಬ್ಬ ಅಕ್ಷರ ಪಡೆದವನು ಯೋಚಿಸುವ ರೀತಿಯೇ ಬೇರೆಯಾಯಿತು. ಅದು ವಸಾಹತು ಧೋರಣೆಯ ವಿರುದ್ಧ ಪಡೆದುಕೊಳ್ಳುವ ಮುಕ್ತ ಭಾರತದ ವ್ಯವಸ್ಥೆಯಲ್ಲಿ ಬೇಂದ್ರೆ ಅವರು ಅತ್ಯುತ್ತಮವಾಗಿ ಸ್ಪಂದಿಸಿದರು. ಆ ಸ್ಪಂದನೆ ಅವರ ಪೂರ್ಣ ಬದುಕನ್ನೇ ತ್ಯಾಗ ಮಾಡುವ ಎಲ್ಲಾ ಕ್ರಿಯೆಗಳಲ್ಲೂ ಜರುಗಿತು. ಕವಿ ಇನ್ನೂ ಸತ್ವ ಹಾಗೂ ವಿಶ್ವಚಿಂತನೆಯೊಂದಿಗೆ ಬೆಳೆಯಲು ಸಹಕರಿಸಿತು. ಈ ಅಂಶಗಳನ್ನು ಗೊರೂರು ರಾಮಸ್ವಾಮಿ ಅಯ್ಯಂಗಾರ್ ವ್ಯವಸ್ಥಿತವಾಗಿ ಗಮನಿಸಿದ ಲೇಖಕರಾಗಿ ಕಾಣಬಹುದು.

ಬೇಂದ್ರೆ ಅವರ ಕಾವ್ಯದ ಬಲವು ಜನಪದ ಮೂಲಬೇರಿನಲ್ಲಿಯೇ ಅಡಗಿದೆ. ಅದು ಸಂಸ್ಕೃತ ಪದ ಸಂಪತ್ತಿನಿಂದ ಬಂದಿಲ್ಲ ಅದು ಅಧ್ಯಯನ ರೂಪದ ಜ್ಞಾನದ ಬಲವಾಗಿ ಹೊರಹೊಮ್ಮಿದೆ. ಎಂಬುದನ್ನು ಕವಿಯ ಕಾವ್ಯದಿಂದ ಗೊರೂರ ಅವರು ಗುರ್ತಿಸುತ್ತಾ ಅದು ಜಾನಪದೀಯ ಹಾಡುಗಳು, ಜನ ಸಂಪರ್ಕದ ಅರಿವು ಎನ್ನುತ್ತಾರೆ. ಮುಂದೆ ಇದೇ ಅಂಶವನ್ನು ಕುರ್ತುಕೋಟಿ ಅವರ ವಿಮರ್ಶೆ ಬರಹಗಳಲ್ಲಿ, ಜಿ. ಕೃಷ್ಣಪ್ಪ ಅವರ ವಿಮರ್ಶಾ ಬರಹಗಳಲ್ಲಿ ವಿಸ್ತಾರವಾಗಿ ಗಮನಿಸಬಹುದು.

ಚಿಂ. ಗ. ಕುಲಕರ್ಣಿ ಅವರ 'ಅಪೇಕ್ಷೆ' ಹಾಗೂ ನಾ. ಶ್ರೀ. ರಾಜಪುರೋಹಿತ ಅವರ 'ಮುಮುಕ್ಷು ಬೇಂದ್ರೆ' ಎಂಬ ಈ ಎರಡೂ ಲೇಖನಗಳು ಬೇಂದ್ರೆ ಅವರ ಒಡನಾಟ, ಗೆಳೆಯರ

ಗುಂಪಿನ ಮಹತ್ವ ಕಾರ್ಯ, ಅರವಿಂದರ ಪ್ರಭಾವ ಹಾಗೂ ಕನ್ನಡ–ಮರಾಠಿ ಬರಹಗಾರರೊಂದಿಗೆ ಬೇಂದ್ರೆ ಅವರ ಸ್ನೇಹಮಯ ಕಾವ್ಯಪ್ರಪಂಚ ತೆರೆದುಕೊಂಡ ಬಗೆಯನ್ನು ವಿಸ್ತರಿಸಿದ್ದಾರೆ.

೪. 'ದತ್ತ ಸಾಹಿತ್ಯ' ಒಡನಾಟದ ಸೂಕ್ಷ್ಮ ಬರಹಗಳು

ಸಿಂ. ಪಿ ಲಿಂಗಣ್ಣ ಅವರು ಬೇಂದ್ರೆ ಅವರ ಕೃತಿ ವಿಚಾರಗಳ ಪರಿಚಯ ಎಂಬ ಅಡಿಬರಹದಲ್ಲಿ ದತ್ತಸಾಹಿತ್ಯವನ್ನು ರಚಿಸಿದ್ದಾರೆ. ಬೇಂದ್ರೆ ಸತ್ಕಾರ ಸಮಿತಿಯವರ ಅಪೇಕ್ಷೆಯ ಮೇರೆಗೆ ಈ ಕೃತಿ ರಚನೆಗೊಂಡಿದೆ. ೧೯೪೫–೪೬ರವರೆಗೆ ಬೇಂದ್ರೆ ಅವರು ರಚಿಸಿದ ಸಾಹಿತ್ಯವನ್ನು ಆಪ್ತವಾಗಿ ಅಧ್ಯಯನ ಮಾಡಿದ ಸಿಂಪಿ ಅವರು ಪರಿಚಯಾತ್ಮಕ ನೆಲೆಯಲ್ಲಿ ಅರ್ಥೈಸಿದ್ದಾರೆ. ಈ ಬರಹವನ್ನು 'ಕಥನ ವಿಮರ್ಶೆ' ಎಂದು ಗುರ್ತಿಸಬಹುದು. ಸಹೃದಯ ವಿಮರ್ಶೆಯ ನೆಲೆಯಲ್ಲಿಯೇ ಬರಹವನ್ನು ಇನ್ನೂ ಆಪ್ತಗೊಳಿಸುವ ಸಿಂ. ಪಿ. ಲಿಂಗಣ್ಣ ಅವರು ಕೃತಿಯ ಪ್ರಾರಂಭದಿಂದ ಕೊನೆಯವರೆಗೂ ಒಂದು ಕಥನ ವಿಧಾನವನ್ನು ಅನುಸರಿಸಿದ್ದಾರೆ. ಬೇಂದ್ರೆ ಅವರ ಜೀವನ–ಸಾಹಿತ್ಯ ಚಿಂತನೆಯನ್ನು ಕೃತಿ ವಿಚಾರಗಳ ಮೂಲಕವೇ ನೆಯ್ಗೆಯಂತೆ ಸಂಬಂಧಗೊಳಿಸಿದ್ದಾರೆ. ಬೇಂದ್ರೆ ಅವರ ಕಾವ್ಯ ಸಾಹಿತ್ಯ ಒಂದು ಮಹಾಕಾವ್ಯದ ಸ್ವರೂಪವನ್ನು ಪಡೆಯುವ ಎಲ್ಲಾ ಮಾದರಿಗಳನ್ನು ವಿಮರ್ಶೆಯ ಸೂಕ್ಷ್ಮತೆಯಲ್ಲಿ ಗಮನಿಸಿದ್ದಾರೆ. ಕನ್ನಡ ಸಾಹಿತ್ಯದ ಸಮಕಾಲೀನ ಅವಲೋಕನೆಯ ಹೆಜ್ಜೆಗಳೂ ಇಲ್ಲಿ ಕಂಡುಬರುತ್ತವೆ.

ಒಂದು ವಿಚಾರವನ್ನು ವಿಸ್ತರಿಸಲು ಸಿದ್ಧಪಡಿಸಿಕೊಳ್ಳುವ ವೇದಿಕೆಯು ಹಿಂದಿನ ವಿಚಾರಕ್ಕೂ ತಾನೂ ಚಾಚಿಕೊಳ್ಳುವ ಸಂಬಂಧ ಇಲ್ಲಿ ವಿಶಿಷ್ಟವಾದುದು. ಲೇಖಕರೇ ತಿಳಿಸುವಂತೆ ಬೇಂದ್ರೆ ಅವರ ಸಾಹಿತ್ಯವನ್ನು ಸಂದರ್ಭಕ್ಕೆ ಅನುಸಾರವಾಗಿ ವಿಸ್ತರಿಸಿದ್ದಾರೆ. ಎಂಟು ಭಾಗಗಳಾಗಿ ವಿಸ್ತಾರಗೊಳ್ಳುವ ಈ 'ದತ್ತ ಸಾಹಿತ್ಯ' ಕೃತಿಯು ಹಲವು ಸ್ವತಂತ್ರ ವಿಚಾರಗಳನ್ನು ಅವಲೋಕಿಸುತ್ತದೆ. ಇದನ್ನು ವಿಚಾರ ಸಾಹಿತ್ಯವೆಂದೂ ಕೂಡ ಕರೆಯಬಹುದು. ಒಂದು ವಿಚಾರವನ್ನು ಚರ್ಚಿಸುತ್ತಲೇ ಬೇಂದ್ರೆ ಅವರ ಸಾಹಿತ್ಯ ಅದರಲ್ಲೂ ಕಾವ್ಯದ ಕಾರಣ ಅಭಿವ್ಯಕ್ತಗೊಳ್ಳುವ ಅಂಶಗಳನ್ನು ಸೂಚಿಸಿದ್ದಾರೆ. ಅಂಬಿಕಾತನದತ್ತನೊಡನೆ ಪರಿಸರ ಅವಲೋಕನೆಯನ್ನು ಕನ್ನಡ ಸಾಹಿತ್ಯದ ಕಾಲಘಟ್ಟದ ಹೊಸ ಆಹ್ವಾನದೊಂದಿಗೆ ಒಬ್ಬ ಕವಿಯ ಉದಯವಾಯಿತು ಎಂಬ ಸಿಂ. ಪಿ. ಲಿಂಗಣ್ಣ ಅವರ ಚಿಂತನೆಯು ತಾರ್ಕಿಕವಾದುದು. ಕವಿಸಮಯದ ಅವಲೋಕನೆಯಲ್ಲಿ ಕವಿ ಕಾಲಘಟ್ಟದ ತುರ್ತಾಗಿ ಉದಯಿಸುತ್ತಾನೆ. ಅವನ ಪ್ರತಿಯೊಂದು ಸೂಕ್ಷ್ಮತೆಗಳು ಸಾಮಾನ್ಯ ಅಭಿವ್ಯಕ್ತಿಗಿಂತ ಭಿನ್ನವಾಗಿರುತ್ತವೆ ಎಂಬಂತೆ ಗಮನಿಸಿದ್ದಾರೆ. 'ಭಾರ್ಗವೋದಯ' ಎಂಬ ಶೀರ್ಷಿಕೆಯಲ್ಲಿ ಬೇಂದ್ರೆ ಅವರ ವ್ಯಕ್ತಿತ್ವ ಹಾಗೂ ಸಾಹಿತ್ಯ ಉದಯವಾದ ಬಗೆಯನ್ನು ಈ ರೀತಿ ತಿಳಿಸಿದ್ದಾರೆ.

> ಅಂಥ ವಿಷಮ ಕಾಲದಲ್ಲಿ ಭಾರ್ಗವ ಬಿಂದುವೊಂದು ಪೂರ್ವ ಕ್ಷಿತಿಜದ ಮೇಲೆ ಸಪ್ಪಳಿಲ್ಲದೆ ಅಪೂರ್ವವಾಗಿ ಕಂಗೊಳಿಸಿತು. ಆ ಬಿಂದು ಚಿಕ್ಕದಾದರೂ ಚೊಕ್ಕ ಬೆಳಕಿನದು; ಅದು ಬೆಳಗಿನ ಚಿಹ್ನವನ್ನು ತಂದಿತು; ಸೂರ್ಯದೇವನ ಹಿಂದು ಮುಂದಿದ್ದರೂ ಸ್ವತಂತ್ರ ಪ್ರಕಾಶ ಅದಕ್ಕೆ, ಚಂದ್ರನ ಸಹಚರವಾಗಿ ಶುಕ್ಲಕೃಷ್ಣ ಪಕ್ಷಗಳನ್ನು ಪಡೆದಿತ್ತು. ಹತ್ತೊಂಬತ್ತನೆಯ

ಶತಮಾನ ಮುಗಿಯುವುದಕ್ಕೂ ಕನ್ನಡಿಗರ ಕಾಳ ರಾತ್ರಿಯು ಕಳೆದು ಬೆಳಗು ಹೊಮ್ಮುವುದಕ್ಕೂ ಮೇಳವಿಸಿತು. ಆಗ ಕಣ್ತೆರೆದೆದ್ದ ಕನ್ನಡಿಗರು 'ಇದು ಬರಿ ಬೆಳಗಲ್ಲೋ ಅಣ್ಣಾ' ಎಂದು ಅಚ್ಚರಿಗೊಂಡರು; 'ಪ್ರೀತಿಯಿಂದ ಮೈದೋರಿದ ಶಾಂತ'ರಸದಿಂದ ಸೈವಟ್ಟರು. ಆ ಭಾರ್ಗವ ಬಿಂದುವೆಂದರೆ ಶ್ರೀ ದತ್ತಾತ್ರಯ ರಾಮಚಂದ್ರ ಬೇಂದ್ರೆಯವರು.[೨೬]

ಒಬ್ಬ ಕವಿ ಜನಿಸುವುದು ಸಮಾಜದ ವಿಸ್ಮಯ ಹಾಗೂ ಅದೊಂದು ಕರ್ತವ್ಯ ಎಂಬಂತೆ ಲೇಖಕರು ಪರಿಚಯಿಸುತ್ತಾರೆ. ಆ ಕಾಲಘಟ್ಟದ ಬರೆಹಗಳಲ್ಲಿ, ವಿಶೇಷ ನುಡಿಗಳಲ್ಲಿ ಒಂದು ಹೊಸ ಪಾತ್ರವನ್ನು ಸಮಾಜಕ್ಕೆ ದರ್ಶನ ಮಾಡಲು ಅದರ ಪೂರ್ಣಾವಲೋಕನೆಯ ಹೊಗಳಿಕೆಯೂ, ವಿಶಿಷ್ಟ ಗೌರವವೂ ತಾನಾಗಿಯೇ ಮೂಡಿಸುವ ಕಾಲವದು. ಇಂದು ಈ ರೂಪಗಳು ಮೈಲಿಗೆಯಾಗಿ 'ಹೆಸರೊಂದು ಜಾಡ್ಯವೆಂಬಂತೆ' ಕವಿಗಿಂತ ಕೃತಿ ಮುಖ್ಯ ಎಂಬ ನಿಲುವಿನಲ್ಲಿ ಸಮಾಜ ಸಾಹಿತ್ಯವನ್ನು ಅಪೇಕ್ಷಿಸುತ್ತಿದೆ.

ಹತ್ತೊಂಬತ್ತನೆಯ ಶತಮಾನದ ಕೊನೆಯ ಕಾಲವು ಹಾಗೂ ಇಪ್ಪತ್ತನೆ ಶತಮಾನದ ಪ್ರಾರಂಭದಲ್ಲಿ ರಾಷ್ಟ್ರೀಯ ಚಳುವಳಿಗಳ ಜೊತೆಗೆ ನಾಡಿನ ಏಕೀಕರಣ ಚಿಂತನೆಯು ಪ್ರಾರಂಭಗೊಂಡ ಅಂಶಗಳು ಆ ಕಾಲದ ಯಾವುದೇ ಕೃತಿಯಾಗಲಿ ಸ್ಪಷ್ಟವಾಗಿ ತಿಳಿಯುತ್ತದೆ. ಶಾಂತಕವಿಗಳು, ಆಲೂರು ವೆಂಕಟರಾಯರು, ಮುದವೀಡು ಕೃಷ್ಣರಾಯರು, ಬಿ. ಎಂ. ಶ್ರೀಕಂಠಯ್ಯ., ಟಿ ಎಸ್ ವೆಂಕಣ್ಣಯ್ಯ ಮೊದಲಾದವರು ತಮ್ಮ ಸಾಹಿತ್ಯ ಚಿಂತನೆ ಪ್ರಾರಂಭಗೊಳಿಸಿದ ಕಾಲದಲ್ಲಿ ಬೇಂದ್ರೆಯಂತಹ ಕವಿಯ ಸೃಷ್ಠಿಯೂ ಕೊಡುಗೆಯಂತೆ ನಾಡಿಗೆ ಮೈತಾಳಿತೆಂಬ ಅಂಶಗಳ ಅವಲೋಕನೆ ಕಾಣಬಹುದು.

ಸಿಂ.ಪಿ ಲಿಂಗಣ್ಣ ಅವರು ಬೇಂದ್ರೆ ಅವರ ಕಾವ್ಯ ಜಗತ್ತನ್ನು ಪೂರ್ಣಾವಲೋಕನೆಯಿಂದ ನಾಲ್ಕು ವಿಭಾಗದಿಂದ ಪರಿಚಯಿಸುತ್ತಾರೆ ಒಂದು–ಸೃಷ್ಠಿಮಾತೆಯೊಡನೆ, ಎರಡು–ಆತ್ಮವಿಹಾರ, ಮೂರು–ಮಹಾಜೀವನ ದಾಹ, ನಾಲ್ಕು–ದೇಶಪ್ರೇಮ.

ಕವಿಯು ಬ್ರಹ್ಮನಂತೆ ಸೃಷ್ಟಿಕರ್ತನಾಗಿ ಶಬ್ದಸೃಷ್ಟಿಯಲ್ಲಿ ಜಗತ್ತನ್ನು ಆನಂದಗೊಳಿಸುವ ಕನಸು ಹೊಂದಿರುತ್ತಾನೆ. ಈ ಆನಂದದ ಮೂಲವೇ ರಸಸ್ವಾದನೆಯಾಗಿದೆ. ಕವಿಗೆ ಈ ಆನಂದ, ರಸ, ಪ್ರೇಮ, ರಮಣೀಯತೆ ಎಂಬ ನಾಲ್ಕು ಮುಖಗಳಿವೆ. ಕಾವ್ಯ ಬ್ರಹ್ಮನ ಚತುರ್ಮುಖಗಳಲ್ಲಿ ಆನಂದವು ದೇವ; ಆನಂದಕ್ಕೆ ಕಾರಣವಾದ ರಸವು ಜೀವ; ರಸಕ್ಕೆ ಪ್ರೇಮವು ಭಾವ; ರಮಣೀಯತೆಯು ಜಗವೆಂಬ ಬೇಂದ್ರೆ ಅವರ ಕಾವ್ಯೋದ್ದೇಶದ ನುಡಿಗಳನ್ನು ಸಿಂಪಿ ಅವರು ಸೂಕ್ಷ್ಮವಾಗಿ ಗಮನಿಸಿದ್ದಾರೆ. ಕವಿಯು ಸೃಷ್ಟಿಯನ್ನು ಕಾಣುವ ರೀತಿಯ ಬೇಂದ್ರೆ ಅವರ ಕಾವ್ಯದಲ್ಲಿ ಹೆಜ್ಜೆ ಹೆಜ್ಜೆಗೂ ಸ್ಪರ್ಶಿಸುವ ಅಂಶಗಳನ್ನು ಅವಲೋಕಿಸುತ್ತಾರೆ ಹಸಿರು ಪಚ್ಚದಂತೆ, ತಾಯಿಯ ಪ್ರೇಮ ಸ್ಪರ್ಷದಂತೆ ಹಾಗೂ ತಾಯ ಮೊಲೆಗಳು ವೈರಾಗ್ಯದವರ ಮಾಂಸದ ಬಟ್ಟಲಾಗದೇ, ನೈತಿಕದವರಂತೆ ಹಾಲಿನ ಬಟ್ಟಲೂ ಆಗದೆ 'ಜಗದಂಬೆಯು ಜೀವ ಶಿಶುವನ್ನು, ಮಲಗಿಸಿ ತೂಗುವ ತೊಟ್ಟಿಲ ಕಾಲು' ಎಂಬ ಅಂಬಿಕಾತನಯದತ್ತರ ಕಾವ್ಯ ಸೃಷ್ಟಿಯ ಶಕ್ತಿಯನ್ನು ಗುರುತಿಸುವ ಸಿಂ.ಪಿ ಲಿಂಗಣ್ಣ ಅವರ ಪ್ರತಿ ಹೆಜ್ಜೆ ವಿಶೇಷವಾದುದು.

'ಲಲಿತ ಸಾಹಿತ್ಯ ಮಾಲೆ'ಯ ಹದಿಮೂರನೇ ಕುಡಿಯಾಗಿ 'ಹಕ್ಕಿನೋಟ' ಎಂಬ ಕೃತಿಯನ್ನು ದ. ಬಾ. ಕುಲಕರ್ಣಿ ಅವರು ೧೯೪೫ರಲ್ಲಿ ರಚಿಸಿದರು. ಹಿರಿಯ ಕವಿಗಳು, ವಿದ್ವಾಂಸರಿಗಾಗಿ ಗೌರವಪೂರ್ವಕವಾಗಿ ರಚಿಸಿದ ಈ ಕೃತಿಯು ವ್ಯಕ್ತಿಚಿತ್ರಣ ನೀಡಿದ ವಿಶಿಷ್ಟ ಚಿಂತನೆ ಹೊಂದಿದೆ. ಈ ಕೃತಿಯಲ್ಲಿ 'ಬೇಂದ್ರೆ–ಕಾವ್ಯಕ್ಕೆ ಇನ್ನೊಂದು ಹೆಸರು' ಎಂಬ ಲೇಖನವು ಬೇಂದ್ರೆ ಅವರು ಕಾವ್ಯದ ಮೂಲಕ ಸಮಾಜಕ್ಕೆ ತಲುಪಿದ ನೆಲೆಯನ್ನು ಕುರಿತು ಚರ್ಚಿಸಿದ್ದಾರೆ. ವ್ಯಕ್ತಿಯನ್ನು ಪೂರ್ಣವಾಗಿ ವ್ಯಕ್ತಿತ್ವದ ಮೂಲಕ ಶುದ್ಧೀಕರಿಸುವ ಭಾವ ತಾತ್ವಿಕ ಸ್ವರೂಪವೇ ಈ ಲೇಖನದ ಅಧ್ಯಯನವಾಗಿದೆ. ಬೇಂದ್ರೆ ಅವರು ಒಬ್ಬ ಕವಿಯಾಗಿ ಮಾತ್ರ ಕಾಣದೆ ಸಾಹಿತ್ಯದ ಜೀವಾಳವಾಗಿ ಎಲ್ಲಾ ಕ್ಷೇತ್ರ ಹಾಗೂ ಎಲ್ಲಾ ಕ್ಷೇತ್ರದ ಜನರನ್ನೂ ತನ್ನ ಆಪ್ತವಲಯಕ್ಕೆ ತುಂಬಿಕೊಳ್ಳುತ್ತಿದ್ದ ವ್ಯಕ್ತಿತ್ವದ ಚಿತ್ರಣ ಕುರಿತು ಅಧ್ಯಯನ ಮಾಡಲಾಗಿದೆ.

೫. ಬೇಂದ್ರೆ ಸಾಹಿತ್ಯ : ವಾಙ್ಮಯ ದರ್ಶನದ ಅಧ್ಯಯನಗಳು

ಎಚ್. ಜಿ. ಜೋಷಿ ಅವರು ಸಂಪಾದನೆ ಮಾಡಿರುವ ಕೃತಿಯೇ 'ಬೇಂದ್ರೆ ವಾಙ್ಮಯ ದರ್ಶನ'. ಗಲಗಲಿ ಎಂಬ ಊರಿನವರು ತಾವು ಗಮನಿಸಿದ ವ್ಯಕ್ತಿತ್ವವನ್ನು ಅಭಿಮಾನದಿಂದ ಕಟ್ಟಿದ ಬದುಕು–ಸಾಹಿತ್ಯದ ವಿಶಿಷ್ಟ ಬರವಣಿಗೆಗಳು. ಸ. ಸ. ಮಾಳವಾಡ ಅವರು ಮುನ್ನುಡಿ ಬರೆಯುತ್ತಾ ಕೃತಿಯ ಒಟ್ಟಾರೆ ಸ್ವರೂಪವನ್ನು ಈ ರೀತಿ ಅಭಿಪ್ರಾಯಪಡುತ್ತಾರೆ

> ಗಲಗಲಿ ಗ್ರಾಮದ ಹಿರಿಯರು, ಕಿರಿಯರು ಸೇರಿ ರಚಿಸಿದ ಈ ಹೊತ್ತಿಗೆಯಲ್ಲಿ ಹೊಸತನವಿದೆ. ಸಾಹಿತ್ಯ ವ್ಯಾಸಂಗವಿದೆ, ಕವಿಭಕ್ತಿ ಇದೆ. ಒಂದೇ ಊರಿನ ಲೇಖಕರ ಲೇಖನಗಳ ಸಂಗ್ರಹವೆಂಬುದು ಒಂದು ಬಗೆಯ ಹೊಸತನ; ತಂದೆ, ಮಗ ಇವರಿಬ್ಬರ ಲೇಖನಗಳು ಒಂದೆಡೆ ಬಂದಿರುವುದು ಇನ್ನೊಂದು ಬಗೆಯದು. ಮುನ್ನುಡಿಯನ್ನು ಬರೆಯುವ ನನ್ನ ಶಿಷ್ಯರೊಬ್ಬರ ಹಾಗೂ ನನಗೂ ಗುರುಗಳಾಗಬಹುದಾದಷ್ಟು ಹಿರಿತನ ಉಳ್ಳವರ ಲೇಖನಗಳು ಇಲ್ಲಿರುವುದು ಮಗದೊಂದು ಬಗೆಯದು. .... ಈ ವಾಙ್ಮಯ ದರ್ಶನವೇ ಆ ಕವಿ ಭಕ್ತಿಯ ಪ್ರತೀಕ. ಬೇಂದ್ರೆ ಅವರ ಹುಟ್ಟು ದಿನದ ಕಾಣಿಕೆಯಾಗಿರುವ ಈ ಗ್ರಂಥದ ಲೇಖಕರ ಕವಿಭಕ್ತಿಯನ್ನು ಸಾರಿ ಹೇಳುತ್ತದೆ. ಅಖಿಲ ಕರ್ನಾಟಕದ ಅಭಿಮಾನದ ಕವಿಯಾದ 'ಅಂಬಿಕಾತನಯ'ರ ಬಗೆಗೆ ಗಲಗಲಿ ಗ್ರಾಮವು ತನ್ನ ಗೌರವವನ್ನು ಈ ರೀತಿ ಸೂಚಿಸುತ್ತಿದೆ. ಗಲಗಲಿಯ ಗ್ರಾಮವಾಗಲಿ, ಹಲಸಂಗಿಯ ಹಳ್ಳಿಯಾಗಲಿ ಬೆಂಗಳೂರು ನಗರವಾಗಲಿ ಚಿಕ್ಕಮಗಳೂರು ಮೂಲೆಯಾಗಲಿ ಸಾಧನಕೇರಿಯ ಬೀದಿಯಲ್ಲಿ ನಡೆದಿರುವ ಒಕ್ಕಲು ಮಕ್ಕಳಲ್ಲಾಗಲಿ ಮೈಸೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕರಲ್ಲಾಗಲಿ ಎಲ್ಲೆಲ್ಲೂ ಬೇಂದ್ರೆ ಅವರ ಹೆಸರು ಹಾಡುಗಳು ಮನೆಯ ಮಾತಾಗಿವೆ. ತನ್ನ ಸಮಕಾಲೀನರಿಂದ ಮನ್ನಣೆ ಪಡೆಯುತ್ತಿರುವ ಈ ಕವಿ ಧನ್ಯ. ಈ ಧನ್ಯತೆಯಲ್ಲಿ ತಮ್ಮ ಪಾಲನ್ನು ಪಡೆಯಲು ಗಲಗಲಿ ಗೆಳೆಯರು ಈ 'ವಾಙ್ಮಯ ದರ್ಶನ'ವನ್ನು ನೀಡಿದ್ದಾರೆ.[೨೭]

ಈ ಅಂಶಗಳು ಕನ್ನಡ ಸಾಹಿತ್ಯದಲ್ಲಿ ಒಂದು ಚರಿತ್ರೆ ನಿರ್ಮಾಣಗೊಳ್ಳುವಾಗ ಭಾರತೀಯ ಸಂಸ್ಕೃತಿ ನಿರ್ವಹಿಸಿದ ಸೂಕ್ಷ್ಮ ಪ್ರಜ್ಞೆಗಳನ್ನು ಅವಲೋಕಿಸಬಹುದು. ಒಂದು ಗ್ರಾಮ ಜಗತ್ತನ್ನು

ಒಬ್ಬ ಕವಿಯು ರಾಷ್ಟ್ರೀಯ ಚಿಂತನೆಯಲ್ಲಿ ನಿರ್ವಹಿಸಿದ ಅಭಿವ್ಯಕ್ತಿಗಳು ಈ ಲೇಖನಗಳಲ್ಲಿ ಸಾಕ್ಷೀಕರಿಸಿವೆ.

ಕೇಶವ ಶರ್ಮಾ ಗಲಗಲಿ ಅವರ 'ಬೇಂದ್ರೆಯವರ ಕವಿತ್ವ', 'ಬೇಂದ್ರೆಯವರ ಪ್ರತಿಭಾ ವಿಲಾಸ', 'ದತ್ತರ ದೈವ ವಿವೇಚನೆ', ಎಚ್. ಜಿ ಜೋಶಿ ಅವರ 'ಅಂಬಿಕಾತನಯರ ಅಲಂಕಾರಗಳು', 'ರತಿ ದರ್ಶನ', ಶಾಂತ ಗಲಗಲಿಯವರ 'ರಸಸಿದ್ಧಿ', 'ನಾದಲೀಲೆ', ಎಸ್. ಎಮ್ ಸೋಲಾಪುರ ಅವರ 'ಅನ್ನದೇವರು' ಈ ಎಂಟು ಲೇಖನಗಳ ಜೊತೆಗೆ ಜಾತವೇದ ಅವರು ರಚಿಸಿದ 'ಬೇಂದ್ರೆ' ಎಂಬ ಕವಿತೆಯನ್ನು ಅಧ್ಯಯನ ಮಾಡಬಹುದು.

೫. ೧. ಛಂದಸ್ಸು ಕುರಿತ ಚಿಂತನೆಗಳು

ಬೇಂದ್ರೆ ಅವರು ವ್ಯಾಕರಣ ಹಾಗೂ ಛಂದಸ್ಸಿನ ವಿಚಾರದಲ್ಲಿ ಹೊಸ ಪ್ರಯೋಗಗಳನ್ನು ನಿರ್ವಹಿಸಿದ್ದಾರೆ. ಕೇಶವ ಶರ್ಮಾ ಗಲಗಲಿ ಹಾಗೂ ಎಚ್. ಜಿ ಜೋಶಿ ಅವರು ಅಲಂಕಾರ ಕುರಿತು ಬೇಂದ್ರೆ ಅವರ ಹೊಸ ಪ್ರಯೋಗಗಳನ್ನು ಗುರ್ತಿಸಿದ್ದಾರೆ. ಕೇಶವಶರ್ಮಾ ಗಲಗಲಿಯವರು ಕಾಳಿದಾಸನ ಕಾವ್ಯಶೈಲಿಯ ಗುಣಗಳನ್ನು ಬೇಂದ್ರೆ ಅವರಲ್ಲಿ ಕಾಣುತ್ತಾರೆ. ಬದುಕಿನಲ್ಲಿ ನೊಂದು–ಬೆಂದು ತನ್ನ ಹೃದಯದಿಂದ ಹೊರಹೊಮ್ಮಿದ ಬೇಂದ್ರೆಯ ಗೀತಗಳು ಕಾಳಿದಾಸನ ಗೀತಗಳಿಗೆ ಸರಿದೂಗುವವು. ಎಂಬ ನಿಲುವಿಗೆ ಬೇಂದ್ರೆ ಅವರು ಬಳಸುವ ಅಲಂಕಾರ ರೀತಿಯನ್ನು ಅತಿಶಯೋಕ್ತಿ ಅಲಂಕಾರವೆಂದಿದ್ದಾರೆ. ಉಪಮೇಯ ಪದಗಳನ್ನು ಬಚ್ಚಿಟ್ಟು, ಉಪಮಾನವನ್ನು ಮಾತ್ರ ಬಳಸುವ ಶೈಲಿಯಾಗಿದೆ. ಬೇಂದ್ರೆ ಅವರ ಕಾವ್ಯದ ಬಹುಮುಖ್ಯ ನೆಲೆಯಲ್ಲಿ ಇಂತಹ ಕಾವ್ಯಗುಣವನ್ನು ಕಾಣಬಹುದು. ಈ ಅಲಂಕಾರ ನಿರ್ವಹಣೆಯಲ್ಲಿ ಕಾಳಿದಾಸನನ್ನೂ ಮೀರುವ ಕಾವ್ಯ ಸತ್ವವನ್ನು ಬೇಂದ್ರೆ ಅಳವಡಿಸಿಕೊಂಡಿರುವ ಬಗೆಯನ್ನು ಉದಾಹರಣೆಗೆ ಬಳಸಿದ್ದಾರೆ. 'ತಾವರೆಯೊಂದು ಬಾಯ್ ಬಿಡುತ್ತಿತ್ತೋ', 'ಹುಣ್ಣಿಮೆಯ ಚಂದಿರನ ಹೆಣಾ ಬಂತೋ ಮುಗಿಲಾಗ ತೇಲುತಾ ಹಗಲ' ನೇರವಾಗಿ ನಿರೂಪಿಸುವಾಗ ಉಪಮೇಯವೂ ಇಲ್ಲದೇ, ರೂಪಕವೂ ಆಗದೇ ಕಾವ್ಯದಲ್ಲಿ ಸ್ವಚ್ಛಂದ ವಿಹಾರವನ್ನು ಗಮನಿಸಬಹುದು.

ಎಚ್. ಜಿ. ಜೋಶಿ ಅವರು ಅಲಂಕಾರದ ಲಕ್ಷಣಗಳನ್ನೇ ಹುಡುಕುತ್ತಾ ಈ ರೀತಿ ಗ್ರಹಿಸಿದ್ದಾರೆ.

> ಒಮ್ಮೆ ಬೇಂದ್ರೆಯವರ ಕಾವ್ಯಕನ್ನಿಕೆ ನೂತನಾಲಂಕಾರ ಭರಣೆಯೆನಿಸಿದರೆ, ಇನ್ನೊಮ್ಮೆ ಸನಾತನಾಲಂಕಾರ ಶರಣೆ ಎಂದೂ ತೋರುವಳು. 'ಮಾಯಾಕಿನ್ನರಿ'ಯು ಉಪಮೆಯ ಮಾಲೆಯಾಗಿ ಬಂದರೆ ಮೊದಲಗಿತ್ತಿ, ಚಿಗರಿಗಂಗಳ ಚೆಲುವೆಯರು ರೂಪಕದಿಂದ ಮೈದಳೆದ ಉಕ್ತಿ ಮಾಲೆಯ ತೊಡಕಿನವರು. 'ಭಾವಗೀತ'ಕ್ಕೂ 'ನಾದಲೀಲೆ'ಗೂ ಕವಿಲೀಲೆಯೇ ಎನ್ನಬೇಕು. ಇಲ್ಲವೇ ದಿಟ್ಟತನದಿಂದ ಬೇರೆ ಹೆಸರಿಡಬೇಕು. ಬೇಂದ್ರೆ ಅವರ ಕಾವ್ಯವನದಲ್ಲಿ ಅಲಂಕಾರ ಸಂಶೋಧನಕ್ಕೆ ಹೊರಟವನಿಗೆ ಇದ್ದ ಗಮಕಗಳೆಲ್ಲಾ ದುರ್ಬಲವಾಗುವವು. ಕೊನೆಗೆ ಶೃಗಾಲಸಮಾಧಾನದಂತೆ 'ಸಂಸೃಷ್ಟಿ' 'ಸಂಕರ' ಎಂಬೆರೆಡೇ ಅಲಂಕಾರ ಇವೆ ಎಂದು ಹಿಂತಿರುಗಬೇಕು. ಬೇಂದ್ರೆ ಅವರ ಮಾತಿನಲ್ಲಿ ಅಲಂಕಾರವು ಬಿಚ್ಚಿದ ತೊಡಕಾಗಿರುವುದು ಸಹಜವೆ. ಕವಿಗೆ ಕಟ್ಟುವುದೇ ಕಾರ್ಯವಾದರೆ ವಿಮರ್ಶಕನಿಗೆ ಬಿಚ್ಚುವುದು ಅನಿವಾರ್ಯ.[೨೮]

ಕವಿಯ ಕಾವ್ಯವು ಸಮಾಸೋಕ್ತ್ಯಲಂಕಾರವಾಗಿಯೂ, ಸ್ಮರಣೆ ಸಂದೇಹದೊಡನೆ ಸಾದೃಶ್ಯ ಪಡೆಯುವ ರೀತಿ, ಅತಿಶಯೋಕ್ತಿಯ ಆವಿರ್ಭಾವ, ರೂಪಕದ ಸ್ವಾರಸ್ಯ, ಉತ್ಪ್ರೇಕ್ಷೆಯ ಸಾಧಕತೆ, ವಿಭಾವನೆಯಲ್ಲಿ ಬೆಳೆದ ಉಪಮೆ, ಗುಪ್ತರೂಪಕ ಸೂಚ್ಯ ಹಾಗೂ ಉಪಮೆಯ ಭವ್ಯ ಕಾವ್ಯದೊಳಗಿನ ಅಲಂಕಾರ ಗೋಚರಾಂಶವಾಗಿ ಹೆಚ್. ಜಿ. ಜೋಶಿ ಅವರು ಗಮನಿಸಿದ್ದಾರೆ. ಕೇಶವ ಶರ್ಮಾ ಅವರು ನಿರೂಪಿಸಿದ ಅತಿಶಯೋಕ್ತಿ ಅಲಂಕಾರದ ವಿಸ್ತರಣೆಯನ್ನು ಹೆಚ್. ಜಿ. ಜೋಶಿ ಅವರು ನಿರ್ವಹಿಸುತ್ತಾರೆ. ಇದರ ಮುಖ್ಯ ಲಕ್ಷಣವಾಗಿ ಅಲಂಕಾರದ ಮತದಲ್ಲಿ ನಿಗೀರಾಧ್ಯವಸಾನವು ಅನುಕ್ತ ವಿಷಯಾಲಂಕಾರವೆನ್ನಲೂಬಹುದು. ಆದ್ದರಿಂದ ಸಾದೃಶ್ಯವು ಅತಿ ಮುಖ್ಯವೆಂದು ಅಲಂಕಾರ ಶಾಸ್ತ್ರವು 'ಬುದ್ಧಿ ಚಾಪಲ್ಯ ಪ್ರಯೋಗ'ವೆಂದೂ, ಬೇಂದ್ರೆ ಅವರಿಗೆ 'ಅಲಂಕಾರಗಳು ಅಗಣಿತ'ವೆಂದು ಲೇಖಕರು ಸೂಕ್ಷ್ಮ ದೃಷ್ಟಿಯಲ್ಲಿ ಬೇಂದ್ರೆ ಅವರ ಛಂದೋ ನಾವಿನ್ಯತೆಗೆ ನ್ಯಾಯ ಒದಗಿಸಿರುವುದನ್ನು ಗಮನಿಸಬಹುದು.

೫. ೨. ಪ್ರಗತಿಶೀಲ ಲೇಖಕರ ಚಿಂತನೆಗಳು

'ಅನ್ನದೇವರು' ಕವಿತೆಯ ಮೂಲಕ ಎಸ್. ಎಮ್ ಸೋಲಾಪುರ ಅವರು ಮಾರ್ಕ್ಸ್‌ವಾದದ ಚಿಂತನೆಯ ಹಿನ್ನಲೆಯಲ್ಲಿ ಸ್ವಾತಂತ್ರ್ಯ ಪೂರ್ವ ಕಾಲಮಾನವು ಸ್ಪಂದಿಸುವ ಕೆಲವು ವಿಚಾರಗಳನ್ನು ಚರ್ಚಿಸಿದ್ದಾರೆ. ಹಸಿವು, ಬಡತನ, ಸಮಾಜಿಕ ಕೊರತೆಗಳು ಅನ್ನದ ಮಹತ್ವವನ್ನು ಸಾರುತ್ತವೆ. 'ಕುರುಡು ಕಾಂಚಾಣ'ದಂತಹ ಕವಿತೆಯನ್ನು ಪೂರಕವಾಗಿ ಗಮನಿಸಿ ದುಡ್ಡಿಗೆ ಯಾವಾಗಲೂ ಕಂಬನಿ ಕುಡಿಯುವ ಪ್ರೀತಿ ಎಂದಿದ್ದಾರೆ. ಸೋಲಾಪುರ ಅವರು 'ತುತ್ತಿನಚೀಲ', 'ಮನುವಿನ ಮಕ್ಕಳು' ಇಂತಹ ಕವಿತೆಗಳಲ್ಲಿ ಸಮತಾವಾದದ ಅಂಶಗಳನ್ನು ಗಮನಿಸುತ್ತಾ 'ರಾಜ್ಯಕ್ರಾಂತಿಯ ಬೀಜಗಳು' ಅಡಕವಾಗಿವೆ ಎಂದು ಚರ್ಚಿಸಿದ್ದಾರೆ.

> ಇಂದಿನ ವೈಷಮ್ಯ ಹೀಗೆ ಬೆಳೆಯುತ್ತಾ ಹೋದರೆ ಬಡವನ ಒಡಲ ಒಡವಾನಲವು ಹೊರಬಿದ್ದು ಜಗತ್ತನ್ನೇ ಭಸ್ಮಸಾತ್ ಮಾಡೀತು. ಅದರಲ್ಲಿ ಅಂತಹ ಶಕ್ತಿಯಿದೆ. ಬಡವನು ಎಲ್ಲವನು ಸಹಿಸುವನಾದರೂ ಎಲ್ಲವನು ನಾಶಮಾಡುವ ಶಕ್ತಿಯೂ ಅವನಲ್ಲಿದೆ. 'ತುತ್ತಿನ ಚೀಲ'ವೆಂಬ ಕವನವಂತೂ ಕ್ರಾಂತಿಯ ಕೂಗು. ಸಮತೆಗೆ ಆಹ್ವಾನವೀಯುತ್ತದೆ. ಕವಿಗೆ ಮೊದಲೇ ವೈಷಮ್ಯ ನೋಡಿ ತಲೆತಿರುಗಿದೆ. ಮೇಲೆ ಧನಿಕರ ಅನ್ಯಾಯಗಳ ಸಹನೆ ಮೀರಿ ಸುಳ್ಳೇ ಮಾತೂ ಮಾತು ಮಾತಿಗೆ ದೇವನೆಂಬ ಶಕ್ತಿಯನ್ನು ತೊಡಕು ಹಾಕಿಕೊಂಡು ಅತ್ತು ಗೋಳಿಡುವುದು. ಅದಕ್ಕೆ 'ತುತ್ತಿನ ಚೀಲ' ಪ್ರತಿಯೊಂದೂ ಮಾತು ಬಂಡವಾಳಶಾಹಿಗೆ ಬೀಳುವ ಕುಠಾರದ ಹೊಡೆತಗಳಾಗಿವೆ. ಮಾರ್ಕ್ಸ್‌ವಾದದ ಒಂದು ಧ್ವನಿಯನ್ನು 'ತುತ್ತಿನ ಚೀಲ'ದಲ್ಲಿ ಕಾಣುತ್ತೇವೆಂದು ಹೇಳಿದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ಕನ್ನಡದಲ್ಲಿ ಅನ್ನದ ಸಮಸ್ಯೆಯನ್ನು ಆಳವಾಗಿ ವಿಚಾರಿಸಿ ಅರ್ಥದ ಒಂದು ಹೃದಯದ ಮಾತು ಹೇಳಿದವರಲ್ಲಿ ಶ್ರೀ ಬೇಂದ್ರೆಯವರೇ ಮೊದಲಿಗರು. ಮತ್ತು ಮಹನೀಯರು.[೯]

ಇಂತಹ ಸೂಕ್ಷ್ಮತೆಯನ್ನು ಮೊದಲಿಗೆ ಗುರ್ತಿಸಿದ ಲೇಖಕರ ಸಾಲಿನಲ್ಲಿ ಸೋಲಾಪುರ ಅವರು ಕೂಡ ಮುಖ್ಯರಾಗುತ್ತಾರೆ. ಪ್ರಗತಿಶೀಲ ಚಿಂತನೆಯು ಬೇಂದ್ರೆ ಅವರ 'ಕೃಷ್ಣಕುಮಾರಿ'ಯಿಂದ

ಎಲ್ಲಾ ಸಂಕಲನದಲ್ಲೂ ಗಮನಿಸಬಹುದು. ಬೇಂದ್ರೆ ಅವರು ಇದನ್ನೇ 'ಶ್ರಮಪರಿಹಾರ ತತ್ತ್ವ'ವೆಂದು ಗುರ್ತಿಸಿ ಬಡತನಕ್ಕೆ ವ್ಯಾಖ್ಯಾನ ನೀಡುತ್ತಾರೆ. ಅನ್ನಯಜ್ಞ, ಅನ್ನಾವಾತಾರ, ಭೂಮಿ ತಾಯಿಯ ಚೊಚ್ಚಿಲ ಮಗ ಮೊದಲಾದ ಕವಿತೆಗಳ ಮೂಲ ಆಶಯ ಪ್ರಗತಿಶೀಲ ಧೋರಣೆಗೆ ಹತ್ತಿರವಾದುದು.

೫. ೩. ರಸ–ಧ್ವನಿ–ಪ್ರತಿಭೆಗಳ ವಿಚಾರದಲ್ಲಿ ವಾಙ್ಮಯ ದರ್ಶನ

ಛಂದಸ್ಸು ನಾದ ರಕ್ಷಕವಾಗಿಯೂ, ನಾದಾನುವಾದದಲ್ಲಿ ಸಹಾಯಕವಾಗಿಯೂ ಬರುವ ಕಾವ್ಯ ರೀತಿಯನ್ನು ಬೇಂದ್ರೆ ಅವರಲ್ಲಿ ಮಾತ್ರ ಕಾಣಬಹುದೆಂಬ ಶಾಂತ ಗಲಗಲಿಯವರ ತೀರ್ಮಾನವನ್ನು ರಸ, ಧ್ವನಿ ಹಾಗೂ ಪ್ರತಿಭೆಯನ್ನು ವಿವೇಚಿಸುವ ಮೂರು ಲೇಖನಗಳನ್ನು ಗಮನಿಸಬಹುದು. ಶಾಂತ ಗಲಗಲಿ ಅವರ 'ರಸಸಿದ್ಧಿ', 'ನಾದಲೀಲೆ', ಕೇಶವ ಶರ್ಮಾ ಗಲಗಲಿಯವರ 'ಬೇಂದ್ರೆ ಅವರ ಪ್ರತಿಭಾ ವಿಲಾಸ' ಈ ಲೇಖನಗಳಲ್ಲಿ ಕವಿಯ ಕಾವ್ಯಶಕ್ತಿಯು ವ್ಯಂಜಿಸುವ ತೀರ್ಮಾನಗಳು ಸಹೃದಯನನ್ನು ತಲುಪುವ ಹೊಸ ಮಾದರಿಯಾಗಿ ಗಮನಿಸಿದ್ದಾರೆ. ರಸದ ವಿಚಾರವು ಕೇವಲ ಭರತನ ನಾಟ್ಯಶಾಸ್ತ್ರದಿಂದಲೇ ಪರಿಗಣಿತ ರೂಪವಾಗಿರುವ ನಮ್ಮ ಅಧ್ಯಯನಗಳನ್ನು ಬೇಂದ್ರೆ ಅವರು ವಿಸ್ತರಿಸುವ ಕ್ರಮವನ್ನು ಇಲ್ಲಿ ಗಮನಿಸಲಾಗಿದೆ. ಇಂತಹ ಹೊಸ ಅನ್ವೇಷಣಾತ್ಮಕ ಅಲೋಚನೆಗಳು ಬೇಂದ್ರೆಯಂತಹ ವ್ಯಕ್ತಿತ್ವವನ್ನು ರೂಪಿಸಿರುವ ಹಾಗೆಯೇ ಕಾವ್ಯವನ್ನು ಸಿದ್ಧಿಸಿರುವ ಬಗೆಯನ್ನು ತಾತ್ವಿಕ ಚಿಂತನೆಯಾಗಿ ಕಾಣಬಹುದು.

ಶಾಂತ ಗಲಗಲಿ ಅಥವಾ ಸತ್ಯಕಾಮ, ಕಪಿಲ ಈ ಎಲ್ಲಾ ಹೆಸರುಗಳಲ್ಲಿ ಸಾಹಿತ್ಯ ರಚಿಸಿದ್ದಾರೆ. ಬೇಂದ್ರೆ ಸಾಹಿತ್ಯದಲ್ಲಿ ರಸಚಿಂತನೆಯು ಕಾವ್ಯದ ಬಹುಮುಖ್ಯ ಅಂಶವಾಗಿದೆ. ಸಮಕಾಲೀನರು ರಸವನ್ನು ಮೀಮಾಂಸೆಯ ತತ್ವವೆಂದು ಪರಿಗಣಿಸದೆ ಆಧುನಿಕ ಕವಿಗಳಲ್ಲಿ ಮೂಡುವ ಕಾವ್ಯಶಕ್ತಿಯನ್ನು ರಸದೃಷ್ಟಿಯಿಂದಲೂ ಕಾಣಬಹುದು ಎಂದು ಗುರ್ತಿಸುತ್ತಾರೆ.

> ಆಚಾರ್ಯ ಅಭಿನವಗುಪ್ತ–ಪಾದರನ್ನು ಅವರು ಗುರು ಸ್ಥಾನದಲ್ಲಿ ಹೇಳಿಕೊಳ್ಳುವುದನ್ನು ನಾನೆಷ್ಟೋ ಸಲ ಕೇಳಿದ್ದೇನೆ. ಈ ಮಾತೆ ಬೇಂದ್ರೆಯವರ ರಸ ವಿಚಾರ ವಿಮರ್ಶೆಯ ಬಗ್ಗೆ ಸಾಕಾಗಿದೆ. ಕಾವ್ಯದ ವಿಚಾರ ಬೇರೆಯಾದಂತೆ ಲಕ್ಷಣಶಾಸ್ತ್ರದ ಕೊಡೆಯು ಆಚೆಗೆ ಹೊರಳುತ್ತಿದೆ. ಮಹಾಕಾವ್ಯಗಳ ಗಂಭೀರ ಪ್ರಣಾಲಿ ಇಂದಿನ ಅನಾವೃಷ್ಟಿಯ ಕಾಲದಲ್ಲಿ ಕಾಣಬರುವುದಿಲ್ಲ. ಭಾವಗೀತೆಗಳ ಮಿಂಚುಬಳ್ಳಿಯ ಬೆಳಕು ರಸದರ್ಶನಕ್ಕೆ ದೀವಿಗೆಯಾಗಿದೆ.[೩೦]

ಬೇಂದ್ರೆ ಅವರಿಗೆ ಲಾಕ್ಷಣಿಕರ ರಸವಿವೇಚನೆಯಲ್ಲಿ ಉಂಟಾಗುವ ಸಂಖ್ಯೆಗಳ ತೊಡಕಿನಲ್ಲಿ ನಂಬಿಕೆ ಇಲ್ಲ. ಇವರ 'ಸಾಹಿತ್ಯದ ವಿರಾಟ್ ಸ್ವರೂಪ' ಕೃತಿಯಲ್ಲಿ ಕಂಡುಬರುವ 'ರಸದ ವಿಚಾರ' ಎಂಬ ಲೇಖನದಲ್ಲಿ ವಿಸ್ತಾರವಾಗಿ ತಿಳಿಸಿದ್ದಾರೆ. ಇಂತಹ ಕವಿಗಳು ತಮ್ಮ ಕಾವ್ಯವನ್ನು ಓದುವ ಯಾವುದೇ ಶೈಲಿಯನ್ನು ಸಹೃದಯರಿಗೆ ಮಾರ್ಗವಾಗಿ ತೋರಿಸಿಲ್ಲ. ಆದರೆ ಮುನ್ನುಡಿ, ಗದ್ಯಬರಹಗಳಲ್ಲೇ ಅಗತ್ಯ ಒಳಹುಗಳನ್ನು ನೀಡಿರುತ್ತಾರೆ. ಕುವೆಂಪು, ಪುತಿನ, ಬೇಂದ್ರೆ ಮೊದಲಾದ ನವೋದಯ ಕವಿಗಳು ರಸವಿಚಾರವನ್ನು ಗಂಭೀರವಾಗಿ ಚರ್ಚಿಸಿದರು. ಕುವೆಂಪು 'ರಸೋವೈಸಃ' ವಾಗಿ ತಾತ್ವಿಕಗೊಳಿಸಿದರೆ, ಪು.ತಿ.ನ ಅವರು ಭವನೀಮಜ್ಜನ–ಲಘೀಮಾಕೌಶಲವಾಗಿ ಮನಗಂಡರು. ಬೇಂದ್ರೆಯವರಂತೂ ನಾವೀನ್ಯ ಪ್ರಯೋಗದಲ್ಲಿ ಸೂಕ್ಷ್ಮಕನ್ನಡಿಯಾಗಿ ಚಿಂತಿಸಿದರು. 'ಭಕ್ತಿರಸ'ವೆಂಬ

ಹೊಸಹಾದಿಯ ಗ್ರಹಿಕೆಯನ್ನು ಮುಕ್ತವಾಗಿ ನೀಡಿದರು. ಇಲ್ಲಿ ಶಾಂತ ಗಲಗಲಿ ಅವರು ಇದೇ ವಿಚಾರವನ್ನು ಗ್ರಹಿಸಿದ್ದಾರೆ. ಒಂದೇ ರಸವು ಹಲವು ಭಾವಗಳಲ್ಲಿ ಅಭಿವ್ಯಕ್ತಗೊಳ್ಳುವ ಬಗೆಯನ್ನು ಬೇಂದ್ರೆ ಅವರ ಕಾವ್ಯಾಭಿವ್ಯಕ್ತಿಯಲ್ಲಿ ಗಮನಿಸಿದ್ದಾರೆ. ಬೇಂದ್ರೆ ಅವರ ಕಾವ್ಯವು ಉಂಟು ಮಾಡುವ ರಸವು ಅಂತಿಮವಲ್ಲ, ಸಹೃದಯನನ್ನು ಕ್ಷಣಾರ್ಧದಲ್ಲಿಯೇ ಅವನ ಭಾವವನ್ನು ವಿಸ್ತರಿಸುವ ಕ್ರಿಯೆಯಾಗಿದೆ. ಅಭಿವ್ಯಕ್ತಗೊಳ್ಳುವ ರಸವು ಒಂದು ಭಾವವಾಗಿ ನಿಲ್ಲದೇ ಅದರ ಫಲಿತವಾಗಿಯೂ ಅಂದರೆ ಮದ್ದಾಗಿಯೂ ಹೊರಹೊಮ್ಮುತ್ತದೆ ಎಂಬ ಸೂಕ್ಷ್ಮತೆಯು ಶಾಂತ ಗಲಗಲಿ ಅವರು ಮನಗಂಡಿದ್ದಾರೆ.

ಮಿರ್ಜಿ ಅಣ್ಣಾರಾಯರ 'ದತ್ತವಾಣಿ'ಯಲ್ಲಿ 'ಅಂಬಿಕಾತನಯದತ್ತರ ಆಧ್ಯಾತ್ಮಿಕತೆ' ಎಂಬ ಲೇಖನವಿದೆ. ರಸಚಿಂತನೆಯನ್ನು ಆಧ್ಯಾತ್ಮದ ಮಾರ್ಗದಲ್ಲಿ ಗ್ರಹಿಸಿದ್ದಾರೆ. ಕವಿಯೊಳಗೆ ಉಂಟಾಗುವ ರಸಾನುಭವವು ಕೃತಿಯೊಳಗೆ ಮೂಡುವ ರೀತಿಯನ್ನು ಆತ್ಮದ ಆವಿಷ್ಕಾರದಂತೆ ಅರ್ಥೈಸಿದ್ದಾರೆ.

> ಕವಿಯ ಸಮಗ್ರವಾದ ರಸಾನುಭವವು ನುಡಿಯ ನೆರವನ್ನು ಪಡೆದು ಕಾವ್ಯರೂಪವನ್ನು ತಾಳುವುದು. ಇದೊಂದು ಕವಿಯ ಆತ್ಮಕ್ಕೂ ಹೊರಗಿನ ಜಗತ್ತಿಗೂ ಇರುವ ಅಖಂಡವಾದ ಸಂಬಂಧವನ್ನು ನಿರ್ದೇಶಿಸುವ ಕನ್ನಡಿ. ಈ ಕನ್ನಡಿಯಲ್ಲಿ ಕವಿಯ ಅಂತರಂಗ ಸ್ಪಷ್ಟವಾಗಿ ಮೂಡಿದಷ್ಟು ಅದಕ್ಕೆ ಮಹತಿ ಹೆಚ್ಚುವುದು. ಆಧ್ಯಾತ್ಮ ಒಡಮೂಡುವುದು. ಯಾಕೆಂದರೆ ಕಾವ್ಯದ ಧ್ವನಿಯು, ಕವಿಯ ಆತ್ಮವು... ಕವಿಯು ಸ್ಥೂಲ ಸಂಸಾರದ ಮಾಲಿನ್ಯ, ಕೂಸು-ಕಲ್ಪನೆ, ಮಾಟ, ಕ್ಷಣಿಕತೆಗಳನೆಲ್ಲ ಅರಿತು, ಅನುಭವಿಸುವನು. ಆ ಅನುಭವದ ಮಾಯೆಯಲ್ಲಿ ದಂಗಾಗಿ ಮರಣವನ್ನು ಮರೆಯಲಾರನು. ಇಲ್ಲಿ ರಸಿಕನಿಗೆ ಸಾವಿನ ಹೆದರಿಕೆಯೋ ಸಾವಿಗೆ ರಸಿಕನ ಸಕಾಲಾಮಂತ್ರಣವೋ ಭಾವಿಸಿ ನೋಡಬೇಕು ನಾವು. ಯಾಕೆಂದರೆ ಆತ್ಮ ವಸ್ತುವು ಸ್ವಯಂಪ್ರಕಾಶವಿದ್ದು ಯಾವಾಗಲೂ ನಿರಾಧಾರವಾಗಿರಬಲ್ಲದು. ಅಂದಮೇಲೆ ಈ ಒಲುಮೆ ನಲುಮೆಯನ್ನು ನೋಡಿ ವೇದಾಂತಿಯು ನಗೆಯಾಡುವ ಸ್ಥಿತಿಯಂತೂ ದೂರವೇ ಉಳಿಯಿತು. ಯಾಕಂದರೆ ಕವಿಯ ಒಲುಮೆಯ ಫಲವೇ ಬೇರೆಯಾಗಿದೆ. ಯಾವುದು ನಿತ್ಯವಾದುದೋ ಸತ್ಯವಾದುದೋ ಅದು ಆತ್ಮಪ್ರಭೆಯಾಗಿ ಅದಕ್ಕೆ ಆನಂದ ದೇಹದಂತಿದ್ದು, ರಸವೇ ಮೋಹದ ಮುಸುಕಾದರೆ ಆಗ ಸತ್ಯ ಮಿಥ್ಯಗಳನ್ನು ಆರಸಲಿಕ್ಕೆ ಪ್ರೇಮದ ಯುಕ್ತಿಯೊಂದೇ ಸಾಕಲ್ಲವೇ? ಎಂದು ರಸಿಕ ಕವಿ ಬೇಂದ್ರೆಯವರು ವೇದಾಂತಿಗೆ ಹಾಕಿದ ಮರುಪ್ರಶ್ನೆಯಿದು.[೩೧]

ರಸ ಚಿಂತನೆಯನ್ನು ಅತ್ಯಂತ ವಿಸ್ತಾರವಾಗಿ ಅವಲೋಕಿಸಿದ ಕೃತಿಯಿದು. ಬೇಂದ್ರೆ ಅವರ ಕಾವ್ಯವನ್ನು ಕುರಿತು ವಿಮರ್ಶಾತ್ಮಕ ನೆಲೆಯಲ್ಲಿ ಆಧ್ಯಾತ್ಮದ ಅವಲೋಕನೆಯೊಂದಿಗೆ ಚರ್ಚಿಸಿದ್ದಾರೆ. ರಸಿಕ ಎಂಬ ಪದದ ಒಳ ಅರ್ಥದಲ್ಲಿಯೇ ರಸಜ್ಞತೆಯನ್ನು ಕಾಣುವ ಸಹೃದಯ ಕವಿಯ ಆತ್ಮವನ್ನು ಪ್ರವೇಶಿಸಲು ಇರುವ ಸರಳ ಮಾರ್ಗವೇ ಅಧ್ಯಯನವೆಂದು ಗಮನಿಸಿದ್ದಾರೆ. 'ಕಾವ್ಯ ಮತ್ತು ಆಧ್ಯಾತ್ಮ', 'ಜಿಜ್ಞಾಸೆ', 'ಭಕ್ತಕಾವ್ಯ', 'ಶಾಂತ', 'ದಾಸ್ಯ', 'ವಾತ್ಸಲ್ಯ' ಈ ಮೊದಲಾದ ವಿಭಾಗ ಕ್ರಮದಲ್ಲಿ ಚರ್ಚಿಸಿದ್ದಾರೆ. ಬೇಂದ್ರೆ ಅವರ ರಸ ಜಿಜ್ಞಾಸೆಯ ಮುಂದುವರಿಕೆಯಾಗಿ ಭಕ್ತಿರಸ, ವಾತ್ಸಲ್ಯರಸಗಳನ್ನು ಕವಿ ತನ್ನ ಕಾವ್ಯದಲ್ಲಿ ರೂಪಿಸಿಕೊಂಡ ಬಗೆಯನ್ನು ಕುರಿತು ಚರ್ಚಿಸಿದ್ದಾರೆ.

ಮಿರ್ಜಿ ಅಣ್ಣರಾಯರು ಮಾಸ್ತಿಯವರಂತೆ ವಿಮರ್ಶೆಯ ವ್ಯವಸ್ಥಿತ ಮಾರ್ಗದ ಮೂಲಕ ಕಾವ್ಯದ ಅಧ್ಯಯನಕ್ಕೆ ತೊಡಗಿದವರು. ಇವರು ರೂಪಿಸಿದ ವಿಮರ್ಶಾ ತಾತ್ವಿಕತೆಯು ಇವರ 'ವಿಮರ್ಶೆಯ ಸ್ವರೂಪ' ಎಂಬ ಕೃತಿಯಲ್ಲಿ ಗಮನಿಸಬಹುದು.

೬. ಬೇಂದ್ರೆ ಸಾಹಿತ್ಯದ ವಿಶೇಷಾಂಕವಾಗಿ 'ಜೀವನ ಪತ್ರಿಕೆ'

ಡಿ. ವಿ. ಗುಂಡಪ್ಪ ಅವರು 'ಜೀವನ ಪತ್ರಿಕೆ'ಯ ಬೇಂದ್ರೆ ವಿಶೇಷಾಂಕದಲ್ಲಿ ತಮ್ಮ ಹರಕೆ ಬರೆಯುತ್ತಾ ಬೇಂದ್ರೆ ಅವರನ್ನು ಒಂದು ಮಹಾಶಕ್ತಿಗಾಗಿ ಕಾವ್ಯ ಪ್ರಬಂಧಗಳ ಉಪಾಸನೆ ಮಾಡುವ ಕವಿಯೆಂದು ಕರೆಯುವ ಪರಿಯಲ್ಲಿಯೇ ಸಾಹಿತ್ಯದ ಅರ್ಥವಿದೆ. ಅದೊಂದು ಉಪಾಸನಾ ಮಾರ್ಗವೆಂದು ತಮ್ಮ ಸಾಹಿತ್ಯ ಶಕ್ತಿಯಲ್ಲಿ ಅಭಿವ್ಯಕ್ತಗೊಳಿಸಿದ್ದಾರೆ. ಗೋವಿಂದ ಪೈ, ಮಾಸ್ತಿ ಮೊದಲಾದ ವಿದ್ವಾಂಸ ಸಾಹಿತಿ ಸಹೃದಯರೆಲ್ಲಾ ಬೇಂದ್ರೆ ಅವರನ್ನು ಕಂಡದ್ದೇ 'ಹಕ್ಕಿ ಹಾರುತಿದೆ ನೋಡಿದಿರಾ' ಕವಿತೆ ವಾಚಿಸಿದ ಯುವ ಕವಿಯ ಶೈಲಿಯ ಮೆರುಗಿನಿಂದ. ಇವರೆಲ್ಲರ ಸಾಹಿತ್ಯ ಚಿಂತನೆ ಇಲ್ಲಿಂದಲೇ ಪ್ರಾರಂಭಗೊಳ್ಳುತ್ತದೆ. ಗೋವಿಂದ ಪೈ ಅವರು 'ಹಕ್ಕಿ ಹಾರುತಿದೆ ನೋಡಿದಿರಾ' ಕವಿತೆ ವಾಚನ, 'ಅಲಂಕರಣ' ಕುರಿತು ಮಾಡಿದ ಭಾಷಣ, 'ಕುಣಿಯೋಣು ಬಾರ' ಎಂಬ ಕವಿತೆಯ ವಾಚನ ಈ ಮೂರು ಓದುಗಳ ನೆನಪಿನ ಮೂಲಕ ಬೇಂದ್ರೆ ಅವರ ಸಾಹಿತ್ಯ ಶಕ್ತಿಯನ್ನು ಪರಿಚಯಿಸುತ್ತಾರೆ. ಬೇಂದ್ರೆ ಅವರ ಸಾಹಿತ್ಯ ಕುರಿತು

> ಅವೆಲ್ಲವುಗಳು ಸಾಹಿತ್ಯದ ಮೇಲುಮಟ್ಟವನ್ನು ಮುಟ್ಟಿವೆ. ಪ್ರತಿಭೆ ಮಾತುಮಾತಿನಲ್ಲಿ ಬಗೆಬಗೆತದಲ್ಲಿ ನೂರಾರು ಕಣ್ಣುಗಳಿಂದ ನಕ್ಷತ್ರಿಸುವಂತಿದೆ. ಬಿತ್ತು ತೀವಿದ ದಾಳಿಂಬೆ ಕೆತ್ತನೆ ಬಿರಿದಂತಿದೆ. ಅವುಗಳ ರಚಕನು ಕವಿವರ್ಯನೂ ಸೈ, ವಿಮರ್ಶಕನೂ, ಸಂಶೋಧಕನೂ ಸೈ, ಕೀರ್ತಿಕಾಯದಲ್ಲಿ ಆಯುಷ್ಯವಂತನಾಗಿ ಬಾಳತಕ್ಕವನೂ ಸೈ ಎನಿಸುತ್ತಿದೆ. ಸಾಹಿತ್ಯೋಪಾಸಕನಿಗೆ ಇನ್ನೇನು ಬೇಕು?[೨]

ಎಂಬ ಪ್ರಶ್ನೆ ಎತ್ತುತ್ತಾರೆ. ಬೇಂದ್ರೆ ಅಂದಿನ ಕನ್ನಡ ಕಟ್ಟುವ, ಬೆಳೆಸುವ ಎಲ್ಲಾ ಲಕ್ಷಣಗಳಲ್ಲೂ ಹಿರಿಯ ಕವಿಗಳು ಗುರ್ತಿಸುತ್ತಾರೆ. ಒಬ್ಬ ಕವಿ ತನ್ನ ವರ್ತಮಾನದಲ್ಲಿ ಭವಿಷ್ಯದ ಸೂಕ್ಷ್ಮತೆಗಳನ್ನು ಧ್ವನಿಸಿದರೆ ಅದೇ ಸಾಹಿತ್ಯದ ನಿರ್ವಚನ ಎನ್ನಬಹುದು.

ದೇಸಾಯಿ ದತ್ತಮೂರ್ತಿ ಅವರು 'ಕುಣಿಯೋಣು ಬಾರ' ಕವಿತೆಯನ್ನು ಓದಿ ಅದನ್ನು ಬದುಕಿನ ಪ್ರಭೆಯನ್ನಾಗಿ ರೂಪಿಸಿಕೊಳ್ಳುತ್ತಾರೆ. ಕವಿತೆಯಿಂದ ಒಳಶಾಂತಿ ಕಂಡ ತಳಮಳ ಇವರದು. ಆ ಕವಿತೆ ಇವರಿಗೆ ಛಂದದ ಕುಣಿತ, ಧಾಟಿಯ ಮಣಿತ, ಮಾತಿನ ಮುರಕ, ಪ್ರೀತಿಯ ಎರಕ, ಭಾವದ ಎತ್ತರ, ಅರ್ಥದ ಬಿತ್ತರ, ವೇದಾಂತದ ನಾದ, ಅಧ್ಯಾತ್ಮದ ಬೋಧ ಕಂಡು ಮರುಳಾದೆ ಎಂಬ ಅಂಶಗಳ ಮೂಲಕ ಅವರು ಶೈಲಿಗೆ ಕೊಡುವ ಒತ್ತನ್ನು ಅರ್ಥಕ್ಕೆ, ಕವಿತೆ ಒಳಗೊಳ್ಳುವ ರೀತಿಗೆ ಮರುಳಾದ ಬಗೆ ಎಂದು ತೀರ್ಮಾನಿಸಿದ್ದಾರೆ. ಆದರೆ ಈ ಕವಿತೆಯು ನವ್ಯೋತ್ತರದಲ್ಲಿ ಅತಿ ಹೆಚ್ಚು ವಿಮರ್ಶೆಗೆ ಒಳಗಾಗಿ ಒಂದು ಸತ್ವಯುತ ಕವಿತೆಯಾಯಿತು ಎನ್ನಬಹುದು.

ನಾದಲೀಲೆಯ ಸಂಕಲನದಲ್ಲಿ ಬೇಂದ್ರೆ ಅವರ 'ಜೀವದೇವನೇ ಮೈವೆತ್ತು! ನೀನೇ ತಲೆಯೆತ್ತು' ಎಂಬ ಸಾಲನ್ನು ರವೀಂದ್ರನಾಥ ಠಾಕೂರರ 'ಜೀವನ-ದೇವತಾ'ತತ್ವಕ್ಕೆ ಹೋಲಿಸುತ್ತಾ ತಮ್ಮ ವಿಮರ್ಶೆಯನ್ನು ಎಸ್ ಎಂ ದೇಸಾಯಿಯವರು ಪ್ರಾರಂಭಿಸುತ್ತಾರೆ. ಒಬ್ಬ ಪ್ರೇಮಕವಿ ನಿರೂಪಿತನಾಗಲು ಆತನ ಸಾಹಿತ್ಯ ವಿಸ್ತಾರಗೊಳ್ಳುವ ನೆಲೆಯನ್ನು ಗುರ್ತಿಸುವರು.

> ವಂಗ ವೈಷ್ಣವ ಗೀತೆಗಳೂ, ರವೀಂದ್ರ ಗೀತೆಗಳೂ, ಇರಾಣದ ಸೂಫಿ ತತ್ವದ ಗಜಲುಗಳೂ, ಕೀಟ್ಸ್, ಶೆಲ್ಲಿ, ಗೊಯೆಠೆಯರ ಪ್ರೇಮ ಗೀತೆಗಳೂ ಮುಂದಿಟ್ಟುಕೊಂಡ ದಿವ್ಯ ಪ್ರೇಮದ ಶಾಶ್ವತ ತಂಬೆಳಕನ್ನು ಮನವಾರೆ ಸ್ವೀಕರಿಸಬಹುದಾಗಿದೆ.[೩೩]

ಇಂತಹ ಪ್ರೇಮಗೀತೆಗಳ ತತ್ವ ಬೇಂದ್ರೆ ಅವರ ಮೇಲೆ ಪ್ರಭಾವಿಸಿರುವ ನೆಲೆಯನ್ನು ಇಲ್ಲಿ ಚರ್ಚಿಸಿರುವುದನ್ನು ಕಾಣಬಹುದಾಗಿದೆ.

ಚಿಚ್ಚಕೋರ ಇವರು ಬೇಂದ್ರೆ ಅವರ ಸಾಹಿತ್ಯದಲ್ಲಿ ಮೂಡಿರುವ ಪಡಿನೆಳಲ ಪರೀಕ್ಷೆಯಂತೆ ವಿಭಾಗಿಯ ನೆಲೆಯಲ್ಲಿ ಕೆಲವು ಕವಿತೆಗಳನ್ನು ಗುರ್ತಿಸುತ್ತಾ ಸಾಗುತ್ತಾರೆಯೇ ವಿನಃ ಇಲ್ಲಿ ಅವರು ವಿಭಾಗಿಸಿಕೊಂಡಿರುವ ಯಾವುದೇ ವಿಭಾಗಕ್ಕೆ ನ್ಯಾಯ ಒದಗಿಸಿರಲಾರರು. ಒಂದು ಕವಿತೆಯನ್ನು ಯಾವುದೇ ದೃಷ್ಟಿಕೋನಕ್ಕೆ ಒಳಗು ಮಾಡುವುದಕ್ಕೆ ಅಧ್ಯಯನ ನೆಲೆಯ ಸಾಕ್ಷಿಗಳು ಬೇಕಾಗುತ್ತವೆ ಇಲ್ಲದಿದ್ದರೆ ಅದು ಸಂಗ್ರಹವಾಗುತ್ತದೆ.

ಶ್ರೀ ಅಯ್ಯಾಗಾರ್ ನ. ಶ್ರೀನಿವಾಸೈಯಂಗಾರ್ ಅವರು ಬೇಂದ್ರೆ ಅವರನ್ನು 'ಸಾಹಿತ್ಯದ ಯೋಗಿ' ಎಂದು ಕರೆಯಲು ಸೂಕ್ತ ಚಿಂತನೆಯನ್ನು ಈ ರೀತಿ ಅಭಿವ್ಯಕ್ತಗೊಳಿಸಿದ್ದಾರೆ.

> ಶ್ರೀ ಬೇಂದ್ರೆಯವರು ನಿರ್ಮಿಸಿರುವ ಪ್ರತಿಯೊಂದು ಕೃತಿಯಲ್ಲಿ ಕುಶಲತೆ ಎದ್ದು ಕಾಣುತ್ತಿದೆ. ಆದುದರಿಂದ ನಾವು ಹಿರಿಯ ಕವಿಗಳು, ಸಹೃದಯ ವಿಮರ್ಶಕರೂ, ರಸಿಕ ಶಿಖಾಮಣಿಗಳು, ಉಜ್ವಲ ಭಾಷಣಕಾರರೂ, ಶ್ರೇಷ್ಠ ವರ್ಗದ ಪತ್ರಿಕಾ ಸಂಪಾದಕರೂ, ಶಿಷ್ಯಪ್ರಿಯರಾದ ಅಧ್ಯಾಪಕರೂ, ಕವಿ ಪ್ರಿಯರೂ, ಮಿತ್ರರೂ ಆಗಿರುವ ಶ್ರೀ ಬೇಂದ್ರೆ ಅವರನ್ನು 'ಸಾಹಿತ್ಯ ಯೋಗಿ' ಎಂದು ಧಾರಾಳವಾಗಿ ಕರೆಯಬಹುದು.

ಹಾಗೆಯೇ ಮುಂದುವರೆದು

> ಇವರ ಕೆಲವು ಕವಿತೆಗಳಲ್ಲಿ ನಾವು ವೇದದ ಸೂಕ್ತಗಳನ್ನು ಹಾಡಿದ ಋಷಿಗಳ ಗಾಂಭೀರ್ಯವನ್ನು ಕಾಣಬಹುದು. ಹಿರಿಯ ಸಂಸ್ಕೃತ ಕವಿಗಳ ನಿಸರ್ಗ ಪ್ರೇಮವನ್ನು ಬೇರೆ ಕೆಲವು ಕವಿತೆಗಳಲ್ಲಿ ಕಾಣಬಹುದು; ಮತ್ತೆ ಕೆಲವು ಕಡೆಗಳಲ್ಲಿ ವರ್ಡ್ಸ್‌ವರ್ತ್ ಕವಿಯ ಶೈಲಿಯಲ್ಲಿ ಸರಳತೆಯನ್ನೂ ಬೈರ್ರ ಕವಿಯ ಸ್ವಾತಂತ್ರ್ಯ ಪ್ರೇಮವನ್ನೂ, ಕೀಟ್ಸ್ ಕವಿಯ ಉತ್ತಮ ಶೃಂಗಾರವನ್ನೂ ಷೆಲ್ಲಿಯ ಮತ್ತು ಯೋಗಿ ಅರವಿಂದರ ದರ್ಶನವನ್ನೂ ನಾವು ಕಾಣಬಹುದು.[೩೪]

ಬೇಂದ್ರೆ ಅವರ ಪಡೆದ ಅನುಭಾವಿಕ ನೆಲೆಗಳು ತಮ್ಮ ಸಾಹಿತ್ಯದ ಅನುಭಾವವಾಗಿ ಗೋಚರಿಸುವ ಅಂಶಗಳನ್ನು ಇಲ್ಲಿ ಗ್ರಹಿಸಿದ್ದಾರೆ. ಒಂದು ಪ್ರಾಕೃತಿಕ ಸನ್ನಿವೇಶವು ವಸಾಹತುಶಾಹಿ ಚಿಂತನೆಯಲ್ಲಿ ಉಂಟುಮಾಡಿದ ಧೋರಣೆಗಳೆಲ್ಲಾ ಕಾವ್ಯದ ಮೇಲೆ ಅದೊಂದು ಚಳುವಳಿಯಾಗಿಯೋ, ಮಾರ್ಗವಾಗಿಯೂ ತಳೆಯುತ್ತಾ ಬಂದಿರುವುದನ್ನು ಅವ್ಯಾಜವಾಗಿಯೇ ಗುರ್ತಿಸಬಹುದು.

ಕನ್ನಡ ನವೋದಯ ಸಾಹಿತ್ಯದ ಮೇಲೆ ಪ್ರಮುಖವಾಗಿ ಪ್ರಭಾವಿಸಿದ ಈ ಎಲ್ಲಾ ಚಿಂತನೆಗಳು ಅಧ್ಯಯನದ ಒಂದು ಭಾಗವಾಗಿ ಕನ್ನಡ ಸಾಹಿತ್ಯಕ್ಕೆ ಮೂಲ ಸಾಮಗ್ರಿಗಳಾಗಿವೆ. ಇದು ವಸಾಹತು ಶಿಕ್ಷಣ, ಸಾಹಿತ್ಯದ ಪ್ರಭಾವವೂ ಕಣ್ತೆರಿಸಿದ ಪರಿಯನ್ನು ಕಾಣಬಹುದು. ಇಲ್ಲಿ ಸಾಹಿತ್ಯ ಪ್ರೇರಣೆ ನಮ್ಮ ಸುತ್ತಣ ಪರಿಸರದಲ್ಲಿ ಸೂಕ್ತ ನೆಲೆ-ಬೆಲೆಯ ಅರಿವಿಗೆ ಹಾದಿಯನ್ನು ಸಾಹಿತ್ಯಾತ್ಮಕವಾಗಿ ಅಭಿಪ್ರೇರೇಪಿಸಿತು. ಅಂದಿನ ಗ್ರಂಥಸಂಪಾದನಾ ಕಾರ್ಯ, ಅನುವಾದ, ರೂಪಾಂತರ ಕ್ರಿಯೆಯೊಂದಿಗೆ ಗ್ರೀಕ್‌ನಂತಹ ದೂರದಿಂದಲೂ ನಮ್ಮ ಪರಿಸರದ ಕಥೆಯೊಂದಿಗೆ ನಂಟು ಬೆಸೆದದ್ದು ಇಲ್ಲಿನ ಸಾಹಿತ್ಯ ಕರ್ಮಿಗಳ ಸೃಜನಾತ್ಮಕ ಕೌಶಲ್ಯವೆಂದೇ ಅರಿಯಬಹುದು. ಈ ವಿಚಾರಗಳ ಕುರಿತು ಲೇಖಕರ ವಿವಿಧ ಅಧ್ಯಯನಗಳನ್ನು ಕಾಣಬಹುದು.

ಕೊನೆಟಿಪ್ಪಣಿಗಳು

೧. ದ.ರಾ.ಬೇಂದ್ರೆ., ೧೯೭೪., ಸಾಹಿತ್ಯದ ವಿರಾಟ್ ಸ್ವರೂಪ., ಪುಟ ಸಂಖ್ಯೆ ೨೪೪

೨. ತೀ. ನಂ. ಶ್ರೀ., ೨೦೦೬., ಗರಿ (ಜಯ ಕರ್ಣಾಟಕ, ೧೯೩೩)., ಪುಟ ಸಂಖ್ಯೆ ೨೬೧

೩. ...."......, ೨೦೦೬., ಗರಿ (ಜಯ ಕರ್ಣಾಟಕ, ೧೯೩೩)., ಪುಟ ಸಂಖ್ಯೆ ೨೬೫

೪. ...."......, ೨೦೦೬., ಗರಿ (ಜಯ ಕರ್ಣಾಟಕ, ೧೯೩೩)., ಪುಟ ಸಂಖ್ಯೆ ೨೬೫

೫. ...."......, ೨೦೦೬., ಗರಿ (ಜಯ ಕರ್ಣಾಟಕ, ೧೯೩೩)., ಪುಟ ಸಂಖ್ಯೆ ೨೭೪

೬. . ...."......, ೨೦೦೬., ಸಖೀಗೀತ (ಪ್ರಬುದ್ಧ ಕರ್ಣಾಟಕ ೧೯೪೦)., ಪುಟ ಸಂಖ್ಯೆ ೨೮೫

೭. ಮಿರ್ಜಿ ಅಣ್ಣಾರಾಯರು., ೧೯೪೬., ದತ್ತವಾಣಿ., ಪುಟ ಸಂಖ್ಯೆ ೧೦೦

೮. ವಾಮನ ಬೇಂದ್ರೆ (ಸಂ)., ೨೦೦೫., ಅಂಬಿಕಾತನಯದತ್ತರ ಸಮಗ್ರ ಸಾಹಿತ್ಯ, ಔದುಂಬರ ಗಾಥೆ (ಸಿದ್ಧಾಂತ ಸಂಪುಟ ೬), ಸಹೃದಯರ ದರ್ಶನ ಮಾಲೆ., ಪುಟ ಸಂಖ್ಯೆ ೯೧

೯. ವಾಮನ ಬೇಂದ್ರೆ (ಸಂ)., ೨೦೦೫., ಅಂಬಿಕಾತನಯದತ್ತರ ಸಮಗ್ರ ಸಾಹಿತ್ಯ, ಔದುಂಬರ ಗಾಥೆ (ಸಿದ್ಧಾಂತ ಸಂಪುಟ ೬), ಸಹೃದಯರ ದರ್ಶನ ಮಾಲೆ., ಪುಟ ಸಂಖ್ಯೆ ೮೮

೧೦. ವಾಮನ ಬೇಂದ್ರೆ (ಸಂ)., ೨೦೦೫., ಅಂಬಿಕಾತನಯದತ್ತರ ಸಮಗ್ರ ಸಾಹಿತ್ಯ, ಔದುಂಬರ ಗಾಥೆ (ಸಿದ್ಧಾಂತ ಸಂಪುಟ ೬), ಸಹೃದಯರ ದರ್ಶನ ಮಾಲೆ., ಪುಟ ಸಂಖ್ಯೆ ೮೯

೧೧. ಮಿರ್ಜಿ ಅಣ್ಣಾರಾಯ., ಜಿ.ಬಿ ಜೋಷಿ(ಸಂ)., ೧೯೪೬., ದತ್ತವಾಣಿ (ಕಾವ್ಯ ವಿಮರ್ಶೆ)., ಪುಟ ಸಂಖ್ಯೆ ೦೭–೧೧

೧೨. ಮಿರ್ಜಿ ಅಣ್ಣಾರಾಯ., ಜಿ.ಬಿ ಜೋಷಿ(ಸಂ)., ೧೯೪೬., ದತ್ತವಾಣಿ (ಕಾವ್ಯ ವಿಮರ್ಶೆ)., ಪುಟ ಸಂಖ್ಯೆ ೧೫

೧೩. ವಾಮನ ಬೇಂದ್ರೆ (ಸಂ)., ೨೦೦೫., ಅಂಬಿಕಾತನಯದತ್ತರ ಸಮಗ್ರ ಸಾಹಿತ್ಯ, ಔದುಂಬರಗಾಥೆ (ಶ್ರೀಮಾತಾರವಿಂದ ಪ್ರಜ್ಞಾ ಪ್ರಕಾಶ, ಸಂಪುಟ ೭), ಸಂಪಾದಕರ ಭೂಮಿಕೆ., ಪುಟಸಂಖ್ಯೆ ೧೭

೧೪. ಮಾಸ್ತಿ ವೆಂಕಟೇಶ ಅಯ್ಯಂಗಾರ್(ಸಂ)., ೧೯೪೬., ಜೀವನ., ಮುದವೀಡು ಕೃಷ್ಣರಾವ್., ನನ್ನ ಮುದ್ದು ಮೋಹಕ ಕವಿ., ವಿಶೇಷ ಸಂಚಿಕೆ., ಸಂಪುಟ ಸಂಚಿಕೆ ೨., ಪುಟಸಂಖ್ಯೆ ೪೩

೧೫. ಮಾಸ್ತಿ ವೆಂಕಟೇಶ ಅಯ್ಯಂಗಾರ್(ಸಂ)., ೧೯೪೬., ಜೀವನ; ರಾಘವೇಂದ್ರ ಇಟಗಿ., ಕವಿಬೇಂದ್ರೆ., ವಿಶೇಷ ಸಂಚಿಕೆ., ಸಂಪುಟ ೭, ಸಂಚಿಕೆ ೨., ಪುಟಸಂಖ್ಯೆ ೭೩

೧೬. ಮಾಸ್ತಿ ವೆಂಕಟೇಶ ಅಯ್ಯಂಗಾರ್(ಸಂ)., ೧೯೪೬., ಜೀವನ; ಕೃಷ್ಣಕುಮಾರ., ಕವಿ ಬೇಂದ್ರೆಯವರ ಆದರ್ಶ ದೃಷ್ಟಿ., ವಿಶೇಷ ಸಂಚಿಕೆ., ಸಂಪುಟ ೭, ಸಂಚಿಕೆ ೨., ಪುಟಸಂಖ್ಯೆ೮೨–೮೩

೧೭. ಮಾಸ್ತಿ ವೆಂಕಟೇಶ ಅಯ್ಯಂಗಾರ್(ಸಂ)., ೧೯೪೬., ಜೀವನ; ಶ್ರೀ ಪ್ರಭಾಕರ ಹರಿ ಖಾಡಿಲಕರ., ಶಾರದ ಮಂಡಳ., ವಿಶೇಷ ಸಂಚಿಕೆ., ಸಂಪುಟ ೭, ಸಂಚಿಕೆ ೨., ಪುಟಸಂಖ್ಯೆ ೯೪

೧೮. ಮಲ್ಲೇಪುರಂ ಜಿ. ವೆಂಕಟೇಶ., ೧೯೯೭., ಶಂಬಾ ಜೋಶಿಯವರ ಆಯ್ದ ಲೇಖನಗಳು., ಬೇಂದ್ರೆಯವರ ತಪಸ್ಸು (ಜಯಕರ್ನಾಟಕ ಜೂನ್ ೧೯೪೯. ಸಂಪುಟ ೧೪, ಸಂಚಿಕೆ ೬)., ಪುಟಸಂಖ್ಯೆ ೧೪೨

೧೯. ಚುಳಕಿ ಗೋವಿಂದರಾಯರು., ೧೯೪೬., ಕವಿವರ ಬೇಂದ್ರೆ., ಸಂಪಾದಕರ ಬಿನ್ನಹ

೨೦. ....''......, ೧೯೪೬., ಕವಿವರ ಬೇಂದ್ರೆ; ಗೆಳೆಯ ಬೇಂದ್ರೆ; ಶ್ರೀಧರ ಖಾನೋಳಕರ., ಪುಟಸಂಖ್ಯೆ ೦೨

೨೧. ....''......, ೧೯೪೬., ಕವಿವರ ಬೇಂದ್ರೆ; ಗೆಳೆಯ ಬೇಂದ್ರೆ; ಶ್ರೀಧರ ಖಾನೋಳಕರ., ಪುಟಸಂಖ್ಯೆ ೧೮

೨೨. ....''......, ೧೯೪೬., ಕವಿವರ ಬೇಂದ್ರೆ; ನಾ ಕಂಡ ದತ್ತು; ಸ. ಪ. ಗಾಂವಂಕರ., ಪುಟಸಂಖ್ಯೆ ೨೪

೨೩. ....''......, ೧೯೪೬., ಕವಿವರ ಬೇಂದ್ರೆ; ಗೆಳೆಯರ ಗುಂಪಿನ ಕಣಸು; ವಿ.ಕೃ. ಗೋಕಾಕ., ಪುಟ ಸಂಖ್ಯೆ ೩೦

೨೪. ....''......, ೧೯೪೬., ಕವಿವರ ಬೇಂದ್ರೆ; ಅಣ್ಣನ ಕಾರ್ಯ; ಮಧುರಚೆನ್ನ., ಪುಟಸಂಖ್ಯೆ ೪೦

೨೫. ಚುಳಕಿ ಗೋವಿಂದರಾಯರು(ಸಂ)., ೧೯೪೬., ಕವಿವರ ಬೇಂದ್ರೆ; ಬೇಂದ್ರೆಯವರ ವ್ಯಕ್ತಿತ್ವ; ಗೊರೂರು ರಾಮಸ್ವಾಮಿ ಅಯ್ಯಾಂಗಾರ., ಪುಟ ಸಂಖ್ಯೆ ೬೮–೬೯

೨೬. ಲಿಂಗಣ್ಣ ಸಿಂ. ಪಿ., ೧೯೪೫., ದತ್ತ ಸಾಹಿತ್ಯ., ಪುಟ ಸಂಖ್ಯೆ ೦೨

೨೭. ಜೋಷಿ ಹೆಚ್. ಜಿ., ೧೯೪೭., ಬೇಂದ್ರೆ ವಾಙ್ಮಯ ದರ್ಶನ., ಮುನ್ನುಡಿ., ಪುಟ ಸಂಖ್ಯೆ ೦೩

೨೮. ....''......, ೧೯೪೭., ಬೇಂದ್ರೆ ವಾಙ್ಮಯ ದರ್ಶನ., ಅಂಬಿಕಾತನಯರ ಅಲಂಕಾರಗಳು., ಪುಟ ಸಂಖ್ಯೆ ೧೦

೨೯. ....''......, ೧೯೪೭., ಬೇಂದ್ರೆ ವಾಙ್ಮಯ ದರ್ಶನ., ಅನ್ನದೇವರು; ಸೋಲಾಪುರ ಎಚ್. ಎಮ್., ಪುಟ ಸಂಖ್ಯೆ ೩೯

೩೦. ....''......, ೧೯೪೭., ಬೇಂದ್ರೆ ವಾಙ್ಮಯ ದರ್ಶನ., ರಸಸಿದ್ಧಿ; ಶಾಂತ ಗಲಗಲಿ., ಪುಟ ಸಂಖ್ಯೆ ೩೯

೩೧. ಮಿರ್ಜಿ ಅಣ್ಣಾರಾಯ., ಜಿ.ಬಿ ಜೋಷಿ(ಸಂ)., ೧೯೪೭., ದತ್ತವಾಣಿ (ಕಾವ್ಯ ವಿಮರ್ಶೆ)., ಪುಟ ಸಂಖ್ಯೆ ೪೭–೪೯

೩೨. ಮಾಸ್ತಿ ವೆಂಕಟೇಶ ಅಯ್ಯಂಗಾರ್(ಸಂ)., ೧೯೪೬., ಜೀವನ; ವಿಶೇಷ ಸಂಚಿಕೆ., ಸಂಪುಟ ೭, ಸಂಚಿಕೆ ೨. ಹರಕೆ, ಮಂಜೇಶ್ವರ ಗೋವಿಂದಪೈ., ಪುಟ ಸಂಖ್ಯೆ ೪೭.

೩೩. ....''......, ೧೯೪೬., ಜೀವನ; ವಿಶೇಷ ಸಂಚಿಕೆ., 'ಕವಿ ಬೇಂದ್ರೆಯವರ ಹೃದಯ ಮತ್ತು ಮನಸ್ಸು'., ಎಸ್. ಎಂ. ದೇಸಾಯಿ., ಸಂಪುಟ ೭, ಸಂಚಿಕೆ ೨. ಪು.ಸಂ. ೫೯

೩೪. ....''......, ೧೯೪೬., ಅಯ್ಯಾಗಾರ್ ನ. ಶ್ರೀನಿವಾಸೈಯಂಗಾರ್., ಸಾಹಿತ್ಯಯೋಗಿ ಬೇಂದ್ರೆ., ಜೀವನ; ವಿಶೇಷ ಸಂಚಿಕೆ., ಸಂಪುಟ ೭, ಸಂಚಿಕೆ ೨. ಪುಟ ಸಂಖ್ಯೆ ೬೫.

ಅಧ್ಯಾಯ-೪

ವಸಾಹತೋತ್ತರ ಕಾಲದ ವಿಮರ್ಶೆಗಳು

(೧೯೫೧ ರಿಂದ ೨೦೦೦ರವರೆಗಿನ ವಿಮರ್ಶೆಗಳು)

೪. ೧. ಬೇಂದ್ರೆ ಅವರ ಸಾಹಿತ್ಯ: ಭಾಷಾ ಚಿಂತನೆ

೪. ೧. ೧. ಭಾಷಾ ಸಮನ್ವಯ ಚಿಂತನೆ

೪. ೧. ೨. ಬೇಂದ್ರೆ ಸಾಹಿತ್ಯ- ಕಾವ್ಯಮೀಮಾಂಸೆ ಕುರಿತ ಚಿಂತನೆ

೪. ೧. ೩. ಬೇಂದ್ರೆ ಅವರ ಸಾಹಿತ್ಯದ ಭಾಷೆ

೪. ೨. ಬೇಂದ್ರೆ ಅವರ ಕಾವ್ಯದಲ್ಲಿ ಬಂಡಾಯದ ಧ್ವನಿ

೪. ೩. ಸಾಮಾಜಿಕ ಪ್ರಜ್ಞೆ ಕುರಿತ ವಿಮರ್ಶೆಗಳು

೪. ೪. ಅಭಿನಂದನ ಗ್ರಂಥಗಳ ಮೂಲಕ ಸಾಹಿತ್ಯ ಅಧ್ಯಯನ

೪. ೫. ಬೇಂದ್ರೆ ಸಾಹಿತ್ಯ ಕುರಿತು ಕೀರ್ತಿನಾಥ ಕುರ್ತಕೋಟಿ ಅವರ ವಿಮರ್ಶೆಯ ನಿಲುವುಗಳು

೪. ೬. ಸಂಶೋಧನೆಗಳಲ್ಲಿ ತಾತ್ವಿಕತೆ, ಜೀವನ ದರ್ಶನದಲ್ಲಿ ಪ್ರಮುಖ ಸಮಸ್ಯೆಗಳು, ಇತರ ಚಿಂತನೆಗಳು

ವಸಾಹಾತೋತ್ತರ ಚಿಂತನೆಗಳು

(೧೯೫೧ ರಿಂದ ೨೦೦೦ರ ತನಕ ಕಂಡುಬರುವ ವಿಮರ್ಶೆಗಳು)

ದೇಶವು ಸ್ವಾತಂತ್ರ್ಯ ಪಡೆದ ಹಿನ್ನೆಲೆಯಲ್ಲಿ ಸಮಾಜದಲ್ಲಿ ಎಲ್ಲಾ ರೀತಿಯ ಬದಲಾವಣೆಗಳು ಕಾಣಿಸಿಕೊಂಡವು. ಇರುವ ಸಮಸ್ಯೆಗಳ ಜೊತೆಗೆ ನಿರಾಳವಾದ ದೇಶ ಹೊಸ ಸಮಸ್ಯೆಗಳನ್ನು ತನ್ನದಾಗಿಸಿಕೊಂಡಿತು. ರಾಷ್ಟ್ರೀಯ ಚಿಂತನೆ, ಪ್ರಾಂತೀಯ ಚಿಂತನೆ, ಶಿಕ್ಷಣ ಕ್ರಮ, ಉದ್ಯೋಗ ಮತ್ತು ಕುಟುಂಬ ನಿರ್ವಹಣೆ ಇವೆಲ್ಲಾ ಅಂದಿನ ಬರಹಗಾರರಿಗೂ ಪರಿಣಾಮ ಉಂಟುಮಾಡಿ ಎಚ್ಚರ ಮೂಡಿಸಿತು. ಏಕೀಕರಣ ಚಿಂತನೆಯಲ್ಲಿ ಆಳ್ವಿಕೆ ಎಂಬುದು ರಾಜಕೀಯ ಎಂಬ ಹೆಸರಿನಡಿಯಲ್ಲಿ ರಾಜ್ಯಗಳಲ್ಲಿ ಉದಯಿಸಿದ ಕಾಲಘಟ್ಟವದು. ಇವೆಲ್ಲವೂ ವಸಾಹತೋತ್ತರ ಚಿಂತನೆಯಲ್ಲಿ ಕಂಡುಬರುವ ಅಂಶಗಳಾಗಿವೆ. ಆದರೆ ಸಾಹಿತ್ಯ ಕ್ಷೇತ್ರದಲ್ಲಿ ಉಂಟುಮಾಡಿದ ಪಾಶ್ಚಾತ್ಯ ಚಿಂತನೆಯ ಪ್ರಭಾವ, ಹೊರ ಜಗತ್ತನ್ನು ಕಂಡ ಬರಹಗಾರನಿಗೆ ಇಲ್ಲಿನ ಪ್ರತಿ ಅಂಶವೂ ಕೂಡ ವಸ್ತುವಾಗಿ ಪರಿಣಾಮಕಾರಿಯಾದ ಚಿಂತನೆಯನ್ನು ಉಂಟುಮಾಡಿತು. ಬದಲಾವಣೆಯ ಅಸ್ಮಿತೆ ಅಂದಿನ ಲೇಖಕರನ್ನು ವೈಚಾರಿಕ ಪ್ರಶ್ನೆಯಾಗಿ ಕೂತೂಹಲ ತಂದಿತು. ಅಧ್ಯಯನ ಎಂಬುದು ವಿಚಾರದ ಹಾದಿ ಹಿಡಿದು ಅಭಿಮಾನದ ಬಾಗಿಲಿನಿಂದ ಹಲವು ಜ್ಞಾನದ ಕಿಟಕಿಗಳನ್ನು ತೆರೆದ ಸೂಕ್ಷ್ಮ ಸಂಗತಿಗಳು ನಮಗೆ ಗೋಚರಿಸುತ್ತವೆ. ಸ್ವಾತಂತ್ರ್ಯಪೂರ್ವದ ಸಾಹಿತ್ಯ ಚಿಂತನೆಯನ್ನು ನವೋದಯವೆಂದು, 'ಪುನರುಜ್ಜೀವನಕಾಲ'ವೆಂದೂ ಸ್ವಾತಂತ್ರ್ಯ ಕಾಲಘಟ್ಟದ ಚಳುವಳಿ ರೂಪಿಯಾದ ಬರಹವನ್ನು ಪ್ರಗತಿಶೀಲವೆಂದು ಸುಲಭವಾಗಿ ಗ್ರಹಿಸಲಾಯಿತು. ನವ್ಯ ಚಿಂತನೆ ಎಂಬುದು ೧೯೫೦ರ ವೇಳೆಗೆ ವ್ಯಕ್ತಿನಿಷ್ಠ ಸಾಹಿತ್ಯವಾಗಿ ಮೂಡಿತು. ಇದು ಸಾಹಿತ್ಯ ಕ್ಷೇತ್ರವನ್ನು ಚರಿತ್ರೆಯ ರೂಪದಲ್ಲಿ ದಾಖಲಿಸುತ್ತಾ ಬಂದ ರೀತಿಯಾಗಿದೆ. ಆದರೆ ಈ ಅಂಶಗಳನ್ನು ಗಮನಿಸಿದರೂ ಇಲ್ಲಿ ಅಧ್ಯಯನವೆಂಬುದು ಅಂದಿನ ಸಾಹಿತ್ಯವನ್ನು ಗ್ರಹಿಸಿದ ರೀತಿ ಹಾಗೂ ಹೊಸ ಮಾರ್ಗಗಳನ್ನು ಹುಡುಕುವ ವಿಮರ್ಶಾ ರೂಪವನ್ನು ಇಲ್ಲಿ ಮುಖ್ಯವಾಗಿ ಗ್ರಹಿಸುತ್ತಾ ಈ ಎಲ್ಲಾ ಸ್ವರೂಪಗಳನ್ನು ತಾತ್ವಿಕವಾಗಿ ಚಿಂತಿಸಲಾಗಿದೆ. ಕುವೆಂಪು, ಬೇಂದ್ರೆ, ಕಾರಂತ ಮೊದಲಾದ ಸಾಹಿತ್ಯ ರಚನಾಕಾರರು ಈ ಎಚ್ಚರಿಕೆಯನ್ನು ಅನುಸರಿಸಿದ್ದಾರೆ. ತನ್ನ ಪರಿಸರವನ್ನು ಎಚ್ಚರಿಸುತ್ತಾ ಸಾಗಿರುವ ಹಲವು ಮಾದರಿಗಳು ಅವರ ಕೃತಿಗಳು ಹಾಗೂ ಅಂದಿನ ಬೇರೆ ಬೇರೆ ಬರಹಗಾರರಿಗೆ ನೀಡಿರುವ ಸಲಹೆಗಳಲ್ಲಿ ಕಾಣಬಹುದು.

ಬೇಂದ್ರೆ ಅವರು ೧೯೪೬ರಲ್ಲಿ ಗೋಪಾಲಕೃಷ್ಣ ಅಡಿಗರ 'ಭಾವತರಂಗ'ಕ್ಕೆ ಮುನ್ನುಡಿಯನ್ನು ಬರೆಯುತ್ತಾ

> ತನ್ನ ಭಾವಕ್ಕೆ ನಾಡಿನ ನುಡಿಯ ತೊಡಿಗೆಯನ್ನು ಇಡುವಾಗ ಯಾವ ಕವಿಯೂ ತನ್ನ ಭಾವದ ಹಾಸಿಗೆ ಜನಜೀವನದ ಹೊಕ್ಕನ್ನು ಸೇರಿಸಿದೆ ನಿರ್ವಾಹವಿಲ್ಲದಾಗುವುದು. ಅಂಚು ಸೆರಗು ತನ್ನದಾದರೆ ಮೈ ಎಲ್ಲರದಾಗಿ ಬಿಡುತ್ತದೆ. ಕವಿಹೃದಯದೊಡನೆ ಒಂದಾಗುವುದಕ್ಕೆ ಇಲ್ಲಿಯೇ ಹಾದಿ.[೧]

ಕುವೆಂಪು ಅವರು ೧೯೫೫ರಲ್ಲಿ ತೀನಂಶ್ರೀ ಅವರ 'ಭಾರತೀಯ ಕಾವ್ಯ ಮಿಮಾಂಸೆ' ಕೃತಿಯ ಮುನ್ನುಡಿಯಲ್ಲಿ

> ಸಾಹಿತ್ಯ ಸೃಷ್ಟಿಯಲ್ಲಿ ಹೇಗೋ ವಿಮರ್ಶ ದೃಷ್ಟಿಯಲ್ಲಿಯೂ ಹಾಗೆಯೇ ಪಾಶ್ಚಾತ್ಯದ ಅಂಧಾನುಸರಣವಾಗಲಿ ಉತ್ತಮ ಸೃಷ್ಟಿಗೆ ಕಾರಣವಾಗದು. ಎಂದ ಮೇಲೆ ಕನ್ನಡದ ಕಾವ್ಯ ವಿಮರ್ಶೆ ಸಮನ್ವಯ ರೂಪವಾದ ಒಂದು ನವವಿಧಾನವನ್ನು ಅನುಸರಿಸಿ ತನ್ನ ವೈಶಿಷ್ಟ್ಯವನ್ನು ಸ್ಥಾಪಿಸುವುದರ ಮೂಲಕ ಲೋಕದ ಕಾವ್ಯ ವಿಮರ್ಶೆಗೂ ತನ್ನ ಕಾಣಿಕೆಯನ್ನು ಸಲ್ಲಿಸಬೇಕಾಗಿದೆ.[೨]

ಬೇಂದ್ರೆ ಅವರು ೧೯೪೬ರಲ್ಲಿ ಗೋಪಾಲಕೃಷ್ಣ ಅಡಿಗರ 'ಭಾವತರಂಗ' ಸಂಕಲನಕ್ಕೆ ಮುನ್ನುಡಿ ಬರೆಯುತ್ತಾ...

> ತನ್ನ ಭಾವಕ್ಕೆ ನಾಡಿನ ನುಡಿಯ ತೊಡಿಗೆಯನ್ನು ಇಡುವಾಗಯಾವ ಕವಿಯೂ ತನ್ನ ಭಾವದ ಹಾಸಿಗೆ ಜನಜೀವನದ ಹೊಕ್ಕನ್ನು ಸೇರಿಸದೆ ನಿರ್ವಾಹವಿಲ್ಲದಾಗುವುದು. ಅಂಚು ಸೆರಗು ತನ್ನದಾದರೆ ಮೈ ಎಲ್ಲರದಾಗಿ ಬಿಡುತ್ತದೆ. ಕವಿಹೃದಯದೊಡನೆ ಒಂದಾಗುವುದಕ್ಕೆ ಇಲ್ಲಿಯೇ ಹಾದಿ.[೩]

ಇವು ಅಂದಿನ ಸಾಹಿತ್ಯದ ಮುನ್ನುಡಿಗಳಲ್ಲಿ ಕಾಣುವ ಎಚ್ಚರ ಹಾಗೂ ಜವಾಬ್ದಾರಿಗಳು. ಇದೇ ಕಾಲಘಟ್ಟದಲ್ಲಿ ಅನೇಕ ವಿಮರ್ಶಾ ಚಿಂತನೆಯ ಲೇಖನಗಳೂ ರಚನೆಯಾಗಿವೆ. ಇವುಗಳ ಅಧ್ಯಯನದಲ್ಲೂ ಸ್ವತಂತ್ರೋತ್ತರ ಕಾಲಘಟ್ಟದ ಎಲ್ಲಾ ಜವಾಬ್ದಾರಿಗಳನ್ನು ಸೂಕ್ಷ್ಮ ಸಂವೇದನೆಯಂತೆ ಗ್ರಹಿಸಲಾಗಿದೆ.

ಬೇಂದ್ರೆ ಅವರು ದೇಶದ ರಾಜಕೀಯ, ಸಾಮಾಜಿಕ ತುರ್ತು ಸನ್ನಿವೇಶದಲ್ಲಿ ಅಭಿಮಾನದ ಕವಿಯಾಗಿ ಆರಾಧನೆಗೆ ಒಳಗಾದ ಬರಹಗಾರರು. ಶಂ. ಬಾ ಜೋಷಿ ಅವರ 'ಬೇಂದ್ರೆಯವರ ತಪಸ್ಸು' ಲೇಖನವು ಅಭಿಮಾನಕ್ಕೆ ಸೂಕ್ತ ಕಾರಣಗಳನ್ನು ಚರ್ಚಿಸಿದೆ. ಬೇಂದ್ರೆಯವರು ಅಭಿಮಾನವನ್ನು ಒಂದು ತಪಸ್ಸಿನಂತೆ ಪಡೆದ ಫಲವೆಂದು ಅದು ಕನ್ನಡದಲ್ಲಿ ಬೇಂದ್ರೆ ಅವರಿಂದ ಮಾತ್ರ ಸಾಧ್ಯವೆಂಬ ಆಶಯವೂ ಕೂಡ ಕನ್ನಡ ಸಾಹಿತ್ಯ ಲೋಕಕ್ಕೆ ವಾಸ್ತವಿಕ ಚಿಂತನೆಯಾಗಿದೆ. ವಸಾಹತೋತ್ತರ ಕಾಲಘಟ್ಟದಲ್ಲಿ ಬರವಣಿಗೆಗಳು ಹೆಚ್ಚಿದಂತೆ ಸಂಪಾದನಾ ಕಾರ್ಯದಿಂದ ಅಧ್ಯಯನ ಕಾರ್ಯವು ವಿಮರ್ಶೆ ಎಂಬ ಹೊಸ ಚಿಂತನೆಯನ್ನು ಸೃಜಿಸುತ್ತಾ ಬಂದುದನ್ನು ಗಮನಿಸಬಹುದು.

ಐವತ್ತು ವರ್ಷ ತುಂಬಿದ ಬೇಂದ್ರೆ ಅವರನ್ನು ಆರಾಧಿಸಿದ ಅಭಿಮಾನವನ್ನು ಕಂಡ ಕನ್ನಡ ಸಾಹಿತ್ಯವು ಬೇಂದ್ರೆ ಅವರ ಸಾಹಿತ್ಯವನ್ನು ಹೆಚ್ಚು ಓದಲು ಪ್ರಾರಂಭಿಸಿತು. ಎಂಬುದಾಗಿಯೇ ಇಲ್ಲಿ ಗಮನಿಸಿದ್ದೇನೆ. ಈ ನನ್ನ ಅಧ್ಯಯನಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ೧೯೫೧ರಿಂದ ೨೦೦೦ ಕಾಲಘಟ್ಟವನ್ನು ಯಾವುದೇ ಹಿನ್ನಲೆ ಇಲ್ಲದೆ ಒಂದು ಹಂತವಾಗಿ ಅಧ್ಯಯನ ಉದ್ದೇಶದಿಂದ ಗುರ್ತಿಸಿಕೊಂಡಿದ್ದೇನೆ. ಈ ಕಾಲಘಟ್ಟದಲ್ಲಿ ನೂರಾರು ಲೇಖಕರು ಹಲವು ಲೇಖನಗಳ ಮೂಲಕ ಬೇಂದ್ರೆ ಅವರನ್ನು ಗ್ರಹಿಸಿದ್ದಾರೆ. ಆದರೆ ಎಲ್ಲಾ ಲೇಖನಗಳೂ ದೊರೆತಿಲ್ಲ. ಏಕೆಂದರೆ ಪ್ರಕಟಣೆಯ ಹಲವು ಮಾದರಿಗಳಲ್ಲಿ, ಸಂಗ್ರಹದ ಕೊರತೆಯಲ್ಲಿ ಎಷ್ಟೋ ಬರಹಗಾರರ ಬರಹ ಇಂದು ದೊರಕುತ್ತಿಲ್ಲ. ಆದರೂ ನನ್ನ ನಿತ್ಯ ಅಧ್ಯಯನ ಸಮೀಕ್ಷೆ ಒಂದಲ್ಲ ಒಂದು ರೀತಿಯಲ್ಲಿ ಗ್ರಂಥಾಲಯಗಳು, ಆತ್ಮೀಯರ ಒಡನಾಟದಿಂದ ಸಂಗ್ರಹಿಸುವ ಜೊತೆಗೆ ಅಧ್ಯಯನ ಕಾರ್ಯವನ್ನು ನಿರಂತರವಾಗಿ ನಿರ್ವಹಿಸಿದ್ದೇನೆ. ಪ್ರಸಿದ್ಧ ಲೇಖಕರ ಬರಹಗಳು ಅತ್ಯಂತ ಬೇಗ ದೊರಕಿದರೆ, ಸಾಹಿತ್ಯ ಕ್ಷೇತ್ರದಲ್ಲಿ ಕೆಲವೇ ಬರಹಗಳಲ್ಲಿ ಕಾಣದಾದ ಹಲವು ಲೇಖಕರ ಬರಹಗಳಲ್ಲಿ ಬೇಂದ್ರೆ ದಾಖಲಾಗಿದ್ದಾರೆ ಎಂಬುದನ್ನು ಮರೆತಿಲ್ಲ. ಆದಷ್ಟು ಬೇಂದ್ರೆ ಅವರ ಸಾಹಿತ್ಯದಲ್ಲಿ ವಿಶೇಷ ಅಂಶಗಳನ್ನು ಕನ್ನಡ ಸಾಹಿತ್ಯ ಲೋಕಕ್ಕೆ ಪರಿಚಯಿಸುವ ಹೊಸ ಬಗೆಗಳಿಗೆ ಹೆಚ್ಚು ಒತ್ತು ನೀಡಿದ್ದೇನೆ. ಗೌರವಿಸುವ, ಅಭಿನಂದಿಸುವ ಬರಹಗಳನ್ನು ಅಧ್ಯಯನದ ಫಲಿತಗಳಾಗಿ ತಾತ್ವಿಕ ನೆಲೆಗಳನ್ನು ಗ್ರಹಿಸದೇ ಒಂದು ಜ್ಞಾನದ ಆಂಶವಾಗಿ ಗಮನಿಸಿದ್ದೇನೆ.

೪.೧. ಬೇಂದ್ರೆ ಅವರ ಸಾಹಿತ್ಯ : ಭಾಷಾ ಚಿಂತನೆ

ಬೇಂದ್ರೆ ಅವರ ಕಾವ್ಯ ಪ್ರಜ್ಞೆಯ ಹುಡುಕಾಟದಲ್ಲಿ ಲೇಖನಗಳು, ಕೃತಿಗಳು, ಸಂಶೋಧನಾ ಪ್ರಬಂಧಗಳು ರಚನೆಗೊಂಡಿವೆ. ತೀನಂಶ್ರೀ ಅವರ 'ಗರಿ', 'ಸಖೀಗೀತ' ಈ ಎರಡು ಲೇಖನಗಳಿಂದ ಆರಂಭವಾದ ಬೇಂದ್ರೆ ಅವರ ಕಾವ್ಯ ಪ್ರಜ್ಞೆಯ ಹುಡುಕಾಟ ಶಂಕರ ಮೊಕಾಶಿ ಪುಣೇಕರ ಅವರ ಬೇಂದ್ರೆ ಕಾವ್ಯ ಮೀಮಾಂಸೆಯ ಚಿಂತನೆಯ ಕಾಲಘಟ್ಟಕ್ಕೆ ಒಂದು ಸಾಪೇಕ್ಷತೆಯನ್ನು ಕಂಡುಕೊಂಡಿತು. ಅಭಿಮಾನದ ಬೇಂದ್ರೆ ಅವರು ಅಧ್ಯಯನದ ಬೇಂದ್ರೆಯಾಗಿ ಸಹೃದಯರ ವಿಮರ್ಶೆಗೆ ದಕ್ಕಿದರು. ೧೯೭೫ರ ಕಾಲಘಟ್ಟದ ವೇಳೆಗೆ ನವ್ಯ ಚಿಂತನೆಯ ಪ್ರಭಾವವೂ ಸಮಷ್ಟಿ ನೆಲೆಯಿಂದ ವ್ಯಕ್ತಿನೆಲೆಗೆ ಕೊಂಡೊಯ್ಯಿತೆನ್ನಬಹುದು. ಬೇಂದ್ರೆ ಅವರ ಕಾವ್ಯದ ಅಧ್ಯಯನವು ಹಲವು ಆಯಾಮಗಳಲ್ಲಿ ಪ್ರಾರಂಭವಾಯಿತು. ಭಾಷೆ, ಕಾವ್ಯದಲ್ಲಿ ವಸ್ತುವಿನ ಹುಡುಕಾಟ, ಸಾಮಾಜಿಕ ಪ್ರಜ್ಞೆ, ಛಂದಸ್ಸಿನ ಅಭ್ಯಾಸ, ಕಾವ್ಯದ ಇತರ ಮೀಮಾಂಸೆಗಳ ಅಧ್ಯಯನ ಪ್ರಾರಂಭವಾಯಿತು. ಕೆಲವು ಲೇಖನಗಳು ವಿಮರ್ಶೆಯ ಮಾನದಂಡದಿಂದಲೇ ಗಮನಿಸಿದವು. ಈ ಅಧ್ಯಾಯದಲ್ಲಿ ಇಪ್ಪತ್ತನೇ ಶತಮಾನದ ಮುಕ್ತಾಯದ ಹಂತದವರೆಗೂ ವಸಾಹತೋತ್ತರ ಕಾಲಘಟ್ಟದ ಚಿಂತನೆಗಳು ಮೂಡಿಬಂದ ಬಗೆಯನ್ನು ಅವುಗಳ ಸ್ವರೂಪವನ್ನು ಗ್ರಹಿಸಲು ಯತ್ನಿಸಲಾಗಿದೆ.

ಶಂಕರಮೊಕಾಶಿ ಪುಣೇಕರ, ಮಧುರ ಚೆನ್ನ, ನಾಯಕ್ ಹಾ. ಮಾ, ಗೋಕಾಕ್ ವಿ.ಕೃ, ಕೀರ್ತಿನಾಥ ಕುರ್ತಕೋಟಿ, ಮುಗಳಿ ರಂ.ಶ್ರೀ, ವಿರೇಂದ್ರ ಸಿಂಪಿ, ಶಿವರುದ್ರಪ್ಪ ಜಿ. ಎಸ್, ಶೇಷಗಿರಿ ರಾವ್ ಎಲ್. ಎಸ್, ಸತ್ಯಕಾಮ, ನಾಗರಾಜ್ ಡಿ. ಆರ್, ವಾಮನಬೇಂದ್ರೆ, ನಾಯಕ್ ಜಿ. ಎಚ್, ಶ್ರೀನಿವಾಸರಾಜು ಚಿ, ಸೋಮಶೇಖರ ಇಮ್ರಾಪುರ, ಕಾಳೇಗೌಡ ನಾಗವಾರ, ಕೃಷ್ಣಪ್ಪ ಜಿ, ಬರಗೂರು ರಾಮಚಂದ್ರಪ್ಪ, ಚಂದ್ರಶೇಖರ ಕಂಬಾರ, ಚಂದ್ರಶೇಖರ ಪಾಟೀಲ, ದೊಡ್ಡರಂಗೇಗೌಡ, ರಾಘವೇಂದ್ರರಾವ್ ಎಚ್. ಎಸ್, ಬೋರಲಿಂಗಯ್ಯ ಎನ್, ಕುಸುಮಾಕರ ದೇವರಗೆಣ್ಣೂರ, ಆಮೂರ ಜಿ. ಎಸ್, ಶಿವಾರೆಡ್ಡಿ ಕೆ. ಸಿ, ರಾಜೇಂದ್ರ ಡಿ.ಕೆ, ಶ್ರೀಕಂಠ ಕೊಡಿಗೆ, ಎಡ್ವರ್ಡ್ ನೊರೋನ, ಚನ್ನಣ್ಣ ವಾಲೀಕಾರ ಹೀಗೆ ಹಲವು ಜನರ ಒಂದು ಪಟ್ಟಿಯೇ ಬೆಳೆಯುತ್ತದೆ. ಅಧ್ಯಯನದಲ್ಲಿ ವಿಷಯಕ್ಕೆ ಅನುಗುಣವಾಗಿ ಎಲ್ಲರ ಚಿಂತನೆಯನ್ನು ಅಧ್ಯಯನ ಮಾಡಲಾಗುವುದು. ಇಪ್ಪತ್ತನೇ ಶತಮಾನದ ಮುಕ್ತಾಯದ ವೇಳೆಗೆ ಬೇಂದ್ರೆ ಅವರನ್ನು ಕುರಿತು ಸಾಕಷ್ಟು ರೀತಿಯ ಅಧ್ಯಯನಗಳು ನಡೆದವು. ಪತ್ರಿಕೆಗಳ ವಿಶೇಷಾಂಕ, ಸಂಶೋಧನೆ., ವಿಚಾರಸಂಕಿರಣಗಳ ಹಾದಿಯಲ್ಲಿ ಬೇಂದ್ರೆ ಅವರ ಸಾಹಿತ್ಯದ ನೆಲೆಯನ್ನು ಕಂಡುಕೊಳ್ಳಲು ಅಧ್ಯಯನವು ಪ್ರಾರಂಭವಾಯಿತು.

ಬೇಂದ್ರೆ ಅವರು ತಮ್ಮ ಸಾಹಿತ್ಯದಲ್ಲಿ ಬಳಸಿದ ಭಾಷಾ ಚಿಂತನೆಯನ್ನು ಪಾಶ್ಚಾತ್ಯ ಚಿಂತಕರ ಧೋರಣೆಯಲ್ಲಿ ಹಾಗೂ ಭಾರತೀಯ ಕಾವ್ಯಮೀಮಾಂಸೆ-ಕನ್ನಡ ಕಾವ್ಯಮೀಮಾಂಸೆಯ ಪ್ರಾಯೋಗಿಕ ಅಂಶಗಳ ತಾತ್ವಿಕತೆಯಲ್ಲಿ ಹಲವು ಲೇಖನಗಳು ಗ್ರಹಿಸಿವೆ. ಮಧುರಚೆನ್ನರ 'ಬೇಂದ್ರೆಯವರ ಭಾಷಾಶಾಸ್ತ್ರ ವಿಷಯಕ ವಿಚಾರಗಳ ರೂಪರೇಷೆ', ಶಂಕರ ಮೊಕಾಶಿ ಪುಣೇಕರ ಅವರ 'ಬೇಂದ್ರೆ ಕಾವ್ಯ ಮೀಮಾಂಸೆ', ಸೋಮಶೇಖರ ಇಮ್ರಾಪೂರ ಅವರ 'ಬೇಂದ್ರೆ ಅವರ ಕಾವ್ಯದ ಭಾಷೆ', ಎನ್ಕೆ ಅವರ 'ಬೇಂದ್ರೆ ಪ್ರತಿಮೆ-ಕಾವ್ಯಭಾಷೆ ಈ ಲೇಖನಗಳನ್ನು ಇಲ್ಲಿ ಗಮನಿಸಬಹುದು.

೧. ೧. ಭಾಷಾ ಸಮನ್ವಯ ಚಿಂತನೆ

ಮಧುರಚೆನ್ನರ 'ಬೇಂದ್ರೆಯವರ ಭಾಷಾಶಾಸ್ತ್ರ ವಿಷಯಕ ವಿಚಾರಗಳ ರೂಪರೇಷೆ' ಈ ಲೇಖನವು ವಿಶಿಷ್ಟವಾದ ಚಿಂತನೆಯನ್ನು ಬೇಂದ್ರೆಯವರ ಬದುಕಿನ ಆಚೆ ನಿಂತು ಭಾಷಾ ವಿಜ್ಞಾನದ ಪರಿಧಿಯಲ್ಲಿ ಗ್ರಹಿಸಿದ್ದಾರೆ. ೧೯೫೦ರ ವೇಳೆಗೆ ರಚನೆಗೊಂಡ ಈ ಲೇಖನವನ್ನು ಗ್ರಹಿಸಿ ಈ ದೃಷ್ಟಿಕೋನದಲ್ಲಿ ಅಧ್ಯಯನ ಮುಂದುವರೆಸಿದ ವಿಮರ್ಶಕರು ಯಾರೂ ದೊರೆತಿಲ್ಲ. ಈ ಲೇಖನದಲ್ಲಿ ಬೇಂದ್ರೆಯವರು ನೀಡಿದ ಆರ್ಯ ಹಾಗೂ ದ್ರಾವಿಡ ಭಾಷಾ ಸಂಬಂಧಿತ ವ್ಯಾಕರಣಾಂಶಗಳ ಕುರಿತ ಚರ್ಚೆ ಇದೆ. ಬೇಂದ್ರೆಯವರು ಇಂತಹ ಭಾಷಾ ಜ್ಞಾನವನ್ನು ಗ್ರಹಿಸುತ್ತಾ ತಮ್ಮ ಸಂಖ್ಯಾ ನಿರ್ಣಯ ಅಧ್ಯಯನಕ್ಕೆ ಪೀಠಿಕೆ ರಚಿಸಿಕೊಂಡ ರೂಪವೇ ಈ ಲೇಖನವಾಗಿ ಗ್ರಹಿಸಿದ್ದಾರೆ.

ಮಧುರ ಚೆನ್ನ ಅವರು 'ಅಣ್ಣನ ಕಾರ್ಯ' ಎಂಬ ಲೇಖನದ ನಂತರ ಬೇಂದ್ರೆ ಅವರ ಸಾಹಿತ್ಯವನ್ನು ಓದಿದ ಹೊಸ ಬಗೆ ಇಲ್ಲಿ ಮುಖ್ಯವಾಗುತ್ತದೆ. ಬೇಂದ್ರೆ ಅವರ ಅಧ್ಯಯನವು

ವಿಶಾಲವಾದದು ಎಂಬ ಹಲವು ಚಿಂತನೆಗಳನ್ನು ಗ್ರಹಿಸಿದರೂ ಅದರ ವಿಸ್ತಾರವನ್ನು ಮಧುರಚೆನ್ನರು ಸೂಕ್ಷ್ಮವಾಗಿ ಗ್ರಹಿಸಿದ್ದಾರೆ. 'ಬೇಂದ್ರೆಯವರ ಆರ್ಯ–ದ್ರಾವಿಡ ಭಾಷಾ ಸಮನ್ವಯ' ಎಂಬ ಲೇಖನದಲ್ಲಿ ಮಂಡಿಸಿದ ಹೊಸ ವಿಚಾರದಿಂದ ಬೇಂದ್ರೆ ಅವರು ಗ್ರಹಿಸುತ್ತಿರುವ ಹಾಗೂ ನಿರೂಪಿಸುತ್ತಿರುವ ಭಾಷಾ ಜಗತ್ತನ್ನು ಮಧುರಚೆನ್ನರು ಚರ್ಚಿಸಿದ್ದಾರೆ. ಇದನ್ನು ಬೇಂದ್ರೆ ಅವರು ನಿರೂಪಿಸಿದ 'ಬೀಜಾಕ್ಷರ ಪದ್ದತಿ' ಎಂದು ಗ್ರಹಿಸಿದ್ದಾರೆ.

> ಭಾಷಾಶಾಸ್ತ್ರದಲ್ಲಿ ೧. ಅನುಕರಣವಾಚಕ ಶಬ್ದಗಳಿಂದಲೇ ಭಾಷೋತ್ಪತ್ತಿಯಂದೂ, ೨. ಉದ್ಗಾರವಾಚಕಗಳಿಂದಲೇ ಭಾಷೋತ್ಪತ್ತಿಯೆಂದೂ ಎರಡೂ ವಾದಗಳು ಪಾಶ್ಚಾತ್ಯ ವಿದ್ವಾಂಸರಲ್ಲಿರುವಂತೆ ನಮ್ಮ ಪುರಾತನ ಮಂತ್ರ ಶಾಸ್ತ್ರದಲ್ಲಿಯೂ ದಿವಂಗತ ವಿಶ್ವಕವಿ ಏ.ಇ. ಯವರ 'candle of vision' ದಲ್ಲಿಯೂ ಬರುವ 'ಮಾತೃಶಕ್ತಿ' ಅಥವಾ ಅಕ್ಷರಶಕ್ತಿ' ಎಂಬ ಧ್ಯಾನಗಮ್ಯ ಬಹುಸೂಕ್ಷ್ಮಪದ್ಧತಿಯೂ ಒಂದು ಇದೆಯೆಂಬುದನ್ನು ನೆನೆಸಿದರೆ ಶ್ರೀ ಬೇಂದ್ರೆ ಅವರ 'ಬೀಜಾಕ್ಷರ' ಪದ್ದತಿಯ ಕಲ್ಪನೆಯಾಗುವುದು. ಸಿಲೋಲಿನ ಭಾಷಾಶಾಸ್ತ್ರಜ್ಞರಾದ 'ಫಾದರ ಕ್ಲೋಸೆಟ್'ರವರ ಪದ್ಧತಿಯೂ ಈ ವರ್ಗದ್ದಾಗಿದೆ. 'ಅಕ್ಷರಮಾಲಿಕೋಪನಿಷತ್ತು ಮತ್ತು; ಜಾನ್ ಎಡ್ರಾಪ್' ಅವರ 'Garland of letters' ಎಂಬ ಗ್ರಂಥಗಳಲ್ಲಿ ಈ ವಿಷಯದಲ್ಲಿ ನಮ್ಮ ಪುರಾತನರು ಮಾಡಿದ ಶೋಧವನ್ನು ನೋಡಬಹುದು. ಶ್ರೀ ಬೇಂದ್ರೆ ಅವರ 'ಬೀಜಾಕ್ಷರ' ಪದ್ಧತಿಯು ಪುರಾತನ ನೂತನರೀರ್ವರ ಸಂಶೋಧನೆಗಳೆರಡನ್ನೂ ಬಳಸಿಕೊಂಡು ಅವೆರಡಕ್ಕೂ ಮಧ್ಯವರ್ತಿಯಾಗಿ ನಿಂತಿದೆ.[೪]

ಈ ಚಿಂತನೆಯಲ್ಲಿ ಬೇಂದ್ರೆ ಅವರು ನಮ್ಮ ಪುರಾತನ ವೈದಿಕ 'ನಿರುಕ್ತ' ಪದ್ಧತಿ ಮೊದಲಾದ ಪದ್ಧತಿಗಳನ್ನು ಬೇಂದ್ರೆ ಅವರು ತಮ್ಮ ಭಾಷಾ ಸಂಶೋಧನೆಯಲ್ಲಿ ಬಳಸಿರುವುದನ್ನು ಗ್ರಹಿಸಿದ್ದಾರೆ.

ಸಿಲೋನಿನ ಭಾಷಾಶಾಸ್ತ್ರಜ್ಞರಾದ 'ಫಾದರ್ ಕ್ಲೋಸೆಟ್'ರವರು ತಮ್ಮ 'Dravidian origin of the human speech' ಎಂಬ ಗ್ರಂಥದಲ್ಲಿ ನಿರೂಪಿಸಿದ ಆರ್ಯಭಾಷೆಗಿಂತ ದ್ರಾವಿಡ ಭಾಷೆಯೇ ಮೂಲವೆಂಬುದನ್ನು ಉದಾಹರಿಸಿದ್ದಾರೆ. 'ಅ, ಈ, ಊ, ಏ, ಐ, ಉರ್, ಆಳ್, ಪಿಳ್, ಉ, ಸಿ, ಸಾ' ಇವು ಇಷ್ಟೇ ಮೂಲಬೀಜಾಕ್ಷರಗಳೆಂದು ನಿರ್ಧರಿಸಿದ್ದಾರೆ. ಇವುಗಳ ಪ್ರಯೋಗಾತ್ಮಕ ಅಧ್ಯಯನವನ್ನೂ ವ್ಯಾಕರಣ ದೃಷ್ಟಿಯಿಂದ ಗ್ರಹಿಸಲಾಗಿದೆ. ಅಷ್ಟೇ ಅಲ್ಲದೇ ಗ್ರೀಕ್, ಲ್ಯಾಟಿನ್, ಸಂಸ್ಕೃತ, ಸಿಂಹಳಿ, ಸುಮೇರಿಯನ್ ಮೊದಲಾದ ಅನೇಕ ಪುರಾತನ ನೂತನ ಭಾಷೆಗಳ ಶಬ್ಧಗಳೆಲ್ಲಾ ಈ ಬೀಜಾಕ್ಷರ ಜನಿತ ಶಬ್ಧಗಳು ಎಂದು ಗಮನಿಸಲಾಗಿದೆ.

ವೈದಿಕ ಹಾಗೂ ಪೌರಾಣಿಕವಾಗಿ ಕಂಡು ಬರುವ ಅಂಶಗಳಲ್ಲಿ ಈ ಆರ್ಯ ದ್ರಾವಿಡ ಚಿಂತನೆಗೆ ಋಗ್ವೇದದಲ್ಲಿ ಕಾಣ ಸಿಗುವ ಇಂದ್ರಾದಿ ದೇವತೆಗಳು ಪೌರಾಣಿಕ ಪಾತ್ರಗಳ ಮನೆಯಲ್ಲಿ ಕಾಣುವ ಸ್ಪಷ್ಟ ಸೂಕ್ತಿ, ಪೌರಾಣಿಕವಾಗಿ ಕಂಡುಬರುವ ಉಪಜನಾಂಗದ ಯವನ ಹಾಗೂ ಮ್ಲೇಚ್ಛ ಶಬ್ಧಗಳು, ಮಹಮ್ಮದೀಯ ವಾಚಕವಾಗಿರದೆ ಯೂರೋಪಿಯ, ಪಶ್ಚಿಮ ಏಸಿಯಾದ ಆರ್ಯರ ದ್ಯೋತಕವಾಗಿ ಕಂಡುಬರುವ ಸೂಕ್ಷ್ಮತೆಯ ಚರ್ಚೆ ಇದೆ. ಗ್ರೀಕ್ ಅವರಿಗೆ ಇದ್ದ 'ಯವನ್' ಹೆಸರನ್ನು ನಮ್ಮ ಅಶೋಕನು ತಮ್ಮ ಶಾಸನದಲ್ಲಿ ಉಲ್ಲೇಖಿಸಿರುವುದು ಕಂಡು

ಬರುತ್ತದೆ. ಮಹಾಭಾರತ ಹಾಗೂ ಮನುಸ್ಮೃತಿಗಳಲ್ಲಿಯೂ ಇರುವ ಆರ್ಯ ಜನಾಂಗದ ಸೂಕ್ಷ್ಮತೆ ಚರ್ಚಿತವಾಗಿದೆ. ಈ ಎಲ್ಲಾ ಕಾರಣಗಳಿಂದ ಬೇಂದ್ರೆ ಅವರು ಸ್ಪಷ್ಟಪಡಿಸಿದ ಸಿದ್ಧಾಂತ ಈ ರೀತಿ ಇದೆ 'ಐರೋಪ್ಯ ಆರ್ಯರು, ಹಿಂದೂಸ್ತಾನದ ಪಶ್ಚಿಮ ದಿಕ್ಕಿಗಿದ್ದ ಪಶ್ಚಿಮ ಏಶಿಯಾದ ಆರ್ಯರು, ಭಾರತೀಯ ಆರ್ಯರು ಹಾಗೂ ದ್ರಾವಿಡರು ಇವರೆಲ್ಲಾ ಒಂದೇ ಜನಾಂಗ(ಆರ್ಯ ಜನಾಂಗ) ಈ ಉಪಜನಾಂಗಗಳು ದೇಶ ಎಂಬ ಅರ್ಥದಲ್ಲಿ, ನೀರು ಎಂಬ ಅರ್ಥದಲ್ಲಿ, ಸಂಗೀತದೊಳಗಿನ ಸಪ್ತಸ್ವರಗಳಲ್ಲಿ ಹಾಗೇ ಹಲವು ಶಬ್ದಗಳಲ್ಲಿ ತಮ್ಮ ಉತ್ಪತ್ತಿಕೋಶವನ್ನು ತುಂಬಿಕೊಂಡಿರುವ ಧನ್ಯತೆಯನ್ನು ಬೇಂದ್ರೆ ಅವರು ಸಂಶೋಧಿಸಿದ್ದಾರೆ.

ಅರವಿಂದರ 'ವೇದರಹಸ್ಯ' ಹಾಗೂ ಬೇಂದ್ರೆಯವರ ಭಾಷಾ ಸಂಶೋಧನೆ ಎಂಬುದು ದ್ರಾವಿಡ ಜನಾಂಗವು ಆರ್ಯ ಜನಾಂಗದೊಳಗಿನ ಉಪವಿಭಾಗವಾಗಿಯೇ ಗಮನಿಸಿರುವ ಗ್ರಹಿಕೆಗಳನ್ನು ಮಧುರಚೆನ್ನರು 'ಆರ್ಯ ದ್ರಾವಿಡ ಭಾಷಾಸಮನ್ವಯ' ಎಂಬ ಲೇಖನದಲ್ಲಿ ಹೊಸ ಚಿಂತನೆಯನ್ನು ಉಲ್ಲೇಖಿಸುತ್ತಾ ಈ ರೀತಿಯಲ್ಲಿ ತೀರ್ಮಾನಿಸಿದ್ದಾರೆ.

ಬೇಂದ್ರೆ ಅವರ ಭಾಷಾ ಚಿಂತನೆಯು ಒಂದು ಸಂಶೋಧನಾ ರೂಪವಾದುದು. ಆದರೆ ಅದು ಪೂರ್ಣಗೊಳ್ಳಲಿಲ್ಲ. ಭಾಷಾವಿಜ್ಞಾನ ಕೂಡ ಈ ಸಮನ್ವಯ ನೆಲೆಯಲ್ಲಿ ಸಂಶೋಧನೆಗೊಳ್ಳಲಿಲ್ಲ. ಈ ಎಲ್ಲಾ ದಿಕ್ಕಿನಲ್ಲಿ ಆಲೋಚನೆ ಮಾಡಿದರೆ ಭಾಷಾವಿಜ್ಞಾನದ ಅಧ್ಯಯನವು ಒಂದೊಂದು ಭಾಷಾ ಮೂಲನೆಲೆಗಳನ್ನೂ ಸಂಶೋಧನೆ ನಡೆಸಿದ್ದರೂ ಇಲ್ಲಿ ಸಮನ್ವಯ ನೆಲೆಯ ಯಶಸ್ಸು ಕಂಡುಬರುತ್ತಿಲ್ಲ. ಆದರೆ ೧೯೫೦ರ ಕಾಲಘಟ್ಟದಲ್ಲಿಯೇ ಬೇಂದ್ರೆ ಅವರ ಈ ಭಾಷಾ ಸಮನ್ವಯ ಚಿಂತನೆಯನ್ನು ಮಧುರಚೆನ್ನರು ವ್ಯವಸ್ಥಿತವಾಗಿ ರೂಪಿಸಿದ್ದಾರೆ.

೧. ೨. ಬೇಂದ್ರೆ ಸಾಹಿತ್ಯ- ಕಾವ್ಯಮೀಮಾಂಸೆ ಕುರಿತ ಚಿಂತನೆ

ವಸಾಹತ್ತೋತ್ತರ ಕಾಲಘಟ್ಟದಲ್ಲಿ ಅಧ್ಯಯನ, ಸಂಪಾದನಾ ಕಾರ್ಯ, ವ್ಯಾಕರಣ ಛಂದಸ್ಸು ಇವುಗಳ ಜೊತೆಗೆ 'ಮೀಮಾಂಸೆ' ಎಂಬ ಹೊಸ ಪರಿಕಲ್ಪನೆ ಪ್ರಾರಂಭವಾಯಿತು. ಈ ಅಂಶಗಳು ಶಾಸ್ತ್ರೀಯವಾಗಿ ನಡೆದು ಬಂದ ಸಾಹಿತ್ಯದ ದಾರಿಯನ್ನು ಮುಂದುವರೆಸಲು ಹಾಗೂ ಮರು ರಚನೆಯ ತಾತ್ವಿಕ ಸಂವೇದನೆಗಳನ್ನು ಸೃಷ್ಟಿಸಲು ಹೊಸ ಅಧ್ಯಯನ ಪ್ರಾರಂಭವಾಯಿತು. ವಿಮರ್ಶೆ ಕೂಡ ಇದೇ ಬೆಳಕಿನಲ್ಲಿ ಈ ಎಲ್ಲಾ ಅಂಶಗಳಿಗೆ ಕನ್ನಡಿಯಾಯಿತು.

ಬೇಂದ್ರೆ ಕಾವ್ಯ ಮಿಮಾಂಸೆಯನ್ನು ಶಂಕರ ಮೊಕಾಶಿ ಪುಣೇಕರ ಅವರು ಕವಿ ಮತ್ತು ವಿಮರ್ಶೆ ಇವುಗಳಿಂದ ಕೆಲವು ತಾತ್ವಿಕ ಚಿಂತನೆ ನಡೆಸಿದ್ದಾರೆ. ಕವಿಯೊಬ್ಬ ವಿಮರ್ಶೆ ಬರೆದರೆ, ವಿಮರ್ಶಕ ಕವಿಯನ್ನು ಗ್ರಹಿಸಿದರೆ ಉಂಟಾಗುವ ಸೈದ್ಧಾಂತಿಕ ಕಾರಣಗಳನ್ನು ಪಾಶ್ಚಾತ್ಯ ಕವಿಗಳ ಹಾಗೂ ಭಾರತೀಯ ಗ್ರಹಿಕೆಗಳ ತಳಹದಿಯಲ್ಲಿಯೇ ಒಂದು ಪೂರ್ವ ಪೀಠಿಕೆಯನ್ನು ನಿರೂಪಿಸುತ್ತಾರೆ. ಕವಿ ಮತ್ತು ವಿಮರ್ಶಕನೆಂಬ ಈ ಎರಡೂ ಚಿಂತನೆಗಳಿಗೆ ಬೇಂದ್ರೆ ದಕ್ಕುವ ಹಾದಿಯಲ್ಲಿ ಅವರ ಕಾವ್ಯಮೀಮಾಂಸೆಯ ನೆಲೆಯನ್ನು ಮೊದಲಬಾರಿಗೆ ಕಂಡುಕೊಂಡ ಕೃತಿಯಿದು. ಅಭಿಮಾನದ ಬೇಂದ್ರೆಯು ಸಹೃದಯರಲ್ಲಿ ಅಧ್ಯಯನದ ಬೇಂದ್ರೆಯಾಗಿ ತೆರೆದುಕೊಳ್ಳಲು

ಇಂತಹ ಕೃತಿಯೇ ಸಾಕ್ಷಿಯಾಯಿತೆಂದು ಕಳೆದ ಎಲ್ಲಾ ಲೇಖನಗಳ ಗ್ರಹಿಕೆಯೊಂದಿಗೆ ತೀರ್ಮಾನಿಸ ಬಹುದು.

ಶಂಕರ ಮೊಕಾಶಿ ಪುಣೇಕರ ಅವರು...

> ಕವಿಯೂ ಕನಿಷ್ಠ ವಿಮರ್ಶಕನಷ್ಟಾದರೂ ಬುದ್ಧಿವಂತನಿರುತ್ತಾನೆಂಬ ವಿಶ್ವಾಸ; ಕವಿಯ ಮಾತಿಗೆ ಬೆಲೆ ಕೊಡುವ ಹೃದಯವಂತಿಕೆ; ಒಟ್ಟಿನ ಮೇಲೆ ಸಮಾಜದಲ್ಲಿರತಕ್ಕ ಕಾವ್ಯಾಭಿಮಾನಕ್ಕೆ ಸರಿಸಮಾನವಾಗಿ ಕವಿ ವಾಕ್ಯಕ್ಕೆ ಮಾರ್ಯಾದೆ; ಹಾಗೂ ವಿಮರ್ಶಕ ಸಂಪ್ರದಾಯದ ಬದಲಾಗಿ ರಸಿಕ ಸಂಪ್ರದಾಯದ ಪ್ರತಿಷ್ಠೆ, ಇವೆಲ್ಲಾ ಇರುವಂತ ಸಮಾಜದಲ್ಲಿ, ಕವಿಯಾಡಿದ ಕಾವ್ಯವಿಷಯಕ ಮಾತಿಗೆ ಒಂದು ಅಪೂರ್ವ ಬೆಲೆ ಇದೆ. ಹಿಂದೂ ಸ್ಥಾನದಲ್ಲಿ ಇನ್ನೂ ಈ ಪರಿಸ್ಥಿತಿ ಸುದೈವದಿಂದ ಉಂಟು; ಪಾಶ್ಚಾತ್ಯ ವಿಮರ್ಶೆಯ ಪರಿಣಾಮವಾಗಿ ತುಸು ಕಡಿಮೆಯಾದರೂ ಇನ್ನೂ ಉಂಟು. ಇದ್ದಷ್ಟನ್ನೂ ನಾವು ಬಳಸಬೇಕು. ಮಾನವನಲ್ಲಿಯೇ ಇದ್ದು ಬೆಳವಣಿಗೆ ಹೊಂದದ ಅಥವಾ ಅಡಗಿಹೋದ (undevel-oped or atrophied) ಹಲವಾರು ಸೂಕ್ಷ್ಮೇಂದ್ರಿಯಗಳು ಕವಿ; ಅನುಭಾವಿಗಳಲ್ಲಿ ಜಾಗ್ರತವಾಗಿರುತ್ತವೆ. ಅವುಗಳಿಗೆ ಮಾರ್ಯಾದೆ ಕೊಟ್ಟು ತಿಳಿದುಕೊಳ್ಳಲು ಪ್ರಾಮಾಣಿಕ ಪ್ರಯತ್ನ ಮಾಡಿ, ತಿಳಿಯದಿದ್ದರೂ ರಸಿಕತೆಯಿಂದ ಬರುವ ಜನಾಂಗಕ್ಕೆ ಅವನ್ನು ಅರಿಮುರಿಯದೆ ಒಪ್ಪಿಸುವುದು ಪ್ರತಿಜನಾಂಗದ ಕರ್ತವ್ಯವಾಗಿರುತ್ತದೆ. ಹಾಗೇ ಮಾಡುವುದು ಸಂಸ್ಕೃತಿಯ ಹಾಗೂ ರಸವಂತಿಕೆಯ ಫಲ.[೫]

ಈ ನಿಟ್ಟಿನಲ್ಲಿ ಬೇಂದ್ರೆ ಅವರ ಕಾವ್ಯವನ್ನು ಅಧ್ಯಯನ ಮಾಡಿ ಮೊದಲಿಗೆ ಮಿಮಾಂಸೆಯ ಚಿಂತನೆಯನ್ನು ೧೯೬೦ರ ವೇಳೆಗೆ ನಡೆಸಿದ್ದಾರೆ.

'ಅಧಿದೈವಿಕ (metaphysic), ಆಧ್ಯಾತ್ಮಿಕ (aesthetic), ಅಧಿಭೌತಿಕ (institutions, milieu, contemporary practice, tradition etc), ಕಾವ್ಯ ಧರ್ಮ(practice, ethic, apologia etc), ಕಾವ್ಯ ರೂಪ (forms etc), ಕವಿಕಾವ್ಯ ಸಾಕ್ಷೀ ರಸಾಯನ (the poetic culture etc) ಈ ಎಲ್ಲಾ ವಿಗಂಡಣೆಯು ಕಾವ್ಯದ ಸಮಸ್ಯೆಗಳನ್ನು ಗುರ್ತಿಸುವಲ್ಲಿ ಬೇಂದ್ರೆ ರೂಪಿಸಿದ ಮೀಮಾಂಸೆಯ ತಾತ್ವಿಕತೆಯನ್ನು ಪುಣೇಕರ ಅವರು ಗಮನಿಸಿದ್ದಾರೆ.

ಕಾವ್ಯಸೃಷ್ಠಿಯಲ್ಲಿ ಈ ಮೀಮಾಂಸೆಯ ಬೇರುಗಳು ಸ್ಪಷ್ಟವಾಗಿ ಕಾಣುತ್ತವೆ. ಆದ್ದರಿಂದ ಕಾವ್ಯಸೃಷ್ಠಿಯ ಚಿಂತನೆಯನ್ನು ಐ. ಎ. ರಿಚರ್ಡ್ಸ್, ಶೆಲ್ಲಿ, ಕೀಟ್ಸ್, ಕ್ರೋಚೆ, ಕೋಲ್ರಿಚ್, ಟಿ. ಇ. ಹ್ಯೂಮ್ ಮೊದಲಾದ ಪಾಶ್ಚಾತ್ಯ ಚಿಂತಕರ ಕಾವ್ಯ ರಚನಾ ದೃಷ್ಟಿಯೂ ಜೊತೆಗೆ ಅರವಿಂದರ ಭಾರತೀಯ ಮೀಮಾಂಸಾ ಪರಿಕಲ್ಪನೆಯೂ ಇಲ್ಲಿನ ಚಿಂತನೆಗೆ ಕಾಣವಾಗಿದೆ. ಮೊಕಾಶಿ ಅವರು ಹೇಳುವಂತೆ ಸಂಸ್ಕೃತದ ವಾಲ್ಮೀಕಿ ಅವರ ಶೋಕವು ಶ್ಲೋಕವಾದ ಪರಿಯ ಕಾವ್ಯಾಭಿವ್ಯಕ್ತಿಯಲ್ಲಿ ಸಿಲುಕುವ ಅನುಭವವೇ ಇಲ್ಲಿ ಕಾವ್ಯಕ್ಕೆ ಮೂಲನೆಲೆ. ಇಂತಹ ಗಟ್ಟಿತನ ಬೇಂದ್ರೆ ಅವರ ಕಾವ್ಯದ ಅಭಿವ್ಯಕ್ತಿಯೂ ಕೂಡ ಆಗಿದೆ ಎನ್ನಬಹುದಾದ ಗ್ರಹಿಕೆ ಈ ಕೃತಿಯದು.

ಬೇಂದ್ರೆ ಅವರು ಅಭಿಮಾನದ ಕವಿಯಾಗಿ ಕನ್ನಡಿಗರು ನೀಡಿದ ಜವಾಬ್ದಾರಿಯನ್ನು ನಿಭಾಯಿಸುವ ಕಾಲ. ನವ್ಯಕಾವ್ಯ ಚಿಂತನೆಯು ಓದುಗ ವಲಯವನ್ನು ಪರಿವರ್ತನಾ ಹಾದಿಗೆ ಸೆಳೆಯುವಾಗ ವಾಸ್ತವವನ್ನು ಪರಿಚಯಿಸುವ ಜವಬ್ದಾರಿಯ ವೇಳೆಗೆ ಶಂಕರ ಮೊಕಾಶಿ ಪುಣೇಕರ ಅವರು ಬೇಂದ್ರೆ ಕಾವ್ಯ ಸೃಷ್ಟಿಯ ಕುರಿತಂತೆ ತೌಲನಿಕ ಅಧ್ಯಯನ ಕಾರ್ಯ ನಡೆಸಿದ್ದಾರೆ. ಬೇಂದ್ರೆ ಕಾವ್ಯ ಮೀಮಾಂಸೆ ಎಂಬ ಕೃತಿಯು ನವ್ಯ ಚಿಂತನೆಗೆ ನೀಡಿದ ಈ ಮಣ್ಣಿನ ಸತ್ವಗುಣ ಸಲ್ಲುವ ನೈಜ ಉತ್ತರ ಎಂದೇ ಪರಿಭಾವಿಸಬಹುದು. ಮುನ್ನುಡಿ ಬರೆಯುತ್ತಾ ಪುಣೇಕರರು...

> ತೌಲನಿಕ ಅಧ್ಯಯನವೆಂದರೆ ಎರಡು ಸಿದ್ಧಕೃತಿಗಳ ಸಾಮ್ಯ-ವೈಷಮ್ಯಗಳನ್ನು ಯಾಂತ್ರಿಕವಾಗಿ ತೋರ್ಪಡಿಸುವುದೆಂದೇ ತಪ್ಪು ತಿಳುವಳಿಕೆಯಲ್ಲಿ ನಾವು ಇದ್ದೇವೆ. ವಿಸ್ತಾರ ಹಿನ್ನಲೆಯಲ್ಲಿಯೇ ಆಯಾ ಕವನ ತನ್ನ ವೈಶಿಷ್ಟ್ಯವನ್ನು ತೋರ್ಪಡಿಸುವುದು. ಕವಿಯ ಉದ್ದೇಶವನ್ನೇ ತಿಳಿದುಕೊಳ್ಳದೆ ಕಾವ್ಯ ಓದುವುದು ನವ್ಯ ವಿಮರ್ಶೆಯ ತಾತ್ತ್ವಿಕ ಚಟ. ಕೃತಿಯನ್ನಷ್ಟೇ ಓದಿದರೆ ಸಾಲದು, ಕೃತಿಯೊಂದೇ ಸಾಮಗ್ರಿಯಲ್ಲ; ನವ್ಯ ವಿಮರ್ಶೆಯ ತತ್ತ್ವಾಗ್ರೇಸರರು ಕವಿಯ ಉದ್ದೇಶದ ಬಗ್ಗೆ ಬರೆಯುವುದು ಅಪ್ರಸ್ತುತವೆಂದು ಬಗೆಯುತ್ತಾರೆ. ಇಂತಹ ವಿಧಾನಗಳಿಗೆ ವಿದಾಯ ಹೇಳುವುದೇ ತೌಲನಿಕ ಅಧ್ಯಯನದ ಉದ್ದೇಶ.[೬]

ಈ ಮುನ್ನುಡಿಯ ಸಾಲುಗಳು ಪ್ರಸ್ತುತ ವಿಮರ್ಶಾ ಕ್ಷೇತ್ರದಲ್ಲಿ ಅಧ್ಯಯನ ಮಾಡುವ ಪ್ರತಿಯೊಬ್ಬರಿಗೂ ಇದೊಂದು ಚಾಟಿಯ ಪೀಠಿಕೆ ಎನ್ನಬಹುದು. ಕೇವಲ ಶಬ್ಧವನ್ನು ಶಬ್ಧಶಃ ಗ್ರಹಿಸುವ ಮನೋಭಿಲಾಶೆಗೆ ಅರ್ಥಗ್ರಹಣದ ಕೀಲಿಕೈಗಳನ್ನು ತೌಲನಿಕ ಅಧ್ಯಯನದ ಚಿಂತನೆಯಾಗಿ ನೀಡಿದ್ದಾರೆ. ಕವಿ ಎಂದರೇನು?, ಕಾವ್ಯ ರಚನೆಯ ಸ್ವರೂಪ, ತಾತ್ವಿಕತೆ, ಹಾಗೂ ಪ್ರಯೋಜನಗಳನ್ನು ಕುರಿತು ಬೇಂದ್ರೆ ಅವರು ತಮ್ಮ ಸಾಹಿತ್ಯದ ವಿರಾಟ್ ಸ್ವರೂಪದಲ್ಲಿ ಕೆಲವು ಪ್ರವೇಶಿಕೆಗಳನ್ನು ನೀಡುತ್ತಾರೆ. ಇವು ಬೇಂದ್ರೆ ಅವರ ಕಾವ್ಯ ಪ್ರವೇಶಕ್ಕೂ, ಕನ್ನಡ ಸಾಹಿತ್ಯದ ಪ್ರವೇಶಕ್ಕೂ ಮಾರ್ಗದ ರೂಪದಲ್ಲಿ ಕಾರ್ಯ ನಿರ್ವಹಿಸುತ್ತವೆ. ಹಲವು ವಿಮರ್ಶಕರು ಈ ಮಾರ್ಗದಿಂದಲೇ ಅಧ್ಯಯನ ನಡೆಸಿ ಹೊಸ ಸಾಹಿತ್ಯ ಪ್ರಕಾರಗಳನ್ನು, ವಿಮರ್ಶೆಯ ತಾತ್ವಿಕತೆಯನ್ನು ರೂಪಿಸುತ್ತಾ ಬಂದಿದ್ದಾರೆ.

ಕವಿಯು ಶಬ್ದ ಸಂಕೇತಗಳ ಮೂಲಕ ಭಾವವನ್ನು ನಿರ್ಮಿಸುವ ಬಗೆ ವಿಶೇಷವಾದದು. ಐ. ಎ. ರಿಚರ್ಡ್‌ನ ವಿಮರ್ಶಾ ಚಿಂತನೆಯೂ ಇಂತಹ ಭಾವ ಅನ್ವೇಷಣೆಯನ್ನು ಕಾವ್ಯತತ್ವದ ನೆಲೆಯಲ್ಲಿ ಗ್ರಹಿಸುವುದನ್ನು ಕಾಣಲಾಗಿದೆ. ಯೇಟ್ಸ್ ಕವಿ ಕೂಡ ಕಾವ್ಯತತ್ತ್ವದಲ್ಲಿ ಈ ಭಾವದ ಪರಿಯನ್ನು ತಿಳಿಸುವ ಬಗೆಯು ಇಲ್ಲಿದೆ. ಇವೆಲ್ಲಾ ಬೇಂದ್ರೆ ಅವರ ಸೂಕ್ಷ್ಮಾತಿಸೂಕ್ಷ್ಮ ಕಾವ್ಯ ಗ್ರಹಿಕೆಯ ಸತ್ತ್ವವನ್ನು ತಿಳಿಯಲು ನೆರವಾಗುತ್ತವೆ. ಮೊಕಾಶಿ ಅವರು ಈ ಅರ್ಥ ಸಾಂದ್ರತೆಯಿಂದುಂಟಾದ 'ಭಾವ'ದ ನೆಲೆಯನ್ನು ಈ ರೀತಿಯಲ್ಲಿ ಅಭಿವ್ಯಕ್ತಪಡಿಸಿರುವರು.

> ಶಬ್ದಸಂಕೇತದ ಹಿಂದೆ 'ನಾಗರಮಣಿ ಕಣ್ಸನ್ನೆ ಗೈಯುವಂತೆ' ಭಾವವು ನಿಂತುಕೊಂಡು ಕರೆಯುತ್ತಿರುತ್ತದೆ. ಕವಿಯು ಶಬ್ದ ಸಂಕೇತಗಳ ಪುಂಜಗಳನ್ನು ನಿರ್ಮಿಸಿ ಆ ಭಾವವನ್ನು ಮುಟ್ಟುತ್ತಾನೆ. ಸಾಮಾನ್ಯ ಮನುಷ್ಯನು ಕೈಯಲ್ಲಿದ್ದ ಪಡಿಯಚ್ಚು ಸಂಕೇತದಿಂದಲೇ

ತೃಪ್ತನಾಗುತ್ತಾನೆ. ಸಂಪ್ರದಾಯಬದ್ಧ ಸಂಕೇತಗಳ ಬಂಧನದಿಂದ ವಿಚಾರವನ್ನು ಮುಕ್ತಗೊಳಿಸಿ ಅದರ ಮೂಲ ರೂಪವನ್ನು ಗುರುತಿಸುವುದು ಕವಿಯ ಪ್ರಥಮ ಕಾರ್ಯಗಳಲ್ಲೊಂದು.[೭]

ಇಂತಹ ಕಾರ್ಯ ಪಾಶ್ಚಾತ್ಯಕವಿಗಳಲ್ಲಿ ಉಂಟಾದಂತೆ ಬೇಂದ್ರೆ ಅವರ ಕಾವ್ಯಕುತೂಹಲ ನಿಂತಿದೆ ಎಂಬುದನ್ನು ಗ್ರಹಿಸಲಾಗಿದೆ. ಶಬ್ದವನ್ನು ಅರ್ಥ ಬಂಧನದಿಂದ ಕವಿ ಪಾರು ಮಾಡುವ ಕ್ರಿಯೆಯನ್ನು ಜೀವಸೃಷ್ಟಿಗೆ ಹೋಲಿಸಿದ್ದಾರೆ.

ಭಾವದ ವ್ಯಾಖ್ಯಾನದಲ್ಲಿ ನೀಡುವ ಉತ್ತರಗಳು ಸೋಲುವ ಪರಿಯನ್ನು ತಿಳಿಸುತ್ತಾ...

> ಭಾವವು ಕವಿಯ ಒಂದು ವಿಕ್ಷಿಪ್ತ ಚಿತ್ತವೃತ್ತಿಯಲ್ಲ; ಅದು ವ್ಯಕ್ತ್ಯತೀತವೂ ಹೌದು. ಕಾಲಧರ್ಮವು, ಯುಗಧರ್ಮವು, ಆಯಾ ಕಾಲದ ಮನುಷ್ಯರ ಜೀವನ ಸಂಸ್ಕೃತಿಗಳು, ಅವರು ಕೂಡಿಟ್ಟ ಕರ್ಮ, ಎಲ್ಲವೂ ಕೂಡಿ ಒಂದೆಡೆಗೆ ಪ್ರಚಂಡ ಭಾವವಾಗಿ ಇನ್ನೊಂದಡೆಗೆ ಜನಾಂಗದ ಸೂಕ್ಷ್ಮಾವಯವವಾದ ಕವಿಯಲ್ಲಿ ಅವತರಿಸಿ, ತನ್ನ ಅಸ್ತಿತ್ವವನ್ನು ತಾನೇ ಅರಿತುಕೊಳ್ಳುತ್ತಾನೆ.[೮]

ಈ ನೆಲೆಯನ್ನು ಶೆಲ್ಲಿಯ, ಓಮರನ ಕಾವ್ಯವು ಪ್ರತಿನಿಧಿಸುವ ಬಗೆಯು, ಅರವಿಂದರು, ಟಾಗೋರ್ ಅವರ ಕಾವ್ಯದಾದಿಯಂತೆ ಬೇಂದ್ರೆ ಕಾವ್ಯಕ್ರಿಯೆಯು ಭಾವವನ್ನು ಸಹಕರಿಸಿ ಕೂತೂಹಲವುಂಟುಮಾಡುವ ಮೀಮಾಂಸೆಯ ಬಗೆಯನ್ನು ಗಮನಿಸಲಾಗಿದೆ. ಯೇಟ್ಸ್ ಕವಿಯು ತಿಳಿಸುವ 'a happy poet' ಸಾಲಿಗೆ ಸೇರುವ ಬೇಂದ್ರೆ 'ಭೂರಿಕವಿತ್ವ'ವನ್ನು ರಚಿಸಿದ್ದಾರೆ ಎಂಬುದು ವಿಶಿಷ್ಟ ಚಿಂತನೆ. ಅದೊಂದು the poetry of abundance ಎಂದಿದ್ದಾರೆ. ಭೂರಿಕವಿತ್ವದಲ್ಲಿ ಮಂದಹಾಸವಿದೆ. ವೈಪಲ್ಯವೇ ನಿಜವಾದ ಮಾನಸಿಕ ಅಭಿವೃದ್ಧಿಯ ಅಭಿವ್ಯಕ್ತಿಯಾಗಿ ಬೇಂದ್ರೆಯವರನ್ನು ಸಮೃದ್ಧಿಗೊಳಿಸಿದ ಬಗೆಯನ್ನು ತಿಳಿಸಿದ್ದಾರೆ. ಅದು ಮಾಂಸಲವಾದ ಸಮೃದ್ಧಿ Muscular abundance ಎನ್ನುವರು. ನಾದದಿಂದ ಅರ್ಥವನ್ನು ವಿಂಗಡಿಸಬಾರದೆಂಬ ವಿಚಾರದಲ್ಲಿ ಬೇಂದ್ರೆ ಅವರನ್ನು ಅರ್ಧ ಶತಮಾನ ಗಮನಿಸಿದ ಪರಿಯನ್ನು ನಾದಮಾಧುರ್ಯದ ವಿಚಾರದಲ್ಲಿ ಸಂಕ್ಷೇಪಗೊಳಿಸಿದ್ದಾರೆ. ಈ ವರಕವಿಯನ್ನು ಮಾಧುರ್ಯದ ನೆಲೆಯಲ್ಲಿ ಅಭಿಮಾನಗೊಳಿಸಿದ್ದಾರೆ. ಶಾಬ್ದಿಕವಾಗಿ ಕವಿಯು ಕೆಲವು ಸಲ ಶಬ್ದಗಳಲ್ಲಿ ಅಕ್ಷರಗಳನ್ನೇ ಮಾಧುರ್ಯದಂತೆ ತಂದಿರುವ ವಿಚಾರ ಇಲ್ಲಿ ಭಾವ ಹಾಗೂ ಅರ್ಥಕ್ಕೆ ಸೂಕ್ತ ಸಂವೇದನೆಯಾಗಿದೆ. ಸ್ವಿನ್‌ಬರ್ನ್ ಕವಿಯ ಬಗ್ಗೆ ಎಲಿಯಟ್ ಬರೆಯುವಾಗ ಈ ವಿಚಾರವನ್ನು ಸ್ಪಷ್ಟಪಡಿಸಿರುವುದು ಇಲ್ಲಿ ಬೇಂದ್ರೆ ಕಾವ್ಯದ ಭಾವಾರ್ಥ ಹುಡುಕಾಟದಲ್ಲಿ ಅಷ್ಟೇ ಮುಖ್ಯವಾಗಿ ಉದಾಹರಿಸಿದ್ದಾರೆ.

ತಾಳ-ಲಯ-ನಾದ ಈ ಮೂರು ಅಂಶಗಳು 'ಬೀಜಾಕ್ಷರ ಪದ್ಧತಿ'ಯಂತೆ ಒಂದು ಅನುಭವ ಸ್ಥಿತಿ ಇದೆ. ಅದು ಬೀಜ ಸ್ಥಿತಿ ಇದೆ. ಅದು ರಾಮದಾಸರ ಓವೀಬದ್ಧ ಕವನದ ಅರ್ಥವಿಹೀನ ಪದಗಳ ಸಂಯೋಗವನ್ನು ಬೇಂದ್ರೆ ಕೂಡ ಬಳಸಿದ್ದಾರೆ. ಅದನ್ನು ಏಲಾಗೀತೆ ಸ್ಪಷ್ಟಪಡಿಸುವಂತೆ ಯೇಟ್ಸ್ ಕವಿಯ ಖಾಸಗೀ ಪತ್ರಗಳಲ್ಲಿ ಪ್ರಯೋಗವಾಗುವ ಶಬ್ದಗಳು ಇವೆಲ್ಲವನ್ನು ಮೊಕಾಶಿ ಅವರು ತರುತ್ತಾ ಇಂತಹ ಕಾವ್ಯಸಮಾಧಿಯ ನಾದದಲ್ಲೂ ಒಂದು ನಾದದ ಬೀಜಸ್ಥಿತಿ ಇದೆ ಎಂಬುದನ್ನು ಸೂಚಿಸಿದ್ದಾರೆ. ಜನಪದ ಭಾಷೆಯ ಪ್ರೇರಣೆಯಿದ್ದ ಬೇಂದ್ರೆ ಅವರಿಗೆ ಹೊಸ

ಪದಗಳನ್ನು ಸೃಷ್ಟಿಸುವ ಹೊಣೆಗಾರಿಕೆಯೂ ಇತ್ತು. ಜನಸಾಮಾನ್ಯರ ಭಾಷಾ ಹೊಣೆಗಾರಿಕೆಯನ್ನು ಕನ್ನಡದೊಳಗಿನ ಶಕ್ತಿಯಾಗಿಸುವ ಕಾರ್ಯವೂ ಆಗಿತ್ತು. ಈ ವಿಚಾರವನ್ನು ಮೊಕಾಶಿ ಅವರು ಎಲ್ಲಿಯೂ ಸ್ಪಷ್ಟಪಡಿಸಿಲ್ಲ. ಆದರೆ ಇವರ ಅಧ್ಯಯನ ಒಂದು ವರ್ಣ ಉಚ್ಚರಿತವಾಗುತ್ತಾ ಶಬ್ದವಾಗಿ, ನಾದವಾಗಿ, ಅಂತಸ್ಫೋಟದ ಅನುಭವವನ್ನು ನೀಡುತ್ತದೆ ಎಂಬುದು.

ಭಾವದ ಅವ್ಯಕ್ತ ಶಕ್ತಿಯನ್ನು ಹಿಡಿದಿಡುವಲ್ಲಿ ಪ್ರಾಸವೂ ಒಂದು ಮುಖ್ಯ ವಿಚಾರ. ಈ ವಿಚಾರದಲ್ಲಿ ಬೇಂದ್ರೆ ಅವರು ಸಾಧಿಸಿದ ತತ್ವವನ್ನು ಸೂಕ್ಷ್ಮವಾಗಿ ಗ್ರಹಿಸಿದ್ದಾರೆ. ಕಾವ್ಯತತ್ವ ಹಾಗೂ ನಿರ್ಮಿತಿ ಸತ್ವದಲ್ಲಿ ಬೇಂದ್ರೆಯಂತಹ ಕವಿಯು ಪಾಶ್ಚಾತ್ಯ ಕವಿಗಳಿಗಿಂತ ಬಿನ್ನ ಹಾಗೂ ವಿಶೇಷ ಎಂಬುದನ್ನು ಹೀಗೆ ಸೂಚಿಸಿದ್ದಾರೆ.

> ವರ್ಡ್ಸ್‌ವರ್ತ್ ಕವಿಯಂತೆ ಪ್ರಾಸವನ್ನು ಕೇವಲ ಹೆಚ್ಚಿನ ಅಲಂಕಾರ (add embellishment) ಎಂದು ಭಾವಿಸುವುದಾಗಲೀ, ಏಬರ ಕ್ರೋಂಬಿಯಂತೆ ಪ್ರಾಸವನ್ನು ಕೇವಲ ಒಂದು ಬಲಶಾಲಿಯಾದ ಸಾಧನವೆಂದು ಭಾವಿಸುವುದಾಗಲಿ, ಮಿಲ್ಟನ್ ಕವಿಯಂತೆ ಪ್ರಾಸವನ್ನು ಕಾಡುದಿನಗಳ ಅವಶೇಷ (relique of barbarism) ಎಂದಾಗಲೀ, ಲಾಕ್ಷಣಿಕರಂತೆ (pleasant recurrence) ಎಂದಾಗಲೀ ನೋಡುವುದು ಅಪೂರ್ಣ ವಿಚಾರವೆಂಬುದು ಓದುಗರಿಗೆ ಮೇಲಿನ ವಿವೇಚನೆಯಿಂದ ಮನವರಿಕೆಯಾಗದಿರದು.[೯]

ಈ ವಿಚಾರದಲ್ಲಿ ಬೇಂದ್ರೆ ಅವರು ವಹಿಸಿದ ಎಚ್ಚರ ಬಹಳ ಮುಖ್ಯವಾಗಬಹುದು ಎಂಬುದನ್ನು 'ಗಂಗಾವತರಣ'ದ ಕೆಲವು ಕವಿತೆಗಳ ಮೂಲಕ ಅರ್ಥೈಸಿದ್ದಾರೆ.

ಬೇಂದ್ರೆ ಅವರ ಆಧ್ಯಾತ್ಮಿಕ ಸೌಂದರ್ಯದಲ್ಲಿ 'ಭೃಂಗ' ಎಂಬುದೊಂದು ವಿಶಿಷ್ಟವಾದ ಪದ. ಇದು ಶೆಲ್ಲಿಯ 'ಮುಗಿಲಹಕ್ಕಿ', ಕೀಟ್ಸ್‌ನ 'ನಾಯ್ ಟಂಗೇಲ್' ಪಕ್ಷಿ, ಯೇಟ್ಸ್‌ನ 'ಸುವರ್ಣಪಕ್ಷಿ' ಈ ಎಲ್ಲಾ ಕಾವ್ಯಬೀಜವಾದ ಪ್ರವೇಶಿಕೆಯು ಒಂದು ಪ್ರತಿಮೆಯಾಗಿ ಕಾವ್ಯ ರಚನೆಗೆ ಸಂಕೇತ ತಂದಿದೆ. ಈ ಅಂಶಗಳ ಮೂಲಕ ಮೊಕಾಶಿ ಅವರು ಕಾವ್ಯಮೀಮಾಂಸೆಯನ್ನು ವಿಸ್ತಾರಗೊಳಿಸಿರುವ ರೀತಿಯನ್ನು ಸ್ಪಷ್ಟವಾಗಿ ತಿಳಿಯಬಹುದು.

ಬೇಂದ್ರೆ ಅವರ ಭಾವಸಾಮ್ರಾಜ್ಯವನ್ನು ಪ್ರವೇಶಿಸುವ ಮೊಕಾಶಿ ಅವರು ಅದೊಂದು ಅನುಭವಿಸಬೇಕಾದ ಅನುಭವವೆಂದು ಅರ್ಥೈಸುತ್ತಾರೆ. ಮೀಮಾಂಸೆಯ ಜಾಡಿನಲ್ಲಿ ಕವಿ–ವಿಮರ್ಶಕನ ಪರಿಧಿಯ ಜವಬ್ದಾರಿಗಳನ್ನು ಬೇಂದ್ರೆ ಅವರು ಸೂಕ್ಷ್ಮವಾಗಿ ನಿರ್ವಹಿಸಿದ ಬಗೆಯನ್ನು ವಿಸ್ತಾರವಾಗಿ ಚರ್ಚಿಸಿದ್ದಾರೆ. ಮೀಮಾಂಸೆಯೆಂಬುದು ರಸಗ್ರಹಣವೆಂಬಂತೆ ಮೊಕಾಶಿ ಅವರ ವಿಮರ್ಶೆಯ ಹೊಣೆಗಾರಿಕೆಯನ್ನು ಈ ಕೃತಿಯಲ್ಲಿ ಗ್ರಹಿಸಿರುವ ಬಗೆಯನ್ನು ಕಾಣಬಹುದು. ಕವಿಯ ಭಾವಲೋಕವನ್ನು 'ಗರಿ'ಸಂಕಲನದ ಮೂಲಕ ತಾತ್ವಿಕಗೊಳಿಸುವ ರೀತಿ ಹೀಗಿದೆ.

> ಈ 'ಹಕ್ಕಿಗಾಳಿ'ಯಲ್ಲಿ ಹಕ್ಕಿಯೊಂದಾದ ಕವಿಯು ತೇಲುತ್ತಿದ್ದಾನೆ. ಅವನ ಒಟ್ಟಂದದ ಭಾವ ಜೀವನವೇ ಅವನ ಒಟ್ಟಂದದ ಕಾವ್ಯ. ಆದರೆ ಅದರಲ್ಲಿ ಹಲವಾರು ಗರಿಗಳು ಮಾತ್ರ ಉದುರುತ್ತ ಉದುರುತ್ತ ಪಕ್ಷಿಯ ಉಡ್ಡಾಣದ ನಕ್ಷೆಯನ್ನು ಮಾತ್ರ ಆಗಸದಲ್ಲಿ ಬರೆದಿವೆ. ಈ ಗರಿಗಳೇ ಕವನಗಳು.[೧೦]

ಪದಗಳನ್ನು ಸೃಷ್ಟಿಸುವ ಹೊಣೆಗಾರಿಕೆಯೂ ಇತ್ತು. ಜನಸಾಮಾನ್ಯರ ಭಾಷಾ ಹೊಣೆಗಾರಿಕೆಯನ್ನು ಕನ್ನಡದೊಳಗಿನ ಶಕ್ತಿಯಾಗಿಸುವ ಕಾರ್ಯವೂ ಆಗಿತ್ತು. ಈ ವಿಚಾರವನ್ನು ಮೊಕಾಶಿ ಅವರು ಎಲ್ಲಿಯೂ ಸ್ಪಷ್ಟಪಡಿಸಿಲ್ಲ. ಆದರೆ ಇವರ ಅಧ್ಯಯನ ಒಂದು ವರ್ಣ ಉಚ್ಚರಿತವಾಗುತ್ತಾ ಶಬ್ದವಾಗಿ, ನಾದವಾಗಿ, ಅಂತಸ್ಫೋಟದ ಅನುಭವವನ್ನು ನೀಡುತ್ತದೆ ಎಂಬುದು.

ಭಾವದ ಅವ್ಯಕ್ತ ಶಕ್ತಿಯನ್ನು ಹಿಡಿದಿಡುವಲ್ಲಿ ಪ್ರಾಸವೂ ಒಂದು ಮುಖ್ಯ ವಿಚಾರ. ಈ ವಿಚಾರದಲ್ಲಿ ಬೇಂದ್ರೆ ಅವರು ಸಾಧಿಸಿದ ತತ್ವವನ್ನು ಸೂಕ್ಷ್ಮವಾಗಿ ಗ್ರಹಿಸಿದ್ದಾರೆ. ಕಾವ್ಯತತ್ವ ಹಾಗೂ ನಿರ್ಮಿತಿ ಸತ್ವದಲ್ಲಿ ಬೇಂದ್ರೆಯಂತಹ ಕವಿಯು ಪಾಶ್ಚಾತ್ಯ ಕವಿಗಳಿಗಿಂತ ಬಿನ್ನ ಹಾಗೂ ವಿಶೇಷ ಎಂಬುದನ್ನು ಹೀಗೆ ಸೂಚಿಸಿದ್ದಾರೆ.

> ವರ್ಡ್ಸ್‌ವರ್ತ್ ಕವಿಯಂತೆ ಪ್ರಾಸವನ್ನು ಕೇವಲ ಹೆಚ್ಚಿನ ಅಲಂಕಾರ (add embellishment) ಎಂದು ಭಾವಿಸುವುದಾಗಲೀ, ಏಬರ ಕ್ರೋಂಬಿಯಂತೆ ಪ್ರಾಸವನ್ನು ಕೇವಲ ಒಂದು ಬಲಶಾಲಿಯಾದ ಸಾಧನವೆಂದು ಭಾವಿಸುವುದಾಗಲಿ, ಮಿಲ್ಟನ್ ಕವಿಯಂತೆ ಪ್ರಾಸವನ್ನು ಕಾಡುದಿನಗಳ ಅವಶೇಷ (relique of barbarism) ಎಂದಾಗಲೀ, ಲಾಕ್ಷಣಿಕರಂತೆ (pleasant recurrence) ಎಂದಾಗಲೀ ನೋಡುವುದು ಅಪೂರ್ಣ ವಿಚಾರವೆಂಬುದು ಓದುಗರಿಗೆ ಮೇಲಿನ ವಿವೇಚನೆಯಿಂದ ಮನವರಿಕೆಯಾಗದಿರದು.೯

ಈ ವಿಚಾರದಲ್ಲಿ ಬೇಂದ್ರೆ ಅವರು ವಹಿಸಿದ ಎಚ್ಚರ ಬಹಳ ಮುಖ್ಯವಾಗಬಹುದು ಎಂಬುದನ್ನು 'ಗಂಗಾವತರಣ'ದ ಕೆಲವು ಕವಿತೆಗಳ ಮೂಲಕ ಅರ್ಥೈಸಿದ್ದಾರೆ.

ಬೇಂದ್ರೆ ಅವರ ಆಧ್ಯಾತ್ಮಿಕ ಸೌಂದರ್ಯದಲ್ಲಿ 'ಭೃಂಗ' ಎಂಬುದೊಂದು ವಿಶಿಷ್ಟವಾದ ಪದ. ಇದು ಶೆಲ್ಲಿಯ 'ಮುಗಿಲಹಕ್ಕಿ', ಕೀಟ್ಸ್‌ನ 'ನಾಯ್ ಟಿಂಗೇಲ್' ಪಕ್ಷಿ, ಯೇಟ್ಸ್‌ನ 'ಸುವರ್ಣಪಕ್ಷಿ' ಈ ಎಲ್ಲಾ ಕಾವ್ಯಬೀಜವಾದ ಪ್ರವೇಶಿಕೆಯು ಒಂದು ಪ್ರತಿಮೆಯಾಗಿ ಕಾವ್ಯ ರಚನೆಗೆ ಸಂಕೇತ ತಂದಿದೆ. ಈ ಅಂಶಗಳ ಮೂಲಕ ಮೊಕಾಶಿ ಅವರು ಕಾವ್ಯಮೀಮಾಂಸೆಯನ್ನು ವಿಸ್ತಾರಗೊಳಿಸಿರುವ ರೀತಿಯನ್ನು ಸ್ಪಷ್ಟವಾಗಿ ತಿಳಿಯಬಹುದು.

ಬೇಂದ್ರೆ ಅವರ ಭಾವಸಾಮ್ರಾಜ್ಯವನ್ನು ಪ್ರವೇಶಿಸುವ ಮೊಕಾಶಿ ಅವರು ಅದೊಂದು ಅನುಭವಿಸಬೇಕಾದ ಅನುಭವವೆಂದು ಅರ್ಥೈಸುತ್ತಾರೆ. ಮೀಮಾಂಸೆಯ ಜಾಡಿನಲ್ಲಿ ಕವಿ–ವಿಮರ್ಶಕನ ಪರಿಧಿಯ ಜವಬ್ದಾರಿಗಳನ್ನು ಬೇಂದ್ರೆ ಅವರು ಸೂಕ್ಷ್ಮವಾಗಿ ನಿರ್ವಹಿಸಿದ ಬಗೆಯನ್ನು ವಿಸ್ತಾರವಾಗಿ ಚರ್ಚಿಸಿದ್ದಾರೆ. ಮೀಮಾಂಸೆಯೆಂಬುದು ರಸಗ್ರಹಣವೆಂಬಂತೆ ಮೊಕಾಶಿ ಅವರ ವಿಮರ್ಶೆಯ ಹೊಣೆಗಾರಿಕೆಯನ್ನು ಈ ಕೃತಿಯಲ್ಲಿ ಗ್ರಹಿಸಿರುವ ಬಗೆಯನ್ನು ಕಾಣಬಹುದು. ಕವಿಯ ಭಾವಲೋಕವನ್ನು 'ಗರಿ'ಸಂಕಲನದ ಮೂಲಕ ತಾತ್ವಿಕಗೊಳಿಸುವ ರೀತಿ ಹೀಗಿದೆ.

> ಈ 'ಹಕ್ಕಿಗಾಳಿ'ಯಲ್ಲಿ ಹಕ್ಕಿಯೊಂದಾದ ಕವಿಯು ತೇಲುತ್ತಿದ್ದಾನೆ. ಅವನ ಒಟ್ಟಂದದ ಭಾವ ಜೀವನವೇ ಅವನ ಒಟ್ಟಂದದ ಕಾವ್ಯ. ಆದರೆ ಅದರಲ್ಲಿ ಹಲವಾರು ಗರಿಗಳು ಮಾತ್ರ ಉದುರುತ್ತ ಉದುರುತ್ತ ಪಕ್ಷಿಯ ಉಡ್ಡಾಣದ ನಕ್ಷೆಯನ್ನು ಮಾತ್ರ ಆಗಸದಲ್ಲಿ ಬರೆದಿವೆ. ಈ ಗರಿಗಳೇ ಕವನಗಳು.೧೦

ಬೇಂದ್ರೆ ಅವರು ಗಳಿಸಿದ ಸ್ವಾಭಾವಿಕ ಚಿಂತನೆಯು ಭಾವ-ಅರ್ಥದಲ್ಲಿ ವಿಶಾಲವಾದುದು. ಅಂತಹ ಕವಿತೆಗಳನ್ನು ಭಾವಗೀತೆಯ ಮಹತ್ವದ ರಚನಾ ಜಗತ್ತಿನಲ್ಲಿ ನಿರ್ಮಿಸಿದ್ದಾರೆ ಎಂಬುದನ್ನು ವಿಮರ್ಶಕರು ಮೊದಲಿಗೆ ಗುರ್ತಿಸುತ್ತಾ ಕವಿಯ ವಸ್ತು ವಿಷಯ ಕುರಿತು ಆದಿಕವಿಯಾಗಿ ಬೇಂದ್ರೆ ಅವರನ್ನು ಕಾಣಬಹುದು ಎಂದಿದ್ದಾರೆ. ಜೊತೆಗೆ ಕಾವ್ಯದಲ್ಲಿ ಆಸಕ್ತಿ ಇದ್ದವರು ಅದನ್ನು ಹುಡುಕಿ ತೆಗೆಯಬೇಕು ಎಂಬ ಸಂಶೋಧನಾ ನಿರ್ದೇಶನ ನೀಡಿದ್ದಾರೆ. ಬೇಂದ್ರೆ ಅವರು ಬಳಸಿದ ಪ್ರತಿಮೆ, ಉಪಮೆ ಕುರಿತಾದ ಒಂದು ಸ್ವತಂತ್ರ ಅಭ್ಯಾಸದ ಸೂಚಿಯನ್ನು ನೀಡುತ್ತಾ ಮುಂದಿನ ವಿಮರ್ಶೆಗೆ ದಾರಿ ತೋರುವ ಈ ವಿಮರ್ಶಕರು ೧೯೬೨ರ ವೇಳೆಗೆ ಶಂಕರ ಮೊಕಾಶಿ ಪುಣೇಕರ ಅವರ ಈ ಅಧ್ಯಯನ ಬೇಂದ್ರೆ ಅವರ ಕಾವ್ಯದ ಜೀವಸತ್ವವನ್ನು ಮುಟ್ಟಿದ ರೀತಿಯು ಅಧ್ಯಯನ ಕ್ಷೇತ್ರದ ವಿಭಿನ್ನ ಸಂಶೋಧನೆಯಿದು.

ಶಂಕರ ಮೊಕಾಶಿ ಪುಣೇಕರ ಅವರ 'ಬೇಂದ್ರೆ ಕಾವ್ಯ ಮೀಮಾಂಸೆ' ಅಧ್ಯಯನ ಕುರಿತು ೧೯೮೯ರ ವೇಳೆಗೆ ಸುಮತೀಂದ್ರ ನಾಡಿಗರು ತಮ್ಮ ಸಂಶೋಧನೆಯಲ್ಲಿ ಎಂಟತ್ತು ಸಾಲಿನಲ್ಲಿ ತಮ್ಮ ಅಕ್ಷೇಪ ಚಿಂತನೆಯನ್ನು ಮಂಡಿಸುತ್ತಾರೆ.

> ಪಾಶ್ಚಾತ್ಯ ವಿಮರ್ಶೆಯ ಪಾರಿಭಾಷಿಕಗಳನ್ನೂ ಪಾಶ್ಚಾತ್ಯ ಕವಿಗಳ ಹೆಸರುಗಳನ್ನೂ ಪ್ರತಿ ಪುಟದಲ್ಲೂ ಮೆರೆಸುವುದರ ನಡುನಡುವೆ, ಬೇಂದ್ರೆ ಅವರ ಸಾಲುಗಳನ್ನು ಉದಾಹರಿಸುವ ಮೊಕಾಶಿ ಆವರ ವಿಮರ್ಶೆಯಲ್ಲಿ ಅವರ ಗ್ರಹಿಕೆಗಳಿಗಿಂತ, ಅವರ ವಿಲಕ್ಷಣತೆ ಎದ್ದು ಕಾಣುತ್ತದೆ.[೧೧]

ಈ ಅಧ್ಯಯನದಲ್ಲಿ ಸುಮತೀಂದ್ರ ನಾಡಿಗರ ಗ್ರಹಿಕೆಯು ಶಂಕರ ಮೊಕಾಶಿ ಪುಣೇಕರ ಅವರ ಅಧ್ಯಯನದ ವ್ಯಾಪ್ತಿ ಹಾಗೂ ಬೇಂದ್ರೆ ಅವರ ಸಾಹಿತ್ಯ ಅಧ್ಯಯನಕ್ಕೆ ತಾವು ರೂಪಿಸಿಕೊಳ್ಳುವ ಮಾದರಿಯನ್ನು ಗ್ರಹಿಸಿಲ್ಲ. ಪುಣೇಕರರು ಮುನ್ನುಡಿಯಲ್ಲಿಯೇ ಸ್ಪಷ್ಟಗೊಳಿಸುತ್ತಾ ಇದು ನವ್ಯ ವಿಮರ್ಶೆಯಲ್ಲ ಎಂದು ತಿಳಿಸುತ್ತಾ ತೌಲನಿಕ ಅಧ್ಯಯನವೆಂಬ ಹೊಸ ಮಾದರಿಯನ್ನು ನವ್ಯ ಮಾದರಿಯ ಬರಹದ ಕಾಲಘಟ್ಟದಲ್ಲಿ ಸ್ಪಷ್ಟಪಡಿಸಿದ್ದಾರೆ.

ಕುಲಕರ್ಣಿ ಆರ್. ಸಿ. ಅವರ 'ಬೇಂದ್ರೆಯವರ ಕಾವ್ಯಮೀಮಾಂಸೆ' ಎಂಬ ಲೇಖನವು ೧೯೭೩ರ ಕಾಲಘಟ್ಟದಲ್ಲಿ ಮಂಡಿಸಿದ ಒಂದು ಉಪನ್ಯಾಸವಿದು. ಇಲ್ಲಿ ಬೇಂದ್ರೆ ಅವರು ಮೀಮಾಂಸೆ ಹಾಗೂ ಅದರ ಚೌಕಟ್ಟಿನಾಚೆ ಬೆಳೆಸುವ ಕಾವ್ಯ ಜಗತ್ತನ್ನು ಕುರಿತು ತಿಳಿಯಬಹುದು. ಕಾವ್ಯ ಸ್ವರೂಪವನ್ನು ಕುರಿತು ಬೇಂದ್ರೆ ಅವರು ಕೆಲವು ಲೇಖನಗಳನ್ನು, ಕವಿತೆಗಳನ್ನು ರಚಿಸಿದ್ದಾರೆ. ಇದೇ ಜಿಜ್ಞಾಸೆಯಲ್ಲಿ ಹಲವು ವಿಮರ್ಶೆಗಳು ಬಂದಿವೆ. ಇದೇ ಅಧ್ಯಾಯದಲ್ಲಿ ಕಾವ್ಯಸೃಷ್ಟಿ ಕುರಿತು ಪ್ರತ್ಯೇಕವಾಗಿ ಚರ್ಚಿಸಬಹುದಾದ ವಿಶಾಲ ಸಂಪನ್ಮೂಲವಿದೆ. ಇಲ್ಲಿ ಇಂತಹ ಕಾವ್ಯ ಸ್ವರೂಪದ ಜಗತ್ತನ್ನು ಸೃಷ್ಟಿಸಿಕೊಂಡ ಬೇಂದ್ರೆ ಅವರು ಆ ಚೌಕಟ್ಟಿನ ಬುನಾದಿಗೆ ಒಳಪಡದೆ ತಮ್ಮ ನಿಲುವನ್ನು ತಾವೇ ಬದಲಿಸುವ ಹಲವು ಆಯಾಮದಲ್ಲಿ ಕವಿ ವಿಶೇಷವೂ, ಅಸಂಬದ್ಧ ಅಭಿಪ್ರಾಯಗಳಿಗೆ ತಾವೇ ಕಾರಣೀಭೂತರೂ ಆಗಿದ್ದಾರೆ ಎಂಬುದು ಈ ಲೇಖಕರ ಅಭಿಪ್ರಾಯವಾಗಿದೆ.

ಕಾವ್ಯದ ರಚನೆಗೆ ಬೇಕಾದ ತನ್ಮಯಶೀಲತೆಯಿಂದಲೇ ಬೇಂದ್ರೆ ಅವರು ಕಾವ್ಯಮೀಮಾಂಸೆಯ ವಿಷಯಗಳನ್ನೂ ಚರ್ಚಿಸಹೊರಡುವುದರಿಂದ ಅರ್ಥದ ಅಸ್ತವ್ಯಸ್ತತೆಯುಂಟಾಗುತ್ತದೆ. ಕಾವ್ಯವನ್ನು ದರ್ಶನವೆಂದೂ, ಪ್ರದರ್ಶನವೆಂದೂ ಒಟ್ಟಿಗೆ ಕರೆದು, ಸುಷುಪ್ತಿ ಎಚ್ಚರ-ತುರೀಯ ಸ್ಥಿತಿಯಲ್ಲೂ ಜಾಗರಾಭ್ಯಾಸ ಮಾಡಿಸುವ ಗುರುವಿನ ಸ್ಥಾನದ ಸಾಕ್ಷೀಪ್ರಜ್ಞೆಯೊಂದು ಬೇಕೆನ್ನುತ್ತಾರೆ. ಆ ಸ್ಥಿತಿಯಲ್ಲಿ ಅವನ ಭಾವದ ತಂತಿ ಮಿಡಿದಾಗ ಶಬ್ದ-ಅರ್ಥ-ಸಂಕೇತ ಈ ದಿಸೆಯಲ್ಲಿ ಆಕೃತಿ ತಾಳುತ್ತದೆಯಂತೆ. ಆದರೆ ಇದು ಕಾವ್ಯ ಕ್ರಿಯೆಯ ಹಿಂದಿನ ಸಾಮಾನ್ಯತತ್ತ್ವವನ್ನಾಗಲೀ, ಬೇಂದ್ರೆ ಅವರ ವೈಯಕ್ತಿಕ ಎನ್ನಬಹುದಾದ ದೃಷ್ಟಿಕೋನವನ್ನಾಗಲೀ ತೋರಿಸುವುದಕ್ಕೆ ಬದಲಾಗಿ ಒಂದು ಕವಿತೆಯ ವಸ್ತುವಿನಂತೆ ಭಾವನೆಯ ಊಹೆಯ ಒಂದು ಆವರಣವನ್ನು ಮಾತ್ರ ನಿರ್ಮಿಸುತ್ತದೆ ಎಂದರೆ ಅವರ ಕಾವ್ಯಮೀಮಾಂಸೆಯ ಸಿದ್ಧಾಂತ ಹೇಗೆ ಬೇರೆಯವರ ಕವಿತೆಗಳಿಗೆ ಅನ್ವಯಿಸಲಿಕ್ಕೆ ಸಾಧ್ಯವಿಲ್ಲವೋ ಹಾಗೇಯೇ ಅವರ ಕವಿತೆಗಳಿಗೂ ಇದು ಅನ್ಯವಾಗಿಯೇ ಉಳಿಯುತ್ತದೆ.[೨]

ಶಂಕರ ಮೊಕಾಶಿ ಪುಣೇಕರ ಅವರು ೧೯೬೨ರ ವೇಳೆಗೆ ಮಂಡಿಸಿದ ವಿಚಾರವನ್ನು ಈಗಾಗಲೇ ವಿಸ್ತಾರವಾಗಿ ಗ್ರಹಿಸಿದ ನಮಗೆ ಈ ಅಭಿಪ್ರಾಯಗಳು ಸಹಜವಾಗಿಯೇ ತೂಕ ಕಳೆದುಕೊಳ್ಳುತ್ತವೆ. ಆದರೆ ವಿಮರ್ಶಕನ ಸ್ವತಂತ್ರ ಅಭಿಪ್ರಾಯವನ್ನು ಗೌರವಿಸಿದರೂ, ಮೊಕಾಶಿ ಅವರು ಮಂಡಿಸಿದ ವಿಚಾರಗಳನ್ನು ಇವರು ಅಧ್ಯಯನ ಮಾಡಿರಲಾರರು ಎನಿಸುತ್ತದೆ. ಬೇಂದ್ರೆ ಅವರು ರಚಿಸಿದ ಕಾವ್ಯತತ್ವವು ಭಾರತೀಯ ಕವಿಗಳಿಗಷ್ಟೇ ಹೋಲಿಕೆಯಾಗದೇ ಪಾಶ್ಚಾತ್ಯರ ಕವಿ ಭಾವತತ್ವಕ್ಕೂ, ವಿಮರ್ಶಾ ಚಿಂತನೆಗಳಿಗೂ ಸರಿದೂಗುವ ತೌಲನಿಕ ಅಧ್ಯಯನವು ಒಂದು ಸ್ಫುಟತ್ವ ಸಾಮ್ಯತೆಯಾಗಿ ಒಡಮೂಡಿರುವುದನ್ನು ಗಮನಿಸಿದ್ದೇವೆ. ಬೇಂದ್ರೆ ಅವರು ತಮ್ಮ ಲೇಖನಗಳಲ್ಲಿ ಇಂತಹ ಅಧ್ಯಯನಗಳಿಗೆ ಬೇಕಾದ ನೂತನ ಕೀಲಿಕೈಗಳನ್ನು ಒದಗಿಸಿದರೂ ವಿರೋಧಭಾಸಗಳಿಗೆ ಸೂಕ್ತ ಕಾರಣಗಳನ್ನು ಒದಗಿಸುವ ರೀತಿಯಲ್ಲಿ ಕಾವ್ಯದ ಸತ್ವಗ್ರಹಿಕೆಯಲ್ಲಿ ವಿಮರ್ಶಕ ಸೋಲುತ್ತಾರೆ. ಬೇಂದ್ರೆ ಅವರಿಗೆ ಮೆಚ್ಚುಗೆಯ ಅಗತ್ಯವಿಲ್ಲ, ಅವರ ಕಾವ್ಯದ ಸ್ವರೂಪವನ್ನು ಒಂದು ರಸಯಾತ್ರೆಯಲ್ಲಿ ಗ್ರಹಿಸಲೇಬೇಕಾದ ಅನಿವಾರ್ಯತೆಯ ಶಂಕರ ಮೊಕಾಶಿ ಪುಣೇಕರರು ಗುರ್ತಿಸುವುದನ್ನು ಗಮನಿಸಿಲಾಗಿದೆ.

೧. ೩. ಬೇಂದ್ರೆ ಅವರ ಸಾಹಿತ್ಯದ ಭಾಷೆ

ಬೇಂದ್ರೆ ಅವರ ಸಾಹಿತ್ಯವೆಂಬುದು ಒಂದು ಶತಮಾನದ ಹಾದಿಯಲ್ಲಿ ಸಾಗಿ ಬಂದ ಕಾಲಮಾನದ ಚಿಂತನೆಯಾಗಿ ಗುರ್ತಿಸಬಹುದು. ಬೇಂದ್ರೆ ಅವರ ಸಾಹಿತ್ಯ ಅಧ್ಯಯನಕಾರರು ಜನಪದಭಾಷೆಯನ್ನು ಮೈಗೂಡಿಸಿಕೊಂಡ ಧಾರವಾಡದ ಭಾಷೆಯನ್ನು ಕವಿಯ ಸಾಹಿತ್ಯ ಭಾಷೆ ಎಂದಿದ್ದಾರೆ. ಇಂದಿಗೂ ಇದೇ ಅಂಶವನ್ನು ಸಾಕಷ್ಟು ರೀತಿಯಲ್ಲಿ ಪ್ರತಿಪಾದಿಸುತ್ತಾರೆ. ಇದನ್ನೇ ಮುಂದುವರೆಸಿ ಧಾರವಾಡದ ಭಾಷೆ ಎಂದರೆ ಅದು ಕನ್ನಡ ನಾಡಿನ ಭಾಷೆ, ನಮ್ಮ ನಿಮ್ಮೆಲ್ಲರ ಭಾಷೆ ಎಂಬ ಸಹಮತಕ್ಕೂ ಬರುತ್ತಾರೆ. ಆದರೆ ಸಾಹಿತ್ಯ ಭಾಷೆಯೆಂಬುದು ಈ ರೀತಿಯ ವಿಂಗಡಣೆಗೆ ಒಳಗಾದ ಭೌತಿಕ ಅಂಶವಲ್ಲ. ಪ್ರಾದೇಶಿಕತೆಯೆಂಬುದು ಸಮಾಜದಲ್ಲಿ ಬದುಕುವ

ಪ್ರತಿಯೊಬ್ಬರ ಮೇಲೂ ಪ್ರಭಾವಿಸುತ್ತದೆ. ಆದರೆ ಬೇಂದ್ರೆ ಅವರಿಗೆ ಪಾಶ್ಚಾತ್ಯ ಸಾಹಿತ್ಯ ಭಾಷೆಗಳ ಪ್ರಭಾವ, ಭಾರತೀಯ ಭಾಷಾ ರೂಪುರೇಷೆಯ ಚಿಂತನೆಗಳು ಅಧ್ಯಯನ ರೂಪದಲ್ಲಿ ದೊರೆತಿದ್ದವು. ಇವೆಲ್ಲಾ ಪ್ರಭಾವಗಳು ಬೇಂದ್ರೆ ಆವರ ಸಾಹಿತ್ಯದಲ್ಲಿ ಹಾಸುಹೊಕ್ಕಾಗಿವೆ. ಕವಿತೆಗಳಲ್ಲಿ ಕನ್ನಡವೆಂಬುದು ಮೈದಾಳುವಾಗ ಪ್ರಾದೇಶಿಕತೆ, ಸಂಸ್ಕೃತ ಹಾಗೂ ಇತರೆ ಭಾಷೆಗಳ ಪ್ರಭಾವದಿಂದ ನಿರ್ಮಿತವಾಗಿದೆ. ಅನುಭವಗಳು ಭೌತಿಕ ಜಗತ್ತಿನ ವಸ್ತುಗಳಿಂದ ಸ್ಥಳೀಯತೆಯನ್ನು ಪ್ರತಿನಿಧಿಸುವುದು ಸಹಜ. ಆದರೆ ಇಲ್ಲಿ ಪ್ರಭಾವಿತ ಭಾಷಾ ಪರಿಸರ ಹಾಗೂ ಅನುಭವಗಳು ಬೇಂದ್ರೆ ಅವರ ಸಾಹಿತ್ಯಭಾಷೆಗೆ ಪ್ರವೇಶ ಪಡೆದಿಲ್ಲ. ಕವಿಯು ತನ್ನದೇ ಕನ್ನಡತನವನ್ನು ನಿರ್ಮಿಸಿಕೊಂಡಿದ್ದಾರೆ. ಅದು ಪ್ರಭಾವಿತ ಭಾಷೆಯ ಯಾವುದೇ ಹಂಗಿಗೆ ತನ್ನನ್ನು ಒಡ್ಡಿಕೊಂಡಿಲ್ಲವೆಂದು ಗಮನಿಸಬಹುದು.

'ದ. ರಾ ಬೇಂದ್ರೆ' ಎಂಬ ಅ. ನ ಕೃಷ್ಣರಾಯರ ಲೇಖನವು ಬೇಂದ್ರೆ ಕುರಿತು ಪರಿಚಯಾತ್ಮಕ ನುಡಿಯಿಂದ ಕಾವ್ಯದ ಸುವರ್ಣಯುಗವನ್ನು ನಿರ್ಮಿಸಿದ ಕವಿಯಾಗಿ ಗ್ರಹಿಸಿದ ವಿಚಾರಗಳು ಈ ಲೇಖನದಲ್ಲಿವೆ. ಬೇಂದ್ರೆ ಅವರ ಕಾವ್ಯ ಗಟ್ಟಿಗೊಳ್ಳಲು ಹಾಗೂ ಜನಪದೀಯ ನೆಲೆಯಿಂದ ಆಧ್ಯಾತ್ಮದ ಶಕ್ತಿಯ ಕಡೆಗೆ ಹೊರಳಿದ ವಿಚಾರಗಳೂ ಇಲ್ಲಿವೆ. ವಸಾಹತುಶಾಹಿಯ ಧೋರಣೆಗೆ ಸ್ಪಂದಿಸಿದ ಕವಿತೆಗಳ ಚಿಂತನೆಯು ಇಲ್ಲಿದೆ. ಈ ಲೇಖನದಲ್ಲಿ ಗ್ರಹಿಸುವ ಹೊಸ ವಿಚಾರವೆಂದರೆ ಪ್ರಸ್ತುತ ಕೂಡ ಸಮಸ್ಯೆಯಂತೆ ಕಾಡುತ್ತಿರುವ ಜಾತೀಯತೆಯ ಚಿಂತನೆ. ಒಂದೊಂದು ಜಾತಿಯವರು ಒಬ್ಬೊಬ್ಬ ಕವಿಯನ್ನು ಆದರ್ಶವಾಗಿ ರಾಜಕೀಯ ಮಾಡುವ ಕ್ರಿಯೆ ಸಾಹಿತ್ಯಕ್ಕೆ ಸಲ್ಲದು, ನಾಡಿನ ಉದ್ಧಾರವಾಗಲು ಈ ವಿಚಾರ ಪಂಥಗಳಿಂದ ಹೊರ ಬಂದು ಸಾಹಿತ್ಯವನ್ನು ಪರಾಮರ್ಶಿಸಬೇಕು ಎಂಬ ಎಚ್ಚರಿಕೆ ನೀಡಿರುವುದನ್ನು ವಾಸ್ತವಿಕ ಪಲ್ಲಟಗಳೊಂದಿಗೆ ಅಧ್ಯಯನ ಮಾಡಬಹುದು. ಇಲ್ಲಿ ವಸಾಹತು ಧೋರಣೆಗಳಾದ ಶಿಕ್ಷಣ, ಸಂಸ್ಕೃತಿ ಮೊದಲಾದ ಪಲ್ಲಟಗಳಿಗೆ ಬೇಂದ್ರೆ ಅವರು ಪ್ರಾದೇಶಿಕ ಭಾಷೆಯ ಸಂಸ್ಕೃತಿಯನ್ನು ಬಳಸಿದ ಕ್ರಮವು ವಿಶೇಷವಾದುದು. 'ನರಬಲಿ', 'ಕುರುಡು ಕಾಂಚಾಣ', 'ನಾದಲೀಲೆ' ಮೊದಲಾದ ಪದ ಸೃಷ್ಟಿಯಲ್ಲಿಯೇ ಕವಿತೆಯ ಒಳ ಸತ್ವವನ್ನು ಗಮನಿಸಬಹುದು.

೧೯೬೭ರ 'ಮಕರಂದ' ಪತ್ರಿಕೆಯಲ್ಲಿ 'ಎಪ್ಪತ್ತರ ಈ ಹೊತ್ತು' ಎಂಬ ಮಾರ್ಚ್ ಸಂಚಿಕೆಯು ಬೇಂದ್ರೆ ಅವರ ಸಾಹಿತ್ಯ ಕುರಿತ ಚಿಂತನೆಯಾಗಿದೆ. ಈ ಕೃತಿಯು ಎರಡು ವಿಭಾಗಗಳನ್ನು ಒಳಗೊಂಡಿದ್ದು 'ಕವನ–ದವನ' ಎಂಬ ಭಾಗದಲ್ಲಿ ಮಾಸ್ತಿ ವೆಂಕಟೇಶ ಅಯ್ಯಂಗಾರ, ಕರ್ಕಿ ಡಿ.ಎಸ್., ಶ್ರೀಧರ ಬಿ. ಎಚ್., ಚೆನ್ನವೀರ ಕಣವಿ., ರಾಘವೇಂದ್ರ ಇಟಗಿ., ಬಂಗಾರ ಕಡಿಯಾಲು., ರಾಮಾಚಾರ್ಯ., ಹರಿಪ್ರಸಾದ ಪಾಂಡೆ., ಸೋಮಶೇಖರ ಇಮ್ರಾಪುರ., ಕರಿಯಪ್ಪ ಹುಚ್ಚಣ್ಣನವರ., ಅನ್ನದಾನಿ ಜಿ. ಎಸ್ ಈ ಮೊದಲಾದ ಕವಿಗಳು ಬೇಂದ್ರೆ ಅವರನ್ನು ಕುರಿತು ರಚಿಸಿದ ಕವಿತೆಗಳಿವೆ. ಇಲ್ಲಿನ ಪ್ರತಿ ಕವಿತೆಯು ಬೇಂದ್ರೆ ಅವರ ವ್ಯಕ್ತಿತ್ವವನ್ನು ನಿರೂಪಿಸುವ ಕವಿತೆಗಳು.

"ಹಕ್ಕಿ ಹಾರಿದ ತೆರನಹಾಡಿ, ಕವಿತೆಯ ಹೊಸಲ

ನೀದಾಂಟಿ ನಿಂತೆ ಗೆಳೆಯ ನಿನ್ನ ನುಡಿ ಕುಶಲ" ('ಶ್ರೀ ಬೇಂದ್ರೆಯವರನ್ನು ಕುರಿತು'; ಮಾಸ್ತಿ),

"ಮನೆಯಲಿ ಮನೆಯಲಿ ಎಲ್ಲರ ಮನದಲಿ
ಪದಗಳ ತೂರಿದನು
ಕನ್ನಡ ಕವನದ ಹುಚ್ಚನು ನೆಚ್ಚನು
ಎಲ್ಲರೊಳೂರಿದನು
ನಿನದದ ಬಿನದವ ಬೀರಿದನು" (ಗೀತ ಗಾರುಡ; ಕರ್ಕಿ ಡಿ. ಎಸ್)

"ಮಾತಾಯಿಗುವರನಲಿ ರಾಷ್ಟ್ರಮಾತೃಪ್ರೇಮ
ಅಮೃತೋತ್ಸವವಾಗಿ ಚಿಮ್ಮುತ್ತಿತ್ತು ಪ್ರಾಯದಲಿ;
ಮೂವತ್ತು ಮೂರು ಕೋಟಿಗಳನ್ನು ಬಿಳಿಯ ಜನ
ಬಲರಾಮಗೆದುರಾದ ಗೋವಿನಂತಿಟ್ಟಾಗ–
ಕಾರುಣ್ಯ ಭವಭೂತಿಯಾದ ದತ್ತರಾಮ
.....
ನಿಶಿತ ವಿಪರೀತ ಲಕ್ಷಣೆಯ ಕರವಾಳವನು
ಬೀಸಿದನು ಜಾಗತಿಕ ಯುದ್ಧಪ್ರಿಯತೆಯತ್ತ
ಖಂಡಿಸಿದ ಮಾನವನು ತನ್ನ ತಾ ಕೊಲ್ಲುವುದ !"
(ಗಾಥಾ ಸಮರ್ಪಣ; ಶ್ರೀಧರ ಬಿ. ಎಚ್)

"ಮರಳಿ ಅರಳುತ ತಿರುಳು ತೆನೆಗಟ್ಟಿ ನಿಂತಂತೆ
ನಡೆದದ್ದೇ ಸಾಧನಕೇರಿ, ನುಡಿದದ್ದೆ ಕವಿತೆ"
(ಎಪ್ಪತ್ತರ ಬೇಂದ್ರೆ– ಚನ್ನವೀರ ಕಣವಿ)

ಬೇಂದ್ರೆ ಅವರ ವ್ಯಕ್ತಿತ್ವವನ್ನು ಅತ್ಯಂತ ಸಮರ್ಥವಾಗಿ ಕಾಣುವ ಈ ಎಲ್ಲಾ ಕವಿಗಳೂ ಬೇಂದ್ರೆ ಅವರ ಒಡನಾಡಿಗಳಾಗಿದ್ದಾರೆ. ಬೇಂದ್ರೆ ಅವರ ಬದುಕನ್ನು ಅತ್ಯಂತ ವ್ಯವಸ್ಥಿತವಾಗಿ ತಿಳಿದ ಈ ಸಹೃದಯರಲ್ಲಿ ಕವಿತೆಯ ಕಾರ್ಯ ಭಾವನಾತ್ಮಕ ಸಂದೇಶವಾಗಿ ರಚನೆಯಾಗಿದೆ.

'ಗದ್ಯ–ಪುಷ್ಪ' ಎಂಬ ಭಾಗದಲ್ಲಿ ಚಕ್ರಾಂಕಿತ ಅವರ 'ಬೇಂದ್ರೆ ಮಾಸ್ತರು', ಆರ್. ಜಿ. ಕುಲಕರ್ಣಿ 'ಶ್ರೀ ದ. ರಾ. ಬೇಂದ್ರೆ ಅವರ ವ್ಯಕ್ತಿತ್ವ ಮತ್ತು ಸಾಹಿತ್ಯಕೃತಿ', ಕುವಲಯ ಅವರ 'ಶ್ರೀ ಬೇಂದ್ರೆಯವರು ಯೋಜಿಸಿದ ಗೆಳೆಯರ ಗುಂಪು'., 'ವರಕವಿ ಶ್ರೀ ದ.ರಾ. ಬೇಂದ್ರೆ ಕವಿ ಶ್ರೀ ಶ್ರೀಧರ ಖಾನೋಳಕರ್', ಜೋಗಳೇಕರ ಎನ್. ಕೆ. 'ಶ್ರೀ ಬೇಂದ್ರೆ ಜಾತಕ ದರ್ಶನ', ಕೃಷ್ಣಮೂರ್ತಿ ಕೆ. ಅವರ 'ಬೇಂದ್ರೆಯವರ ವೇದ–ದರ್ಶನ', ವಿಶಾಖಾ ಬೇಂದ್ರೆ ಅವರ ಮರಾಠಿ ಲೇಖನದ ಅನುವಾದ 'ಮಾವ ಬೇಂದ್ರೆ'., ಎನ್ಕೆ ಅವರ 'ಶ್ರೀ ಬೇಂದ್ರೆಯವರ ಲೌಕಿಕ ಕಾವ್ಯ', ವಾಮನ ಬೇಂದ್ರೆ 'ಅಂಬಿಕಾತನಯದತ್ತ'ರ ಹೂದೋಟ'., ಜಿ. ವೆಂಕಟಸುಬ್ಬಯ್ಯ ಅವರ

ಭಾಷಣ., ಕೆ. ಎಸ್. ಶರ್ಮಾ(ಕುವಲಯ) ಹಾಗೂ ಕೆ. ಗೋಪಾಲಕೃಷ್ಣರಾಯರು ಬೇಂದ್ರೆ ಅವರನ್ನು ಕುರಿತು ನಡೆಸಿದ ಸಂದರ್ಶನ., ಹಾಗೂ ಬೇಂದ್ರೆ ಅವರ ನಾ ಕಳೆದ ಎಪ್ಪತ್ತು ವರ್ಷ ಎಂಬ ಅನುಭವದ ಬರಹವೂ ಇದೆ. ಈ ಪತ್ರಿಕೆಯನ್ನು ಸಂಶೋಧನಾ ದೃಷ್ಟಿಯಿಂದ ಅಧ್ಯಯನ ಮಾಡಲಾಗಿದೆ.

> ಅಂಬಿಕಾತನಯದತ್ತರದು ಇಂಥ ಶರಭಾವದ ಶರಣಾಗುವ ಗಾರುಡ-ಮಂತ್ರ ಕಾವ್ಯ. ಈ ಮಂತ್ರ ಕಾವ್ಯದ ಗುರಿ ವೀರ ಜೀವನ, ಉತ್ಸಾಹಯುತ ಜೀವನ ದಿವ್ಯ ಜೀವನ ದಿವ್ಯ ಮೈ ತ್ರಿಯಲೀಲಾ ಜೀವನ, ಆದ್ದರಿಂದಲೇ ಕವಿಗಳು 'ರಸವೆ ಜನನ। ವಿರಸ ಮರಣ। ಸಮರಸವೇ ಜೀವನ॥' ಎಂದು ಹಾಡಿ ನಿಲ್ಲದೆ 'ಲಯದ ಬಸಿರ ಬಯಲಲ್ಲಿ ದೇವಭವ ಬೀಜ ಬಿತ್ತಿದಾಕೇ' ಎಂದು ವಿಶ್ವಮಾತೆಯನ್ನು ಪ್ರಾರ್ಥಿಸುವ ಸಾಕ್ಷೀತ್ವದ ನೆಲೆಗೇರಿ ನಿಲ್ಲುತ್ತಾರೆ. ಈ ಸಾಕ್ಷಿತ್ವದ ನೆಲೆಯೇ ಮಂತ್ರಕಾವ್ಯದ ಮೂಲನೆಲೆ. ಶ್ರೀ ಅಂಬಿಕಾತನಯ ದತ್ತರ ಆಧ್ಯಾತ್ಮಿಕ ಮೌನ ಸಾಧನೆಯ ಕೇಂದ್ರ ಪ್ರಕಾಶವಿರುವುದು ಈ ಸಾಕ್ಷಿ ಕ್ಷೇತ್ರದಲ್ಲಿ.[೧೩]

ಬೇಂದ್ರೆ ಅವರ ಕಾವ್ಯದಲ್ಲಿ ತನ್ನ ಭಾಷೆಯನ್ನು ದುಡಿಸಿಕೊಳ್ಳುವ ನೈಪುಣ್ಯತೆಯ ಮೇಲೆ ವ್ಯಕ್ತಿತ್ವದ ಸಂವೇದನೆಗಳೂ ಕೂಡ ಮೂಡಿವೆ. 'ಮಕರಂದ'ದ ಪ್ರತಿ ಲೇಖನಗಳೂ ಈ ತಾತ್ವಿಕತೆಯನ್ನು ನಿರೂಪಿಸುತ್ತವೆ.

೪. ೨. ಬೇಂದ್ರೆ ಅವರ ಕಾವ್ಯದಲ್ಲಿ ಬಂಡಾಯದ ಧ್ವನಿ

ಬೇಂದ್ರೆ ಅವರ ಕಾವ್ಯವು ಶಾಸ್ತ್ರ ಸಾಹಿತ್ಯದ ಅಧ್ಯಯನವನ್ನೂ, ಜಾನಪದೀಯ ನೆಲೆಯನ್ನೂ ಅರಗಿಸಿಕೊಂಡು ಬೆಳೆದ ಸ್ವಯಂ ಪ್ರತಿಭೆ. ಇಲ್ಲಿ ಭಾಷೆ ಎಂಬುದು ಪ್ರಾಂತೀಯ ಸೊಗಡಿನೊಳಗೆ ತಾನು ಸಾಧ್ಯವಾದಷ್ಟು ವಿಶ್ವಮುಖಿಯಾಗುವ ಸಾಧ್ಯತೆಗಳನ್ನು ಹೊಂದಿದೆ ಎಂಬುದನ್ನು ಗಮನಿಸಲಾಗಿದೆ. ಈ ಸಾಹಿತ್ಯ ಭಾಷೆ ಎಂಬುದು ನವೋದಯವೆಂಬ ಸಾಹಿತ್ಯವನ್ನು ಮರುಕಟ್ಟುವ ಚಿಂತನೆಯಲ್ಲಿಯೇ ಮೂಡಿತ್ತು. ಸ್ವಾತಂತ್ರ್ಯವೆಂಬ ಹೋರಾಟವು ವಸಾಹತುಗಳ ಬೇರುಗಳಿಗೆ ನಲುಗಿದ್ದಲ್ಲದೆ ಬೀರಿದ ಪ್ರಭಾವವು ಸಾಹಿತ್ಯ ರಚನೆಗೆ ತಳಹದಿಯಾಯಿತು. ಹೊಸ ಜವಾಬ್ದಾರಿ ಎಂದರೆ ತನ್ನೊಳಗೆ ಉದುಗಿದ ನವೋದಯವೆಂಬ ಪ್ರಾಕೃತಿಕ ಅಭಿವ್ಯಕ್ತಿ. ಇಲ್ಲಿ ಪ್ರಗತಿಶೀಲ, ನವ್ಯ, ದಲಿತ-ಬಂಡಾಯದ ಧ್ವನಿಗಳು ತಮ್ಮ ಸಾಹಿತ್ಯದ ಜೀವಾಳವಾಗಿಯೇ ಒಡಮೂಡಿವೆ.

೧೯೫೮ರ ವೇಳೆಯಲ್ಲಿ ಕೃಷ್ಣರಾಯ ಅ.ನ. ಅವರು 'ದ. ರಾ. ಬೇಂದ್ರೆ' ಎಂಬ ಲೇಖನ ರಚಿಸಿ ಬೇಂದ್ರೆ ಅವರ ಭಾಷೆಯಲ್ಲಿ ಮೂಡಿದ್ದ ಬಂಡಾಯದ ದನಿಯನ್ನು ಗ್ರಹಿಸಬೇಕೆಂಬ ಎಚ್ಚರಿಕೆ ನೀಡುತ್ತಾರೆ. ಮಾರ್ಕ್ಸವಾದದ ಹಿನ್ನಲೆಯಲ್ಲಿಯೇ ಒಡಮೂಡಿದ ಪ್ರಗತಿಶೀಲ ಚಿಂತನೆ ಸ್ವಾತಂತ್ರ್ಯದ ಹಸಿವು ನೀಗಿ ತಣ್ಣಗಾಗಿತ್ತು. ಆಗ ತಾನೇ ಅಲ್ಲಿಯ ತನಕ ಮೂಡಿಬಂದ ಸಾಹಿತ್ಯ ಚಿಂತನೆಯನ್ನು ನವೋದಯವೆಂದು ಕರೆದು ವಿಭಿನ್ನವಾದ ಆಲೋಚನೆಯೆಂಬಂತೆ ನವ್ಯ ಚಿಂತನೆಯೊಂದು ಸೃಷ್ಟಿಯಾಗುತ್ತಿತ್ತು. ಇಂತಹ ಕಾಲದಲ್ಲಿ ಈ ಲೇಖನ ಮಹತ್ವದ ಬರಹವಾಗಿ ಕಂಡುಬರುತ್ತದೆ.

ಬಡಬಗ್ಗರ ಕೂಳಿನ ಕೂಗಾಟ ಕಂಡು ಮಿಡುಕಿತು ಬೇಂದ್ರೆಯವರ ಜೀವ. ಈ ನರಬಲಿಯ ಅಸೀಮ ಕ್ರೌರ್ಯಕ್ಕೆ ವಿರುದ್ಧವಾಗಿ ಕವಿ ಕರವಾಳ ಝುಳಪಿಸಿ ನಿಂತ. ಪರಿಸ್ಥಿತಿಯನ್ನು ಬದಲಿಸಬೇಕೆಂದು ಸಾತ್ವಿಕಾಂಕ್ಷೆ ಅವನ ಉಸಿರಾಯಿತು. ಕ್ರಾಂತಿಯ ಖಡ್ಗವಾಯಿತು ಕವಿವಾಣಿ. ಆದರೆ ಶಾಂತಿ ಭಂಗವಾಗಿರಲಿಲ್ಲ. ವರ್ಷಾಕಾಲದ ಕಾರ್ಮೋಡಗಳ ಹಿಂದಿನ ಬೆಳ್ಳಿಯ ಬೆಳಕನ್ನು ಕವಿ ಮರೆಯಲಿಲ್ಲ. 'ಸಂತಿಯ ಚಿಂತಿರಲಿ, ಕುಣಿಯೋಣು ಬಾ'

> ಎಂದು ಆಶಾವಾದದ ಅಮರ ಸಂದೇಶ ಸಾರಿದ. ಕ್ರಾಂತಿ ಮುಂದೆ ಶಾಂತಿಗೆ ದಾರಿಮಾಡಿ ಕೊಡುತ್ತದೆ; ಇದರಿಂದ ಲೋಕಕಲ್ಯಾಣ ಸಾಧನೆಯಾಗುತ್ತದೆ. ಎಂಬ ನಿರೀಕ್ಷೆಯೇ ಕ್ರಾಂತಿಯ ಬುನಾದಿಯಾಗಬೇಕು. ಇಲ್ಲವಾದರೆ ಕ್ರಾಂತಿ ರಕ್ತಪಾತದಲ್ಲಿ ಮಲಿನಗೊಂಡು ಪ್ರಳಯದಲ್ಲಿ ಮುಕ್ತಾಯವಾಗುತ್ತದೆ. ಬೇಂದ್ರೆಯವರ ಆತ್ಮ ವಿಶ್ವಾತ್ಮವಾಗಿ ನಿಂತುದು ಈ ಕ್ರಾಂತಿ ಕಾಲದಲ್ಲಿ.[೧೪]

ಪುನರುಜ್ಜೀವನ ಕಾಲಘಟ್ಟದಲ್ಲಿ ಭಾರತೀಯ ಸಾಹಿತ್ಯದ ಹಿನ್ನಲೆಯೊಂದಿಗೆ ಪಾಶ್ಚಾತ್ಯೀಕರಣಕ್ಕೊಳಗಾದ ಕನ್ನಡ ಸಾಹಿತ್ಯ ಹೊಸ ಅಲೋಚನೆಗಳ ಕಡೆ ಮನಸ್ಸು ಮಾಡಿತು. ಇಂತಹ ಸಂದರ್ಭದಲ್ಲಿ ಬಹಗಾರರರನ್ನು ಓದುಗರು ಸ್ವಿಕರಿಸಿದ ರೀತಿಯೂ ಅನನ್ಯವಾದುದು. ಈ ವಿಚಾರ ಕುರಿತು ಅನಕೃ ಅವರು ಲೇಖನ ಮುಂದುವರೆಸುತ್ತಾ ಓದುಗರನ್ನು ಕುರಿತು ಇಲ್ಲಿ ತಮ್ಮ ಅಭಿಪ್ರಾಯ ತಿಳಿಸಿದ್ದಾರೆ. ಸಹೃದಯರ ಜವಾಬ್ದಾರಿಗಳಿಗೆ ಇಲ್ಲಿ ಎಚ್ಚರಿಕೆ ಇದೆ. ನಮ್ಮ ನಾಡಿನಲ್ಲಿ ನಮ್ಮ ಕವಿಯೇ ಮೇಲು ಎಂಬ ಹುಚ್ಚಾಟಗಳಲ್ಲಿ ಜನರ ವಿಘಟನೆಗಳು ಜಾತಿ, ಮತ, ಪಂಥಗಳಲ್ಲಿ ಹಂಚಿಹೋಗಿರುವ ಪರಿಯನ್ನು ಇದೊಂದು ಸೋಂಕುರೋಗವೆಂದಿದ್ದಾರೆ. ಸಮಾಲೋಚಿಸಬೇಕಾದ ಸಮಸ್ಯೆ; ಜೀವಂತ ನಗ್ನ ಸಮಸ್ಯೆ! ಎಂಬುದಾಗಿಯೂ ಎಚ್ಚರಿಕೆ ನೀಡಿದ್ದಾರೆ. ಆದರೆ ಇವರು ಬಳಸಿರುವ ಸೋಂಕುರೋಗದ ನೈಜತೆ ಹೇಗಿದೆ ಎಂದರೆ ಇಂದಿಗೂ ನಮ್ಮಲ್ಲಿ ಪಂಥೀಯ ಚಿಂತನೆಗಳಾಗಿ ವ್ಯಕ್ತಿ ಸ್ವಾತಂತ್ರ್ಯವನ್ನು ಮನೋ ಇಚ್ಚೆಯ ಬರಹಗಳಾಗಿ ಉಪಯೋಗಿಸುತ್ತಿರುವ ರೋಗವು ಉಲ್ಬಣವಾಗುತ್ತಿರುವುದನ್ನು ಕಾಣಬಹುದಾಗಿದೆ. ವ್ಯಕ್ತಿ ಆರಾಧನೆಯಲ್ಲಿ ಸಾಹಿತ್ಯವನ್ನೂ ಹೊಗಳುವ, ತೆಗಳುವ ಈ ಕೀಳು ವಿಮರ್ಶಾ ಗುಣ ಬೇಡವೆಂಬುದನ್ನು ಸ್ಪಷ್ಟಪಡಿಸಿದ್ದಾರೆ.

೪. ೩. ಸಾಮಾಜಿಕ ಪ್ರಜ್ಞೆ ಕುರಿತ ವಿಮರ್ಶೆಗಳು

ಆಧುನಿಕ ಸಾಹಿತ್ಯವನ್ನು ಪುನರ್ ನಿರ್ಮಿಸುವ ಎಲ್ಲಾ ಕೆಲಸಗಳು ಸಾಮಾಜಿಕ ಪ್ರಜ್ಞೆಯನ್ನೇ ಮುಖ್ಯ ಗುರಿಯಾಗಿಸಿಕೊಂಡಿದ್ದವು. ಆಸ್ಥಾನದ ಹೊಗಳಿಕೆ, ಮೆಚ್ಚುಗೆ ಇವೆಲ್ಲವುಗಳ ಹಾದಿಯೊಳಗೆ ಸಾಹಿತ್ಯ ಚರಿತ್ರೆ ನಿರ್ಮಿತಿ ಹೊಂದಿದ್ದರೂ, ಪ್ರಭುತ್ವ ವಿರೋಧಿಯ ಅಂಶಗಳನ್ನು ಪಂಪನಲ್ಲೇ ನಾವು ಹುಡುಕುತ್ತಾ ಸಾಮಾಜಿಕ ಪ್ರಜ್ಞೆಯ ಮೂಲನೆಲೆಯನ್ನು ಕವಿರಾಜಮಾರ್ಗದಿಂದ ಗುರ್ತಿಸಿಕೊಂಡಿದ್ದೇವೆ. ಕವಿಗೆ ತನ್ನ ಸಾಹಿತ್ಯ ರಚನೆಯಲ್ಲಿ ತನ್ನದೇ ಜವಾಬ್ದಾರಿಯನ್ನು ನಿರ್ವಹಿಸುವ ತುರ್ತು ಇರುತ್ತದೆ. ಇಲ್ಲದೇ ಹೋದರೆ ಅದು ಮನೋಭಿಲಾಷೆಯ ಬರಹವಾಗಿ ಬಿಡಬಹುದು.

ಇಪ್ಪತ್ತನೇ ಶತಮಾನದ ಸಾಹಿತ್ಯವನ್ನು ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಾಗಿ ಗುರ್ತಿಸಿಕೊಂಡಿದ್ದೇವೆ. ಇದನ್ನೇ ಬಿ. ಎಂ. ಶ್ರೀಕಂಠಯ್ಯ ಅವರು 'ಪುನರುಜ್ಜೀವನ ಕಾಲಘಟ್ಟ'ವೆಂದು

ಕರೆದರು. ಇಲ್ಲಿ ಸಮಾಜಿಕ ಪ್ರಜ್ಞೆಯ ಸಾಕಷ್ಟು ಜವಾಬ್ದಾರಿಗಳು ತಾವು ನಿರ್ವಹಿಸುವ ಪ್ರತಿಯೊಂದು ಕ್ಷೇತ್ರದಲ್ಲಿ ತುರ್ತಾಗಿಯೇ ಕಂಡು ಬಂದಿತು. ಸಮಾಜದ ಬದಲಾವಣೆಗೆ ಸಾಹಿತ್ಯದ ಮಾತ್ರವೂ ಮುಖ್ಯ ವೇದಿಕೆಯಾಯಿತು. ಮಾಸ್ತಿ, ಬೇಂದ್ರೆ, ಕುವೆಂಪು, ಕಾರಂತರು ಮೊದಲಾದ ಸಮಕಾಲೀನರೆಲ್ಲರ ಸಾಹಿತ್ಯ ರಚನೆಯ ಸೃಷ್ಟಿಯೇ ಸಾಮಾಜಿಕ ಪ್ರಜ್ಞೆಯ ಬೇರುಗಳು ತಳಹದಿಯನ್ನು ಗ್ರಹಿಸಿ ನಿಂತಿದೆ.

ಬೇಂದ್ರೆ ತನ್ನ ಮೊದಲ ಸಂಕಲಕ್ಕೆ ಮುನ್ನುಡಿ ರಚಿಸುತ್ತಾ ಸಹೃದಯರ ಮೂಲಕ ತನ್ನ ಬರಹ ಸಾಮಾಜಿಕ ಪ್ರಜ್ಞೆಯಾಗಿ ಹೊರಹೊಮ್ಮುವ ಆಶಯದಿಂದ ಸಾಹಿತ್ಯ ರಚಿಸಿದರು. ಆದರೆ ಇಂತಹ ಕವಿಯಲ್ಲಿಯೂ ಸಾಮಾಜಿಕ ಪ್ರಜ್ಞೆಯ ಕೊರತೆಗಳಿವೆ ಎಂಬ ವಿಮರ್ಶೆಗಳು ಅಧ್ಯಯನ ಮೂಲಕ ರಚನೆಗೊಂಡವು. ೧೯೭೫ರಲ್ಲಿ ಬೇಂದ್ರೆ ಅವರನ್ನು ಕುರಿತ ವಿಚಾರ ಸಂಕಿರಣವೊಂದು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಜರುಗಿತು. ಇಲ್ಲಿ ಮಂಡನೆಯಾದ ಕಾಳೇಗೌಡ ನಾಗವಾರ ಅವರ 'ಬೇಂದ್ರೆಯವರ ಕಾವ್ಯದ ಮೂಲ ಪ್ರೇರಣೆಗಳು', ದೊಡ್ಡರಂಗೇಗೌಡ ಅವರ 'ಬೇಂದ್ರೆಯವರ ಕಾವ್ಯ ವಿಕಾಸದ ಹಂತಗಳು', ಬರಗೂರು ರಾಮಚಂದ್ರಪ್ಪ ಅವರ 'ಬೇಂದ್ರೆಯವರ ಕಾವ್ಯದಲ್ಲಿ ಸಾಮಾಜಿಕ ಪ್ರಜ್ಞೆ' ಈ ಮೂರು ಲೇಖನಗಳು ವಿಭಿನ್ನವಾಗಿವೆ. ಬೇಂದ್ರೆ ಅವರ ಕಾವ್ಯವು ತನ್ನ ರಚನೆಯಲ್ಲಿ ಪಡೆದುಕೊಳ್ಳುವ ಯಶಸ್ಸಿನ ಎಲ್ಲಾ ನೆಲೆಗಳಲ್ಲಿ ಸೋಲುಗಳು ಇವೆ ಎಂಬ ಅಂಶವನ್ನು ಸೂಕ್ಷ್ಮವಾಗಿ ಪರಿಶೀಲಿಸುತ್ತಾರೆ. ಸಾಮಾಜಿಕ ಪ್ರಜ್ಞೆ ಎಂಬುದನ್ನು ಬರಗೂರು ರಾಮಚಂದ್ರಪ್ಪ ಅವರು ವಿವರಿಸುತ್ತಾ

> ಒಂದು ಸಮಾಜದಲ್ಲಿ ಕಂಡು ಬರುವ ಸ್ಥಿತಿಗತಿಗಳ ಸೂಕ್ಷ್ಮಾತಿಸೂಕ್ಷ್ಮಗಳನ್ನು ಶೋಧಿಸದೆ, ಸ್ಥೂಲವಾಗಿ ಹಿಡಿದಿಟ್ಟ ಅಥವಾ ಕೇವಲ ಪ್ರತಿಕ್ರಿಯೆ ತೋರಿಸಿದ ಕೃತಿಯನ್ನು ಸಾಮಾಜಿಕ ಪ್ರಜ್ಞೆಯುಳ್ಳದ್ದೆಂದು ಸಾರುವಂತಿಲ್ಲ. ಸಾಮಾಜಿಕ ವಸ್ತುವನ್ನು ಕುರಿತು ಬರೆಯುವಲ್ಲಿ ಕೃತಿಕಾರನ ಕ್ರಿಯೆ ಅರಿವಿನ ಹಂತದ್ದೋ ಎಂಬುದೂ ಮುಖ್ಯ; ಯಾಕೆಂದರೆ ಅರಿವು ಮತ್ತು ಪ್ರಜ್ಞೆಗಳಿಗೆ ವ್ಯತ್ಯಾಸವಿದೆ. ಅರಿವು ಒಂದು ಸ್ಥಿತಿಯನ್ನು ಗುರುತಿಸುವಷ್ಟಕ್ಕೆ ತೃಪ್ತವಾದರೆ, ಪ್ರಜ್ಞೆ ಅದರ ತಳಮಟ್ಟ ಶೋಧನೆಗೆ ತೊಡಗುವಂತದ್ದು. ಆದ್ದರಿಂದ ನಿಜಕ್ಕೂ ತೀವ್ರ ಸಂವೇದಿತನಾದ ಪ್ರಜ್ಞಾಶೀಲನೊಬ್ಬ ಹೊರಹೊಮ್ಮಿಸುವ ಸಂಗತಿಗಳು ಹೆಚ್ಚು ಮೌಲಿಕವಾಗಿರುತ್ತವೆ. ಅಲ್ಲಿ ಅರಿವಿನ ಗಡಿಯನ್ನು ದಾಟಿ ಪ್ರಜ್ಞಾವಲಯದಲ್ಲಿ ತೊಡಗಿಸುವ ಕ್ರಿಯೆಯನ್ನು ಕಾಣಬಹುದು.[೨೫]

ಯಾವುದೇ ಸಾಮಾಜಿಕ ಪ್ರಜ್ಞೆಯು ತನ್ನ ಅರಿವಿನಲ್ಲಿಯೇ ಸಮಸ್ಯೆಯನ್ನು ರೂಪಿಸಿಕೊಂಡಿರುತ್ತದೆ. 'ಬೀಜ, ಬೇರು, ಬೆಳವಣಿಗೆ'ಯ ನೆಲೆಯಲ್ಲಿ ಅದರ ಸೂಕ್ಷ್ಮಗಳನ್ನು ಗ್ರಹಿಸಲಾಗುತ್ತದೆ. ಬೇಂದ್ರೆ ಅವರು ಸಮಸ್ಯೆಯನ್ನು ನಿರೂಪಿಸುವ ಉದ್ದೇಶದಿಂದಲೇ ಕವಿತೆಯನ್ನು ಪ್ರಾರಂಭಿಸಿದ್ದರೂ ಸಮಸ್ಯೆಯ ಪ್ರಜ್ಞೆಯ ಕಾವ್ಯ ಪ್ರಜ್ಞೆಗೆ ದಕ್ಕದೇ ಇರುವ ಕೆಲವು ಕವಿತೆಗಳನ್ನು ಕುರಿತು ಚರ್ಚಿಸಿದ್ದಾರೆ.

ಬೇಂದ್ರೆ ಅವರ 'ಹುಬ್ಬಳ್ಳಿಯಾಂವ', 'ಪುಟ್ಟವಿಧವೆ', 'ಹೆಣದ ಹಿಂದೆ', 'ಮನುವಿನ ಮಕ್ಕಳು', 'ಅನ್ನಾವತಾರ', 'ಕುರುಡು ಕಾಂಚಾಣ', 'ದರಿದ್ರ ನಾರಾಯಣ', 'ತುತ್ತಿನ ಚೀಲ', 'ಕೆಲಸವಿಲ್ಲದವರ ಹಾಡು' ಈ ಎಲ್ಲಾ ಕವಿತೆಗಳನ್ನು ಸಾಮಾಜಿಕ ಪ್ರಜ್ಞೆಯ ಹಿನ್ನಲೆಯಲ್ಲಿ ಗ್ರಹಿಸಿದ್ದಾರೆ.

ಸೂಳೆಯ ಸಮಸ್ಯೆ ಸಮಾಜದ ಸಮಸ್ಯೆಯೂ ಹೌದು. ಆದರೆ ಇಡೀ ಕವನದಲ್ಲಿ ಎಲ್ಲೂ ಸಮಸ್ಯೆ ಮುಖ್ಯವಾಗುವುದಿಲ್ಲ; ಸಮಸ್ಯೆಯ ಕಡೆಗೆ ಕಣ್ಣೂ ಹಾಕಿಲ್ಲ.[೧೬]

ಸಮಸ್ಯೆಯು ನೋವಿನ ದನಿಯಾಗಿರಬೇಕೆಂಬ ಆಶಯ ಬರಗೂರು ರಾಮಚಂದ್ರಪ್ಪ ಅವರದು. ಬೇಂದ್ರೆ ಅವರಿಗೆ ಗೀತೆಯೊಳಗೆ ಸಂಗೀತವೂ, ಆನಂದವೂ, ನೋವಿನ ಅಭಿವ್ಯಕ್ತವೂ ನಿರೂಪಿತವಾಗುವ ಸಹೃದಯನ ಅರ್ಥಗ್ರಹಿಕೆಯ ನೆಲೆಯಲ್ಲಿ ಮೂಡುವ ರಚನೆ. ಇಲ್ಲಿ ಗಮನಿಸುವ ಅಂಶಗಳು ಕೆಲವು ಲೇಖನಗಳ ಚರ್ಚೆಯೊಂದಿಗೆ ನಿಂತುಹೋಗುತ್ತದೆ. ೧೯೮೬ರ ವೇಳೆಗೆ ರಂ.ಶ್ರೀ ಮುಗಳಿ, ಆಮೂರ ಜಿ. ಎಸ್., ಮೊದಲಾದವರು ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಹುಡುಕುವ ಪ್ರಯತ್ನ ಮಾಡುತ್ತಾರೆ.

ಇದೇ ವಿಚಾರದ ಹಾದಿಯಲ್ಲಿ ಬೇಂದ್ರೆ ಅವರ ಕವಿತೆಗಳನ್ನು ಪರಿಶೀಲಿಸುತ್ತಾ

> ಬೇಂದ್ರೆಯವರು ಬಡವರ ಬಗ್ಗೆ ಕಾಳಜಿ, ಅನ್ನದ ಸಮಸ್ಯೆ ಬಗ್ಗೆ ಹೃದಯ ಮಿಡಿದ ಕವಿಯಾಗಿ ಕಂಡರೂ ಇದಷ್ಟೇ ಸೂಕ್ತ ಸಾಮಾಜಿಕ ಪ್ರಜ್ಞೆಯ ಗುರುತಲ್ಲ ಎನ್ನುತ್ತಾ 'ಭೂಮಿ ತಾಯಿಯ ಚೊಚ್ಚಿಲ ಮಗ' ಎಂಬ ಕವನ, ಹೆಸರೇ ಹೇಳುವಂತೆ ರೈತನನ್ನು ಕುರಿತದ್ದು. ಬೇಂದ್ರೆಯವರು ಉಸಿರೇ ಕೂಳಾಗಿ, ಕಂಬನಿಯೇ ಕುಡಿಯುವ ನೀರಾಗಿ, ಬೆವರೇ ಜಳಕವಾಗಿ, ಸಾಲದ ಶೂಲಕ್ಕೆ ಸಿಕ್ಕಿ ಹೊಟ್ಟೆಬಟ್ಟೆಗಿಲ್ಲದೆ ತಳಮಳಿಸುವ ರೈತನೊಬ್ಬನ ಚಿತ್ರವನ್ನು ಚೆನ್ನಾಗಿಯೇ ಕಟ್ಟಿಕೊಟ್ಟಿದ್ದಾರೆ. ಅದು ಮನಮಿಡಿಯುವಂತೆಯೂ ಇದೆ. ಸ್ಥಿತಿಯೊಂದನ್ನು ಕಟ್ಟಿಕೊಟ್ಟ ಮೇಲೆ ಬೇಂದ್ರೆ ಅವರು ರೈತನ ದಾರುಣ ಸ್ಥಿತಿಯ ಕಾರಣಗಳ ಹುಡುಕಾಟಕ್ಕೂ, ಒಟ್ಟು ತಳಶೋಧಕ್ಕೂ ತೊಡಗುತ್ತಾರೆಂದು ಭಾವಿಸಿದರೆ ತೀವ್ರ ನಿರಾಸೆಯನ್ನು ಎದುರಿಸಬೇಕಾಗುತ್ತದೆ. ಯಾಕೆಂದರೆ, ಆ ಘಟ್ಟದಿಂದ, ಕವಿತೆಯಲ್ಲಿ 'ಆದರೂ ಬರದೋ ಯಮನಿಗೆ ಕರುಣ' ಎಂಬ ಅನುಪಾತ ಆರಂಭವಾಗುತ್ತದೆ. ಮುಂದುವರಿದಂತೆ ಸಾವನ್ನೇ ಬೆಳಕೆಂದು ವೈಭವಿಸಲಾಗಿದೆ. ಈ ರೈತನ ಜೀವ ಜಂತು ಬೇಂದ್ರೆಯವರೇ ಹೇಳುವಂತೆ 'ಜನುಮವೆಂಬುವ ಕತ್ತಲೆಯಲ್ಲಿ' ಬಿದ್ದಿರುವುದೇನೋ ನಿಜ. ಕತ್ತಲನ್ನು ಸೀಳುವ ಬೆಳಕು ಬರಬೇಕಾದ್ದೂ ಸರಿ; ಹಾಗೂ ಅತ್ಯಗತ್ಯ. ಆದರೆ ಆ ಬೆಳಕು ಯಾವುದಾಗಿರಬೇಕು ಎಂಬುದು ಮುಖ್ಯ. ಭೂಮಿ ತಾಯಿಯ ಚೊಚ್ಚಿಲ ಮಗ ಇಂತಹ ಧಾರುಣ ಸ್ಥಿತಿಯಲ್ಲಿರುವಾಗ, ಯಾವುದು ದುಡಿಮೆಗೆ ತಕ್ಕ ನ್ಯಾಯ ದೊರಕಿಸಿ ಭೂಮಿಯ ಮೇಲೆ ಬದುಕುವ ಅವಕಾಶ ಕಲ್ಪಿಸಿ ಅವನನ್ನು ಅರ್ಥಪೂರ್ಣ ಚೊಚ್ಚಿಲ ಮಗನನ್ನಾಗಿ ಮಾಡುತ್ತದೆಯೋ ಅದೇ ಅವನಿಗೆ ಬೆಳಕು. ಆದರೆ ಇಲ್ಲಿ ಸಂಕಷ್ಟ ಸ್ಥಿತಿಯಲ್ಲಿರುವಾಗ ಸಾವನ್ನು ಬೆಳಕೆಂದು ಹೇಳುವ ತತ್ತ್ವಜ್ಞಾನಾಭಾಸವೇ ಮುಖ್ಯವಾಗಿದೆ. ಆಗಲೇ ಹೇಳಿದಂತೆ ಸಾವು ವೈಭವೀಕೃತಗೊಂಡಿದೆ. ಹೀಗಾಗಿ ಇದು ವಾಸ್ತವತೆಯ ಒಳಶೋಧ ನಡೆಸದ, ಅನುಕಂಪ ಹಡೆಯುವಷ್ಟೇ ನಿಲ್ಲುವ ನಿಲ್ಲಿಸುವ ಕವನವಾಗಿದೆ.[೧೭]

ಹೀಗೆ 'ಮನುವಿನ ಮಕ್ಕಳು', 'ಕುರುಡು ಕಾಂಚಾಣ' ಅದುವರೆಗೂ, 'ತುತ್ತಿನ ಚೀಲ', 'ದರಿದ್ರ ನಾರಾಯಣ' ಈ ಎಲ್ಲಾ ಕವನಗಳ ಮೇಲೆಯೂ ವಸ್ತು ಹಾಗೂ ಅದರ ತಾತ್ವಿಕತೆಯ

ಮೂಲ ಶೋಧನೆಯಲ್ಲಿ ಯಶಸ್ವಿಯಾಗಿಲ್ಲವೆಂಬ ನಿಲುವಿದೆ. ಪರಿಹಾರ ಹುಡುಕುವಲ್ಲಿ ಬೇಂದ್ರೆ ಅವರು ಆಧ್ಯಾತ್ಮದ ಗೆಲುವಿನ ಕಡೆ ಹೆಜ್ಜೆ ಹಾಕುತ್ತಾರೆ ಆಗ ಕವಿತೆ ತಾನಾಗಿಯೇ ಸೋಲುತ್ತದೆ ಎಂಬುದು ಇವರ ಅಭಿಪ್ರಾಯವಾಗಿದೆ.

ಇಂಡಿಯಾದ ಸಂಸ್ಕೃತಿಯೊಡನೆ ಸಂಬಂಧ ಸ್ಥಾಪನೆಯ ಪ್ರಯತ್ನವೇ ಬೇಂದ್ರೆ ಅವರ ಕಾವ್ಯದ ಮೂಲಪ್ರೇರಣೆ : ಇದರ ಒಳವಿವರಗಳನ್ನು ಸ್ಥೂಲವಾಗಿ ಗುರುತಿಸುವ ನೆಲೆಯಲ್ಲಿ ಬೇಂದ್ರೆ ಅವರ ಕಾವ್ಯದ ನೆಲೆಗಳನ್ನು ಕಾಳೇಗೌಡ ನಾಗವಾರ ಅವರು ಗುರ್ತಿಸುತ್ತಾ ಈ ಕೆಲವು ವಿಚಾರಗಳನ್ನು ಚರ್ಚಿಸುತ್ತಾರೆ. ಬೇಂದ್ರೆ ಅವರ ಸಾಹಿತ್ಯದ ಓದುವಿನಲ್ಲಿ ಹೊಸ ಆಯಾಮಗಳನ್ನು ಒದಗಿಸುವ ಈ ಲೇಖನಗಳು ಹಲವು ಓದುವಿಗೆ ಸಾಕಷ್ಟು ಪಠ್ಯಗಳನ್ನು ತೆರೆಯುತ್ತವೆ. ಬೇಂದ್ರೆ ಅ೦ವರು ತಮ್ಮ ಕಾವ್ಯಕ್ಕೆ ನಿರ್ಮಿಸಿಕೊಂಡ ಜಗತ್ತು ಕೇವಲ ಮಣ್ಣಿನ ಜನಪದೀಯ ನೆಲೆಯನ್ನು ಮಾತ್ರ ಸ್ವರೂಪಗೊಳಿಸದೇ ಅದು ಭಾರತೀಯ ಸಂಸ್ಕೃತಿಯನ್ನು, ಪಾಶ್ಚಾತ್ಯ ಸಂಸ್ಕೃತಿಯನ್ನು ಈ ದೆಸೆಯಲ್ಲಿಯೇ ತಾವು ಕಂಡುಕೊಳ್ಳಲು ಅಲೌಕಿಕ ಸಾಧನೆಯ ಆಧ್ಯಾತ್ಮಿಕ ನೆಲೆಯ ಚತುರ್ಮುಖ ದೃಷ್ಟಿಕೋನವನ್ನು ಮುಖ್ಯವಾಗಿ ಪರಿಶೀಲಿಸಿದ್ದಾರೆ.

> ರಾಷ್ಟ್ರೀಯತೆ, ಕನ್ನಡತನದ ಸೆಳೆತ ಬಹುಶಃ ನವೋದಯದ ಎಲ್ಲಾ ಕವಿಗಳಿಗೂ ಕಂಪನ ಮೂಲವಾಗಿದ್ದಿತು. ಸಮಸ್ತ ಸಂವೇದನೆಗಳಿಗೂ ಕೂಡ ಕವಿ ವಾಣಿಯಾಗಬೇಕೆಂದು ಆಗಿನ ಮನೋಧರ್ಮವಾಗಿದ್ದಿತು. ಸಮುದಾಯದ ಬದುಕಿನಲ್ಲಿ ಬೇಂದ್ರೆ ಮುಳುಗಿಲ್ಲ; ಅದರ ಆಳದ ಸಂಘರ್ಷಗಳನ್ನು ನಿಜವಾಗಿ ಗುರುತಿಸಿಲ್ಲ ಎಂದಾಗ 'ನೋಡಿ ಬೇಂದ್ರೆ ಸಾಮಾಜಿಕ ಪ್ರಜ್ಞೆಯುಳ್ಳ ಕವಿತೆಗಳನ್ನು ಬರೆದಿಲ್ಲವೇ?' ಎಂದು ತೋರಿಸುವವರೇ ಬೇಂದ್ರೆ ಅವರ ಪಾತಿನಿಧಿಕ ಕಾವ್ಯವನ್ನು ಹೇಳುವಾಗ 'ಏನಿದ್ದರೂ ಅವರ ಮಹತ್ವದ ಕಾವ್ಯ ಇರುವುದು ಆಧ್ಯಾತ್ಮಿಕ ಮತ್ತು ತಾತ್ವಿಕ ಪ್ರಣಯ ಕವಿತೆಗಳಲ್ಲಿಯೇ' ಎನ್ನುತ್ತಾರೆ. ಸಾಮಾಜಿಕ ಪ್ರಜ್ಞೆ ಒಳಗೊಳ್ಳದೆಯೂ ಕಾವ್ಯ ಶ್ರೇಷ್ಠವಾಗಿ ಹುಟ್ಟಬಹುದು ಎಂದ ವಿಮರ್ಶಕರೂ ಉಂಟು. ಇದು ಇಡಿಯಾದ ಚಿಂತನೆಯು ಸಾಧಿಸಿರುವ ಮೋಸದ ಸೂಕ್ಷ್ಮತೆಗಳಲ್ಲೊಂದು. ಆ ಪ್ರಜ್ಞೆ, ಈ ಪ್ರಜ್ಞೆ ಎಂದು ಬೇರೆ ಬೇರೆಯಾಗಿ ಒಬ್ಬಶ್ರೇಷ್ಠ ಕವಿ ಸೃಷ್ಟಿಸಲಾರ. ಅಖಂಡ ಪ್ರಜ್ಞೆಯ ಮಟ್ಟದಲ್ಲಿಯೇ ಅವನು ಕಾವ್ಯವನ್ನು ಸೃಷ್ಟಿಸುತ್ತಾನೆ. ಅರವಿಂದರ 'ಅಖಂಡತ್ವ'ದಿಂದ ಬೇಂದ್ರೆ ಅಷ್ಟೊಂದು ಪ್ರಭಾವಿತರಾಗಿದ್ದರೂ, ಅದು ಕೇವಲ ಆಧ್ಯಾತ್ಮಿಕ ನೆಲೆಯಲ್ಲಿ ಮಾತ್ರ. ಬೇಂದ್ರೆ ಅವರು ಇಡೀ ವ್ಯಕ್ತಿತ್ವದಿಂದ ತಮ್ಮ ಕಾವ್ಯವನ್ನು ಸೃಷ್ಟಿಸಲಿಲ್ಲ ಎನ್ನುವುದಕ್ಕೆ ಇದೂ ಒಂದು ಸಮರ್ಥನೆ. ಅದೂ ಈ 'ಸಾಮಾಜಿಕ ಪ್ರಜ್ಞೆಯಿರುವ ಬಹಳಷ್ಟು ಪದ್ಯಗಳೂ ಸಹ ಬರೀ ಪ್ರತಿಕ್ರಿಯೆಗಳಷ್ಟೇ; ಪ್ರತಿಕ್ರಿಯೆಗಳು ಕಾವ್ಯವಾಗಲಾರವು. ಆದರೆ ಈ ನಡುವೆಯೂ 'ಕುರುಡು ಕಾಂಚಾಣ', 'ಅನ್ನಾವತಾರ', 'ಹೆಣದ ಹಿಂದೆ' ಮುಂತಾದ ಅದ್ಭುತ ನಾಟ್ಯಶಕ್ತಿಯಿರುವ ಕವನಗಳನ್ನು ಬೇಂದ್ರೆ ಬರೆದಿದ್ದಾರೆ. ಇವರ ಕಾವ್ಯಶಕ್ತಿ ತನ್ನ ಪೂರ್ಣತೆಯನ್ನು ಸಾಧಿಸಿರುವುದು ಇಂತಹ ಕವನಗಳಲ್ಲಿ ಮಾತ್ರ.[೯]

ಈ ರೀತಿ ಬೇಂದ್ರೆ ಅವರ ಕಾವ್ಯದ ಮೂಲ ಪ್ರೇರಣೆಯನ್ನು ಗ್ರಹಿಸಲು ಹೊರಟ ವಿಮರ್ಶಕರು ತಮ್ಮ ಪ್ರಶ್ನೆಯಲ್ಲಿ ಉತ್ತರಗಳನ್ನು ಹಾಗೂ ಗೊಂದಲವಾದ ಪ್ರಶ್ನೆಗಳನ್ನು ಸಹಜವಾಗಿ ಎತ್ತುತ್ತಾ ತಮ್ಮ ವಿಮರ್ಶೆಯನ್ನು ಪೂರ್ಣಮಾಡುತ್ತಾರೆ. 'ಬೇಂದ್ರೆಯವರ ಕಾವ್ಯದ ಮೂಲ ಪ್ರೇರಣೆಗಳು'

ಎಂಬ ಲೇಖನವು 'ಬೇಂದ್ರೆಯವರ ಕಾವ್ಯದಲ್ಲಿ ಸಾಮಾಜಿಕ ಪ್ರಜ್ಞೆ' ಎಂಬ ಲೇಖನದ ಕೆಲವು ಪ್ರಶ್ನೆಗಳಿಗೆ ಉತ್ತರವನ್ನು ನೀಡುತ್ತಾ ಹೊಸ ಪ್ರಶ್ನೆಗಳನ್ನು ಎತ್ತುತ್ತಾರೆ. ಇಲ್ಲಿ ಬೇಂದ್ರೆ ಅವರು ಅಖಂಡತ್ವವನ್ನು ಹಾಗೂ ತಮ್ಮ ವ್ಯಕ್ತಿತ್ವದಿಂದಲೇ ಕಾವ್ಯ ರಚಿಸಲಿಲ್ಲ ಎಂಬ ಇವರ ಪ್ರಶ್ನೆ ಸಹಜವಾದದು.

ದೊಡ್ಡರಂಗೇಗೌಡ ಅವರ 'ಬೇಂದ್ರೆಯವರ ಕಾವ್ಯ ವಿಕಾಸದ ಹಂತಗಳು' ಎಂಬ ಲೇಖನವು ಬೇಂದ್ರೆ ಅವರ ಕಾವ್ಯದ ವಿಕಾಸದ ಹಂತಗಳನ್ನು ಗುರ್ತಿಸುತ್ತಾ 'ಕಾವ್ಯದ ವಿಕಾಸ'ದ ತೊಡಕುಗಳನ್ನು ಪ್ರಸ್ತಾಪಿಸಿದ್ದಾರೆ. ಜೊತೆಗೆ ಕಾವ್ಯ ರಚನೆಯಲ್ಲಿ ಬೇಂದ್ರೆ ಅವರ ಕಾವ್ಯ ಚಿಂತನೆಗಿಂತ ಕಾವ್ಯ ವಿಕಾಸಗೊಳ್ಳಲು ಸೋಲುವ ನಿರ್ಮಿತಿಗಳನ್ನು ಹೀಗೆ ಗುರ್ತಿಸುತ್ತಾರೆ. ಕೆಲವು ಅಂಶಗಳೊಂದಿಗೆ ಹೀಗೆ ಚರ್ಚಿಸಿದ್ದಾರೆ. ಸಾಂಪ್ರದಾಯಿಕ ಹಂತದಲ್ಲಿ...

> ಎಲ್ಲ ಕವಿಗಳೂ ಒಂದಲ್ಲ ಒಂದು ರೀತಿಯಲ್ಲಿ ಪರಂಪರೆಯ ಕೊಂಡಿಯಾಗಿಯೇ ಕಣ್ಬಿಟ್ಟು ಅಲ್ಲಿನ ಸಂಗತಿಗಳನ್ನೇ ಪರಮ ಮೌಲ್ಯಗಳೆಂದು ಭ್ರಮಿಸಿ ಭಾವುಕ ಸ್ಥಿತಿಯಲ್ಲೇ ಮೊದಲ ಹೆಜ್ಜೆಗಳನ್ನಿಡುವುದು ನೈಸರ್ಗಿಕ ಕ್ರಿಯೆಯಾಗಿದೆ ಬೇಂದ್ರೆಯವರು ಕೂಡ ಇದಕ್ಕೆ ಹೊರತಾಗಿಲ್ಲ.[೧೯]

ಇದಕ್ಕೆ ಸೂಕ್ತ ಕಾರಣಗಳಾಗಿ 'ಕೃಷ್ಣಕುಮಾರಿ' ಕವಿತೆಯನ್ನು ಚರ್ಚಿಸಿದ್ದಾರೆ. ವಾಸ್ತವಿಕ ಹಾಗೂ ಕಾಲ್ಪನಿಕ ಹಂತ ಇದರಲ್ಲಿ

> ಗರಿ ಸಂಕಲನ ಬೇಂದ್ರೆಯವರ ಕಾವ್ಯ ವ್ಯಕ್ತಿತ್ವವನ್ನು ನಿಚ್ಚಳವಾಗಿ ಸೂಚಿಸುವಂಥ ಕೃತಿ. ಇಲ್ಲಿ ವಾಸ್ತವ, ಕಲ್ಪನೆ_ ಈ ಎರಡೂ ಸ್ಥಿತಿಗಳಲ್ಲಿಯೇ ಕವಿ ನೆಲೆಯೂರದೆ ಕಾವ್ಯದ ಬೇರೆ ಬೇರೆ ಪರಿಕರಗಳನ್ನೂ ಬಳಸಿಕೊಳ್ಳುವ ಚಾಣಾಕ್ಷತನ ಕಾಣುತ್ತದೆ. ಎಲ್ಲದರಲ್ಲೂ ಹಸಿ ಒಗರು ಎದ್ದು ತೋರುತ್ತದೆ.[೨೦]

ಈ ಅಂಶಗಳಿಗೆ ಪೂರಕವಾಗಿ 'ಗರಿ' ಸಂಕಲನದ ಕವಿತೆಗಳನ್ನು ಚರ್ಚಿಸಿದ್ದಾರೆ. ಕೌಟುಂಬಿಕ ಹಂತ ಎಂಬುದರಲ್ಲಿ ಕುಟುಂಬದ ಚಿಂತನೆಯಲ್ಲಿ 'ಸಖೀಗೀತ' ಸಂಕಲನವನ್ನು ವಿಮರ್ಶಿಸುವ ಈ ಚಿಂತನೆಯಲ್ಲಿ ಹೊಸ ಹೊಳಹುಗಳಿಲ್ಲದ ಅರ್ಥಗಳನ್ನು ಕಾಣಬಹುದು.

> ೧೯೩೭ರಲ್ಲಿ ಪ್ರಕಟವಾದ 'ಸಖೀಗೀತ' ಹೆಚ್ಚು ಕೌಟುಂಬಿಕ ಹರಹನ್ನು ಪಡೆದುಕೊಂಡಿದೆ. ಬೇರೆ ಬೇರೆ ವಿಷಯಗಳನ್ನು ಈ ಸಂಕಲನದಲ್ಲಿ ಬಂದಿದ್ದರೂ ಒಟ್ಟು ಕಾವ್ಯದ ಮುಖ್ಯ ಸೆಲೆ ಕವಿಯು ವೈಯಕ್ತಿಕ ಸಂಗತಿಗಳನ್ನು ಕುರಿತದ್ದು.. ಅಂಥವನ್ನೂ ಸಾರ್ವತ್ರಿಕ ಮಾಡಹೊರಡಲು ಕವಿ ಶ್ರಮಿಸಿದ್ದರೂ ಕುಟುಂಬದ ಸುತ್ತ ಹಾರಿದ ಭಾವಧಾರೆಗೆ ಹೆಚ್ಚು ಒತ್ತು ಬಿದ್ದಿದೆ.[೨೧]

'ಸಖೀಗೀತ', 'ಪುಟ್ಟ ವಿಧವೆ', ಹಾಗೂ 'ಹುಬ್ಬಳ್ಳಿಯಾವ್ವ', 'ಉಯ್ಯಾಲೆ'ಯ 'ಕರುಳಿನ ವಚನಗಳು' ಈ ಕವಿತೆಗಳು ಸಹೃದಯರ ಸೆಳೆತಕ್ಕೆ ಸಿಲುಕುವುದನ್ನು ಗಮನಿಸಿದ್ದಾರೆ. ಪ್ರಜ್ಞಾಪೂರ್ವಕ ಹಂತ ಎಂಬುದರಲ್ಲಿ 'ಕುರುಡು ಕಾಂಚಾಣ', 'ಅನ್ನಾವತಾರ', 'ಕಾಮೋದೆ', 'ಕಲ್ಪವೃಕ್ಷ ವೃಂದಾವನಂಗಳಲಿ' ಈ ಕವಿತೆಗಳು ಪಡೆಯುವ ತಾತ್ವಿಕ ಸ್ವರೂಪವನ್ನು ಬೇಂದ್ರೆ ಅವರು ಪ್ರಜ್ಞಾಪೂರ್ವಕವಾಗಿ ತಲುಪುವ ಶೈಲಿಯನ್ನು ಪರಿಶೀಲಿಸಿದ್ದಾರೆ. ಅನುಭಾವದ ತಾತ್ವಿಕ ಹಂತ

ಎಂಬುದರಲ್ಲಿ ಬೇಂದ್ರೆ ಅವರ 'ಜೋಗಿ', 'ಫಜಾರು ಗಟ್ಟಿ ಮುಟ್ಟೋಣ ಬಾ' ಈ ಕವಿತೆಗಳನ್ನು ವಿಮರ್ಶಿಸುತ್ತಾ 'ನಾನು' ಕವಿತೆಯ ಸ್ವರೂಪವನ್ನು ಬಳಸಿ ಈ ರೀತಿ ಹೇಳಿದ್ದಾರೆ.

> ಬೇಂದ್ರೆ ಅವರ ಈ ಘಟ್ಟದ ಬರವಣಿಗೆಯ ಸುತ್ತ ಹೆಣೆದುಕೊಂಡಿರುವ ಗೋಜಲು ಗೋಜಲಾದ ಸಂಗತಿಗಳೂ ಅಷ್ಟೇ ಹೆಚ್ಚಿನ ರೀತಿಯಲ್ಲಿವೆ. ವಿಶ್ವ ಮಾತೆ, ಭೂಮಿ ತಾಯಿ, ಭರತ ಮಾತೆ, ಕನ್ನಡ ತಾಯಿ, ಎಂಬುದಾಗಿ ಅವರಷ್ಟೇ ತೀವ್ರ ಬಗೆಯಲ್ಲಿ ನಾವು ಅನಿಸಿಕೆಗಳನ್ನೂ ತೊಡಗಿಸಿಕೊಳ್ಳಲಾಗುವುದಿಲ್ಲ. ಕಾರಣ ಅವೆಲ್ಲಾ ಕಲ್ಪನಾ ಲೋಕದ ಊಹಾ ಸರಕು. ಇವೆಲ್ಲಾ ಅವಾಸ್ತವ ಎಂಬ ದೃಷ್ಟಿಕೋನದಿಂದ ನೋಡಿದರೆ ಬೇಂದ್ರೆ ಕಾವ್ಯ ಭೂಮಿಕೆಯೇ ಸಂಕುಚಿತವಾಗಿ ಕಾಣುತ್ತದೆ.[೨೨]

ಕಾವ್ಯ ಕಲ್ಪನೆಗಿಂತ ವಾಸ್ತವದಲ್ಲಿ ಧ್ವನಿಸುವ ಶಕ್ತಿಗೆ ಹೆಚ್ಚು ಮೌಲ್ಯವಿರುತ್ತದೆ ಎಂಬುದನ್ನು ಚರ್ಚಿಸುತ್ತಲೇ ಬೇಂದ್ರೆ ಅವರ ಕಾವ್ಯಾರ್ಥಗಳನ್ನು ಕವಿಸಮಯದಿಂದ ತಾತ್ವಿಕಗೊಳಿಸಲು ಅಸಾಧ್ಯವೆನ್ನುತ್ತಿದ್ದಾರೆ.

> ಅಂತೂ ಸಾಮಾನ್ಯರಿಗೆ ಮಾಯೆ, ನಾನು, ಅಂಬಿಕಾತನಯ ದತ್ತ–ಇಂಥ ಪದ್ಯಗಳಲ್ಲಿನ ಕವಿಯ ಆರೋಪಿತ ಅರ್ಥಗಳ ನಡುವೆ ಸಂಪೂರ್ಣ ಊಹೆ ಸಾಧ್ಯವಾಗುವುದಿಲ್ಲ.[೨೩]

ಎಂಬ ವಿಮರ್ಶೆಯ ಮೂಲಕ ದ್ವಂದ್ವ ನಿಲುವಿಗೆ ಬರುತ್ತಾರೆ. ಆದರೆ ಕವಿಸಮಯದಂತ ಕಲ್ಪನೆಯಲ್ಲೂ ವಾಸ್ತವದ ಪಡಿನೆರಳು ಚೆಲ್ಲುವ ಸತ್ಯಶೋಧಗಳ ಅರ್ಥಸಾತತ್ಯತೆ ಮುಖ್ಯವಾದುದು ಎನಿಸುತ್ತದೆ. ಬೇಂದ್ರೆ ಕಾವ್ಯದ ಓದುವಿಕೆಯು ಭಿನ್ನವಾದುದು ಎಂಬ ಅಂಶವೂ ನಮಗೆ ತಿಳಿಯುತ್ತದೆ.

'ವಿವಾದಾತ್ಮಕ ಹಂತ' ಎಂಬ ಭಾಗದಲ್ಲಿ ದೊಡ್ಡರಂಗೇಗೌಡರು ತಮ್ಮ ಅಧ್ಯಯನದ ವ್ಯಾಪ್ತಿಯನ್ನೂ ಮೀರಿ ತನಗನಿಸಿದಂತೆ ವ್ಯಾಖ್ಯಾನ ಮಾಡಿದ್ದಾರೆ. ಆ ಅಂಶಗಳು ಹೀಗಿವೆ.

> 'ಕಾವ್ಯವೆಂದರೆ ವಿಷಯ ಚಿಂತನವಲ್ಲ; ಶಬ್ದಾರ್ಥದಲ್ಲಿ ಎತ್ತಿದ ವಿಷಯಾನಂದ' ಎಂದು ಬೇಂದ್ರೆ ಅವರೇ ಬರೆದಿದ್ದಾರೆ. ಅವರ ಈಚೆಗಿನ ಕಾವ್ಯ ಮಾತ್ರ ಅವರ ಉಕ್ತಿಗಳಿಗೇ ವಿರುದ್ಧ ದಿಕ್ಕಿನಲ್ಲಿ ನಡೆದಿವೆ! ಅವರ ಇತ್ತೀಚಿನ ನೂರಾರು ಪದ್ಯ ರೂಪದ ಬರವಣಿಗೆಗಳು ಅನುಭವವನ್ನು ನಿವೇದಿಸಬಲ್ಲ ಶಕ್ತಿಯನ್ನೇ ಪಡೆದಿಲ್ಲ ಎಂಬುದು ನನ್ನ ಅನಿಸಿಕೆ./ ಪಂಪ, ಲಕ್ಷ್ಮೀಶ, ಸರ್ವಜ್ಞರ ನುಡಿ ಬಲ್ಮೆಗಳನ್ನು ಅರಗಿಸಿಕೊಂಡು ಬರೆಯ ಹೊರಟಂತೆಯೇ ಸಾಯಿ ವಚನಾಮೃತಗಳನ್ನೂ ನಕಲು ಮಾಡಲು ಹೊರಟಿದ್ದಾರೆ. ಅಷ್ಟೇ ಅಲ್ಲದೆ ಕವಿ ತಮ್ಮ ವ್ಯಕ್ತಿತ್ವವನ್ನು ಬೇರೆ ಬೇರೆ ಕಂಪಾರ್ಟ್‌ಮೆಂಟ್ಸ್'ಗಳಂತೆ ಬಿಡಿಸಿಕೊಂಡು ಕವಿತೆಗಳನ್ನೂ ಅದೇ ರೀತಿ ವಿಂಗಡಿಸಿಕೊಂಡು 'ಬಾಲಿಶ' ಬರವಣಿಗೆಗಳಿಗೂ ಕಾರಣರಾಗಿ 'ವರಕವಿ' ಈ ರೀತಿಯ ಬರವಣಿಗೆಗ ಬಲಿಯಾಗಿದ್ದಾರೆ. ಅವುಗಳಲ್ಲಿ 'ಮಂತ್ರಶಕ್ತಿ' ಇದೆ ಎಂದೂ ನಂಬಿಕೊಂಡು ಇದ್ದಾರೆ. 'ಅರಳು–ಮರಳು' ಹೆಸರಿನಲ್ಲಿ ಸಂಕಲಿತವಾದ ಐದು ಸಂಗ್ರಹಗಳೂ ಇದೇ ಗುಂಪಿಗೆ ಸೇರುತ್ತವೆ; ಅವುಗಳ ನಂತರ ಪ್ರಕಟವಾದ ಕಾವ್ಯೋದ್ದೇಶವಿಲ್ಲದ ಕೃತಿಗಳೆಲ್ಲ ಈ ಹಂತದಲ್ಲೇ ಸೇರುತ್ತವೆ. ಇಲ್ಲಿಂದ ಮುಂದೆ ಬೇಂದ್ರೆ ಅವರ ಕಾವ್ಯಕ್ಕೆ 'ವಿಕಾಸ ಶೀಲ' ಗುಣವೇ ಕುಂದಿಹೋಗಿದೆ ಎಂದರೂ ಕವಿಗೆ ಅಪಚಾರ ಮಾಡಿದ ಹಾಗಾಗುವುದಿಲ್ಲ.

> ಏಕೆಂದರೆ 'ಗಾರುಡಿಗ'ನಾಗಿಲ್ಲ ಇಲ್ಲಿಂದ ಮುಂದೆ ಬರೆಯುತ್ತಾ ಹೋದ ಕವಿ. 'ಹಕ್ಕಿ ಹಾರುತಿದೆ ನೋಡಿದಿರಾ' ಪದ್ಯ ಬರೆದ ವ್ಯಕ್ತಿ ಮುಂದಿನ ಕವಿತೆಗಳನ್ನೂ ಬರೆದರೇ ಎಂದು ಸಂದೇಹವೂ ಬರುತ್ತೆ.[೨೪]

ಸುಮತೀಂದ್ರ ನಾಡಿಗರು ತಮ್ಮ ಸಂಶೋಧನೆಯಲ್ಲಿ ಈ ಮೂರು ಲೇಖನಗಳನ್ನು ಕುರಿತು ಈ ರೀತಿ ತಿಳಿಸುತ್ತಾರೆ.

> ಈ ತಲೆಮಾರಿನವರನ್ನು ಪ್ರತಿನಿಧಿಸುವುದು ಕೂಡ ಈ ವಿಚಾರ ಸಂಕಿರಣದ ಉದ್ದೇಶವಾಗಿತ್ತು ಎನ್ನುವುದು ಸಂಪಾದಕರ ಮುನ್ನುಡಿಯಿಂದ ತಿಳಿದುಬರುತ್ತದೆ. ಈ ಮೂರು ಲೇಖನಗಳಲ್ಲೂ ಬೇಂದ್ರೆಯವರ ಕಾವ್ಯ ವಿಮರ್ಶಾಮಾಪನಗಳು ಯಾವುವೆನ್ನುವುದರ ಬಗ್ಗೆ ವಿಮರ್ಶಕರ ಅನಿಶ್ಚಯತೆ ಎದ್ದು ಕಾಣುತ್ತದೆ; ಅವರ ಎಡಪಂಥೀಯ ಮಾತುಗಳು ಮಾತ್ರ ಎದ್ದು ಕಾಣುತ್ತವೆ.[೨೫]

ಇಂತಹ ಸುದೀರ್ಘವಾದ ವಿಮರ್ಶಾ ನೋಟದಲ್ಲಿ ಪೂರ್ಣವಾಗಿ ಋಣಾತ್ಮಕ ಚಿಂತನೆಯನ್ನು ಮಂಡಿಸುವ ಈ ಅರ್ಥಗಳು ಹೆಚ್ಚು ಅಧ್ಯಯನಕ್ಕೆ ಒಳಪಡಬೇಕಾದ ಅಗತ್ಯವಿದೆ. ಹೀಗೆ ಅರ್ಪಣಾತ್ಮಕ ಹಂತ, ವಿಕಲ್ಪ-ಕಾರಕ ಹಂತ, ಸ್ವಗತ ಸೂಚಕ ಹಂತ ಹಾಗೂ ಆಶಾದಾಯಕ ಹಂತ ಎಂಬ ಭಾಗಗಳಲ್ಲಿ ಬೇಂದ್ರೆ ಅವರ ೧೯೭೪-೭೫ರವರೆಗಿನ ಕಾವ್ಯ ವಿಕಾಸದ ಹಂತಗಳನ್ನು ಗುರ್ತಿಸುತ್ತಾ ಚರ್ಚಿಸಿದ್ದಾರೆ. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸಂಯೋಜಿಸಿದ ವಿಚಾರ ಸಂಕಿರಣದಲ್ಲಿ ಮಂಡಿತವಾದ ಈ ಲೇಖನಗಳು ಮುಂದಿನ ಹಲವು ಓದುಗಳಿಗೆ, ಕೆಲವು ತಪ್ಪು ಅರ್ಥಗಳಿಗೆ, ಸಾಕಷ್ಟು ನಿರ್ಲಕ್ಷಗಳಿಗೆ ದಾರಿ ಮಾಡಿಕೊಟ್ಟವು.

ಆದರೆ ಪೂರ್ಣ ವ್ಯಕ್ತಿತ್ವವೇ ಬೇಂದ್ರೆ ಅವರ ಕಾವ್ಯದ ಜೀವಾಳವೆಂಬ ಹಲವು ಲೇಖನಗಳನ್ನು ಗಮನಿಸಿದಾಗ ಈ ಪ್ರಶ್ನೆಗಳಿಗೆ ಉತ್ತರ ದೊರಕಬಹುದು. ರಂ. ಶ್ರೀ. ಮುಗಳಿ ಅವರು 'ಬೇಂದ್ರೆ ಕಾವ್ಯ' ಎಂಬ ಕೃತಿಯಲ್ಲಿ 'ಆಧ್ಯಾತ್ಮ' ಎಂಬ ವಿಭಾಗದಲ್ಲಿ ಈ ವಿಮರ್ಶಕರ ಪ್ರಶ್ನೆಗಳಿಗೆ ಮರುಪ್ರಶ್ನೆ ಹಾಕಿರುವುದನ್ನು ಗಮನಿಸಬಹುದು. ಹುಸಿಸಂಸ್ಕೃತಿಯಿರಲು ಸಾಧ್ಯವಿಲ್ಲ. ಸಂಸ್ಕೃತಿ ಹುಸಿಯಾಗಲು ಸಾಧ್ಯವಿಲ್ಲ. ಯಾವುದನ್ನು ಸಂಸ್ಕೃತಿಯೆಂದು ಭ್ರಮಿಸುತ್ತಾರೋ ಅದು ಬೇರೆಯವರಿಗೆ ಹುಸಿಯೆಂದು ತೋರಬಹುದು. ಇದನ್ನು 'ಭ್ರಮೆ ಸಂಸ್ಕೃತಿ' ಎಂದಿದ್ದಾರೆ.

> ಬೇಂದ್ರೆ ತಮ್ಮ ಇಡೀ ವ್ಯಕ್ತಿತ್ವದಿಂದ ಕಾವ್ಯವನ್ನು ಸೃಷ್ಟಿಸಲಿಲ್ಲ ಎಂಬುದು ಬಹುಮುಖ್ಯವಾದ ಹೇಳಿಕೆ. ಹಾಗಿದ್ದರೆ ಇವರ ಅಭಿಪ್ರಾಯದಲ್ಲಿ ಅವರು ಮಾನವೀಯ ಬದುಕಿನ ಸಾವು ನೋವುಗಳನ್ನು ಕುರಿತು ಅತ್ಯುತ್ತಮ ಕಾವ್ಯವನ್ನು ಛಿದ್ರೀಕೃತ ವ್ಯಕ್ತಿತ್ವದಿಂದ ರಚಿಸಿದರು ಎನ್ನಬೇಕಾಗುತ್ತದೆ. ಇದೊಂದು ಕಾವ್ಯಮೀಮಾಂಸೆಗೆ ಹೊಸಕೊಡುಗೆ ಎಂದು ತಿಳಿಯಬೇಕು! ನಿಜವಾಗಿ ಸದುದ್ದೇಶ ಪ್ರೇರಿತವಾದರೂ ಸಹೃದಯ ಮನೋಧರ್ಮ ಸಾಲದೆ ನಿರ್ಭಿಡೆಯನ್ನೇ ಸತ್ಯದ ಸಾಧನೆಯೆಂದು ಭಾವಿಸಿ ಏಕಾಂಗಿಯಾಗಿ ಹೊರಪಡುತ್ತಿರುವ ಕೆಲವರ ಇಂದಿನ ವಿಮರ್ಶೆಯ ಪ್ರವೃತ್ತಿಯೇ ಒಂದು ದುರಂತವೆಂದು ವಿಷಾದದಿಂದ ಹೇಳಬೇಕಾಗುತ್ತದೆ. ಈ ಲೇಖನದಲ್ಲಿ ಇನ್ನೂ ಕೆಲವು ಅಭಿಪ್ರಾಯಗಳಿದ್ದು ಅವುಗಳಲ್ಲಿ ಮೇಲಿನ ಧಾಟಿಯೇ ಇರುವುದರಿಂದ ಚರ್ಚಿಸುವುದು ಅನಗತ್ಯ.[೨೬]

ಇಲ್ಲಿ ಇಂದಿನ ವಿಮರ್ಶಕರು ಹಾಗೂ ವಿಮರ್ಶೆಯ ಹಾದಿಯ ತೊಂದರೆಗಳನ್ನು ಕುರಿತು ಹೇಳುತ್ತಿದ್ದಾರೆ. ಒಂದು ಅಭಿಪ್ರಾಯ ಮಂಡಿಸುವಾಗ ತಾನು ಹೊಂದಬೇಕಾದ ಜ್ಞಾನವೂ ಕೂಡ ಪದಶಃ ಅರ್ಥವಂತಿಕೆಯನ್ನು ಗ್ರಹಿಸುವ ಶಕ್ತಿಯಿರಬೇಕು. ನಿರ್ಭಿಡೆಯ ಹಾದಿಯನ್ನೇ ನಂಬಿದ ವಿಮರ್ಶೆಗಳು ಉಳಿಯುವುದಿಲ್ಲ ಜೊತೆಗೆ ಒಂದು ಅಧ್ಯಯನವನ್ನು ಬೆಳೆಸದೆ ಮೊಟಕು ಮಾಡುವ ಸೀಮಿತ ಜ್ಞಾನವಾಗುತ್ತವೆ ಎಂಬ ವಿಶಾಲ ಅರ್ಥ ಇವರಲ್ಲಿ ಕಂಡು ಬರುತ್ತದೆ.

ಮುಗಳಿ ಅವರ ಇನ್ನೊಂದು ಚರ್ಚೆಯೆಂದರೆ 'ಬೇಂದ್ರೆಯವರು ಜೀವನಿಷ್ಠರು, ಆಧ್ಯಾತ್ಮ ಪ್ರವಣರು ಎಂದು ಹೇಳಬಹುದೇ ಹೊರೆತು ಅನುಭಾವ ಸಂಪ್ರದಾಯದವರೆಂದಲ್ಲ.' ಈ ಮಾತನ್ನೇ ಮುಂದುವರೆಸಿ ಆಧ್ಯಾತ್ಮ ಪ್ರವಣತೆಯ ಮೂಲಕ ಅವರು ಅನುಭಾವದ ಸೀಮೆಯಲ್ಲಿ ಸುಳಿದಾಡಿದ್ದಾರೆ. ಈ ಚರ್ಚೆಯನ್ನು ಕುರ್ತಕೋಟಿ ಅವರ 'ಬೇಂದ್ರೆಯವರ ಕಾವ್ಯದಲ್ಲಿ ಶ್ರುತಿ ಮತ್ತು ಕೃತಿ' ಎಂಬ ಕೃತಿಯಲ್ಲಿ ಚರ್ಚಿತ ವಿಷಯಕ್ಕಾಗಿ ತಂದಿದ್ದಾರೆ. ಕುರ್ತಕೋಟಿ ಅವರು

> ಬೇಂದ್ರೆಯವರ ಕಾವ್ಯದ ದುರ್ಭೋಗದತೆಗೂ ಇಂಥ ವಿಷಮ ಪರಿಸ್ಥಿತಿಯೇ ಕಾರಣವಾಗಿದೆ. ಶ್ರೀ ಯು. ಆರ್ ಅನಂತಮೂರ್ತಿ ಅವರು ತಮ್ಮ ಇತ್ತೀಚಿನ 'ಋಜುವಾತು' ಸಂಚಿಕೆಯಲ್ಲಿ ಬರೆದ ಒಂದು ಲೇಖನದಲ್ಲಿ ('ಗಾಳಿ ಕಡೆಯಲು ಸೆಟೆದ ಬೆಳ್ಳಿಮಂತು'–'ಋಜುವಾತು'–ಜುಲೈ–ಸೆಪ್ಟಂಬರ್ ೧೯೮೩) ಈ ಸಮಸ್ಯೆಯನ್ನು ಕುರಿತು ಚರ್ಚಿಸಿ, ಬ್ಲೇಕ್, ಯೇಟ್ಸ್ ಮೊದಲಾದವರಂತೆ ಬೇಂದ್ರೆಯವರೂ ಅನುಭಾವ ಸಂಪ್ರದಾಯದವರೆಂದು ಕರೆದಿದ್ದಾರೆ. ಈ ಮಾತು ಮೇಲುನೋಟಕ್ಕೆ ಸತ್ಯವೆಂದೇ ತೋರುತ್ತದೆ. ಆದರೆ ಲೇಖಕರು ಹೇಳಿಲ್ಲವಾದರೂ ಈ ಮಾತು ಕೊನೆಗೆ ಕೊನೆಗೆ ಅನುಭಾವ ಮತ್ತು ವೈಚಾರಿಕತೆಗಳ ಸಂಘರ್ಷವೆಂಬಂತೆ ತೋರುತ್ತದೆ. ಆದರೆ ಎರಡೂ ಪಕ್ಷಗಳಲ್ಲಿ ವೈಚಾರಿಕತೆ ಇದೆ. ಎಂಬ ಮಾತನ್ನು ಒಪ್ಪಿಕೊಳ್ಳಲೇಬೇಕು.[೨೭]

ದ್ವಂದ್ವದಲ್ಲಿ ಸುಳಿಯುವ ಈ ಕುರ್ತಕೋಟಿ ಅವರ ಈ ತೀರ್ಮಾನವನ್ನು ಮುಗಳಿ ಅವರು ನೇರವಾಗಿ ತಿರಸ್ಕರಿಸಿದ್ದಾರೆ. ಅದಕ್ಕೆ ಅನಂತಮೂರ್ತಿ ಅವರ ಹೇಳಿಕೆಯನ್ನಿಟ್ಟು ಸಮರ್ಥ ಉತ್ತರ ನೀಡುತ್ತಾರೆ.

> 'ಯಾವುದರಿಂದಲೂ ಜರ್ಜರಿತವಾಗದಂತೆ ಕಾಣುವ ಕಲ್ಯಾಣದೃಷ್ಟಿ ಇವರ ಕಾವ್ಯದಿಂದ ಹುಟ್ಟಿ ಬರುತ್ತದೆ. ಈ ಬೇಂದ್ರೆ ಕಾವ್ಯದಲ್ಲಿಯೇ ಬೇಂದ್ರೆ ವ್ಯಕ್ತಿತ್ವದ ಅನಿವಾರ್ಯತೆಯಿಲ್ಲದೆ ಹುಟ್ಟಿಬರುವ, ಸಂಸ್ಕೃತಿಯಿಂದಾಗಿ ಸುಸೂತ್ರವಾದ ಭೋಳೆತನದ ತನ್ಮಯತೆಯೂ ಇದೆ.' ಎಂದು ಅನಂತಮೂರ್ತಿ ಅವರು ಅಭಿಪ್ರಾಯಿಸಿದ್ದಾರೆ. ಈ ಅಭಿಪ್ರಾಯದ ಹಿಂದೆ 'ಅರವಿಂದರ ಅನುಯಾಯಿಗಳಾದ ಆಧ್ಯಾತ್ಮವಾದಿ ಲೇಖಕ ಕೆಲವರಲ್ಲಿ ದೇಹವೇ ಇಲ್ಲದ ಆತ್ಮದ ಚಿತ್ರ ಹೆಚ್ಚಾಗಿ ಕಾಣುತ್ತದೆ' ಎಂಬ ತಿಳುವಳಿಕೆಯಿರಬೇಕೆಂದು ಕಾಣುತ್ತದೆ. ಅನಂತಮೂರ್ತಿಯವರು ಅರವಿಂದರ ಪ್ರಮುಖ ಕೃತಿಗಳನ್ನು ಓದಿದ್ದರೆ ದೇಹ, ಆತ್ಮ ಎರಡರ ಪರಿಪೂರ್ಣತೆಯ ಚಿತ್ರ ಕಂಡಿರಬೇಕು. ಅರವಿಂದರ ಅನುಯಾಯಿಗಳಾಗಿ ತಮ್ಮ ರೀತಿಯಲ್ಲಿಯೇ ಬೆಳೆದು ಬಂದ ಬೇಂದ್ರೆ ಅವರು ವರ್ತಮಾನ ಜಗತ್ತಿನ ಜಟಿಲ ಸಮಸ್ಯೆಗಳಿಂದ

ತ್ರಸ್ತರಾಗಿದ್ದರು. ಆದರೆ ಜರ್ಜರಿತರಾಗಿರಲಿಲ್ಲ. ಯಾಕೆಂದರೆ ಭವಿಷ್ಯದ ಬಗ್ಗೆ ಆಶಾವಾದಿಯಾಗಿದ್ದರು. ಇದನ್ನು ಕಲ್ಯಾಣದೃಷ್ಟಿಯೆಂದು ಕರೆದರೆ ತಪ್ಪಿಲ್ಲ. ಆದರೆ 'ವ್ಯಕ್ತಿತ್ವದ ಅನಿವಾರ್ಯತೆಯಿಲ್ಲದೆ ಹುಟ್ಟಿ ಬರುವ.. ಸುಸೂತ್ರವಾದ ಭೋಳೆತನದ ತನ್ಮಯತೆ' ಅವರಲ್ಲಿರಲಿಲ್ಲ. ಶಕ್ತಿಯುತವಾದ ಒಳ್ಳೆಯತನವು ಅದರ ಗುರಿಯಾಗಿತ್ತು, ಸಾಧನೆಯಾಗಿತ್ತು.[೨೮]

ರಂ.ಶ್ರೀ. ಮುಗಳಿ ಅವರ ಈ ಚಿಂತನೆಯಲ್ಲಿ ಈ ಪ್ರಬಂಧದ ಮುಖ್ಯ ಉದ್ದೇಶದ ಕಡೆ ಸಾಗುತ್ತದೆ. ವಸಾಹತುಶಾಹಿ ಪ್ರಭಾವಕ್ಕೆ ಕವಿಗಳು ಸ್ಪಂದಿಸಿದ ರೀತಿಯನ್ನು ಅಧ್ಯಯನ ಮಾಡುವುದೇ ಆಗಿದೆ. ಪೂರಕವಾಗಿ ಸಮಕಾಲೀನ ವಿಮರ್ಶೆಗಳನ್ನು ಅವುಗಳ ಒಳನೋಟಗಳ ಮೂಲಕ ಚರ್ಚಿಸಿದ್ದಾರೆ.

ಗೋಕಾಕ್ ಅವರ 'ಬೇಂದ್ರೆಯವರ ಕಾವ್ಯ ಮತ್ತು ವ್ಯಕ್ತಿತ್ವ', ಮುಗಳಿ ಅವರ 'ಬೇಂದ್ರೆ ಕಾವ್ಯ'., ಶಿವರುದ್ರಪ್ಪ ಅವರ 'ಬೇಂದ್ರೆಯವರ ಕಾವ್ಯ ಸೃಷ್ಟಿಯ ಸ್ವರೂಪ'., ದುರ್ಗಾದಾಸ ಕೆ. ಆರ್. ಅವರ 'ಬೇಂದ್ರೆ: ದೃಷ್ಟಿ, ಧೋರಣೆ, ವ್ಯಕ್ತಿತ್ವ'., ದೊಡ್ಡರಂಗೇಗೌಡರ 'ಭಾವಗೀತಕಾರ'., ಶ್ರೀಕಂಠ ಕೊಡಿಗೆ ಅವರ 'ಶ್ರಾವಣಕ್ಕೆ ಹೊಸ ಹರೆ'., ಕೃಷ್ಣಪ್ಪ .ಜಿ ಅವರ 'ನಮ್ಮೆಲ್ಲರ ಮನದ ಕವಿ'., ಸಿದ್ಧಾಶ್ರಮ ಸಿ.ಪಿ. ಅವರ 'ಬೇಂದ್ರೆ ಕಾಳಜಿ'., ರಾಜೇಂದ್ರ ಡಿ.ಕೆ. ಅವರ 'ಬೇಂದ್ರೆ: ಒಂದು ಟಿಪ್ಪಣಿ'., ವೃಷಬೇಂದ್ರಸ್ವಾಮಿ ಅವರ 'ಸಮರಸ ಜೀವನದ ದಾರ್ಶನಿಕ ಕವಿ' ಸುಮತೀಂದ್ರ ನಾಡಿಗರ 'ಇಲ್ಲೇ ಇದ್ದವರು'., ಎಡ್ವರ್ಡ್ ನೊರೋನ ಅವರ 'ವ್ಯಕ್ತಿತ್ವದ ಸಹಜ ಎತ್ತರ'., ಅನಂತಮೂರ್ತಿ ಯು. ಆರ್ ಅವರ 'ಯುಗದ ಕವಿ ಬೇಂದ್ರೆ'., ಅರವಿಂದ ಮಾಲಗತ್ತಿ ಅವರ 'ಬೇಂದ್ರೆಯವರ ಕಾವ್ಯ ಮತ್ತು ಸಾಮಾಜಿಕ ಪ್ರಕ್ರಿಯೆ'., ಶಿವರಾಮ ಕಾಡನಕುಪ್ಪೆ ಅವರ 'ಬೇಂದ್ರೆಯವರ ಸಾಹಿತ್ಯ ವಿಮರ್ಶೆಯ ಮಿತಿಗಳು' ಹೀಗೆ ಬೇಂದ್ರೆ ಅವರನ್ನು ವ್ಯಕ್ತಿತ್ವದ ಮೂಲಕ ಪ್ರವೇಶ ಮಾಡಿದ ವಿಮರ್ಶಕರ ಹಲವು ಲೇಖಗಳನ್ನು ಇಲ್ಲಿ ಗಮನಿಸಬಹುದಾಗಿದೆ.

ಬೇಂದ್ರೆ ಅವರ ಅರಳು-ಮರಳು ಕೃತಿಗೆ ಮುನ್ನುಡಿ ಬರೆದ ವಿ. ಕೃ. ಗೋಕಾಕ್ ಅವರು ಇಲ್ಲಿ ಕವಿಯನ್ನು ಆರ್ಷದೃಷ್ಟಿಯಿಂದ ಗಮನಿಸಿರುವುದನ್ನು ಕಾಣಬಹುದು. ವ್ಯಕ್ತಿ, ವ್ಯಕ್ತಿತ್ವ ಹಾಗೂ ಆತನೊಳಗೆ ಒಡಮೂಡಿದ ಅಂಬಿಕಾತನಯ ದತ್ತ ಎಂಬ ಕಾವ್ಯ ಜಗತ್ತಿನ ಪರಿಚಯವನ್ನು ಇಲ್ಲಿ ಸೂಕ್ಷ್ಮವಾಗಿ ಮಂಡಿಸುತ್ತಾರೆ. ಇದು ವ್ಯಕ್ತಿತ್ವ ಸಮಗ್ರತೆಯನ್ನು ಅದರ ಅಧ್ಯಯನ ಕೌಶಲವನ್ನು ಪರಿಶೀಲಿಸುವ ಪರಿಯಾಗಿದೆ. ಇಲ್ಲಿ ಗೋಕಾಕರು ತಾವು ಗೆಳೆಯರ ಗುಂಪಿನಲ್ಲಿ ಕಂಡುಕೊಂಡ ಬೇಂದ್ರೆ ಅವರ ವ್ಯಕ್ತಿತ್ವ ಸರ್ವತೋಮುಖವಾಗಿ ಸಹೃದಯರೊಂದಿಗೆ ಹಂಚಿಕೊಂಡ ರೀತಿಯನ್ನು ಗಮನಿಸಲಾಗಿದೆ.

ಬೇಂದ್ರೆಯುವರ ಅರವತ್ತರ ಅರಿವನ್ನು ಅಡಿನೆಲವಾಗಿರಿಸಿಕೊಂಡು ಇಲ್ಲಿ ಅಂಬಿಕಾತನಯದತ್ತನ ಅರಳು-ಮರಳು ಹಬ್ಬಿದೆ. ಆನಂತ್ಯದ ದೃಷ್ಟಿಕೋನದಿಂದ ಇಲ್ಲಿ ವಿಶ್ವದ ಹಾಗೂ ನಿಸರ್ಗದ ಚೆಲುವು-ಗೆಲುವುಗಳ ಹಾಗೂ ನೋವು-ಸಾವುಗಳ ನಿರೂಪಣೆಯಿದೆ. ಇದೇ ದೃಷ್ಟಿಯಿಂದ ವಿಶ್ವಮಾನವನು ಇಲ್ಲಿ ಜಗತ್ತಿನ, ಭಾರತದ ಹಾಗೂ ಕನ್ನಡ ನಾಡಿನ ಪ್ರಶ್ನೆಗಳನ್ನು ಪರಿಕಿಸಿದ್ದಾನೆ; ವ್ಯಕ್ತಿ-ಸಮಾಜಗಳ ದೈವ-ದುರ್ದೈವಗಳ ಮೇಲೆ

ಬೆಳಕು ಕೆಡವಿದ್ದಾನೆ. ನಮ್ಮ ಸುತ್ತ-ಮುತ್ತಣ ಪ್ರಶ್ನೆಗಳನ್ನು ಇಂತಹ ದೃಷ್ಟಿಯ ಬಳಕಿನಲ್ಲಿ ನೋಡುವ ಅವಕಾಶ ದೊರೆತಿರುವುದು ನಮ್ಮ ನಾಡಿನ ಹಾಗೂ ನಮ್ಮ ತಲೆಮಾರಿನ ಪುಣ್ಯ. ಉಳಿದ ಪ್ರಾಂತ್ಯಗಳಲ್ಲಿಯ ಜನತೆ ಅಲ್ಲಲ್ಲಿ ಈ ಕಾವ್ಯದ ರಸಸ್ಪರ್ಷವನ್ನು ಪಡೆದಿದೆ. ಇದಕ್ಕೂ ಮುಂದಿನ ಈ ಕಾವ್ಯ ಕೀರ್ತಿ ನಮ್ಮ ನಾಡಿನ ಜೀವನದ ವಿಕಾಸವನ್ನೇ ಅವಲಂಬಿಸಿದೆ.[೨೯]

ಇಲ್ಲಿ ಐದು ವಿಭಾಗಗಳಲ್ಲಿ ತೆರೆದುಕೊಳ್ಳುವ ಸಾಹಿತ್ಯ ವಿಮರ್ಶೆಯು ಮುನ್ನಡಿ ಬರಹದ ರೂಪುರೇಷೆಗೆ ಹೊಸ ಆಯಾಮ ತಂದಿದೆ ಎನ್ನಬಹುದು. ಒಂದು ಸಾಹಿತ್ಯ ಕೃತಿಯನ್ನು ನಮ್ಮ ತಲೆಮಾರಿನ ಹಿರಿಮೆಯೆಂದು ಸ್ವೀಕರಿಸುವ ಸಮನ್ವಯ ಮನೋಭೂಮಿಕೆಯಲ್ಲಿ ಯಾವುದೇ ಅಭಿಮಾನದ ಬಿಗುವಿಲ್ಲ. ಸಹಜವಾದ ಅರ್ಥ ಸಾಂದ್ರತೆಯನ್ನು ಕಂಪಿಸುವ ಇವರ ಬರೆಹದಲ್ಲಿ ಕವಿಯ ಎಲ್ಲಾ ಕವನ ಸಂಕಲನಗಳ ಸೂಕ್ಷ್ಮ ಒಳನೋಟದ ವಿಮರ್ಶೆಯನ್ನು ನೀಡುತ್ತಾರೆ. ಕೆಲವು ಕವಿತೆಗಳು ತನ್ನೊಳಗೆ ಉಂಟು ಮಾಡುವ ದರ್ಶನವನ್ನು ಕೂಡ ಗಮನಿಸುತ್ತಾರೆ. ಬೇಂದ್ರೆ ಅವರು ಪ್ರಯೋಗಪ್ರಿಯರಾಗಿ ತನ್ನ ಕವಿತೆಗಳನ್ನು ವಿಸ್ತರಿಸುವ ಕ್ರಮವನ್ನು ತಿಳಿಸಿದ್ದಾರೆ. ಮೂರು ಹಾಗೂ ನಾಲ್ಕನೇ ಭಾಗದಲ್ಲಿ ಅಧ್ಯಯನದ ಕೀಲಿಗಳನ್ನು ನೀಡುವ ಈ ವಿಮರ್ಶಾ ಗುಣವು ಸೂಕ್ತವಾಗಿ ನಮಗೆ ಅಗತ್ಯವಿದೆ ಎನಿಸುತ್ತದೆ. ಅರಳು-ಮರಳು ಸಂಕಲನದ ಕವಿತೆಗಳನ್ನು ವಿಮರ್ಶಿಸುತ್ತಾ ಅಂತರ್ ಲೋಕ, ಪರಿಣತ ಜ್ಞಾನದ ಮಿತ್ರ ಸಮ್ಮಿತ, ತಾಳಲಯದ ಹೊಸತನ ಹೀಗೆ ಪ್ರತಿ ಕವಿತೆಗಳಲ್ಲಿ ಅಡಗಿರುವ ಸಹಜತೆಯನ್ನು ಒಂದು ಕಿರುರೂಪದಲ್ಲೇ ಬೆಳಕಾಗಿಸಿದ್ದಾರೆ. ಮುನ್ನುಡಿಯ ಕೊನೆಯಲ್ಲಿ ತನ್ನ ಬರಹವನ್ನು ಇದೊಂದು ಸ್ಥೂಲ ನಕಾಶೆ ಎಂದು ಕಾವ್ಯದ ಮಲೆನಾಡಿನಲ್ಲಿ ಸಂಚರಿಸಲು ಇಲ್ಲವೆ ವಿಹರಿಸಲು ಅವಕಾಶವೊದಗಿಸುವ ಈ ಬರಹ ವ್ಯಕ್ತಿತ್ವದ ನೆಲೆಯೊಂದಿಗೆ ಕೃತಿನಿಷ್ಠ ಅಧ್ಯಯನಕ್ಕೆ ಸಹಾಯವಾಗುತ್ತದೆ ಎನ್ನಬಹುದು.

'ಬೇಂದ್ರೆಯವರ ಕಾವ್ಯ ಹಾಗೂ ವ್ಯಕ್ತಿತ್ವದ ಕೆಲವು ಮುಖಗಳು' ಎಂಬ ಲೇಖನದಲ್ಲಿ ಗೋಕಾಕ್ ಅವರು ೧೯೭೭ರ ವರೆಗಿನ ಬೇಂದ್ರೆಯವರ ಕಾವ್ಯದ ಸಮಗ್ರೀಕೃತ ಒಟ್ಟಂದವನ್ನು ಹಿಡಿದಿಡುವಲ್ಲಿ ಅವರ ವಿಮರ್ಶೆಯ ಹೆಜ್ಜೆ ಸಾಗುತ್ತದೆ. ಕೃತಿಯೊಳಗೆ ನುಸುಳುವ ವಿಮರ್ಶಕ ಒಂದು ಕವಿತೆಯಿಡಿದು ಆಚೆ ಬರುತ್ತಾನೆ. ಇಲ್ಲವೇ ಒಂದು ಕವಿತೆಯ ನೆನಪಿನಿಂದ ಕೃತಿಯ ಆಂತರ್ಯವನ್ನು ಪ್ರವೇಶಿಸುತ್ತಾನೆ. ಆದರೆ ಎರಡೂ ದಿಕ್ಕಿನಲ್ಲೂ ಈ ವಿಮರ್ಶಕನಿಗೆ ಕವಿಯ ವ್ಯಕ್ತಿತ್ವದ ಮೊಗಸಾಲೆಯಲ್ಲಿ ಆತನ ಕವಿತೆಗಳೇ ಸೂಕ್ಷ್ಮವಾಗಿ ಕೆಲಸಮಾಡುತ್ತವೆ ಎನ್ನಬಹುದು. ಗೋಕಾಕ್ ಅವರ ಈ ವಿಮರ್ಶೆಯ ರೂಪದಲ್ಲಿಯೇ ಕೀರ್ತಿನಾಥ ಕುರ್ತಕೋಟಿ ಅವರ ವಿಮರ್ಶೆಗಳೂ ಕೂಡ ಅಧ್ಯಯನಕ್ಕೆ ದೊರಕುತ್ತವೆ. ಏಕೆಂದರೆ ಈ ವಿಮರ್ಶಕರ ಬರಹಗಳನ್ನು ಬಿಡಿಬಿಡಿಯಾಗಿ ಅಧ್ಯಯನ ಮಾಡಬೇಕೇ ಹೊರೆತು ತೌಲನಿಕ ಅಧ್ಯಯನಕ್ಕೆ ಇಲ್ಲಿ ಅವಕಾಶವಿಲ್ಲ. ಇದ್ದರೂ ಜೊತೆ ನಿಲ್ಲುವ ಬರಹಗಳಾಗುತ್ತವೆಯೇ ಹೊರೆತು ಇವರ ವಿಮರ್ಶೆಗೆ ಹೊಸ ಉತ್ತರಗಳಾಗಲಾರವು. ಈ ರೂಪವನ್ನೇ ನಾವು ಸಹೃದಯ ವಿಮರ್ಶೆ ಎನ್ನಬಹುದು. ವಿ. ಕೃ ಗೋಕಾಕ್ ತಮ್ಮ ಬರಹದಲ್ಲಿ ಸಹೃದಯ ವಿಮರ್ಶೆಯನ್ನು ಪೂರ್ಣವಾಗಿ ಅನುಭವಿಸುತ್ತಾರೆ ಎನ್ನಬಹುದು.

> ಬೇಂದ್ರೆಯವರು ನಿರ್ಮಿಸಿದ ಸಾಹಿತ್ಯವನ್ನು ವಿಮರ್ಶಿಸಿದಾಗ, ಅವರ ಮೇಧಾಶಕ್ತಿಯ ಆಳ ಮತ್ತು ವ್ಯಾಪ್ತಿಯ ಅರಿವುಂಟಾಗುತ್ತದೆ. ಅವರ ಮೂಲಭೂತ ದೃಷ್ಟಿ, ಕವಿ ಹಾಗೂ ಋಷಿಯ ದೃಷ್ಟಿ 'ಗರಿ'ಯಿಂದ ಹಿಡಿದು 'ನಮನ'ದವರೆಗೆ, ಇಪ್ಪತ್ತಕ್ಕಿಂತಲೂ ಹೆಚ್ಚು ಕಾವ್ಯ ಸಂಕಲನಗಳನ್ನು ಅವರು ರಚಿಸಿದ್ದಾರೆ. ಸಖೀಗೀತದಂತಹ ಕಾವ್ಯದಲ್ಲಿ ಅವರು ವರ್ಡ್ಸ್‌ವರ್ಥ್ ಕವಿಯ 'ದಿ ಪ್ರಿಲ್ಯೂಡ್'ನ ಮಹಾಕಾವ್ಯ ಲಕ್ಷಣಗಳುಳ್ಳ ರಚನೆಯನ್ನು ಸಮೀಪಿಸುತ್ತಾರೆ.[೩೦]

ವಿಮರ್ಶೆಯ ಈ ಅಂಶವನ್ನು ಇಲ್ಲಿ ತೆಗೆದುಕೊಳ್ಳಲು ಹಲವು ಕಾರಣಗಳನ್ನು ನೀಡಬಹುದು. ಸಮಗ್ರೀಕರಣ ವಿಮರ್ಶೆ ಎಂದರೆ ಈ ಸ್ಪುಟತ್ವದ ನೆಲೆಯಲ್ಲಿಯೇ ಗಮನಿಸಬಹುದು. ಒಬ್ಬ ಕವಿಯ ಕಾವ್ಯ ಶಕ್ತಿಯನ್ನು ಸಾಹಿತ್ಯದ ಹಲವು ಬೇರುಗಳಿಂದ ಶೋಧಿಸುವ ನೆಲೆಯನ್ನು ಗಮನಿಸಬಹುದು. ಕೆಲವೇ ಪದಗಳು ಪೂರ್ವಕ್ಕೂ, ಅದರಾದಿಯ ಬೆಳವಣಿಗೆಗಳ ನೈಜತೆಗೂ, ಪೌರಾತ್ಯ ಮತ್ತು ಪಾಶ್ಚಿಮಾತ್ಯ ಕಾವ್ಯ ಚಿಂತನೆಗಳ ಸಾಂಕೇತಿಕ ದರ್ಶನವಾಗುವ ಪರಿಗೂ ಇಲ್ಲಿ ನೋಟ ಚೆಲ್ಲಿದ್ದಾರೆ ಎನ್ನಬಹುದು. ಹಾಗೇಯೇ ಆಧುನಿಕ ಜಗತ್ತಿನ ಹೊಸ ಆಯಾಮಗಳಿಗೆ ಬೇಂದ್ರೆಯವರ ಕಾವ್ಯ ಪುಟಿದು ನಿಲ್ಲುವ ಅನಂತತೆಯ ಕ್ರಾಂತಿ ಬೀಜಗಳಿರುವ ಅವಲೋಕನಗಳನ್ನು ಗಮನಿಸಿದ್ದಾರೆ. ಇಂತಹ ಸಹೃದಯ ವಿಮರ್ಶೆಗಳು ನಮ್ಮನ್ನು ಅಮೂಲಾಗ್ರ ಓದುವಿಗೆ ತೊಡಗುವಂತೆ ಮಾಡುವಲ್ಲಿ ಯಶಸ್ವಿಯಾಗುತ್ತವೆ.

೧೯೮೩ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ವಿ. ಕೃ. ಗೋಕಾಕ್ ಅವರು ಮಾಡಿದ ಭಾಷಣದಲ್ಲಿ 'ಬೇಂದ್ರೆಯವರ ಕಾವ್ಯಗುಣ ಹಾಗೂ ಪ್ರಯೋಗಶೀಲತೆ' ಎಂಬ ವಿಷಯದೊಂದಿಗೆ ಚರ್ಚಿಸಿದ್ದಾರೆ. ಬೇಂದ್ರೆ ಹಾಗೂ ಗೋಕಾಕರ ಒಡನಾಟವನ್ನು 'ಬಾಳದೇಗುಲದಲ್ಲಿ' ಎಂಬ ಕೃತಿಯಲ್ಲಿ ಚರ್ಚಿಸಿದ್ದಾರೆ. ಆದರೆ ಇಲ್ಲಿ ಗೆಳೆಯರ ಗುಂಪಿನೊಂದಿಗೆ ಬೇಂದ್ರೆ ಅವರ ಸಾಹಿತ್ಯವು ಹಾಗೂ ಕಾವ್ಯಗುಣದ ಅಭಿವ್ಯಕ್ತಿಯು ಕಂಡುಬರುವ ವಿಚಾರಗಳನ್ನು ಇಲ್ಲಿ ಹಂಚಿಕೊಂಡಿದ್ದಾರೆ. ಗೆಳೆಯರ ಗುಂಪಿನ ರೂಪುರೇಖೆಯನ್ನು ವಿ. ಕೃ. ಗೋಕಾಕ್ ತಮ್ಮ 'bendre: poet and seer' ಎಂಬ ಆಂಗ್ಲ ಲೇಖನದಲ್ಲಿ ವಿಸ್ತರಿಸಿದ್ದಾರೆ. 'ಮಲ್ಲಾಡದ ಗಿಣಿಯೆ' ಎಂಬ ಕವಿತೆಯು ಸ್ಪಷ್ಟಪಡಿಸುವ ಗೆಳೆಯರ ಗುಂಪಿನ ಒಡನಾಟವನ್ನು ಸವಿಸ್ತಾರವಾಗಿ ಇಲ್ಲಿ ಚರ್ಚಿಸಿದ್ದಾರೆ.

> ಮಲ್ಲಾಡದ ಗಿಣಿಯೆ ಕವಿತೆಯ ರಚನಾ ಕಾಲವು ಕಷ್ಟದ ಕಾಲಕ್ಕೆ ಸಮೀಪವಾದುದರಿಂದ ಅದರಲ್ಲಿ ಸಂಕಟದ ಸನ್ನಿವೇಶವೇ ಹೆಚ್ಚಾಗಿ ವರ್ಣಿತವಾಗಿದೆ. ಈ 'ಭಾವಗೀತ'ದಲ್ಲಿ ಗುಂಪಿನ ಎಳೆಗನಸುತನವನ್ನು ಹಾಗೂ ಮುಂದೆ ತಿಳಿಯಲಿರುವ ಸೌಂದರ್ಯದ ಸಂತೋಷವನ್ನು ಕವಿಯು ಹೆಚ್ಚಾಗಿ ಬಣ್ಣಿಸುತ್ತಾನೆ.[೩೧]

ಈ ರೀತಿಯಲ್ಲಿ ಕಾವ್ಯ ಹಾಗೂ ವ್ಯಕ್ತಿತ್ವಗಳು ಸಮನ್ವಯಗೊಳ್ಳುತ್ತಾ ಸಾಗುವ ನೆಲೆಯನ್ನು ತಿಳಿಸಿದ್ದಾರೆ.

ಕವನಗಳನ್ನು ಹಾಡುತ್ತಾ ದೋಷಗಳನ್ನು ಮರೆಮಾಚಲಾಗುತ್ತದೆ ಎಂಬ ವಿಮರ್ಶಕರ ಅಭಿಪ್ರಾಯಗಳಿಗೆ ಬೇಂದ್ರೆ ಅವರು ಕವಿತೆಯನ್ನು ಓದುತ್ತಾ ಜನರಲ್ಲಿ ಕಾವ್ಯವನ್ನು ಉಳಿಸುವ ಸಂಪ್ರದಾಯ ಬೆಳಸಿದ ಪರಿಯನ್ನು ಗೋಕಾಕ್‌ರು ಸೂಚಿಸಿದ್ದಾರೆ. ಕವಿತೆಯ ಸಫಲತೆಯ ಪ್ರಶ್ನೆ

ಬಂದಾಗ ಎಂಬ ಗೋಕಾಕ್ ಕೆಲವು ವಿಮರ್ಶಕರ ಅಸಮಂಜಸ ಹೇಳಿಕೆಗಳಿಗೆ ಈ ರೀತಿ ಉತ್ತರ ನೀಡುತ್ತಾರೆ.

> ಸಫಲತೆಯು ವಿಮರ್ಶೆಯ ಮೌಲಿಕ ದೃಷ್ಟಿಯನ್ನು ಅಳತೆಗೋಲನ್ನು ಆರೋಪಿಸುವುದೆಂದರೆ, ಪಯಣಕ್ಕೆ ಹೆಜ್ಜೆ ಇಟ್ಟಾಗಲೇ ಎಡವಿದಂತಾಗುತ್ತದೆ. ಪ್ರತಿಯೊಂದು ಕವನ ತನ್ನದೇ ಆದ ಅಳತೆಗೋಲಿನ ತತ್ವದೊಡನೆ ಹುಟ್ಟಿ ಬಂದಿರುತ್ತದೆ. ಅವುಗಳನ್ನು ಎಷ್ಟರ ಮಟ್ಟಿಗೆ ಕವನವು ರಕ್ಷಿಸಿಕೊಂಡು ಬಂದಿದೆ ಎಂಬುದನ್ನು ನಾವು ಮೊದಲು ಶೋಧಿಸಬೇಕಾಗುತ್ತದೆ. ಸಾವಯವತೆಯಾಗಲಿ, ಏಕಸೂತ್ರತೆಯಾಗಲಿ, ಕಾವ್ಯದ ಒಂದೊಂದು ರೀತಿ ಮಾತ್ರ, ಅದನ್ನೇ ಕಾವ್ಯದ ಏಕೈಕ ಮಾರ್ಗವೆಂದು ತಿಳಿದರೆ ವಿಮರ್ಶೆಯ ನಿಲುವು ಅಷ್ಟರವಟ್ಟಿಗೆ ಸೀಮಿತವಾಗುತ್ತದೆ.[೨]

ಇದೇ ಭಾಷಣದಲ್ಲಿ ಕವಿತೆ ಎಂದರೇನು, ಕಾವ್ಯದ ನೆಲೆಗಳಾವವು, ಬೇಂದ್ರೆ ಅವರು ಕಂಡುಕೊಂಡ ಕಾವ್ಯದ ನೆಲೆಯ ಸಹಜತೆಯೇನು ಎಂಬುದನ್ನು ಸ್ಪಷ್ಟಪಡಿಸುತ್ತಾರೆ. ಈ ದೃಷ್ಟಿಯಲ್ಲಿ ವಿಮರ್ಶಕನ ಜವಾಬ್ದಾರಿಗಳನ್ನು ಕೂಡ ಇಲ್ಲಿ ಸ್ಪಷ್ಟಪಡಿಸಿದ್ದಾರೆ.

> ವಿಮರ್ಶೆಯು ಬಲುತೊಡಕಿನ ಕೆಲಸ. ಅದರಿಂದ ಒಟ್ಟಿಗೆ ಕಾವ್ಯಕ್ಕೆ ಸಹಾಯವಾಗದಿದ್ದರೂ ಅನ್ಯಾಯವಾಗಿರಬಾರದು. ಒಂದು ದೋಷವನ್ನು ಎತ್ತಿ ತೋರಿಸಬೇಕಾದಾಗ ಎಲ್ಲ ದೃಷ್ಟಿಕೋನಗಳಿಂದಲೂ ಅದು ದೋಷವೇನೆಂಬುದನ್ನು ನಾವು ಪರೀಕ್ಷಿಸಬೇಕು. ತತ್ವಮೋಹ, ಶೈಲಿಮೋಹ, ಪ್ರತಿಮಾಮೋಹ, ಛಂದೋಮೋಹ– ಹೀಗೆ ಹಲವಾರು ಮೋಹಗಳು, ವಿಮರ್ಶಕನನ್ನು ಮುತ್ತಿಕೊಂಡು ಬರುತ್ತವೆ. ಒಮ್ಮೊಮ್ಮೆ, ಎತ್ತಿಕೊಂಡ ಕವಿಯ ಬಗ್ಗೆ ಒಂದು ಪೂರ್ವಗ್ರಹವು ಇಲ್ಲವೆ ಪೂರ್ವಾಭಿಪ್ರಾಯವು ವಿಮರ್ಶಕನಲ್ಲಿ ಇದ್ದಿರಬಹುದು. ಇವುಗಳನ್ನೆಲ್ಲಾ ಬದಿಗೆ ಸರಿಸಿಟ್ಟು ಶುದ್ಧ ಮುಕ್ತ ಮನಸ್ಸುಳ್ಳವನಾಗಿ ವಿಮರ್ಶಕನು ಕಾವ್ಯವನ್ನು ಅವಲೋಕಿಸ ಬೇಕಾಗುತ್ತದೆ. ಆಗ ವಿಮರ್ಶೆಗೆ ಒಂದು ಹೆಚ್ಚಿನ ಬೆಲೆ ಬರುವುದುಂಟು. ಇದೇ ರೀತಿಯಾಗಿ ಒಂದು ಕಾವ್ಯದ ಗುಣವನ್ನು ಮೆಚ್ಚಿಕೊಂಡಾಗ ಆ ಗುಣವನ್ನು ಇದ್ದಕ್ಕಿದ್ದ ಹಾಗೆ ಅತಿಶಯೋಕ್ತಿಗೆ ಎಡೆಗೊಡದೆ ವರ್ಣಿಸಬೇಕಾಗುತ್ತದೆ. ಈ ವಿಷಯದಲ್ಲೆಲ್ಲಾ ನಿರ್ವಿಕಾರದ ಭಾಷೆ ವಿಮರ್ಶಕನಿಗೆ ಅತ್ಯವಶ್ಯಕವಾಗಿದೆ.[೩]

ಇಂತಹ ವಿಮರ್ಶೆ ಮೂಲಕ ಬೇಂದ್ರೆ ಅವರ ಕಾವ್ಯದಲ್ಲಿ ಪ್ರತಿಭೆಯನ್ನು, ಗುಣದೋಷಗಳನ್ನು ಎತ್ತಿತೋರಿಸಲೆಂದು ವಿ. ಕೃ. ಗೋಕಾಕ್ ಅಭಿಪ್ರಾಯ ಪಟ್ಟಿದ್ದಾರೆ.

ರಾಘವೇಂದ್ರರಾವ ಕೆ. ಅವರ 'ಬೇಂದ್ರೆಯವರ ಕಾವ್ಯದಲ್ಲಿ ಸಮಾಜ ಪ್ರಜ್ಞೆ' ಎಂಬ ಲೇಖನವನ್ನು ಗಮನಿಸಿದಾಗ ಮೂರು ಆಯಾಮಗಳಲ್ಲಿ ಇವರು ಗ್ರಹಿಸಿದ್ದಾರೆ. ಮೌಲ್ಯಗಳು ಮತ್ತು ಅದರ ಆದರ್ಶಗಳು, ನೈತಿಕ ರೂಪಗಳು ಹಾಗೂ ರಾಜಕೀಯವಾದ ವಾತಾವರಣದ ಬಗ್ಗೆ ತೀಕ್ಷ್ಣವಾದ ಆಸಕ್ತಿ ಮತ್ತು ಅರಿವು ಈ ವಿಚಾರಗಳಲ್ಲಿ ಸಾಮಾಜಿಕ ಪ್ರಜ್ಞೆಯೊಂದಿಗೆ ಬೇಂದ್ರೆ ಅವರು ನಿರ್ವಹಿಸುವ ಹಲವು ದೃಷ್ಟಿಕೋನಗಳನ್ನು ಮಂಡಿಸಿದ್ದಾರೆ. ರಂ. ಶ್ರೀ. ಮುಗಳಿ ಅವರು ಹೇಳುವಂತೆ ಆಧ್ಯಾತ್ಮ ವಿಚಾರದ ತಾತ್ವಿಕತೆಯನ್ನು ರಾಘವೇಂದ್ರರಾವ್ ಕೂಡ ಮಂಡಿಸುತ್ತಾರೆ. ದೈವವಾದವೆಂಬುದು ಒಂದು ಭೌತಿಕ ತಳಹದಿಯ ಮೇಲೆ ನಿರ್ಮಿತವಾದ ಸೂಕ್ಷ್ಮತೆಯನ್ನು

'ಗರಿ' ಸಂಕಲನದ 'ಬೆಳಗು' ಕವಿತೆಯ ವಿಮರ್ಶೆಯೊಂದಿಗೆ ನೀಡುವ ಉತ್ತರ ಹಲವು ವಿಮರ್ಶಕರ ಪ್ರಶ್ನೆಗೆ ಹೊಸ ಆಯಾಮ ಒದಗಿಸುತ್ತದೆ.

> ... 'ಕಂಡಿತು ಕಣ್ಣು ಸವಿದಿತು ನಾಲಗೆ
> ಪಡೆದೀತೀ ದೇಹಾ
> ಸ್ಪರ್ಶಾ–ಪಡೆದೀತೀ ದೇಹಾ.
> ಕೇಳಿತು ಕಿವಿಯು ಮೂಸಿತು ಮೂಗು
> ತನ್ಮಯವೀಗೇಹಾ
>
> ದೇವರ_ದೀ ಮನಸಿನ ಗೇಹಾ' ಇಲ್ಲಿ ನಾವು ಭಾರತದ ಮತ್ತು ಅದರ ಒಂದು ಅಂಗವಾದ ಕರ್ನಾಟಕದ ಸಂಸ್ಕೃತಿಯ ಮೌಲ್ಯವನ್ನು ಕಾಣಬಹುದು. ದೈಹಿಕ–ದೈವಿಕ, ಇಹ–ಪರ, ಪ್ರಕೃತಿ–ಪುರುಷ, ಇವುಗಳ ಮೂಲಭೂತ ಸಂಬಂಧದಲ್ಲಿರುವ ನಂಬಿಕೆಯನ್ನು ನೋಡಬಹುದು. ಈ ನಂಬಿಕೆ ಪಾಶ್ಚಿಮಾತ್ಯ, ಅದರಲ್ಲಿಯೂ ಮಾರ್ಕ್ಸೇತರ ಸಂಪ್ರದಾಯದಲ್ಲಿ ನಾವು ಕಾಣುವುದಿಲ್ಲ. ಅಲ್ಲಿ ಪ್ರಕೃತಿ ಮತ್ತು ಮಾನವರ ವಿರಸ ಮತ್ತು ಹೋರಾಟವನ್ನೇ ಹೆಚ್ಚಾಗಿ ಕಾಣುತ್ತೇವೆ. ಈ ಕವನದ ಕೊನೆಯಲ್ಲಿ ಬೇಂದ್ರೆ ಅವರು ಬಳಸುವ 'ಅಣ್ಣಾ' ಎಂಬ ಪದವು ನಮ್ಮ ಸಂಸ್ಕೃತಿಯ ಒಂದು ಮೂಲಭಾವವನ್ನು ಪ್ರತಿಬಿಂಬಿಸುತ್ತದೆ.[೩೪]

ಇದೇ ಕವಿತೆಯನ್ನು ಕುರಿತು ನಾದಲೀಲೆ ಸಂಕಲನಕ್ಕೆ ಮುನ್ನುಡಿ ಬರೆಯುತ್ತಾ ಮಾಸ್ತಿ ಅವರು ಈ ರೀತಿ ಬೇಂದ್ರೆ ಅವರ ಕಾವ್ಯನೆಲೆಯನ್ನು ಸಾಹಿತ್ಯದೊಳಗಿನ ಔಚಿತ್ಯದಂತೆ ದರ್ಶನ ಮಾಡಿದ್ದನ್ನು ಗಮನಿಸಲಾಗಿದೆ. ಈ ಎರಡೂ ವಿಮರ್ಶೆಗಳು ತಾತ್ವಿಕಗೊಳಿಸುತ್ತಿರುವ ಅಂಶ ಕವಿತೆಯ ಅರ್ಥದಿಂದ ಆಚೆ ವಿಕಾಸವಾಗುತ್ತವೆ.

ಸಾಹಿತ್ಯದಲ್ಲಿ ಒಬ್ಬ ಕವಿಗೆ ಇರಬೇಕಾದ ಮೂಲ ಹಾಗೂ ಸಹಜ ಜವಾಬ್ದಾರಿಗಳನ್ನು ಇಲ್ಲಿ ಬೇಂದ್ರೆ ಅವರ ಒಂದೊಂದು ಕವಿತೆಯ ಅರ್ಥಗಳು ಸಾಮಾಜಿಕ ಪ್ರಜ್ಞೆಯೊಂದಿಗೆ ವಿವರಿಸುವುದನ್ನು ಗಮನಿಸುತ್ತಾರೆ. ಕವಿಯ ವೈಯಕ್ತಿಕ ಪ್ರಜ್ಞೆ ಹಾಗೂ ಸಾಮಾಜಿಕ ಪ್ರಜ್ಞೆಯನ್ನು ಬೇರ್ಪಡಿಸದೆ ವಿಮರ್ಶೆ ಮಾಡುವ ವಿಮರ್ಶಕರಿಗೆ ಬೇಂದ್ರೆ ಕಾವ್ಯ ಅರ್ಥವಾಗುವುದಿಲ್ಲ ಎಂಬ ನಿಲುವು ಇವರದು. ಅದಕ್ಕಾಗಿ ರಾಘವೇಂದ್ರರಾವ್ ತಮ್ಮ ಚಿಂತನೆಯನ್ನು ಈ ರೀತಿ ಸ್ಪಷ್ಟಪಡಿಸುತ್ತಾರೆ.

> ವೈಯಕ್ತಿಕ ಹಾಗೂ ಸಮಾಜ ಪ್ರಜ್ಞೆಗಳ ತಿಕ್ಕಾಟ ಬೇಂದ್ರೆಯವರ ಕವಿತೆಗೆ ಒಂದು ಪ್ರಚಂಡವಾದ ಶಕ್ತಿಯನ್ನು ನೀಡಿದೆ ಎನ್ನುವುದರಲ್ಲಿ ಸಂದೇಹವಿಲ್ಲ. ಬೇಂದ್ರೆಯವರ ಭಾಷೆ ಕೂಡ ಈ ತಿಕ್ಕಾಟವನ್ನು ತೀಕ್ಷ್ಣವಾಗಿ ಪ್ರತಿಬಿಂಬಿಸುತ್ತದೆ. ಒಂದು ಕಡೆ ಜನಜೀವನಕ್ಕೆ ಸಾಮೀಪ್ಯವಾದ ದೇಶೀ ಭಾಷೆಯನ್ನು ಬಳಸಿ ಕವಿ ಓದುಗರ ಹೃದಯವನ್ನು ಭೇದಿಸಿದರೆ, ಇನ್ನೊಂದು ಕಡೆ ಅವರ ಬ್ರಾಹ್ಮಣ ಸಂಸ್ಕೃತಿಯ ಸಮರಸವಾದ ಬೇರೊಂದು ಭಾಷೆಯಲ್ಲಿ ಮತ್ತೊಂದು ಧ್ವನಿ ಕೇಳಿಸಿಕೊಳ್ಳುತ್ತದೆ.[೩೫]

ಇಲ್ಲಿ ಭಾಷೆಯ ಸಂಸ್ಕೃತಿಯಲ್ಲಿ ಬೇಂದ್ರೆ ಕಾವ್ಯ ತತ್ವ ಧ್ವನಿಸುವ ರೀತಿ ಹಾಗೂ ಕಾವ್ಯದ ಜೀವಕಳೆಯನ್ನು ಸೂಕ್ಷ್ಮವಾಗಿ ಹಿಡಿದಿಟ್ಟಿದ್ದಾರೆ. ಸಾಹಿತ್ಯ ತತ್ವ ಎನ್ನುವುದು ಅಧ್ಯಯನದ ಮೇಲೆ ನಿಂತಿದೆ. ಹಾಗೂ ವಿಮರ್ಶೆಗೆ ಅಷ್ಟೇ ಆಳವಾಗಿ ದಕ್ಕುತ್ತದೆ ಎಂಬ ವಿಚಾರಗಳನ್ನು ನೀಡುತ್ತಾರೆ.

೪. ೪. ಅಭಿನಂದನ ಗ್ರಂಥಗಳ ಮೂಲಕ ಸಾಹಿತ್ಯ ಅಧ್ಯಯನ

'ಜೀವನ ಪತ್ರಿಕೆ'ಯು ೧೯೪೬ರಲ್ಲಿ ಬೇಂದ್ರೆ ಅವರನ್ನು ಕುರಿತು ಪ್ರಕಟಿಸಿದ ವಿಶೇಷಾಂಕವು ಹೊಸಗನ್ನಡ ಸಾಹಿತ್ಯದಲ್ಲಿ ಮೊದಲ ಬಾರಿಗೆ ಒಬ್ಬ ಕವಿಯನ್ನು ಕುರಿತು ಒಡನಾಡಿಗಳು ಅರ್ಪಿಸಿದ ಅಭಿನಂದನಾ ಬರಹಗಳು ಎನ್ನಬಹುದು. ಇಲ್ಲಿಂದ ಮೊದಲಾಗಿ ಇಂತಹ ಪರಂಪರೆ ಮುಂದುವರೆಯಿತು. ಬೇಂದ್ರೆ ಅವರನ್ನು ಕುರಿತು 'ಬೇಂದ್ರೆ ಸತ್ಕಾರ ಸಮಿತಿ' ಧಾರವಾಡದಲ್ಲಿ ಪ್ರಾರಂಭವಾಗಿ 'ಕವಿವರ ಬೇಂದ್ರೆ', 'ಬೇಂದ್ರೆ ವಾಙ್ಮಯ ದರ್ಶನ' ಮೊದಲಾದ ಅಭಿನಂದನಾ ಕೃತಿ ಕಾರ್ಯವನ್ನು ನಿರ್ವಹಿಸಿತು. ಇವೆಲ್ಲಾ ಗೌರವಯುತವಾಗಿ ಸತ್ಕರಿಸಿದರೆ ೧೯೭೭ರಲ್ಲಿ ಬುದ್ದಣ್ಣ ಹಿಂಗೆಮಿರೆ ಅವರ ಸಂಪಾದಕತ್ವದಲ್ಲಿ 'ಇಳಿದು ಬಾ ತಾಯಿ' ಎಂಬ ಅಭಿನಂದನಾ ಗ್ರಂಥವನ್ನು ಅರ್ಪಿಸಿದರು. ದತ್ತಾತ್ರಯ ಕೆ. ಮೆಂಡನ್ ಅವರು ೧೯೫೬ರಲ್ಲಿ ಮಹಾರಾಷ್ಟ್ರದ ದಿನ ಪತ್ರಿಕೆ 'ತಾಯಿನುಡಿ' ಪ್ರಾರಂಭಿಸಿದರು. ಈ ಪತ್ರಿಕೆಯು 'ನಂ ನಮಸ್ಕಾರ ನಿಮಗ!' ಎಂಬ ಶೀರ್ಷಿಕೆಯಲ್ಲಿ ೧೯೮೨ರಲ್ಲಿ ಬೇಂದ್ರೆ ಅವರಿಗೆ ಮರಣೋತ್ತರ ಅಭಿನಂದನೆ ಸಲ್ಲಿಸಿತು. ೧೯೮೨ರಲ್ಲಿ ಪಿ.ಪಿ ಬಳಗದ ಗೆಳೆಯರು ಪ್ರಕಟಿಸಿದ 'ಅಂಕಣ' ಮೇ-ಜುಲೈನ ವಿಶೇಷಾಂಕವನ್ನು ಬೇಂದ್ರೆಯವರ ಸಾಹಿತ್ಯ ಅಧ್ಯಯನದ ಮೂಲಕ ಪ್ರಕಟಿಸಿದ್ದಾರೆ. ಈ ವಿಶೇಷಾಂಕದಲ್ಲಿ 'ಗರುಡನ ಬೆನ್ನೇರಿದ್ದಿದ್ದರೆ...'- ಕೆ. ಎಲ್. ಗೋಪಾಲಕೃಷ್ಣಯ್ಯ., 'ನೆಲದ ಒಕ್ಕಲಿಗ'- ಸುಬ್ಬಣ್ಣ ರಂಗನಾಥ ಎಕ್ಕುಂಡಿ., 'ಶ್ರೀ ವಿವೇಕಾನಂದ ಶಿಖರ-ಪ್ರಗಾಥಾ'-ಆರ್. ಜಿ. ಕುಲಕರ್ಣಿ., 'ಬೇಂದ್ರೆ : ಜೀವನ ಮತ್ತು ಕಾವ್ಯ' - ಜಿ. ಬಿ. ಜೋಷಿ., 'ಬೇಂದ್ರೆಯವರ ಕಾವ್ಯ ಸೃಷ್ಟಿ' -ಕೀರ್ತಿನಾಥ ಕುರ್ತಕೋಟಿ., 'ಬೇಂದ್ರೆಯವರ ನಾಟಕಗಳು' - ಪಿ. ಆರ್. ಮುತಾಲಿಕ್ ಈ ಆರು ಲೇಖನಗಳ ಮೂಲಕ ಕೆಲವು ವಿಚಾರಗಳನ್ನು ಗ್ರಹಿಸಬಹುದು. ೧೯೫೫ರಲ್ಲಿ(ನವಂಬರ್-ಡಿಸೆಂಬರ್) ಮೈಸೂರಿನ ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯು ಪ್ರಕಟಿಸಿದ 'ಪುಸ್ತಕ ಪ್ರಪಂಚ' ಬೇಂದ್ರೆ ವಿಶೇಷ ಸಂಚಿಕೆಯಲ್ಲಿ ಬೇಂದ್ರೆ ಅವರ ವ್ಯಕ್ತಿತ್ವ ಹಾಗೂ ಸಾಹಿತ್ಯ ಕುರಿತ ಅಧ್ಯಯನಗಳ ರೂಪದ ೧೮ ಲೇಖನಗಳಿವೆ. ಈ ಎಲ್ಲಾ ಬರಹಗಳಲ್ಲಿ ಬೇಂದ್ರೆ ಅವರ ಸಾಹಿತ್ಯದ ಅಧ್ಯಯನವಿದೆ, ಭಿನ್ನ ಮಾದರಿಯ ವಿಮರ್ಶೆಗಳಿವೆ. ಕರ್ನಾಟಕ ಅಂದಿನ ಬರಹಗಾರರು ಕಂಡ ಬೇಂದ್ರೆಯ ಸಾಹಿತ್ಯ ಒಡನಾಟದ ಅಭಿಪ್ರಾಯಗಳನ್ನು ಒಟ್ಟಾಗಿ ತರಲಾಗಿದೆ. ಈ ಎಲ್ಲಾ ಮಾದರಿಗಳಲ್ಲಿ ಅಭಿನಂದನಾ ಗ್ರಂಥಗಳು ಪೂರಕವಾಗುತ್ತವೆ.

'ಇಳಿದು ಬಾ ತಾಯಿ' ಎಂಬ ಈ ಗ್ರಂಥವನ್ನು ವಿಷಯದ ಅನುಗುಣವಾಗಿ ಅಧ್ಯಯನ ಮಾಡಲು ಸಹಕಾರಿಯಾಗಿದೆ. ಸಂಪಾದಕರಾದ ಬುದ್ದಣ್ಣ ಹಿಂಗೆಮಿರೆ ಅವರು ವಿಮರ್ಶಾತ್ಮಕ ಪ್ರವೇಶಿಕೆಯನ್ನು ನೀಡುವ ಮೂಲಕ ಲೇಖನಗಳನ್ನು ವಿಷಯಗಳ ಸ್ವರೂಪದನ್ವಯ ವಿಭಾಗಿಸಿದ್ದಾರೆ.

ಇಳಿದು ಬಾ ತಾಯಿ–ಬೇಂದ್ರೆಯವರ ಗಂಗಾವತರಣದ ಪದ್ಯವನ್ನು ಮಾತ್ರ ಸಂಕೇತಿಸದೆ, ಒಟ್ಟು ಪ್ರತಿಭೆಯನ್ನು ಸಂಕೇತಿಸುವುದರಿಂದ ಅಭಿನಂದನ ಗ್ರಂಥಕ್ಕೆ ಈ ಹೆಸರನ್ನಿಟ್ಟಿರುವುದು..... ......ಬೇಂದ್ರೆಕಾವ್ಯದ ಥಳಕು–ಬೆಳಕನ್ನು ನಿದರ್ಶಿಸುವ ಹಲವು ಲೇಖನಗಳು 'ಇಳಿದು ಬಾ ತಾಯಿ' ಗ್ರಂಥದಲ್ಲಿದ್ದು, ಬೇಂದ್ರೆ ಕಾವ್ಯದ ರೂಪ–ವಿನ್ಯಾಸವನ್ನು ಸಾಹಿತ್ಯ ಸೃಷ್ಟಿಗೆ ಪ್ರೇರಕವೆನಿಸುವ ಕೆಲವು ಮಹತ್ವದ ಅಂಶಗಳು, ವೈಯಕ್ತಿಕ ಅನುಭವ ಸಾರ್ವತ್ರಿಕವಾಗಿ, ಪರಿವರ್ತಿತವಾಗಿ ಉನ್ನತ ಕಾವ್ಯದ ಹೊಳಹನ್ನು ಸೂಚಿಸಬಲ್ಲ ಹಲವು ವಿಚಾರಗಳು ಇಲ್ಲಿಯ ಲೇಖನಗಳಲ್ಲಿ ವ್ಯಕ್ತವಾಗಿರುವುದನ್ನು ಗುರ್ತಿಸಬಹುದು.[೩೬]

ಬುದ್ದಣ್ಣ ಹಿಂಗೆಮಿರ ಅವರ ಈ ಸಂಪಾದಕೀಯ ನುಡಿಗಳಲ್ಲಿ ಒಂದು ಸೂಕ್ಷ್ಮವಾದ ಮಾರ್ಗವೊಂದರ ಸಹನೆಲೆ ಕಂಡುಬರುತ್ತದೆ. ಇಲ್ಲಿ ಬೇಂದ್ರೆ ಸಾಹಿತ್ಯವನ್ನು ಸಹೃದಯರಿಗೆ ಪರಿಚಯಿಸುತ್ತಿರುವ ತಮ್ಮ ಉದ್ದೇಶ, ಬೇಂದ್ರೆ ಸಾಹಿತ್ಯ ವಿಮರ್ಶೆಯು ಪಡೆದುಕೊಳ್ಳುವ ಶೋಧ ಹಾಗೂ ಈ ಕೃತಿಯಲ್ಲಿ ಕಂಡುಕೊಂಡಿರುವ ಸಮಗ್ರ ನೆಲೆಯನ್ನು ಪರಿಚಯಿಸಿದ್ದಾರೆ. ಈ ಅಭಿನಂದನಾ ಗ್ರಂಥವನ್ನು ವಿಮರ್ಶಾ ಲೇಖನಗಳು, ಕೆಲವು ಬಿಡಿ ಪದ್ಯಗಳ ಹಾಗೂ ಕೃತಿಗಳ ವಿಶ್ಲೇಷಣೆ, ಬೇಂದ್ರೆ ಅವರ ಜೀವನ ಪರಿಚಯ, ಪರಿಚಯ–ಅಭಿಮಾನ, ರಸನಿಮಿಷಗಳು, ವೈಜ್ಞಾನಿಕ–ವಿಶ್ಲೇಷಣೆ, ವಿಶೇಷ ಲೇಖನಗಳು ಎಂಬುದಾಗಿ ಏಳು ಭಾಗಗಳಾಗಿ ವಿಂಗಡಿಸಲಾಗಿದೆ.

ಬೇಂದ್ರೆ ಅವರ ಸಾಹಿತ್ಯ ವಿಶ್ಲೇಷಣೆಗೆ ಹಲವು ಆಯಾಮಗಳನ್ನು ಈ ಕೃತಿ ಒದಗಿಸುತ್ತದೆ. ಸಾಹಿತ್ಯ ಚರ್ಚೆ, ಕೃತಿ ಕುರಿತ ವಿಮರ್ಶಾ ಪ್ರವೇಶ, ಕವಿತೆಯ ಮೂಲಕ ಒಳನೋಟಗಳು, ಒಬ್ಬ ವಿಮರ್ಶಕನಾಗಿ ಬೇಂದ್ರೆ ಅವರು ಕಂಡು ಬರುವ ವಿಭಿನ್ನ ಆಯಾಮಗಳ ಸ್ವರೂಪವನ್ನು 'ವಿಮರ್ಶಾತ್ಮಕ ಲೇಖನಗಳು' ಭಾಗದಲ್ಲಿ ಗಮನಿಸಬಹುದು. ಈ ಎಲ್ಲಾ ಲೇಖನಗಳನ್ನು ಆಯಾ ವಿಷಯಕ್ಕೆ ಸಂಬಂಧಿಸಿದಂತೆ ಚರ್ಚಿಸುವಾಗ ಪ್ರತಿಯೊಂದನ್ನು ಸೂಕ್ಷ್ಮವಾಗಿ ಗ್ರಹಿಸಲಾಗುತ್ತದೆ. 'ಕೆಲವು ಪದ್ಯಗಳ ಹಾಗೂ ಕೃತಿಗಳ ವಿಶ್ಲೇಷಣೆ'ಯಲ್ಲಿ ಕೃತಿನಿಷ್ಠ ವಿಮರ್ಶೆಗಳನ್ನು ಗ್ರಹಿಸಬಹುದು. ಇನ್ನು 'ಬೇಂದ್ರೆಯವರ ಜೀವನ ಪರಿಚಯ', 'ಪರಿಚಯ–ಅಭಿಮಾನ', 'ರಸನಿಮಿಷಗಳು' ಈ ಮೂರು ಭಾಗಗಳು ಕವಿಯೊಂದಿಗೆ ಉಂಟಾದ ಹಲವು ಸಾಹಿತ್ಯ ಚಿಂತಕರ ಒಡನಾಟದ ವಿಶ್ಲೇಷಣೆ ಇದೆ. ಈ ಕೃತಿಯಲ್ಲಿ ಭಿನ್ನವಾಗಿ ಪ್ರತ್ಯೇಕ ಗ್ರಹಿಕೆಗೆ ದಕ್ಕುವ ಭಾಗಗಳೆಂದರೆ 'ವೈಜ್ಞಾನಿಕ ವಿಶ್ಲೇಷಣೆ' ಹಾಗೂ 'ವಿಶೇಷ ಲೇಖನಗಳು' ಈ ಅಂಶಗಳನ್ನು ವಿಮರ್ಶಾತ್ಮಕ ಸ್ವರೂಪದ ದೃಷ್ಟಿಯಲ್ಲಿ ತಾತ್ವಿಕತೆ ಅಂಶಗಳನ್ನು ಕುರಿತು ಈ ಪ್ರಬಂಧದಲ್ಲಿ ಅಧ್ಯಯನ ಮಾಡಲಾಗುವುದು.

'ನಂ ನಮಸ್ಕಾರ ನಿಮಗ!' ಈ ಕೃತಿಯು 'ತಾಯಿನುಡಿ' ಪತ್ರಿಕೆಯ ವಿಶೇಷ ಸಂಚಿಕೆಯಾಗಿದೆ. ಇದರಲ್ಲಿ ಇಪ್ಪತ್ತೆರಡು ಲೇಖನಗಳ ಗೌರವ ಅರ್ಪಣ ಇದೆ. ಆದರೆ ಈ ಲೇಖನಗಳಲ್ಲಿ ಕೆಲವು ವಿಮರ್ಶಾತ್ಮಕ ಅಧ್ಯಯನದ ಮಹತ್ವ ಹೊಂದಿರುವುದರಿಂದ ಆಯಾ ವಿಷಯಗಳ ಚರ್ಚೆಯಲ್ಲಿ ಬಳಸಿಕೊಂಡಿದ್ದೇನೆ.

ಬೇಂದ್ರೆ ಅವರಿಗೆ ಐವತ್ತಾರು ವರ್ಷ ತುಂಬಿದ ಶುಭ ಸಂದರ್ಭಕ್ಕೆ ಎಂದು ಬರೆದ ಹಾ. ಮಾ. ನಾಯಕ್ ಅವರು 'ಬೇಂದ್ರೆ' ಎಂಬ ಲೇಖನ ರಚಿಸಿದ್ದಾರೆ. ತಮಗೆ ಅರ್ಥವಾದ

ಕವಿ ಹಾಗೂ ಸಮಾಜ ಅರ್ಥೈಸಿಕೊಂಡ ಕವಿಯನ್ನು ಅರ್ಥಪೂರ್ಣವಾಗಿ ಗ್ರಹಿಸುವ ಕೆಲಸ ಮಾಡಿದ್ದಾರೆ. ಈ ಲೇಖನದಲ್ಲಿ ಕನ್ನಡ ಕಾವ್ಯ ಸಂಪತ್ತನ್ನು ಬೆಳೆಸಿದ ಮೊದಲ ಕವಿಯಾಗಿ, ಖಡ್ಗಕ್ಕಿಂತ ಲೇಖನಿ ಅರಿತವೆಂದು ನಿರೂಪಿಸಿದ ಬಗೆ, ಕರ್ನಾಟಕ ಮತ್ತು ಮಹಾರಾಷ್ಟ್ರದ ಬಾಂಧವ್ಯ ಬೆಳೆಸುವ ಸಾಂಸ್ಕೃತಿಕ ಪುರೋಹಿತನಾಗಿ ಗಮನಿಸಿದ ಬಗೆಯನ್ನು ಅಧ್ಯಯನ ಮಾಡಬಹುದು.

ಕರ್ಕಿ ಡಿ. ಎಸ್ ಅವರ 'ಬೇಂದ್ರೆ ಗೀತಶ್ರುತಿ', ಹಾಗೂ ಬರಗೂರು ರಾಮಚಂದ್ರಪ್ಪ ಅವರ 'ಬೇಂದ್ರೆಯವರ ಕಾವ್ಯದಲ್ಲಿ ಸಾಮಾಜಿಕ ಪ್ರಜ್ಞೆ' ಈ ಎರಡೂ ಲೇಖನಗಳು ೧೯೭೭ರ ಒಂದೇ ಕಾಲಘಟ್ಟದಲ್ಲಿ ರಚನೆಗೊಂಡ ವಿರುದ್ಧ ದಿಕ್ಕಿನ ಸಾಹಿತ್ಯ ಗ್ರಹಿಕೆಯ ಲೇಖನಗಳು. ಬೇಂದ್ರೆ ಅವರು ಕಾವ್ಯದಲ್ಲಿ ಒಂದು ರೀತಿಯ ಶ್ರುತಿಯನ್ನು ಮಿಡಿಯುತ್ತಲೇ ಕಾವ್ಯ ರಚಿಸಿದರೆಂಬ ಜಾಡು ಹಿಡಿದು ಕರ್ಕಿ ಅವರು ಸಾಗಿದ್ದಾರೆ. ಭಾವಗೀತದ ನೆಲೆಯನ್ನು ಜಾನಪದಗತಿಗಳಿಂದ ಗ್ರಹಿಸಿ, ನೈಜನಾಡಿಯನ್ನು ಮಿಡಿದು, ಲಾವಣಿಬಂಧವನ್ನು ಸಹಜವಾಗಿಯೇ ಕಾವ್ಯದ ಅಂಗವನ್ನಾಗಿಸಿ, ಮಾತ್ರ ಛಂದ, ಸೀಸಪದ್ಯ, ಅಷ್ಟಷಟ್ಪದಿ, ವೈದಿಕ ಛಂದಸ್ಸುಗಳ ಪ್ರಯೋಗವನ್ನು ಬೇಂದ್ರೆ ಅವರು ಕಾವ್ಯದಲ್ಲಿ ತಂದ ನಾವಿನ್ಯತೆಯನ್ನು ಗ್ರಹಿಸಿದ್ದಾರೆ. ಆದರೆ ಬರಗೂರು ರಾಮಚಂದ್ರಪ್ಪ ಅವರ ಸಾಮಾಜಿಕ ಪ್ರಜ್ಞೆಯ ಹುಡುಕಾಟವು ಬಂಡಾಯ ಧ್ವನಿಯ ಸಿದ್ಧಾಂತಗಳ ನಿಲುವಿನಲ್ಲಿ ಬೇಂದ್ರೆ ಅವರ ಕಾವ್ಯದ ಕೆಲವು ಸೋಲುಗಳನ್ನು ಗ್ರಹಿಸಿರುವುದನ್ನು ಗಮನಿಸಬಹುದು. ಸಮಾಜದ ತಲ್ಲಣಗಳಿಗೆ ಬರೆದ ಕವಿತೆಯೆಂದು ಪ್ರಸಿದ್ಧವಾದ ಕವಿತೆಗಳನ್ನೇ ಬಳಸಿ ಕವಿ ಸಮಸ್ಯೆಯನ್ನು ಸಮಸ್ಯೆಯಾಗಿಯೇ ಉಳಿಸುವ ಪರಿಯನ್ನು ಅಭಿವ್ಯಕ್ತ ಪಡಿಸುತ್ತಾ ಸಮಾಜಕ್ಕೆ ಬೇಕಾದ ಅರಿವಿನ ಬೆಳಕನ್ನು ನಿರೀಕ್ಷಿಸುತ್ತಾ ಬೇಂದ್ರೆ ಕಾವ್ಯವು ಸಾಮಾಜಿಕ ವಸ್ತುವಿನಲ್ಲಿ ಸೋತಿದೆ ಎಂಬ ಚಿಂತನೆಯ ಚರ್ಚೆ ಪ್ರಬಂಧದಲ್ಲಿ ಮುಖ್ಯ ವಿಚಾರವಾಗಿದೆ. ಜಿ. ಎಚ್. ನಾಯಕ್ ಅವರು ಇದೇ ವಿಚಾರವನ್ನು ನಾದ ಹಾಗೂ ಅರ್ಥದ ನೆಲೆಯಲ್ಲಿ ಗ್ರಹಿಸುತ್ತಾ ಅರ್ಥಗಳು ನಾದದ ವೈಭವದಲ್ಲಿ ಸೋಲುವ ಅಂಶಗಳನ್ನು 'ಬೇಂದ್ರೆಯವರ ಕಾವ್ಯ' ಎಂಬ ಲೇಖನದಲ್ಲಿ ೧೯೮೨ರಲ್ಲಿ ಚರ್ಚಿಸುತ್ತಾ ಬೇಂದ್ರೆಯವರ ಕಾವ್ಯ ಬದುಕುವ ಕಾವ್ಯ, ಬದುಕಿಸುವ ಕಾವ್ಯ ಗಂಭೀರವಾಗಿ ಅಧ್ಯಯನಗಳಾಗಬೇಕಿದೆ ಎಂದು ಅಲ್ಲಮನ ಬೆಡಗಿನ ವಚನಗಳಿಗೆ ಹೋಲಿಸುವ ರೀತಿಯನ್ನು ಗಮನಿಸಬಹುದು.

'ಗರಿ' ಬರೆದವನ ವಿವಿಧ ಪರಿ ಎಂಬ 'ಬೇಂದ್ರೆ ನಮನ'ಕೃತಿಯು ಬೇಂದ್ರೆ ಅವರನ್ನು ಆಪ್ತವಾಗಿ ಗ್ರಹಿಸಿ, ಸಾಹಿತ್ಯವನ್ನು ಆರಾಧಿಸಿ ಸಲ್ಲಿಸಿದ ಗೋಪಾಲ ಸೋಹೊನಿ ಅವರ ಗೌರವ ಕೃತಿ ಇದು. ಇಲ್ಲಿ ಬೇಂದ್ರೆ ಅವರ ಕುರಿತು ಆಪ್ತವಾದ ಪರಿಚಯವಿದೆ, ಸಾಹಿತ್ಯದ ವಿಮರ್ಶೆ ಇದೆ. ಜೊತೆಗೆ ಪ್ರತಿಯೊಂದನ್ನು ತಾತ್ವಿಕವಾಗಿ ವಿಮರ್ಶಿಸುವ ಮೌಲ್ಯಯುತವಾದ ಬರಹಗಳಿವೆ. ಟಿಪ್ಪಣಿಗಳ ಮಾದರಿಯಲ್ಲಿ ವಿವಿಧ ಅಂಶಗಳನ್ನು ಗ್ರಹಿಸಿದ್ದಾರೆ. ಕನ್ನಡ ಸಾಹಿತ್ಯದ ವೈಚಾರಿಕತೆ, ಬದುಕಿನ ಚರ್ಚೆಗಳು, ಮರಾಠಿ ಸಾಹಿತ್ಯದೊಂದಿಗೆ ಗಳಿಸಿದ್ದ ಆಪ್ತತೆ ಹಾಗೇ ವಿರೋಧಗಳು ಈ ಎಲ್ಲಾ ಅಂಶಗಳು ತಮ್ಮ ನೆನಪಿನ ಶೈಲಿಯಲ್ಲಿ ತಿಳಿಸಿದ್ದಾರೆ ಗೋಪಾಲ ಸೋಹೋನಿ ಅವರ ಬರಹ ಕುರಿತು ದ. ಲ. ಕೆರೂರ ಅವರು ಹಿನ್ನುಡಿಯಲ್ಲಿ ಈ ರೀತಿಯಲ್ಲಿ ತಿಳಿಸಿದ್ದಾರೆ.

> ಬಿದ್ದ ಬೆಳಕಿನಸಾರ ಹೀರಿಕೊಂಡು ಅವರವರು ಬೇಳೀತಾರ ಈ ಮಾತನ್ನು ಹೆಳ್ಯಾನ ಸೋಹೊನಿ. ವರಕವಿ ನೀಡಿದ ಒಲವಿನ ಕಾಣಿಕೆನೆಲ್ಲ ಬಿಚ್ಚಿಟ್ಟ ತೋರಿಸ್ಯಾನ. ನೀವು ತೊಗೋಳ್ರಿಪಾ ಅಂತಾನ.[೩೭]

'ಬೇಂದ್ರೆ ಕಾವ್ಯ' ಎಂಬುದು ರಂ. ಶ್ರೀ. ಮುಗಳಿ ಅವರ ವಿಶಿಷ್ಟ ಅಧ್ಯಯನದ ವಿಮರ್ಶಾ ಕೃತಿ. ಗೆಳೆಯರ ಗುಂಪಿನಲ್ಲಿಯೇ ಬೆಳೆದ ಮುಗಳಿ ಅವರು ಬೇಂದ್ರೆ ಅವರನ್ನು ಕುರಿತು ೧೯೮೭ರ ವೇಳೆಗೆ ಇಂತಹ ಶ್ರೇಷ್ಠ ಕೃತಿಯನ್ನು ರಚಿಸಿದ್ದಾರೆ. ಇದರಲ್ಲಿ ಸ್ವ-ಅನುಭವದ ನೆಲೆಯ ಬೇಂದ್ರೆಯನ್ನೂ, ವಿಮರ್ಶಾ ಶಿಸ್ತಿಗೆ ದಕ್ಕುವ ಬೇಂದ್ರೆಯನ್ನು ಇಲ್ಲಿ ಪರಿಚಯಿಸಿದ್ದಾರೆ.

'ಕವೀಂದ್ರ ಬೇಂದ್ರೆ' ಎಂಬ ಲೇಖನ ಪರಿಚಯಿಸಿದ ಗೌರೀಶ ಕಾಯ್ಕಿಣಿ ಅವರು 'ಕಂಪಿನ ಕರೆ' ಎಂಬ ಬೇಂದ್ರೆ ಕಾವ್ಯದೃಷ್ಟಿಯನ್ನು ಒಂದು ಅಧ್ಯಯನವಾಗಿ ನಿರೂಪಿಸಿದ್ದಾರೆ. ಹತ್ತೊಂಬತ್ತು ಲೇಖನಗಳಿರುವ ಈ ಕೃತಿಯು ಬೇಂದ್ರೆ ಅವರ ಸಾಹಿತ್ಯಕ್ಕೆ ಮಹತ್ವವನ್ನು ಹೆಚ್ಚಿಸಿದೆ. ಕವಿಯ ವ್ಯಕ್ತಿತ್ವ ಹಾಗೂ ಕವಿತ್ವವನ್ನು ನಿರೂಪಿಸುವ 'ಬಾ ಭೃಂಗವೆ', 'ಕವನ-ಕಣ್ಣು' ಈ ಎರಡು ಲೇಖನಗಳಿವೆ. ಕಾವ್ಯ ಸಂದರ್ಭದ ಒಳನೋಟವನ್ನು 'ಒಂದು ಮೂಲಭೂತ ಪ್ರಶ್ನೆ'ಯಾಗಿ ತಂದರೆ, ಕವಿತೆಯು ಕಾವ್ಯದ ಜೀವಾಳವಾಗಿ ತಾತ್ವಿಕ ರೂಪ ಪಡೆದು 'ಹೀಗಾಗಲು ಕಾರಣವೇನು?' ಎಂಬ ಎರಡು ಲೇಖನಗಳಲ್ಲಿ ಕಾಯ್ಕಿಣಿ ಅವರ ಎರಡು ಉತ್ತರಗಳು ಸಿದ್ಧಮಾದರಿಯಲ್ಲಿಯೇ ಇವೆ. ವಾಕ್ ಶಕ್ತಿಯ ನಾಲ್ಕು ನೆಲೆಗಳು ನಿರುಕ್ತವಾಗಿ ಕಂಡು ಬಂದು ಬೇಂದ್ರೆ ಅವರ ಕಾವ್ಯ ಒಂದು 'ಉದ್ಭವ ಕಾವ್ಯ' ದರ್ಶನವಾಗಿ ವಿಮರ್ಶಕರಿಗೆ ನಿಲುಕದಾಗಿದೆ ಎಂಬ ಲೇಖನ ವಿಚಾರ ಇಲ್ಲಿದೆ. ಪುತಿನ, ಜಿ. ಎಚ್. ನಾಯಕ್, ಎಚ್. ಎಸ್. ರಾಘವೇಂದ್ರರಾವ್ ಹಾಗೆಯೇ ಇನ್ನೂ ಕೆಲವರು ಕೂಡ ಬೇಂದ್ರೆ ಅವರು ವಿಮರ್ಶೆಗೆ ದಕ್ಕರು ಎಂಬ ನಿಲುವನ್ನು ಗ್ರಹಿಸಿದ್ದಾರೆ. ಬೇಂದ್ರೆ ಮತ್ತು ಕುವೆಂಪು ತಮ್ಮ ಕಾವ್ಯದ ಅಸ್ಮಿತೆಯನ್ನು ತಾವೇ ದರ್ಶನದಂತೆ ಹೇಳಿದ ಅಂಶಗಳನ್ನು ಇಲ್ಲಿ ಅಧ್ಯಯನ ಮಾಡಲಾಗುವುದು.

ಕಾವ್ಯದ ರಚನಾ ನೆಲೆಯಲ್ಲಿ 'ಪ್ರವಾದಿ – ಅನುಭಾವಿ' ಗುಣವನ್ನು ದರ್ಶನ ಮಾಡುವ ನಿಲುವುಗಳ ಲೇಖನವಿದೆ. ಇಲ್ಲಿ ಚತುರ್ಮುಖ ಸೌಂದರ್ಯವನ್ನು ಸ್ಥಾಪಿಸುವಾಗ ಬೇಂದ್ರೆ ಅವರು ಭಾರತೀಯ ಕಾವ್ಯ ಮೀಮಾಂಸೆಯ ನೆಲೆಯನ್ನು ಪಾಶ್ಚಾತ್ಯ ಮೀಮಾಂಸೆಗಳ ಅಧ್ಯಯನದಲ್ಲಿ ಪ್ರತಿಪಾದಿಸುವ ಸೂಕ್ಷ್ಮ ಗುಣಗಳಿಗೆ ಅರವಿಂದರ ತಾತ್ವಿಕತೆಯ ಅಧ್ಯಯನ ಈ ಲೇಖನಕ್ಕೆ ಮುಖ್ಯ ವಸ್ತು. ಇದೇ ಕೃತಿಗೆ ಹಿನ್ನುಡಿ ಬರೆದ ವಿ.ಕೃ ಗೋಕಾಕ್ ಈ ಅಂಶವನ್ನು ಕೇಂದ್ರಿಕರಿಸಿ ಒಳನೋಟವೆಂದಿದ್ದಾರೆ.

'ಅಪ್ಪಟ ಜಾನಪದ ಅಪರಂಜಿ'ಯಾಗಿ ಬೇಂದ್ರೆ ಅವರು ಗ್ರಹಿಸಿಕೊಂಡ 'ಶಬ್ಧಶಕ್ತಿ'ಯ ಪ್ರಯೋಗಗಳನ್ನು ಗೌರೀಶ ಕಾಯ್ಕಿಣಿ ಅವರು ಕವನಗಳ ಒಳ ಸೂಕ್ಷ್ಮತೆಯಲ್ಲಿ ವಿಮರ್ಶಿಸಿದ್ದಾರೆ. 'ಯೇಟ್ಸನ ನೆನಪು' ಎಂಬ ಲೇಖನವು ಬೇಂದ್ರೆ ಅವರು ಪಾಶ್ಚಾತ್ಯ ಚಿಂತಕರ ಸಾಲಿನಲ್ಲಿ ನಿಲ್ಲುವ ಕವಿ ಎಂದು ಈ ಲೇಖಕರು ಅಧ್ಯಯನ ನಡೆಸಿದ್ದಾರೆ. 'ಕಾವ್ಯದ ತ್ರಿವಿಧ ವಿಕಾಸ'

ಎಂಬ ಲೇಖನದಲ್ಲಿ ಕಾವ್ಯ ಬೆಳವಣಿಗೆ ಕ್ರಮವನ್ನು ಉಪಮಾವಿಧಾನ, ಪ್ರತಿಮಾ ಪ್ರಧಾನ ಮತ್ತೊಂದು ಪ್ರತೀಕ ಪ್ರಧಾನ ಎಂಬ ಮೂರು ವಿಧದಲ್ಲಿ ಗ್ರಹಿಸಿದ್ದಾರೆ. ಬೇಂದ್ರೆ ಅವರು ಈ ವಿಶ್ವ ಕಾವ್ಯ ಜಗತ್ತಿನಲ್ಲಿ ವಿಹರಿಸುವ ವಿಮರ್ಶಾತ್ಮಕ ಚಿಂತನೆ ಈ ಲೇಖನದಲ್ಲಿ ಗ್ರಹಿಸಬಹುದು. 'ಪ್ರತಿಮಾ ಪ್ರತೀಕಗಳ ಬೇಂದ್ರೆ ಜಾಲ', 'ಕವನವೇ ಒಂದು ಪ್ರತೀಕ', 'ಪ್ರಯೋಗ ಪರಿಣತಿ' ಈ ಮೂರು ಲೇಖನಗಳು ಶಾಬ್ದಿಕ ಬೇಂದ್ರೆಯು ತನ್ನ ಕಾವ್ಯದ ಮೇಲೆ ನಡೆಸಿದ ನಾವಿನ್ಯ ಪ್ರಯೋಗಗಳನ್ನು ಕುರಿತು ಧ್ವನಿಸುತ್ತವೆ. 'ಕವಿಯ ದೃಷ್ಟಿಯಲ್ಲಿ ಕಾವ್ಯ', 'ರೂವಾರಿಯ ರೀತಿ', 'ಚಿತ್ರಕ ಶಕ್ತಿ', 'ಅವನು ಅವನಿಗು ಹೆಚ್ಚು.' ಈ ಮೂರು ಲೇಖನಗಳನ್ನು ಕವಿ-ಕಾವ್ಯ ವ್ಯಷ್ಟಿ-ಸಮಷ್ಟಿಯಾಗಿ ನೆಲೆಗೊಳ್ಳುವ ಬಗೆಯನ್ನು ಪ್ರಯೋಗಾತ್ಮಕವಾಗಿ ಗ್ರಹಿಸಲಾಗಿದೆ. 'ಕಂಪಿನ ಕರೆ' ಎಂಬ ವಿಮರ್ಶಾ ಬರಹಗಳ ಈ ಅಧ್ಯಯನವು ಒಬ್ಬ ವಿಮರ್ಶಕನು ಸೂಕ್ಷ್ಮಗೊಳ್ಳಬೇಕಾದ ಅವತರಣಿಕೆಗಳನ್ನು ಗೌರೀಶ ಕಾಯ್ಕಿಣಿ ಅವರು ಸಹಜವಾಗಿ ನೀಡಿದ್ದಾರೆ. ಅಧ್ಯಯನದಲ್ಲಿ ಈ ಕೃತಿಯು ಕಾಲಘಟ್ಟದ ಯಾವುದೇ ಪಾಶ್ಚಾತ್ಯ ವಿಮರ್ಶಾ ಸಿದ್ಧಾಂತಗಳಿಗೆ ಸ್ಪಂದಿಸದೇ ತನ್ನದೇ ಹೊಸ ತಾತ್ವಿಕ ಸ್ವರೂಪಗಳನ್ನು ಕಟ್ಟಿಕೊಡುವುದನ್ನು ಗಮನಿಸಬಹುದು.

'ಅಂಕಣ' ಎಂಬ ತ್ರೈಮಾಸಿಕ ಪತ್ರಿಕೆಯು ೧೯೮೭ರಲ್ಲಿ, 'ಪುಸ್ತಕ ಪ್ರಪಂಚ' ಎಂಬ ಮಾಸಿಕ ಪತ್ರಿಕೆಯು ೧೯೯೫ರಲ್ಲಿ, 'ತಾಯಿನುಡಿ' ಎಂಬ ಮಾಸಿಕ ಪತ್ರಿಕೆಯು ೧೯೮೭ರಲ್ಲಿ ಗೌರವ ಸಮರ್ಪಣೆಯಂತೆ 'ನಂ ನಮಸ್ಕಾರ ನಿಮಗ' ಎಂಬ ಶೀರ್ಷಿಕೆಯಲ್ಲಿ ಬೇಂದ್ರೆ ವಿಶೇಷಾಂಕಗಳನ್ನು ಪ್ರಕಟಿಸಿದವು. ಅಂಕಣ ಪತ್ರಿಕೆಯಲ್ಲಿ ಗೋಪಾಲಕೃಷ್ಣಯ್ಯ ಅವರ 'ಗರುಡನ ಬೆನ್ನೇರಿದ್ದಿದ್ದರೆ..', ಎಕ್ಕುಂಡಿ ಅವರ 'ನೆಲದ ಒಕ್ಕಲಿಗ'., ಕುಲಕರ್ಣಿ. ಆರ್. ಈ. ಅವರ 'ಶ್ರೀ ವಿವೇಕಾನಂದ ಶಿಖರ ಪ್ರಗಾಥಾ', ಜೋಷಿ ಜಿ. ಬಿ. ಅವರ 'ಬೇಂದ್ರೆ : ಜೀವನ ಮತ್ತು ಕಾವ್ಯ', ಕೀರ್ತಿನಾಥ ಕುರ್ತಕೋಟಿ ಅವರ 'ಬೇಂದ್ರೆಯವರ ಕಾವ್ಯ ಸೃಷ್ಟಿ', ಮುತಾಲಿಕ್ ಪಿ. ಆರ್ ಅವರ 'ಬೇಂದ್ರೆಯವರ ನಾಟಕಗಳು' ಈ ಎಲ್ಲಾ ಲೇಖನಗಳು ಪ್ರಕಟಗೊಂಡಿವೆ. 'ಪುಸ್ತಕ ಪ್ರಪಂಚ'ವು ಕವಿಯ ಒಡನಾಡಿಗಳಿಂದಿಡಿದು ಸಮಕಾಲೀನ ಲೇಖಕರವರೆಗೂ ಹದಿನೆಂಟು ಲೇಖನಗಳು ಪ್ರಕಟಗೊಂಡ ವಿಶೇಷ ಪತ್ರಿಕೆ ಇದು. 'ತಾಯಿನುಡಿ' ಪತ್ರಿಕೆಯಲ್ಲಿ ವ್ಯಾಸರಾಯ ಬಲ್ಲಾಳರ 'ದಿವ್ಯ ಚೇತನಕೆ ನಮೋ ನಮೋ', ಕೆ. ಜೆ. ರಾವ್ ಅವರ 'ಭುವನದ ಭಾಗ್ಯ', ಚೆನ್ನವೀರ ಕಣವಿ ಅವರ 'ನಡೆದದ್ದೇ ಸಾಧನಕೇರಿ ನುಡಿದದ್ದೆ ಕವಿತೆ' 'ಎಪ್ಪತ್ತರ ಬೇಂದ್ರೆ', ಯಶವಂತ ಚಿತ್ತಾಲರ 'ಯುಗಚೇತನ', ಶೇಷಗಿರಿರಾವ್ ಎಲ್. ಎಸ್. ಅವರ 'ಭಾವ ಬುದ್ಧಿಗಳ ವಿದ್ಯುದಾಲಿಂಗನ', ಅಮೃತ ಸೋಮೇಶ್ವರ ಅವರ 'ಶೃಂಗಾರ ಮಾಸದ ತಂಗಾಳಿಯಾಗಿ ಬೀಸಿ ಬಂದವರು', ಹಾಮಾನಾ ಅವರ 'ನೆನಪಿನ ನಾಣ್ಯ', ಗೋಪಾಲಕೃಷ್ಣ ಅಡಿಗರ 'ಬೇಂದ್ರೆಯವರ ಕಾವ್ಯ', ವಾಮನ ಬೇಂದ್ರೆ ಅವರ 'ಧಾರವಾಡದ ಕಾಮಕಸ್ತೂರಿ', ಎನ್ಕೆ ಅವರ 'ತಾಪ ತಪವಾಗಬೇಕು, ನೋವು ನೋಂಪಿಯಾಗಬೇಕು' ಎಂಬ ಬೇಂದ್ರೆ ತತ್ತ್ವ ಪ್ರಣಾಲಿ., ಗೌರೀಶ ಕಾಯ್ಕಿಣಿ ಅವರ 'ಬೇಂದ್ರೆ ಕಾವ್ಯದ ಎತ್ತರ', ಸಿಂಪಿ ಲಿಂಗಣ್ಣ 'ಮೈಯೆಲ್ಲ ಪ್ರಭೆಯಾದ ಮಹಿಮ', ಪಾ.ವೆಂ ಅವರ

'ಬೇಂದ್ರೆ– ಒಂದು ದೃಷ್ಟಿ ಕ್ಷೇಪ', ಕಯ್ಯಾರ ಕಿಞ್ಞಣ್ಣ ರೈ ಅವರ 'ಕವಿಗೆ ಕವಿ ಮಣಿವಂ', ಶ್ರೀಧರ ಬಿ. ಎಚ್. ಅವರ 'ಅಂಬಿಕಾತನಯದತ್ತರು ಮತ್ತು ಆರು ಮಾತುಗಳು', ಪಂಚಾಕ್ಷರಿ ಹಿರೇಮಠ ಅವರ ಗಾರುಡಿಗ 'ಅಂಬಿಕಾತನದತ್ತ', ಭೀಮರಾವ ಚಿಟಗುಪ್ಪಿ ಅವರ 'ಗುರುಪ್ರಸಾದ', ಸುನೀತಾ ಶೆಟ್ಟಿ ಅವರ 'ನಾಟಕಕಾರ ಬೇಂದ್ರೆ', ಗದಗಕರ ಎನ್. ಎಸ್ ಅವರ 'ಅಪೂರ್ವ ವ್ಯಕ್ತಿತ್ವದ ಶ್ರೀ ಅಂಬಿಕಾತನಯದತ್ತರು' ದತ್ತಾತ್ರೇಯ ಕೆ. ಮೆಂಡನ್ ಅವರ 'ಬೇಂದ್ರೆ– ಕರ್ನಾಟಕಕ್ಕೆ ವಾಣಿಕೊಟ್ಟರು, ಮಹಾರಾಷ್ಟ್ರಕ್ಕೆ ಶರೀರ ಕೊಟ್ಟರು!', ಧಾರವಾಡಕರ ರಾ.ಯ ಅವರ 'ಕನ್ನಡ ತೇರಿನ ಹೊಂಗಳಸ ಕಳಚಿತು', ವಿಚಾರಿ ಅವರ 'ಈ ಪರಿಯ ಸೊಬಗು' ಈ ಎಲ್ಲಾ ಲೇಖನಗಳ ಜೊತೆಗೆ ಕೆಲವು ಕವಿತೆಗಳು ಇಲ್ಲಿ ಪ್ರಕಟಗೊಂಡಿವೆ. ಈ ಮೂರು ಪತ್ರಿಕೆಗಳು ಈ ಅಧ್ಯಯನಕ್ಕೆ ಬಹುಮುಖ್ಯ ಸಾಮಗ್ರಿಗಳಾಗಿವೆ.

'ಬೇಂದ್ರೆಯವರ ಕಾವ್ಯದಲ್ಲಿ ಅರವಿಂದರ ದರ್ಶನ' ಎಂಬ ಮಂಗಳ ಚಿ. ನ ಅವರ ಲೇಖನವು ೧೯೭೭ರಲ್ಲಿ ಪ್ರಕಟಗೊಂಡಿತು. ಬೇಂದ್ರೆ ಅವರ ಜೀವನ ಮತ್ತು ಸಾಹಿತ್ಯದ ಮೇಲೆ ಅರವಿಂದರ ದರ್ಶನವಾಗಿರುವ ಸ್ಫೂರ್ತಿಯ ನೆಲೆಗಳನ್ನು ಒಂದು ಜೀವನ ಚರಿತ್ರೆಯಂತೆ ದಾಖಲಿಸಿದ್ದಾರೆ. ಕವಿಯು ವಿಶ್ವಚೇತನವಾದ ಬಗೆಯನ್ನು ಭಾವನಾತ್ಮಕವಾಗಿ ವಿವರಿಸಿರುವಂತೆ ಈ ಲೇಖನ ರಚನೆಗೊಂಡಿದೆ.

'ಯುಗದ ಕವಿ ಬೇಂದ್ರೆ' ಈ ಲೇಖನವು ಅನಂತಮೂರ್ತಿ ಯು. ಆರ್. ಅವರು ಬರೆದ ವಿಮರ್ಶಾ ಲೇಖನವಿದು. ಈ ಲೇಖನವನ್ನು ಅಧ್ಯಯನಕಾರರು ನವ್ಯ ಸಾಹಿತ್ಯದ ಪ್ರಾತಿನಿಧಿಕ ಲೇಖನವೆಂದು ಗಮನಿಸಲಾಗಿದೆ. ಇವರ ಇನ್ನೊಂದು ಲೇಖನ 'ಕಾಲಮಾನ' ಸಂಕಲನದಲ್ಲಿ 'ಬೇಂದ್ರೆ ಅರ್ಥಕ್ಕಿಂತ ಮಿಗಿಲಾದ ಅರ್ಥ' ಎಂಬ ಲೇಖನ ರಚನೆಗೊಂಡಿದೆ. ಇದು ಅನಂತಮೂರ್ತಿ ಅವರು ಮೊದಲು ಬೇಂದ್ರೆ ಸಾಹಿತ್ಯವನ್ನು ಗ್ರಹಿಸಿದ ಚಿಂತನೆಗಳಿವೆ. ನವೋದಯ ಸಾಹಿತ್ಯವೆಂಬ ಕಾಲಮಾನದ ಗ್ರಹಿಕೆಗೆ ನವ್ಯವೆಂಬ ಉದ್ದೇಶಿತ ಚಿಂತನಾ ತರಂಗಗಳು ಕೆಲಸ ಮಾಡಿದ ಸೂಕ್ಷ್ಮ ಅಂಶಗಳನ್ನು ಕಾಣಬಹುದು. ಬೇಂದ್ರೆ ಅವರ ಒಡನಾಟದಲ್ಲಿಯೇ ಇವರ ವಿಮರ್ಶೆ ಪ್ರಾರಂಭವಾದರೂ ಬೇಂದ್ರೆ ಮತ್ತು ಅನಂತಮೂರ್ತಿ ಈ ಇಬ್ಬರ ನಡುವಿನ ವ್ಯಕ್ತಿತ್ವದ ಅಂತರವೇ ಈ ಲೇಖನವಾಗಿದೆ. ಬೇಂದ್ರೆ ಅವರು ಮಹತ್ವದ ಕವಿಯಾದರೂ ತನ್ನದೇ ಪರಿಧಿಯನ್ನು ನಿರೂಪಿಸಿಕೊಂಡ ಕವಿಯಾಗಿ ಕಾಣುವ ಶೈಲಿಯನ್ನು ಅರ್ಥೈಸಿದ್ದಾರೆ. ಆದ್ದರಿಂದಲೇ 'ಬೇಂದ್ರೆ ನಶಿಸುತ್ತಿರುವ ಗ್ರಾಮೀಣ ಬದುಕಿನ ದೊಡ್ಡ ಕವಿ' ಎಂದು ಕರೆಯುತ್ತಾರೆ. ವಾಸ್ತವಪ್ರಜ್ಞೆ ಹಾಗೂ ಸಮಾಜದ ಅಭೀಪ್ಸೆಗಳಿಗೆ ಬೇಂದ್ರೆ ಸ್ಪಂದಿಸಲಿಲ್ಲವೆಂಬ ಚರ್ಚೆಯಲ್ಲಿ ಬೇಂದ್ರೆ ಸಾಹಿತ್ಯಕ್ಕೆ ಇದ್ದ ಮಿತಿಗಳನ್ನು ಧ್ವನಿಸಿದ್ದಾರೆ. ಸಮಾಜವು ಬಂಡಾಯ, ತುರ್ತುಪರಿಸ್ಥಿತಿಗಳ ಬಿಕ್ಕಟ್ಟಿನಲ್ಲಿರುವಾಗ ಬೇಂದ್ರೆ ಅವರು ದೇಶದ ಒಳಸ್ಥಿತಿಗೆ ಉತ್ತರಿಸಲಿಲ್ಲ. ಆದರೆ ಸಂಖ್ಯಾಶಾಸ್ತ್ರ, ಆಧ್ಯಾತ್ಮ ಮೊದಲಾದ ವಿಚಾರಗಳಿಗೆ ಪೂರ್ಣ ಮನಸೋತ ಬೇಂದ್ರೆ ಅವರಿಗೆ ವಾಸ್ತವದ ಸಂಕಟಗಳು ಅಗತ್ಯವಿರಲಿಲ್ಲವೆಂಬ ವಿಚಾರಯನ್ನು ಯು. ಆರ್. ಅನಂತಮೂರ್ತಿ ಅವರು ತಮ್ಮ 'ರುಜುವಾತು' ಎಂಬ ಪತ್ರಿಕೆಯಲ್ಲಿ ಚರ್ಚಿಸಿದ್ದಾರೆ.

ವೆಂಕಟೇಶ ಮೂರ್ತಿ ಅವರ 'ನೂರು ಮರ ನೂರು ಸ್ವರ' ಎಂಬ ವಿಮರ್ಶಾ ಕೃತಿಯಲ್ಲಿ 'ಬೇಂದ್ರೆ ಕಾವ್ಯದ ಕೆಲವು ಅಭೀಪ್ಸೆಗಳು' ಎಂಬ ಲೇಖನವಿದೆ. ಬೇಂದ್ರೆ ಕಾವ್ಯದಲ್ಲಿ ಬಳಕೆಗೊಳ್ಳುವ ಪದಪ್ರಯೋಗಗಳು, ನುಡಿಗಟ್ಟುಗಳ ಬಳಕೆ, ಲಯವಿನ್ಯಾಸ, ಪ್ರತಿಮಾ ಸೃಷ್ಟಿ ಮತ್ತು ವಸ್ತು ಪ್ರಪಂಚವನ್ನು ವಿಮರ್ಶಾತ್ಮಕವಾಗಿ ಅಧ್ಯಯನ ಮಾಡಿರುವುದನ್ನು ಗಮನಿಸಬಹುದು.

'ಶಕ್ತಿ ಶಾರದೆಯ ಮೇಳ' ಎಂಬುದು ಡಿ. ಆರ್. ನಾಗರಾಜ್ ಅವರ ಸಂಶೋಧನಾ ಪ್ರಬಂಧವಾಗಿದೆ. ಈ ಪ್ರಬಂಧವನ್ನು ಪ್ರತ್ಯೇಕವಾಗಿ ಅಧ್ಯಯನ ಮಾಡಲಾಗುವುದು. ಬೇಂದ್ರೆ ಅವರ ಕಾವ್ಯದಲ್ಲಿ ಭೂಮಿ, ಕಾಮ, ಕಾಲಗಳ ವೈಚಾರಿಕ ಚಿಂತನೆಯು ಈ ಕೃತಿಯ ವಿಶೇಷ. ಸುಮತೀಂದ್ರ ನಾಡಿಗ ಅವರ 'ಬೇಂದ್ರೆ ಕಾವ್ಯದ ವಿಭಿನ್ನ ನೆಲೆಗಳು' ಎಂಬ ಸಂಶೋಧನಾತ್ಮಕ ಪ್ರಬಂಧವು ನಾಲ್ಕು ನೆಲೆಗಳಾಗಿ ವಿಂಗಡಿಸಿ ಅಧ್ಯಯನ ನಡೆಸಲಾಗಿದೆ. ಭಾಷೀಯ ನೆಲೆ, ಪ್ರಾಯೋಗಿಕ ನೆಲೆ, ಪ್ರಸಿದ್ಧಿಯ ನೆಲೆ, ಸಿದ್ಧಿಯ ನೆಲೆ ಈ ನಾಲ್ಕು ವಿಭಾಗದಲ್ಲಿ ಬೇಂದ್ರೆ ಅವರ ಒಟ್ಟಾರೆ ಕಾವ್ಯವನ್ನು ಅಧ್ಯಯನ ಮಾಡಲಾಗಿದೆ. ರಾಘವೇಂದ್ರ ರಾವ್ ಅವರ 'ಹಾಡೇ ಹಾದಿಯ ತೋರಿತು' ಎಂಬ ಸಂಶೋಧನಾತ್ಮಕ ಪ್ರಬಂಧದಲ್ಲಿ ಬೇಂದ್ರೆ, ಕುವೆಂಪು, ಪುತಿನ ಅವರ ಕವಿತೆಗಳ ವಿಶಿಷ್ಟತೆಯನ್ನು ತೌಲನಿಕವಾಗಿ ಅಧ್ಯಯನ ಮಾಡಲಾಗಿದೆ. ನವೋದಯ ಕಾವ್ಯವಸ್ತುವು ಪರಂಪರೆ ಮತ್ತು ಪ್ರಸ್ತುತ ಚಿಂತನೆಗಳ ವಿಶ್ಲೇಷಣೆಗೆ ಒಳಪಡುವ ಆಂಶಿಕ ನೆಲೆಗಳನ್ನು ವಿಮರ್ಶಾ ಪರಿಜ್ಞಾನದ ಮೂಲಕ ತಾತ್ವಿಕ ಚಿಂತನೆ ಮಾಡಲಾಗಿದೆ. 'ಬೆಳಗು', 'ನಾಕುತಂತಿ', 'ಜೋಗಿ' ಇಂತಹ ಅತಿ ಹೆಚ್ಚು ಅಧ್ಯಯನಕ್ಕೆ ಒಳಗಾದ ಕವಿತೆಗಳನ್ನು ಕೆಲವು ವಿಮರ್ಶಾ ಲೇಖನಗಳ ಸಹಾಯದಿಂದ ಈ ಕವಿತೆಗಳ ಸ್ವರೂಪ ಮತ್ತು ತಾತ್ವಿಕತೆಯನ್ನು ಪ್ರತ್ಯೇಕವಾಗಿ ಗ್ರಹಿಸಲಾಗಿದೆ.

'ಬೇಂದ್ರೆ ಕಾವ್ಯ ಕೆಲವು ಟಿಪ್ಪಣಿಗಳು' ಎಂಬ ಲೇಖನದಲ್ಲಿ ರಾಜೇಂದ್ರ ಚೆನ್ನಿ ಅವರು ಸಾಂಸ್ಕೃತಿಕ ನೆಲೆಯ ವ್ಯವಸ್ಥಿತ ಒಳದನಿಗಳನ್ನು ಕೆಲವು ಗೆಸ್ಚರ್‌ಗಳ ಮೂಲಕ ವಿಮರ್ಶಿಸಿದ್ದಾರೆ. ೧೯೮೭ರಲ್ಲಿ 'ಅಧ್ಯಯನ' ಎಂಬ ವಿಮರ್ಶಾ ಕೃತಿಯಲ್ಲಿ ಪ್ರಕಟಗೊಂಡಿದೆ. 'ಬೇಂದ್ರೆ ಅಂದ್ರೆ... ಬೇಂದ್ರೆ ಸಾಹಿತ್ಯದ ವಿರಾಟ್‌ದರ್ಶನ' ಎಂಬ ಕೃತಿಯನ್ನು ಆಹಿನಲ, ನಳಿನ ಮೈಯ ಅವರು ಸಂಪಾದಿಸಿರುವ ಈ ಕೃತಿಯಲ್ಲಿ ಅಪರೂಪದ ವಿಶಿಷ್ಟ ಲೇಖನಗಳು ಪ್ರಕಟಗೊಂಡಿವೆ. ನನ್ನ ಈ ಕಾಲಘಟ್ಟದ ಮಿತಿಗೆ ಹೊಂದುವ ಎಲ್ಲಾ ಲೇಖನಗಳನ್ನು ಇಲ್ಲಿ ಅಧ್ಯಯನ ಮಾಡಲಾಗಿದೆ. ಬೇಂದ್ರೆಯವರ ಸಮಗ್ರ ಸಾಹಿತ್ಯವನ್ನು ಅವಲೋಕಿಸಿ ಎಲ್ಲಾ ವಲಯದ ಓದುಗರನ್ನು ಕೇಂದ್ರೀಕರಿಸಿ ಬರೆದಂತೆ ಕನ್ನಡ ಸಾಹಿತ್ಯದಲ್ಲಿ ರೂಪಿತವಾದ ವಿಮರ್ಶಾಕೃತಿ ಜಿ.ಎಸ್ ಆಮೂರ ಅವರ 'ಭುವನದ ಭಾಗ್ಯ'. ಕಾವ್ಯವನ್ನು ಕೆಲವು ವಿಭಾಗಗಳಾಗಿ ವಿಂಗಡಿಸಿ ಅದರ ಸೂಕ್ಷ್ಮಗ್ರಹಿಕೆಗಳ ಮೂಲಕ ವಿಮರ್ಶಿಸಲಾಗಿದೆ. ಈ ಎಲ್ಲಾ ಅಂಶಗಳು ಇಲ್ಲಿ ಗ್ರಹಿಸಲಾಗಿದೆ. ಕ್ರೈಸ್ಟ್ ಕಾಲೇಜು ಕನ್ನಡಸಂಘವನ್ನು ಸ್ಥಾಪಿಸಿಕೊಂಡು ಕನ್ನಡ ಸಾಹಿತ್ಯದ ಅಧ್ಯಯನಕ್ಕೆ ಉತ್ತಮ ಕೃತಿಗಳನ್ನು ನೀಡುತ್ತಾ ಬಂದಿದೆ. ಬೇಂದ್ರೆ ಕವಿಯನ್ನು ಕುರಿತು ಪ್ರಬಂಧ ಸ್ಪರ್ಧೆ, ವಿಚಾರ ಸಂಕೀರ್ಣಗಳನ್ನು ನಡೆಸುತ್ತಾ ಬಂದಿದೆ. 'ಬೇಂದ್ರೆ ಸಾಹಿತ್ಯ ಒಂದು ಅಧ್ಯಯನ' ಕೃತಿಯನ್ನು ಇದೇ ಯೋಜನೆಯಲ್ಲಿ

ಶ್ರೀನಿವಾಸರಾಜು ಚಿ. ಅವರು ಸಂಪಾದಿಸಿದ್ದಾರೆ. ನಾರಾಯಣ ಕೆ.ವಿ ಅವರ 'ಸಾಹಿತ್ಯ ತತ್ತ್ವ: ಬೇಂದ್ರೆ ದೃಷ್ಟಿ', ಬಸವರಾಜ ಕಲ್ಗುಡಿ ಅವರ 'ಬೇಂದ್ರೆಯವರ ಕಾವ್ಯದಲ್ಲಿ ಪ್ರೇಮ ಆವಿಷ್ಕಾರ: ಸ್ವರೂಪಗಳು', ವಿಜಯಾ ದಬ್ಬೆ ಅವರ 'ಬೇಂದ್ರೆ ಕಾವ್ಯದಲ್ಲಿ ಅನುಭಾವದ ಒಂದು ನಿಚ್ಚಳಿಕೆ', ತಿರುಮಲೇಶ್ ಕೆ. ವಿ ಅವರ 'ಬೇಂದ್ರೆಯವರ ಕಾವ್ಯಶೈಲಿ', ರಾಜೇಂದ್ರ ಚೆನ್ನಿ ಅವರ 'ಬೇಂದ್ರೆ ಕಾವ್ಯ: ಸಂಪ್ರದಾಯ ಮತ್ತು ಸ್ವಂತಿಕೆ', ವೆಂಕಟೇಶಮೂರ್ತಿ ಎಚ್. ಎಸ್ ಅವರ ಮೇಘಧೂತ – ಕಾಳಿದಾಸ ಮತ್ತು ಬೇಂದ್ರೆ', ಚಂದ್ರಶೇಖರ ನಂಗಲಿ ಅವರ 'ಬೇಂದ್ರೆ ಕಾವ್ಯ ದ್ವಂದ್ವ ವಿನ್ಯಾಸ– ಒಂದು ಟಿಪ್ಪಣಿ', ಕೃಷ್ಣಪ್ಪ ಜಿ. ಅವರ 'ನಾಕುತಂತಿ ಒಂದು ಟಿಪ್ಪಣಿ' ಈ ಎಲ್ಲಾ ಲೇಖನಗಳು ಇಲ್ಲಿ ಪ್ರಕಟಗೊಂಡಿವೆ. ಸಮಕಾಲೀನ ಚಿಂತನೆಗಳಿಗೆ ಈ ಕೃತಿಯು ವಿಮರ್ಶಾ ಸೂಕ್ಷ್ಮತೆಗಳನ್ನು ಅರ್ಥೈಸಲಾಗಿದೆ.

'ಬೇಂದ್ರೆಯವರ ಕಾವ್ಯದಲ್ಲಿ ಅಧ್ಯಾತ್ಮದ ನೆಲೆ ಮತ್ತು ಆರ್ಷ ದೃಷ್ಟಿ' ಎಂಬ ವಿಮರ್ಶಾಕೃತಿಯು ರಸವೇದ್ಯ ವಿಮರ್ಶೆಯಾಗಿ ಮೂಡಿಬಂದಿದೆ. ಬೇಂದ್ರೆ ಅವರ ಕಾವ್ಯದ ಸ್ವರೂಪ, ಬೇಂದ್ರೆ ಅವರೇ ನೀಡಿರುವ ಸೂಚನೆಗಳ ಸೃಷ್ಟಿ–ದೃಷ್ಟಿ, ಜೀವನ ದೃಷ್ಟಿ, ವೇದಾಂತ–ಆಧ್ಯಾತ್ಮದ ವೈಚಾರಿಕ ಚರ್ಚೆಗಳು ವಿಮರ್ಶಾ ರೂಪದಲ್ಲಿ ಬೇಂದ್ರೆ ಅವರ ಸಾಹಿತ್ಯವನ್ನು ಅರ್ಥೈಸಲಾಗಿದೆ.

೪. ೫. ಬೇಂದ್ರೆ ಸಾಹಿತ್ಯ ಕುರಿತು ಕೀರ್ತಿನಾಥ ಕುರ್ತಕೋಟಿ ಅವರ ವಿಮರ್ಶೆಯ ನಿಲುವುಗಳು

ದ. ರಾ. ಬೇಂದ್ರೆ ಅವರ ಸಾಹಿತ್ಯವನ್ನು ಕುರಿತು ಅದರಲ್ಲೂ ಕಾವ್ಯವನ್ನು ಕುರಿತು ಅತ್ಯಂತ ಸೂಕ್ಷ್ಮವಾಗಿ ಗ್ರಹಿಸಿದ ವಿಮರ್ಶಕರಲ್ಲಿ ಕೀರ್ತಿನಾಥ ಕುರ್ತಕೋಟಿ ಕೂಡ ಒಬ್ಬರು. ಕರ್ತೃಕೇಂದ್ರಿತ ಹಾಗೂ ಕೃತಿಕೇಂದ್ರಿತ ವಿಮರ್ಶೆಯ ಮಾದರಿಯನ್ನು ಅನುಸರಿಸಿದ್ದರೂ ಒಮ್ಮೊಮ್ಮೆ ತಮ್ಮದೇ ಆದ ವಿಮರ್ಶಾ ಮಾದರಿಗಳನ್ನು ಬಳಸಿಕೊಳ್ಳುವ ವಿಮರ್ಶಕರಾಗಿದ್ದಾರೆ. ಪ್ರಸ್ತುತ ವಿಮರ್ಶೆಗೆ ತೊಡಗುವ ಯಾರೇ ಆಗಲಿ ಒಮ್ಮೆ ಕುರ್ತಕೋಟಿಯ ಮಾದರಿಯನ್ನು ಗಮನಿಸಿರುತ್ತಾರೆ. ಇವರ ಬೇಂದ್ರೆ ಸಾಹಿತ್ಯ ಕುರಿತ ಅಧ್ಯಯನ ಏಕಮಾದರಿಯ ಶಿಸ್ತಿನಲ್ಲಿ ನಡೆದಿರಲಾರದು. ಏಕೆಂದರೆ ೧೯೬೦ ರಿಂದ ೧೯೯೧ರವರೆಗೆ ಅವರ ಏಳುನೂರಕ್ಕೂ ಹೆಚ್ಚಿನ ಪುಟಗಳಲ್ಲಿ ರಚನೆಗೊಂಡ ವಿಮರ್ಶಾ ಬರಹಗಳನ್ನು ಗಮನಿಸಿದರೆ ಸಹಜವಾಗಿಯೇ ತಿಳಿಯುತ್ತದೆ. ಕುರ್ತಕೋಟಿ ಅವರ ವಿಮರ್ಶೆಯ ಶಿಸ್ತು ಕುರಿತು ಅವರ ಇತರೆ ವಿಮರ್ಶೆಗಳನ್ನು ಅಧ್ಯಯನ ಮಾಡಿದಾಗ ಕುಮಾರವ್ಯಾಸನನ್ನು ವಿಮರ್ಶೆಗೆ ಒಳಪಡಿಸಿದಂತೆ, ಸ್ವರೂಪ ಹಾಗೂ ತಾತ್ವಿಕತೆಯಲ್ಲಿ ತನ್ನ ಗ್ರಹಿಕೆಯನ್ನು ಅನ್ವಹಿಸಿದಂತೆ ಬೇಂದ್ರೆ ಅವರ ಕುರಿತ ವಿಮರ್ಶೆಗಳಲ್ಲಿ ಗಟ್ಟಿತನಕಾಣಲಾರದು. ಅದಕ್ಕೆ ಸೂಕ್ತವಾದ ಕಾರಣಗಳನ್ನೂ ಇವರು ಅಲ್ಲಲ್ಲೆ ಅಭಿವ್ಯಕ್ತಪಡಿಸುವುದನ್ನು ಕಾಣಬಹುದು.

ಬೇಂದ್ರೆ ಅವರೊಂದಿಗೆ ಬದುಕಿ ಅವರ ಸಾವಿರಾರು ಕವಿತೆಗಳನ್ನು ನೆನೆಪಿನಲ್ಲಿ ಉದುಗಿಸಿಕೊಂಡು ಅವುಗಳ ಸಹೃದಯ ಓದುವಿಗೆ ಒಂದು ಮಾರ್ಗವನ್ನು ರೂಪಿಸಿದ ಕಾರ್ಯ ಕುರ್ತಕೋಟಿ ಅವರದು. ಬೇಂದ್ರೆ ಅವರ ಕಾವ್ಯವನ್ನು ಕುರಿತು ಕುರ್ತಕೋಟಿ ಅವರಿಗೆ ಕೆಲವು ನಿಲುವುಗಳಿದ್ದವು.

ಆ ನಿಲುವುಗಳೊಂದಿಗೆ ಕನ್ನಡ ಸಾಹಿತ್ಯ ಪರಂಪರೆಯನ್ನು ಗಮನಿಸುವ ಕಾರ್ಯ ಇವರದಾಗಿತ್ತು. ಭಕ್ತಿಯ ಅನುಭಾವತೆ, ಒಲವಿನ ಸಮನ್ವಯಗಳನ್ನು ಅರಿತ ಕುರ್ತಕೋಟಿ ಅವರು ಬೇಂದ್ರೆ ಅವರ ಚತುರ್ಮುಖ ದರ್ಶನವನ್ನು 'ಸಮರಸ ತತ್ವ' ಎಂದಿದ್ದಾರೆ. ಇವರ ಕಾವ್ಯ ಸಂಪ್ರದಾಯವನ್ನು ಪ್ರಾಚೀನ ಪರಂಪರೆ, ಆಧುನಿಕ ಶಿಷ್ಟ ಕಾವ್ಯದ ಪರಂಪರೆ ಹಾಗೂ ಜನಪದ ಕಾವ್ಯವೆಂದು ವಿಭಾಗಿಸುತ್ತಾ ಇವು ತಮ್ಮಷ್ಟಕ್ಕೆ ತಾವು ಅಪೂರ್ಣವಾಗಿದ್ದರೂ ಒಟ್ಟಿನಲ್ಲಿ ಹೊಸ ಕಾವ್ಯ ಪರಂಪರೆಯನ್ನು ನಿರ್ಮಿಸಿದವು ಎಂದಿದ್ದಾರೆ.

ವಿಮರ್ಶಕರನ್ನು ಕುರಿತು ಡಿ. ಆರ್ ನಾಗರಾಜ್ ಈ ರೀತಿ ಅಭಿಪ್ರಾಯಪಟ್ಟಿದ್ದಾರೆ :

> ವಿಮರ್ಶಕರಲ್ಲಿ ಎರಡು ಬಗೆಯವರು ಕಾಣುತ್ತಾರೆ. ಮೊದಲ ಗುಂಪಿನವರು ಮೂಲ ಕೃತಿಯನ್ನು ಮಸುಕಾಗಿಸಿ ತಮ್ಮ ಪ್ರತಿಭೆಯನ್ನು ವಿಜೃಂಬಿಸುತ್ತಾರೆ. ಅದು ಸೃಜನಶೀಲ ಪ್ರತಿಭೆಯ ಹಾಗೆ ಕಾಣಿಸಿಕೊಳ್ಳಲು ಹವಣಿಸುತ್ತದೆ.. ಎರಡನೆಯ ರೀತಿಯವರು ಹೆಚ್ಚು ವಸ್ತುನಿಷ್ಠರು, ನಿಷ್ಠುರರು. ತಾವು ಹಿಂದಕ್ಕೆ ನಿಂತು ತಮ್ಮೆಲ್ಲ ವಿದ್ವತ್ತು, ಧೀಮಂತಿಕೆ ಬಳಸಿ ಕೃತಿಯನ್ನು, ಸಾಹಿತ್ಯ ಪರಂಪರೆಯನ್ನು ಸೊಗಸಾಗಿ ಸ್ಪಷ್ಟವಾಗಿ ವಿವರಿಸುತ್ತಾರೆ.[೫೮]

ಈ ಎರಡೂ ಗುಂಪಿನಲ್ಲೂ ಕೀರ್ತಿನಾಥ ಕುರ್ತಕೋಟಿ ಅವರು ಗುರ್ತಿಸಿಕೊಳ್ಳುತ್ತಾರೆ. ಅವರ ವಿಮರ್ಶೆಯು ಮೂಲ ಕೃತಿಯ ಜೊತೆಗೆ ತನ್ನ ಅರ್ಥ ಸಾಮರ್ಥ್ಯವನ್ನು ಗುರ್ತಿಸಿಕೊಳ್ಳಲು ಹವಣಿಸುವ ವಿಮರ್ಶೆಗಳೂ ಕೂಡ ಇವೆ. ಕುರ್ತಕೋಟಿ ಅವರ ವಿಮರ್ಶೆಯನ್ನು ಕುರಿತು ಗಿರಡ್ಡಿ ಗೋವಿಂದರಾಜ ಅವರು ಇವರದು 'ನಿಜವಾದ ಸಹೃದಯ ವಿಮರ್ಶೆ' ಎಂದಿದ್ದಾರೆ.

ಕೀರ್ತಿನಾಥ ಕುರ್ತಕೋಟಿ ಅವರು ಬೇಂದ್ರೆ ಸಾಹಿತ್ಯ ಕುರಿತು ಆರು ಕೃತಿಗಳು ಹಾಗೂ ಕೆಲವು ಲೇಖನ/ಅಂಕಣ ಬರಹಗಳನ್ನು ರಚಿಸಿದ್ದಾರೆ. ಅವುಗಳೆಂದರೆ ೧. ಬೇಂದ್ರೆ ಹಾಗೂ ಕನ್ನಡ ಕಾವ್ಯದ ಸ್ವರೂಪ (೧೯೬೦), ೨. ಭೃಂಗದ ಬೆನ್ನೇರಿ(೧೯೭೫), ೩. ದ. ರಾ. ಬೇಂದ್ರೆ(೧೯೮೨), ೪. ಬೇಂದ್ರೆಯವರ ಕಾವ್ಯದಲ್ಲಿ ಶೃತಿ ಮತ್ತು ಕೃತಿ(೧೯೮೪), ೫. ಶ್ರಾವಣ ಪ್ರತಿಭೆ(೧೯೮೭) ಮತ್ತು ೬. ಬಾರೋ ಸಾಧನಕೇರಿಗೆ(೧೯೯೩) ಇವೆಲ್ಲಾ ವಿಮರ್ಶಾ ಕೃತಿಗಳು. ಇನ್ನು ಬಿಡಿಲೇಖನ/ಅಂಕಣಬರೆಹಗಳೆಂದರೆ 'ಬೇಂದ್ರೆ ಅವರ ಕಾವ್ಯದಲ್ಲಿ ಸೂರ್ಯ ಮತ್ತು ಚಂದ್ರ', 'ಗೆಳೆಯರಗುಂಪು', 'ಬೇಂದ್ರೆ ನೆನಪುಗಳು', 'ಬೇಂದ್ರೆ: ವ್ಯಕ್ತಿತ್ವ ಮತ್ತು ಕವಿತ್ವ', 'ಭಾವಾಭಿನಯದ ಶ್ರೇಷ್ಠ ಮಾತುಗಾರ', 'ಬೇಂದ್ರೆಯವರ ಕಾವ್ಯ ಸೃಷ್ಟಿ', 'ಬೇಂದ್ರೆಯವರ ಕಾವ್ಯದಲ್ಲಿ ಒಲವು', 'ಬೇಂದ್ರೆ ಕಾವ್ಯದ ಕಾಲದರ್ಶನ', 'ಬೇಂದ್ರೆಯವರ ಸಂಖ್ಯಾ ದರ್ಶನ', 'ಸಖೀಗೀತದಲ್ಲಿ ಮಾತು ಮತ್ತು ಮೌನ', 'ಅಂದ ತುಂಬಿತ್ತು ಹಾಲಗೇರಿ', 'ಬೇಂದ್ರೆಯವರ ದಶಾವತಾರ ಗೀತಗಳು', 'ನಾದಲೀಲೆ', 'ಕನ್ನಡ ಮೇಘಸಂದೇಶ', 'ಅರಳು ಮರಳು', 'ನಾಕುತಂತಿ', 'ಬಾಲಬೋಧೆ', 'ಬಾಲಬೋಧೆಯ ಅರ್ಥವ್ಯಾಪ್ತಿ', ಈ ರೀತಿಯಲ್ಲಿ ಕೀರ್ತಿನಾಥ ಕುರ್ತಕೋಟಿ ಅವರ ವಿಮರ್ಶಾ ಅಧ್ಯಯನವನ್ನು ಕಾಣುತ್ತೇವೆ. ಕವಿತೆಯ ಓದುವಿನಂತೆಯೇ, ವಿಚಾರಕ್ಕೊಂದು ಬೇಂದ್ರೆ ಕವಿತೆ ಇವರ ವಿಮರ್ಶೆಗಳಲ್ಲಿ ಸ್ಮರಣೆ ರೂಪದಲ್ಲಿ ಬಂದು ವಿಮರ್ಶೆಯ ಸ್ವರೂಪವನ್ನು ಕಾಣುವುದು ಕೀರ್ತಿನಾಥ ಕುರ್ತಕೋಟಿ ಅವರ ವಿಮರ್ಶೆಯ ನಿಲುವಾಗಿದೆ.

ಬೇಂದ್ರೆ ಸಾಹಿತ್ಯದ ವಿಮರ್ಶೆಗೆ ಕುರ್ತಕೋಟಿ ಅವರ ತಯಾರಿಯೇ ಭಿನ್ನವಾದುದು. ಅದು ಕೆಲವೊಂದು ಕವಿಗೆ ದೊರೆತಂತೆ ಇವರಿಗೂ ಲಭ್ಯವಿರುವ ಸಂಗತಿ. ಪರಿಸರ, ಕವಿಯ ನಿಕಟ ಜೀವನ, ಬೇಂದ್ರೆ ಅವರ ಆಲೋಚನೆಯ ಸೂಕ್ಷ್ಮಗ್ರಹಿಕೆ ಇವೆಲ್ಲಾ ವ್ಯಕ್ತಿತ್ವದ ಮೂಲಕ ಲಭ್ಯವಾದರೆ ಮತ್ತೊಂದು ಅಧ್ಯಯನ ಕಾವ್ಯಮೀಮಾಂಸೆ, ವೇದೋಪನಿಷತ್ತು, ಅರವಿಂದರ ಆಧ್ಯಾತ್ಮಿಕ ಜಗತ್ತಿನ ಗ್ರಹಿಕೆ ಈ ರೀತಿಯೂ ಬೇಂದ್ರೆ ಅವರ ಸಾಹಿತ್ಯ ಕುರ್ತಕೋಟಿ ಅವರಿಗೆ ನಿಕಟವಾಯಿತು. ಇಲ್ಲಿ ಅನುಭವ ಮತ್ತು ಅನುಭಾವಗಳು ಇವರ ವಿಮರ್ಶಾ ಸಂಪನ್ಮೂಲಗಳಾಗಿವೆ.

ಕಾವ್ಯ ವಿಮರ್ಶೆಯಲ್ಲಿ ಕುರ್ತಕೋಟಿ ಅವರು ಕವಿತೆಯ/ಕೃತಿಯ ಪೂರ್ಣ ದೃಷ್ಟಿಗೆ ಒಂದು ಸಂದರ್ಭವನ್ನು ನಿರ್ಮಿಸಿಕೊಳ್ಳುತ್ತಾರೆ. ಆಗ ಕವಿತೆ ಸ್ಪಂದನೆಯನ್ನು ಗುರುತಿಸುತ್ತಾ ತನ್ನ ಬೌದ್ಧಿಕ ನಿರೂಪಣೆಯ ಅಂಶಗಳ ಮುಖೇನ ವ್ಯಾಖ್ಯಾನಿಸುತ್ತಾ ವಿಮರ್ಶೆಯ ನಿಲುವನ್ನು ಸ್ಪಷ್ಟಪಡಿಸುತ್ತಾರೆ. ಈ ಸಂದರ್ಭಕ್ಕೆ ಅಗತ್ಯವಾದ ಬೇರೆ ಬೇರೆ ಕಾವ್ಯ, ಕೃತಿಗಳ ಚಿಂತನೆಗಳು, ವಿಮರ್ಶಕರ ಅಭಿಪ್ರಾಯಗಳು ಎರಡನೇ ದರ್ಜೆಯ ಸಂಪನ್ಮೂಲಗಳಾಗಿ ನೆರವಾಗಿವೆ. ಇವರೊಬ್ಬ ಸ್ವತಂತ್ರ ವಿಚಾರ ಚಿಂತಕರೆಂಬುದನ್ನು ನಾವು ಮರೆಯುವಂತಿಲ್ಲ. ಕುರ್ತಕೋಟಿ ಅವರು ತನ್ನ ವಿಮರ್ಶಾ ಅಧ್ಯಯನ ಕುರಿತು ಈ ರೀತಿ ಅಭಿಪ್ರಾಯಪಡುತ್ತಾರೆ. 'ನಾನು ಬೆಳೆದು ಬಂದದ್ದೇ ಬೇಂದ್ರೆಯವರ ಕಾವ್ಯದ ಉದ್ದೀಪಕ ವಾತಾವರಣದಲ್ಲಿ; ನನ್ನ ವಿಮರ್ಶೆಯ ಪ್ರಜ್ಞೆ ಮೂಡಿ ಬಂದದ್ದು ಈ ಕಾವ್ಯದಿಂದ'. ಈ ದಿಸೆಯಲ್ಲಿ ಗಮನಿಸಿದರೆ ಬೇಂದ್ರೆ ಅವರ ಕಾವ್ಯರಚನೆಯ ಚಿಂತನೆಗೂ, ಕುರ್ತಕೋಟಿ ಅವರ ವಿಮರ್ಶಾ ಚಿಂತನೆಗೂ ಸಾಕಷ್ಟು ಉತ್ತಮ ವಾತಾವರಣ ಲಭ್ಯವಾಗಿರುವುದು ಅವರು ಗಳಿಸಿಕೊಂಡ ಪರಿಸರ ಪಾರದರ್ಶಕತೆಯಂತಿದೆ.

'ದ. ರಾ. ಬೇಂದ್ರೆ' ಎಂಬ ಕೃತಿಯು ಬೇಂದ್ರೆ ಅವರ ಬದುಕು ಹಾಗೂ ಕಾವ್ಯ ಪ್ರತಿಭೆಯನ್ನು ಕುರಿತು ಚಿಂತಿಸಿದೆ. ಬದುಕನ್ನು ಪರಿಚಯ ಮಾದರಿಯಲ್ಲಿಯೇ ಪರಿಶೀಲಿಸುವ ಕುರ್ತಕೋಟಿ ಅವರು ಕಾವ್ಯ ಪ್ರತಿಭೆಗೆ ಹೆಚ್ಚು ಒತ್ತು ನೀಡುವುದನ್ನು ಗ್ರಹಿಸಬಹುದು. ವಿಮರ್ಶಾ ದೃಷ್ಟಿಯಿಂದ ಕಾವ್ಯ ಪ್ರತಿಭೆಯ ಭಾಗವು ಇಲ್ಲಿ ಮುಖ್ಯ. ಕಾವ್ಯ ಮೀಮಾಂಸೆ ಪರಿಕಲ್ಪನೆಯಾಗಿಯೇ ಸ್ವೀಕರಿಸುವ ಕುರ್ತಕೋಟಿ ಅವರು ಪ್ರತಿಭೆ ಕಾವ್ಯದ ಗ್ರಹಿಕೆಗೆ ಯಾವ ರೀತಿಯಲ್ಲಿ ಸೂಕ್ತವೆಂದು ಪರಿಶೀಲಿಸುವರು. ಕಾವ್ಯದಲ್ಲಿನ ಸೃಜನ ವ್ಯಾಪಾರದಲ್ಲಿ ತನಗಿರುವ ಎರಡು ರೀತಿಯ ಸ್ವತಂತ್ರವನ್ನು ಉಪಯೋಗಿಸುತ್ತಾ ಹೊಸದಾದ ಅನುಭವವನ್ನು ಸೃಷ್ಟಿಸುವುದು. ಹಾಗೂ ಜೀವನಾನುಭವವನ್ನು ತನ್ನ ಉದ್ದೇಶಕ್ಕೆ ತಕ್ಕಂತೆ ರೂಪಾಂತರಿಸುವುದು. ಈ ಪ್ರತಿಭೆಯ ಚಿಂತನೆಯಲ್ಲಿಯೇ ಬೇಂದ್ರೆ ಅವರ ಕಾವ್ಯ ಪ್ರತಿಭೆಯು ಈ ಸ್ವಾತಂತ್ರವನ್ನು ಹೊಸ ಸಂದರ್ಭದಲ್ಲಿ ಉಪಯೋಗಿಸಿಕೊಂಡು ಬೆಳೆದು ಬಂದಿದೆ ಎಂಬುದನ್ನು ಕುರ್ತಕೋಟಿ ಅವರು ತನ್ನ ವಿಮರ್ಶೆಯಲ್ಲಿ ಗುರ್ತಿಸಿಕೊಂಡಿರುವರು.

ಬೇಂದ್ರೆ ಅವರ ಕಾವ್ಯ ಪ್ರತಿಭೆಯಲ್ಲಿ ಪುರಾಣ, ಪ್ರಾಚೀನ, ಆಧುನಿಕ ಸ್ವತಂತ್ರ ಹಾಗೂ ಜಾನಪದ ಸೊಗಡು ಅಗತ್ಯ ಕಾರ್ಯ ನಿರ್ವಹಿಸುತ್ತಾ ಕವಿಯ ಕಾವ್ಯ ಸೌಂದರ್ಯವನ್ನು ಹೆಚ್ಚಿಸಿದೆ. ಇದೇ ಚಿಂತನೆಯಲ್ಲಿ ಕುರ್ತಕೋಟಿ ಅವರು ಕಾವ್ಯ ಸೌಂದರ್ಯ ಕುರಿತು ಉಪಮೆ,

ರೂಪಕದಂತಹ ಅಲಂಕಾರಗಳು ಮುಖ್ಯವಾಗಿ ಕೆಲಸ ಮಾಡುತ್ತಾ ಕವಿ ಪ್ರತಿಭೆಯನ್ನು ಸತ್ವಗೊಳಿಸುವ ಮಾದರಿಯನ್ನು ಅಧ್ಯಯನಕ್ಕೆ ಬಳಸಿರುವರು.

ಸಖೀಗೀತದಲ್ಲಿನ ಕಾವ್ಯಪ್ರತಿಭೆ

ಕುರ್ತಕೋಟಿ ಅವರು ಸಖೀಗೀತವನ್ನು 'ಸ್ಮೃತಿಕಾವ್ಯ'ವಾಗಿ ಪರಿಗಣಿಸಿ ಅದರಲ್ಲಿನ ಕಾಲ, ಅದರೊಂದಿಗೆ ಪರಿಸರ ವ್ಯಾಪಾರವನ್ನು ಗಮನಿಸುತ್ತಾ ದರ್ಶನ ನೀಡುವ ಕಾವ್ಯವಾಗಿ ಅರ್ಥೈಸಿಕೊಳ್ಳಬಹುದೆನ್ನುವರು. ಈ ಕಾವ್ಯ 'ಕಾಳಿದಾಸನ ಮೇಘಸಂದೇಶ'ದಂತೆ ಸರ್ವಾಂಗ ಸುಂದರವಾಗಲು ಹವಣಿಸುವ ಕಾವ್ಯ. ವಿಮರ್ಶೆಗಾಗಿ ಬೇಂದ್ರೆ ಅವರ ಇತರೆ ಕವಿತೆಗಳೊಂದಿಗೆ ಹೋಲಿಸಿ ನೋಡುವುದಲ್ಲದೆ, ಬೇರೆ ಕವಿಗಳ ಕಾವ್ಯ ದರ್ಶನವನ್ನು ಬಳಸಿಕೊಳ್ಳುತ್ತಾ ತೌಲನಿಕ ಅನುಸಂಧಾನವನ್ನು ನಡೆಸುತ್ತಾರೆ. ಬೇಂದ್ರೆ ಅವರ ಸಖೀಗೀತ ನೆನಪಿನ ಕಾವ್ಯವಾಗಿಯೂ ಕೂಡ ನೆನೆಪು ಅದರ ಅನುಭವ ನಿರ್ಮಾಣದಲ್ಲಿ ಮಹತ್ವದ ಭಾಗ ವಹಿಸಲಾರದು. ಇಲ್ಲಿ ವರ್ತಮಾನದ ಅನುಭವಕ್ಕೂ ನೆನಪಿನ ಅನುಭವಕ್ಕೂ ಇರುವ ಅಂತರ ಸ್ಪಷ್ಟವಾಗಿ ಕಾಣುತ್ತದೆ. ಕುರ್ತಕೋಟಿ ಅವರು ಈ ಅಂಶಗಳ ಜೊತೆಗೆ ಕಾಳಿದಾಸನ 'ಮೇಘಸಂದೇಶ' ಕೃತಿಯ ಅನುಭವ ಚಿಂತನೆಯನ್ನು ಸಖೀಗೀತದಲ್ಲಿ ಕಾಣುತ್ತಾ ಇಬ್ಬರು ಮಹಾಕವಿಗಳ ನಡುವೆ ಇಲ್ಲವೆ ಎರಡು ಭಾಷೆಗಳ ಶೈಲಿ ಸಾತ್ವಿಕತೆಯೊಂದಿಗೆ ವಿಮರ್ಶಿಸುತ್ತಾರೆ.

ಕಾಲದ ಕ್ರಿಯೆಗೂ, ಅನುಭವಕ್ಕೂ ಯಾವುದೇ ವ್ಯತ್ಯಾಸವಿರುವುದಿಲ್ಲ. ಅನುಭವದಲ್ಲಿ ತೊಡಗುವುದೇ ಒಂದು ಕ್ರಿಯೆ. ಆದರೆ ನೆನಪಿನ ಅನುಭವ ನಮ್ಮ ಕ್ರಿಯಾ ಪ್ರಪಂಚದ ಹೊರಗಿನದು. 'ಭಾವ'ದಿಂದ ಶ್ರೀಮಂತವಾದ ಆ ಅನುಭವ ನಮಗೆ ತಿಳುವಳಿಕೆಯನ್ನು ಕೊಡಬಹುದು, ಹೊಸ ದೃಷ್ಟಿ ಮೂಡಿಸಬಹುದು. ಸಖೀಗೀತವು ಮದುವೆಯ ನೆನಪುಗಳಿಂದ ಪ್ರಾರಂಭವಾದರೂ ಅದರ ಮೊದಲ ಭಾಗ 'ಮತ್ತೆ ಶ್ರಾವಣ ಬಂತು' ಸಂಕಲನದ ಬಾಲ್ಯಕಾಂಡದಲ್ಲಿ ಬೇಂದ್ರೆ ಅವರು ಅಭಿವ್ಯಕ್ತಗೊಳಿಸಿರುವುದನ್ನು ಕುರ್ತಕೋಟಿ ಸಖೀಗೀತಕ್ಕೆ ತರುತ್ತಾರೆ. ಛಂದಸ್ಸು, ಭಾವ, ಕಥನಮಾರ್ಗ, ಸಂಗತಿಗಳ ಸಾರ್ವತ್ರಿಕತೆ ಸಖೀಗೀತಕ್ಕೆ ಮರುರಚನೆಯ ಹೊಸ ಆಯಾಮವನ್ನು ನೀಡುತ್ತದೆ ಎನ್ನುವರು ಕುರ್ತಕೋಟಿ ಅವರು.

ಬೇಂದ್ರೆ ಅವರು ಕವಿಯಾದ ಬಗ್ಗೆ ಸಂಗತಿಗಳು, ಮನುಷ್ಯನ ಜೀವ ಸಂಗ್ರಹಿಸುವ ಸಂಸ್ಕಾರ, ನೆನಪು ಆಕೃತಿ ಪಡೆದು ಅನುಭವ ಸೇರುವ ಅಂಶಗಳನ್ನು ಕುರ್ತಕೋಟಿ ವಿಮರ್ಶೆಯ ಮುಖೇನ ಗ್ರಹಿಸಿದ್ದಾರೆ. ಇಲ್ಲಿನ ಸಂಸ್ಕಾರ ಆದಿಭೌತಿಕವಾಗಿ, ಆಧ್ಯಾತ್ಮಿಕವಾಗಿ, ಆದಿದೈವಿಕವಾಗುವ ಅಂಶಗಳು ಬಾಲ್ಯಕಾಂಡದಲ್ಲಿ ದರ್ಶನವಾಗುವ ರೀತಿಯೇ ಸಖೀಗೀತದಲ್ಲಿ ಮೂಡಿದುದು.

ಕೀರ್ತಿನಾಥ ಕುರ್ತಕೋಟಿ ಅವರು 'ಸಖೀಗೀತ'ದಲ್ಲಿ ಬೇಂದ್ರೆ ಅವರ ಕಾವ್ಯ ಪ್ರತಿಭೆಯನ್ನು ಸಹಜವಾದ ಅಭಿವ್ಯಕ್ತಿಯ ಮೂಲಕ ನಿರ್ಮಿಸಿದ ಭಾವಗೀತೆ ಆಗಿದೆ. 'ಅರ್ಥವಿಲ್ಲ, ಸ್ವಾರ್ಥವಿಲ್ಲ ಬರಿಯ ಭಾವಗೀತಾ' ಮತ್ತು 'ಇದು ಮಂತ್ರ, ಅರ್ಥಕೊಗ್ಗದ ಶಬ್ದಗಳ ಪವಣಿಸುವ ತಂತ್ರ' ಎಂದು ಈ ಎರಡು ಕಾವ್ಯ ಸಾಲುಗಳಲ್ಲೇ ಬೇಂದ್ರೆ ಅವರ ಕಾವ್ಯ ಪ್ರತಿಭೆಯನ್ನು ಗುರ್ತಿಸಬಹುದು.

ಇಲ್ಲಿ ಭಾವ ಸ್ವರೂಪವನ್ನು ಸ್ವಲ್ಪ ತೀವ್ರವಾಗಿ ಅತಿಶಯೋಕ್ತಿಯ ಭಾರ ಒತ್ತುವಂತೆಯೇ ಬಣ್ಣಿಸಿದ್ದಾರೆ. ಭಾಷೆಗಿರುವ ಅರ್ಥದ ಗೊಡವೆಯನ್ನು ಬಿಟ್ಟುಕೊಟ್ಟು ಕೇವಲ ಭಾವ ಮತ್ತು ನಾದಗಳ ಅನುಸಂಧಾನದಿಂದ ಕೃತಕೃತ್ಯತೆಯನ್ನು ಶುದ್ಧವಾದ ಭಾವಗೀತ ಪಡೆಯುತ್ತದೆಂಬುದೇ ಇಲ್ಲಿ ಮುಖ್ಯವೆಂದು ಕುರ್ತಕೋಟಿ ಅವರ ಅಭಿಪ್ರಾಯಪಡುತ್ತಾರೆ.

ಕುರ್ತಕೋಟಿ ಅವರು 'ಬಾರೋ ಸಾಧನಕೇರಿಗೆ' ಎಂಬ ವಿಮರ್ಶಾ ಕೃತಿಯಲ್ಲಿ 'ಸಖೀಗೀತದಲ್ಲಿ ಮಾತು ಮತ್ತು ಮೌನ' ಎಂಬ ವಿಮರ್ಶಾ ಬರಹದಲ್ಲಿ 'ಸಖೀಗೀತ' ಕುರಿತು ಇನ್ನಷ್ಟು ಅಧ್ಯಯನವನ್ನು ಕಾಣಬಹುದು. ಸಖೀಗೀತವು ದಾಂಪತ್ಯದ ಸಖ್ಯವನ್ನು ಪ್ರತಿಪಾದಿಸುತ್ತದೆ ಆದರೆ ನವ್ಯ ಚಿಂತನೆಯ ವಿರೋಧತ್ವ ಇಲ್ಲಿ ಕಂಡುಬರಲಾರದು ಎನ್ನುವ ಅಭಿಪ್ರಾಯ ಇವರದು. ಅಂದರೆ ನವೋದಯ ಕಾವ್ಯವೆಲ್ಲಾ ಆದರ್ಶದ ಬೆಳಕಿಗೆ ಕಂಗೆಟ್ಟು ವಾಸ್ತವತೆಯನ್ನು ಮರೆಯಿತು ಎಂಬ ಸುಲಭ ನಿರ್ಣಯಕ್ಕೆ ಬರುವಂತಿಲ್ಲ. 'ಸಖೀಗೀತ'ದಲ್ಲಿ ಅಂಥ ಆದರ್ಶದ ವರ್ಣನೆ ಇಲ್ಲ. ಅಂಥ ಆದರ್ಶವನ್ನು ವಾಸ್ತವ ಜೀವನದಲ್ಲಿ ತಂದುಕೊಳ್ಳುವುದು ಎಷ್ಟು ಕಠಿಣವೆಂಬುದು ನಿಷ್ಠುರವಾಗಿ ನಿರೂಪಿಸುತ್ತದೆ.

ದಾಂಪತ್ಯದ ಅರ್ಥಯೋಗವನ್ನು ಮಾತು ಮತ್ತು ಮೌನದಲ್ಲಿ ಗ್ರಹಿಸುವ ವಿಮರ್ಶಕ ಕುರ್ತಕೋಟಿ ಅವರು ಈ ಮಾತು ಮತ್ತು ಮೌನ ಕವಿತೆಯನ್ನು ಆವರಿಸಿರುವ ರೀತಿಯನ್ನು ಈ ರೀತಿ ಗ್ರಹಿಸುತ್ತಾರೆ. ಇವೆರಡು ಕೇಂದ್ರ ಪ್ರತಿಮೆಗಳಾಗಿ, ದ್ವಂದ್ವಾತ್ಮಕ ಅವಸ್ಥೆಗಳಾಗಿ ಗಮನಿಸಿರುವರು. ಇವು ದಾಂಪತ್ಯದ ಸಂಯೋಗ ಹಾಗೂ ವಿಪ್ರಲಂಭಗಳ ಪ್ರತೀಕಗಳಾಗಿವೆ. ಪರಸ್ಪರ ವಿರುದ್ಧವಾದ ಈ ಎರಡು ಅವಸ್ಥೆಗಳ ಸಂಘರ್ಷ ಕವಿತೆಯ ಉದ್ದಕ್ಕೂ ಗುರುತಿಸುತ್ತಾರೆ.

ಕವಿ ಪ್ರಕೃತಿಯೊಡನೆ ನಡೆಸುವ ಸಂವಾದ, ಅಲ್ಲಿನ ಋತುಮಾನದ ಚಿತ್ರಗಳು, ಮಳೆ, ಗಾಳಿ, ಬೆಳಕು, ಹಗಲು-ರಾತ್ರಿಗಳ ಜೊತೆಗೆ ನಡೆದ ಸಲಿಗೆಯ ಸಂಬಂಧ, ನೂರಾರು ಉಪಮೇಯವಾದ ಅನೇಕ ಅಮೂರ್ತವಾದ ತತ್ವಗಳಿಗೆ ಉಪಮಾನಗಳನ್ನು ಒದಗಿಸುವ ಪ್ರಕೃತಿ ತನ್ನ ರಹಸ್ಯವನ್ನು ಕವಿಯ ಮಾತಿನ ಮೋಡಿಯಲ್ಲಿ ಬಿಚ್ಚಿ ತೋರಿಸುವಂತಿದೆ. ಆದರೆ ಪ್ರೀತಿಯ ವ್ಯಾಪಾರದಲ್ಲಿ ಕವಿಯ ಪ್ರತಿಭೆ ನಿಷ್ಫಲವಾಗುವುದನ್ನು ಇಲ್ಲಿ ಕಾಣಬಹುದು ಎಂದು ಕುರ್ತಕೋಟಿ ಅವರ ಅಭಿಪ್ರಾಯ. ಮಾತು ಮತ್ತು ಮೌನಗಳ ದ್ವಂದ್ವಾತ್ಮಕತೆ ಸಖೀಗೀತದ ಇತರ ಅನುಭವಗಳಲ್ಲೂ ಕಾಣಬಹುದೆಂಬ ಮುಂದಿನ ಅಧ್ಯಯನಕ್ಕೆ ಹೊಸ ದಾರಿ ತೋರಿರುವರು.

ಕುರ್ತಕೋಟಿ ಅವರು 'ಸಖೀಗೀತ' ಕುರಿತು ತನ್ನ ವಿಮರ್ಶಾ ಪೂರ್ಣಗ್ರಹಿಕೆಯನ್ನು ಈ ರೀತಿ ನೀಡಿದ್ದಾರೆ. 'ಸ್ವತಂತ್ರವಾದ ಪ್ರತಿಭೆ ಇದ್ದರೆ ಮಾತ್ರ ಪರಿಪಾಕದ ಕ್ರಿಯೆ ಸಾಧ್ಯವೆಂದು ಸೂಚಿಸುವುದು ಕವಿತೆಯ ಮುಖ್ಯ ಆಶಯವಾಗಿದೆ. ಅದು ಕವಿತೆಯ ನಿರ್ವಹಣದಲ್ಲಿಯೂ ಒಂದು ತಂತ್ರ ವಿಶೇಷವಾಗಿ ಭಾಷೆಯಲ್ಲಿ ಒಡಮೂಡಿದೆ.' ಕವಿತೆ ಕಾವ್ಯದ ಅರ್ಥಪೂರ್ಣತೆಯನ್ನೂ, ಹಾಡಿನ ನಿರರ್ಥಕ ಲಯವನ್ನು ಮೈಗೂಡಿಸಿಕೊಂಡಿದೆ. ಅಲ್ಲದೆ ಉತ್ತರ ಕರ್ನಾಟಕದ ಆಡುನುಡಿಯ ಹಿಂದೆ ಇರುವ ಶಕ್ತಿಪೂರ್ಣವಾದ ಸಂವೇದನೆಯನ್ನು ಸುಸಂಸ್ಕೃತ ಪ್ರಜ್ಞೆಯ ಕೌಶಲ್ಯದಿಂದ

ಉಪಯೋಗಿಸಿಕೊಂಡಿದೆ. ಅವೆರಡರ ನಡುವಿನ ವಿರೋಧ ಕವಿತೆಯಲ್ಲಿನ ಕೇಂದ್ರಸ್ಥವಾದ ವಿರೋಧವನ್ನು ಸಮರ್ಥವಾಗಿ ಧ್ವನಿಸುತ್ತವೆ.

ಕಾಳಿದಾಸನ 'ಋತು ಸಂಹಾರ'ವು ಇಲ್ಲಿ ಸಾಧನಕೇರಿಯ ಪ್ರಕೃತಿ ಲೀಲೆಯಾಗಿರುವುದು ಇದೇ ಕಾರಣಕ್ಕಾಗಿ ಕವಿತೆಯ ಸ್ವರೂಪವೂ ಗಮನಾರ್ಹವಾಗಿದೆ. ಸಾಂಗತ್ಯದ ಸ್ವರೂಪವನ್ನು ಪಡೆದ ಅಕ್ಷರ ಛಂದಸ್ಸಿನಲಿ ಇದು ರಚನೆಯಾಗಿ ಅಕ್ಕರದ ಬಿಗುಮಾನ, ಸಾಂಗತ್ಯದ ಸ್ವಚ್ಛಂದತೆ ಇವೆರಡೂ ಕೂಡಿಸಿಕೊಂಡು ಕಾವ್ಯಾರ್ಥವನ್ನು ಸಮರ್ಥವಾಗಿ ನಿರ್ವಹಿಸಬಲ್ಲವು ಎಂಬುದೇ ಕೀರ್ತಿನಾಥ ಕುರ್ತಕೋಟಿ ಅವರ ವಿಮರ್ಶಾ ನಿಲುವು.

'ಸಖೀಗೀತ' ಸಂಕಲನವನ್ನು ಕುರಿತು ಇತ್ತೀಚಿನವರೆಗೂ ಹಲವು ಅಧ್ಯಯನಗಳು ನಡೆದಿವೆ. ಲಕ್ಷ್ಮೀನಾರಾಯಣ ಭಟ್ಟರ 'ಸಖೀಗೀತ' ಎಂಬ ಲೇಖನದ ಅಧ್ಯಯನ ಭಿನ್ನ ಮಾದರಿಯದು. ಆತ್ಮ ಚರಿತ್ರೆಯನ್ನು ಅಭಿವ್ಯಕ್ತಪಡಿಸುವ ಹಾದಿಯಲ್ಲಿಯೇ ಸಾಮಾಜಿಕ ಅಭಿವ್ಯಕ್ತಿಯನ್ನು ಪ್ರಚುರಪಡಿಸುವ ಕಾರ್ಯವಾಗಿ ನಿಲ್ಲುವ ಬಗೆಯನ್ನು ಕುರಿತು ಚರ್ಚಿಸಿದ್ದಾರೆ.

> "ದೇಸಿಯ ನುಡಿ, ದೇಸಿಯ ಛಂದ, ಗರತಿಯರೆದೆವಾತು, ನೆರೆವಾತು, ಪ್ರೀತಿಗೆ ಒದಗಿದ ನೀತಿಯದನಿ ಇವುಗಳನ್ನು ಮೈಗೂಡಿಸಿಕೊಳ್ಳುವ ಸಾಮಾಜಿಕ ಪ್ರಕ್ರಿಯೆಯಲ್ಲಿ ಹಾಯುತ್ತ ಖಾಸಗಿಯಾದ ಕವಿಯ ಅನುಭವ ಹತ್ತು ಸಮಸ್ತರ ಸೊತ್ತಾಗುತ್ತಿದೆ"(ಸಖೀಗೀತ; ಲಕ್ಷ್ಮೀನಾರಯಣ ಭಟ್ಟ ಎನ್. ಎಸ್., ವಿವೇಚನ, ಅಪರ್ಣಾ ಪ್ರಕಾಶನ, ಮೈಸೂರು, ಪುಟ ಸಂಖ್ಯೆ ೬೭-೭೮)

ಬೇಂದ್ರೆ ಹಾಗೂ ಕನ್ನಡ ಕಾವ್ಯದ ಸ್ವರೂಪ ಎಂಬ ಗ್ರಂಥದಲ್ಲಿ ಕಾವ್ಯ, ಅದರ ಅರ್ಥ, ವಿಶೇಷ ಪ್ರತಿಭೆ ಇವುಗಳ ಅಧ್ಯಯನದೊಂದಿಗೆ ವಿಶಿಷ್ಟ ರೀತಿಯ ವಿಮರ್ಶೆಯ ಹೊಸ ನೆಲೆಗಳನ್ನು ಗಮನಿಸಿದ್ದಾರೆ. ಇಲ್ಲಿ ಕಾವ್ಯದ ಸ್ವರೂಪ ಪಡೆದುಕೊಳ್ಳುವ ಸಂಕೀರ್ಣತೆ, ಅದರ ಪೂರ್ಣ ಸಜೀವತೆಗೆ ಅನಿವಾರ್ಯವಾಗಿರುವ ಅಭಿವ್ಯಕ್ತಿ ಕ್ರಮ ಇವೆಲ್ಲಾ ವಿಮರ್ಶಕರಿಗೆ ಪ್ರಶ್ನೆಗಳಾಗಿಯೇ ಉಳಿದಿವೆ.

'ಸಖೀಗೀತ' ಸಂಕಲನವನ್ನು ಸ್ಥಳಿಯತೆಯ ಚಿತ್ರಣದ ಭವಿಷ್ಯದ ಸೂಚಕವಾಗಿ ಅಧ್ಯಯನ ನಡೆಸಿದವರು ಪಿ. ಸಂಗೀತಾ ಅವರು. ಇವರ ಸಂಶೋಧನಾ ಪ್ರಬಂಧ 'ನವೋದಯ ಸಂದರ್ಭ ಬೇಂದ್ರೆ- ಕುವೆಂಪು ಕೃತಿಗಳಲ್ಲಿ ಪರಿಸರದ ಪ್ರಶ್ನೆಗಳು' ಇಲ್ಲಿ ಹೊಸ ವಿಚಾರಗಳು ಚರ್ಚೆಯಾಗಿವೆ. 'ಸಖೀಗೀತ' ಸಂಕಲನದ ವಿಷಯವು ಕೇವಲ ದಾಂಪತ್ಯದ ಸಖ್ಯಸಾರವಾಗಿ ಮೂಡಿ ಬಂದಿರದೇ ಸಾಧನಕೇರಿಯ ಪರಿಸರವನ್ನು ಅತ್ಯಂತ ಸಮೃದ್ಧವಾಗಿ ವರ್ಣಿಸುವ ಜೊತೆಗೆ ಪರಿಸರದ ಪ್ರತಿಸ್ಪಂದನೆಯನ್ನು ದಾಂಪತ್ಯದ ಪ್ರತಿನಿಧೀಕರಣವಾಗಿ ಅರ್ಥೈಸಿದ್ದಾರೆ. ಇವರ ಹೊಸ ವಿಚಾರವು ಕಾಲಮಾನದ ತುರ್ತುಗಳನ್ನು ಒಂದು ಕಾವ್ಯವೂ ಅಧ್ಯಯನವಾಗಿ ತುಂಬುತ್ತದೆ ಎಂಬುದಕ್ಕೆ ಇಲ್ಲಿ ಕೆಲವು ವಿಚಾರಗಳನ್ನು ಸೂಕ್ಷ್ಮವಾಗಿ ಅರ್ಥೈಸಿದ್ದಾರೆ.

"'ಸಖೀಗೀತ' ಖಂಡಕಾವ್ಯದಲ್ಲಿ ಬೇಂದ್ರೆಯವರು ಸಾಧನಕೇರಿಯ ಸಮೃದ್ಧ ನಿಸರ್ಗ ಚಿತ್ರಗಳನ್ನು ದಟ್ಟವಾದ ವಿವರಗಳೊಂದಿಗೆ ಚಿತ್ರಿಸಿದ್ದಾರೆ. ಮಲೆನಾಡ ಸೆರಗಿನ ನೆರೆಗಿದ್ದ ಮನೆ, ಅಲ್ಲಿದ್ದ ಸಂಪಿಗೆ. ಪಾರಿಜಾತ, ಮಲ್ಲಿಗೆ, ಮುಗಿಲ ಮಲ್ಲಿಗೆ, ಮಾವು, ತೆಂಗು, ಹಲಸು, ನಿಂಬೆ, ಹೊಂಗೆಯ ಸಾಲುಗಳು, ಮನೆಯ ಮುಂದೆಯೇ ಇದ್ದ ಕೆರೆಯ ಚಿತ್ರ, ಕೆರೆಯ ಪಕ್ಕವೇ ಇದ್ದ ಗುಡ್ಡ, ವೃಕ್ಷ ವಾಟಿಕೆಗಳನ್ನು ಬಳಸಿ ಹೋಗಲು ಇದ್ದ ಹಾದಿಬೀದಿಗಳು, ತೋಪ-ತೋಟಗಳು, ಜೋಳದ ಹೊಲ, ಭತ್ತದ ಗದ್ದೆಯ ದೃಶ್ಯಗಳು 'ಸಖೀಗೀತ'ದಲ್ಲಿ ದಾಖಲಾಗಿವೆ. ಅಂದರೆ ಋತುಗಳ ಏರಿಳಿತ, ಕಾಳ ರಿಂಗಣ ಗುಣಿತ ಹಾಗೂ ಬಿಡಿಬಿಡಿಸಿ ಬರೆದಂತ ನಿಸರ್ಗ ಚಿತ್ರಗಳು ಈ ಖಂಡ ಕಾವ್ಯವನ್ನು ಮುನ್ನಡೆಸಿವೆ."(ಸಂಗೀತ .ಪಿ., ೨೦೦೮., ನವೋದಯ ಸಂದರ್ಭ ಬೇಂದ್ರೆ-ಕುವೆಂಪು ಕೃತಿಗಳಲ್ಲಿ ಪರಿಸರದ ಪ್ರಶ್ನೆಗಳು., ಪುಟ ಸಂಖ್ಯೆ ೫೯)

'ಸಖೀಗೀತ' ಸಂಕಲನದ ಹೊಸ ಚಿಂತನೆಯಲ್ಲಿ ನಿಸರ್ಗ ಪಡೆಯುವ ಅರ್ಥಗಳು ಧ್ವನಿಸುವ ಪರಿಸರದ ಚಿತ್ರಣವು ವಿಶೇಷವಾದುದು. ಈ ಆಯಾಮದಲ್ಲಿ ಒಂದು ಕೃತಿಯನ್ನು ಹೊಸ ಬಗೆಯಲ್ಲಿ ನೋಡುವ ದೃಷ್ಟಿಕೋನಗಳು ನಮಗೆ ಈ ಅಲೋಚನೆಗಳಲ್ಲಿ ಮೂಡುತ್ತವೆ.

ಕುರ್ತಕೋಟಿ ಅವರನ್ನು ಹೆಚ್ಚು ಕಾಡಿರುವುದು ಬೇಂದ್ರೆ ಕಾವ್ಯದಲ್ಲಿ ಹೆಜ್ಜೆ ಹೆಜ್ಜೆಗೂ ಕಾಣುವ ಕಾವ್ಯ ಪ್ರತಿಭೆ, ಕಾಲದ ಪರಿಪೂರ್ಣತೆ ಈ ಕಿರು ವಿಮರ್ಶಾ ಕೃತಿಯ ಮುಖ್ಯ ನೆಲೆಯಾಗಿದೆ. ಇಲ್ಲಿ ಮುಂದಿನ ವಿಮರ್ಶಕರಿಗೂ ದಾರಿ ತೆರೆದು 'ಬೇಂದ್ರೆ ಕಾವ್ಯವು ಕನ್ನಡ ಭಾಷೆಯ ಸಹಜಗತಿ, ವರ್ತಮಾನ ಜೀವನದ ಸಂವೇದನೆಗಳು, ಕನ್ನಡ ಸಂಸ್ಕೃತಿಯ ಅಂತಃಸತ್ವ ಇವು ಮೂರಕ್ಕೂ ಅನ್ಯಾಯವಾಗದಂತೆ ಅವರ ಕಾವ್ಯ ರಚನೆ ಕನ್ನಡ ಕಾವ್ಯದ ನೈಜ ಸಂಪ್ರದಾಯವನ್ನು ಸಂಪನ್ನಗೊಳಿಸಿದೆ'ಎಂಬ ತೀರ್ಮಾನ ಇವರದು.

'ಭೃಂಗದ ಬೆನ್ನೇರಿ' ಈ ಕೃತಿಯ ಪ್ರಸ್ತಾವನೆಯಲ್ಲಿ ಕೀರ್ತಿನಾಥ ಕುರ್ತಕೋಟಿ ಅವರು ವಿಮರ್ಶೆ ಹಾಗೂ ವಿಮರ್ಶಕನನ್ನು ಕುರಿತು ಈ ರೀತಿ ಹೇಳಿದ್ದಾರೆ.

> ವಿಮರ್ಶೆಯ ಪರಿಭಾಷೆಯ ಮಾಟದ ಬೂದಿಯನ್ನು ಚೆಲ್ಲಿ ಕಾವ್ಯಮೃಗವನ್ನು ಬಲೆಗೆ ಕೆಡವಿಕೊಳ್ಳಬೇಕೆನ್ನುವುದು ಸಹೃದಯ ವ್ಯಾಪಾರವೇನೂ ಅಲ್ಲ. ವಿಮರ್ಶಕ, ಕೃತಿ ಕೊಡುವ ಅನುಭವಕ್ಕೆ ತನ್ನನ್ನು ಸಂಪೂರ್ಣವಾಗಿ ಒಡ್ಡಿಕೊಳ್ಳದೆ ವಿಧಿ ಇಲ್ಲ. ಕೃತಿ ಒಳ್ಳೆಯದಾಗಿದ್ದರೆ ಅದರ ವಿಮರ್ಶೆಯ ಮಾನದಂಡಗಳು ಆ ಕೃತಿಯಲ್ಲಿಯೇ ನಿಹಿತವಾಗಿರುತ್ತವೆ. ಅವುಗಳನ್ನು ಹುಡುಕಿ ತೆಗೆಯುವುದು ವಿಮರ್ಶಕನ ಮುಖ್ಯ ಕೆಲಸವಾಗಿದೆ.[೫]

ಈ ಕೃತಿಯು ವಿಮರ್ಶಾ ಅಧ್ಯಯನದಲ್ಲಿ ಹೊಸ ಅರ್ಥಗಳನ್ನು ರೂಪಿಸಿದ ಕೃತಿ. ೧೯೭೫ರವರೆಗಿನ ವಿಮರ್ಶಾ ಚಿಂತನೆಯನ್ನು ಅವಲೋಕಿಸಿ, ಆ ಕಾಲಘಟ್ಟದಲ್ಲಿ ಪ್ರಾರಂಭವಾಗಿದ್ದ ನವ್ಯವಿಮರ್ಶೆ ಕುರಿತು ವಿವಿಧ ಆಯಾಮಗಳ ಚರ್ಚೆ ಮಾಡಿರುವುದನ್ನು ಗಮನಿಸಬಹುದು. ನವ್ಯ ವಿಮರ್ಶೆಯು ಆ ಕಾಲಘಟ್ಟದ ಪ್ರತಿಯೊಬ್ಬ ವಿಮರ್ಶಕನ ಮೇಲೂ ಪ್ರಭಾವ ಹಾಗೂ ಪರಿಣಾಮ ಬೀರಲು ಸೂಕ್ತಕಾರಣಗಳನ್ನು ಪರಿಶೀಲಿಸಿದ್ದಾರೆ. 'ಕೃತಿಯ ಬಾಹ್ಯಸ್ವರೂಪ –

ಭಾಷೆ, ಪ್ರತಿಮೆಗಳು, ಲಯ, ಛಂದಸ್ಸು, ಕೃತಿಯ ಅಂತರಾರ್ಥ ಮೊದಲಾದ ಅಂಶಗಳೊಂದಿಗೆ ನವ್ಯವಿಮರ್ಶೆಯು ವಿವೇಚಿಸಿದ ಪರಿಯನ್ನು ಕುರಿತು ಚರ್ಚಿದ್ದಾರೆ. ಭೃಂಗದ ಬೆನ್ನೇರಿ ಕೃತಿಯು ಈ ಎಲ್ಲಾ ಸ್ವರೂಪದ ಮಾದರಿಯಾಗಿ ಗಮನಿಸಬಹುದು. ಈ ವಿಮರ್ಶಾ ಕೃತಿಯನ್ನು ದರ್ಶನ, ಶ್ರುತಿ, ಕೃತಿ, ಶಬ್ದ ಎಂಬ ನಾಲ್ಕು ಭಾಗಗಳಲ್ಲಿ ಗಮನಿಸಿದ್ದಾರೆ.

'ದರ್ಶನ' ಭಾಗದಲ್ಲಿ ಬೇಂದ್ರೆ ಅವರ ದಾರ್ಶನಿಕ ಚಿಂತನೆಗಳನ್ನು ಗಮನಿಸುತ್ತಾ ಅವರು ಬಳಸುವ 'ಸತ್' ಮತ್ತು 'ಭಾವ' ಈ ಪದಗಳ ಆಶಯವನ್ನು ಗಮನಿಸುತ್ತಾರೆ. ಸೂಕ್ತ ಉದಾಹರಣೆಯಾಗಿ 'ಅಚಿಂತ್ಯ' ಎಂಬ ಕವಿತೆಯ ಭಿನ್ನ ಪ್ರಯೋಗವನ್ನು ಅದರ ವ್ಯಾಕರಣಾಂಶವನ್ನು ಕುರ್ತಕೋಟಿ ಅವರು ವಿಮರ್ಶಾ ಕನ್ನಡಿಯಲ್ಲಿ ದರ್ಶನ ಮಾಡಿರುವರು.

ಕವಿಯ ರೂಪಕ ಹಾಗೂ ಸಂಕೇತಗಳು ಕಾವ್ಯದಲ್ಲಿ ಸೃಜನಶೀಲವಾದ ಎಲ್ಲಾ ವ್ಯಾಪಾರಕ್ಕೂ ಸಾಧನಗಳಾಗಿವೆ. ಅವು ಬೇಂದ್ರೆ ಕಾವ್ಯದಲ್ಲಿ ಕವಿಯ ಸರ್ಜನಾಪೇಕ್ಷೆಯ ತೀವ್ರತೆಯಲ್ಲಿ ಅನುಭವವನ್ನು ಅರಿಯಲು ಸಹಾಯಕವಾಗುತ್ತವೆ ಎಂಬ ದರ್ಶನ ತತ್ವವನ್ನು ವ್ಯಕ್ತಪಡಿಸಿದ್ದಾರೆ.

'ಶೃತಿ' ಭಾಗದಲ್ಲಿ ಕವಿಯ ಭಾವ ಜಗತ್ತು, ನಿರಪೇಕ್ಷವಾದ ತಿಳುವಳಿಕೆಗಳು ಮನೋವಿಜ್ಞಾನಿ ಕಾರ್ಲ್‌ಯೂಂಗ್‌ನ ಚಿಂತನೆಗೆ ಸಮಾನವಾಗಿ ನಿಲ್ಲುವ ಅಧಿಮಾನಸ ತತ್ವಕ್ಕೆ ಹೋಲಿಕೆ ನೀಡುತ್ತಾರೆ. ಅದಕ್ಕೆ 'ತುರೀಯ ಅವಸ್ಥೆ' ಎಂದು ಕರೆದಿದ್ದಾರೆ. ಕಾವ್ಯದಲ್ಲಿ ಪೌರಾಣಿಕ ಪ್ರತಿಮೆ ಹಾಗೂ ಕಾರಣ ಪ್ರತಿಮೆಗಳನ್ನು ಅರ್ಥ-ಭಾವದ ನೆಲೆಯಲ್ಲಿ ಚರ್ಚಿಸಲಾಗಿದೆ. ವಚನ ಸಾಹಿತ್ಯದಲ್ಲಿ ಅಭಿವ್ಯಕ್ತಿಗೊಂಡ ಕಾರಣ ಪ್ರತಿಮೆಗಳು ಬೇಂದ್ರೆ ಅವರ ಕರುಳಿನ ವಚನಗಳಲ್ಲಿ ಕಂಡುಬರುವುದನ್ನು ಗುರ್ತಿಸುತ್ತಾರೆ. ಹುಡುಕಾಟದ ಸತ್ಯ ಒಂದೇ ಆದರೂ ಅನುಭವಗಳ ಅಂತರವನ್ನು ಗಮನಿಸಬಹುದು ಎಂಬ ಚಿಂತನೆ ಇವರದು.

'ಕೃತಿ' ಭಾಗದಲ್ಲಿ ಬೇಂದ್ರೆ ಅವರ ಕಾವ್ಯ ಸ್ವರೂಪ ಕುರಿತು

> ಕನ್ನಡದ ಸಂದರ್ಭದಲ್ಲಿ ಹೇಳುವುದಾದರೆ ಪ್ರಾಚೀನ ಕಾಲದ ಕಟ್ಟು ಕಟ್ಟಳೆಗಳು ಒಂದು ಕಡೆಗೆ, ನವ್ಯ ಕಾಲದ ತೋರಿಕೆಯ ನಿಯಮರಾಹಿತ್ಯ ಇನ್ನೊಂದು ಕಡೆಗೆ ಇಂಥ ಬದಲಾವಣೆಯ ಕಾಲದಲ್ಲಿ ಬೇಂದ್ರೆಯವರ ಕಾವ್ಯ ನಟ್ಟನಡುವಿನದು.[೧೦]

ಎಂದು ವಿಮರ್ಶಕ ಕುರ್ತಕೋಟಿ ಅವರ ತೀರ್ಮಾನ. ಕವಿಯ ಕವಿತೆಗಳಿಗೆ ಸ್ವಂತ ಅನುಭವದ ಹಿನ್ನೆಲೆಹೆಚ್ಚಾಗಿ ಕಂಡು ಬಂದರೂ ಬೇಂದ್ರೆ ಅವರು ಬಳಸುವ ಕಾವ್ಯಮೀಮಾಂಸೆಯಲ್ಲಿ ಕವಿಯ ವ್ಯಕ್ತಿತ್ವಕ್ಕೆ ಮಹತ್ವದ ಸ್ಥಾನವಿಲ್ಲವೆಂಬ ತೀರ್ಮಾನ ಇವರದು. ಇದೆಲ್ಲವನ್ನೂ ಭಾವದ ಹಿನ್ನೆಲೆಯಲ್ಲಿ ಅರ್ಥಸಂಸ್ಕಾರವನ್ನು ಗ್ರಹಿಸಿ ಅವಲೋಕಿಸುವ ಕಾರ್ಯ ಈ ವಿಮರ್ಶೆಯದು.

'ಶಬ್ದ' ಭಾಗದಲ್ಲಿ ಶಬ್ದ, ಛಂದ, ಭಾವ ಮತ್ತು ಧ್ವನಿಗಳನ್ನು ಬೇಂದ್ರೆ ಅವರ ಕಾವ್ಯದ ತಂತ್ರ ಚತುರ್ಮುಖವೆಂದು ಕರೆದಿದ್ದಾರೆ. ಈ ತಂತ್ರ ಚತುರ್ಮುಖದ ಶಿಲ್ಪ ರೂಪವೇ ಭಾವಗೀತ ರಚನೆ. ಇಲ್ಲಿನ ಕಾವ್ಯ ಸ್ವರೂಪವನ್ನು ಶಬ್ದ/ಭಾಷೆ ಮತ್ತು ಛಂದಸ್ಸು ದೃಷ್ಟಿಯಿಂದ ವಿಮರ್ಶಿಸುವ ಅಗತ್ಯವನ್ನು ತಿಳಿಸಿ ಕೆಲವು ಕವಿತೆಯೊಂದಿಗೆ ಅರ್ಥೈಸುವ ಪ್ರಯತ್ನ ಇಲ್ಲಿಯದು. ಜೀವಂತವಾದ

ಮತ್ತು ತನ್ನದೇ ಆದ ಮೌಲ್ಯಗಳ ಪ್ರಪಂಚವನ್ನು ನಿರ್ಮಿಸುವ ಉದ್ಧೇಶದಿಂದ ಬೇಂದ್ರೆ ಅವರಲ್ಲಿ ಜಾನಪದ ಭಾಷೆ ಕಾಣಿಸಿಕೊಳ್ಳುತ್ತದೆ. ಅದು ಆಡುಮಾತಿಗೆ ಸಹಜವಾಗಿರುವ ಒಂದು ವ್ಯಂಗ್ಯದಿಂದ ಬೇರೆ ಜೀವನದ ರೀತಿ–ನೀತಿಗಳನ್ನು ಇವರ ಕಾವ್ಯ ವಿಮರ್ಶಿಸುತ್ತದೆ. ಛಂದಸ್ಸಿನ ದೃಷ್ಟಿಕೋನವನ್ನು ವಿಮರ್ಶಿಸುತ್ತಾ ಈ ರೀತಿ ತಿಳಿಸುತ್ತಾರೆ.

> ಕಾವ್ಯದ ಭಾಷೆಗೂ ಛಂದಸ್ಸಿಗೂ ಇರುವ ಅವಿಭಾಜ್ಯ ಸಂಬಂಧವನ್ನು ಬೇಂದ್ರೆಯವರು ಗುರುತಿಸಿದ್ದಾರೆ ಅಷ್ಟೇ ಅಲ್ಲ, ಪ್ರತಿಯೊಂದು ಭಾವ ತನ್ನ ಛಂದಸ್ಸನ್ನು ಹುಟ್ಟಿಸಿಕೊಳ್ಳಬೇಕೆಂಬುದು ಅವರ ಕಾವ್ಯ ಪ್ರತಿಜ್ಞೆಯಾಗಿದೆ.[೧೧]

ಕವಿಯು ಅಂಶ ವೃತ್ತ ಹಾಗೂ ಮಾತ್ರಾವೃತ್ತಗಳ ಬಳಕೆಗೆ ರೂಪಿಸುವ ಭಾವ ಜಗತ್ತನ್ನು ಹೆಚ್ಚಾಗಿ ಗ್ರಹಿಸಿರುವರು. ಕವಿಯ ಛಂದಸ್ಸಿನ ಪೂರ್ಣ ದೃಷ್ಟಿಕೋನವನ್ನು

> ಪ್ರಾಚೀನ ಕನ್ನಡ ಕಾವ್ಯದ ಛಂದ–ಬಂಧ, ಜಾನಪದ ಕಾವ್ಯದ ಗೇಯತೆ ಮತ್ತು ಸ್ವಚ್ಛಂದ, ನಡುವೆ ಮಾತ್ರಾಗಣಗಳ ಶಿಸ್ತಿನ ವೈವಿಧ್ಯ ಮತ್ತು ಕೊನೆಯಲ್ಲಿ ವೈದಿಕ ಛಂದಸ್ಸಿನ ಮಾಂತ್ರಿಕತೆ.[೧೨]

ಇವೆಲ್ಲವನ್ನೂ ಒಂದೊಂದು ಉದ್ದೇಶದಿಂದ ಬಳಸಿಕೊಳ್ಳುತ್ತಾರೆ ಎಂಬ ವಿಮರ್ಶಾ ನಿಲುವು ಕೀರ್ತಿನಾಥ ಕುರ್ತುಕೋಟಿ ಅವರದು.

ಬೇಂದ್ರೆ ಕಾವ್ಯದಲ್ಲಿ ಶೃತಿ ಮತ್ತು ಕೃತಿ

ಕೀರ್ತಿನಾಥ ಕುರ್ತಕೋಟಿ ಅವರು ೧೯೮೪ರಲ್ಲಿ ರಚಿಸಿದ ವಿಮರ್ಶಾ ಕಿರು ಕೃತಿ ಇದು. ಈ ಕೃತಿಯಲ್ಲಿ ಎರಡು ಅಂಶಗಳನ್ನು ಬಹುಮುಖ್ಯವಾಗಿ ಗ್ರಹಿಸಿದ್ದಾರೆ. ಅವುಗಳೆಂದರೆ ಭಾವಗೀತದ ಪರಿಮಿತ ಪ್ರಕಾರದಲ್ಲಿ ಸಾಧಿಸಿದ ಸಿದ್ಧಿ ಹಾಗೂ ಭಾವಗೀತದ ಕಾವ್ಯ ಪ್ರಭೇದ ಅವರ ಪ್ರತಿಭೆಯ ಮೂಲಕ ಪರಿಪುಷ್ಟವಾಗಿ ಬೆಳೆದು ಬಂದ ರೀತಿ.

ಬೇಂದ್ರೆ ಅವರ ಕಾವ್ಯದಲ್ಲಿ ಯೌಗಿಕ ಅಂಶಗಳು ಹಾಗೂ ಅನುಭವ ಕಾವ್ಯದ ಸ್ವರೂಪ ಕುರಿತು ತಿಳಿಸಲು ಕುರ್ತಕೋಟಿ ಅವರು ಒಂದು ದೀರ್ಘ ಪೀಠಿಕೆಯನ್ನೇ ನೀಡಿದ್ದಾರೆ. ಸಾಮಾನ್ಯ ಕಾವ್ಯದಿಂದ ಇಂಥ ಕಾವ್ಯವನ್ನು ಬೇರ್ಪಡಿಸಲು ನಡೆಸಿದ ತಯಾರಿ ಎನ್ನುತ್ತಾರೆ. 'ನಾಕುತಂತಿ' ಸಂಕಲನದ ಮುನ್ನುಡಿಯಲ್ಲಿ ಬೇಂದ್ರೆ ಅವರು ಅಭಿವ್ಯಕ್ತಪಡಿಸುವ ಭೋಗ ಸಾಧನೆಯ ಕವನ ಭಂಡಾರ ಹಾಗೂ ಯೋಗ ಸಾಧನೆಯ ಕವನಮಾರ್ಗ ಈ ಎರಡೂ ಅಂಶಗಳು ಮುಖ್ಯವಾಗಿವೆ. ಅದು 'ನಾಕುತಂತಿ' ಕವನದಲ್ಲಿ ವ್ಯಕ್ತವಾಗುವ ರೀತಿಯನ್ನು ಮಿಮಾಂಸೆಯ ವಲಯದಲ್ಲಿ ಅರ್ಥೈಸಿದ್ದಾರೆ.

ಕುರ್ತಕೋಟಿ ಅವರು ಯೌಗಿಕ ಕಾವ್ಯದ ಚರ್ಚೆಗಾಗಿ ಬೇಂದ್ರೆ ಅವರ ಕಾವ್ಯದ ಅನುಭವ ಹಾಗೂ ಅನುಭಾವ ನೆಲೆಯ ಸ್ವರೂಪವನ್ನು ಚರ್ಚಿಸಿದ್ದಾರೆ. ಈ ದೃಷ್ಟಿಯಲ್ಲಿ ಬೇಂದ್ರೆ ಅವರ ಕವಿತೆಗಳನ್ನು ಮೂರು ರೀತಿಯಲ್ಲಿ ವಿಂಗಡಿಸಿದ್ದಾರೆ. ಸ್ವಾನುಭಾವ/ಲೋಕಾನುಭವವನ್ನು ಅವುಗಳ ಹೃದ್ಯತೆಯಿಂದ ಪ್ರಕಟಿಸಿರುವ ಕವನಗಳು, ಚಿಂತನೆ/ಬೌದ್ಧಿಕತೆಯಿಂದ ಕೂಡಿದ ಕವಿತೆಗಳು

ಮತ್ತು ಯೌಗಿಕ ಕವನಗಳು. ಅಭಿವ್ಯಕ್ತಿಯ ದೃಷ್ಟಿಯಿಂದ ಯೌಗಿಕ ಕವಿತೆಗಳಿಗೆ ಕಾಲ ಮಾಗಿ ಬರಬೇಕೆಂದು ಕುರ್ತಕೋಟಿ ಅವರು ಅಭಿಪ್ರಾಯಪಟ್ಟಿದ್ದಾರೆ.

ಬೇಂದ್ರೆ ಅವರ ಅನುಭವ ಕಾವ್ಯದ ಸ್ವರೂಪದಲ್ಲಿ ಭಾವ, ರಾಗ, ಚಿತ್ರಗಳ ಮೂಲಕ ಅಭಿವ್ಯಕ್ತಿಯನ್ನು ಪಡೆದು ಬಂದು ಅವು ಬೀಸಾದ ಹಾಡುಗಳಾಗಿದ್ದರೆ ಅವುಗಳ ಸ್ವರೂಪ ಮುಕ್ತವಾದದ್ದಾಗಿರುತ್ತದೆ. ಹೀಗೆ ಕುರ್ತಕೋಟಿ ಅವರು 'ಮಾಯಾಕಿನ್ನರಿ', 'ಬೆಳದಿಂಗಳ ನೋಡ', 'ಶ್ರಾವಣ', 'ಚಿತ್ತಿಮಳೆಯ ಸಂಜೆ', ಸಖೀಗೀತ', ಈ ಕವಿತೆಗಳೊಳಗೆ ಮುಕ್ತ ರೂಪದ ಒಂದು ಭಾವಗೀತವನ್ನು ಹೆಚ್ಚಾಗಿ ಗಮನಿಸಿರುವರು.

ಕುರ್ತಕೋಟಿ ಅವರು ಭೋಗ ಮತ್ತು ಯೋಗದ ಅರಿವು, ಅನುಭವ ಕಾವ್ಯದ ಸಂಸ್ಕಾರ ಚಿಂತನೆ, ಕವಿಯ ಬೌದ್ಧಿಕ ಕಾವ್ಯದ ವಿಶೇಷತೆಗಳ ಚರ್ಚೆಯ ನಂತರ ಕವಿ ಪ್ರತಿಭೆಗೆ ಒಂದು ಸ್ವರೂಪ ತಂದು ಬೇಂದ್ರೆ ಅವರ ಕಾವ್ಯದಲ್ಲಿ ಶೃತಿ ಮತ್ತು ಕೃತಿ ದರ್ಶನದ ಚಿಂತನೆ ನಡೆಸಿದ್ದಾರೆ. ಇವರು ಹಾಡು-ಪಾಡು, ನನ್ನವಳು, ಕಲ್ಪವೃಕ್ಷ ವೃಂದಾವನಂಗಳಲಿ ಈ ಕವಿತೆಗಳ ವಸ್ತುವಿನೊಡನೆ ಪ್ರಣಯಾನುಭಾವ ವಾತಾವರಣ ಸೃಷ್ಟಿಗಾಗಿ ಉಪಯೋಗಿಸಿದ ಪ್ರತಿಮೆಗಳೆಲ್ಲಾ ತಾವೇ ಒಂದು ಪ್ರತಿ ವಸ್ತುವಾಗಿ ಮೂಲ ವಸ್ತುವಿನೊಡನೆ ಸ್ಪರ್ಧೆಗೆ ನಿಲ್ಲುತ್ತವೆ. ಆದರಿಂದ ಬೇಂದ್ರೆ ಅವರ ಅಭಿಪ್ರಾಯದಂತೆ, 'ಉತ್ಕೃಷ್ಟವಾದ ಕವಿತೆ ಶೃತಿ ಮತ್ತು ಕೃತಿಯ ಮೇಳವಾಗಬೇಕು, ಒಂದಾಗಬೇಕು.' ನಾಕುತಂತಿಯ 'ಮತ್ತ ಶ್ರಾವಣ' ಕವಿತೆಯಂತೆ ಚೈತ್ರದ ಸೃಷ್ಟಿಗೆ ಶ್ರಾವಣದ ಅನುಗ್ರಹಬೇಕು ಎಂದು ಕುರ್ತಕೋಟಿ ಅವರು ಇನ್ನೂ ಮುಂದುವರೆದು ಇಲ್ಲಿನ ಸಾಂಕೇತಿಕ ಭಾಷೆಗಳಿಂದ ಗಮನಿಸುತ್ತಾರೆ. ಹೊಸ ಸೃಷ್ಟಿಯ ಉದಯಕ್ಕೆ ಹರಿ-ಹರರು ಶ್ರಾವಣ-ಚೈತ್ರ, ತುಂಗೆ-ಭದ್ರೆ, ಒಂದಾಗಬೇಕು. ಇಲ್ಲಿ 'ನಡೆ-ನುಡಿ ಒಂದಾಗಿ ಕೇಳಿದ್ದನ್ನು ನುಡಿಯುವುದು ಶೃತಿಮತ್ತರು ಕಂಡಂತೆ ನಡೆಯುವುದು ಕೃತಿ' ಎಂಬ ತಾತ್ವಿಕ ನಿಲುವು ವಿಮರ್ಶಕ ಕುರ್ತಕೋಟಿ ಅವರದು. ಬೇಂದ್ರೆ ಅವರ ಕವನಸಂಕಲನಗಳಾದ ನಾದಲೀಲೆ, ಕನ್ನಡ ಮೇಘಸಂದೇಶ, ಅರಳು ಮರಳು, ನಾಕುತಂತಿ, ಬಾಲಬೋಧೆ ಇವುಗಳ ಕುರಿತು ಕುರ್ತಕೋಟಿ ಅವರು ಪತ್ರಿಕೆ, ಸಂಚಿಕೆ, ವಿಮರ್ಶಾ ಕೃತಿಗಳಲ್ಲಿ ವಿಮರ್ಶೆ ನೀಡಿರುವುದನ್ನು ಈ ರೀತಿ ಅಧ್ಯಯನ ಮಾಡಬಹುದು.

ನಾದಲೀಲೆ ಕುರಿತು ವಿಮರ್ಶೆಗಳು

ಕುರ್ತಕೋಟಿ ಅವರು ರಚಿಸಿರುವ ಕೆಲವು ಬಿಡಿಲೇಖನಗಳು ಬೇಂದ್ರೆ ಅವರ ಕಾವ್ಯದನೆಲೆಯನ್ನು ಅವುಗಳ ಸ್ವರೂಪ ಮತ್ತು ತಾತ್ವಿಕ ದೃಷ್ಟಿಯಿಂದ ಗಮನಿಸಬಹುದು. ನಾದಲೀಲೆ, ಕನ್ನಡ ಮೇಘ ಸಂದೇಶ, ಅರಳು-ಮರಳು, ನಾಕುತಂತಿ, ಬಾಲಬೋಧೆ ಈ ಕೃತಿಗಳನ್ನು ಕುರಿತ ವಿಮರ್ಶಾ ಲೇಖನಗಳನ್ನು ಇಲ್ಲಿ ಅಧ್ಯಯನ ಮಾಡಬಹುದು.

> 'ಮನದನ್ನೆ', 'ಹೆಣದಹಿಂದೆ' ಇಂಥ ಗದ್ಯದ ಅರ್ಥ ವ್ಯಕ್ತಿಯನ್ನುಳ್ಳ ಕವಿತೆಗಳಿಂದ ಹಿಡಿದು 'ಸಚ್ಚಿದಾನಂದ', 'ಭಾವಗೀತ' ರಹಸ್ಯಾರ್ಥವುಳ್ಳ ಕವಿತೆಯವರೆಗೆ ಇವುಗಳ ವ್ಯಾಪ್ತಿಯಿದೆ. ದೇಶಪ್ರೇಮ, ನಿಸರ್ಗದ ಒಲವು, ಸಮಾಜದ ಸ್ಥಿತಿಗತಿ, ವೈಯಕ್ತಿಕ ಅನುಭೂತಿ– ಹೀಗೆ ವಿಷಯಗಳ ದೃಷ್ಟಿಯಿಂದಲೂ ವೈವಿಧ್ಯವಾಗಿದೆ.[೪೩]

ಈ ಸಂಕಲನಕ್ಕಿರುವ ಮಾಸ್ತಿ ಅವರ ಮುನ್ನುಡಿಯೇ ವಿಮರ್ಶೆಗೆ ಪ್ರವೇಶ ಒದಗಿಸುತ್ತದೆ ಎಂದು ಖಚಿತ ಪಡಿಸುವರು.

ಪ್ರಾಚೀನ ಸಾಹಿತ್ಯದ ಪಾರಿಭಾಷಿಕಗಳಾದ ವಸ್ತುಕ ಹಾಗೂ ವರ್ಣಕದ ಲಕ್ಷಣ ಹೊಂದಿರುವ ಬೇಂದ್ರೆಯವರ ಕವಿತೆಗಳನ್ನು ಅಧ್ಯಯನಮಾಡಿ 'ನಾದಲೀಲೆ'ಯ ಕವಿತೆಗಳನ್ನು ಕುರಿತು ಕುರ್ತಕೋಟಿ ಅವರು ಈ ರೀತಿ ಚಿಂತಿಸಿದ್ದಾರೆ. 'ತಾಯಿ' ಹಾಗೂ 'ಅಷ್ಟು ಪ್ರೀತಿ ಇಷ್ಟು ಪ್ರೀತಿ' ಈ ಕವಿತೆಗಳನ್ನು ಭಾವದಲ್ಲಿ ಎರಡೂ ಪ್ರಕಾರದಲ್ಲಿ ಕಾಣಬಹುದು. ಆದರೆ ಇಲ್ಲಿ ಕಾವ್ಯದ ಸಾತತ್ಯ ಅಪೂರ್ಣವೆನಿಸಲು ಕಾರಣವನ್ನು ನಿರೂಪಿಸುವರು.

ನಾದಲೀಲೆಯಲ್ಲಿ ವಸ್ತುಕ ಜಾತಿಯ ಕವಿತೆಗಳೂ ಬೇಕಾದಷ್ಟಿವೆ. ಒಂದು ತತ್ವಕ್ಕೋ ಅಥವಾ ವಿಚಾರಕ್ಕೋ ಮಾತುಕೊಡುವ 'ಎದೆಯ ಒಕ್ಕಲಿಗ', 'ಸಿಟ್ಟು ಸಾಂತಿ', 'ಮೊದಲಗಿತ್ತಿ' ಇಂಥ ಕವಿತೆಗಳು. ಸ್ವಂತ ಜೀವನದ ಅಭೀಪ್ಸೆಗಳನ್ನು, ಅನುಭವಗಳನ್ನು ಪ್ರಕಟಿಸುವ 'ಬನ್ನಿ ಬನ್ನಿ ಕನಸುಗಳೇ', 'ಮದ್ಯ'ದಂಥ ಕವಿತೆಗಳು, ನೀ ಹೀಂಗ ನೋಡಬ್ಯಾಡ ನನ್ನ', ಮರೆಯುವಿಯೋ ಅರಿಯುವೆಯೋ', 'ಎಲ್ಲಿರುವೆ ರಾಜ ಗಂಭೀರಾ'ದಂಥ ಶುದ್ಧ ಭಾವಗೀತೆಗಳು– ಹೀಗೆ ಉದಾಹರಣೆಗಳನ್ನು ಕೊಡಬಹುದು. ಬೇಂದ್ರೆ ಅವರ ಕಾವ್ಯದಲ್ಲಿ ಕವಿತೆಯ ವಸ್ತು ತನ್ನ ಭಾಷೆಯನ್ನು, ಅಭಿವ್ಯಕ್ತಿಯ ರೀತಿಯನ್ನು ಹುಟ್ಟಿನಿಂದಲೇ ಪಡೆದುಕೊಂಡು ಬರುತ್ತದೆ.೪೪

'ಏಳು ಕನ್ನಿಕೆಯರು' ಕವಿತೆಯಲ್ಲಿ ರಸ ವಿರಸ ವಾಗುವ ಕ್ರಿಯೆ ಇದೆ. ಈ ಕವಿತೆಯ ಮಹತ್ವವಾಗಿ 'ವಾಸ್ತು ಶಿಲ್ಪವನ್ನು ಹೋಲುವ ಕವಿತೆಯ ಬಂಧ'ವನ್ನು ಪರಿಶೀಲಿಸುವರು.

'ನಾದಲೀಲೆ' ಸಂಕಲನದ ವಿಮರ್ಶೆಯಲ್ಲಿ ಬೇಂದ್ರೆ ಅವರ ಬೇರೆ ಬೇರೆ ಸಂಕಲನಗಳನ್ನು ಅಧ್ಯಯನ ಮಾಡಿ ಪೂರಕ ಸಮಸ್ಯೆಗಳನ್ನು ಪ್ರಶ್ನೆ ಮಾಡಿದ್ದಾರೆ. ಕಾವ್ಯದ ಭಾವ ಮತ್ತು ಅರ್ಥಗಳ ಸಂಬಂಧದಲ್ಲಿ ತೊಡಕಿರುವುದು ಅದನ್ನು ಈ ರೀತಿ ಅರ್ಥೈಸಿದ್ದಾರೆ. 'ಅರ್ಥವೆನ್ನುವುದು ಭಾಷೆಯ ಗುಣಧರ್ಮ, ಅದರ ಶಕ್ತಿ. ಇಂಥ ಭಾಷೆಯನ್ನು ಮಾಧ್ಯಮವಾಗಿ ಸ್ವೀಕರಿಸುವ ಕಾವ್ಯಕ್ಕೆ ಅರ್ಥದ ನಂಟು ತಪ್ಪಿದ್ದಲ್ಲ. ವ್ಯವಹಾರದಲ್ಲಿ ಇದೇ ಅರ್ಥದ ಪ್ರಕಟಣೆಗಾಗಿ ನಾವು ಭಾಷೆಯನ್ನು ಉಪಯೋಗಿಸುತ್ತೇವೆ. ಕಾವ್ಯದ ಉದ್ದೇಶ ಇದಲ್ಲವಾದರೂ, ಯಾವ ಕವಿಯೂ ಅರ್ಥವನ್ನು ನಿರಾಕರಿಸಿ ಕಾವ್ಯವನ್ನು ರಚಿಸಲಾರ. ಇಷ್ಟಾದರೂ ಕಾವ್ಯ ಕಲೆಯಾಗಬೇಕಾದರೆ ಅರ್ಥವ್ಯಕ್ತಿಗಿಂತ ಮುಂದೆ ಹೋಗಲೇಬೇಕಾಗುತ್ತದೆ. ವ್ಯಂಗ್ಯಾರ್ಥ, ವಕ್ರೋಕ್ತಿ, ಸಂಕೇತಾರ್ಥ ಹೀಗೆ ಅನೇಕ ವಾದಗಳು ಈ ಸಮಸ್ಯೆಯಿಂದ ಹುಟ್ಟಿಕೊಂಡಿವೆ.' ಎಂದು ತಿಳಿಸುತ್ತಾ ಅಂತಿಮವಾಗಿ ಕುರ್ತಕೋಟಿಯವರು ಈ ತೀರ್ಮಾನಕ್ಕೆ ಬರುತ್ತಾರೆ 'ಬೇಂದ್ರೆಯವರು 'ಭಾವ'ದ ಸಹಾಯದಿಂದ ಈ ಸಮಸ್ಯೆಯನ್ನು ಬಿಡಿಸಲು ಯತ್ನಿಸಿದ್ದಾರೆ'. ವಿಮರ್ಶಕರಾದರೂ ಕೂಡ ಕುರ್ತಕೋಟಿ ಅವರು ಬೇಂದ್ರೆ ಅವರ ಮೇಲಿನ ಅಭಿಮಾನವನ್ನು ಮರೆಯುವುದಿಲ್ಲ ಇದು ಅವರ ವಿಮರ್ಶೆಯ ತೊಂದರೆಯೂ ಹೌದು. ಎಸ್. ಆರ್. ವಿಜಯಶಂಕರ್ ಅವರು ಬೇಂದ್ರೆ ಅವರ 'ನಾದಲೀಲೆ' ಕುರಿತು ವೈಯಕ್ತಿಕ ಅನುಭವಗಳನ್ನು ಚರ್ಚಿಸುವುದನ್ನು ಕಾಣಬಹುದು. ಒಂದು ಕವಿತೆ ಜೀವದ್ರವ್ಯದ

ಅನುಭವವೂ ಆಗುತ್ತದೆ ಎಂಬುದಕ್ಕೆ ಇವರ ಲೇಖನ ಸ್ಪಷ್ಟವಾದ ಉದಾಹರಣೆಯಾಗಿದೆ. ಕೋಲು ಸಖೀ ನೃತ್ಯವು 'ನಾದಲೀಲೆ'ಯ ತಾಳಲಯದ ಶುದ್ಧಿಯ ಮೂಲಕ ಬ್ರಹ್ಮಾಂಡ ಚಲನೆಯ ಜೀವನೋತ್ಸಾಹ ತುಂಬುವ ಕ್ರಿಯೆ ವಿಶೇಷವಾದುದು. ವಿಜಯಶಂಕರ ಅವರ ಆರೋಗ್ಯ ವ್ಯತ್ಯಾಸವೂ ಅತ್ಯಂತ ಭೀತಿಯ ಸ್ಥಿತಿಯಲ್ಲೂ ಅದೊಂದು ಕಾವ್ಯಕ್ರಿಯೆಯಂತೆ 'ಕೋಲು ಸಖೀ' ಕವಿತೆ ಅರ್ಥ ಸಾರುವ ವಿಶೇಷತೆಯನ್ನು ಗಮನಿಸಬಹುದು. ಸಂಗೀತಕ್ಕೆ ಸಂಜೀವಿನಿ ಶಕ್ತಿ ಇದ್ದಂತೆ ಕಾವ್ಯ ಅದರ ಮೂಲವೇ ಹೌದು ಎಂಬುದನ್ನು ತಿಳಿಯಬಹುದು. ಕವಿತೆಯು ಕಾಲವನ್ನೂ ಮೀರಿ ಜಯಿಸುವ ಕಾರ್ಯಗಳು ಸಾಕಿಷ್ಟಿರುತ್ತವೆ. ಕುರ್ತಕೋಟಿ ಅವರು 'ಅರ್ಥಕ್ಕಿಂತ ಹೆಚ್ಚಿನ ಶಕ್ತಿ'ಯನ್ನು ಕವಿತೆಗಳಲ್ಲಿ ಗುರ್ತಿಸಿದ್ದಾರೆ. ಇದಕ್ಕೆ ಮುನ್ನುಡಿ ಬರೆದ ಮಾಸ್ತಿಯವರು ಕೂಡ ಬೇಂದ್ರೆ ಅವರ ವಿಚಾರ ಶಕ್ತಿ ಕುರಿತು ಮಾತನಾಡುತ್ತಾರೆ. 'ತತ್ತ್ವವುಳ್ಳ ಶಕ್ತಿ'ಯಾಗಿ ಗುರ್ತಿಸುವುದನ್ನು ಕಾಣಬಹುದು.

'ಕನ್ನಡ ಮೇಘದೂತ' ಕುರಿತು ವಿಮರ್ಶೆ

ಈ ಕೃತಿ ಕುರಿತು ಕೀರ್ತಿನಾಥ ಕುರ್ತಕೋಟಿ ಅವರು ಮೂರು ದೃಷ್ಟಿಕೋನದ ಚಿಂತನೆ ನೀಡುತ್ತಾರೆ. ಅವುಗಳೆಂದರೆ ಶಬ್ದಾರ್ಥ ಭಾಷಾಂತರ, ಕಾಳಿದಾಸನ ಮೇಘಸಂದೇಶವು ಕನ್ನಡಕ್ಕೆ ಹಲವು ರೀತಿ ಬಂದಿದ್ದರೂ ಬೇಂದ್ರೆ ಅವರು ಕನ್ನಡೀಕರಿಸುವ ವಿಶೇಷತೆ ಹಾಗೂ ಬೇಂದ್ರೆ ಅವರ ಭಾಷಾಂತರ ಕಲೆಯ ವಿಶೇಷತೆ.

ಶಬ್ದಾರ್ಥ ಭಾಷಾಂತರದಲ್ಲಿ ಬೇಂದ್ರೆ ಅವರು ಅರವಿಂದರ ಕಾವ್ಯ, ಉಮರ್ ಖಯ್ಯಾಮನ ರುಬಾಯಿತ್, ಜ್ಞಾನೇಶ್ವರನ ಪದ್ಯಗಳನ್ನು ಭಾಷಾಂತರಿಸುವಾಗ ಅನುಸರಿಸಿರುವ ಕ್ರಮವನ್ನು ಅರ್ಥೈಸುತ್ತಾ 'ಮೂಲವನ್ನು ಅನುಸರಿಸಿದರೂ ಸ್ವತಂತ್ರವಾಗುವ ಮತ್ತು ಹೊಸದಾಗುವ ಬಯಕೆ ಇಲ್ಲಿದೆ. ಷೇಕ್ಸ್‌ಪಿಯರ್ ಇಂಗ್ಲೀಷ್ ಭಾಷೆಯನ್ನು ಬಳಸುವ ರೀತಿಯಲ್ಲಿ ಕನ್ನಡ ಭಾಷೆಯನ್ನು ಬಳಸುವ ಹಂಬಲ ಬೇಂದ್ರೆಯವರದು. ಆದ್ದರಿಂದ ಒಂದು ಶಬ್ದವನ್ನು ಬೆನ್ನು ಹತ್ತಿ ಹೋಗಿ ಅದರ ಅರ್ಥದ ಇತಿಹಾಸದೊಂದಿಗೆ ಅದನ್ನು ಕಾವ್ಯದಲ್ಲಿ ಉಪಯೋಗಿಸುವ ಹಟ ಅವರ ಸ್ವಂತ ಕಾವ್ಯಕ್ಕೂ ಇದೆ.' ಎಂದು ತಿಳಿಸುವರು. ಕೆಲವು ಪದಗಳನ್ನು ಗ್ರಹಿಸುತ್ತಾ ಪರಿಶೀಲಿಸಿದ್ದಾರೆ.

ಕಾಳಿದಾಸನ ಮೇಘಸಂದೇಶವು ಕನ್ನಡಕ್ಕೆ ಹಲವು ರೀತಿ ಬಂದಿದ್ದರೂ ಬೇಂದ್ರೆ ಅವರು ಕನ್ನಡೀಕರಿಸುವ ವಿಶೇಷತೆ ಎಂದರೆ ಬೇಂದ್ರೆ ಅವರ ಕನ್ನಡ ಮೇಘಸಂದೇಶವನ್ನು ಸ್ವತಂತ್ರ ಕೃತಿಯಂತೆಯೇ ಓದಬಹುದಾದ ಸಹೃದಯತೆ ಇದೆ ಎನ್ನುವರು. ಬೇರೆ ಭಾಷಾಂತರ ಕೃತಿಗಳು ಇಲ್ಲಿ ಮುಖ್ಯವೆನಿಸಿದರೂ ಅವುಗಳು ಕೇವಲ ಭಾಷಾಂತರ ಕೃತಿಗಳಾಗಿಯೇ ಉಳಿದಿವೆ. ಕನ್ನಡತನವಿಲ್ಲವೆಂಬುದು ಇವರ ವಿಮರ್ಶಾ ಚಿಂತನೆ.

ಬೇಂದ್ರೆ ಅವರ ಭಾಷಾಂತರ ಕಲೆಯ ವಿಶೇಷತೆ ಕುರಿತು ಕುರ್ತಕೋಟಿ ಅವರು ತಿಳಿಸುವ ಮೊದಲು ಭಾಷಾಂತರ ಕುರಿತು ಅರ್ಥೈಸುತ್ತಾರೆ. ಭಾಷಾಂತರದ ಅನಿವಾರ್ಯವೆಂಬಂತಹ

ಕೆಲವು ನಿರ್ಣಯಗಳು ಆತ್ಯಂತಿಕ ಸತ್ಯವಲ್ಲವೆಂಬುದು ಬೇಂದ್ರೆ ಅವರ ಭಾಷಾಂತರಗಳು ಮನವರಿಕೆಮಾಡಬಲ್ಲವು ಎಂದು ಕನ್ನಡಿಕರಿಸಿರುವ ವಿಶೇಷತೆಯನ್ನು ಚರ್ಚಿಸಿರುವರು. ಕಾಳಿದಾಸನ ಕಾವ್ಯ ಶೈಲಿಗೂ ಬೇಂದ್ರೆ ಅವರ ಕಾವ್ಯಶಕ್ತಿಯೂ ನಿರ್ವಹಿಸುವ ಸಹೃದಯತನವನ್ನು ಸೂಕ್ಷ್ಮವಾಗಿ ಗ್ರಹಿಸಿ ವಿಮರ್ಶಿಸಿದ್ದಾರೆ.

ಈ ಕೃತಿಯನ್ನು ಕುರಿತು ಕುರ್ತಕೋಟಿ ಅವರ ಒಟ್ಟಾರೆ ಅಭಿಪ್ರಾಯವು ಪ್ರಸ್ತುತ ಕನ್ನಡ ಸಾಹಿತ್ಯ ಚಿಂತನೆಗೆ ಪೂರಕವಾಗಿದೆ. ಅದೇನೆಂದರೆ 'ಭಾಷಾಂತರ ಮೂಲಕೃತಿಯಿಂದ ಸ್ವತಂತ್ರವಾಗುವುದೆಂದರೆ ತನ್ನ ಅರ್ಥವಂತಿಕೆಯನ್ನು ಬೆಳಸಿಕೊಂಡಂತೆ. ಭಾಷಾಂತರವಾಗಿದ್ದರೂ ಬೇಂದ್ರೆ ಅವರ ಮೇಘಸಂದೇಶ ಕನ್ನಡದ ಅತ್ಯುತ್ತಮ ಕವಿತೆಗಳಲ್ಲಿ ಒಂದಾಗಿದೆ. ಇದಕ್ಕೆ ಇನ್ನೊಂದು ಕಾರಣವೂ ಇದೆ. ಮೇಘಸಂದೇಶಕ್ಕೆ ಬೇಂದ್ರೆ ಅವರು ಒಂದು ಕಾವ್ಯ ಪೀಠಿಕೆಯನ್ನು ಜೋಡಿಸಿದ್ದಾರೆ. ಅದರಲ್ಲಿ ಗಂಡು-ಹೆಣ್ಣುಗಳ ಕಾಮವನ್ನು ಕುರಿತು, ಪ್ರಕೃತಿಯಲ್ಲಿನ ಕಾಮವನ್ನು ಕುರಿತು ಮತ್ತು ಸಕಲ ಸೃಷ್ಟಿಗೆ ಕಾರಣೀಭೂತವಾದ ಕಾಮವನ್ನು ಕುರಿತು ಅತ್ಯಂತ ಅರ್ಥಪೂರ್ಣವಾಗಿ ಬರೆದಿದ್ದಾರೆ. ಈ ಪದ್ಯಗಳು ಕನ್ನಡದಲ್ಲಿಯೇ ಅಪರೂಪವಾಗಿವೆ. ಅಲ್ಲದೇ ಕಾಳಿದಾಸನ ಕೃತಿಯನ್ನು ಕುರಿತು ಸ್ವವಿಮರ್ಶಕವಾದ ಪದ್ಯಗಳೂ ಇದರಲ್ಲಿವೆ. ಮೇಘಸಂದೇಶ ದಂತಹ ಒಂದು ಅನನ್ಯವಾದ ಕೃತಿಯನ್ನು ಕನ್ನಡದಲ್ಲಿ ರಚಿಸಬೇಕೆಂಬ ಅವರ ಬಯಕೆ ಇಲ್ಲಿ ಸಾರ್ಥಕವಾಗಿದೆ. ಅದಕ್ಕಿಂತ ಹೆಚ್ಚಾಗಿ ಭಾಷಾಂತರದ ರೀತಿ-ನೀತಿಯ ಬಗ್ಗೆ, ತಂತ್ರದ ಬಗ್ಗೆ ಅನೇಕ ಹೊಸ ಮಾತುಗಳು ಈ ಕೃತಿಯ ಅಭ್ಯಾಸದಿಂದ ದೊರೆಯುತ್ತವೆ.' ಇಲ್ಲಿ 'ಮೇಘದೂತ' ಎಂಬ ಪದ ಬಳಕೆಯ ಜಾಗದಲ್ಲಿ 'ಮೇಘಸಂದೇಶ' ಎಂದು ಎಲ್ಲಾ ಕಡೆ ಅದೇ ರೀತಿ ಬಳಸಿದ್ದಾರೆ. ನೆನಪಿನ ದೋಷದಿಂದ, ಇಲ್ಲವೇ ಕ್ರಿಯಾಶೀಲ ಚಿಂತನೆಯ ವಿಮರ್ಶಕರಾದ ಕುರ್ತಕೋಟಿ ನೀಡಿದ ಕಾವ್ಯಾರ್ಥವೂ ಇರಬಹುದು.

'ಮೇಘದೂತ' ಕುರಿತು ಕುರ್ತಕೋಟಿಯ ಚಿಂತನೆಯ ನಂತರ ಇವರ ಅಧ್ಯಯನಗಳನ್ನು ಗ್ರಹಿಸಿ, ಹೊಸ ಅರ್ಥಗಳನ್ನು ಹುಡುಕುವ ಸಾಕಷ್ಟು ವಿಮರ್ಶೆಗಳು ಬಂದಿವೆ. ಕಾಲಘಟ್ಟದ ವ್ಯಾತ್ಯಾಸವಿದ್ದರೂ ವಿಚಾರದ ದೃಷ್ಟಿಯಿಂದ ಕೆಲವು ಚರ್ಚೆಗಳನ್ನು ಆಯಾ ವಿಚಾರದ ಜೊತೆಯಲ್ಲಿಯೇ ಚರ್ಚಿಸಿದ್ದೇನೆ. ವೆಂಕಟೇಶಮೂರ್ತಿ ಎಚ್.ಎಸ್ ಅವರ 'ಮೇಘದೂತ : ಅಂಬಿಕಾತನಯದತ್ತ' ಎಂಬ ಲೇಖನದಲ್ಲಿ ಅವರ ಓದಿನ ಆನಂದದ ಫಲಿತಗಳನ್ನು ಚರ್ಚಿಸಿರುವುದನ್ನು ಕಾಣಬಹುದು. ಕಾಳಿದಾಸನ ಮೇಘದೂತಕಾವ್ಯದ ಅಧ್ಯಯನ ಕುರಿತ ವಿಶಿಷ್ಟ ಲೇಖನವಿದು. ಅನುವಾದ ಕಲೆ, ಅದರ ತೊಡಕುಗಳು, ಸೃಷ್ಟಿ, ಪುನರ್ ಸೃಷ್ಟಿ ಮೊದಲಾದ ಅಂಶಗಳನ್ನು ಚರ್ಚಿಸಿ ಭಾರತೀಯ ನೆಲೆಯಲ್ಲಿ, ಕನ್ನಡದ ನೆಲೆಯಲ್ಲಿ ಬಂದಿರುವ ಎಲ್ಲಾ ಅನುವಾದಗಳನ್ನು ಪರಿಚಯಿಸುತ್ತಾರೆ. ಬೇಂದ್ರೆ ಅವರ ಭಾವಗ್ರಹಣದ ಸೊಗಸನ್ನು ಉದಾಹರಣೆಗಳ ಸಮೇತ ಚರ್ಚಿಸಿದ್ದಾರೆ. ಯಾವುದೇ ಭಾಷೆಯಿಂದ ಅನುವಾದ, ರೂಪಾಂತರ ಕಾರ್ಯಗಳನ್ನು ಕನ್ನಡ ಕಾವ್ಯಶೈಲಿಗೆ ಹೊಂದಿಸಿಕೊಂಡು ಮಾಡಬಹುದು. ಇದಕ್ಕೆ ಬೇಂದ್ರೆ ಅವರ ಕಾರ್ಯವೇ

ಆತ್ಮವಿಶ್ವಾಸ ತುಂಬುತ್ತದೆ ಎಂದು ತಾವು ಗ್ರಹಿಸಿದ ಆನಂದವನ್ನು ಕಾಳಿದಾಸ ಮೂಲ ಕಾವ್ಯದ ಜೊತೆ ಇಟ್ಟು ಚರ್ಚಿಸಿರುವನ್ನು ಗಮನಿಸಬಹುದು. ಆದರೆ ವೆಂಕಟೇಶಮೂರ್ತಿ ಅವರ ಒಂದು ಮಾತು ಸಮರ್ಥನೀಯವಲ್ಲವೆಂದು ಅನಿಸುತ್ತದೆ. ಅನುವಾದದ ಕುರಿತು ಇದೇ ಲೇಖನದಲ್ಲಿ ಚರ್ಚಿಸುತ್ತಾ ಸಾಹಿತ್ಯ ವಿದ್ಯಾರ್ಥಿಗೆ ಪುರಾತತ್ವ ಸಂಶೋಧಕನಿಗೆ ಇರುವ ಕುತೂಹಲ, ಭೂತಕಾಲದ ಆಸಕ್ತಿ ಇರಲಾರದು. ವರ್ತಮಾನದ ಪ್ರಸ್ತುತತೆ ಮುಖ್ಯ ಎಂದು ಚರ್ಚಿಸಿದ್ದಾರೆ. ಇಲ್ಲಿ ಸಾಹಿತ್ಯ ಅಧ್ಯಯನದ ವಿಸ್ತಾರವನ್ನೇ ಇವರು ಗ್ರಹಿಸಿಲ್ಲ ಎನಿಸುತ್ತದೆ. ಶಾಸನಗಳ ಅಧ್ಯಯನ, ನಮ್ಮ ಪ್ರಾಚೀನ ಕೃತಿಗಳ ಅಧ್ಯಯನ, ಇತಿಹಾಸದ ಕುರಿತು ಕುತೂಹಲಗಳನ್ನು ಇಂದು ವಿಶ್ವವಿದ್ಯಾಲಯಗಳಲ್ಲಿ ಸಾಹಿತ್ಯ ವಿದ್ಯಾರ್ಥಿಗಳು ಸಂಶೋಧನೆಗಳನ್ನು ನಡೆಸುತ್ತಿದ್ದಾರೆ. ಪ್ರಾಚೀನವನ್ನು ವರ್ತಮಾನದ ಪ್ರಸ್ತುತತೆ ಎಂಬಂತೆ ಅಧ್ಯಯನಗಳು ಪ್ರಾರಂಭವಾಗಿವೆ ಈ ಕುರಿತು ವೆಂಕಟೇಶಮೂರ್ತಿ ಅವರ ಸಮಂಜಸವಲ್ಲದ ಬೀಸು ಹೇಳಿಕೆಯನ್ನು ಒಪ್ಪಲಾಗದು ಎನ್ನಬಹುದು.

ವೆಂಕಟೇಶಮೂರ್ತಿ ಅವರ ಲೇಖನದ ಅಧ್ಯಯನದ ನಂತರ ಸಿ. ಪಿ. ಕೃಷ್ಣಕುಮಾರ್ ಅವರ ಲೇಖನ ಇದರ ಅಧ್ಯಯನದಿಂದ ಸೃಜಿಸಿದ ಸ್ವತಃ ಮನೋಭಿಲಾಷೆ ಎಂಬುದಾಗಿ ಅರ್ಥವಾಗುತ್ತದೆ. ನಾನು ದೌರ್ಬಲ್ಯಗಳನ್ನೇ ಹುಡುಕುತ್ತೇನೆ ಎಂದು ಅಧ್ಯಯನ ಪ್ರಾರಂಭಮಾಡುವವರಿಗೆ ದೌರ್ಬಲ್ಯದ ಹೊರತಾಗಿ ಬೇರೆ ಏನೂ ಕಾಣದು. ಬೇಂದ್ರೆ ಅವರೇ ಸೂಚಿಸಿರುವ ಪ್ರಾಸ್ತಾವಿಕ ನುಡಿಯನ್ನು ತಿಳಿಯದಿದ್ದರೆ ಸಂಸ್ಕೃತ ಕೃತಿಯೊಂದಿಗೆ ಹೋಲಿಸಿ ತಪ್ಪುಗಳನ್ನು ಸೂಚಿಸಬಹುದು. ಆದರೆ ಓದಿನಿಂದ ಉಂಟಾದ ಆನಂದದಿಂದ ಭಾವಗ್ರಹಣ ಮಾಡಿ ಕನ್ನಡಿಕರಿಸಿರುವ ಬೇಂದ್ರೆ ಅವರ ಚಿಂತನೆ ಸ್ಪಷ್ಟವಾಗಿ ಅರ್ಥವಾಗಬೇಕಿದೆ. ಅನುವಾದ ಎಂಬ ಪದವು ಕೇವಲ ಸೀಮಿತ ವ್ಯಾಪ್ತಿಯಲ್ಲಿರದೇ ತನ್ನ ಅಧ್ಯಯನವನ್ನು ವಿಸ್ತರಿಸಿಕೊಂಡಿದೆ. ಸೃಷ್ಟಿಗೂ, ಪುನರ್ ಸೃಷ್ಟಿಗೂ ಹೊಸ ಅರ್ಥಗಳನ್ನು ಕಂಡುಕೊಂಡಿದೆ. ಆದ್ದರಿಂದ ಇಂತಹ ಅಧ್ಯಯನಗಳು ಒಮ್ಮೊಮ್ಮೆ ವಿಮರ್ಶೆಗಳಾಗಿ ರುಚಿಸದೆ ವ್ಯರ್ಥ ಓದುಗಳಾಗಿ ಪರಿಣಮಿಸುತ್ತವೆ. ಏಕೆಂದರೆ ಅಧ್ಯಯನವೆಂಬುದು ಸರಿಯಿಲ್ಲ ಎಂದು ಸ್ವತಂತ್ರ ತೀರ್ಮಾನ ಮಾಡುವ ಮುಂಚೆ ಸಾಕಷ್ಟು ಕಾರಣಗಳನ್ನು, ಅದಕ್ಕೆ ಇರಬಹುದಾದ ದಾರಿಗಳನ್ನು ನೀಡುವ ಜವಾಬ್ದಾರಿಯೂ ಇರುತ್ತದೆ. ಆದ್ದರಿಂದ ವಿಮರ್ಶೆ ಎಂದರೆ ಬರೀ ಟೀಕೆಯಲ್ಲ. ಅದೊಂದು ಅಧ್ಯಯನ ಎನ್ನಬಹುದು.

ಗೌರೀಶ ಕಾಯ್ಕಿಣಿ ಅವರು ೧೯೭೭ರ ಕಾಲಘಟ್ಟದಲ್ಲಿ 'ಕನ್ನಡ ಮೇಘದೂತದ ಪೀಠಿಕೆ' ಎಂಬ ವಿಮರ್ಶಾ ಲೇಖನ ರಚಿಸಿದ್ದಾರೆ. ಒಂದು ಕಾವ್ಯ ಭಾಷಾಂತರದ ನೆಲೆಯಲ್ಲಿ ಹೊಂದುವ ಸಾಧ್ಯತೆಗಳನ್ನು ಇಲ್ಲಿ ಗ್ರಹಿಸಿದ್ದಾರೆ. ಬೇಂದ್ರೆ ಅವರ ರಸಗ್ರಹಣ ಶಕ್ತಿಯು ಪುನರ್ನವೀಕರಿಸುವ ಶಕ್ತಿಯಾಗಿ ಪರಿವರ್ತನೆಯೊಂದುವ ಕ್ರಮಗಳನ್ನು ಇಲ್ಲಿ ಅರ್ಥೈಸಿದ್ದಾರೆ. ಕಾಳಿದಾಸ ಮತ್ತು ಬೇಂದ್ರೆ ಅವರನ್ನು 'ಉಭಯರೂ ಪ್ರಣಯದ ವಾಣಿಯ ವೀಣಾ ಪ್ರವೀಣರು' ಎಂದು ಗುರ್ತಿಸುವ ವಿಮರ್ಶಾ ಬಗೆಯು ವಿಶೇಷವಾದುದು.

‘ಅರಳು–ಮರಳು’ ಸಂಕಲನ ಕುರಿತ ವಿಮರ್ಶೆ

ಬೇಂದ್ರೆ ಅವರ ಕಾವ್ಯ ಪ್ರಜ್ಞೆಯು ಬೆಳೆದ ರೀತಿ ಹಾಗೂ ಅದರ ಮುಂದುವರಿಕೆಯ ಸೂಕ್ಷ್ಮಗಳನ್ನು ಕುರ್ತಕೋಟಿ ಅವರು ಇಲ್ಲಿ ಗುರ್ತಿಸಿದ್ದಾರೆ. ಐದು ಸಂಕಲನಗಳ ಒಟ್ಟು ಕೃತಿಯಾದ ಈ ಅರಳು–ಮರಳು ಸಂಕಲನವು ಬೇರೆ ಬೇರೆ ಕಾಲದ ರಚನಾ ದೃಷ್ಟಿಯನ್ನು, ಇವುಗಳ ಅರ್ಥೈಸುವಾಗ ಶೈಲಿ, ಭಾವ, ಭೂಮಿಕೆ ಮೊದಲಾದವುಗಳ ತೊಡಕನ್ನು ಗುರ್ತಿಸುತ್ತಾ ಸೂಕ್ತ ಕಾರಣಗಳನ್ನೂ ಹಾಗೂ ಅವುಗಳಿಗೆ ಕಾವ್ಯದಲ್ಲಿಯೇ ಸಿಗುವ ಉತ್ತರವನ್ನು ವಿಮರ್ಶೆಯಲ್ಲಿ ತಾತ್ವಿಕಗೊಳಿಸಿದ್ದಾರೆ.

ಕಾವ್ಯದ ಭಿನ್ನತೆಯಾಗಿ ಕುರ್ತಕೋಟಿ ಅವರ ಚಿಂತನೆಯು ವಿಶೇಷವಾಗಿದೆ. ‘ಅರಳು–ಮರಳು’ ಸಂಗ್ರಹದಲ್ಲಿಯ ಬಹುತೇಕ ಎಲ್ಲಾ ಕವಿತೆಗಳ ಉಸಿರಾಟದ ಗತಿ ಬೇರೆ ಧಾಟಿಯಲ್ಲಿಯೇ ಸಾಗುತ್ತದೆ. ಎಷ್ಟೋ ಕವಿತೆಗಳಲ್ಲಿ ಬೇಂದ್ರೆ ಅವರ ಮೊದಲ ಸಂಗ್ರಹದಲ್ಲಿಯ ಕಾವ್ಯದ ಅಭಿವ್ಯಕ್ತಿಯ ಪರಮೋತ್ಕರ್ಷ ಕಾಣುವುದಿಲ್ಲ. ಅನುಭವದ ಅಪರಿಚಿತತೆ ಎಷ್ಟೋ ಸಾರಿ ರಸ ಸ್ವಾದಕ್ಕೆ ಅಡ್ಡಿಯಾಗುತ್ತದೆ. ಆದರೆ ಇಂತಹ ಸಂದಿಗ್ಧತೆಯಲ್ಲಿಯೂ ಬೇಕಾದಷ್ಟು ಸಾರ್ಥಕವೆನ್ನಬಹುದಾದ ಕವಿತೆಗಳಿವೆ. ಎಂಬ ತೀರ್ಮಾನವು ಅವರ ಲೇಖನದ ಆಶಯವಾಗಿದೆ. ಇಲ್ಲಿ ಕವಿತೆಗಳ ವೈವಿಧ್ಯವೇ ಒಂದು ಸಮಸ್ಯೆಯಾಗಿ ಬೇಂದ್ರೆ ಅವರ ಕಾವ್ಯ ಪ್ರಜ್ಞೆ ಅಖಂಡವಾಗಿರದೆ ವಿಘಟಿತವಾಗಿದೆಯೇ ಎಂಬ ಸಂಶಯ ಬಂದರೂ ಕಾವ್ಯ ಶೈಲಿ ಮತ್ತು ವ್ಯಕ್ತಿತ್ವ ಪೂರ್ಣ ನಿರ್ಣಯ ನೀಡಬಲ್ಲವು. ಕುರ್ತಕೋಟಿ ಅವರ ಚಿಂತನೆಯಲ್ಲಿ ವಿಶಿಷ್ಟ ನಿರ್ಣಯ ಈ ರೀತಿ ಇದೆ. ‘ಅರಳು–ಮರಳು’ ಬೇಂದ್ರೆ ಅವರ ಮಧ್ಯಕಾಲದ ಕಾವ್ಯ. ಅವರ ಪ್ರತಿಭೆ ಸತ್ಯದ ಹೊಸ ಮಗ್ಗಲುಗಳನ್ನು ಅನ್ವೇಷಿಸುವುದರಲ್ಲಿ ತೊಡಗಿತ್ತು. ‘ಅರಳು–ಮರಳು’ ನಂತರದ ಕಾವ್ಯ ಇಲ್ಲಿಯ ಆಶೋತ್ತರಗಳನ್ನೇ ಮುಂದುವರೆಸಿಕೊಂಡು ಬಂದಿದೆ. ಬೇಂದ್ರೆ ಅವರ ಕವಿತೆಗಳ ವರ್ಗಿಕರಣದಿಂದ ಹಿಡಿದು ಮೌಲ್ಯಮಾಪನದವರೆಗೆ ವಿಮರ್ಶೆ ಬೇರೆ ಸೂತ್ರಗಳನ್ನೂ ಅನುಸರಿಸದೆ ಗತ್ಯಂತರವಿಲ್ಲ. ಆ ದೃಷ್ಟಿಯಿಂದ ನೋಡಿದಾಗ ‘ಅರಳು–ಮರಳು’ ಅತ್ಯಂತ ಮಹತ್ವದ ಸಂಕಲನವಾಗಿದೆಯೆಂದು ಹೇಳಬೇಕಾಗುತ್ತದೆ’. ಇಲ್ಲಿ ಅಧ್ಯಯನದ ಜೊತೆಗೆ ಸಹೃದಯತ್ವದ ವಿಮರ್ಶೆಯ ನಿಲುವು ತಾತ್ವಿಕ ಪೂರ್ಣವಾದುದು.

ಕುರ್ತಕೋಟಿ ಅವರ ಅಧ್ಯಯನದ ಜೊತೆಯಲ್ಲಿಯೇ ಈ ಕೃತಿಗೆ ಮುನ್ನುಡಿ ಬರೆದ ವಿ. ಕೃ. ಗೋಕಾಕರ ಚಿಂತನೆಯನ್ನು ಗಮನಿಸಬಹುದು. ‘ಬೇಂದ್ರೆಯವರ ಅರಳು–ಮರಳು’ ಎಂಬ ಶೀರ್ಷಿಕೆಯಲ್ಲಿಯೇ ಮುಂದಿನ ಬರಹದ ಔಚಿತ್ಯವನ್ನು ಸೂಚಿಸಿದ್ದಾರೆ. ಅರವತ್ತರ ಬೇಂದ್ರೆಯನ್ನು ಅವರ ಗೆಳೆಯರ ಗುಂಪಿನಲ್ಲಿದ್ದು ಅತ್ಯಂತ ಆಪ್ತವಾಗಿ ಅಧ್ಯಯನ ಮಾಡಿದ ಗೋಕಾಕರಿಗೆ ಈ ಮುನ್ನುಡಿ ಬರಹವು ದೊಡ್ಡ ಹೊಣೆಗಾರಿಕೆಯಾಗಿ ಕಂಡುಬಂದಿದೆ. ಇದನ್ನು ‘ಅಂಬಿಕಾತನದತ್ತರ ಆರ್ಷದೃಷ್ಟಿಯ ಫಲ’ವೆಂದು ಕರೆದಿದ್ದಾರೆ.

ಬೇಂದ್ರೆಯವರ ಅರವತ್ತರ ಅರಿವನ್ನು ಅಡಿನೆಲವಾಗಿರಿಸಿಕೊಂಡು ಇಲ್ಲಿ ಅಂಬಿಕಾತನಯದತ್ತನ ಅರಲು-ಮರಲು ಹಬ್ಬಿದೆ. ಅನಂತ್ಯದ ದೃಷ್ಟಿಕೋನದಿಂದ ಇಲ್ಲಿ ವಿಶ್ವದ ಹಾಗು ನಿಸರ್ಗದ ಚೆಲುವು-ಗೆಲುವುಗಳ ಹಾಗು ನೋವು ಸಾವುಗಳ ನಿರೂಪಣೆಯಿದೆ. ಇದೇ ದೃಷ್ಟಿಯಿಂದ ವಿಶ್ವಮಾನವನು ಇಲ್ಲಿ ಜಗತ್ತಿನ, ಭಾರತದ ಹಾಗು ಕನ್ನಡ ನಾಡಿನ ಪ್ರಶ್ನೆಗಳನ್ನು ಪರಿಕಿಸಿದ್ದಾನೆ; ವ್ಯಕ್ತಿ-ಸಮಾಜಗಳ ದೈವ-ದುರ್ದೈವಗಳ ಮೇಲೆ ಬೆಳಕು ಕೆಡವಿದ್ದಾನೆ. ನಮ್ಮ ಸುತ್ತ ಮುತ್ತಣ ಪ್ರಶ್ನೆಗಳನ್ನು ಇಂತಹ ದೃಷ್ಟಿಯ ಬೆಳಕಿನಲ್ಲಿ ನೋಡುವ ಅವಕಾಶ ದೊರೆತಿರುವುದು ನಮ್ಮ ನಾಡಿನ ಹಾಗು ನಮ್ಮ ತಲೆಮಾರಿನ ಪುಣ್ಯ. ಉಳಿದ ಪ್ರಾಂತಗಳಲ್ಲಿಯ ಜನತೆ ಅಲ್ಲಲ್ಲಿ ಈ ಕಾವ್ಯದ ರಸಸ್ಪರ್ಶವನ್ನು ಪಡೆದಿದೆ. ಇದಕ್ಕೂ ಮುಂದಿನ ಈ ಕಾವ್ಯ ಕೀರ್ತಿ ನಮ್ಮ ನಾಡಿನ ಜೀವನದ ವಿಕಾಸವನ್ನೇ ಅವಲಂಬಿಸಿದೆ."[೨]

ಕೃತಿಯನ್ನು ಪರಿಚಯಿಸುವುದು ಮಾತ್ರ ಗೋಕಾಕರ ಉದ್ದೇಶವಲ್ಲ. ಇಂತಹ ಕೃತಿ ಮೂಡಲು ಕವಿಯೊಳಗೆ ಸೃಷ್ಟಿಯಾದ ಕಾವ್ಯಶಕ್ತಿಯನ್ನು ಗ್ರಹಿಸುವುದು ಹಾಗು ಅದು ಸಹೃದಯರಲ್ಲಿ ಪಡೆದುಕೊಳ್ಳುವ ಪರಂಪರೆಯನ್ನು ಅರ್ಥೈಸುವುದು ಮುಖ್ಯವಾದ ಅಭಿವ್ಯಕ್ತಿಯಾಗಿ ಕಂಡುಬರುತ್ತದೆ. ಗೋಕಾಕ್ ಅವರು ಅಧ್ಯಯನ ರೂಪದಲ್ಲಿಯೇ ಬೇಂದ್ರೆ ಸಾಹಿತ್ಯವನ್ನು ಗಮನಿಸಿದ್ದಾರೆ. ಜೊತೆಗೆ 'ಗೆಳೆಯರ ಗುಂಪಿ'ನಲ್ಲಿ ಬೆಳೆದ ಕಾರಣ ತನ್ನ ಸಮಕಾಲೀನ ಸಾಹಿತ್ಯದ ಮೇಲೆ ಸಹೃದಯ ಧೋರಣೆಯನ್ನೆ ಹೊಂದಿದ್ದರು.

'ನಾಕುತಂತಿ' ಸಂಕಲನ ಕುರಿತ ವಿಮರ್ಶೆಯ ನಿಲುವುಗಳು

ಬೇಂದ್ರೆ ಅವರಿಗೆ ಜ್ಞಾನಪೀಠ ಪ್ರಶಸ್ತಿ ದೊರೆತ ಸಂದರ್ಭದಲ್ಲಿ ಕೀರ್ತಿನಾಥ ಕುರ್ತಕೋಟಿ ಅವರು ಮಣಿಪಾಲದಲ್ಲಿ ಮಾಡಿದ ಭಾಷಣವೆ ಈ 'ನಾಕುತಂತಿ' ಲೇಖನ ಬರಹ. ಅವರ 'ಬಾರೋ ಸಾಧನ ಕೇರಿಗೆ' ಎಂಬ ಕೃತಿಯಲ್ಲಿ ಈ ಭಾಷಣವು ಲೇಖನವಾಗಿದೆ. ಇದು ವಿಮರ್ಶಾ ನಿಲುವಿನ ದೃಷ್ಟಿಯಿಂದ ವಿಶೇಷವಾಗಿದೆ. ಈ ಲೇಖನವು ದೀರ್ಘ ಪ್ರಸ್ತಾವನೆಯ ಮೂಲಕ ಪ್ರಾರಂಭಗೊಳ್ಳುತ್ತದೆ. ಪ್ರಸ್ತಾವನೆಯಲ್ಲಿ ಅರ್ಧಶತಮಾನಕ್ಕೂ ಮಿಗಿಲಾಗಿ ಕನ್ನಡ ಸಾಹಿತ್ಯ ಹಾಗೂ ಸಹೃದಯರು ಬೇಂದ್ರೆ ಅವರನ್ನು ಗ್ರಹಿಸುವಾಗ ಕೆಲವು ತಕರಾರುಗಳು ಇದ್ದವು. ಅಂತಹ ಅಂಶಗಳಿಗೆ ಸಾರ್ವಜನಿಕವಾಗಿ ಕುರ್ತಕೋಟಿಯವರು ಬೇಂದ್ರೆ ಕಾವ್ಯದ ಅಧ್ಯಯನ ಮುಖೇನವೇ ಉತ್ತರಿಸಿದ್ದಾರೆ. ಇವರದು 'ಒಬ್ಬ ಕವಿಯ ಶ್ರೇಷ್ಠತೆಗಿಂತ ವಿಮರ್ಶೆಯ ಮಾನದಂಡಗಳ ಸರಿತೂಕ ನನಗೆ ಸಾಂಸ್ಕೃತಿಕ ದೃಷ್ಟಿಯಿಂದ ಹೆಚ್ಚು ಮಹತ್ವದೆನಿಸಿದೆ.' ಎಂಬ ನಿಲುವು ಅತ್ಯಂತ ಮಹತ್ವವಾದುದು. ನಾಕುತಂತಿ ಸಂಕಲನಕ್ಕೆ ಯಾವ ಕಾರಣಗಳಿಂದ ರಾಷ್ಟ್ರಗೌರವ ದೊರಕಿತು ಆ ಸಂಕಲನದ ಮಹತ್ವವೇನು ಎಂಬ ಅಂಶಗಳನ್ನು ಇಲ್ಲಿ ವಿಮರ್ಶಾತ್ಮಕವಾಗಿ ನಿರ್ಣಯಿಸಿರುವುದನ್ನು ಗಮನಿಸಬಹುದು.

ಕೀರ್ತಿನಾಥ ಕುರ್ತಕೋಟಿ ಇವರು 'ನಾಕುತಂತಿ' ಹೆಸರಿನ ಕವಿತೆ ಪಡೆಯುವ ಸಾಂಖ್ಯೇತಿಕತೆಗೆ ಇಡೀ ಸಂಕಲನ ಹಾಗೂ ಬೇಂದ್ರೆ ಅವರ ಇತರೆ ಸಂಕಲನಗಳ ಕವಿತೆಗಳು ನೀಡುವ ಅರ್ಥ

ವಿಶಿಷ್ಟತೆಯಲ್ಲಿ ವಿಮರ್ಶೆಮಾಡಿರುವುದನ್ನು ಗಮನಿಸಬಹುದು. ಅದಕ್ಕೆ ಪೂರಕವಾಗಿ ಅರವಿಂದರ ತಾತ್ವಿಕ ದರ್ಶನ, ಉಪನಿಷತ್ತುಗಳ ಅಧ್ಯಯನ ಕುರ್ತಕೋಟಿಯವರ ಸೂಕ್ಷ್ಮ ಚಿಂತನೆಗೆ ಲಭಿಸುತ್ತವೆ.

ಕೀರ್ತಿನಾಥ ಕುರ್ತಕೋಟಿ ಅವರು...

> ಕವಿತೆ ವಾಣಿಯ ಸ್ವರೂಪಗಳನ್ನು ದರ್ಶನದ ಮೂಲಕವಾಗಿಯೇ ಕಂಡು ವರ್ಣಿಸುತ್ತದೆ. ಬೇರೆ ಬೇರೆ ಕಡೆಗಳಿಂದ ಸಂಕೇತಗಳನ್ನು ಪ್ರತೀಕಗಳನ್ನು ತಂದು ಉಪಯೋಗಿಸಿದ್ದರೂ ಅವು ದಾರಿ ತಪ್ಪಿಸುವಂತಿಲ್ಲ. ವಾಕ್‌ಶಕ್ತಿಯ ಸ್ವರೂಪ ಭಾಷೆಗಳ ಆಚಿನದು; ಅದನ್ನು ತನ್ನ ಭಾಷೆಯ ಹದಕ್ಕೆ ಅಳವಡಿಸುವ ಕೆಲಸ ಕವಿಯದು. ಶರರೂಪವಾಗಿ ಹೊರಟ ಕವಿಯ ಧ್ಯಾನ ಕೊನೆಗೆ ವಿದ್ಯಾರಣ್ಯದಲ್ಲಿ ಲಯವಾಗುವ ದೃಶ್ಯ ಇಲ್ಲಿ ವಿವರವಾಗಿ ಚಿತ್ರಿತವಾಗಿದೆ. ಕವಿತೆಯ ವೈಶಿಷ್ಟ್ಯವೆಂದರೆ ಕೇವಲ ಚಿತ್ರಗಳನ್ನಷ್ಟೇ ಉಪಯೋಗಿಸಿ ಕಾವ್ಯಾರ್ಥವನ್ನು ನಿರ್ಮಿಸುವುದು. ಇದರಿಂದ ಅನ್ವಯಾರ್ಥ ಕಷ್ಟವೆಂದು ತೋರಿದರೂ ಮತ್ತೆ ಮತ್ತೆ ಕವಿತೆಯನ್ನು ಓದಿ ಮನನ ಮಾಡುವುದರಿಂದ ಕವಿತೆ ಅನುಭವಕ್ಕೆ ಬರುತ್ತದೆ."[೬]

ಇಲ್ಲಿ ಕವಿತೆಯ ಶೈಲಿ ಅದರ ಸ್ವರೂಪ ರಚನೆ ಹಾಗೂ ಓದುವಿಕೆಯಲ್ಲಿನ ರೀತಿ, ಫಲಶ್ರುತಿ ಕುರಿತ ನಿಲುವುಗಳು ವಿಶಿಷ್ಟತೆಯಿಂದ ಕೂಡಿವೆ.

'ನಾಕುತಂತಿ' ಕೃತಿ ಕುರಿತು ಇತರೆ ಅಧ್ಯಯನಗಳನ್ನು ಇಲ್ಲಿಯೇ ಚರ್ಚಿಸುವುದು ಒಳಿತು ಎನಿಸುತ್ತದೆ. ಕುಂದರಗಿ ಜಿ. ಎನ್. ಅವರ 'ನಾಕುತಂತಿಯಲ್ಲಿ ಅಭಿವ್ಯಕ್ತವಾದ ತತ್ವಜ್ಞಾನ', ಎಲ್. ಎಸ್. ಶೇಷಗಿರಿರಾವ್ ಅವರ 'ನಾಕುತಂತಿಯ ವೈಣಿಕ, ಗಂಗಾವತರಣದ ಭಗೀರಥ' ಜಿ. ಕೃಷ್ಣಪ್ಪ ಅವರ 'ನಾಕುತಂತಿ ಒಂದು ಟಿಪ್ಪಣಿ' ಮೊದಲಾದ ಲೇಖನಗಳು ರಚನೆಗೊಂಡಿವೆ. ನಾಕುತಂತಿ ಕೃತಿಗೆ ಜ್ಞಾನಪೀಠ ಬಂದ ನಂತರ ಈ ಕೃತಿ ಕುರಿತು ಹಲವು ಜಿಜ್ಞಾಸೆಗಳು ಕನ್ನಡ ಸಾಹಿತ್ಯದಲ್ಲಿ ಅಧ್ಯಯನದ ವಿಸ್ತರಣೆಯನ್ನು ಸೂಕ್ಷ್ಮಗೊಳಿಸಿತು.

ತತ್ತ್ವಜ್ಞಾನವನ್ನು ಮುಖ್ಯನೆಲೆಯಾಗಿ ಅತ್ಯಂತ ಸೂಕ್ಷ್ಮತೆಯಲ್ಲಿ ದ್ರವೀಕರಿಸಿದ ಕುಂದರಗಿ ಅವರು 'ನಾಕುತಂತಿ' ಸಂಕಲನದಲ್ಲಿನ ದರ್ಶನ ಅಥವಾ ತತ್ತ್ವವನ್ನು ಅದರ ಸ್ವರೂಪವನ್ನು ಗ್ರಹಿಸಿದ್ದಾರೆ. ಅರವಿಂದರ ಅಧ್ಯಯನದೊಂದಿಗೆ ಬೇಂದ್ರೆ ಗ್ರಹಿಸಿದ ಜ್ಞಾನ 'ಸಮನ್ವಯಾತ್ಮಕ ದೃಷ್ಟಿ'ಯದು. ಈ ದೃಷ್ಟಿಯಲ್ಲಿ ನಾಕುತಂತಿ ಕವಿತೆಯು ಪಡೆಯುವ ಆಧ್ಯಾತ್ಮ ಸತ್ಯವನ್ನು ಭಗವಂತನ ಸಾಕ್ಷಾತ್ಕಾರವೆಂದು ಚರ್ಚಿಸಿರುವುದನ್ನು ಕಾಣಬಹುದು.

> "ಪ್ರತಿಯೊಂದು ತತ್ತ್ವ ತಿಳಿಕೊಡಲು ಒಂದು ವೈಜ್ಞಾನಿಕ ಪದ್ಧತಿ ಅಥವಾ ತಾತ್ತ್ವಿಕ ಪದ್ಧತಿಯನ್ನು ಅನುಸರಿಸಲಾಗುತ್ತದೆ. ತಮ್ಮ ದಿವ್ಯಜ್ಞಾನದ ತತ್ತ್ವವನ್ನು ತಿಳಿಸಿಕೊಡಲು ಅರವಿಂದರು ವೇದಾಂತಿಕ ಪದ್ಧತಿಯನ್ನು ಅನುಸರಿಸಿದ್ದಾರೆ. ಅವರ ದಾರಿ ಯೋಗದ ದಾರಿಯಾದರೂ, ಶ್ರೀ ಬೇಂದ್ರೆಯವರದು ಯೋಗಮಾರ್ಗವಾದರೂ ತಾತ್ತ್ವಿಕ ಹಿನ್ನೆಲೆ, ಪದ್ಧತಿ ಸಾಂಖ್ಯರದು ಎಂದು ನನಗನಿಸುತ್ತದೆ. ಅದಕ್ಕೆಂದೇ 'ಸಂಖ್ಯಾಶಾಸ್ತ್ರ'ದಲ್ಲಿ ಅವರ ಆಸಕ್ತಿ ದಿನದಿನಕ್ಕೆ ಬೆಳೆಯುತ್ತಿದೆ."(ಬುದ್ದಣ್ಣ ಹಿಂಗೆಮಿರ., ೧೯೭೭., ಇಳಿದು ಬಾ ತಾಯಿ ಇಳಿದು ಬಾ., ಕುಂದರಗಿ ಜಿ. ಎನ್., ನಾಕುತಂತಿಯಲ್ಲಿ ಅಭಿವ್ಯಕ್ತವಾದ ತತ್ವಜ್ಞಾನ., ಸಾಹಿತ್ಯ ಮಂಟಪ ಧಾರವಾಡ, ಪುಟ ಸಂಖ್ಯೆ ೩೬೪)

ಎಲ್. ಎಸ್. ಶೇಷಗಿರಿರಾವ್ ಅವರು 'ನಾಕುತಂತಿಯ ವೈಣಿಕ, ಗಂಗಾವತರಣದ ಭಗೀರಥ' ಎಂಬ ಲೇಖನದ ಮೂಲಕ ಬೇಂದ್ರೆ ಅವರ ಕಾವ್ಯ ಚಿಂತನೆಯನ್ನು ಗ್ರಹಿಸಿದ್ದಾರೆ. 'ನಾಕುತಂತಿ' ಯಂತಹ ಸಂಕಲನವು ಉಂಟುಮಾಡಿದ ಕುತೂಹಲವನ್ನು ಇಲ್ಲಿ ವಿಸ್ತರಿಸಿದ್ದಾರೆ. ಬೇಂದ್ರೆ ಕವಿತೆಗಳನ್ನು ಅಧ್ಯಯನ ಮಾಡುತ್ತಿದ್ದರೆ ಈ ಕವಿಯು ಮಾನವ ಜೀವನದ ಎಲ್ಲಾ ಸ್ತರಗಳಿಗೂ ಎಲ್ಲಾ ಬಗೆಯ ಸಾಹಿತ್ಯದ ಮೂಲಕ ಅತ್ಯಂತ ಸೂಕ್ಷ್ಮವಾಗಿ ಸ್ಪಂದಿಸಿದ್ದಾರೆ ಎಂಬ ತೀರ್ಮಾನಕ್ಕೆ ಬರುತ್ತಾರೆ. ವಿಜ್ಞಾನ, ಸಂಖ್ಯಾಶಾಸ್ತ್ರ, ಕಲೆ, ಜಾನಪದದ ಪ್ರಕಾರ ಇವೆಲ್ಲವನ್ನು ಪದಶಃ ಅವಲೋಕಿಸುವ ಬೇಂದ್ರೆ ಅವರ ಚಮತ್ಕಾರಿಕೆಗೆ ಬೆರಗುಗೊಂಡು ವಿಶಿಷ್ಟ ಕವಿಯಾಗಿ ಗ್ರಹಿಸಿದ್ದಾರೆ.

ಜಿ. ಕೃಷ್ಣಪ್ಪ ಅವರ 'ನಾಕುತಂತಿ ಒಂದು ಟಿಪ್ಪಣಿ'ಯು 'ನಾಕುತಂತಿ' ಎಂಬ ಒಂದು ಕವಿತೆಯನ್ನು ಪೂರ್ಣವಾಗಿ ಸಂಶೋಧಿಸಿದ ಲೇಖನವಾಗಿದೆ. ಇಲ್ಲಿ ಸರಳವಾದ ಅರ್ಥದೊಂದಿಗೆ ಇದುವರೆಗೂ ಉಂಟಾದ ಗೊಂದಲಗಳು, ತಪ್ಪು ಕಲ್ಪನೆಗಳ ತಿದ್ದುವ ಕಾರ್ಯವಾಗಿ ಈ ಅಧ್ಯಯನ ಮಾಡಿದ್ದಾರೆ. ಭಾರತೀಯ ಪರಂಪರೆಯ ವಾಗ್ಮಯತೆ, ಪಾಶ್ಚಾತ್ಯ ಪ್ರೇರಣೆ ಹಾಗೂ ತಾನು ರೂಪಿಸಿಕೊಂಡ ಜಾನಪದ ಅರ್ಥ ಸಾಂದ್ರತೆಯ ದಟ್ಟ ಅನುಭಾವಿ ಕವಿತೆಯಾಗಿ ಬೇಂದ್ರೆ ರಚಿಸಿರುವ ಬಗೆಯನ್ನು ಗ್ರಹಿಸಿದ್ದಾರೆ. ಸಂಸ್ಕೃತಕಾವ್ಯಗಳಲ್ಲಿ, ಜನಪದ ಕಾವ್ಯ ಹಾಗೂ ಕಥೆಗಳಲ್ಲಿ ಸೇರ್ಪಡೆಗೊಂಡಿದ್ದ ಸೃಷ್ಟಿಯ ಜೀವತಂತುವನ್ನು ಬೇಂದ್ರೆ ಇಲ್ಲಿ ದರ್ಶನ ಮಾಡಿಸಿರುವ ಬಗೆಯು ವಿಶೇಷವಾದುದು. ಈ ಹಿನ್ನಲೆಯಲ್ಲಿ ಜಿ. ಕೃಷ್ಣಪ್ಪ ಅವರ ಲೇಖನವನ್ನು ಗಮನಿಸಬಹುದು.

'ನಾಕುತಂತಿ' ಸಂಕಲನದ 'ನಾಕುತಂತಿ' ಕವಿತೆಯಲ್ಲಿ ಕೀರ್ತಿನಾಥ ಕುರ್ತಕೋಟಿ ಅವರ ಅಧ್ಯಯನದ ಮಿತಿಯನ್ನೂ ಗುರ್ತಿಸುತ್ತಾ ಕೃಷ್ಣಪ್ಪ ಅವರು ಈ ರೀತಿಯಲ್ಲಿ ವಿಮರ್ಶೆಯನ್ನು ನೀಡಿದ್ದಾರೆ.

> "ಕೀರ್ತಿನಾಥ ಕುರ್ತಕೋಟಿಯವರು 'ಮುಟ್ಟದ ಮಾಟದ ಹುಟ್ಟದ ಹುಟ್ಟಿಗೆ' ದೂರದ ನಾಡಿನಿಂದ ಹಡಗದಿಂದ ಬಂದ ಹುಡುಗಿ, ಬತ್ತಲೆಯಿಂದಲೇ ತನ್ನ ಸೌಂದರ್ಯವನ್ನು ಮುಚ್ಚಿಕೊಂಡವಳು ಎಂದು ತಿಳಿಸಿದ್ದಾರೆ.(ಬೇಂದ್ರೆಯವರ ಕಾವ್ಯದಲ್ಲಿ ಶ್ರುತಿ ಮತ್ತು ಕೃತಿ : ಪುಟ –೪) ಆದರೆ ನನ್ನ ಅಧ್ಯಯನದ ಪ್ರಕಾರ 'ಹಡಗದ ಹುಡುಗಿ' ಸುಭದ್ರವಾದ ಕಟ್ಟು ಮಸ್ತಾದ ಮೈಕಟ್ಟಿನ ಎತ್ತರದ ನಿಲುವಿನ ಹೆಣ್ಣು. ಜನಪದರ ನುಡಿಗಟ್ಟಿನಲ್ಲಿ ಈ ಪದದ ಬಳಕೆ ಹೀಗಿದೆ. ಗಂಡ ಕೊಡವಿ ಹೋದ ರಂಬೆ ಅಂಗವ್ನೆ. ಹೆಂಡ್ತಿ ಹಡಗು ಇದ್ದಂಗವ್ಳೆ'. ನಾನು ಆ ಹೆಣ್ಣನ್ನು ಜ್ಞಾನಕನ್ಯೆ ಎಂದು ಕರೆದಿದ್ದೇನೆ. ಹಾವೇರಿ ಜಿಲ್ಲೆಯ ಹಿರೇಕೇರೂರು ತಾಲ್ಲೂಕಿನ ಹಾದ್ರಿಹಳ್ಳಿಯ ನನ್ನ ಸ್ನೇಹಿತ ಷಣ್ಮುಖ ಹಡಗದ. ಎತ್ತರದ ನಿಲುವಿನ ಕಟ್ಟು ಮಸ್ತಾದ ವ್ಯಕ್ತಿ. ಆತನ ಮನೆತನದ ಹೆಸರು 'ಹಡಗದ'."[ಕೃಷ್ಣಪ್ಪ ಜಿ., ೨೦೧೯., ಹಸಿರು ಹಚ್ಚಿ ಚುಚ್ಚಿ., ನಾಕುತಂತಿ., ವಂಶಿ ಪಬ್ಲಿಕೇಷನ್ಸ್, ಬೆಂಗಳೂರು, ಪುಟಸಂಖ್ಯೆ ೧೪೮]

ಈ ವಿಮರ್ಶೆಯಲ್ಲಿ ಬೇಂದ್ರೆ ಅವರು ಜನಪದದೊಂದಿಗೆ ಹೊಂದಿದ್ದ ಪರಿಪೂರ್ಣ ನಂಟನ್ನು ಸ್ಪಷ್ಟಪಡಿಸಲು ಕಾರಣವಾಗುತ್ತದೆ. ಇದೇ ರೀತಿ 'ತೂಬು', 'ಹಸಿರು ಹಚ್ಚಿ ಚುಚ್ಚಿ', 'ಮಾವಿನ ಪೀಪಿ' ಇವೆಲ್ಲಾ ವಿಚಾರಗಳನ್ನು ಹೊಸದಾಗಿ ಕ್ಷೇತ್ರಕಾರ್ಯದ ಮೂಲಕ ಕೃಷ್ಣಪ್ಪ ಅವರು ಸಂಶೋಧನೆ ಮಾಡಿರುವುದನ್ನು ಗಮನಿಸಬಹುದು.

‘ಬಾಲಬೋಧೆ’ ಸಂಕಲನ ಕುರಿತು ವಿಮರ್ಶೆ

ಬಾಲಬೋಧೆ ಸಂಕಲನವು ಬೇಂದ್ರೆ ಅವರ ಕೊನೆ ದಿನಗಳ ಅನುಭಾವ ಗೀತೆಗಳೆಂದು ಕೀರ್ತಿನಾಥ ಕುರ್ತಕೋಟಿ ಅವರು ನೀಡಿರುವ ಅರ್ಥವ್ಯಾಪ್ತಿಯಿಂದ ತಿಳಿಯುತ್ತದೆ. ಇಲ್ಲಿ ವಿಮರ್ಶೆಗಿಂತ ಅರ್ಥ ಚಿಂತನೆಗೆ ಹೆಚ್ಚಿನ ಮಹತ್ವ ನೀಡಿದ್ದಾರೆ. ಬೇಂದ್ರೆ ಅವರು ಕೊನೆಯ ದಿನಗಳಲ್ಲಿ ನೀಡಿದ ಜವಾಬ್ದಾರಿ ಪೂರ್ಣವಾದ ಕಾರ್ಯವಾಗಿ ಅದನ್ನು ಸೂಕ್ತವಾಗಿ ನಿರ್ವಹಿಸುವ ಜೊತೆಗೆ ತನ್ನದು ಅಧ್ಯಯನ ಮುಖೇನ ಕಾರ್ಯ ಅದ್ದರಿಂದ ಪ್ರತಿ ಅರ್ಥದಲ್ಲೂ ನಾನಿನ್ನು ಅಪೂರ್ಣವೆಂಬ ಅಭಿಪ್ರಾಯ ಕುರ್ತಕೋಟಿ ಅವರದು. ಇಲ್ಲಿ ವಾಮನ ಬೇಂದ್ರೆಯವರ ಅಧ್ಯಯನವನ್ನು ಗೌರವಿಸಿದ್ದಾರೆ. ಜೊತೆಗೆ ಇಲ್ಲಿನ ಕವಿತೆಗಳು ವಾಮನಬೇಂದ್ರೆ ಅವರಿಗೆ ಕವಿ ನೀಡಿದ ದರ್ಶನವಾಗಿದ್ದರೂ ಅದರಾಚೆಗಿನ ಜಗತ್ತು ಬೇರೆಯದು. ವೇದ ಹಾಗೂ ಉಪನಿಷತ್ತುಗಳ ತಾತ್ವಿಕತೆಯ ಚಿಂತನೆಯನ್ನೂ ಅಧ್ಯಯನದಲ್ಲಿ ಗಮನಿಸಿದ್ದಾರೆ.

ಕೀರ್ತಿನಾಥ ಕುರ್ತಕೋಟಿ ಅವರು ‘ಬಾಲಬೋಧೆ’ ಕುರಿತು ನೀಡಿದ ವಿಶಿಷ್ಟ ಚಿಂತನೆ ಇಲ್ಲಿ ಮುಖ್ಯವಾಗುತ್ತದೆ. ಛಂದಸ್ಸಿನ ದೃಷ್ಟಿಯಿಂದ ಬೇಂದ್ರೆ ಅವರು ಗ್ರಹಿಸಿರುವ ಹೊಸಕ್ರಮವನ್ನು ಈ ರೀತಿ ಪರಿಶೀಲಿಸಿದ್ದಾರೆ.

> ಬಾಲಬೋಧೆಯಲ್ಲಿಯ ಒಟ್ಟು ಎಪ್ಪತ್ತು ಕವಿತೆಗಳು ಬೇಂದ್ರೆಯವರ ತಿಳುವಳಿಕೆಯ ಬೇರೆಬೇರೆ ಪರಿಗಳನ್ನು ಬಹಳ ಸಂಕ್ಷೇಪವಾಗಿ ನಿರೂಪಿಸುತ್ತವೆ. ಈ ಕವಿತೆಗಳ ಛಂಧೋಶರೀರ ಕೂಡ ಸಣ್ಣದು. ಮೊದಲಿನ ಒಂದೆರಡು ಕವಿತೆಗಳನ್ನು ಬಿಟ್ಟರೆ ಸಾಮಾನ್ಯವಾಗಿ ಚಿಕ್ಕದಾದ ಹನ್ನೆರಡು ಸಾಲುಗಳುಳ್ಳ ಕವಿತೆಗಳಿವು. ಒಂದು ಸಾಲಿನಲ್ಲಿ ನಾಲ್ಕು ಅಥವಾ ಐದುಮಾತ್ರೆಗಳ ಎರಡು ಗಣಗಳು ಕಥನಕ್ರಮವಾಗಲಿ, ವರ್ಣನೆಯಾಗಲಿ, ಭಾವಪ್ರಕಾಶನವಾಗಲಿ ಇಲ್ಲದೆ ಹೇಳಬೇಕಾದುದನ್ನು ಚುಟುಕಿನಲ್ಲಿ ಹೇಳಿ ಮುಗಿಸುವ ಕ್ರಮವನ್ನು ಇಲ್ಲಿ ಅನುಸರಿಸಿದ್ದಾರೆ. ಬೇಂದ್ರೆಯವರ ತಿಳುವಳಿಕೆ ಭೌತಿಕದಿಂದ ಆತ್ಮಿಕ ಮತ್ತು ದೈವಿಕದವರೆಗೆ ಎಲ್ಲ ಸ್ತರಗಳನ್ನು ಬೆಳಗುತ್ತದೆ. ಇವು ಛಂದಸ್ಸಿನ ದೃಷ್ಟಿಯಿಂದ ಬೇರೆ ಬೇರೆ ಕವಿತೆಗಳಾಗಿ ಬಂದಿದ್ದರೂ, ತಿಳುವಳಿಕೆಯ ದೃಷ್ಟಿಯಿಂದ ಈ ಎಲ್ಲ ಕವಿತೆಗಳೂ ಕೂಡಿ ಒಂದು ಕವಿತೆಯಾಗುತ್ತದೆ.[೯೭]

ಬೇಂದ್ರೆ ಅವರು ತಮ್ಮ ಕವಿತೆಗಳಿಗೆ ಛಂದಸ್ಸಿನ ಹೊಸ ಪ್ರಯೋಗಗಳನ್ನು ಅಳವಡಿಸುತ್ತಾ ಬಂದವರು ‘ಬಾಲಬೋಧೆ’ಯ ಪ್ರಯೋಗವೂ ಈ ನಾವಿನ್ಯತೆಯನ್ನು ಒಳಗೊಂಡಿದೆ ಎಂಬ ಅಂಶಗಳನ್ನು ಚರ್ಚಿಸಬಹುದು. ಕುರ್ತಕೋಟಿ ಅವರು ಈ ಕವಿತೆಗಳನ್ನು ಅನುಭವಕ್ಕಿಂತ ಸಂಬಂಧಗಳಿಗೆ ಹೆಚ್ಚು ಪ್ರಾಶಸ್ತ್ಯ ನೀಡಿ ಜೀವಗಳ ಚೈತನ್ಯದ ಹಾದಿಯಲ್ಲಿ ವಸ್ತುಗಳಲ್ಲಿ ಪರಸ್ಪರ ಸಂಬಂಧವನ್ನು ಕಲ್ಪಿಸಿ ಸತ್ಯವನ್ನು ಅನ್ವೇಷಿಸುವ ಹೊಸ ವಿಮರ್ಶೆಯನ್ನು ಅಧ್ಯಯನಮಾಡಬಹುದು.

ಬೇಂದ್ರೆ ಅವರ ಸಲಹೆಯಂತೆ ಈ ಕೃತಿಗೆ ಟಿಪ್ಪಣಿ ಬರೆದಿದ್ದರೂ ವ್ಯಕ್ತಿಗತ ಸಂಬಂಧದಿಂದ ಆಚೆ ನಿಂತು ಕವಿ ಹಾಗೂ ರಸಿಕ ಸಂಬಂಧವನ್ನು ಈ ಮಾತುಗಳು ಹಾಗೂ ಟಿಪ್ಪಣಿಗಳು ತಿಳಿಸುತ್ತವೆ ಎಂಬ ನಿರ್ಣಯವು ಬಾಲಬೋಧೆಯ ತಾತ್ವಿಕತೆಯು ಒಳಗೊಂಡಿರುವ ಸರಳತೆ, ಬದುಕಿಗೆ ನೆರವಾಗುವ ರೀತಿ ಇಲ್ಲಿನ ಅಧ್ಯಯನದಲ್ಲಿ ಲಭಿಸುತ್ತದೆ ಎನ್ನಬಹುದು.

ಶ್ರಾವಣ ಪ್ರತಿಭೆಯ ಚಿಂತನೆಗಳು

ಕೀರ್ತಿನಾಥ ಕುರ್ತಕೋಟಿ ಅವರು 'ಮಟ ಬಂಗಾರ' ಸಂಪುಟಕ್ಕಾಗಿ ಜಿ. ಬಿ. ಜೋಷಿ ಅವರೊಂದಿಗೆ ಬೇಂದ್ರೆ ಅವರ ಸುಮಾರು ಎಪ್ಪತ್ತಕ್ಕೂ ಅಧಿಕ ಕವಿತೆಗಳಿಗೆ ಐದನೆ ಸಂಪುಟದಲ್ಲಿ ವಿಮರ್ಶೆ ನೀಡಿದ್ದಾರೆ. ಈ ವಿಮರ್ಶೆಗಳು ಕವಿತೆಗೆ ಸಮಗ್ರ ಚಿಂತನೆಯನ್ನು ಒದಗಿಸಲಾರವು. ಈ ಕವಿತೆಗಳನ್ನು ಗ್ರಹಿಸಿರುವ ದೃಷ್ಟಿಕೋನವನ್ನು ಗಮನಿಸಿದರೆ ವಿಶಿಷ್ಟ ಕವಿತೆಗಳನ್ನು ಪರಿಚಯಿಸುವ ಉದ್ದೇಶ ಈ ವಿಮರ್ಶಕರದು. ಕೆಲವೊಂದು ಕವಿತೆಗಳನ್ನು ಆಳವಾದ ಅಧ್ಯಯನದ ಫಲಶ್ರುತಿಗೆ ಒಳಪಡಿಸಿರುವನ್ನು ತಿಳಿಯಬಹುದು. ಇಲ್ಲಿ ಈ ಅಧ್ಯಯನಕಾರರ ವಿಮರ್ಶೆಯ ನಿಲುವುಗಳು ಸ್ಪಷ್ಟವಾಗಿ ತಿಳಿಯುತ್ತವೆ.

'ಬೆಳಗು'ಕವಿತೆಯನ್ನು ಎರಡು ದೃಷ್ಟಿಕೋನದಲ್ಲಿ ಗಮನಿಸಲಾಗಿದೆ. ಒಂದು ಐತಿಹಾಸಿಕ ಚಿಂತನೆಯೊಂದಿಗೆ ಕಾಲಘಟ್ಟದ ಅರಿವು, ಸ್ವಾತಂತ್ರ್ಯದ ಹಂಬಲ. ಎರಡನೇ ಅಂಶವಾಗಿ ಪ್ರಕೃತಿ ಸೌಂದರ್ಯ, ಮನಸ್ಸಿನ ಸೌಂದರ್ಯ, ಕಾವ್ಯದಲ್ಲಿ ರೂಪಕ ಜಗತ್ತು. ಜಗತ್ತಿನಲ್ಲಿ ನಡೆಯುವ ವ್ಯಾಪಾರಗಳಿಗೆಲ್ಲಾ ಸೂರ್ಯನ ಬೆಳಕು ಪ್ರೇರಕ ಶಕ್ತಿಯಷ್ಟೇ ಅಲ್ಲದೆ, ಆ ವ್ಯಾಪಾರಗಳನ್ನು ಅರ್ಥ ಪೂರ್ಣವಾಗುವಂತೆ ಹೊಂದಿಸುವ ಕಲೆಯೂ ಆಗುತ್ತದೆ. ಈ ಬೆಳಕಿನಾಟದಲ್ಲಿ ವಸ್ತು ವಸ್ತುವಿಗಿರುವ ಮತ್ತು ಪರವಸ್ತುವಿನ ಜೊತೆಗಿನ ಸಂಬಂಧಗಳೆಲ್ಲಾ ಕಾಣತೊಡಗುತ್ತವೆ. ಅದೃಷ್ಟದ ಕೈವಾಡ ಕಣ್ಣಿಗೆ ಕಾಣದಿದ್ದರೂ ಅನುಭವ ಗೋಚರವಾಗುತ್ತದೆ. ಮತ್ತು ಅಂಥ ಅನುಭವಕ್ಕೆ ಈ ಕವಿತೆ ಮಾತು ಕೊಟ್ಟಿದೆ ಎಂಬ ತಾತ್ವಿಕ ನಿರ್ಣಯ ಇಲ್ಲಿ ಬಹಳ ಮುಖ್ಯವಾದುದು.

ಅನುಭವದ ಸೌಂದರ್ಯಕ್ಕೆ ತೀವ್ರವಾಗಿ ಪ್ರತಿಸ್ಪಂದಿಸುವ ಉತ್ಸಾಹ ಮತ್ತು ಪ್ರತಿಸೃಷ್ಟಿಯ ಹಂಬಲ 'ಯುಗಾದಿ', 'ಚಳಿಯಾಕೆ', 'ಪಾತರಗಿತ್ತಿ ಪಕ್ಕ', 'ಶ್ರಾವಣ' ಕವಿತೆಗಳಲ್ಲಿ ಅಡಗಿದೆ. ಈ ಹಿನ್ನೆಲೆ ಕೀರ್ತಿನಾಥ ಕುರ್ತಕೋಟಿ ಅವರು 'ಯುಗಾದಿ' ಕವಿತೆಯಲ್ಲಿನ ಪರಿಸರ ಹಾಗೂ ಮಾನವ ಪ್ರಜ್ಞೆಯನ್ನು ವಿಶೇಷವಾಗಿ ಗಮನಿಸಿದ್ದಾರೆ.

ನಿಸರ್ಗದಲ್ಲಿ ಪ್ರಜ್ಞೆಯಿಲ್ಲದ, ಆದರೆ ನಿತ್ಯ ನವೀನವಾದ ಆನಂದಾನುಭವ ಮತ್ತು ಮನುಷ್ಯ ಜೀವನದಲ್ಲಿ ಪ್ರಜ್ಞೆಯ ಪರಿಪಾಕದಿಂದ ಉಂಟಾಗುವ ಕರುಣಾಭಾವ ಇವೆ ಇವೆರಡರ ನಡುವಿನ ಸಂಘರ್ಷದಲ್ಲಿ ಕವಿತೆಯ ಶಕ್ತಿ ಕೇಂದ್ರವಾಗಿದೆ. ಕವಿತೆಯ ದೌರ್ಬಲ್ಯವನ್ನು ಗುರ್ತಿಸುತ್ತಾರೆ. ಈ ಕವಿತೆಯ ದೊಡ್ಡ ಗುಣವಾಗಿ 'ವಸಂತ ತತ್ವದ ಸಾಕಾರ ಕಲ್ಪನೆ' ಎಂದು ಕುರ್ತಕೋಟಿ ಅವರು ನಿರ್ಣಯವನ್ನು ನೀಡಿರುವುದನ್ನು ಗಮನಿಸಬಹುದು.

ಈ ಕವಿತೆಯು ಪಡೆಯುವ ವರ್ಣನೆಯನ್ನು ಅನ್ಯಾದೃಶ್ಯವಾದುದೆಂದು ಸ್ತ್ರೀಯ ಒಯ್ಯಾರದ ವರ್ಣನೆಗೆ ಒಪ್ಪುತ್ತದೆಂದು ನೋಡುವ ಭಿನ್ನ ಚಿಂತನೆ ಇದು. ಕುರ್ತಕೋಟಿ ಅವರು ಇಲ್ಲಿ ಇಂಥ ಹೆಣ್ಣಿಗೂ, ಚಳಿಗೂ ಇರುವ ಸಂಬಂಧ ಉಪಮಾನೋಪಮೇಯ ಸಂಬಂಧ. ಸಾಮಾನ್ಯವಾಗಿ ಉಪಮಾನದ ಸೌಂದರ್ಯದಿಂದ, ಉಪಮೇಯದ ಸೌಂದರ್ಯ ರಸಿಕರಿಗೆ ವೇದ್ಯವಾಗಬೇಕು. ಆದರೆ ಇಲ್ಲಿ ಉಪಮಾನದ ಉಜ್ವಲ ಸೌಂದರ್ಯ ಉಪಮೇಯವನ್ನು ಕ್ಷಣ ಹೊತ್ತಾದರೂ

ಮರೆಸಿಬಿಡುತ್ತದೆ.' ಎನ್ನುತ್ತಾ ಇಲ್ಲಿನ ಅತಿ ಮಾನಸ ವ್ಯಕ್ತಿತ್ವ, ಜನಪದ ನಂಬಿಕೆ, ಜನಪದ ಗಾದೆಗಳ ಕುರಿತು ವಿಮರ್ಶಕರು ಗಮನಿಸಿದ್ದಾರೆ.

ವಾತ್ಸಲ್ಯ, ಭಾವನೆಯ ಸೌಂದರ್ಯ, ಶೃಂಗಾರದ ವರ್ಣನೆ ಈ ಅಂಶಗಳೊಂದಿಗೆ ಈ ಕವಿತೆಯನ್ನು ಕುರ್ತಕೋಟಿ ಅವರು ವಿಮರ್ಶಿಸಿದ್ದಾರೆ. ಬೇಂದ್ರೆ ಅವರ ಕವಿತೆಗಳಲ್ಲಿ ವಸ್ತು ಯಾವುದೇ ಆದರೂ ಅದರಲ್ಲಿ ಗಮನಿಸುವ ಕಾವ್ಯ ಪ್ರತಿಭೆ ವಿಶೇಷವಾಗಿರುತ್ತದೆ. ಜೀವನದ ಒನಪು, ಝೋಕು, ಬಿನ್ನಾಣ, ಮುಗ್ಧತೆ, ನಂಬಿಕೆ, ತನ್ಮಯತೆ, ವಿರಹ, ವ್ಯಥೆಯ ನೋವು ಇವೆಲ್ಲವನ್ನು ಕಾವ್ಯವು ಪೂರ್ಣವಾಗಿ ತುಂಬಿಬಿಡುತ್ತವೆ. 'ಮುಗ್ಧೆ, ಹಿಂದೆ ನೋಡದಾ, ಗಮಗಮಾಡಸತಾವ ಮಲ್ಲಿಗಿ, ಚಿತ್ತಿ ಮಳೆಯ ಸಂಜೆ, ಹುಬ್ಬಳಿಯಾಂವ, ಟೊಂಕದ ಮ್ಯಾಲೆ ಕೈ ಇಟಗೊಂಡು, ನಾ ನೊಂದ ನೆನೆದರೆ ನೀನೊಂದ ನೆನೆಯುತಿ' ಈ ಕವಿತೆಗಳು ಇದೇ ಅರ್ಥ ನಾದಕ್ಕೆ ಒಗ್ಗುತ್ತವೆ.

'ಚೆಲುವ' ಕವಿತೆ ಈ ದೃಷ್ಟಿಯಿಂದ ಪ್ರಾತಿನಿಧಿಕವಾಗಿದ್ದು, ಇದರಲ್ಲಿ ಜಾನಪದ ಸತ್ವವನ್ನು ಉಪಯೋಗಿಸಿಕೊಂಡು ಬೇಂದ್ರೆ ಅವರು ಕವಿಕರ್ಮದಲ್ಲಿ ತೋರಿಸುವ ಪರಿಷ್ಕಾರ ಮತ್ತು ಕೌಶಲ್ಯ ಭಿನ್ನವಾದುದೆಂದು ಕುರ್ತಕೋಟಿ ಅವರು ಗ್ರಹಿಸಿದ್ದಾರೆ. ಶ್ರಾವಣ ಚಿಂತನೆ ಬೇಂದ್ರೆ ಅವರಿಗೆ ಲಭಿಸಿದ ಪ್ರಾಕೃತಿಕ ಜಗತ್ತು, ಹಾಗೂ ಕವಿ ಭಾವಲಹರಿಯನ್ನು ಗಮನಿಸಿ ಇವರ ರಚನೆಯ 'ಶ್ರಾವಣ' ಕವಿತೆಗಳ ನಡುವಿನ ಭಿನ್ನತೆಯನ್ನು ಗುರ್ತಿಸಿದ್ದಾರೆ.

'ಅಲೌಕಿಕ'(ಉಯ್ಯಾಲೆ) ಈ ಕವಿತೆಯಲ್ಲಿ ತಾಯಿ ಮತ್ತು ಮಗುವಿನ ಸಂಬಂಧವು ಇಂದ್ರಿಯ ರೂಪ, ಮನಸ್ಸು ಮತ್ತು ಬುದ್ಧಿಗಳ ವ್ಯಾಪಾರದಲ್ಲಿ ಅಡಗಿರುವುದನ್ನು ಗಮನಿಸಲಾಗಿದೆ. ಆ ಅಂಶಗಳನ್ನು ಕುರ್ತಕೋಟಿ ಅವರು ಈ ರೀತಿ ಗಮನಿಸಿದ್ದಾರೆ

> ಬೇಂದ್ರೆಯವರ ಸ್ವಂತ ಜ್ಞಾನಶಾಸ್ತ್ರದ ಪ್ರಕಾರ, ತಿಳುವಳಿಕೆಯ ವ್ಯಾಪಾರ ರಹಸ್ಯಮಯವಾದದ್ದು. ತಾರ್ಕಿಕ ಅನುಮಾನದಲ್ಲಿ ಇಂಥ ರಹಸ್ಯಮಯತೆಗೆ ಸ್ಥಾನವಿಲ್ಲ. ಇಂದ್ರಿಯಗಳಿಂದ ದೊರೆತ ತಿಳುವಳಿಕೆಯನ್ನು ಪಡೆಯುತ್ತದೆ. ಆದರೆ ಇಂದ್ರಿಯ ಗಮ್ಯತೆ ಕೂಡ, ತಾತ್ವಿಕ ರಹಸ್ಯಮಯತೆಯಿಂದ ಕೂಡಿದೆಯೆಂದು ಬುದ್ಧಿ ಒಪ್ಪುವುದಿಲ್ಲ. ತಾಯಿಗೆ ಮಗುವನ್ನು ಗುರುತಿಸುವುದು, ತಿಳುವಳಿಕೆಯ ಪ್ರಾರಂಭದ ಸ್ಥಿತಿ ಮಾತ್ರ, ಮಗುವಿನ ಆಟಪಾಟಗಳಲ್ಲಿ, ವಿಸ್ಮಯಾದಿ ಭಾವಗಳ ಪ್ರದರ್ಶನದಲ್ಲಿ, ಮುಖ ಮುದ್ರೆಯಲ್ಲಿ, ಕುಣಿತ ಹಾಡುಗಳಲ್ಲಿ ತಾಯಿ ಅಲೌಕಿಕವಾದ ಜೀವದ ಸೂಕ್ಷ್ಮ ಭಾವಗತಿಗಳನ್ನು ಕಾಣುತ್ತಾಳೆ. ಲೌಕಿಕವಾದ ಭಾಷೆಯನ್ನು ಕಲಿಯುವ ಮೊದಲಿನ, ಕೂಸಿನ ಸ್ಥಿತಿ ಇದು. ಅದು 'ನವೋನವ ಚಮತ್ಕಾರ!'[೮೮]

ಹೀಗೆ ಕುರ್ತಕೋಟಿ ಅವರ ಪಠ್ಯಕೇಂದ್ರಿತ ವಿಮರ್ಶೆಗೆ ಒಳಗಾಗದೆ ವಿವರಣಾತ್ಮಕ ವಿಮರ್ಶೆಯನ್ನು ಅನುಸರಿಸಿದ್ದಾರೆ. ನಿಕಟ ವಿಶ್ಲೇಷಣೆಯೂ ಕೂಡ ಕುರ್ತಕೋಟಿ ಅವರ ಅಧ್ಯಯನದ ನಿಲುವಲ್ಲ. ನಾಗರಾಜ್ ಡಿ. ಆರ್. ಅವರು ಹೇಳುವಂತೆ

ಆಧುನಿಕ ಕನ್ನಡ ಕಾವ್ಯ ಪರಂಪರೆ ಬಗ್ಗೆ ಕೀರ್ತಿನಾಥರದು ಮಹಾಪತಿವ್ರತಾ ಪ್ರತಿಭೆ. ಅದು ಬೇಂದ್ರೆಯವರ ಸೇವೆಯನ್ನು ಮಾತ್ರ ಅಧ್ಭುತವಾಗಿ ಮಾಡಬಲ್ಲದು."[೯]

ಈ ಹೇಳಿಕೆಯನ್ನು ಸ್ವತಃ ಕುರ್ತಕೋಟಿ ಅವರೂ ಕೂಡ ಒಪ್ಪಿರಬಹುದು. ಏಕೆಂದರೆ 'ಹೆಜ್ಜೇನು' ಕೃತಿಯ ಸಂಪಾದಕ ಕುರ್ತಕೋಟಿ ಅವರೇ ಆಗಿದ್ದಾರೆ. ಆದರೆ ಡಿ. ಆರ್. ನಾಗರಾಜ ಅವರ ಮಾತನ್ನು ಸ್ವಲ್ಪ ವಿಶ್ಲೇಷಣೆ ಮಾಡಿದರೆ ಕುರ್ತಕೋಟಿ ಕುಮಾರವ್ಯಾಸನಿಗೆ ಸಲ್ಲಿಸುವ ನ್ಯಾಯ, ವಿಮರ್ಶಾಕ್ರಮ ಬೇಂದ್ರೆ ಸಾಹಿತ್ಯ ವಿಮರ್ಶೆಯಷ್ಟೇ ಸಮನಾಗಿ ನಿಲ್ಲಬಲ್ಲದು. ಈ ರೀತಿಯಲ್ಲಿ ಕುರ್ತಕೋಟಿ ಅವರ ಅಧ್ಯಯನದ ಸ್ವರೂಪವನ್ನು ವಿಮರ್ಶಾತ್ಮಕವಾಗಿ ಗಮನಿಸಬಹುದು.

೪. ೬. ಸಂಶೋಧನೆಗಳಲ್ಲಿ ತಾತ್ವಿಕತೆ, ಜೀವನ ದರ್ಶನದಲ್ಲಿ ಪ್ರಮುಖ ಸಮಸ್ಯೆಗಳು, ಇತರ ಚಿಂತನೆಗಳು

ಬೇಂದ್ರೆ ಅವರು ತಮ್ಮ ಸಾಹಿತ್ಯದಲ್ಲಿ ಹೊಂದಿದ್ದ ರಚನಾ ಕೌಶಲ ಹಾಗೂ ಸ್ವರೂಪವನ್ನು ಕುರಿತು ವಿವಿಧ ಲೇಖಕರ ಅಭಿಪ್ರಾಯಗಳು ಈ ರೀತಿ ಇವೆ.

"ಇವರ ಕೃತಿಗಳಲ್ಲಿ ಪದಪದವೂ ಅರ್ಥದ ಭಾರದಿಂದ ಬಾಗಿರುತ್ತದೆ. ಅದರ ಹೊರಮೈಯ ಸಿರಿಗಿಂತ ಒಳಗಡೆಯ ಆಳವೇ ಹೆಚ್ಚು.. .. ಧ್ವನಿಪೂರ್ಣತೆಯೂ ಅದರಿಂದ ಒದಗುವ ಬಿಗಿಕಟ್ಟೂ ಈತನ ಶೈಲಿಯ ವಿಶೇಷ ಲಕ್ಷಣ..." (ತೀ.ನಂ.ಶ್ರೀ–ಸಮಾಲೋಚನ)

"ನನಗೆ ಬೇಂದ್ರೆಯವರ ಸಹಜವಾದ ನಿಲುವು ಆ ಗಾರುಡಿಗ ನಿಲುವೆಂದು ಕಾಣುತ್ತದೆ.. ಮರಳು ಮಾಡು, ಗಾರುಡಿಗ ಎಂಬ ಮಾತುಗಳಲ್ಲಿ ಈಗ ನಮಗೆ ಅಲ್ಪ ಕಲ್ಪನೆಗಳು ಕಾಣುತ್ತವೆ. ಅವುಗಳ ಮೂಲ ಅರ್ಥದಲ್ಲಿ ಶಕ್ತಿ, ಶಾಂತಿ, ಓಜಸ್ಸು ಮಾತ್ರ ಸೂಚಿತವಾಗುತ್ತದೆ. .. ಬೇಂದ್ರೆಯವರ ಕವಿತೆಯ ಲಕ್ಷಣ ಈ ಶಕ್ತಿ, ಈ ಕಾಂತಿ, ಈ ಓಜಸ್ಸು."– (ಮಾಸ್ತಿ– 'ನಾದಲೀಲೆ' ಮುನ್ನುಡಿ)

"ನಮಗೆ ಹೊಳೆಯುವ ಅರ್ಥಕ್ಕಿಂತ ಬೇಂದ್ರೆಯವರು ಹೇಳುವ ಅರ್ಥ ವಿಶಾಲವಾದುದು. ಅದನ್ನು ಕೇಳಿದ ಮೇಲೆ, ಇದು ನಮಗೇಕೆ ಹೊಳೆಯಲಿಲ್ಲ? ಎಂದು ನಾವು ವಿಹ್ವಲರಾಗುತ್ತೇವೆ. ಹೀಗೆ ಅವರ ಶಬ್ದಗಳಿಗೆ ಪ್ರತಿಮಾ ಮಮತೆಯಲ್ಲದೆ ಒಂದು ಬೌದ್ಧಿಕ ಉತ್ಕರ್ಷವಿದೆ.. ಮಿಲ್ಟನ್ ಪಂಡಿತ ಪ್ರಚುರ ಭಾಷೆಯಂತೆ ಬೇಂದ್ರೆಯವರ ಶೈಲಿಯ ವಿಶಿಷ್ಟತೆಯಿದೆ.."– (ಗೋಕಾಕ್ ವಿ.ಕೃ.–'ಅರಳು ಮರಳು'–ಮುನ್ನುಡಿ)

"ಬೇಂದ್ರೆಯವರ ಇತ್ತೀಚಿನ ಕವನಗಳಲ್ಲಿ ಅವರ ಮೊದಲಿನ ಕವಿತೆಯಲ್ಲಿರುವ ಎಲ್ಲ ಗುಣಗಳನ್ನು ಹುಡುಕಿ, ಕೆಲವನ್ನು ಕಾಣದೆ ಅವರು ವೃದ್ಧರಾದರೆಂದೂ ಕಾವ್ಯದ ಮೇಲಿನ ಅವರ ಹಿಡಿತ ಸಡಿಲವಾಯಿತೆಂದೂ ಹೇಳುವ ಮೊದಲು, ನಾವು ಏನನ್ನು ಹುಡುಕ ಹೋದೆವೆಂಬುದನ್ನು ಆಲೋಚಿಸುವುದು ವಿವೇಕದ ಲಕ್ಷಣ."– (ಶಂಕರ ಮೊಕಾಶಿ ಪುಣೇಕರ – ಓ ತಾಯಿ ಮಾಯಿ)

"ಒಂದು ಪೂರ್ಣ ಆಯುಷ್ಯವನ್ನು ಸಫಲವಾಗಿ ಯಾರ ಕಾವ್ಯದ ಅಭ್ಯಾಸಕ್ಕಾಗಿ ಮೀಸಲಿಡಬಹುದೋ ಅಂಥ ಕನ್ನಡ ಕವಿಗಳಲ್ಲಿ ಶ್ರೀಮಾನ್ ಬೇಂದ್ರೆಯವರು ಅತ್ಯಾಧುನಿಕರು."–(ಶಂಕರ ಮೊಕಾಶಿ ಪುಣೇಕರ–ಬೇಂದ್ರೆಯವರ ಕಾವ್ಯ ಮೀಮಾಂಸೆ)

"ಕನ್ನಡ ಕಾವ್ಯ ಹೊಸದಾಗಿ ಸ್ವೀಕರಿಸಿದ್ದ ಬಾವಗೀತದ ಪ್ರಕಾರಕ್ಕೆ ಬೇಂದ್ರೆಯವರು ಕೊಟ್ಟ ಹೊಸ ಅರ್ಥಪೂರ್ಣತೆಯನ್ನು ಅವರ ಪ್ರತಿಭೆಗೆ ಒಂದು ಉದಾಹರಣೆಯೆಂದು ನೋಡಬಹುದು. ಪ್ರಾಚೀನ ಪರಂಪರೆಯ ಕಾವ್ಯದಲ್ಲಿ ಭಾಷೆ ಗೊಂದಲದಲ್ಲಿ ಸಿಕ್ಕು ಬಿದ್ದಿತ್ತು. ಆದರೆ ಶಬ್ದ ಪರಿಮಿತವಾದ ಅರ್ಥವನ್ನು ಸೂಚಿಸುವಂತೆಯೇ ಅಪರಿಮೇಯವಾದ ಭಾವವನ್ನು ಕೂಡ ಸೂಚಿಸಬಲ್ಲದೆಂಬುದನ್ನು ಬೇಂದ್ರೆಯವರ ಪ್ರತಿಭೆ ಕಂಡುಕೊಂಡಿದ್ದಿತು."–(ಕೀರ್ತಿನಾಥ ಕುರ್ತಕೋಟಿ –ಬಾರೋ ಸಾಧನಕೇರಿಗೆ)

"ಕನ್ನಡ ಕವಿಗಳಲ್ಲಿ ಪಂಪ, ನಾರಾಣಪ್ಪರ ತರುವಾಯ ಕನ್ನಡದ ಜೀವಾಳವನ್ನೇ ಹಿಡಿದು ಈ ನಮ್ಮ ಭಾಷೆಯ ಜೀವನಾಡಿಯನ್ನೇ ಮಿಡಿದು ಕಾವ್ಯ ರಚನೆ ಮಾಡಿದ ಕವಿ ನಮ್ಮಲ್ಲಿ ಬೇಂದ್ರೆಯವರಲ್ಲದೆ ಬೇರೆ ಯಾರೂ ಇಲ್ಲ... ಇವರ ಕಾವ್ಯ ಸಿದ್ಧಿ ಎಷ್ಟು ದೊಡ್ಡದೆಂದರೆ ಅವರ ಕಾವ್ಯ ಕನ್ನಡ ಸಂಸ್ಕೃತಿಯ ಒಂದು ಅವಿಭಾಜ್ಯ ಅಂಗವಾಗಿ ನಮ್ಮ ಬದುಕಿನಲ್ಲಿ ಬೆರೆತುಹೋಗಿದೆ. ಕನ್ನಡ ಜನ ಇಂಥ ದೊಡ್ಡ ಕವಿಗೆ ಕೃತಜ್ಞರು. ಇಂಥ ಕವಿಯನ್ನು ಅವಹೇಳನ ಮಾಡಬಲ್ಲವನಿದ್ದರೆ ಅಂಥವನು ನಮ್ಮೆಲ್ಲರ ಕನಿಕರಕ್ಕೂ ಪಾತ್ರ ಅಷ್ಟೆ."–(ಗೋಪಾಲಕೃಷ್ಣ ಅಡಿಗ–ಬೇಂದ್ರೆಯವರ ಕಾವ್ಯ)

ಜಿ. ಕೃಷ್ಣಪ್ಪ ಅವರ ಬೇಂದ್ರೆ ಸಾಹಿತ್ಯ ಕುರಿತ ಅಭಿಪ್ರಾಯದಲ್ಲಿ ಈ ನಿಲುವು ಪ್ರಸ್ತಾಪವಾಗಿದೆ.

"ಬೇಂದ್ರೆಯವರು ಒಂದು ಪದವನ್ನೂ ಕೂಡ ಅನಾವಶ್ಯಕವಾಗಿ ಬಳಸಿಲ್ಲ. ಇವರನ್ನು ಶಬ್ದ ಗಾರುಡಿಗ ಎಂದಿರುವುದು ಅಭಿಮಾನದಿಂದಲ್ಲ. ಬೇಲೂರು ಶಿಲಾಬಾಲಿಕೆಯ ಕೆತ್ತನೆಯ ಪರಿಪೂರ್ಣತೆಯಂತೆ ಇವರ ಶಬ್ದ ಸಂಪತ್ತು"

ಎಂದು ಸಾಹಿತ್ಯ ರಚನೆಯ ಶಕ್ತಿಯು ನಿಹಿತವಾಗಿರುವ ಕುರಿತು ಇವರ ಚಿಂತನೆಯ ಸೂಕ್ಷ್ಮ ಒಳನೋಟಗಳಿಂದ ಈ ಸಂಶೋಧನಾ ಕೃತಿಗಳನ್ನು ಪ್ರವೇಶಿಸುತ್ತೇನೆ.

ಬೇಂದ್ರೆ ಅವರ ಸಾಹಿತ್ಯ ಕುರಿತು ಪ್ರಭುಶಂಕರ ಅವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಮಂಡಿಸಿದ 'ಕನ್ನಡದಲ್ಲಿ ಭಾವಗೀತೆಗಳು' ಎಂಬ ಸಂಶೋಧನಾ ಪ್ರಬಂಧ ೧೯೬೫ರಲ್ಲಿ ಮೊದಲಿಗೆ ಸಾಂದರ್ಭಿಕ ಅಧ್ಯಯನ ನಡೆಸಿದೆ. ರುಕ್ಮಿಣಿ ಪರ್ವತಿ ಅವರು ೧೯೭೮ರಲ್ಲಿ ಕರ್ನಾಟಕ ವಿಶ್ವ ವಿದ್ಯಾಲಯದಲ್ಲಿ ಮಂಡಿಸಿದ 'ಅಂಬಿಕಾತನಯದತ್ತರ ಭಾವಗೀತೆಗಳು' ಎಂಬ ಸಂಶೋಧನಾ ಪ್ರಬಂಧ ಪೂರ್ಣವಾಗಿ ಅಧ್ಯಯನ ನಡೆಸಿದ ಮೊದಲ ಸಂಶೋಧನೆ ಎನ್ನಬಹುದು. ನರಸಿಂಹ ಮೂರ್ತಿ ಅವರ 'ಪು.ತಿ.ನ–ಬೇಂದ್ರೆ–ಕುವೆಂಪು ಅವರ ಕವಿತೆಗಳಲ್ಲಿ ಪ್ರತಿಮೆಗಳು–ತೌಲನಿಕ ಅಧ್ಯಯನ', ಸುಮತೀಂದ್ರ ನಾಡಿಗರು ೧೯೮೯ರಲ್ಲಿ ಮಂಡಿಸಿದ 'ಬೇಂದ್ರೆಯವರ ಕಾವ್ಯದ ವಿಭಿನ್ನ ನೆಲೆಗಳು', ಮಣಕಟ್ಟಿ ಜಿ. ಆರ್ ಅವರು 'ಬೇಂದ್ರೆ ಕಾವ್ಯದಲ್ಲಿ ಸಾಮಾಜಿಕ ಅಂಶಗಳು: ಒಂದು ಅಧ್ಯಯನ', ರಾಘವೇಂದ್ರ ರಾವ್ ಎಚ್. ಎಸ್. ಅವರು 'ಬೇಂದ್ರೆ, ಕುವೆಂಪು, ಪುತಿನ

ಕವಿತೆಗಳ ವಿಶಿಷ್ಟತೆಯ ಅಧ್ಯಯನ', ಕೃಷ್ಣಕಟ್ಟಿ ಅವರ 'ಬೇಂದ್ರೆ ಮತ್ತು ಭಾವಗೀತದ ಸ್ವರೂಪ', ಶಿವಾರೆಡ್ಡಿ ಕೆ.ಸಿ. ಅವರ 'ವಸಾಹತುಶಾಹಿ ಸಂಸ್ಕೃತಿಗೆ ಆಧುನಿಕ ಕನ್ನಡ ಕಾವ್ಯ ತೋರಿದ ಪ್ರತಿಕ್ರಿಯೆ', ಕೃಷ್ಣಪ್ಪ ಜಿ. ಅವರ 'ಬೇಂದ್ರೆಯವರ ಸಾಹಿತ್ಯದಲ್ಲಿ ಸ್ತ್ರೀ ಒಂದು ಅಧ್ಯಯನ', ಬಸು ಬೇವಿನಗಿಡದ ಅವರ 'ಬೆಳಕಿನ ಹಕ್ಕಿ ಬೇಂದ್ರೆ ನಿಸರ್ಗ ಕಾವ್ಯ', ಭಾರತಿ ಟಿ. ಸಿ ಅವರ ಬೇಂದ್ರೆಯವರ ಕಾವ್ಯದಲ್ಲಿ ಮಾತೃತ್ವದ ಪರಿಕಲ್ಪನೆ', ಸದಾಶಿವ ದೊಡಮನಿಯವರ 'ಧಾರವಾಡ ಮತ್ತು ಹಲಸಂಗಿ ಗೆಳೆಯರ ಗುಂಪು : ಒಂದು ಸಾಂಸ್ಕೃತಿಕ ಅಧ್ಯಯನ' ಈ ಸಂಶೋಧನಾ ಪ್ರಬಂಧಗಳು ಮುಖ್ಯ ಆಕರಗಳಾಗಿ ಅಧ್ಯಯನ ಮಾಡಲಾಗಿದೆ. ಹಾಗೂ ವಾಸುದೇವ ಮೂರ್ತಿ ಟಿ. ಎನ್. ಅವರ 'ಅಲ್ಲಮ ಪ್ರಭುವಿನ ವಚನಗಳ ದಾರ್ಶನಿಕ ಮರುಚಿಂತನೆಯ ಸ್ವರೂಪ' ಎಂಬ ಸಂಶೋಧನಾ ಪ್ರಬಂಧದಲ್ಲಿ 'ಮುಂದಣ ಕವಿಗಳೆನ್ನ ಕರುಣದ ಕಂದಗಳು: ಅಲ್ಲಮ ಪ್ರಭು ಮತ್ತು ಇಂದಿನ ಕನ್ನಡ ಕಾವ್ಯ' ಎಂಬ ಅಧ್ಯಾಯ, ನರಸಿಂಹಮೂರ್ತಿ ಹೂವಿನಹಳ್ಳಿ ಅವರ 'ಬೇಂದ್ರೆ ಮತ್ತು ಕಂಬಾರರ ಕಾವ್ಯದಲ್ಲಿ ಪುರಾಣಪ್ರಜ್ಞೆ ಮತ್ತು ಸಮಕಾಲೀನತೆ' ಈ ಎಲ್ಲಾ ಸಂಶೋಧನಾ ಪ್ರಬಂಧಗಳನ್ನು ಅಧ್ಯಯನ ಮಾಡಿ ವಿಶೇಷವಾದ ವಿಮರ್ಶೆಗಳನ್ನು ಈ ಪ್ರಬಂಧದಲ್ಲಿ ಬಳಸಿಕೊಳ್ಳಲಾಗಿದೆ.

ಈ ಸಂಶೋಧನಾ ಕೃತಿಗಳನ್ನು ಬೇರೆ ಬೇರೆ ಆಯಾಮಗಳಲ್ಲಿ ಅಧ್ಯಯನ ಮಾಡುವ ಅಗತ್ಯವಿದೆ. ಪ್ರಭುಶಂಕರ ಅವರು ಕನ್ನಡದಲ್ಲಿ ಭಾವಗೀತೆಗಳ ಅಧ್ಯಯನ ಮಾಡುತ್ತಾ ಪ್ರಕೃತಿಗೀತೆಗಳು, ಪ್ರೇಮಗೀತೆಗಳು, ಕೌಟುಂಬಿಕ ಗೀತೆಗಳು, ಸಾಮಾಜಿಕ ಗೀತೆಗಳು, ಅಧ್ಯಾತ್ಮ ಗೀತೆಗಳು, ಸಂಕೀರ್ಣ ಕವನಗಳು ಈ ವಿಭಾಗಗಳಲ್ಲಿ ಬೇಂದ್ರೆ ಅವರ 'ಗರಿ', 'ಸಖೀಗೀತ', 'ನಾದಲೀಲೆ', 'ಗಂಗಾವತರಣ', 'ಉಯ್ಯಾಲೆ' ಸಂಕಲನದ ಕವಿತೆಗಳನ್ನು ಸಾಂದರ್ಭಿಕವಾಗಿ ಕುವೆಂಪು, ಪುತಿನ, ಶಿವರುದ್ರಪ್ಪ ಜಿ.ಎಸ್. ಮೊದಲಾದವರ ಕವಿತೆಗಳ ಜೊತೆ ಅಧ್ಯಯನ ನಡೆಸಿದ್ದಾರೆ.

ಇಲ್ಲಿ 'ಬೆಳಗು' ಕವಿತೆಯನ್ನು ವಿಶ್ಲೇಷಿಸುತ್ತಾ

> ಬೆಳಗು-ಬೆಳದಿಂಗಳುಗಳ ವರ್ಣನೆ ಶ್ರೀ ಬೇಂದ್ರೆ ಅವರನ್ನು ಅಮರ ಭಾವಗೀತಕಾರರನ್ನಾಗಿಸಿದೆ. ಭಾವ ತೀವ್ರವಾಗಿ ಗಾನಪ್ರಧಾನವಾಗಿ ಅನನ್ಯ ಮನೋಹರತೆಯಿಂದ ವಿಶಿಷ್ಟತೆಯನ್ನು ಪಡೆದಿವೆ ಅವರ ಕವನಗಳು. ಈ ಕೆಲವು ದಶಕಗಳಲ್ಲಿ ಎಲ್ಲರ ಬಾಯಲ್ಲೂ ಕೇಳಿ ಬರುತ್ತಿರುವ, ಸರ್ವಜನ ಮೋಹಕವಾಗಿರುವ ಕವನ ಅನುಭವಗಳನ್ನು ಒಳಗೊಂಡಿರುವ ಈ ಕವನ ಆ ಕಾರಣಕ್ಕಾಗಿಯೇ ಸರ್ವಜನಪ್ರಿಯತೆಯನ್ನು ಪಡೆದಿದೆ.[೫೦]

ಕವಿತೆಯ ಸಾರ್ಥಕ ನೆಲೆಯಿಂದ ಅರ್ಥದ ನೆಲೆಯಲ್ಲಿ ಸಾಗುವ ಪ್ರಭುಶಂಕರ ಅವರು ಪ್ರಕೃತಿಯ ತಾತ್ವಿಕ ಸ್ವರೂಪವನ್ನು ಮಾತ್ರ ಪರಿಗಣಿಸಿದಂತೆ ಕಾಣುತ್ತದೆ.

'ಕುರುಡು ಕಾಂಚಾಣ' ಕುರಿತ ವಿಮರ್ಶಾತ್ಮಕ ಚಿಂತನೆ ಹೀಗಿದೆ. ಪ್ರಭುಶಂಕರ ಅವರು ಆರ್ಥಿಕ ದೃಷ್ಟಿಕೋನವನ್ನು ಈ ರೀತಿ ಮಂಡಿಸುತ್ತಾರೆ. ಭಾರತೀಯ ಆಡಳಿತ ವ್ಯವಸ್ಥೆಯಲ್ಲಿ ನೆಹರೂ ರೂಪಿಸಿದ ಆರ್ಥಿಕ ಚಿಂತನೆಯಿಂದ ಕೈಗಾರಿಕೆಗಳ ಪರಿಣಾಮವು ಪೂರ್ಣವಾಗಿ

ದೇಶವನ್ನು ವ್ಯಾಪಿಸಿತ್ತು. ಇಂತಹ ಸಂದರ್ಭದಲ್ಲಿ ಮೂಡಿದ ಸಂಶೋಧನೆಯಲ್ಲಿ ಈ ರೀತಿ ಅಭಿಪ್ರಾಯ ವ್ಯಕ್ತವಾಗಿದೆ.

> ಬೇಂದ್ರೆಯವರ 'ಕುರುಡು ಕಾಂಚಾಣಾ ಒಂದು ಅದ್ಭುತವಾದ ಪ್ರತಿಮಾ ಭಾವಗೀತೆ ಕಾಂಚಾಣ ಕುರುಡು. ಲೋಕದ ಆರ್ಥಿಕ ಅಸಮತೆಗೆ ನ್ಯಾಯದ ರಕ್ಷೆಯಿದೆ, ಆದರೆ ಧರ್ಮ ತರ್ಕಗಳ ಬೆಂಬಲವಿಲ್ಲ. ಮತಿಯಲ್ಲಿ ಪ್ರಖರವಾದ ಶಕ್ತಿಯನ್ನು ಪಡೆದಿರುವ ಮಾನವ ಬೃಹಸ್ಪತಿಗಳು ಕೂಡ ಈ ಕಾಂಚಾಣಕ್ಕೆ ಎಂತಹ ಸಲ್ಲದ ಮೌಲ್ಯವನ್ನು ತಮ್ಮ ಬದುಕಿನಲ್ಲಿ ಕೊಟ್ಟಿದ್ದಾರೆ ಎಂಬುದನ್ನು ನೆನೆದರೆ ಆಶ್ಚರ್ಯವಾಗುತ್ತದೆ, ಖೇದವಾಗುತ್ತದೆ. ಈ ತತ್ವವನ್ನು ಕವಿ ಬೇಂದ್ರೆಯವರು ಒಂದು ಪುಟ್ಟ ಕವನದಲ್ಲಿ ಅತ್ಯಂತ ಯಶಸ್ವಿಯಾಗಿ ಚಿತ್ರಿಸಿದ್ದಾರೆ. ಪಾಶ್ಚಾತ್ಯ ಸಾಹಿತ್ಯವನ್ನು ಬಲ್ಲವರು ಹೇಳುತ್ತಾರೆ ಅಲ್ಲಿಯೂ ಇಷ್ಟು ಕಿರಿದರಲ್ಲಿ ಈ ತತ್ವ ಇಷ್ಟು ಶಕ್ತಿಪೂರ್ಣವಾಗಿ ರಸವ್ಯಂಜಕವಾಗಿ ನಿರೂಪಿತವಾಗಿಲ್ಲ ಎಂದು. ಇಲ್ಲಿ ಉಪಮೆಯಿಲ್ಲ, ರೂಪಕವಿಲ್ಲ. ಹಣವೇ ತನ್ನ ವಿಕಟ ನೃತ್ಯಕ್ಕೆ ತೊಡಗಿದೆ.[೫೦]

ಪ್ರಭುಶಂಕರ ಅವರ ಚಿಂತನೆಯು ಬೇಂದ್ರೆ ಅವರ ಕಾವ್ಯವನ್ನು ಈ ರೀತಿ ಗ್ರಹಿಸಿದೆ.

'ಅಂಬಿಕಾತನಯದತ್ತರ ಭಾವಗೀತೆಗಳು' ಎಂಬ ಸಂಶೋಧನಾ ಪ್ರಬಂಧದಲ್ಲಿ ರುಕ್ಮಿಣಿ ಪರ್ವತಿ ಅವರು ನಾಲ್ಕು ವಿಭಾಗದಲ್ಲಿ ವಿವಿಧ ವಿಚಾರಗಳನ್ನು ಪರಿಚಯಾತ್ಮಕ ವಿಮರ್ಶೆಯ ರೂಪದಲ್ಲಿ ಅಧ್ಯಯನ ಮಾಡಿದ್ದಾರೆ. 'ಅಂಬಿಕಾತನಯ ದತ್ತರ ಕಾವ್ಯ ಸೌಂದರ್ಯ' ಈ ಅಧ್ಯಾಯದಲ್ಲಿ ಕಲ್ಪನಾ ಸಂಪತ್ತು, ಭಾವನಾ ಸಂಪತ್ತು, ವಿಚಾರ ಸಂಪತ್ತು ಹಾಗೂ ಶೈಲಿ ಈ ಅಂಶಗಳು ಬೇಂದ್ರೆ ಅವರ ಕಾವ್ಯದಲ್ಲಿ ಅಭಿವ್ಯಕ್ತಗೊಳ್ಳುವ ಬಗೆಯನ್ನು ಚರ್ಚಿಸಿದ್ದಾರೆ. ಬೇಂದ್ರೆ ಅವರನ್ನು ಪ್ರಭಾವಿಸಿದ ಅರವಿಂದರು, ಠಾಗೂರ್ ಹಾಗೂ ಪಾಶ್ಚಾತ್ಯ ಕವಿಗಳಾದ ಷೆಲ್ಲಿ, ಕೀಟ್ಸ್, ಎ. ಈ. ಮೊದಲಾದವರ ಸಾಹಿತ್ಯ ಚಿಂತನೆಗಳ ಅರಿವನ್ನು ಇಲ್ಲಿ ವಿಸ್ತರಿಸಿದ್ದಾರೆ. ರುಕ್ಮಿಣಿ ಪರ್ವತಿ ಅವರ ಸಂಶೋಧನಾ ಪ್ರಬಂಧದಿಂದ ಪ್ರಸ್ತುತ ಇಪ್ಪತ್ತೊಂದನೇ ಶತಮಾನದ ಎರಡನೇ ದಶಕದ ಈ ಉತ್ತರಾರ್ಧದವರೆಗೂ ಸಂಶೋಧನೆಗಳಲ್ಲಿ, ಬೇಂದ್ರೆ ಅವರ ಸಾಹಿತ್ಯ ಕುರಿತ ವಿಮರ್ಶಾ ಅಧ್ಯಯನ ಕೃತಿಗಳಲ್ಲಿ ಒಂದು ಪೂರ್ಣ ವಿಸ್ತಾರದಲ್ಲಿ ಬೇಂದ್ರೆ ಅವರ ಬದುಕನ್ನು ವಿಸ್ತರಿಸುತ್ತಾರೆ. ಇದಕ್ಕೆ ಕೆಲವು ಕಾರಣಗಳನ್ನು ಗಮನಿಸಬಹುದು. ಬೇಂದ್ರೆ ಅವರ ಸಾಹಿತ್ಯವನ್ನು ಅವರ ವೈಯಕ್ತಿಕ ಬದುಕಿನೊಂದಿಗೆ ಅಧ್ಯಯನ ಮಾಡಬೇಕಾದ ಅಗತ್ಯಗಳು ಕಾವ್ಯದಲ್ಲಿ ಮಿಳಿತವಾಗಿವೆ. ಜೊತಗೆ ಬೇಂದ್ರೆ ಅವರ ಸಾಹಿತ್ಯ, ಬದುಕು ಬೇರೆ ಬೇರೆಯಾಗಿ ಕಾಣದೆ ಒಂದೇ ನೆಲೆಯಲ್ಲಿ ಹಾಸುಹೊಕ್ಕಾದ ಸಂವೇದನೆ ಎಂಬುದು ಕಾರಣವಿರಬಹುದು. ಆದರೆ ಜೀವನ ಚರಿತ್ರೆ ಎಂಬುದು ವರದಿಯೇ ಹೊರೆತು ಸಂಶೋಧನೆಯಲ್ಲ ಎಂಬ ಚಿಂತನೆಗಳಿಗೆ ಜಿ. ಕೃಷ್ಣಪ್ಪ ಅವರ ಸಂಶೋಧನಾ ಅಧ್ಯಯನ ಹೊಸ ಅರ್ಥ ನೀಡುತ್ತದೆ. ಬೇಂದ್ರೆ ಅವರ ಕಾವ್ಯವು ಧಾರವಾಡ ಪರಿಸರದೊಂದಿಗೆ ಗ್ರಾಮ್ಯ ಬದುಕಿನೊಂದಿಗೆ ಮಿಳಿತವಾಗಿರುವಂತಹದು. ತಾವು ಬದುಕಿನಲ್ಲಿ ಕಂಡ ಅನುಭವಗಳೇ ಕಾವ್ಯದ ವಸ್ತುಗಳಾಗಿವೆ ಎಂಬ ಸಾರಪೂರ್ಣ ವಿಚಾರಗಳನ್ನು ಗ್ರಹಿಸಬಹುದು. ಜಿ. ಕೃಷ್ಣಪ್ಪ ಅವರು ಇಂತಹ ಹಲವು ಪದಗಳನ್ನು ಸಂಶೋಧಿಸಿದ್ದಾರೆ ಮುಂದಿನ ಅಧ್ಯಾಯದಲ್ಲಿ ವಿಸ್ತಾರವಾಗಿ ಗಮನಿಸಬಹುದು.

ರುಕ್ಮಿಣಿ ಪರ್ವತಿ ಅವರು 'ಅಂಬಿಕಾತನಯದತ್ತರ ಭಾವಗೀತೆಗಳ'ಲ್ಲಿ ವಿಷಯ ವೈವಿಧ್ಯ ಮತ್ತು ವೈಶಿಷ್ಟ್ಯ ಎಂಬ ಅಧ್ಯಾಯದಲ್ಲಿ ಪ್ರೇಮ, ಪ್ರಕೃತಿ, ಸಮಾಜ ದರ್ಶನ, ನಾಡು, ಅನುಭಾವ ಎಂಬ ಈ ಐದು ಅಂಶಗಳು ಅಭಿವ್ಯಕ್ತಗೊಂಡಿರುವ ಕವಿತೆಗಳನ್ನು ಪರಿಚಯಿಸಿದ್ದಾರೆ. ಕವಿತೆಗಳ ರಚನೆಗೆ ಒಂದು ಕವಿಸಮಯವನ್ನು ಕವಿಯೊಳಗೆ ಗುರ್ತಿಸುವ ನಿಟ್ಟಿನಲ್ಲಿ ಆರಾಧನೆಯ ಗುಣದಲ್ಲಿ ಕಾವ್ಯದ ಸತ್ವಪೂರ್ಣ ಧ್ವನಿ ಸಹೃದಯರಿಗೆ ಪೂರ್ಣ ಅಧ್ಯಯನವಾಗಿ ಕಂಡು ಬರುವಲ್ಲಿ ಯಶಸ್ವಿಗೊಂಡಿಲ್ಲವೆನ್ನಬಹುದು. ರಂ.ಶ್ರೀ ಮುಗಳಿ ಅವರು ಈ ಸಂಶೋಧನಾ ಪ್ರಬಂಧವನ್ನು ಕುರಿತು 'ಇದರಲ್ಲಿ ಬೇಂದ್ರೆಯವರ ಕಾವ್ಯದ ಕ್ಲಿಷ್ಟತರ ಭಾಗಗಳ ವಿವರಣೆಯನ್ನಾಗಲೀ ಅರ್ಥವಲಯಗಳ ವಿಶದೀಕರಣವನ್ನಾಗಲಿ ಸಮಗ್ರ ರೀತಿಯ ವಿದಗ್ಧ ವಿಮರ್ಶೆಯನ್ನಾಗಲೀ ನಿರೀಕ್ಷಿಸ ಕೂಡದು' ಹಾಗೂ ಈ ಕೃತಿಯನ್ನು 'ಹೇರಳವಾದ ಉದಾಹರಣೆಗಳುಳ್ಳ ರಸಗ್ರಹಣಾತ್ಮಕ ವಿವೇಚನೆ' ಎಂದು ಗ್ರಹಿಸಿದ್ದಾರೆ. ಸಂಶೋಧನಾ ಮಾದರಿಯಲ್ಲಿ ಅಧ್ಯಯನದ ಮೊದಲ ಚಿಂತನೆಗಳಾದ ಕಾರಣ ಇಲ್ಲಿನ ವಿವೇಚನೆಗಳನ್ನು ಗಟ್ಟಿಯಾದ ನಿಲುವುಗಳೆಂಬಂತೆ ಗಮನಿಸಲು ಸಾಧ್ಯವಿಲ್ಲ.

'ಜೀವನ ದರ್ಶನ'ದಲ್ಲಿ ಪ್ರಮುಖ ಸಮಸ್ಯೆಗಳು

ಭೂಮಿ-ಕಾಲ-ಕಾಮ ಈ ಮೂರು ವಿಚಾರಗಳನ್ನು ಬೇಂದ್ರೆ ಅವರ ಕಾವ್ಯದಲ್ಲಿ ಜೀವನದರ್ಶನದ ಹಿನ್ನಲೆಯಲ್ಲಿ ಡಿ. ಆರ್. ನಾಗರಾಜ್ ಅವರು ಅಧ್ಯಯನ ನಡೆಸಿದ್ದಾರೆ. ಬೇಂದ್ರೆ ಅವರು ತಮ್ಮ ವೈಚಾರಿಕ ಅಂಶಗಳೊಂದಿಗೆ ಸಂಕೀರ್ಣ ಕವಿಯಾಗುವ ತುರ್ತಿನಲ್ಲಿ ಉನ್ನತ ಹಂತದ ಬೌದ್ಧಿಕ ಚಟುವಟಿಕೆಯಾಗಿ ಇವರ ಕಾವ್ಯವನ್ನು ಡಿ. ಆರ್. ನಾಗರಾಜ ಅವರು ಪ್ರವೇಶಿಸಿದ್ದಾರೆ. ವಸಾಹತುಶಾಹಿ ಚಿಂತನೆಗಳು ಇಪ್ಪತ್ತನೇ ಶತಮಾನದ ತುರ್ತು ಹಾಗೂ ಜವಾಬ್ದಾರಿಯುತ ಚಿಂತನೆಯಾಗಿ ಮೂಡಿಬಂದಿತು. ಬೌದ್ಧಿಕತೆ ಎಂಬುದು ಪಾಶ್ಚಾತ್ಯ ಚಿಂತನೆಯಾಗದೆ ಭಾರತೀಯ ತತ್ವಶಾಸ್ತ್ರ ಹಾಗೂ ಮೀಮಾಂಸೆಯ ಹೊಳಹು ಕೂಡ ಎಂಬುದು ಸ್ವತಂತ್ರ ಪೂರ್ವದ ಬರಹಗಾರರ ಅರಿವಾಗಿತ್ತು. ಬೇಂದ್ರೆ ಅವರು ಇದೇ ನಿಟ್ಟಿನಲ್ಲಿ ಪಾಶ್ಚಾತ್ಯ ಅರಿವಿನೊಂದಿಗೆ ಭಾರತೀಯ ಅನುಭಾವ ತಾತ್ವಿಕತೆಯನ್ನು ಕೇಂದ್ರೀಯ ನೆಲೆಯಲ್ಲಿ ಗ್ರಹಿಸಿದ್ದರು ಎಂಬುದು ಅವರ ಗದ್ಯ ಬರಹಗಳು, ಕಾವ್ಯ ಪ್ರತಿಮೆಗಳಿಂದ ಸುಲಭವಾಗಿ ಕಾಣುತ್ತದೆ.

ಅಖಂಡತೆಯ ಅಭಿವ್ಯಕ್ತಿಯಲ್ಲಿ ಕಾವ್ಯವಿಮರ್ಶೆಯನ್ನು ಪ್ರವೇಶಮಾಡುವ ನಾಗರಾಜ ಡಿ. ಆರ್. ಅವರು 'ಶಕ್ತಿಶಾರದೆಯ ಮೇಳ'ದಲ್ಲಿ ಆಧುನಿಕ ಕನ್ನಡ ಕಾವ್ಯಗಳನ್ನು ತನ್ನ ಜ್ಞಾನಶಿಸ್ತಿನ ನಿರ್ಮಾಣಕಲೆಯಲ್ಲಿ ಸಂಶೋಧನೆ ಮಾಡಿರುವುದನ್ನು ಗಮನಿಸಬಹುದು. ಇವರಿಗೆ 'ಲೋಕ ವಿಮರ್ಶೆಯ ಒಂದು ರೂಪವೇ ಕಾವ್ಯ ವಿಮರ್ಶೆ' ಇಲ್ಲಿ ವಸಾಹತುಶಾಹಿ ಆಕ್ರಮಣದ ನಂತರ ಭಾರತೀಯ ನೆಲೆಯಲ್ಲಿ ಅದರಲ್ಲೂ ಕನ್ನಡ ಸಾಹಿತ್ಯದಲ್ಲಿ ಉಂಟಾದ ಜ್ಞಾನಪಲ್ಲಟಗಳನ್ನು ಅವಲೋಕಿಸಿದ್ದಾರೆ. ಕಾವ್ಯ ಅದರ ಅಭಿವ್ಯಕ್ತಿಯ ರೇಖೆಯಂತೆ ಗ್ರಹಿಸಿದ್ದಾರೆ ಎನ್ನಬಹುದು.

> ಬಂಡವಾಳಶಾಹಿ ಮತ್ತು ಇತರ ಸಮಕಾಲೀನ ಜೀವನಕ್ರಮಗಳೂ ಸೇರಿದಂತೆ ಈ ಆಧುನಿಕ ನಾಗರೀಕತೆಯ ಪ್ರಧಾನ ಲಕ್ಷಣವೆಂದರೆ ಪ್ರಭುತ್ವಗಳು ಇಡೀ ಸಮಾಜವನ್ನು

> ಒಂದು ಪ್ರಯೋಗಶಾಲೆ ಎಂದು ಭಾವಿಸುವುದು. ಬಂಡವಾಳಶಾಹಿ ನಾಗರೀಕತೆಯ ಆರ್ಥಿಕತೆಯನ್ನು ವಿವರಿಸಲು ವೆಬರ್ 'ರ್‍ಯಾಶನಾಲಿಟಿ'(ವೈಚಾರಿಕತೆ) ಎಂಬ ಪರಿಕಲ್ಪನೆಯನ್ನು ಬೆಳಸಿದ. ಇದರರ್ಥ 'ವೈಚಾರಿಕ' ನಿರ್ಣಯದ ಮಾನದಂಡ, ಸಾಧನವಾದೀ ಕ್ರಿಯೆಯ ಮಾನದಂಡ ಸಮಾಜದ ಸಮಸ್ತ ಕ್ಷೇತ್ರಗಳಿಗೂ ಹಬ್ಬುವುದು. ಸಮಾಜದ ಈ ರೀತಿಯ ವೈಚಾರಿಕೀಕರಣ' ವಿಜ್ಞಾನ ಮತ್ತು ತಂತ್ರಜ್ಞಾನಗಳ ಸಂಸ್ಥೀಕರಣದ ಜತೆಜತೆಗೇ ನಡೆಯುತ್ತಾ ಹೋಗುತ್ತದೆ. ಈ ಪ್ರಕ್ರಿಯೆಯೆ ಅಪಾರ ಅಸಹನೆ ಮತ್ತು ಕ್ರೌರ್ಯದಿಂದ ತುಂಬಿರುತ್ತದೆ. ಹಳೆಯ ಜ್ಞಾನವ್ಯವಸ್ಥೆಗಳು, ಭಾವನಾಲಯಗಳು ತೀವ್ರ ರೀತಿಯ ಹಿಂಸೆ ಅನುಭವಿಸಿ ಕಣ್ಮರೆಯಾಗುತ್ತವೆ. ಆದ್ದರಿಂದಲೇ ಆಧುನಿಕ ನಾಗರೀಕತೆಯ ತರ್ಕ ಒಂದು ಏಕರೂಪೀ ಜೀವನಕ್ರಮಗಳನ್ನು ಸೃಷ್ಟಿಸುವುದು. ವಸಾಹತುಗಳಲ್ಲಂತೂ ಈ ಪ್ರಕ್ರಿಯೆ ಭೀಕರ ರೂಪಗಳನ್ನು ಪಡೆಯುತ್ತದೆ. ಪ್ರಸ್ತುತ ಬಂಡವಾಳಶಾಹಿ ಬೆಳವಣಿಗೆಯ ತರ್ಕವೆಂದರೆ ನಮ್ಮ ವಿಶಿಷ್ಟತೆಯನ್ನು ಸಂಪೂರ್ಣವಾಗಿ ತೊಡೆದು ಹಾಕುವುದು.೫೨

ಜಗತ್ತಿನ ದ್ವಂದ್ವಗಳಿಗೆ, ಭಾರತೀಯ ಸಂಕಟಗಳಿಗೆ ಕೆಲವು ಚರ್ಚೆಗಳು ಬೌದ್ಧಿಕವಾಗಿ ಎಚ್ಚರಗೊಳಿಸುವ ಕಾರ್ಯ ಮಾಡುತ್ತವೆ. ಇದನ್ನು 'ವೈಚಾರಿಕತೆ' ಎಂಬುದಾಗಿ ಸೂಚಿಸುತ್ತಾರೆ.

ಡಿ. ಆರ್. ನಾಗರಾಜ ಅವರು ಬೇಂದ್ರೆ ಅವರನ್ನು ಗ್ರಹಿಸುತ್ತಾ 'ಯಾವುದೇ ಸೃಷ್ಟಿಯಲ್ಲಿ ಅಡಕವಾಗಿರುವ ದ್ವಂದ್ವ ವಿರೋಧಗಳ ಅರಿವು' ಮಹತ್ವದ ಕವಿಯಾಗಿ ಕಾಣಲು ಸಹಕರಿಸಿದೆ ಎಂದಿದ್ದಾರೆ. ಬೇಂದ್ರೆ ಅವರಿಗೆ ನಿತ್ಯ ನಿರಂತರ ಸಂಘರ್ಷದ ಅಭಿವ್ಯಕ್ತಿಗಳು ಎಂಬ ವೈಚಾರಿಕ ಹಿನ್ನಲೆಯ ಪ್ರಭಾವ ಹೆಚ್ಚು ಕೆಲಸಮಾಡಿದೆ ಎನ್ನುವಾಗ ಅದು ಕೇವಲ ವೈಯಕ್ತಿಕವಾದ ಅಂಶಗಳು ಎಂಬ ವಿಮರ್ಶೆಗಳೇ ಹಲವು. ನಾಗರಾಜ ಅವರ ಸಂಶೋಧನಾ ಪ್ರಬಂಧ ಇವೆಲ್ಲವುಗಳ ಆಚೆ ನಿಂತು ಡೈಲೆಕ್ಟಿಕಲ್ ಥಿಯರಿಯ ಮೇಲೆ ಅತ್ಯಂತ ಸರಳವಾಗಿ ಬೇಂದ್ರೆ ಅವರ ಕಾವ್ಯ ತತ್ತ್ವವನ್ನು ಗ್ರಹಿಸಿದ್ದಾರೆ. ಅದು ಸಮಾಜದ ಮೇಲೆ ಜಗತ್ತು ಪ್ರಭಾವಿಸಿದ ರೀತಿಯಲ್ಲಿ ಬೇಂದ್ರೆ ಅವರ ಈ ವೈಚಾರಿಕ ಹಾದಿಗೆ ಹತ್ತಿರವಾಗುತ್ತಾರೆ. ಅನಿವಾರ್ಯತೆಯೂ ಕೂಡ ಅತ್ಯಂತ ಉತ್ಕಟವಾಗುತ್ತದೆ ಎಂಬ ಗ್ರಹಿಕೆ ಇವರದು. ಬೇಂದ್ರೆ ಅವರ ಪ್ರಭಾವಿತ ಜ್ಞಾನವಲಯದ ಮೇಲೂ ಇಂತಹ ಭೌತವಾದದ ತಾತ್ವಿಕತೆಯ ನೆರಳಿನ ಛಾಯೆ ಪೂರ್ಣವಾಗಿ ವ್ಯಾಪಿಸಿದೆ. ಅದನ್ನು ಕನ್ನಡದಲ್ಲಿ ಒಂದು ಜೀವನ ಘರ್ಷಣೆಯ ಆಕೃತಿಗಳ ರೂಪವಾಗಿ ಬೇಂದ್ರೆ ಅವರು ಗ್ರಹಿಸಿದ್ದಾರೆ ಎನ್ನಲಾಗಿದೆ.

'ಭಾವಗೀತ', 'ನಾದಲೀಲೆ' ಈ ಕವಿತೆಗಳು ತೆರೆದುಕೊಳ್ಳುವ ರೀತಿಯಲ್ಲಿ ಒಂದು ಕಲಾತ್ಮಕ ಜಗತ್ತಿನ ಗ್ರಹಿಕೆ ಇದೆ. ಅದು ಪ್ರತಿಮೆಗಳ ಸ್ವರೂಪದಿಂದ ನಿರ್ಮಿತವಾದುದು. ಇಂತಹ ಸೂಕ್ಷ್ಮತೆಯನ್ನು 'ನೃತ್ಯಯಜ್ಞ'ದಂತಹ ಕವಿತೆಯ ಮೂಲಕ ಅಧ್ಯಯನ ನಡೆಸಿದ್ದಾರೆ. ನವಿಲಿನ ಪ್ರತಿಮೆಯು ಭಾರತೀಯ ಕಲೆಯನ್ನು ಪ್ರತಿನಿಧಿಸುವ ಒಂದು ಕಾವ್ಯಾತ್ಮಕ ಜಗತ್ತು. ಅದು ಇಲ್ಲಿನ ವಾಸ್ತವಗಳ ಕನ್ನಡಿಯಾಗಿ ಪ್ರಮುಖ ಸಂಘರ್ಷಗಳನ್ನು ಪ್ರತಿನಿಧಿಸುತ್ತದೆ. ಎಂಬ ಚಿಂತನೆಯನ್ನು ಬೇಂದ್ರೆ ಅವರ ಒಟ್ಟು ಕಾವ್ಯದ ಹಿನ್ನಲೆಯಲ್ಲಿ ಚರ್ಚಿಸಿದ್ದಾರೆ. 'ಮೊದಲಗಿತ್ತಿ'ಯಂತಹ

ಕವಿತೆ ನಿರ್ಮಿಸುವ ಮಾನವ ಚರಿತ್ರೆಯನ್ನು ಇಲ್ಲಿ ವ್ಯಾಖ್ಯಾನಿಸಿದ್ದಾರೆ. ಪಿತೃಪ್ರಧಾನ ಸಮಾಜದ ವಿರೋಧ, ಮಾತೃಪ್ರಧಾನ ಸಮಾಜದ ಮೌಲ್ಯಗಳು ಇಂತಹ ಸಮಾಜವ ವ್ಯವಸ್ಥೆಯ ಬಿಂಬ ಪ್ರತಿಬಿಂಬಗಳನ್ನು ಯೂರೋಪಿನ ಬರಹಗಾರರ ಚಿಂತನೆಗಳೊಂದಿಗೆ ಚರ್ಚಿಸಿದ್ದಾರೆ.

ಬೇಂದ್ರೆ ಅವರ ಶ್ರಾವಣ ಚಿಂತನೆಯು ಭೂಮಿ ಮತ್ತು ಶ್ರಾವಣವೆಂಬ ತಾಯಿ–ಮಕ್ಕಳ ಆತ್ಮೀಯ ಸಂಬಂಧವಾಗಿ ಕಾಣುತ್ತಿದ್ದಾರೆ. ಬೇಂದ್ರೆಯವರ ಹಲವು ಕವಿತೆಗಳು ಶ್ರಾವಣ ಕುರಿತಾದ ವೈಭವಗಳೇ ಆಗಿವೆ. ಕೀರ್ತಿನಾಥ ಕುರ್ತಕೋಟಿ ಅವರು ಶ್ರಾವಣ ಪ್ರತಿಭೆಯಾಗಿ ಬೇಂದ್ರೆ ಅವರ ಕಾವ್ಯವನ್ನು ವಿಮರ್ಶಿಸಿದ್ದಾರೆ. 'ಮೊದಲಗಿತ್ತಿ', 'ಶ್ರಾವಣ', 'ಶ್ರಾವಣ ಪ್ರತಿಭೆ', 'ಬಂದಿಕಾರಾ ಶ್ರಾವಣಾ', 'ಮತ್ತೆ ಶ್ರಾವಣ' ಮೊದಲಾದ ಕವಿತೆಗಳು ಸಮಾಜಕ್ಕೆ ಒಂದು ಹೊಸ ಆಶಯವನ್ನು ನೀಡಿರುವ ಪ್ರತಿಮಾತ್ಮಕ ಜೀವಂತಿಕೆಗಳಾಗಿ ನಾಗರಾಜ ಅವರು ಅಧ್ಯಯನ ನಡೆಸಿದ್ದಾರೆ. 'ಬರಲಿರುವ ಹೊಸ ಬದುಕಿನ ಸಾಂಕೇತಿಕ ಪ್ರಣಾಳಿಕೆ ಈ ಶ್ರಾವಣದ ಆರಾಧನೆ' ಎಂದು ಕವಿಯ ಸಮಷ್ಟಿ ಪ್ರಜ್ಞೆಯನ್ನು ಇಲ್ಲಿ ಪರಿಚಯಿಸುತ್ತಾರೆ.

'ಬೇಂದ್ರೆಯವರ ಕಾವ್ಯದಲ್ಲಿ ಕಾಲ : ಸೃಷ್ಟಿಶೀಲತೆಯ ಸಂದೇಶ' ನಾಗರಾಜ್ ಡಿ.ಆರ್ ಅವರ ಈ ಅಧ್ಯಾಯದಲ್ಲಿ ಬೇಂದ್ರೆ ಅವರ ಚಿಂತನಾ ವ್ಯವಸ್ಥೆಯಲ್ಲಿ ಕಾಲದ ಸಮಸ್ಯೆಗಳನ್ನು ಕುರಿತು ಚರ್ಚಿಸಿದ್ದಾರೆ. ಕನ್ನಡ ವಿಮರ್ಶೆಯಲ್ಲಿ ಕಾಲದ ಸಮಸ್ಯೆಯನ್ನು ಇದುವರೆಗೂ ಚರ್ಚಿಸಿಲ್ಲವೆಂಬ ಸಂಶೋಧನೆಯೊಂದಿಗೆ ಕಾಲದ ಸಮಸ್ಯೆಯನ್ನು ಸೂಚಿಸುವ ಆಶಯಗಳಾದ ಚರಿತ್ರೆ, ಭೂಮಿ, ಮನುಷ್ಯ ಮೊದಲಾದ ವಿಷಯಗಳೊಂದಿಗೆ ಚರ್ಚಿಸಿದ್ದಾರೆ.

> ಬೇಂದ್ರೆಯವರು ಕಾಲದ ವಸ್ತುವಿನ ಬಗ್ಗೆ ಹೆಚ್ಚು ಕವನಗಳನ್ನು ರಚಿಸಿಲ್ಲ. ಹೀಗಾಗಿ ಬೇಂದ್ರೆಯವರ ಕಾವ್ಯದಲ್ಲಿ ಕಾಲದ ವಸ್ತು ಮತ್ತು ಪರಿಕಲ್ಪನೆಗಳನ್ನು ಪರೀಕ್ಷಿಸುವ ವಿಮರ್ಶಕ ಎಂಪರಿಕಲ್ ವಿಧಾನಗಳಿಗೆ ಶರಣು ಹೋಗಬೇಕಾಗುತ್ತದೆ. ನೇರವಾಗಿ ಲಭ್ಯವಿರುವ ಸಾಮಾಗ್ರಿಗಳ ವಿಶ್ಲೇಷಣೆಯನ್ನು ಮಾಡಿ, ಅದರಿಂದ ಹೊರಡುವ ನಿಲುವುಗಳನ್ನು ಕವಿಯ ಒಟ್ಟಾರೆ ಚಿಂತನಾ ವ್ಯವಸ್ಥೆಯ ಜೊತೆಗೆ ಹೊಂದಿಸುವುದರಲ್ಲಿಯೇ ಸಮಾಧಾನ ಹೊಂದಬೇಕಾಗುತ್ತದೆ. ಬೇಂದ್ರೆಯವರಂಥ ಕವಿಗಳ ಕೃತಿಯ ಅಧ್ಯಯನಕ್ಕೆ ಎಂಪರಿಕಲ್ ವಿಧಾನಗಳು ಸಾಕಷ್ಟು ಅಪೂರ್ಣ ಎಂಬ ಸಂಗತಿ ಗೊತ್ತಿದ್ದೂ ಈ ಮಾತು ಹೇಳಬೇಕಾಗಿದೆ. (ನಾಗರಾಜ್ ಡಿ. ಆರ್., ೧೯೮೭, ೨೦೦೮., ಶಕ್ತಿ ಶಾರದೆಯ ಮೇಳ., ಅಕ್ಷರ ಪ್ರಕಾಶನ, ಹೆಗ್ಗೋಡು.)

ಋತುಗಾನ ಕವಿತೆಯಲ್ಲಿ 'ಪ್ರಗತಿ', 'ಋತು' ಇಂತಹ ಶಬ್ದಗಳಲ್ಲಿ ಕಾಲದ ವೈಚಾರಿಕತೆಯನ್ನು ಸ್ಪಷ್ಟಗೊಳಿಸುತ್ತಾ ಅಧ್ಯಯನ ನಡೆಸಿದ್ದಾರೆ. ಕಾಲದರ್ಶನದ ಸೂಕ್ಷ್ಮತೆಗಳಲ್ಲಿ 'ಅನಂತ ಪ್ರಣಯ', 'ಹಾ ಸರೂ' ಇಂತಹ ಕವಿತೆಗಳಲ್ಲಿ 'ಸಂಕೀರ್ಣ ಪ್ರತಿಮಾ ಸೃಷ್ಟಿ'ಯನ್ನು ಕಾಲದ ವಿಚಾರವನ್ನು ಚರ್ಚಿಸಿದ್ದಾರೆ.

'ಹಕ್ಕಿ ಹಾರುತಿದೆ ನೋಡಿದಿರಾ' ಈ ಕವಿತೆಯು ಕನ್ನಡ ಸಹೃದಯ ಲೋಕದಲ್ಲಿ ವಿಭಿನ್ನವಾಗಿ ಅರ್ಥೈಸುವಿಕೆಗೆ ದಕ್ಕಿದೆ. 'ಹಕ್ಕಿ' ಎಂಬುದು ಕಾಲದ ಸಂಕೇತವಾಗಿ ಬೇಂದ್ರೆ ಅವರು ಕಾವ್ಯ

ಪ್ರವೇಶ ಮಾಡಿರುವುದು ಕನ್ನಡ ಸಾಹಿತ್ಯದಲ್ಲಿಯೇ ಇತಿಹಾಸ. ವೈಜ್ಞಾನಿಕ ವಿಚಾರಗಳನ್ನು ಕಾಲದ ತೀರ್ಮಾನದೊಂದಿಗೆ ಕವಿ ಅಮೂರ್ತ ಅನುಭವವನ್ನು ಸಂಕೇತಿಸಿದ್ದಾರೆ. ಇಲ್ಲಿ ಐನ್‌ಸ್ಟೈನ್‌ನ ಆಕಾಶದೊಂದಿಕೆ ಕಾಲದ ಮಿಳಿತವು ಬೇಂದ್ರೆ ಅವರ 'ಹಕ್ಕಿ' ಕಾಲ ಚಿಂತನೆಗೆ ಹೋಲಿಕೆ ನೀಡಲಾಗಿದೆ. ಕಾಲದ ಸೃಷ್ಟಿಶೀಲ ಶಕ್ತಿ ಮನುಷ್ಯನ ಮೇಲೆ ಬೀರುವ ನೇತ್ಯಾತ್ಮಕ ಪ್ರಭಾವಗಳನ್ನು ಅಧ್ಯಯನ ನಡೆಸಿದ್ದಾರೆ. ಆದರೆ ಈ ಶತಮಾನದ ಚಿಂತನೆಯನ್ನು ಹಿಂದೆ ತಳ್ಳಿ ಕಾಲಧರ್ಮವನ್ನೂ ಮೀರಿದ ಸೃಷ್ಟಕ್ರಿಯೆ ಈ ಕವಿತೆಯಲ್ಲಿ ಅಡಗಿದೆ ಎಂಬ ವಿಮರ್ಶೆಗಳನ್ನು ಇಂದು ಅಧ್ಯಯನ ಮಾಡಬೇಕಾಗಿದೆ. ಈ ಕವಿತೆ ಕುರಿತು ಇದುವರೆಗೂ ನಡೆದಿರುವ ಚರ್ಚೆಗಳನ್ನು ಅವುಗಳ ತಾತ್ವಿಕ ಸ್ವರೂಪವನ್ನು ಈ ರೀತಿ ಗಮನಿಸಬಹುದು.

ಸುಮತೀಂದ್ರ ನಾಡಿಗರು ೧೯೮೯ರಲ್ಲಿ ಮಂಡಿಸಿದ 'ಬೇಂದ್ರೆಯವರ ಕಾವ್ಯದ ವಿಭಿನ್ನ ನೆಲೆಗಳು' ಎಂಬ ಸಂಶೋಧನಾ ಪ್ರಬಂಧವು ಭಾಷಿಕ ನೆಲೆ, ಪ್ರಾಯೋಗಿಕ ನೆಲೆ, ಪ್ರಸಿದ್ಧಿ ನೆಲೆ, ಸಿದ್ಧಿಯ ನೆಲೆ ಈ ನಾಲ್ಕು ಆಲೋಚನಾ ಕ್ರಮದಲ್ಲಿ ಗ್ರಹಿಸಲಾಗಿದೆ. ಬೇಂದ್ರೆ ಅವರ ಕಾವ್ಯವನ್ನು ಇಡಿಯಾಗಿ ಗ್ರಹಿಸುವ ಉದ್ದೇಶದಿಂದ ಪ್ರಾರಂಭವಾಗುವ ನಾಡಿಗರ ಸಂಶೋಧನೆ ಬೇಂದ್ರೆ ಅವರ ಕಾವ್ಯವನ್ನು ಕೃತಿನಿಷ್ಠ ವಿಮರ್ಶೆಯಿಂದ ಅಧ್ಯಯನ ನಡೆಸಿದ್ದಾರೆ. ಕೆಲವು ಕವಿತೆಗಳನ್ನು ಸೂಕ್ತ ವಿಶ್ಲೇಷಣೆಗಾಗಿ ಬಳಸಿರುವುದು ವಿಶೇಷವಾದರೂ ಕೆಲವು ಸೂಕ್ತ ಗ್ರಹಿಕೆಯಿಲ್ಲದ ಚಿಂತನೆಯಾಗಿಯೂ ಕಂಡು ಬಂದಿವೆ. ಬೇಂದ್ರೆ ಅವರ ಕಾವ್ಯಸಿದ್ಧಿಯನ್ನು ಗ್ರಹಿಸುವ ಉದ್ದೇಶಿತ ವಿಶ್ಲೇಷಣೆಯನ್ನು ಗಮನಿಸಬಹುದು. ಈ ಕೃತಿಯ ಪ್ರಕಟದಲ್ಲಿ ಚೆನ್ನವೀರ ಕಣವಿ ಅವರ ಅಧ್ಯಯನ ಸ್ವರೂಪದ ವಿಶ್ಲೇಷಣೆಯು ಒಂದು ವಿಮರ್ಶಾತ್ಮಕ ಒಳನೋಟಗಳನ್ನು ಒದಗಿಸುತ್ತದೆ.

> ಬೇಂದ್ರೆಯವರನ್ನು ಪ್ರಸಿದ್ಧಿಯ ನೆಲೆಗೇರಿಸಿದ ನಿಲುವು ಕೆಲವು ಸುಪ್ರಸಿದ್ಧ ಕವಿತೆಗಳ ವಿಶ್ಲೇಷಣೆ ಮುಂದಿನ ಅಧ್ಯಾಯದಲ್ಲಿದೆ. 'ಹಕ್ಕಿಹಾರುತಿದೆ ನೋಡಿದಿರಾ?' ಕವಿತೆಯ ಯಾಂತ್ರಿಕ ಲಯಗಳ ಮಾಂತ್ರಿಕತೆಯಿಂದ ಕವಿ ಗಾರುಡಿಗನಾಗಿ ಕಂಡರೂ ನಾದದ ಒಂದು ಕ್ರಮಕ್ಕೆ ಕಟ್ಟು ಬಿದ್ದು, ಅರ್ಥಪೂರ್ಣತೆಯನ್ನು ಸಾಧಿಸುವ ಸ್ವಾತಂತ್ರ್ಯವನ್ನು ಕವಿ ಇಲ್ಲಿ ಕಳೆದುಕೊಂಡಿದ್ದಾನೆಂಬ ಲೇಖಕನ ಅಭಿಪ್ರಾಯ ಒಪ್ಪುವಂತಿದ್ದರೂ ಈ ಕವಿತೆಯ ವಿಶ್ಲೇಷಣೆ ಕೂದಲು ಸೀಳುವಿಕೆಯ ಜಾಣ್ಮೆಯನ್ನು ಪ್ರದರ್ಶಿಸುತ್ತದೆ ಎನಿಸುತ್ತದೆ. ಹಾಗಿದ್ದೂ ವಿಮರ್ಶೆ ಬೇಂದ್ರೆಯವರ ಕಾವ್ಯಸೃಷ್ಟಿಯ ಒಂದಂಶವಾಗಿ ಕೆಲಸ ಮಾಡಲೇ ಇಲ್ಲ ಎಂಬ ಅವರ ಮಾತು ಪರಿಶೀಲನೆಗೆ ಅರ್ಹವಾಗಿದೆ. 'ಬೇಂದ್ರೆತನ' ಎದ್ದು ಕಾಣುವ 'ಕುಣಿಯೋಣು ಬಾರಾ' ಕವಿತೆಯ ವಿಶ್ಲೇಷಣೆ ಗಮನಾರ್ಹವಾಗಿದೆ. ಇಲ್ಲಿ ವಾಗರ್ಥಪ್ರತಿಪತ್ತಿಗಿಂತ ಲಯಾನ್ವಿತ ಶಬ್ದಗಳಲ್ಲಿ ತನ್ಮಯವಾಗುವ ಮತ್ತು ತನ್ಮಯಗೊಳಿಸುವ ಗುಣವನ್ನು ಕಂಡುಕೊಳ್ಳಲಾಗಿದೆ. ಆದರೆ 'ಹೀಗೆ ಅರ್ಥ ಅಪಾರ್ಥ, ಅರ್ಥಹೀನತೆ, ಅನರ್ಥಗಳನ್ನು ಸೇರಿಸಿಕೊಂಡ ಬೇಂದ್ರೆ ಅವರ ಜಾದೂಗಾರಿಕೆಗೆ 'ಕುಣಿಯೋಣು ಬಾರಾ' ಉದಾಹರಣೆಯಾಗಿದೆ. ಎಂಬ ಲೇಖಕರ ಮಾತು ಸ್ವಲ್ಪ ದುಡಕಿನದಾಗಿದೆ ಎನಿಸುತ್ತದೆ. ಯಾಕೆಂದರೆ ಸ್ವತಃ ಲೇಖಕರೇ ಈ ಕವಿತೆಯ ಕೆಲ ಸಾಲುಗಳನ್ನು ಅರ್ಥಮಾಡಿಕೊಂಡಿಲ್ಲದಿರುವುದು ಕಂಡುಬರುತ್ತದೆ.[೫೩]

ಈ ರೀತಿಯಲ್ಲಿ ವಿಶ್ಲೇಷಣೆಗೆ ಒಳಪಡಿಸುತ್ತಾ ನಾಡಿಗರ ಕೆಲವು ಅರ್ಥಗ್ರಹಿಕೆಗಳನ್ನು ಸ್ಪಷ್ಟವಾಗಿ ಸೂಚಿಸಿ ಸರಿಪಡಿಸುವ ತಮ್ಮ ಅಧ್ಯಯನವನ್ನು ತಿಳಿಸಿದ್ದಾರೆ. ಹೀಗೆ ಈ ಕೃತಿ ಹಲವಾರು ಕಾಣಗಳಿಂದ ಅಧ್ಯಯನಕ್ಕೆ ಒಳಪಡಿಸುತ್ತಿದ್ದೇನೆ. 'ಹಕ್ಕಿ ಹಾರುತಿದೆ ನೋಡಿದಿರಾ?', 'ಗಂಗಾವತರಣ', 'ಜೋಗಿ' ಮೊದಲಾದ ಕವಿತೆಗಳ ಕುರಿತ ಸುಮತೀಂದ್ರ ನಾಡಿಗರ ಈ ಅಧ್ಯಯನವನ್ನು ಇಲ್ಲಿ ಬೇರೆ ಬೇರೆ ಅಧ್ಯಯನಗಳೊಂದಿಗೆ ವಿವರಿಸಬಹುದಾಗಿದೆ.

'ಹಕ್ಕಿ ಹಾರುತಿದೆ ನೋಡಿದಿರಾ?' ಈ ಕವಿತೆಯು ಕನ್ನಡ ಸಾಹಿತ್ಯದ ನವೋದಯ ಸೃಷ್ಟಿ ಚಿಂತನೆಯನ್ನು ಪ್ರತಿನಿಧಿಸುತ್ತಾ ಬಂದಿರುವ ಕವಿತೆಯಾಗಿದೆ. ಸುಮಾರು ಐವತ್ತು ವರ್ಷಗಳ ಕಾಲ ಅತ್ಯುತ್ತಮ ಕವಿತೆ ಎನಿಸಿಕೊಂಡು ಬಂದ ಈ ಕವಿತೆಯನ್ನು 'ಬೇಂದ್ರೆತನ'ವನ್ನು ರೂಪಿಸಿಕೊಂಡ ಕವಿತೆ ಎಂದು ಸುಮತೀಂದ್ರ ನಾಡಿಗರು ಕರೆದಿದ್ದಾರೆ. ಈ ಕವಿತೆಯನ್ನು ವಿಶ್ಲೇಷಣೆಗೆ ಒಳಪಡಿಸಿ ಇದೊಂದು ಉತ್ತಮ ಕವಿತೆಯಲ್ಲ ಎಂದು ಸಂಶೋಧಿಸಿದ್ದಾರೆ.

> ರಾತ್ರಿಯಾದ ಮೇಲೆ ಹಗಲೆನ್ನುವ ಬದಲು ರಾತ್ರಿಯಾದ ಮೇಲೆ ರಾತ್ರಿ ಎನ್ನುವುದಕ್ಕೆ ವಿಶೇಷ ಅರ್ಥವೇನಾದರೂ ಇದೆಯೇ?
>
> ಒಂದು ಹಕ್ಕಿ ನಮ್ಮ ಸುತ್ತಮುತ್ತಲೂ ಸುತ್ತುವಾಗ ವರ್ತುಲಾಕಾರದಲ್ಲಿ ತಿರುಗಬಹುದೇ ಹೊರೆತು, ಮುಂದೆ ಮುಂದೆ ಹೋಗುವುದು ಹೇಗೆ? ಸುತ್ತ ಮುತ್ತಲೂ ಹೋಗುತ್ತಿರುವಾಗ ನಮ್ಮ ಮೇಲೆ ಮತ್ತು ಕೆಳಗೆ ಹಾರುವುದು ಹೇಗೆ?
>
> ಇರುಳು, ಹಗಲು, ಎವೆತೆರೆದಿಕ್ಕುವುದು ಕಾಲದ ಅಂಶಗಳಾಗಿರುವಾಗ, ಈ ಕಾಲ ಪಕ್ಷಿ 'ಸುತ್ತಮುತ್ತಲೂ ಮೇಲಕೆ ಕೆಳಗೆ ಗಾವುದ ಗಾವುದ ಗಾವುದ ಮುಂದೆ' ಎನ್ನುವ ದೇಶದ ಪರಿಮಿತಿಯಲ್ಲಿ ಕಾಲದ ಅಂಶದಲ್ಲೇ ಎವೆತೆರೆದಿಕ್ಕುವ ಹೊತ್ತಿನ ಒಳಗೆ ಹಾರುವುದು ಎಂದರೇನು?
>
> ಪುಚ್ಚ ಎಂದರೆ ಬಾಲ ಅಥವ ಹಿಂಬದಿ, ಈ ಹಕ್ಕಿಗೆ ಎಷ್ಟು ಪುಚ್ಚಗಳಿವೆ ಅಥವಾ ಹಿಂಬದಿಗಳಿವೆ?
>
> ಇದರ ಗರಿಗಳ ಬಣ್ಣ ಬಿಳಿ–ಹೊಳೆ ಅಂದರೆ, ಹೊಳೆಯುವ ಬಿಳಿ ಬಣ್ಣವಾದರೆ, ಇದರ ರೆಕ್ಕೆಗಳು ಕೆಂಪು ಮತ್ತು ಬಂಗಾರದ ಬಣ್ಣದಿಂದಿರುವುದು ಹೇಗೆ ಸಾಧ್ಯ?
>
> ಹಕ್ಕಿಯ ಮೈಬಣ್ಣ ನೀಲಮೇಘಗಳ ಬಣ್ಣ ಎಂದು ಒಪ್ಪಿಕೊಳ್ಳೋಣ. ಈ ಹಕ್ಕಿ ಎಷ್ಟು ದೊಡ್ಡದೆಂದರೆ ಇದರ ದೇಹ ಆಕಾಶದಷ್ಟು ದೊಡ್ಡದು ಎಂದು ಇಟ್ಟುಕೊಳ್ಳೋಣ. ಇದು ನಕ್ಷತ್ರಗಳ ಮಾಲೆಯನ್ನು ಹಾಕಿಕೊಂಡಿದೆ ಎಂದೂ ಊಹಿಸಿಕೊಳ್ಳೋಣ. ಆದರೆ ಇದು ಸೂರ್ಯ ಚಂದ್ರರನ್ನು ಇದರ ಕಣ್ಣುಗಳು ಎಂದಿಟ್ಟುಕೊಂಡರೂ ಇದರ ಒಂದುಕಣ್ಣು ಪ್ರಕಾಶಮಾನವಾಗಿದೆ. ಇನ್ನೊಂದು ಕಣ್ಣು ಕುರುಡು ಎಂದು ಚಿತ್ರಿಸಿಕೊಳ್ಳಬೇಕೆ? ಇದು ಆಕಾಶದಷ್ಟು ದೊಡ್ಡ ಹಕ್ಕಿಯಾದದ್ದೆ. ಆದರೆ ಇದು ಗಾವುದ ಮುಂದೆ ಹಾರಿದ್ದನ್ನು ನೋಡುವುದು ಹೇಗೆ? ಅದು ನಿಜವಾಗಿಯೂ ಗಾವುದ ಹಾರುತ್ತಿದೆಯೇ? ಇದರ ಹಿಂದಿನ ಪದ್ಯದಲ್ಲಿ ಈ ಹಕ್ಕಿಯ ಗರಿಗಳ ಬಣ್ಣ ಬಿಳಿ ಎಂದು ಹೇಳಿ, ರೆಕ್ಕೆಗಳ ಬಣ್ಣ ಕೆಂಪನೆಯ

ಬಂಗಾರದ ಬಣ್ಣ ಎಂದು ಹೇಳಿ, ಈಗ ಈ ಹಕ್ಕಿಯ ಬಣ್ಣ ನೀಲಿ ಎಂದು ಹೇಳಿದೆ. ಹಾಗಾದರೆ ಈ ಹಕ್ಕಿಯ ಬಣ್ಣ ಯಾವುದು?

ಈ ಹಕ್ಕಿ ತೆನೆಗಳನ್ನು ತಾನೇ ತುಳಿಯುತ್ತದೆಯೇ? ಯಾವಾಗಲೂ ಹಾರುತ್ತಿರುವ ಈ ಹಕ್ಕಿ ಅದನ್ನು ಹೇಗೆ ಬೆಳೆಯಿತು? ಕೊನೆಯ ಚರಣದಲ್ಲಿ ಇದು ದಿಙ್ಮಂಡಲಗಳಿಗಿಂತ ದೊಡ್ಡದಾದ ಹಕ್ಕಿ ಎಂಬ ವರ್ಣನೆ ಇದೆ. ಇದು ಆಕಾಶಕ್ಕಿಂತ ದೊಡ್ಡದಾಗಿದೆ. ಅನ್ನುವ ಮಾತು ಮುಂಚೆಯೇ ಬಂದಿದೆ. ಇಂಥ ಹಕ್ಕಿ ಒಕ್ಕಲು ಮಾಡುವ ಚಿತ್ರವನ್ನು ಕಲ್ಪಿಸಿಕೊಳ್ಳುವುದು ಹೇಗೆ? ...ಇಷ್ಟೆಲ್ಲ ಅಸಾಧ್ಯಗಳಿರುವುದರಿಂದಲೇ ಕವಿಗಳು 'ಹಕ್ಕಿ ಹಾರುತಿದೆ ನೋಡಿದಿರಾ?' ಎಂದು ಪ್ರಶ್ನಿಸುತ್ತಾರೆ. ಕಾವ್ಯದಲ್ಲಿ ಪದಗಳನ್ನು ಮೀರಿಹೋಗುವ ಅರ್ಥಗಳಿರುತ್ತವೆ; ಆದರೆ ಕಾವ್ಯವಲ್ಲದ್ದರಲ್ಲಿ ಅರ್ಥಗಳನ್ನು ಮೀರಿ ಹೋಗುವ ಪದಗಳಿರುತ್ತವೆ. ಈ ಕಾಲಪಕ್ಷಿ ಅರ್ಥಗಳನ್ನು ಮೀರಿ ಹೋಗುವ ಪದಗಳಲ್ಲಿದೆ. ಇದನ್ನು ಒಂದೇ ಬಾರಿಗೆ ಓದಿದಾಗ ಅಸ್ಪಷ್ಟ ಸೂಚನೆಯೊಂದರ ಜೊತೆಗೆ ಅಸ್ಪಷ್ಟ ಸೂಚನೆಯೊಂದು, ಅದಾದ ಮೇಲೆ ಇನ್ನೊಂದು ಮತ್ತೊಂದು ಹೀಗೆ ಸರಮಾಲೆಯಾಗುತ್ತ, ಬುಡಬುಡಿಕೆಯವನ ಮಾತಿನ, ಯಾಂತ್ರಿಕ–ಮಾಂತ್ರಿಕ ಲಯವನ್ನು ಮುಗ್ಧರಾಗಿ ಕೇಳುತ್ತ ನಿಂತ ಹಾಗೆ ನಾವು ನಿಂತುಬಿಡುತ್ತೇವೆ. ಬೀದಿಯಲ್ಲಿ ಕಣ್ಕಟ್ಟು ಮಾಡುವವರ ಮಾತಿನ ಮೋಡಿಗೆ ಸಿಕ್ಕು ಏನೇನೋ ಕಾಣುತ್ತದೆನ್ನುವ ಆಸೆಯಲ್ಲಿ ನಾವು ಮರುಳಾಗಿ ನಿಂತು ಬಿಡುವಂತೆ, ಈ ಕವನವನ್ನು ಕೇಳುತ್ತಾ ನಿಂತುಬಿಡುತ್ತೇವೆ.[೫೪]

ಇಲ್ಲಿ ಇನ್ನೂ ಸಾಕಷ್ಟು ವಿವರಣೆಗಳನ್ನು ಕೈ ಬಿಡಲಾಗಿದ್ದರೂ ಒಟ್ಟು ಸಾರಾಂಶವನ್ನು ಪ್ರತಿನಿಧಿಸುವ ಸಾಲುಗಳನ್ನು ಆರಿಸಿಕೊಂಡಿದ್ದೇನೆ. ಬೇಂದ್ರೆ ಅವರು 'ಪ್ರಸಿದ್ಧಿಯ ನೆಲೆ'ಯಲ್ಲಿ ಸಹೃದಯರನ್ನು ವ್ಯಾಪಿಸಿಕೊಂಡರೆನ್ನುವ ಇವರ ಈ ಸಂಶೋಧನೆಯ ಅಧ್ಯಯನದಲ್ಲಿ ಯಾವುದೇ ಸತ್ತ್ವವಿಲ್ಲ. ಅಧ್ಯಯನವೆಂಬುದು ಹಲವು ಬಗೆಯಲ್ಲಿ ಇದ್ದರೂ ಎರಡು ದೃಷ್ಟಿಕೋನದಲ್ಲಿ ಗಮನಿಸಬಹುದು. ಪಠ್ಯದ ಪದದರ್ಥದ ಮುಖೇನ ಪ್ರವೇಶಿಸಿ ಬಾಹ್ಯ ನೋಟಕ್ಕೆ ಸೀಮಿತವಾಗುವುದು. ಇನ್ನೊಂದು ದೃಷ್ಟಿಯಲ್ಲಿ ಪಠ್ಯವನ್ನು ಒಳಾರ್ಥದ ಮುಖೇನ ಪ್ರವೇಶಿಸಿ ಕಾವ್ಯ ಜಗತ್ತು ಸ್ಪಂದಿಸುವ ಹಲವು ಆಯಾಮಗಳನ್ನು ಗ್ರಹಿಸುವುದು. ಸುಮತೀಂದ್ರ ನಾಡಿಗರ ಈ ಸಂಶೋಧನಾ ಪ್ರಬಂಧದ ಹಲವು ವಿಚಾರಗಳು ಅಧ್ಯಯನದ ಫಲಶ್ರುತಿಯಿಂದ ದೂರ ಇರುವುದು ಸ್ಪಷ್ಟವಾಗಿದೆ. 'ಹಕ್ಕಿ ಹಾರುತಿದೆ ನೋಡಿದಿರಾ?' ಕವಿತೆಯಲ್ಲಿ ಹಕ್ಕಿ, ಪುಕ್ಕ, ರೆಕ್ಕೆ, ದೂರ ಇವುಗಳ ಬಾಹ್ಯ ಅರ್ಥದ ಮೂಲಕ ಗ್ರಹಿಸುವ ಇವರಿಗೆ ಕಾವ್ಯದ ಒಳನೆಲೆಯ ಪ್ರವೇಶವಿಲ್ಲ. ಈ ಕಾಲಘಟ್ಟಕ್ಕಾಗಲೇ ತೀ.ನಂ.ಶ್ರೀ., ನಾಯಕ್ ಹಾ.ಮಾ., ಶಂಕರ ಮೊಕಾಶಿ ಪುಣೇಕರ., ನಾಗರಾಜ್ ಡಿ. ಆರ್., ಹಾಗೇಯೇ ೧೯೭೭ರ 'ಇಳಿದು ಬಾ ತಾಯಿ' ಕೃತಿ ಸಂಪಾದನೆಯು ಬೇಂದ್ರೆ ಅವರ ಕಾವ್ಯದ ಓದುವಿನ ನೆಲೆಯನ್ನು ಸ್ಪಷ್ಟಪಡಿಸಿತ್ತು. ಹೊಸ ಅರ್ಥಗಳು ಸೂಕ್ಷ್ಮ ಅಧ್ಯಯನಗಳನ್ನೂ ಮೀರುವಂತಿರಬೇಕು. ಜಾಳು ಜಾಳಾದ ಅಧ್ಯಯನಗಳನ್ನು ನೀಡುವುದರಿಂದ ಕವಿಯ ಮೌಲ್ಯ, ಕಾವ್ಯದ ಮೌಲ್ಯ ಕಡಿಮೆಯಾಗಲಾರದು ಆದರೆ ಅಧ್ಯಯನದ ಎಳಮೆಯಿಂದ ನಮ್ಮ ಓದುವನ್ನು ಅನರ್ಥಗೊಳಿಸುತ್ತೇವೆ. ಈ ಕಾರಣದಿಂದ ಸುಮತೀಂದ್ರ ನಾಡಿಗರ ಈ ಸಂಶೋಧನಾ ಪ್ರಬಂಧವು ಇಂತಹ ಸಾಕಷ್ಟು ಎಡವುಗಳನ್ನು ತನ್ನದಾಗಿಸಿಕೊಂಡಿದೆ.

ಗೋಪಾಲಕೃಷ್ಣ ಅಡಿಗರ ಸಂಪಾದಕತ್ವದಲ್ಲಿ ಬಂದಿರುವ 'ಸಾಕ್ಷಿ -೧೮' ಈ ಪತ್ರಿಕೆಯಲ್ಲಿ ಡಿ. ರಘುನಾಥರಾವ್ ಅವರು 'ಹಕ್ಕಿ ಹಾರುತಿದೆ ನೋಡಿದಿರಾ?- ಒಂದು ವಿಶ್ಲೇಷಣೆ' ಈ ಲೇಖನವು ಕೆಲವು ವಿಚಾರಗಳನ್ನು ಸ್ಪಷ್ಟಪಡಿಸುತ್ತದೆ. ಡಿ. ರಘುನಾಥರಾವ್ ಕೂಡ ಕಾಲದ ಹಿನ್ನಲೆಯಲ್ಲಿಯೇ ಕವಿತೆಯನ್ನು ಗಮನಿಸಿದ್ದರೂ ಅಮೂರ್ತವಾದುದನ್ನು ಮೂರ್ತ ನೆಲೆಯಲ್ಲಿ ಸಾರ್ಥಕಗೊಳಿಸಿರುವ ಕವಿತೆಯಾಗಿ ಹಾಗೂ ಬೇಂದ್ರೆ ಅವರ ಯಶಸ್ವಿ ಕವಿತೆಗಳೆಲ್ಲಾ ಜಾನಪದ ಧಾಟಿಯಲ್ಲಿರುವುದು ಆದರೆ ಈ ಕವಿತೆ ಜಾನಪದದ ಧಾಟಿಯಲ್ಲಿಲ್ಲದೆ ಯಶಸ್ವಿಯಾಗಿರುವ ಹಿನ್ನಲೆಯಲ್ಲಿ ವಿಮರ್ಶೆ ಮಾಡಿದ್ದಾರೆ. ವಿನಾಶ ಹಾಗೂ ಬದುಕಿನ ಆಶಯಗಳ ತತ್ತ್ವವನ್ನು ಹುಡುಕಿದ್ದಾರೆ. ಈ ಎಲ್ಲಾ ಅಂಶಗಳು ಕಾಲದ ಗ್ರಹಿಕೆಯಲ್ಲಿ ಸ್ಪಷ್ಟಗೊಂಡು ಅಧ್ಯಯನಮಾಡಿದ್ದಾರೆ.

ಈ ಎಲ್ಲಾ ಅಧ್ಯಯನಗಳು ಕಳೆದ ಶತಮಾನದ ಚಿಂತನೆಗಳಾದರೆ ಈ ಶತಮಾನದ ಹಲವು ಚಿಂತನೆಗಳು ಇದೇ ನೆರಳಿನಲ್ಲಿ ಸಾಗಿವೆ. ಆದರೆ 'ಬೇಂದ್ರೆ ಕುವೆಂಪು ವಿರಾಟ್ ದರ್ಶನ' ಕೃತಿಯಲ್ಲಿ ಕೆ.ಸಿ. ಶಿವಾರೆಡ್ಡಿ ಅವರು ಅರ್ಥೈಸುವ ಚಿಂತನೆ ಹೊಸ ಅರ್ಥವನ್ನು ನೀಡುತ್ತದೆ. ಸಾಹಿತ್ಯ ಸೃಷ್ಟಿಯ ಸಂಕೇತವಾಗಿ ಹಕ್ಕಿಯ ಕೊಕ್ಕು, ರೆಕ್ಕೆಗಳು ಮೂಡಿ ಹಾರುವ ಕಾವ್ಯ ವಿಶ್ವ ಸಾಹಿತ್ಯವನ್ನು ಹತ್ತಿರಮಾಡಿದ ತತ್ತ್ವವನ್ನು ಸಾರುತ್ತದೆ.

> "ವಸಾಹತು ಸಂಸ್ಕೃತಿಯ ತನ್ನೆಲ್ಲ ಪ್ರಭಾವ-ಪರಿಣಾಮಗಳು ಬಲವಾಗಿ ಬೇರೂರುತ್ತಿದ್ದ ಸಂದರ್ಭದಲ್ಲಿ ಪ್ರಕಟಗೊಂಡ 'ಗರಿ'ಗೆ ಬಹುಮುಖ್ಯ ಸಾಂಸ್ಕೃತಿಕ ಮಹತ್ವವಿದೆ. ಹೊಸ ಸಂಸ್ಕೃತಿಯೊಂದರ ಪ್ರವೇಶದಿಂದ ಎದುರಾಗಿದ್ದ ತಲ್ಲಣಗಳು, ವಿಸ್ಮಯಗಳು ಈ ಕಖುತಿಯ ಕೇಂದ್ರಬಿಂದು. ಹೊಸ ಸಂಸ್ಕೃತಿಯೊಂದಿಗೆ ನಡೆಸಿದ ಸಂಘರ್ಷ, ಅನುಸಂಧಾನಗಳನ್ನು ಇಲ್ಲಿನ ಕವನಗಳಲ್ಲಿ ಮುಖ್ಯವಾಗಿ ಕಾಣುತ್ತೇವೆ. ಅಂತೆಯೇ, ಪಾರಂಪರಿಕವಾಗಿ ನೆಲೆಯೂರಿದ್ದ ಸಾಮಾಜಿಕ ಅನಿಷ್ಟಗಳು, ಅರ್ಥಿಕ, ಅಸಮಾನತೆ, ಹಸಿವು - ಅನ್ನದ ಪ್ರಶ್ನೆಗಳು ಮಾನವೀಯ ನೆಲೆಯಲ್ಲಿ ಶೋಧತವಾಗಿವೆ. ಈ ಬಗೆಯ ಶೋಧನೆ, ಇಂದು ಜಾಗತೀಕರಣದ ಅಬ್ಬರದ ನೆಲೆಯಲ್ಲಿರುವ ನಮ್ಮ ರಾಷ್ಟ್ರೀಯ ಮತ್ತು ಅಂತರ್ ರಾಷ್ಟ್ರೀಯ ಆರ್ಥಿಕ ನೀತಿಗಳಿಗೆ, ಅಭಿವೃದ್ಧಿಯ ಪರಿಕಲ್ಪನೆಗಳಿಗೆ ಮತ್ತು ಅಂಥ ಪರಿಕಲ್ಪನೆಗಳಿಗೆ ಮತ್ತು ಅಂಥ ಪರಿಕಲ್ಪನೆಗಳಿಂದ ಎದುರಾಗುವ ನೋವು, ಕೀಳರಿಮೆ, ಅತಂತ್ರ ಸ್ಥಿತಿಗಳಿಗೆ ಮರು ಅರ್ಥಗಳನ್ನು ಪ್ರಕಟಿಸುತ್ತದೆ. ಅಭಿವೃದ್ಧಿಯ ಪರಿಕಲ್ಪನೆಗಳ ಹಿಂದಿರುವ ವಾಣಿಜ್ಯೀಕೃತ ಧೋರಣೆಗಳನ್ನು, ವಂಚನೆಯ ನಾಜೂಕುತನಗಳನ್ನು ಒಮ್ಮೆಗೆ ಪ್ರಶ್ನಿಸುತ್ತದೆ." (ಶಿವಾರೆಡ್ಡಿ ಕೆ.ಸಿ., ಬೇಂದ್ರೆ ಕುವೆಂಪು ವಿರಾಟ್‌ದರ್ಶನ., ಪುಟಸಂಖ್ಯೆ ೯೮-೯೯)

ಒಂದು ಕವನಸಂಕಲನವು ಸಾಮಾಜಿಕ ಕ್ರಾಂತಿಗಾಗಿ, ಸಾಹಿತ್ಯದ ಹೊಸ ಧೋರಣೆಗಳಿಗಾಗಿ ಪ್ರತಿಸ್ಪಂದಿಸುವ ಬಗೆಯನ್ನು ಚರ್ಚಿಸಿದ್ದಾರೆ. ಈ ಧೋರಣೆಯಲ್ಲಿ ಮುಂದುವರೆಯುವ ಇನ್ನೊಂದು ಕವಿತೆಯೆಂದರೆ 'ಗಂಗಾವತರಣ' ಕವಿತೆ.

'ಗಂಗಾವತರಣ' ಕವಿತೆಯನ್ನು ಕುರಿತು ಇಲ್ಲಿ ಕೆಲವು ಚಿಂತನೆಗಳಿವೆ. ಪ್ರಭುಶಂಕರ ಅವರು 'ಕನ್ನಡದಲ್ಲಿ ಭಾವಗೀತೆ' ಎಂಬ ಸಂಶೋಧನಾ ಪ್ರಬಂಧದಲ್ಲಿ ಮಂಡಿಸಿದ ವಿಚಾರವನ್ನು ಕಾಲ ಕಾಲಕ್ಕೂ ವಿಭಿನ್ನವಾಗಿ ವಿವರಿಸಿದ್ದಾರೆ. ಪ್ರಭುಶಂಕರ ಅವರ ಅಭಿಪ್ರಾಯ ಹೀಗಿದೆ.

"ಜಗತ್ತನ್ನು ಪರಿಶುದ್ಧಗೊಳಿಸುವುದಕ್ಕಾಗಿ, ದೇವಿ ಗಂಗೆಯನ್ನು ಕರುಣಿಸಿ ಅವತರಿಸುವಂತೆ ಪ್ರಾರ್ಥಿಸುವ ಪದ್ಯ 'ಗಂಗಾವತರಣ'. ಭಾವನೆಯ ಕಲ್ಪನೆಯ ಅಂತಃಸತ್ವವಿಲ್ಲದಿದ್ದಾಗಲೂ, ಪದಗಳ ಜೋಡಣೆಯಿಂದ ಅದಕ್ಕಿಂತ ಹೆಚ್ಚಾಗಿ ತನ್ನ ಸಂಗೀತದಿಂದ ಜನತೆಯ ಮನಸ್ಸಿನ ಮೇಲೆ ಕೆಲವು ಕವನಗಳು ಒಮ್ಮೊಮ್ಮೆ ಪರಿಣಾಮಮಾಡಬಲ್ಲವು ಎಂಬುದಕ್ಕೆ ಇದು ಉತ್ತಮ ನಿದರ್ಶನ. ಬೇಂದ್ರೆ ಅವರ ಕವನಗಳಲ್ಲಿ ಅತಿ ಹೆಚ್ಚಿನ ಜನಪ್ರಿಯತೆಯನ್ನು ಪಡೆದಿರುವ ಕವನ ಇದು. ಆತನ ಪ್ರಶಂಸೆ ಎಂಬುದು ಹೇಗೆ ನಮ್ಮ ವಿಮರ್ಶೆಯನ್ನು ದಿಕ್ಕು ತಪ್ಪಿಸಬಲ್ಲದು ಎಂಬುದನ್ನು ತೋರಿಸುವುದಕ್ಕಾಗಿ ಈ ಕವನದ ಮೊದಲ ಪಂಕ್ತಿಗಳು ಹೀಗಿವೆ.

ಇಳಿದು ಬಾ ತಾಯಿ
ಇಳಿದು ಬಾ
ಹರನ ಜಡೆಯಿಂದ
ಹರಿಯ ಅಡಿಯಿಂದ
ಋಷಿಯ ತೊಡೆಯಿಂದ
ನುಸುಳಿ ಬಾ॥

ವಾಸ್ತವವಾಗಿ ಆಕೆ ಮೊದಲು ಹೊರಟಿದ್ದು ಹರಿಯ ಅಡಿಯಿಂದ, ಅನಂತರ ಹರನ ಜಡೆಯಿಂದ, ಅದೂ ಆದ ಬಳಿಕ ಜಹ್ನುವಿನ ಕಿವಿಯಿಂದ.

ಮೊದಲೆರಡರ ವಿಪರ್ಯಾಸ ಹಾಗಿರಲಿ. ಆದರೆ ಋಷಿಯ ತೊಡೆ ಏಕೆ? ಪುರಾಣದಲ್ಲಿ ಹೇಳಿರುವುದು ಜಹ್ನುವಿನ ಕಿವಿಯಿಂದ ಹೊರಬಂದಳು ಎಂದು. ಇಲ್ಲಾದರೋ ಆಕೆ ಪ್ರಾಸಕ್ಕಾಗಿ ಋಷಿಯ ತೊಡೆಯಿಂದ ನುಸುಳಿ ಬರಬೇಕಾಯಿತು! ಮನಸ್ಸಿನ ಕಿರಿಕಿರಿಯನ್ನುಂಟುಮಾಡುತ್ತದೆ ಈ ಪಕ್ತಿ.

ಮತ್ತೆ ಮುಂದೆ–
ಕಂಚು ಮಿಂಚಾಗಿ ತೆರಳಿ ಬಾ
ನೀರು ನೀರಾಗಿ ಉರುಳಿ ಬಾ

ಎನ್ನುತ್ತಾರೆ. ಆಕೆ ಮತ್ತೆ ಹೇಗೆ ಬರಲು ಸಾಧ್ಯ? ದರ್ಶನ ರಹಿತವಾದ ಕೇವಲ ವಾಚ್ಯವಿದು. ಈ ಕವನದಲ್ಲಿ ದರ್ಶನ ಅಖಂಡವಾಗಿಲ್ಲ. ಸಂಗ್ರಹ ಗುಣವಂತೂ ಶೂನ್ಯ. ಭಾವೈಕ್ಯತೆ ಇಲ್ಲ. ಆದರೆ ಗೀತದಿಂದ ಮನಸ್ಸಿನ ಮೇಲೆ ಮೋಹ ಬೀಸಿ ಈ ಎಲ್ಲಾ ದೋಷಗಳನ್ನೂ ನಾವು ಕಾಣದಂತೆ ಮಾಡುತ್ತದೆ."[೫೫]

ಈ ವಿಚಾರವನ್ನು ಒಪ್ಪುತ್ತಾ ಅತ್ಯಂತ ಜಾಳು ಜಾಳದ ಹೇಳಿಕೆಯನ್ನು ನೀಡುವ ಕೃಷ್ಣಕುಮಾರ್ ಸಿ.ಪಿ ಅವರ 'ಗಂಗಾವತರಣ' ಕವಿತೆ ಕುರಿತು ಅಭಿಪ್ರಾಯ ಹೀಗಿದೆ.

ನಾದಲೀಲೆ ಬೇಂದ್ರೆಯವರ ಕಾವ್ಯದ ಒಂದು ವೈಶಿಷ್ಟ್ಯ. ಇದು ಎಷ್ಟೋ ವೇಳೆ ಅತಿರೇಕಿಸಿ ಅರ್ಥವನ್ನು ಹಿಂದೆ ಹಾಕುವುದುಂಟು, ಅಸ್ಪಷ್ಟತೆಗೆ ಎಡೆಗೊಡುವುದುಂಟು. 'ಗಂಗಾವತರಣ'ದಲ್ಲಿ ಕೆಲವು ಕಡೆ ಹಾಗಾಗಿರುವುದನ್ನು ನೋಡಬಹುದು. 'ಹರನ ಜಡೆಯಿಂದ ಹರಿಯ ಅಡಿಯಿಂದ ಋಷಿಯ ತೊಡೆಯಿಂದ ನುಸುಳಿ ಬಾ' ಎನ್ನುವಲ್ಲಿ ಕಿವಿಗೆ ತುಷ್ಟಿಕೊಡುವ

ಗುಣವಿದ್ದರೂ 'ಋಷಿಯ ತೊಡೆಯಿಂದ' ಎನ್ನುವ ಮಾತು ಕೇವಲ ಪ್ರಾಸಾರ್ಥವಾಗಿ ಬಂದುದೆಂಬುದು ಸ್ಪಷ್ಟ.[೫೬]

ಈ ಎರಡೂ ಅಭಿಪ್ರಾಯಗಳನ್ನು ಅಧ್ಯಯನ ಮಾಡಿದ ಸುಮತೀಂದ್ರ ನಾಡಿಗರ ಚಿಂತನೆ ಈ ರೀತಿ ಇದೆ.

ಗಂಗೆಯ ಜಲರಾಶಿ ಉರುಳಿ ಬಂದ ಹಾಗೆ ಪ್ರಾಸಗಳೂ ಉರುಳಿಬರುವ 'ಭಾವಾಭಿನಯ'ಕ್ಕಾಗಿ, ಬೇಂದ್ರೆ ಅವರ ಹಿಂದೂ ಮುಂದೂ ನೋಡದೆ, ಕಾವ್ಯಗಂಗೆಯಲಿ ಧುಮುಕಿ ಈಸುತ್ತಾರೆ. ಹ್ರಸ್ವ ದೀರ್ಘಗಳ ಹಿತಮಿತ ಹಂಚಿಕೆ, ಕಿವಿಗೆ ಹಿತವಾದ ಪ್ರಾಸಗಳ ಜೋಡಣೆ, ಲಯದ ವೇಗದಲ್ಲಿ ಅರ್ಥವಿದೆಯೆಂದು ಭ್ರಮೆಯನ್ನು ಹುಟ್ಟಿಸುವ ಈ ಸಾಲುಗಳನ್ನು ಗಮನಿಸಿ:

ನಿನಗೆ ಪೊಡಮಡುವೆ
ನಿನ್ನನುಡುತೊಡುವೆ
ಏಕೆ ಎಡೆತಡೆವೆ
ಸುರಿದು ಬಾ

ಗಂಗೆಗೆ ಪೊಡಮಡುವುದು (ನಮಸ್ಕರಿಸುವುದು) ಸಾಧ್ಯ. ಗಂಗೆಯನ್ನು ಉಟ್ಟು ತೊಡುವುದು ಅಸಾಧ್ಯ. ಆದರೆ ಪೊಡಮಡು ಎನ್ನುವುದರ ಜೊತೆ ಉಡು ತೊಡು ಬಂದರೆ ನೀರು ಉರುಳುವ ಭಾವಾಭಿನಯ ಸಾಧ್ಯವಾಗುವುದರಿಂದ 'ಉಡುತೊಡು' ಬರುತ್ತದೆ. ಏಕೆ ತಡೆ ತಡೆವೆ ಬದಲು ಏಕೆ ಎಡೆತಡೆವೆ ಬರುತ್ತದೆ. ಎಡೆ ತಡವೆ ಎನ್ನುವ ಪ್ರಯೋಗ ಪ್ರಾಸಕ್ಕೋಸ್ಕರವಾಗಿಯೆ ಬಂದಿದೆ ಎನ್ನುವುದರಲ್ಲಿ ಸಂಶಯವಿಲ್ಲ. ಒಂದಾದ ಮೇಲೊಂದು ಪದಗಳು ಉರುಳುವಾಗ ನಾವು 'ತಡೆವೆ' ಎನ್ನುವುದರ ಅರ್ಥವನ್ನಷ್ಟೇ ಗ್ರಹಿಸಿ 'ಎಡೆ' ಎನ್ನುವುದನ್ನು ಲಕ್ಷಿಸುವುದಿಲ್ಲ... .. ... ವೃಂದಾರವಂದ್ಯೆ ಎನ್ನುವ ಮಾತಿಗೆ ಸಹ ಅರ್ಥ ಹಚ್ಚುವುದು ಕಷ್ಟ. ಏಕೆಂದರೆ ವೃಂದಾರ ಎಂದರೆ ಶ್ರೇಷ್ಠ ಎನ್ನುವ ಅರ್ಥವಿದೆಯೇ ಹೊರೆತು ಶ್ರೇಷ್ಠರಾದವರು ಎನ್ನುವ ಅರ್ಥವಿಲ್ಲ. ಅಲ್ಲಿಂದ ಮುಂದೆ ಬಂದಾರೆ, ಒಂದಾರೆಗೆ ಪ್ರಾಸವಾಗಿ ಕಣ್ ಧಾರೆ ಬರುತ್ತದೆ. ಕಣ್ ಧಾರೆ ಅಂದರೆ ಕಣ್ಣೀರನ್ನು ತಡೆಯಬೇಡ ಎಂದು ಗಂಗೆಗೆ ಹೇಳುವುದು ಹಾಸ್ಯಸ್ಪದವಾಗಿದೆ. ಅದಕ್ಕಿಂತ ಇನ್ನೂ ಹಾಸ್ಯಾಸ್ಪದವಾದದ್ದು.. 'ಮೈ ತಳೆದು ಬಾ/ ಕೈ ತೊಳೆದು ಬಾ' ಎನ್ನುವುದು ಹಾಸ್ಯಾಸ್ಪದವಾಗುವುದರ ಪರಾಕಾಷ್ಠೆಯನ್ನು ಈ ಕೊನೆಯ ಸಾಲುಗಳು ಮಟ್ಟುತ್ತವೆ.

ಶಂಭು_ಶಿವ_ಹರನ ಚಿತ್ತೆ ಬಾ
ದತ್ತ ನರಹರಿಯ ಮುತ್ತೆ ಬಾ
ಅಂಬಿಕಾತನಯನತ್ತೆ ಬಾ
ಇಳಿದು ಬಾ ತಾಯಿ
ಇಳಿದು ಬಾ

ಶಂಭುವಿನ ಚಿತ್ತವಾದವಳೆ ಅಂತ ಹೇಳಿದರೆ ಮಾತ್ರೆಗಳು ಕಡಿಮೆಯಾಗುತ್ತವೆ ಅಂತ ಶಿವನ ಇನ್ನೆರಡು ಹೆಸರು ಹೇಳುತ್ತಾರೆ! ಮುಂದಿನ ಸಾಲಿನಲ್ಲಿ ಗಂಗೆ ದತ್ತ ನರಹರಿಯ (ನರಸಿಂಹನ) ಮುತ್ತಾಗುತ್ತಾಳೆ! ದತ್ತ ನರಹರಿಯನ್ನು ಮುತ್ತುವುದಕ್ಕಾಗಿಯೂ ಬಾ ಎನ್ನುವ ಅರ್ಥವೂ ಇದೆ. ಹಿಂದಿನ ಸಾಲಿನಲ್ಲಿ 'ಹರನ ಚಿತ್ತೆ' ಬಂದದ್ದರಿಂದ ಅದಕ್ಕೆ ಪ್ರಾಸವಾಗಿ 'ಹರಿಯ ಮುತ್ತೆ' ಬರುತ್ತದೆ. ಈ ದತ್ತ ನರಹರಿ ಯಾರೆಂದು ಕವಿಗೂ ಗೊತ್ತಿಲ್ಲವೆನಿಸುತ್ತದೆ. ಈ 'ಬೇಂದ್ರೇತನ'ವನ್ನೇ ಇಷ್ಟು ದಿನವೂ ಮೆಚ್ಚಿಕೊಂಡು ಬಂದಿದ್ದೇವೆ.[೫೭]

ಈ ಒಂದು ಕವಿತೆಯನ್ನು ಕಾಲಘಟ್ಟದ ಭಿನ್ನತೆಯಲ್ಲಿ ಅಭಿಪ್ರಾಯಗಳನ್ನು ಮುಂದುವರೆಸಿದ್ದಾರೆ. ಇದೇ ಕವಿತೆಗೆ ಇರುವ ಇನ್ನೂ ಬೇರೆ ಬೇರೆಯ ಅರ್ಥಗಳನ್ನು ಪರಿಶೀಲಿಸಿದ ನಂತರ ಒಟ್ಟಾರೆ ತೀರ್ಮಾನವನ್ನು ಗ್ರಹಿಸಬಹುದು.

ಕೀರ್ತಿನಾಥ ಕುರ್ತಕೋಟಿ ಅವರು 'ಶ್ರಾವಣ ಪ್ರತಿಭೆ' ಕೃತಿಯಲ್ಲಿ 'ಗಂಗಾವತರಣ' ಕವಿತೆಗೆ ವಿಮರ್ಶೆ ನೀಡಿದ್ದಾರೆ. ಬೇಂದ್ರೆ ಅವರು ಬೇರೆ ಬೇರೆಯ ಸಂದರ್ಭದಲ್ಲಿ ನೀಡಿದ ಸೂಕ್ತವಾದ ಕಾರಣಗಳನ್ನು ಭಾವ ಸಂದರ್ಭಗಳಾಗಿ ಬಳಸಿಕೊಂಡು ವಿಮರ್ಶೆ ನೀಡಿರುವುದನ್ನು ಗಮನಿಸ ಬಹುದು.

ಗಂಗಾನದಿಯ ಬಗ್ಗೆ ಬೇಂದ್ರೆಯವರು ಬರೆದ ಎರಡನೆಯ ಕವಿತೆ ಇದು. ಇದಕ್ಕೂ ಮೊದಲ– ಬಹುಶಃ 'ಬಂತಿದೋ ಶೃಂಗಾರ ಮಾಸ'(ದೀಪ) ಬರೆದ ಕಾಲಕ್ಕೆ 'ಗಂಗಾಷ್ಟಕ' ಎಂಬ ಕವಿತೆಯನ್ನು ಬರೆದಿದ್ದರು. ಜಗನ್ನಾಥ ಪಂಡಿತನ 'ಗಂಗಾ ಲಹರಿ'ಯಿಂದ ಪ್ರೇರಣೆ ಪಡೆದ ಕವಿತೆ ಇದು. ಗಂಗಾನದಿಯ ಪೌರಾಣಿಕ ಅರ್ಥವಂತಿಕೆ ಅವರನ್ನು ಮೊದಲಿನಿಂದಲೂ ಆಕರ್ಷಿಸಿತ್ತು. 'ಗಂಗಾವತರಣ'ಕ್ಕೆ ಭಗೀರಥನ ಕತೆ ಹಿನ್ನಲೆಗಿದ್ದ ಸಂಗತಿ ಸ್ಪಷ್ಟವಾಗಿದೆ. ಮುನಿಯ ಶಾಪಕ್ಕೀಡಾಗಿ ಸತ್ತು, ಗತಿಗಾಣದ ಸಗರಪುತ್ರರ ಉದ್ಧಾರಕ್ಕಾಗಿ ಅದೇ ವಂಶದ ಭಗೀರಥ ಆಕಾಶದ ಗಂಗೆಯನ್ನು ಭೂಮಿಗೆ ತರಬೇಕಾಯಿತು. ಇದರಿಂದಾಗಿ ಗಂಗೆ ತ್ರಿಪಥಗೆಯಾದಳು. 'ಸ್ವರ್ಗ ತೊರೆದು ಬಾ। ಬಯಲ ಜರೆದು ಬಾ। ನೆಲದಿ ಹರಿದು ಬಾ' ಇದು ಭಗೀರಥನ ಕರೆ. ಸ್ವರ್ಗ ಮತ್ತು ಬಯಲುಗಳಲ್ಲಿ ಗಂಗೆಯ ಸ್ವರೂಪ ಪ್ರಚಂಡವಾದದ್ದು; ಅವಳನ್ನು ತಡೆದುಕೊಳ್ಳುವ ಶಕ್ತಿ ಭೂಮಿಗಿಲ್ಲ. ಆದ್ದರಿಂದ ಶಿವ ಅವಳನ್ನು ಜಡೆಯಲ್ಲಿ ಧರಿಸಿ, ಒಂದು ಕುರುಳಿನಲ್ಲಿ ಅಡಗಿಸಿ, ಪ್ರವಾಹವನ್ನಷ್ಟೇ ಹೊರಗೆ ಬಿಟ್ಟ, ಗಂಗೆ ಅಲಕನಂದೆಯಾದದ್ದು ಹೀಗೆ. 'ಉದ್ದಂಡ ಅರುಳೆ' ಎಂಬ ಮಾತಿನಲ್ಲಿ ಈ ಕಥೆ ಹುದುಗಿಕೊಂಡಿದೆ. ಅವಳು 'ಶಿವಶುಭ್ರ ಕರುಣೆ', 'ವಾತ್ಸಲ್ಯ ವರುಣೆ'ಯಾದದ್ದು ಬೇಂದ್ರೆ ಅವರ ಕಲ್ಪನೆಯೆಂದೇ ಹೇಳಬೇಕು. ಗಂಗೆಯ ವಾತ್ಸಲ್ಯಕ್ಕೆ 'ಕರು ಕಂಡ ಕರುಳೆ', 'ನಿನ್ನ ಕಂದನ್ನ ಹುಡುಕಿ ಬಾ' ಮೊದಲಾದ ಸಾಲುಗಳು ಸಾಕ್ಷಿಯಾಗಿವೆ. ಜಗನ್ನಾಥ ಪಂಡಿತನ 'ಗಂಗಾಲಹರಿ'ಯಲ್ಲಿ ಕೂಡ ವಾತ್ಸಲ್ಯದ ದರ್ಶನವಿದೆ. ಆದರೆ ಅದು ಪಂಡಿತನ ಪಾಪ ಮತ್ತು ಗಂಗೆಯ ಪಾಪಕಾಲದ ಶಕ್ತಿಯ ಸಂದಂರ್ಭಕ್ಕೆ ಮಾತ್ರ ಸೀಮಿತವಾಗಿದೆ. ಬೇಂದ್ರೆ ಅವರ ಕವಿತೆಯಲ್ಲಿ ಗಂಗೆಯ ವಾತ್ಸಲ್ಯ ಮೂರು ಲೋಕಗಳನ್ನೂ ವ್ಯಾಪಿಸಿಬಿಟ್ಟಿದೆ. ..ದೈವಶಕ್ತಿಯ ಅಧಃಪಾತ ಮನುಷ್ಯ ಜಾತಿಯ ಉದ್ಧಾರಕ್ಕೆ ಕಾರಣವಾಗುತ್ತದೆ ಎಂಬ ಮಾತಿನಲ್ಲಿ

ವಿರೋಧಾಭಾಸದಂತೆ ಕಾಣುವ ಸತ್ಯ ಹುದುಗಿದೆ. ಗಂಗೆಯ ಅವತರಣದ ಉದ್ದೇಶವೇ ಉದ್ಧಾರವಾಗಿರುವದರಿಂದ ಈ ಮಾತು ಇಲ್ಲಿ ಹೆಚ್ಚು ಉಚಿತವಾಗುತ್ತದೆ. 'ಶೈಲರಾಜಾವತೀರ್ಣಾಂ ಜಹ್ನುಕನ್ಯಾಂ ಸಗರತನಯ ಸ್ವರ್ಗಸೋಪಾನಮಂಕ್ತಿಂ' (ಮೇಘದೂತ) ಎಂದು ಕಾಲಿದಾಸ ಗಂಗೆಯ ಎರಡು ವಿರುದ್ಧ ಗತಿಗಳನ್ನು 'ಮೇಘದೂತ'ದಲ್ಲಿ ವರ್ಣನಾತ್ಮಕವಾಗಿ ಹೇಳಿದ್ದಾನೆ.

> ಹರಿಹರನ ರಗಳೆಗಳಲ್ಲಿಯ ನಿರರ್ಗಳತೆ ಮತ್ತು ಅಂತ್ಯಪ್ರಾಸಗಳ ಮಂಜುಳತೆ ಇವು ಈ ಕವಿತೆಯ ವಿಶಿಷ್ಟ ಗುಣಗಳಾಗಿವೆ. 'ಅಂಬಿಕಾತನಯನತ್ತೆ ಬಾ' ಎಂದು ಸಾಲು- 'ಅಂಬಿಕಾತನಯ ಕಡೆಗೇ ಬಾ' ಎಂಬುದಾಗಿ ಅವಧಾರಣೆಯ ಒತ್ತು ಕೊಟ್ಟು ಹೇಳಿದ ಹೇಳಿಕೆಯಾಗಿದೆ, ಪ್ರಾರ್ಥನೆಯಾಗಿದೆ.[೫೮]

ಬೇಂದ್ರೆ ಸಾಹಿತ್ಯ ಸಮೀಕ್ಷೆ ನಡೆಸಿದ ಆಮೂರ ಜಿ.ಎಸ್ ಅವರ 'ಭುವನದ ಭಾಗ್ಯ' ಕೃತಿಯಲ್ಲಿ ಗಂಗಾವತರಣದ 'ಇಳಿದು ಬಾ ತಾಯಿ' ಕವಿತೆ ಕುರಿತು ಚಿಂತನೆ ಹೀಗಿದೆ.

> ವೃಷ್ಟಿ ಸಮಷ್ಟಿ ಕಲ್ಯಾಣಗಳ ಪರಿಪೂರ್ಣ ಕಲ್ಪನೆಯನ್ನು ಹೊಂದಿದ 'ಗಂಗಾವತರಣ' ಬೇಂದ್ರೆಯವರ ಶ್ರೇಷ್ಠ ಪ್ರಾರ್ಥನೆಗಳಲ್ಲೊಂದಾಗಿದೆ. 'ಗಂಗಾವತರಣ' ಅನೇಕ ಓದುಗರ ಮೆಚ್ಚುಗೆಯನ್ನು ಗಳಿಸಿಕೊಂಡಿದೆಯಾದರೂ ಅದು ಕೆಲವೊಂದು 'ಅಪಾರ್ಥ ಸಮೀಕ್ಷಕ'ರ ಟೀಕೆಗೆ ಗುರಿಯಾದುದೂ ಉಂಟು. ಈ ಕವಿತೆಯ ಹಿಂದಿನ ಭವ್ಯ ಕಲ್ಪನೆಯನ್ನು ಗುರುತಿಸುವುದಂತೂ ಇರಲಿ, ಪ್ರಾಸ ವ್ಯಾಮೋಹ ಮತ್ತು ದುರೂಹ್ಯತೆಗಳಂಥ ಅರೋಪಗಳನ್ನು ಮಾಡಲೂ ಈ ವಿಮರ್ಶಕರು ಹಿಂಜರಿದಿಲ್ಲ. ಆದರೆ, ಇವರು ಸ್ತೋತ್ರಸಾಹಿತ್ಯದ ಸ್ವರೂಪವನ್ನಾಗಲಿ, ಕವಿಯ ವಿದಗ್ಧತೆಯನ್ನಾಗಲಿ ಲಕ್ಷಿಸಿದಂತಿಲ್ಲ. ಕವಿತೆಯಲ್ಲಿ ಸಮಸ್ಯೆಗಳಿಲ್ಲವೆಂದಲ್ಲ. ಆದರೆ ಅವು ಬಗೆಹರಿಯದ ಸಮಸ್ಯೆಗಳೇನಲ್ಲ. ಉದಾಹರಣೆಗೆ, 'ಋಷಿಯ ತೊಡೆಯಿಂದ ನುಸುಳಿ ಬಾ' ಎಂಬ ಸಾಲು. ಇದಕ್ಕೆ ಸಮಾಧಾನವನ್ನು ವಾಮನ ಬೇಂದ್ರೆಯವರೇ ಅರಳು-ಮರಳು ಸಂಗ್ರಹಕ್ಕೆ ಬರೆದ ಹಿನ್ನುಡಿಯಲ್ಲಿ ಸೂಚಿಸಿದ್ದಾರೆ. ಜಹ್ನುವಿನ ತೊಡೆಯಿಂದ ಗಂಗೆ ಇಳಿದು ಬಂದಳು ಎನ್ನುವುದಕ್ಕೂ ಪುರಾಣದ ಆಧಾರವಿದೆ. 'jahnu who swallowed up ganga in her course down on earth and let her out through his thighs' ಎಂಬ ಉಲ್ಲೇಖವನ್ನಿಲ್ಲಿ ನೆನೆಯಬಹುದು. ಹಾಗೆಯೇ, 'ನಿನ್ನನುಡುತೊಡುವೆ' ಎಂಬ ಸಾಲೂ ಪ್ರಾಸಕ್ಕಾಗಿ ಬಂದದ್ದಲ್ಲ. ಬೇಂದ್ರೆಯವರ ಕಾವ್ಯದ ಮಿತಿಗಳಿದ್ದರೂ ಪ್ರಾಸದಾರಿದ್ರ್ಯಕ್ಕಾಗಿ ಅವರನ್ನು ಯಾರೂ ದೂಷಿಸಲಾರರು. 'ನಿನ್ನನುಡುತೊಡುವೆ' ಎನ್ನುವುದರ ಅರ್ಥ ಗಂಗೆಯ ನೀರಿನಲ್ಲಿ ಅಡಿಯಿಂದ ಮುಡಿಯವರೆಗೆ ಮುಳುಗುವೆ ಎಂದೂ ಆಗಬಹುದು. ಆಗ ಗಂಗೆಯ ನೀರೆ ಉಡುಗೆ, ತೊಡುಗೆಗಳಾಗುವುದಿಲ್ಲವೇ? ಜಗನ್ನಾಥ ವಿರಚಿತ ತತ್ವಸುವ್ವಾಲಿಯಲ್ಲಿ ಮಹಾಲಕ್ಷ್ಮಿಯನ್ನುದ್ದೇಶಿಸಿ 'ಆನಂದಮಯ ಹರಿಗೆ ನಾನಾಭರಣವಾದೆ/ ಪಾನೀಯವಾದೆ ಪಟವಾದೆ/ ಪಂಕಜ/ ಪಾಣಿ ನೀನೆಮಗೆ ದಯವಾಗೆ' ಎಂಬ ಪ್ರಾರ್ಥನೆಯಿದೆ. ಇಲ್ಲಿ ಮಹಾಲಕ್ಷ್ಮಿ ವಿಷ್ಣುವಿಗೆ, ಆಭರಣ, ಪಾನೀಯ, ವಸ್ತ್ರವಾದಳು ಎಂಬ ಸ್ತುತಿಯಿದೆ. ಆರ್. ಈ. ಕುಲಕರ್ಣಿಯವರು ನನಗೆ ಸೂಚಿಸಿದಂತೆ 'ನಿನ್ನನುಡು ತೊಡುವೆ' ಎಂಬ ಮಾತಿನ ಹಿಂದೆ ಈ ಪ್ರಾರ್ಥನೆಯ ನೆನಪೂ ಇದ್ದರೆ

ಆಶ್ಚರ್ಯವಿಲ್ಲ. ಹರಿದಾಸರಲ್ಲಿಯೇ ಜಗನ್ನಾಥದಾಸರು ಬೇಂದ್ರೆಯವರಿಗೆ ಅತ್ಯಂತ ಪ್ರಿಯರಾದವರು. 'ಗಂಗಾವತರಣ'ವನ್ನು ಬರೆಯುವ ವೇಳೆಗೆ ಬೇಂದ್ರೆಯವರು ಸಾಧಿಸಿದ ಕಾವ್ಯಪರಿಣತಿಯ ಸಂದರ್ಭದಲ್ಲಂತೂ ಈ ಕವಿತೆಯ ಬಗ್ಗೆ ಛಿದ್ರಾನ್ವೇಷಣೆ ಹಾಸ್ಯಾಸ್ಪದವಾಗಿ ಕಾಣುತ್ತದೆ."[೫]

ಈ ಮೇಲಿನ ಅಧ್ಯಯನಗಳನ್ನು ಗಮನಿಸಿದಾಗ ಬೇಂದ್ರೆ ಅವರು ಪದಗಳನ್ನು ಬಲವಂತವಾಗಿ ತಂದು ಶಬ್ದವ್ಯಾಪಾರ ಮಾಡಿರಲಾರರು ಎನ್ನಬಹುದು. ಕೃಷ್ಣಪ್ಪ ಜಿ. ಇವರು ತಮ್ಮ 'ಪದ ನಿರುಕ್ತ' ಎಂಬ ಬೇಂದ್ರೆ ಕಾವ್ಯದ ಪದಗಳ ಕುರಿತ ಅಧ್ಯಯನದಲ್ಲಿ ಪುರಾಣದ ಈ ಎಲ್ಲಾ ಪಾತ್ರಗಳಿಗೆ ಸೂಕ್ತವಾದ ಕಾರಣ ನೀಡುತ್ತಾರೆ. ಬೇಂದ್ರೆ ಅವರು ಅಧ್ಯಯನ ಮುಖೇನವೇ ಕಾವ್ಯಕ್ರಿಯೆಯಲ್ಲಿ ತೊಡುಗುವುದು ಎಂಬುದಾಗಿ ಗಮನಿಸಿದ್ದಾರೆ. ಜೊತೆಗೆ ಪುರಾಣ ಭಾರತ ಕೋಶದಿಂದ ಸೂಕ್ತ ಕಥೆಗಳನ್ನು ಉದಾಹರಿಸಿದ್ದಾರೆ. ಆದರೆ ಪ್ರಭುಶಂಕರ, ಕೃಷ್ಣಕುಮಾರ್ ಸಿ. ಪಿ., ಸುಮತೀಂದ್ರ ನಾಡಿಗ ಇವರ ಅಭಿಪ್ರಾಯಗಳಲ್ಲಿ ಅಧ್ಯಯನವಿಲ್ಲದ ಅಸ್ಪಷ್ಟತೆ ಕಂಡುಬರುತ್ತದೆ. ಇದಕ್ಕೆ ಸೂಕ್ತ ಕಾರಣಗಳಾಗಿ ಕೀರ್ತಿನಾಥ ಕುರ್ತಕೋಟಿ ಹಾಗೂ ಆಮೂರ ಜಿ.ಎಸ್ ಅವರ ಅಧ್ಯಯನಗಳ ಚಿಂತನೆಯನ್ನು ಗಮನಿಸಬಹುದು. ಬೇಂದ್ರೆ ಅವರು ಭಾರತೀಯ ಸಾಹಿತ್ಯವನ್ನು ಅದರಲ್ಲೂ ಸನಾತನ ಸಾಹಿತ್ಯವನ್ನು ವ್ಯವಸ್ಥಿತವಾಗಿ ಅಧ್ಯಯನ ನಡೆಸಿ ವಾಸ್ತವ ಸನ್ನಿವೇಶಕ್ಕೆ ಬಳಸಿಕೊಂಡವರು. ಅವರ 'ಸಾಹಿತ್ಯದ ವಿರಾಟ್ ಸ್ವರೂಪ' ಎಂಬ ಗದ್ಯ ಬರಹಗಳನ್ನು ಗಮನಿಸಿದಾಗ ಅದರ ಸಾರಸ್ವತ ಗ್ರಹಿಕೆಗಳು ನಮಗೆ ದಕ್ಕುತ್ತವೆ.

ಸಂಗೀತಾ .ಪಿ ಅವರು ತಮ್ಮ ಸಂಶೋಧನೆಯಲ್ಲಿ ಗಂಗಾವತರಣದ ಸ್ವರೂಪವನ್ನು ಪರಿಸರದ ದೃಷ್ಟಿಕೋನದಲ್ಲಿ ಅಧ್ಯಯನಮಾಡಿದ್ದಾರೆ. ವಸಾಹತು ಸಂದರ್ಭದಲ್ಲಿ ದೇಶದ ಅಖಂಡ ಸಮಸ್ಯೆಗೆ ಉತ್ತರವಾಗಿ ಕಾಣುವ ಈ ಗಂಗೆಯನ್ನು ಕುರಿತು ಹೊಸ ಚಿಂತನೆಯನ್ನು ತಂದಿದ್ದಾರೆ.

"ಬೇಂದ್ರೆಯವರ 'ಗಂಗಾವತರಣ' ಕವಿತೆಯು ಭೂಮಿಯ ಮೇಲಿನ ಭೀಕರ ಬರಗಾಲದ ರೌದ್ರಾವಸ್ಥೆಯನ್ನು ಕಂಡ ಸಂವೇದನೆಯಲ್ಲಿ ಉಗಮಗೊಂಡ ಕವನ. ನೆಲದ ಮೇಲಿನ ಮನುಕುಲ ಅನ್ನಕ್ಕಾಗಿ ಪರಿತಪಿಸಿದ ಕಾಲದಲ್ಲಿ ಅವ್ಯಾಜ ಕರುಣೆಯಿಂದ ಗಂಗೆಯನ್ನು ಮೊರೆಹೊಕ್ಕ ಕವನವು ಇದಾಗಿದೆ. ನಲವತ್ತರ ದಶಕದಲ್ಲಿ ಬಂಗಾಲದ ಭಯಾನಕ ಬರಗಾಲದ ಚಿತ್ರಗಳ ನೆನಪು ಮತ್ತು ಗಂಗಾನದಿಯ ಉದ್ದಕ್ಕೂ ಅಸಂಖ್ಯ ಜನಸಮೂಹ ಹಾಗೂ ಜೀವ ಸಂಕುಲಗಳು ಹಸಿವಿನಿಂದ ಸತ್ತ ಹಿನ್ನೆಲೆ ಈ ಕವಿತೆಯ ಹಿಂದಿನ ಪ್ರೇರಣೆ. ಬರಗಾಲದ ರೌದ್ರಾವತರಣದಿಂದ ಎದುರಾದ ಜೀವಸಮೂಹದ ಹಸಿವಿನ ದಾಹಕ್ಕೆ 'ಅವ್ಯಾಜ ಕರುಣೆಯ ನಿರಂತರ ಅವತಾರ' ಶಕ್ತಿಯಾದ ಗಂಗಾಮಾತೆಯನ್ನು ಭೂಮಿಗೆ ಆಹ್ವಾನಿಸುವ ಕವನ ಇದಾಗಿದೆ. ಗಂಗೆ ಈ ಅವ್ಯಾಜ ಕರುಣೆಯಿಂದ ಭೂಮಿಗಿಳಿದು ದಿಗ್ ದಿಗಂತಗಳಲ್ಲಿ ಹಣಿಸಿ ಬಂದು ಅಖಂಡ ಚರಾಚರಗಳಿಗೆ ಅನ್ನವನ್ನು ಕರುಣಿಸುತ್ತಾಳೆ."(ಪಿ. ಸಂಗೀತಾ., ನವೋದಯ ಸಂದರ್ಭ ಬೇಂದ್ರೆ – ಕುವೆಂಪು ಕೃತಿಗಳಲ್ಲಿ ಪರಿಸರದ ಪ್ರಶ್ನೆಗಳು., ಪುಟಸಂಖ್ಯೆ ೪೨)

ಕವಿಯು ವಾಸ್ತವವನ್ನು ಮೀರಿ ಸಾರ್ವತ್ರಿಕ ಸತ್ಯವನ್ನು ಕವಿತೆಯು ಧ್ವನಿಸುವುದಕ್ಕೆ ಈ ಅಧ್ಯಯನ ವಿಶೇಷವಾದುದು. ಸಮಸ್ಯೆ ಕೇವಲ ಒಬ್ಬ ಮನುಷ್ಯನಾಗಿರದೆ ಅದು ನಮ್ಮ ಪರಿಸರದ ಪ್ರಶ್ನೆಯಾಗಿಯೂ, ಭೂಮಿಯ ಪ್ರಶ್ನೆಯಾಗಿಯೂ, ದೇಶದ, ವಿಶ್ವದ ಪ್ರಶ್ನೆಯಾಗಿಯೂ ಜೊತೆಗೆ ಭವಿಷ್ಯದ ಉತ್ತರಗಳನ್ನು ಅಧ್ಯಯನಗಳಿಗೆ ದಾರಿಯಾಗಿ ನೀಡುವ ಕವಿತೆಯಾಗಿ ಈ ಸಂಶೋಧನೆಯಲ್ಲಿ ಮೂಡಿದೆ.

ಸುಮತೀಂದ್ರ ನಾಡಿಗರ ಸಂಶೋಧನೆಯಲ್ಲಿ ವಿಮರ್ಶೆಗಳ ಅಧ್ಯಯನವನ್ನು ಕೂಡ ಅನುಬಂಧ ನಾಲ್ಕರಲ್ಲಿ ನೀಡಿದ್ದಾರೆ. ಬೇಂದ್ರೆ ಅವರನ್ನು ಕುರಿತು ೧೯೪೯ರವರೆಗಿನ ಅಧ್ಯಯನಗಳನ್ನು ಕುರಿತು ಎಂಟು ರೀತಿಯಲ್ಲಿ ವಿಂಗಡಿಸುತ್ತಾರೆ. ಈ ವಿಂಗಡಣೆಯು ಅಸಮಂಜಸ ವ್ಯಾಪ್ತಿಯನ್ನು ಧೃಡೀಕರಿಸುತ್ತದೆ. ಉದಾಹರಣೆಗೆ ೧) ಮೆಚ್ಚಿಕೆಯೇ ಪ್ರಧಾನವಾದ ಬರಹಗಳು ೨) ಕೆಲವು ಕವನಗಳನ್ನು ಉದ್ಧರಿಸುತ್ತ ಅಲ್ಲಲ್ಲಿ ಸಾರಾಂಶವನ್ನು ಹೇಳುವ ಬರಹಗಳು ೩) ಬೇಂದ್ರೆ ಅವರ ರಹಸ್ಯಗಳನ್ನು ಬಲ್ಲವರೆಂದೂ, ಅವರ ಕಾವ್ಯದ ರಹಸ್ಯಮಯತೆಗೆ ಕಪಟಯಾದಿ ಸೂತ್ರಗಳನ್ನು ಬಳಸುತ್ತ ತಾವು ಮಾತ್ರ ಅರ್ಥವನ್ನು ಕಂಡುಕೊಂಡ ವಕ್ತಾರರೆಂದುಕೊಳ್ಳುವವರ ಬರಹಗಳು... ಹೀಗೆ ವಿಭಾಗ ಮಾಡುತ್ತಾರೆ. ಇದು ಯಾವುದೇ ಸಂಶೋಧನೆಯ ಅಥವಾ ಅಧ್ಯಯನದ ಸ್ವರೂಪದ ಮಾದರಿಗೆ ಹೊಂದುವುದಿಲ್ಲ. ಒಬ್ಬ ಸಾಮಾನ್ಯ ಓದುಗನೂ ಕೂಡ ಇದಕ್ಕಿಂತಲೂ ಬಲವಾದ ಚಿಂತನೆಯನ್ನು ನೀಡಬಲ್ಲನು. ನಂತರ ಕೀರ್ತಿನಾಥ ಕುರ್ತಕೋಟಿ ಅವರ ವಿಮರ್ಶೆ ಮಿತಿಗಳನ್ನು ಚರ್ಚಿಸಿದ್ದಾರೆ. ಕುರ್ತಕೋಟಿ ಅವರು ನವ್ಯ ವಿಮರ್ಶೆಯ ಶಿಸ್ತನ್ನು ಪಾಲಿಸುವುದಿಲ್ಲ ಎಂಬುದನ್ನು ತಿಳಿಸಿದ್ದಾರೆ. ಗೋಕಾಕ್ ವಿ.ಕೃ ಅವರ 'ಬೇಂದ್ರೆ: ಪೊಯೆಟ್ ಅಂಡ್ ಸೀಯರ್' ಎಂಬ ಕೃತಿಯನ್ನು ಕುರಿತು ಚರ್ಚಿಸುತ್ತಾ

> ಇಲ್ಲಿ ವಿಮರ್ಶೆಗಿಂತ ಹೆಚ್ಚಾಗಿ ಕವಿಯ ಜೀವನ, ಅವರ ಕಾವ್ಯ ದೃಷ್ಟಿ, ಅವರ ವ್ಯಕ್ತಿತ್ವ ಮತ್ತು ಸಂದೇಶದ ಕಡೆಗೇ ಗಮನವಿದೆ. ಅವರ ವಿಮರ್ಶೆ ವರ್ಣನಾತ್ಮಕವಾಗುತ್ತದೆಯೇ ಹೊರೆತು ಕಾವ್ಯದ ವಿಶ್ಲೇಷಣೆ ಮತ್ತು ಮೌಲ್ಯ ಮಾಪನದ ಕಡೆಗೆ ಅವರ ಗಮನವಿಲ್ಲ.[೬೦]

ಹೀಗೆ ೧೯೪೯ರವರೆಗಿನ ಕೆಲವು ವಿಮರ್ಶೆಗಳ ಅಧ್ಯಯನ ಫಲಿತವನ್ನು ಇಲ್ಲಿ ಸುಮತೀಂದ್ರ ನಾಡಿಗರು ತಾವು ಗಮನಿಸಿದಂತೆ ನೀಡಿದ್ದಾರೆ. ಈ ಅಧ್ಯಯನವು ಮರು ಅಧ್ಯಯನಕ್ಕೆ ಕೆಲವು ಪ್ರಶ್ನೆಗಳನ್ನು ಒದಗಿಸುತ್ತವೆ. ಆದರೆ ಯಾವುದೇ ಸಂಶೋಧನಾ ಫಲಿತವಾಗಿ ಈ ಟಿಪ್ಪಣಿ ಮಾದರಿಯ ಬರಹಗಳನ್ನು ಪರಿಗಣಿಸಲು ಸಾಧ್ಯವಿಲ್ಲ. ಅನಿಸಿಕೆ, ಅಭಿಪ್ರಾಯಗಳು ಎಂದಿಗೂ ಅಧ್ಯಯನಗಳಾಗುವುದಿಲ್ಲ. ಸಂಶೋಧನೆಯಲ್ಲಿ ಪ್ರತಿಯೊಂದು ವಿಷಯವನ್ನು ಸೂಕ್ತ ಕಾರಣಗಳ ಮೂಲಕ ವಿವೇಚನೆಯೊಂದಿಗೆ ಅಧ್ಯಯನಮಾಡಬೇಕಾಗುತ್ತದೆ. ಇಂತಹ ಬರಹಗಳು ಹೊಸ ಅಧ್ಯಯನಗಳಿಗೆ ದಾರಿಮಾಡಿಕೊಡುತ್ತವೆ. ಆದರೆ ಅಭಿಪ್ರಾಯಗಳಂತಿರುವ ಹಲವು ಬರಹಗಳು ಕೇವಲ ಓದುವಿನಲ್ಲಿಯೇ ಮರೆಯಾಗುತ್ತವೆ.

ಬೇಂದ್ರೆ ಅವರನ್ನು ಎರಡು ಆಯಾಮದಲ್ಲಿ ಗಮನಿಸಿದ ಅಧ್ಯಯನಗಳನ್ನು ಕಾಣಬಹುದು. ಬೇಂದ್ರೆ ಅವರನ್ನು ಕುರಿತ ಅಧ್ಯಯನಗಳು, ಕವಿ ಅಂಬಿಕಾತನಯದತ್ತರನ್ನು ಕುರಿತ ಅಧ್ಯಯನಗಳು. ಬೇಂದ್ರೆ ಅವರ ವೈಯಕ್ತಿಕ ಜೀವನವನ್ನು ಕುರಿತ ಚಿಂತನೆಗಳು ಸುಮಾರು ಪಾಲು ಅಭಿಮಾನದ ಬೇಂದ್ರೆಯಾಗಿ ಗಮನಿಸಿದ್ದಾರೆ. ಅಂಬಿಕಾತನಯದತ್ತ ಇವರನ್ನು ಕುರಿತ ಬರಹಗಳು ಕವಿಯ ಕಾವ್ಯ, ಇತರೆ ಎಲ್ಲಾ ಬರಹಗಳನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿ, ವಿಮರ್ಶಿಸಿ, ಕವಿಯ ಸಾಹಿತ್ಯದಲ್ಲಿ ಅಡಗಿರುವ ಸ್ವರೂಪ, ತಾತ್ವಿಕತೆ ಹಾಗೂ ಎಡವುಗಳನ್ನು ತಾವು ಕಂಡುಕೊಂಡಷ್ಟು ಪೂರ್ಣವಾಗಿ ಸಾರ್ಥಕಗೊಳಿಸಿದ್ದಾರೆ. ಆದರೆ ಇಲ್ಲಿಯೂ ಒಬ್ಬ ಹಿರಿಯ ತಲೆಮಾರಿನ ಕವಿ ಎಂಬ ಅಭಿಮಾನ ಕೆಲಸ ಮಾಡಿದೆ. ಆದರೆ ವಿ.ಕೃ ಗೋಕಾಕರು, ಶಂಕರ ಮೊಕಾಶಿ ಪುಣೇಕರ, ಚಂದ್ರಶೇಖರ ಪಾಟೀಲ, ಬರಗೂರು ರಾಮಚಂದ್ರಪ್ಪ, ಕಾಳೇಗೌಡ ನಾಗವಾರ, ದೊಡ್ಡರಂಗೇಗೌಡ, ಸುಮತೀಂದ್ರ ನಾಡಿಗ, ಡಿ. ಆರ್ ನಾಗರಾಜ ಮೊದಲಾದವರ ಅಧ್ಯಯನವು ಹೊಸ ಹಾದಿಯಲ್ಲಿ ಬೇಂದ್ರೆ ಅವರ ಸಾಹಿತ್ಯ ಅಧ್ಯಯನ ಮಾಡಿದ್ದಾರೆ. ಇಲ್ಲಿ ಸಾಕಷ್ಟು ಕವಿಯ ಮೇಲಿನ ಧೋರಣೆಗಳನ್ನು ಸಾಹಿತ್ಯದ ಅಧ್ಯಯನಗಳ ಮೇಲೆ ಪ್ರಯೋಗಿಸುತ್ತಾ ಖಂಡಿಸುವುದನ್ನೂ ಕೂಡ ಗಮನಿಸಬಹುದು. ಅದಕ್ಕೆ ಸೂಕ್ತ ಕಾರಣಗಳಾಗಿ ರಂ. ಶ್ರೀ ಮುಗಳಿ, ಜಿ.ಎಸ್ ಆಮೂರ ಅವರ ಅಧ್ಯಯನಗಳು ಸಾಧ್ಯತೆಯ ಉತ್ತರಗಳನ್ನು ನೀಡುತ್ತಾ ಸಾಗುತ್ತಾರೆ.

ಬೇಂದ್ರೆ ಅವರ ಕಾವ್ಯದ ಶೈಲಿ

ಜಿ. ಕೃಷ್ಣಪ್ಪ ಅವರ ಸಂಶೋಧನಾ ಪ್ರಬಂಧದದಲ್ಲಿ ಬೇಂದ್ರೆ ಅವರ ಕಾವ್ಯದ ಶೈಲಿಯನ್ನು ಈ ರೀತಿ ಗಮನಿಸಿದ್ದಾರೆ.

> ಪ್ರತಿಯೊಬ್ಬ ಕವಿಯೂ ತನ್ನದೇ ಆದ ಶೈಲಿಯಲ್ಲಿ ನುಡಿಯುತ್ತಾನೆ. ಅದು ಅವನ ಕಾವ್ಯಭಾಷೆ. ಅದು ಅವನ ಕಂಠದ ದನಿಯಂತೆ ಅತಿ ಸಹಜವಾದುದು. ಅದು ಅವನದೇ. ಹಾಗೆ ಬೇಂದ್ರೆ ಶೈಲಿ ತನ್ನದೇ ಆದ ಪಾಂಗಿನಿಂದ ಕೂಡಿದೆ. ಜಾನಪದರ ಗ್ರಾಮೀಣತೆ, ಸರಳತೆ, ನಾದ, ಲಯದ ಕುಣಿತ ಆನಂದದ ಭಾಗವಾದ ಬೇಂದ್ರೆಯವರು ಜಾನಪದ ಭಾಷೆಯನ್ನು ಶಿಷ್ಟ ಕಾವ್ಯವನ್ನು ಕಸಿಗೊಳಿಸಲು ಬಳಸಿದ್ದಾರೆ. ಅವರ ಕಾವ್ಯದಲ್ಲಿ ಜಾನಪದ ಭಾಷೆ ಶಿಷ್ಟದ ನಿಯೋಗಕ್ಕೆ ಒಳಗಾಗಿದೆ.[೬೧]

ಬೇಂದ್ರೆ ಅವರ ಕಾವ್ಯ ಶೈಲಿಯನ್ನು ಪ್ರಾರಂಭದ ವಿಮರ್ಶೆಗಳಿಂದಲೂ ಜಾಡು ಹಿಡಿದು ಬಂದಂತೆ ಗಮನಿಸುತ್ತಾ ಬಂದಿರುವುದನ್ನು ಅಧ್ಯಯನ ಮಾಡಲಾಗಿದೆ. ಜನಪದ ಶೈಲಿ, ಧಾರವಾಡ ಶೈಲಿ ಹೀಗೆ ಭಾಷೆ, ಪ್ರದೇಶ ಯಾವುದೇ ಆಯಾಮದಲ್ಲಿ ಬೇಂದ್ರೆ ಅವರ ಕಾವ್ಯದ ಶೈಲಿಯನ್ನು ಕಾಣುವುದು ಒಂದು ಅಧ್ಯಯನವಾಗುತ್ತದೆ. ಆದರೆ ಇದೇ ವಿಚಾರವು ಸಂಶೋಧನೆಗೊಳ್ಳಬೇಕಾದ ಸಾಕಷ್ಟು ದಾರಿಗಳು ತೆರೆಯುತ್ತವೆ. ಈ ದಾರಿಗಳು ಕೇವಲ ಬೇಂದ್ರೆ ಅವರ ಕಾವ್ಯಶೈಲಿಯಾಗಿ ದೊರಕದೆ ಒಂದು ಶತಮಾನದ ಕನ್ನಡ ಕಾವ್ಯಶೈಲಿಯ ಅವಲೋಕನವಾಗಿ ಲಭಿಸುತ್ತದೆ. ಬೇಂದ್ರೆ ಅವರು ಕಾಲ, ಸಾಹಿತ್ಯ ಪಂಥ, ಚಳುವಳಿಯ ಸೀಮೆಗಳನ್ನೂ ಮೀರಿ ತನ್ನದೇ ವೈಶಿಷ್ಟ್ಯತೆಯನ್ನು

ಸಾಧಿಸುತ್ತಾ ಸಾಗುವ ಕವಿಯಾಗಿದ್ದಾರೆ. ಈ ದೃಷ್ಟಿಯಲ್ಲಿ ಕನ್ನಡದ ವಿವಿಧ ವಿಮರ್ಶಕರ ಅಧ್ಯಯನಗಳನ್ನು ಈ ರೀತಿಯಲ್ಲಿ ಗಮನಿಸಬಹುದು.

ಜಿ. ಎಸ್ ಶಿವರುದ್ರಪ್ಪ ಅವರು ಬೇಂದ್ರೆ ಅವರ ಕಾವ್ಯ ಪ್ರತಿಭೆ ಕುರಿತು ಎರಡು ಲೇಖನಗಳನ್ನು ರಚಿಸಿದ್ದಾರೆ. ಇಲ್ಲಿ ಕಾವ್ಯದ ಶೈಲಿಯನ್ನು ಸಾಕಷ್ಟು ಚರ್ಚಿಸಿದ್ದಾರೆ. 'ಕಾವ್ಯ ಸೃಷ್ಟಿ – ಬೇಂದ್ರೆಯವರ ದೃಷ್ಟಿ' ಎಂಬ ಲೇಖನದಲ್ಲಿ ಸೃಷ್ಟಿಯ ರಹಸ್ಯವನ್ನು ಗ್ರಹಿಸಿದಂತೆ ಕಾವ್ಯ ಸೃಷ್ಟಿಯನ್ನು ಬೇಂದ್ರೆ ಅವರ ಅರಿತು ಕಾವ್ಯ ಸೃಷ್ಟಿಸಿದ್ದಾರೆ. ಅದುವೇ ಬೇಂದ್ರೆ ಅವರ ದೃಷ್ಟಿ. ಅದು ಅಮೂರ್ತನೆಲೆಯ ಅನುಭಾವ. ದೊರೆತ ಅನುಭವಗಳಿಗೆ ನೀಡಿದ ರೂಪಕ ಶಕ್ತಿಯ ಆವಿರ್ಭವಿಸುವ ಶಕ್ತಿ ಎಂಬುದಾಗಿ ಗ್ರಹಿಸುತ್ತಾರೆ. ಇಲ್ಲಿ ಬೇಂದ್ರೆ ಅವರ ಕವಿತೆ ಎಂದರೇನು ಎಂಬ ಮುನ್ನುಡಿ, ಲೇಖನಗಳ ಸೂಕ್ಷ್ಮ ಸಂವೇದನೆಗಳನ್ನೇ ಬಳಸಿ ಸೃಷ್ಟಿಯ ದೃಷ್ಟಿಯನ್ನು ಅರಿಯಲು ಪ್ರಯತ್ನಿಸಿದ್ದಾರೆ. ಕವಿಯ ಕವಿತೆಯನ್ನು ಅಧ್ಯಯನ ಮಾಡುವ ಸಹೃದಯತನ ಕೊನೆಗೆ ಕವಿಯ ಕವಿತೆಯಲ್ಲಿಯೇ ಉತ್ತರ ಪಡೆಯುವ ವಿಧಾನವನ್ನು ಗ್ರಹಿಸುತ್ತಾ ಬೇಂದ್ರೆ ಅವರ ಕಾವ್ಯ ಶೈಲಿಯು ಕವಿತೆಯ ಸೃಷ್ಠಿಯಲ್ಲಿಯೇ ಇದೆ ಎಂಬ ತೀರ್ಮಾನಕ್ಕೆ ಬಂದಿದ್ದಾರೆ. ನಾದಲೀಲೆ, ಸಖೀಗೀತ, 'ಗಂಗಾವತರಣ' ಹಾಗೂ 'ಸೂರ್ಯಪಾನ' ಸಂಕಲನಗಳ ಕವಿತೆಗಳು ಈ ಸೃಷ್ಠಿಯೊಳಗಿನ ನೇಪಥ್ಯವನ್ನು ಬೇಂದ್ರೆ ಅವರ ದೃಷ್ಠಿಯಿಂದಲೇ ಕಂಡುಕೊಳ್ಳುತ್ತಾರೆ.

> ಕವಿಯಲ್ಲಿ ಸ್ಫೂರ್ತಗೊಂಡಿದ್ದು: ಮೊದಮೊದಲು ಅಮೂರ್ತವಾಗಿ ಆನಂತರ ಮೂರ್ತಗೊಂಡು ಕವಿಮುಖೇನ ಆವಿರ್ಭವಿಸತಕ್ಕದ್ದು. ಅದು 'ಭವಮಂಥನ ತಂತ್ರ' ಈ ಲೋಕದ ಭಾವಗಳು ಪಡಿನುಡಿದುದು ಮಾತ್ರವಲ್ಲ; ಕವಿಯ ಪ್ರತಿಭೆಯ ಕಡೆಗೋಲು ಈ ಭವವನ್ನು ಕಡೆದದ್ದರಿಂದ ಮೂಡಿದುದು. ಹಾಲನ್ನು ಕಾಯಿಸಿ ಹೆಪ್ಪು ಹಾಕಿ ಕಡೆಗೋಲಿಂದ ಕಡೆದು ಬೆಣ್ಣೆಯನ್ನು ತೆಗೆಯುವಂತೆ, ಕವಿ ಈ ಭವವನ್ನು ಕಡೆದು ಅದರ ಸಾರವನ್ನು ತೆಗೆಯುವ ತಂತ್ರ ಈ ಕಾವ್ಯ. ಹೀಗೆ ಕಂಡದ್ದನ್ನು ಕಂಡರಿಸುವ ತಂತ್ರ ಕವಿಗೆ ಸಿದ್ಧಿಸಿದಾಗ ಅದನ್ನು 'ರೂಪಕಶಕ್ತಿ' ಎನ್ನುತ್ತೇವೆ.[೨]

ಹೀಗೆ ಕವಿತೆಯ ಸೃಷ್ಟಿಯನ್ನು ಜಿ.ಎಸ್. ಶಿವರುದ್ರಪ್ಪ ಅವರು ಕಾಣುವ ವಿಚಾರವೂ ಹಳತಾಗಿದೆ. ಬೇಂದ್ರೆ ಅವರ ಕವಿತೆಯ ವಿಚಾರ ಕುರಿತು ಹಲವು ಲೇಖನಗಳನ್ನು ರಚಿಸಿದ್ದಾರೆ. ಈ ಎಲ್ಲಾ ವಿಚಾರಗಳು ಅಲ್ಲಿ ಹಳತಾಗಿವೆ. ಈ ದೃಷ್ಟಿಯಲ್ಲಿ ಅತ್ಯಂತ ಮಹತ್ವದ ಲೇಖನವಲ್ಲದಿದ್ದರೂ ಪ್ರಚಲಿತ ಲೇಖನವಾಗಿ ಗಮನಿಸಬಹುದು.

ತಿರುಮಲೇಶ್ ಕೆ.ವಿ. ಅವರ 'ಬೇಂದ್ರೆಯವರ ಕಾವ್ಯಶೈಲಿ' ಎಂಬ ಲೇಖನವು ಶೈಲಿಯನ್ನು ಕುರಿತ ವಿಶಾಲವಾದ ಅಧ್ಯಯನವಾಗಿದೆ. ಶೈಲಿ ಎಂದರೇನು, ಭಾಷಾಶಾಸ್ತ್ರದಲ್ಲಿ ಶೈಲಿಯ ಚಿಂತನೆಗಳೇನು, ಸಾಹಿತ್ಯದಲ್ಲಿ ಅದರ ಅಳವಡಿಕೆಯ ವಿಧಾನಗಳಾವುವು, ಪಾಶ್ಚಾತ್ಯ ದೃಷ್ಟಿಕೋನದ ಚರ್ಚೆ, ಬೇಂದ್ರೆ ಅವರ ಸಾಹಿತ್ಯ ಪರಿಸರ, ಭಾಷೆ, ಪ್ರಭಾವಗಳು, ಬೇಂದ್ರೆ ಅವರು ತಮ್ಮ ಕವಿತೆಗಳನ್ನು ಹಾಡುವ ಮೂಲಕ ಅನುಸರಿಸಿದ ಸಾರ್ವಜನಿಕ ಶೈಲಿ, ಪ್ರಾಸ ಅನುಸಂಧಾನ,

ಛಂದೋ ವಿಶ್ಲೇಷಣೆ ಈ ಎಲ್ಲಾ ವಿಚಾರಗಳನ್ನು ಭಾಷಾಧ್ಯಯನದ ಚಿಂತನೆಯಲ್ಲಿ ಗ್ರಹಿಸಿದ್ದಾರೆ. ಬೇಂದ್ರೆ ಅವರ ಕಾವ್ಯ ಶೈಲಿಯನ್ನು ಒಂದು ಪ್ರತ್ಯೇಕ ಅಧ್ಯಯನದಂತೆ ನಿರೂಪಿಸಿದ ಲೇಖನವಿದು.

> ಕಾವ್ಯದ ಬಗೆಗಿನ ನಮ್ಮ ನಿರಂತರ ಆಸಕ್ತಿಗೆ ಕಾವ್ಯ ಶೈಲಿಯ ನಿಗೂಢತೆಯೂ ಒಂದು ಕಾರಣವೆಂದು ನನ್ನ ನಂಬಿಕೆ. ಕಾವ್ಯ ಎಂದಿಗೆ ತನ್ನ ಒಳಗನ್ನು ಪೂರ್ಣವಾಗಿ ಬಿಟ್ಟುಕೊಡುತ್ತದೋ ಅಂದೇ ಅದು ಅವಸಾನವೂ ಆಗುತ್ತದೆ. ಆದ್ದರಿಂದ ಒಬ್ಬ ಕವಿಯ ಶೈಲಿಯ ಬಗ್ಗೆ ಮಾತಾನಾಡುವುದೆಂದರೆ ಈ ನಿಗೂಢತೆಯೊಳಗೆ ಇಣುಕಿ ನೋಡುವ ಯತ್ನವೇ ಹೊರೆತು ಇದಕ್ಕಿಂತ ಹೆಚ್ಚಿನದಲ್ಲವೆಂದು ತಿಳಿಯಬೇಕು. ಇಂಥ ನೋಟದಲ್ಲಿ ಎಲ್ಲವನ್ನೂ ಕಾಣಲಾರೆವು; ಆದರೆ ನಾವು ಕಂಡುದು ಕಾವ್ಯವನ್ನು ಅರ್ಥಮಾಡಿಕೊಳ್ಳುವುದಕ್ಕೆ ಸಹಾಯಕವಾಗಬಹುದು.[೬೩]

ಕೃತಿಯ ಬಗ್ಗೆ ಸ್ಪಂದಿಸಲು ಇರುವ ಹಲವು ಕಾರಣಗಳಂತೆ ಶೈಲಿಯೂ ಒಂದಂಶವಾಗಿ ಗ್ರಹಿಸಿದ್ದಾರೆ. ಭಾಷಾಶಾಸ್ತ್ರದಲ್ಲಿ ಬರುವ ಶೈಲಿಶಾಸ್ತ್ರದ ಚಿಂತನೆ ಕೂಡ ಇಲ್ಲಿದೆ. ಮಧುರ ಚೆನ್ನ ಹಾಗೂ ಶಂಕರಮೊಕಾಶಿ ಪುಣೇಕರ ಅವರು ಈ ವಿಚಾರಗಳನ್ನು ಬೇಂದ್ರೆ ಸಾಹಿತ್ಯದ ಭಾಷಾಶಾಸ್ತ್ರ, ಕಾವ್ಯಮೀಮಾಂಸೆಯ ನೆಲೆಯಲ್ಲಿ ಚರ್ಚಿಸಿರುವುದನ್ನು ಗಮನಿಸಿದ್ದೇವೆ. ಪ್ರತಿಯೊಬ್ಬ ಬರಹಗಾರನಿಗೂ ಜನಪದ ಭಾಷೆಯ ನೆರವು ವಿಶೇಷವಾದುದು. ಕಾವ್ಯ ಬರೆಯಲು ಸಿದ್ಧಭಾಷೆಯ ನೆರವಿಲ್ಲದ ಕಾಲಘಟ್ಟದಲ್ಲಿ ಬೇಂದ್ರೆ ಕವಿತೆಗಳು ರಚನೆಗೊಂಡವೆಂಬ ಕುರ್ತಕೋಟಿ ಅವರ ಮಾತಿನಿಂದ ಕನ್ನಡದ ಪ್ರಾರಂಭದ ಸಾಹಿತ್ಯದ ಹೆಜ್ಜೆಗಳನ್ನು ಪರಿಶೀಲಿಸಿದ್ದಾರೆ.

ಪ್ರಾಸದ ವಿಚಾರವನ್ನು ಗಮನಿಸುತ್ತಾ..

> ಬೇಂದ್ರೆ ಜನಪದ ಭಾಷೆಯನ್ನು ಉಪಯೋಗಿಸಿಕೊಂಡುದರ ಒಂದು ಪರಿಣಾಮವೆಂದರೆ ಅದು ಅವರಿಗೆ ಹೇರಳವಾದ ಪ್ರಾಸ ಸಾಧ್ಯತೆಗಳನ್ನು ಒದಗಿಸಿಕೊಟ್ಟಿತು. ಒಂದು ಭಾಷೆಯ ಶಬ್ದ ಸಂಪತ್ತು, ನುಡಿಗಟ್ಟು ಹೆಚ್ಚಾಗಿದ್ದಷ್ಟೂ ಇಂಥ ಸಾಧ್ಯತೆಗಳೂ ಹೆಚ್ಚು. ... ಬೇಂದ್ರೆಗೆ ಪದಗಳೆಂದರೆ ಬಾಗಿಲ ಹಾಗೆ. ಒಂದೊಂದು ಪದವನ್ನು ತೆಗೆಯುವಾಗಲೂ ಅವರು ಒಂದೊಂದು ಬಾಗಿಲನ್ನು ತಟ್ಟುವಂತೆ ತೋರುತ್ತದೆ. ಆದ್ದರಿಂದಲೇ ಬೇಂದ್ರೆಯವರ ಕವಿತೆಗಳನ್ನೊದುವುದೆಂದರೆ ಒಂದು ಬೆಳಕಿನ ಲೋಕವನ್ನು ಹೊಕ್ಕಂತೆ.[೬೪]

ಬೇಂದ್ರೆ ಅವರ ಸಮಗ್ರಕಾವ್ಯವನ್ನು ಅವಲೋಕಿಸುತ್ತಾ ಕಾವ್ಯ ವಿಧಾನವನ್ನೂ, ಅದರ ತಾತ್ವಿಕತೆಯನ್ನು ಗ್ರಹಿಸಿದ್ದಾರೆ. ಬೇಂದ್ರೆ ಅವರು ಭಾಷೆ ಕೂಡ ಮಿತಿ ಎನಿಸಿದಾಗ ಸಂಖ್ಯಾಶಾಸ್ತ್ರದ ಅನಂತ ಸಾಧ್ಯತೆಗಳ ಕಡೆಗೆ ಹೊರಳಿದರೆಂಬ ಚರ್ಚೆಯನ್ನು ನಾಕುತಂತಿ ಹಾಗೂ ಬಾಲಬೋಧೆ ಸಂಕಲನಗಳ ಕವಿತೆಗಳೊಂದಿಗೆ ಚರ್ಚಿಸಿದ್ದಾರೆ.

ಪು.ತಿ.ನ. ಅವರ ಚಿಂತನೆ

'ನಾದಲೀಲೆ' ಕುರಿತು ಸಾಕಷ್ಟು ಚರ್ಚೆಗಳ ನಂತರ ಪು. ತಿ. ನರಸಿಂಹಾಚಾರ್ ಅವರು ೧೯೮೮ರಲ್ಲಿ ದ.ರಾ ಬೇಂದ್ರೆ ರಾಜ್ಯಮಟ್ಟದ ವಿಚಾರ ಸಂಕಿರಣದಲ್ಲಿ ಉದ್ಘಾಟನಾ ಭಾಷಣದಲ್ಲಿ ದೀರ್ಘವಾಗಿ ಚರ್ಚಿಸಿದ್ದಾರೆ. ಇಲ್ಲಿ ಕೃತಿಯ ಚರ್ಚೆಗಿಂತ ಕನ್ನಡ ಸಾಹಿತ್ಯದಲ್ಲಿ ಕಾವ್ಯವನ್ನು

ಕುರಿತು ಅಧ್ಯಯನದ ದೃಷ್ಟಿಕೋನಗಳನ್ನು ಕುರಿತು ಚರ್ಚಿಸುತ್ತಾ ಬೇಂದ್ರೆ ಅವರ ಕಾವ್ಯ ಕುತೂಹಲವನ್ನು ತಿಳಿಸುತ್ತಾರೆ. ಸಹೃದಯತೆಯಿಂದ ಕಾವ್ಯದ ಆಸ್ವಾದ ಮಾತ್ರ ಸಾಧ್ಯವೆಂಬ ಬೇಂದ್ರೆ ಅವರ ಮುನ್ನುಡಿಗಳ ತೀರ್ಮಾನದಂತೆ ಪು.ತಿ.ನ. ಅವರು ಆ ಆಸ್ವಾದದ ಬಗೆಯನ್ನು ಇಲ್ಲಿ ಅಥೈಸಿದ್ದಾರೆ. ಈ ಕಾವ್ಯಾನುಭವದ ಬಗ್ಗೆ ಒಂದು ನಿಲುವಿಗೆ ಬಂದಿಲ್ಲವೆಂಬ ಬೇಸರದಲ್ಲಿಯೇ ಕಾವ್ಯಾಸ್ವಾದ ಕುರಿತು ಒಂದು ವಿಶಿಷ್ಟ ಚರ್ಚೆಯನ್ನು ಮಂಡಿಸಿದ್ದಾರೆ. ಅಭಿನವಗುಪ್ತನ ಆನಂದ ಸ್ಥಿತಿಯ ವ್ಯಾಖ್ಯಾನದಂತೆ ಆನಂದದ ಬದಲು ಅನನ್ಯ ಎಂಬುದನ್ನು ಬಳಸುತ್ತಾ ಈ ರೀತಿ ಹೇಳಿದ್ದಾರೆ.

> ಅಲಂಕಾರಿಕರೂ ತಮ್ಮ ಲಕ್ಷ್ಯಗಳನ್ನು ಋಷಿಕಲ್ಪಿತ ಕಾವ್ಯಗಳಿಂದಾಗಲಿ, ಶ್ರುತಿಯಿಂದಾಗಲಿ ಆರಿಸಿಕೊಳ್ಳಲಿಲ್ಲ. ಈ ಕ್ಷೇತ್ರಗಳಿಗೆ ಕೈ ಹಾಕುವುದು ಇತ್ತೀಚಿನ ಪ್ರವೃತ್ತಿಯೆಂದು ತೋರುತ್ತದೆ. ಆದರೆ ಎಲ್ಲ ಕವಿಗಳ ಕೃತಿಗಳಲ್ಲೂ ಈ ನಾಲ್ಕನೆಯ ಲಕ್ಷಣಕ್ಕೆ ಹೊಂದುವ ಕಾವ್ಯ ಭಾಗಗಳನ್ನು ಆರಿಸಿಕೊಂಡರೆ ನವೋದಯ–ನವ್ಯ–ಪ್ರಗತಿ–ಬಂಡಾಯ–ದಲಿತ ಮುಂತಾದ ವಿಭೇದಗಳು ಲಯವಾಗಿ ಕಾವ್ಯಾಸ್ವಾದವೆಮಬ ವಿಲಕ್ಷಣ ಅನುಭವ ನಮಗಾಗುತ್ತದೆ. ಇಂಥ ವಿಲಕ್ಷಣವಾದ ಅನುಭವವನ್ನು ನಮಗೆ ಕೊಡುವಂಥ ಅನೇಕ ಪದ್ಯಗಳನ್ನು ಸರಸ್ವತಿದೇವಿ ಶ್ರೀ ಅಂಬಿಕಾತನಯದತ್ತರ ಮೂಲಕ ನಮಗೆ ಕರುಣಿಸಿ, ನಮ್ಮ ಆತ್ಮಸಂಪತ್ತಿಯನ್ನು ಹೆಚ್ಚಿಸಿದ್ದಾಳೆ.[೩೫]

ಅಧ್ಯಯನದಲ್ಲಿ ಈ ಸಾಹಿತ್ಯ ಕಾಲಘಟ್ಟಗಳಂತೆ ಚರಿತ್ರೆಯನ್ನು ನಿರೂಪಿಸಿರುವ ಬಗೆಗಳು ಇಲ್ಲವಾಗಿ ಕಾವ್ಯ ಆಸ್ವಾದವಾಗುತ್ತದೆ ಎಂದು ಪು.ತಿ.ನ. ಅವರು ೧೯೮೮ರ ಕಾಲಘಟ್ಟದಲ್ಲಿಯೇ ಹೇಳಿದರೂ ನಾವಿನ್ನು ಈ ವಿಚಾರವನ್ನು ಮುಖ್ಯವಾಗಿ ಒಂದು ಸಮಸ್ಯೆಯಂತೆ ಪರಿಗಣಿಸಿ ಯಾವುದೇ ಸಂಶೋಧನೆಗಳನ್ನು ನಡೆಸಿ ಒಂದು ತೀರ್ಮಾನ ಕೈಗೊಂಡಿಲ್ಲ. ಇಂದಿಗೂ ಸಾಹಿತ್ಯ ಚರಿತ್ರೆಗಳು ಅಧ್ಯಯನದ ತೊಡಕುಗಳನ್ನೇ ಬೋಧಿಸುತ್ತಿವೆ. ಇವುಗಳೇ ಉದ್ಯೋಗದ ಹಾದಿಗಳಾಗಿಯೂ ರಚನೆಗೊಂಡಿವೆ. ಇವುಗಳಾಚೆ ನಿಂತು ಅಲೋಚಿಸಿದಾಗ ಮಾತ್ರ ನಿಜವಾದ ಸಾಹಿತ್ಯದ ಆಸ್ವಾದ ದೊರಕಲು ಸಾಧ್ಯ ಎನಿಸುತ್ತದೆ.

> ಬೇಂದ್ರೆಯವರ ನುಡಿತಗಳ ಮತ್ತೊಂದು ಗುಣವೇನೆಂದರೆ – ಸಮಾಜದ ಎಲ್ಲಾ ವರ್ಗಗಳ ಎಲ್ಲ ಸ್ಥರಗಳಲ್ಲೂ ಅವು ಸಂತೋಷಕೊಡುತ್ತ ನಿನದಿಸುತ್ತವೆ. ಈ ಪ್ರಾಶಸ್ತ್ಯ ಅವಕ್ಕೆ ಬಂದಿರುವುದು ಅವುಗಳ 'ರೀತಿ'ಯಿಂದ, ಕನ್ನಡ ನಾಡಿನ ಸಮಾಜದ ಎಲ್ಲ ವರ್ಗಗಳ ಎಲ್ಲ ಸ್ಥರದಲ್ಲೂ ಕೇಳಿ ಬರುವ ಮಾತುಗಳನ್ನು ಹೇರಳವಾಗಿ, ನಿರರ್ಗಳವಾಗಿ, ಅಲಂಕಾರಯುಕ್ತವಾಗಿ, ಚಮತ್ಕಾರಯುತ ವಾಗಿ ಚಿತ್ರ ವಿಚಿತ್ರ ಲಯಗಳಲ್ಲಿ ಬಳಸಿ ಕೃತಿ ರಚನೆ ಮಾಡಿದ್ದಾರೆ. ಆಡು ಮಾತಿನ ಜಾನಪದಿಗರ ಶೈಲಿಯೂ, ಶಿಷ್ಟಭಾಷೆಯೂ, ಅರ್ಥಗಳನ್ನೂ ಭಾವಗಳನ್ನೂ ಹೊಳೆಯಿಸುವುದರಲ್ಲಿ ಒಂದು ಮೇಲಲ್ಲ, ಒಂದು ಕೀಳಲ್ಲ. ಬೇಂದ್ರೆಯವರ ಶೈಲಿಯನ್ನು ಕುರಿತೇ ಒಂದು ವಿಶಿಷ್ಟ ಪ್ರಬಂಧವನ್ನು ತಜ್ಞರು ಬರೆಯಬಹುದು. ಎಲ್ಲ ರಚನೆಯ ಹಿಂದೆಯೂ ಒಂದು ಅಸಾಧಾರಣ ಚೈತನ್ಯದ ಹೊರಸೂಸಿಕೆ ಇದೆ. ಇನ್ನು ವಿಸ್ತರಿಸುವುದು ಬೇಡ. ಕನ್ನಡ ನಾಡಿನ ಪಂಥಗಳ ಕವಿಗಳೂ, ಸಾಹಿತಿಗಳೂ, ವಿಮರ್ಶಕರೂ

ಈ ಅಸಾಧಾರಣವೂ ವಿಶಿಷ್ಟವೂ ಆದ ಚೈತನ್ಯದ ಹೊಳಪಿಗೆ ಮರುಳಾಗಿದ್ದಾರೆ. ಇದು ಕನ್ನಡ ಜನ ಭಾವಯತ್ರಿ ಪ್ರತಿಭೆಗೆ ಆಕರರು, ಗುಣಜ್ಞರು ಎಂಬುದನ್ನು ತೋರಿಸುತ್ತದೆ.[೬೬]

ಇಲ್ಲಿ ಪು.ತಿ.ನ. ಅವರು ಗುರ್ತಿಸುತ್ತಿರುವುದು ಬೇಂದ್ರೆ ಅವರ ಕಾವ್ಯಶೈಲಿ ಮಾತ್ರ ಆಗಿರದೇ ಕನ್ನಡದ ಕಾವ್ಯಶೈಲಿಯನ್ನು ಗುರ್ತಿಸುತ್ತಾರೆ. ಕಾವ್ಯಶೈಲಿ ಸತ್ವ ವಿಶಿಷ್ಟವಾಗಿದ್ದರೆ ಸಹೃದಯ ತಾನಾಗಿಯೇ ಆಕರ್ಷಿತನಾಗುತ್ತಾನೆ ಎಂಬ ತೀರ್ಮಾನಕ್ಕೆ ಬರುತ್ತಾರೆ. ಮಾಸ್ತಿ ಅವರು ಬೇಂದ್ರೆ ಅವರ ಕಾವ್ಯ ಓದುವ ಶೈಲಿಯನ್ನೇ 'ಗಾರುಡಿಗ' ಎಂದು ಗುರ್ತಿಸಿದರೆ ಪು.ತಿ.ನ. ಅವರು 'ಅಸಾಧಾರಣ ಚೈತನ್ಯ'ವೆಂದು ಗುರ್ತಿಸಿದ್ದಾರೆ. ಈ ಕಾರಣದಿಂದ ಬೇಂದ್ರೆ ಅವರ ಸಾಹಿತ್ಯದ ಅಧ್ಯಯನವು ಸಾಕಷ್ಟು ಅರ್ಥಗಳನ್ನು ಹೊಸದಾಗಿ ಸ್ಫುರಿಸುತ್ತಿದೆ ಎಂದು ಗಮನಿಸಬಹುದು.

ಮಾಸ್ತಿ ಅವರ ಮುನ್ನುಡಿಯು ಕನ್ನಡ ಕಾವ್ಯದ ಸ್ವರೂಪವನ್ನು ಗ್ರಹಿಸುತ್ತಾ ಬೇಂದ್ರೆ ಅವರ ಕಾವ್ಯ ಪ್ರವೇಶಿಕೆಗೆ ಒಂದು ಹಿನ್ನಲೆಯ ಸ್ವರೂಪವನ್ನು ಹಾಗೂ ಕೀಲಿಕೈಗಳ ಕುರುಹುಗಳನ್ನು ಪರಿಚಯಿಸುತ್ತಾರೆ. ಈ ಸ್ವರೂಪದ ಹಿನ್ನೆಲೆಯಲ್ಲಿ ಶಂಕರ ಮೊಕಾಶಿ ಪುಣೇಕರ ಅವರ 'ಬೇಂದ್ರೆಯವರ ಕಾವ್ಯಾಭ್ಯಾಸ' ಎಂಬ ಲೇಖನವನ್ನು ಅಧ್ಯಯನ ಮಾಡುವುದು ಸೂಕ್ತವಾಗಿ ಕಾಣುತ್ತದೆ. ಮೊಕಾಶಿ ಅವರು ತಮ್ಮ 'ಬೇಂದ್ರೆ ಕಾವ್ಯಮೀಮಾಂಸೆ' ಕೃತಿಯ ಮುಂದುವರಿದ ಚಿಂತನೆಯಂತೆ ಈ ಲೇಖನ ರಚಿಸಿದ್ದರೂ ಓದುವಿನ ಹಲವು ಸಮಸ್ಯೆಗಳನ್ನು ಗುರ್ತಿಸುವ ಚಿಂತನೆ ಇಲ್ಲಿದೆ.

ವಸ್ತುವಿನಷ್ಟೇ ಗಾಬರಿಗೊಳಿಸುವ ವೈವಿಧ್ಯ ಬೇಂದ್ರೆಯವರು ಬಳಸಿದ ಶೈಲಿ, ಭಾಷೆ, ಛಂದಸ್ಸುಗಳಲ್ಲಿ ಸಿಗುತ್ತದೆ. ಇದನ್ನೂ ಎರಡು ಬಗೆಯಲ್ಲಿ ಅಭ್ಯಾಸ ಮಾಡಬಹುದು. ಭಾಷೆ ಛಂದಸ್ಸು ಬೇಂದ್ರೆಯವರಿಂದಲೇ ಹೊರಟಂತೆ ಒಂದು. ಬೇಂದ್ರೆ ಅವರ ಭಾಷೆ ಜನಪದ ಸಾಹಿತ್ಯದ್ದು. ಎಂದು ಕಣ್ಮುಚ್ಚಿ ಹೇಳಿ ಕೈ ಊರಿಕೊಡುವ ಬೀದಿ ವಿಮರ್ಶಕರು ಕಾವ್ಯಾಭ್ಯಾಸಕ್ಕೆ ಬಹಳ ಹಾನಿಯನ್ನು ಮಾಡಿದ್ದಾರೆ. ಭಾವಗೀತಕಾರರಾದ, ಬೇಂದ್ರೆ ಅವರು ಆಯಾ ಭಾಷೆಯ ಸೊಬಗನ್ನು ಹೃತ್ಕರಿಸಿಕೊಂಡು ಬರೆಯುವುದು ಸಹಜ. ಆದರೆ ಅದನ್ನು ಮಾಡುವುದಕ್ಕೂ ದೊಡ್ಡ ಮನಸ್ಸು ಬೇಕೆಂಬುದು, ಕೇವಲ ದೇಸಿಯೆಂದು ಮೂಲೆಗೆ ಬಿದ್ದ ಭಾಷೆಯಲ್ಲಿ ಪ್ರಚಂಡವಾದ ವಿಚಾರಗಳನ್ನು ತುಂಬುವುದು ಶಕ್ಯವಿದೆಂಬುದನ್ನು ಕಾಣುವುದು, ಮೂಲಕವಿಯಲ್ಲಿ ಸಿಗಬೇಕಾದ ಗುಣಗಳೇ ಹೊರೆತು ಇನ್ನೆಲ್ಲಿ ಸಿಗಲಾರವು. ಪರಿಣಾಮತಃ ನೋಡಲಾಗಿ ಇನ್ನೂ ದೊಡ್ಡ ಫಲಗಳು ಕಾಣಿಸಬರುತ್ತವೆ. ಕನ್ನಡ ಕಾವ್ಯದ ದಿಕ್ಕೇ ಬದಲಾಗಿದೆ, ಸತ್ವವೇ ಬದಲಾಗಿದೆ, ಬಳಕೆಯ ಮಾತು ಕಾವ್ಯಮಯ ವಿಚಾರಗಳನ್ನು ನಿರರ್ಗಳವಾಗಿ ವ್ಯಕ್ತಗೊಳಿಸತೊಡಗಿದೆ. ಈ ಪ್ರಘಾತಕ್ಕೂ ಮೂಲ ಕಾರಣರು ಬೇಂದ್ರೆ ಅವರೇ ಎಂಬ ನಿರ್ವಿವಾದ ಐತಿಹಾಸಿಕ ಮಹತ್ವವನ್ನು ಮುಂದಿನ ಪೀಳಿಗೆಯು ಅರಿತುಕೊಳ್ಳಬೇಕಾದೀತು.[೬೭]

ಈ ಸುದೀರ್ಘವಾದ ವಿವರಣೆಯು ಬೇಂದ್ರೆ ಅವರ ಕಾವ್ಯದ ಅಭ್ಯಾಸದ ಕೊರತೆಯನ್ನು ಚಿಂತನಾ ಕ್ರಮವನ್ನು ತಿಳಿಸುತ್ತದೆ. ಬೇಂದ್ರೆ ಅವರದು 'ಹುಸಿ ಸಂಸ್ಕೃತಿ' ಎನ್ನುವ ವಿಮರ್ಶಕರಿಗೆ ಇಲ್ಲಿ ಸರಿಯಾದ ಉತ್ತರವಿದೆ. ಅಧ್ಯಯನದ ಕ್ರಮದಲ್ಲಿ ನನಗೂ ಇಂತಹ ಸಾಕಷ್ಟು ತೊಡಕುಗಳು

ಎದುರಾಗಿವೆ. ಕೆಲವು ಲೇಖನಗಳು, ಹಾಗೂ ಲೇಖಕರು ಬೀದಿ ವಿಮರ್ಶಕರಂತೆ ಬರಹಗಳನ್ನು ಪುಸ್ತಕರೂಪದಲ್ಲಿ ತುಂಬುವ ಗ್ರಹಿಕೆಗಳನ್ನು ಸಂಶೋಧನೆಗೆ ನಾನು ಇಲ್ಲಿ ಯಾವುದೇ ರೀತಿಯ ಅಧ್ಯಯನ ಮಾರ್ಗದಲ್ಲಿಯೂ ಬಳಸಿಲ್ಲ. ಅವುಗಳ ಅಧ್ಯಯನದಲ್ಲಿಯೇ ಬರಹದ ಸೋಲಿರುವಾಗ ಆ ಸೋಲನ್ನು ಸುಳ್ಳಾಗಿ ಮುಂದುವರೆಸುವ ಅಭ್ಯಾಸವನ್ನು ನನ್ನ ಪ್ರಬಂಧದಲ್ಲಿ ಎಲ್ಲಿಯೂ ಮಾಡದೆ ಎಚ್ಚರವಹಿಸಿದ್ದೇನೆ.

ಈ ಅಂಶಗಳು ಸ್ವರೂಪ ಹಾಗೂ ಅಧ್ಯಯನಗಳಾದರೆ ಈಗಾಗಲೇ ಚರ್ಚಿಸಿರುವ ಪು.ತಿ.ನ. ಅವರ ಲೇಖನವು ಮೊಕಾಶಿ ಅವರ ಲೇಖನಕ್ಕೆ ಸೂಕ್ತ ಕಾರಣಗಳನ್ನು ತಿಳಿಸುತ್ತದೆ. ಹೊಸಗನ್ನಡ ಉದಯದಿಂದಲೂ ನಿಜವಾದ ಕಾವ್ಯ ಆಸ್ವಾದಗಳು ಜರುಗಿಲ್ಲ, ಎಷ್ಟೋ ಸಹೃದಯರಿಗೆ ಈ ಕ್ರಿಯೆಯೇ ತಿಳಿದಿಲ್ಲವೆನ್ನುವರು. ಬೇಂದ್ರೆ ಅವರು ಸಹೃದಯರಿಗಾಗಿ ಹಲವು ಮಾದರಿಗಳ ಮೂಲಕ ಕಾವ್ಯ ತಲುಪಿಸುವ ಪರಿಚಾರಿಕೆಯನ್ನು ಹೊತ್ತಿದ್ದರು. ಆದರೆ ಆ ಕೀಲಿಗಳನ್ನು ಬಳಸದೇ ಕಾವ್ಯಾಸ್ವಾದದ ರುಚಿಯೇ ದೊರೆತಿಲ್ಲವೆಂಬ ನಿರ್ಧಾರಕ್ಕೆ ಬರುತ್ತಾರೆ. ಬೇಂದ್ರೆ ಮೊದಲಿನಿಂದಲೂ ಕಾವ್ಯ ಬರೆದದ್ದು, ಓದಿ ಹೇಳಿದ್ದು ಎಲ್ಲವೂ ಸಹೃದಯರಿಗಾಗಿ ಅವುಗಳ ಫಲಿತವೇ ನಮ್ಮ ಸಂಶೋಧನೆಯ ತಾತ್ವಿಕ ಸ್ವರೂಪಗಳು ಎನ್ನಬಹುದು.

ವಸಾಹತು ಪ್ರಭಾವ ಹಾಗೂ ಬೇಂದ್ರೆ

ವಸಾಹತು ಸಂದರ್ಭವು ಪ್ರತಿಕ್ರಿಯಿಸಿದ ಸಾಂಸ್ಕೃತಿಕ ಮುಖಾಮುಖಿಯನ್ನು ಬೇಂದ್ರೆ ಅವರ ಕಾವ್ಯದ ಮೂಲಕ ಅಧ್ಯಯನಮಾಡಬಹುದು. ಪ್ರಸ್ತುತ ಸಮಾಜದ ಪ್ರಶ್ನೆಗಳಿಗೂ ಹಲವು ರೀತಿಯ ಹೊಸ ಆಯಾಮಗಳು ಕಾಣುತ್ತವೆ. 'ಸಾಂಸ್ಕೃತಿಕ ಮುಖಾಮುಖಿ : ವಸಾಹತು ಸಂದರ್ಭ' ಎಂಬ ರಾಜಾರಾಮ ಹೆಗಡೆಯವರ ಲೇಖನವನ್ನು ಮೊದಲಿಗೆ ಈ ಅಧ್ಯಯನದ ವಿಸ್ತರಣೆಗಾಗಿ ಅಧ್ಯಯನಮಾಡಬಹುದು. ವಸಾಹತು ಹಾಗೂ ವಸಾಹತೋತ್ತರ ಚಿಂತನೆಗಳು ಉಂಟುಮಾಡಿದ ವಾಗ್ವಾದಗಳು ಸಾಂಸ್ಕೃತಿಕವಾಗಿ ಪಲ್ಲಟಗಳನ್ನು ಸೃಷ್ಟಿಸಿದವು ಈ ಕುರಿತ ರಾಜಾರಾಮ ಹೆಗಡೆ ಅವರ ಚಿಂತನೆ ವಿಶೇಷವಾದುದು.

> "ವಿಭಿನ್ನ ಹಿತಾಸಕ್ತಿಯ ಗುಂಪುಗಳು ತಂತಮ್ಮ ವಾಸ್ತವ ಮತ್ತು ಭವಿಷ್ಯದ ಸ್ಥಾನಮಾನ ಅಥವಾ ಪ್ರಭುತ್ವದಲ್ಲಿನ ಪಾತ್ರದ ಕುರಿತು 'ರಾಷ್ಟ' ಕಲ್ಪನೆಯನ್ನು ಬೆಳಸಿದವು. ತಂತಮ್ಮದೇ ಆದ ದಾಸ್ಯ ಮತ್ತು ಆಳ್ವಿಕೆಯ ಪರಿಭಾಷೆಯನ್ನು ರೂಪಿಸಿದವು. ಇವೆಲ್ಲಾ ಕೇವಲ ಸಾಂಸ್ಕೃತಿಕ ಕಥನಗಳಾಗದೇ, ವಾಸ್ತವದ ವೈರುಧ್ಯಗಳ ಅಭಿವ್ಯಕ್ತಿಗಳು ಕೂಡ ಆದವು. 'ರಾಷ್ಟ್ರ' ಎಂಬುದೊಂದು ಪಾಶ್ಚಾತ್ಯ ಪರಿಕಲ್ಪನೆಯ ಸ್ವಾತಂತ್ರ್ಯ, ಸಮಾನತೆ ಮುಂತಾದ ಸ್ವಯಂತಂತ್ರವಾದೀ ಮೌಲ್ಯಗಳನ್ನು ಆಚರಿಸುವ ಪ್ರಭುತ್ವವಾದಲ್ಲಿ ಅದಕ್ಕಾಗಿ ಈವರೆಗೆ ಬೆಳೆದು ಬಂದ ಸಮಾಜ ಮತ್ತು ಸಾಂಪ್ರದಾಯಿಕ ಸಂಬಂಧಗಳು ಕೂಡ ಬದಲಾಗಬೇಕಾಗುತ್ತದೆ." (ರಾಘವೇಂದ್ರ ಪಾಟೀಲ., ಸಾಹಿತ್ಯ ಸಂವಾದ: ೬೦-೬೧, ಜನವರಿ-ಮಾರ್ಚ್ ೨೦೦೫., ಸಾಂಸ್ಕೃತಿಕ ಮುಖಾಮುಖಿ : ವಸಾಹತು ಸಂದರ್ಭ., ರಾಜಾರಾಮ ಹೆಗಡೆ., ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ, ಪುಟ ಸಂಖ್ಯೆ ೧೩)

ಈ ಚಿಂತನೆಗಳನ್ನು ಕಾವ್ಯದ ನೆಲೆಯಲ್ಲಿ ಬೇಂದ್ರೆ ಅವರು ಗ್ರಹಿಸಿದ್ದರು. ಹಲವು ವಿಮರ್ಶಕರು ಈ ನೆಲೆಯಲ್ಲಿ ಅಧ್ಯಯನಮಾಡಿರುವುದನ್ನು ಗಮನಿಸಬಹುದು.

ಈ ಶತಮಾನದ ಕಾವ್ಯಾವಲೋಕನದಂತೆ ಶಿವರುದ್ರಪ್ಪ ಜಿ. ಎಸ್. ಅವರು 'ದೇಸೀಯತೆಯಲ್ಲಿ ಬೇರೂರಿ ಅರಳಿದ ದತ್ತ ಪ್ರತಿಭೆ' ಎಂಬ ಈ ಲೇಖನವು ಶತಮಾನದ ಸಾಹಿತ್ಯ ಚಿಂತನೆಯನ್ನು ಸೂಕ್ಷ್ಮ ಕುರುಹುಗಳ ಮೂಲಕ ಅರ್ಥೈಸಿದೆ. ಕಾವ್ಯದ ಅಭಿವ್ಯಕ್ತಿಕ್ರಮವನ್ನು ಬೇಂದ್ರೆ ಅವರ ಪ್ರವೇಶಿಕೆಯ ಬರಹಗಳಿಂದಲೇ ಗ್ರಹಿಸುವ ಶಿವರುದ್ರಪ್ಪನವರು ವಸಾಹತುಶಾಹಿ ಪ್ರಭಾವವನ್ನು ಮುಖ್ಯವಾಗಿ ಪರಿಗಣಿಸಿದ್ದಾರೆ. ಈ ಚಿಂತನೆಯಲ್ಲಿ ಕನ್ನಡ ಸಾಹಿತ್ಯದ ರಚನಾಕ್ರಮದ ಅವಲೋಕನೆಯೂ ಅಡಗಿದೆ. ಬಿ.ಎಂ.ಶ್ರೀಕಂಠಯ್ಯ ಅವರು 'ಕನ್ನಡದ ಪುನರುಜ್ಜೀವನ' ಲೇಖನದಲ್ಲಿ ಭಾರತೀಯ ಸಾಹಿತ್ಯ ಹಾಗೂ ಕನ್ನಡ ಸಾಹಿತ್ಯದ ಮೇಲೆ ಉಂಟಾದ ಪ್ರಭಾವಗಳನ್ನು ಚರ್ಚಿಸಿದ್ದಾರೆ. ಜವಾಬ್ದಾರಿಗಳನ್ನು ಕುರಿತು ಎಚ್ಚರಿಸಿದ್ದಾರೆ. ಆದರೆ ಈ ಕಾಲದ ಜೊತೆಗೆ ಉಂಟಾದ ಬದಲಾವಣೆ ಕುರಿತು ಶಿವರುದ್ರಪ್ಪ ಅವರು ಮುಂದುವರೆದ ಚಿಂತನೆಯಂತೆ ಗಮನಿಸಿದ್ದಾರೆ

> ಭಾರತ ಚರಿತ್ರೆಯಲ್ಲಿ ರಾಜಕೀಯ ದೃಷ್ಟಿಯಿಂದ 'ವಸಾಹತುಶಾಹೀ ಸಂದರ್ಭ'ವೆಂದೂ, ಸಾಂಸ್ಕೃತಿಕವಾಗಿ ಪುನರುಜ್ಜೀವನ(ರೀನೇಸಾನ್ಸ್)ಕಾಲವೆಂದೂ ಕರೆಯಲಾಗುವ ಈ ಕಾಲಮಾನದಲ್ಲಿ ವಿವಿಧ ಭಾರತೀಯ ಪ್ರಾದೇಶಿಕ ಸಾಹಿತ್ಯಗಳ ಹಾಗೆ ಕನ್ನಡವೂ ತನ್ನ ಗ್ರಹಿಕೆಯ ಕ್ರಮಗಳಲ್ಲಿ ಅಭಿವ್ಯಕ್ತಿ ಹಾಗೂ ತಂತ್ರಗಳಲ್ಲಿ ಬದಲಾದದ್ದಕ್ಕೆ ಕಾರಣ, ಅದು ಪಶ್ಚಿಮದ ಸಾಹಿತ್ಯದೊಂದಿಗೆ ಪಡೆದುಕೊಂಡ ಸಂಪರ್ಕ ಹಾಗೂ ಅದಕ್ಕೆ ತೋರಿದ ಸೃಜನಶೀಲ ಮನಸ್ಸು ಈ ಸಂದರ್ಭದಲ್ಲಿ, ತಾನು ಹೊಸತಾಗುವುದಕ್ಕೆ ಪಶ್ಚಿಮದ ಪ್ರೇರಣೆ–ಪ್ರಭಾವಗಳಿಗೆ ತೋರಿದ ಪ್ರತಿಕ್ರಿಯೆಯ ಸ್ವರೂಪವೇನು ಅನ್ನುವುದು ಸ್ವಾರಸ್ಯವಾಗಿದೆ. ...ವಸಾಹತುಶಾಹೀ ನಮ್ಮ ದೇಸಿಯತೆಯ ಮೇಲೆ ಯಾವ ಆಘಾತವನ್ನೂ ಮಾಡಲಿಲ್ಲ ಎಂದು ನಾವು ಹೇಳುತ್ತಿಲ್ಲ. ಅದರ ಕನ್ನಡದ ಶಕ್ತಿ ಪ್ರತಿಭೆಗಳು, ಹೊರಗಿನ ಈ ಪ್ರಭಾವಗಳನ್ನು ಅರಗಿಸಿಕೊಂಡು ತಮ್ಮ ತಮ್ಮ ಪ್ರಾದೇಶಿಕತೆಯಲ್ಲಿ ವಿಶಿಷ್ಟವಾದ ರೀತಿಯಲ್ಲಿ ಕೃತಿ ರಚನೆ ಮಾಡಿದವೆಂಬುದನ್ನು ಮಾಸ್ತಿ, ಪು.ತಿ.ನ., ಕುವೆಂಪು ಇಂಥವರ ಬರೆಹಗಳು ಸಾಬೀತುಪಡಿಸುತ್ತವೆ. ಇವರೆಲ್ಲರ ನಡುವೆ ಬೇಂದ್ರೆಯವರು ಮಾತ್ರ(ಉಳಿದವರಂತೆ ಇಂಗ್ಲಿಷ್ ಶಿಕ್ಷಣಕ್ಕೆ ಒಳಗಾದರೂ) ಪಶ್ಚಿಮದ ಪ್ರೇರಣೆ–ಪ್ರಭಾವಗಳ ಹಂಗೇ ಇಲ್ಲದವರಂತೆ, ದೇಶಿಯ ಪ್ರಜ್ಞೆಯಲ್ಲಿ ಬೇರೂರಿ ಅರಳಿಕೊಂಡ ಸಮೃದ್ಧ ಪ್ರತಿಭೆಯ ಅಭಿವ್ಯಕ್ತಿಯಂತೆ ತೋರುತ್ತಾರೆ.[೬೮]

ಬೇಂದ್ರೆ ಅವರು ಹೇಗೆ ದೇಶೀಯ ಮಾರ್ಗವನ್ನು ಅನುಸರಿಸಿದರು ಎಂಬ ವಿಚಾರವನ್ನು ಕವಿತೆಗಳ ಮೂಲಕ ಸ್ಪಷ್ಟಪಡಿಸಿದ್ದಾರೆ. ಬೇಂದ್ರೆ ಅವರು ಅನುಸರಿಸಿದ ಬೇರಿನ ಸತ್ವ ಅದು ನೆಲಮೂಲ ಸಂಸ್ಕೃತಿಯದು ಜನಪದ ಹಾಡುಗಳು, ಗೊಲ್ಲರ ಪದಗಳು, ಶರಣರ, ದಾಸರ ಹಾಗೂ ನಮ್ಮ ಜನಪದ ಪರಂಪರೆಯ ಪದೋಕ್ತಿಗಳಿಂದ ಅನುಸರಿಸಿದ ಕ್ರಮ ಎಂಬುದನ್ನು ಕುರಿತು ಜಿ.ಎಸ್.ಶಿವರುದ್ರಪ್ಪ ಅವರು ಸ್ಪಷ್ಟಪಡಿಸಿದ್ದಾರೆ.

'ಗಾಳಿಹೆಜ್ಜೆ ಹಿಡಿದ ಸುಗಂಧ' ಎಂಬುದು ಕುಸುಮಾಕರ ದೇವರಗೆಣ್ಣೂರು ಹೆಸರಿನ ವಸಂತ ಅನಂತ ದಿವಾಣಜಿ ಅವರ ಅನುಭವದಿಂದ ಮೂಡಿದ ಕವಿಯ ಒಡನಾಟದ ವಿಮರ್ಶೆ ಎಂದು ಗಮನಿಸಬಹುದು. ೧೯೪೪ರಿಂದ ಬೇಂದ್ರೆ ಅವರನ್ನು ಗಮನಿಸುತ್ತಾ ೧೯೫೭ರಲ್ಲಿ ಅವರ ಒಡನಾಡಿಯಾಗಿ ಕವಿಯ ಬದುಕಿನುದ್ದಕ್ಕೂ ಕುಸುಮಾಕರರು ಗ್ರಹಿಸಿದ ಸಾಹಿತ್ಯ ಅಧ್ಯಯನವನ್ನು 'ಗಾಳಿಹೆಜ್ಜೆ ಹಿಡಿದ ಸುಗಂಧ'ದಂತೆ ಗ್ರಹಿಸಿದ್ದಾರೆ. ಅಧ್ಯಯನ ಮತ್ತು ಒಡನಾಟವನ್ನು ಒಂದು ಲಹರಿಯಂತೆ ದರ್ಶನ ಮಾಡಿ ಪುಟ್ಟ ಕೃತಿ ಎನ್ನಬಹುದು. ಸೊಲ್ಲಾಪುರದಲ್ಲಿ ಬೇಂದ್ರೆ ಅವರೊಂದಿಗೆ ಹನ್ನೆರೆಡು ವರ್ಷ ಪಡೆದ ಅರಿವಿನ ಅಧ್ಯಯನವನ್ನು ಸಾಹಿತ್ಯಕ್ಕೆ ಅನ್ವಹಿಸಿದ್ದಾರೆ. ಇದೊಂದು ಅನ್ವಯಿಕ ವಿಮರ್ಶೆಯಾಗಿ ಅಧ್ಯಯನ ಮಾಡಬಹುದಾದ ಬರೆಹವಾಗಿದೆ. 'ಪ್ರಣತಿ–ಬತ್ತಿ–ತೈಲ–ಪ್ರಭೆ', 'ಕವಿ ಹಾಗೂ ಸೃಜನ ಪ್ರಕ್ರಿಯೆ', 'ಸಹೃದಯ', 'ಸಮೀಕ್ಷಕ', 'ಕಲ್ಪನೆ ಮತ್ತು ಕಾಣ್ಕೆ' ಹಾಗೂ 'ಕವಿಯ ಮೇಲಿನ ಪ್ರಭಾವಗಳು' ಈ ಶೀರ್ಷಿಕೆಗಳಲ್ಲಿ 'ಬೇಂದ್ರೆಯವರೊಡನೆ..' ಎಂಬ ದೀರ್ಘವಾದ ಲೇಖನ ಹದಗಟ್ಟಿದೆ. ಮನಸಶಾಸ್ತ್ರ, ಮನೋವಿಜ್ಞಾನ, ತತ್ತ್ವಶಾಸ್ತ್ರ ಈ ಎಲ್ಲಾ ಕ್ಷೇತ್ರಗಳಿಗೂ ಬೇಂದ್ರೆ ಅವರ ಕಾವ್ಯವ್ಯಕ್ತಿತ್ವವನ್ನು ಸಾಣೆಯಿಡಿದಿದ್ದಾರೆ ಎನ್ನಬಹುದು.

'ಅಂಕಣ' ಪತ್ರಿಕೆಯ ವಿಶೇಷಾಂಕದ ಲೇಖನಗಳನ್ನು ಆಯಾ ವಿಷಯಗಳಿಗೆ ಅನುಗುಣವಾಗಿ ಅಧ್ಯಯನ ಮಾಡಲಾಗಿದೆ. ಆದರೂ ಈ ಒಟ್ಟಾರೆ ಗ್ರಹಿಸುವುದಾದರೆ ಇದೊಂದು ಅಧ್ಯಯನ ಮಾದರಿಯ ಪತ್ರಿಕೆಯಾಗಿದೆ. ಕೇವಲ ವಿಷಯಗಳನ್ನು ತುಂಬದೆ ಇಲ್ಲಿ ವಿಮರ್ಶೆಗಳನ್ನು ಚರ್ಚೆ ಹಾಗೂ ಪ್ರಶ್ನೋತ್ತರಗಳ ಪ್ರತಿಕ್ರಿಯೆಯ ವೇದಿಕೆಯಾಗಿಯೂ ಕಾರ್ಯನಿರ್ವಹಿಸಿದೆ. ಕೆ. ಎಲ್. ಗೋಪಾಲಕೃಷ್ಣಯ್ಯರ ಲೇಖನವು ವಿಮರ್ಶೆಯ ಮಾರ್ಗದಲ್ಲಿ ಈಗಾಗಲೇ ಅಧ್ಯಯನಗೊಂಡ ಕವಿತೆಗಳನ್ನು ಇನ್ನೂ ವಿಸ್ತರಿಸಿರುವುದನ್ನು ಕಾಣಬಹುದು. ಸಮಾಜಿಕ ಪ್ರಜ್ಞೆಯುಳ್ಳ ಕವಿತೆಗಳು ತನ್ನ ಭಾವವಿಸ್ತಾರದ ಮೂಲಕ ಯಶಸ್ವಿಯಾಗುವ ಪ್ರಯೋಗಗಳನ್ನು ಚರ್ಚೆಮಾಡಿದ್ದಾರೆ. ಪುರಾಣ ಪ್ರತಿಮೆಗಳ ಬಳಕೆಯಲ್ಲಿ ಕವಿಯ ಪರಿಮಿತಿಗಳ ಚರ್ಚೆಮಾಡಿರುವುದನ್ನು ತಿಳಿಯಬಬಹುದು. ಮಹಾಕಾವ್ಯ ರಚನೆಯ ಕುರಿತು ಬೇಂದ್ರೆ ಸಖೀಗೀತ ಹಾಗೂ ತಮ್ಮ ಭಾವಗೀತೆಗಳ ಮೂಲಕ ಗುರ್ತಿಸಿಕೊಂಡರೂ ಸಾಧ್ಯವಾಗಲಿಲ್ಲವೆಂಬ ಅಭಿಪ್ರಾಯ ಇವರದು.

> ಭಾವಗೀತೆಯ ಸಾರಸರ್ವಸ್ವವನ್ನೂ ಭೃಂಗವೊಂದರ ಕ್ರಿಯಾಪರಿಸರದ ನುಡಿಗಟ್ಟಿನಲ್ಲಿ ಬೇಂದ್ರೆಯವರು ತೆರೆದಿಟ್ಟಿರುವುದು ಪ್ರಸಿದ್ಧವಿದೆ. ಅಂಬಿಕಾತನಯದತ್ತರ ದರ್ಶನ, ಶ್ರುತಿ, ಕೃತಿ, ಶಬ್ದಗಳನ್ನು ವ್ಯಾಖ್ಯಾನಿಸುವ ಕುರ್ತಕೋಟಿಯವರ ಗ್ರಂಥಕ್ಕೆ 'ಭೃಂಗದ ಬೆನ್ನೇರಿ' ಎಂದೇ ನಾಮಕರಣ ಮಾಡಲಾಗಿದೆ. ಹಾಗೆಯೇ ಮೂರ್ತಿ ಮತ್ತು ಕಾಮಕಸ್ತೂರಿ ಸಂಗ್ರಹದಲ್ಲಿ ಸೇರಿದ 'ಗಾರುಡಿಗ' ಎಂಬ ಕವಿತೆಯಲ್ಲಿ ಗರುಡನ ಪ್ರತಿಮೆಯ ಮೂಲಕವೂ ಕಾವ್ಯಕ್ರಿಯೆಯನ್ನು ಚಿತ್ರಿಸಲಾಗಿದೆ. ಭೃಂಗದ ಬೆನ್ನೇರಿದ ಹಾಗೆಯೇ ಬೇಂದ್ರೆಯವರು ಗರುಡನ ಬೆನ್ನೇರಿದಿದ್ದರೆ? ದೇವಲೋಕದ ಅಮೃತವನ್ನು ಸಂಗ್ರಹಿಸಲು ಹಾರಿದಂತೆ, ಪಾತಾಳ, ರಸಾತಲದ ವಿಷಸರ್ಪ ನಿಬಿಡ ಲೋಕಕ್ಕೂ ಪಯಣಿಸುವ ಗರುಡನ ಬೆನ್ನೇರಿದ್ದಿದ್ದರೆ.... ಬೇಂದ್ರೆಯವರ ಮಹಾಕಾವ್ಯವನ್ನೋದುವ ಭಾಗ್ಯ ಕನ್ನಡಿಗರದಾಗುತ್ತಿತ್ತೇನೋ![೬೯]

ಆದರೆ ಬೇಂದ್ರೆ ಅವರ ಮಹಾಕಾವ್ಯ ರಚನೆಯ ಸಾಧ್ಯತೆಗಳನ್ನು ವಿವಿಧ ವಿಮರ್ಶಕರು ತಮ್ಮದೇ ಚಿಂತನೆಯಲ್ಲಿ ಚರ್ಚಿಸಿದ್ದಾರೆ. ಒಂದು ಚೌಕಟ್ಟಿನ ಪರಿಧಿಯಲ್ಲಿ ಅದರಲ್ಲೂ ನಮ್ಮ ಹಳಗನ್ನಡದ ಕವಿಗಳು ಸೃಷ್ಟಿಸಿದ ಹಾದಿಯಲ್ಲಿ ಮಹಾಕಾವ್ಯ ರಚಿಸದಿದ್ದರೂ ಬೌದ್ಧಿಕವಾಗಿ ಎಲ್ಲಾ ಆಯಾಮಗಳನ್ನು ಸೃಷ್ಟಿಸಿದ್ದಾರೆ ಎನ್ನಬಹುದು. ವಿವಿಧ ಅಧ್ಯಯನಗಳು ಈ ವಿಚಾರವನ್ನು ಬಲಪಡಿಸುತ್ತವೆ.

'ನವೋದಯ ಸಂದರ್ಭ ಬೇಂದ್ರೆ–ಕುವೆಂಪು ಕೃತಿಗಳಲ್ಲಿ ಪರಿಸರದ ಪ್ರಶ್ನೆಗಳು' ಎಂಬ ಸಂಗೀತ .ಪಿ ಅವರ ಸಂಶೋಧನಾ ಮಹಾಪ್ರಬಂಧದಲ್ಲಿ ಸಾಹಿತ್ಯ ಮತ್ತು ಪರಿಸರವನ್ನು ಕುರಿತು ಅಂತರ್ ಶಿಸ್ತೀಯ ಅಧ್ಯಯನ ಮಾಡಿದ್ದಾರೆ. ಇವರ ಅಧ್ಯಯನವು ಬೇಂದ್ರೆ ಮತ್ತು ಕುವೆಂಪು ಅವರು ಪರಿಸರ, ಅಭಿವೃದ್ಧಿ, ಕೈಗಾರೀಕೀಕರಣ, ನಗರೀಕರಣ, ಯುದ್ಧ, ಜನಸಂಖ್ಯಾ ಸ್ಫೋಟ, ಕೃಷಿ, ಮೊದಲಾದ ವಿಷಯಗಳನ್ನು ಕುರಿತು ಪ್ರತಿಕ್ರಿಯಿಸಿದ ಪ್ರಕ್ರಿಯೆಗಳನ್ನು ತಿಳಿಸುತ್ತದೆ. ಬೇಂದ್ರೆ ಕಾವ್ಯವು ಪರಿಸರದ ಚಿಂತನೆಯ ಜೊತೆಯಲ್ಲಿಯೇ ವಸಾಹತುಶಾಹಿಯ ಧೋರಣೆಯ ವಿರುದ್ಧ, ಪಾಶ್ಚಾತ್ಯ ಹಾಗೂ ಭಾರತೀಯ ಆಳ್ವಿಕೆಗಳನ್ನು ಮುಕ್ತವಾಗಿ ಪ್ರಶ್ನಿಸಿದೆ. ಬೇಂದ್ರೆ ಅವರಿಗೆ ದೇಶದ ಆರ್ಥಿಕತೆಯ ಸಂಕಷ್ಟದಲ್ಲಿ ಮನುಷ್ಯ ಎದುರಿಸುತ್ತಿರುವ ಅನ್ನ, ಹಸಿವು, ಬಡತನ ಹಾಗೂ ಪ್ರಕೃತಿಯ ತೊಂದರೆಗಳ ಕಾಳಜಿಯೇ ಮುಖ್ಯವಾಗಿತ್ತು. ಈ ವಿಚಾರಗಳನ್ನು ಈ ಪ್ರಬಂಧವು ಗಮನಾರ್ಹವಾಗಿ ಪರಿಶೀಲಿಸಿದೆ. ಭಾರತಕ್ಕೆ ಆಗಮಿಸಿದ ಕೈಗಾರಿಕೆಗಳಿಂದ ಪ್ರಕೃತಿಗೆ ಉಂಟಾಗುವ ಅಪಾಯಗಳನ್ನು ಬೇಂದ್ರೆ ಅವರ ಕಾವ್ಯದ ಮೂಲಕ ಚರ್ಚಿಸಿದ್ದಾರೆ. 'ಗಂಗಾವತರಣ', 'ಸೂರ್ಯಪಾನ', 'ನಾದಲೀಲೆ', 'ಮುಗಿಲ ಮಲ್ಲಿಗೆ', 'ಸಖೀಗೀತ', 'ನಾದಲೀಲೆ' 'ವಿಚಾರ ಮಂಜರಿ', 'ಸಾಹಿತ್ಯದ ವಿರಾಟ್ ಸ್ವರೂಪ' ಈ ಎಲ್ಲಾ ಕೃತಿಗಳಲ್ಲಿ ಕಂಡುಬರುವ ಪ್ರಕೃತಿಯ ಹಲವು ಪ್ರಶ್ನೆಗಳ ಉತ್ತರವನ್ನು ಚರ್ಚಿಸಿದ್ದಾರೆ.

ಬೇಂದ್ರೆ ಅವರು ಬಳಸುವ 'ಗಂಗೆ'ಯು ಕೇವಲ ನೀರಾಗದೆ ಅದು ಪೊರೆಯುವ ಜೀವಂತಿಕೆಯ ಸಂಕೇತವಾಗಿದೆ. ಈ ಭೂಮಿಯಲ್ಲಿ ಮನುಷ್ಯನ ಅಸ್ಥಿತ್ವ ಮಾತ್ರ ಇರದೆ ಸಾಕಷ್ಟು ಜೀವಿಗಳ ಅಸ್ಥಿತ್ವ ಮೇಲೂ ಗಂಗೆಯ ಜವಾಬ್ದಾರಿ ಇರುವ ಸೂಚಕವನ್ನು ಈ ಸಂಶೋಧನೆಯು ಅರ್ಥೈಸುತ್ತದ. ಆದರೆ ಮನುಷ್ಯನ ನಾಶದ ಕೃತ್ಯವು ಅಮಾನವೀಯವಾಗಿ ನಡೆಯುತ್ತಾ ತಾನು ಉಂಟುಮಾಡುತ್ತಿರುವ ಪರಿಸರದ ನಾಶವು ಭವಿಷ್ಯದ ನಾಶದ ಸಂಕೇತವಾಗಿರುವುದನ್ನು ಅಧ್ಯಯನಮಾಡಿದ್ದಾರೆ. ಇವರು 'ಗಂಗಾವತರಣ', 'ಗಂಗಾಷ್ಟಕ', 'ನೀರು', ಈ ಕವಿತೆಗಳ ಮೂಲಕ ವಾಸ್ತವದ ಸಮಸ್ಯೆಗಳಿಗೆ ಉತ್ತರಗಳನ್ನು ಚರ್ಚಿಸಿರುವುದನ್ನು ಈಗಾಗಲೇ ಅಧ್ಯಯನಮಾಡಲಾಗಿದೆ. ಪ್ರಕೃತಿಯ ಮೇಲೆ ಮನುಷ್ಯನ ಅಧಿಕಾರವು ಈ ವಸಾಹಾತುಶಾಹಿಯ ಎಲ್ಲಾ ಆಕ್ರಮಣದ ತೊಂದರೆಗಳು ಕೂಡ ಇಂದಿಗೂ ಆಸೆಗಳಾಗಿ ತತ್ತರಿಸುತ್ತಿರುವ ಸಂದರ್ಭದಲ್ಲಿ ಉತ್ತರವಾಗಿ ಪ್ರಕೃತಿಯ ಜೀವಿಗಳ ಮೇಲೆ ಪರಿಣಾಮವನ್ನು ಲಕ್ಷಿಸುತ್ತಿಲ್ಲ. ಈ ವಿಚಾರಗಳ ಮೇಲೆ ಅಧ್ಯಯನದ ಬೆಳಕು ಚೆಲ್ಲಿದ್ದಾರೆ.

ಬೇಂದ್ರೆ ಅವರ ಸಾಹಿತ್ಯದಲ್ಲಿ ಅನ್ನ, ಹಸಿವು ಅನುಭಾವಿಕ ನೆಲೆಗಳು. ಈ ವಿಚಾರಗಳನ್ನು ಪಿ. ಸಂಗೀತಾ ಅವರು ವಾಸ್ತವದ ಕನ್ನಡಿಯಾಗಿ ಕಾಣುತ್ತಾರೆ.

> ಅನ್ನದ ಅವಸ್ಥೆಯ ಮೂಲಕವೇ ಮನುಷ್ಯನಿಗೆ ದೀನಾವಸ್ಥೆ ಒದಗಿದೆ ಎಂಬ ವಿಚಾರವನ್ನು ಹೇಳಿದರೆ ದೇವರಿಗಿಂತ ಪ್ರಸಾದದ ಮಹತ್ವವೇ ಹೆಚ್ಚಾಗಿಬಿಟ್ಟಿತಲ್ಲ ಎಂಬ ಅಪಹಾಸ್ಯಕ್ಕೆ ಒಳಗಾಗುತ್ತೇವೆನ್ನುತ್ತಾರೆ. ಎಲ್ಲ ಸಂಸ್ಕೃತಿ ನಾಗರೀಕತೆಗಳ ವೈಭವಗಳ ಕಾಲದಲ್ಲಿ ಸಮೃದ್ಧಿ ಇತ್ತು, ಅನ್ನಕ್ಕೆ ಬೆಲೆ ಇತ್ತು, ಅನ್ನಕ್ಕೆ ಪಾವಿತ್ರ್ಯವಿತ್ತು, ಅನ್ನಕ್ಕೆ ದೇವತ್ವವಿದ್ದರೂ ಈ ಸಮಸ್ಯೆಯ ಭೂಮಂಡಲವನ್ನು ವ್ಯಾಪಿಸಿದೆ ಎನ್ನುತ್ತಾರೆ. ಹಾಗೆಯೇ ಈ ಸಮಸ್ಯೆ ಯುಗಯುಗಗಳು ಕಳೆದರೂ ಸಮಸ್ಯೆಯಾಗಿಯೇ ಉಳಿದಿದೆ. ಅಂತೆಯೇ ಅನ್ನದ ಸಮಸ್ಯೆಯು ನಿರಂತರವಾಗಿ ಉತ್ತರವನ್ನು ಬೇಡುತ್ತದೆ ಎಂದು ಭಾವಿಸುತ್ತಾರೆ.[೨೦]

ಈ ವಿಚಾರಗಳು ಸ್ವಾತಂತ್ರ್ಯ ಭಾರತದ ಬಹುಮುಖ್ಯ ಸಮಸ್ಯೆಗಳಾಗಿ ನಮ್ಮ ಸಮಾಜವನ್ನು ಸಾಮಾಜಿಕವಾಗಿ, ಸಾಹಿತ್ಯದ ಮುಖ್ಯ ವಸ್ತುವಾಗಿ ಕಾಡಿವೆ. ಇಪ್ಪತ್ತನೇ ಶತಮಾನವು ಹೊಸ ಕಲಿಕೆಯ ಹೊರೆಯೊಂದಿಗೆ ಸಮಸ್ಯೆಗಳನ್ನು ನಿತ್ಯವೂ ಎದುರಿಸಬೇಕಾದ ಬದಲಾವಣೆಯನ್ನು ಸ್ವೀಕರಿಸಿದ ಶತಮಾನವಾಗಿದೆ. ಈ ದೃಷ್ಟಿಯಲ್ಲಿ ಈ ಮೇಲಿನ ಅಧ್ಯಯನಗಳು ಬೇಂದ್ರೆ ಅವರ ಸಾಹಿತ್ಯದಲ್ಲಿ ಸಾಕಷ್ಟು ಹೊಸ ಹುಡುಕಾಟಗಳನ್ನು ನಡೆಸಿವೆ.

ನಾವು ಅಭಿವೃದ್ಧಿಯ ಹೆಸರಿನಲ್ಲಿ ಯುದ್ಧವನ್ನು ಕೂಡ ವಿಜೃಂಭಿಸುತ್ತಿದ್ದೇವೆ. ಇಂತಹ ಸಂದರ್ಭದಲ್ಲಿ ಬೇಂದ್ರೆ ಅವರ ಕವಿತೆ ಸಾಕಷ್ಟು ಎಚ್ಚರಗಳನ್ನು ಎಪ್ಪತ್ತು ವರ್ಷಗಳ ಹಿಂದೆಯೇ ಎಚ್ಚರಿಕೆಯನ್ನು ನೀಡಿದ್ದಾರೆ. ಈ ವಿಚಾರವನ್ನು ಪಿ. ಸಂಗೀತಾ ಅವರು ತಮ್ಮ ಸಂಶೋಧನೆಯಲ್ಲಿ ಯುದ್ಧವೂ ಪರಿಸರದ ಪ್ರಶ್ನೆಯಾಗಿ ಚರ್ಚಿಸಿದ್ದಾರೆ.

> ಆಧುನಿಕ ಯುದ್ಧಗಳಲ್ಲಿ ಅಣ್ವಸ್ತ್ರಗಳನ್ನು ಬಳಸುವುದರಿಂದ ಎದುರಾಗುವ ಸಮಸ್ಯೆಗಳೇ ತುಂಬಾ ಭೀಕರವಾದವು. ಈ ಅಣ್ವಸ್ತ್ರಗಳನ್ನು ಬಳಸುವ ಯುದ್ಧಗಳಿಂದ ಇಡೀ ಮನುಕುಲ ನಿರ್ನಾಮವಾಗುವುದಲ್ಲದೆ ಅಖಂಡ ಜೀವ ಸಂಕುಲಗಳು ನಾಶವಾಗುತ್ತವೆ. ನೆಲ, ಜಲ, ಗಾಲಿಯ ಮಲಿನತೆ ಅಧಿಕಗೊಂಡು ಭೂಮಿಯ ಮೇಲಿನ ಜೀವವೈವಿಧ್ಯವೇ ಸರ್ವನಾಶವಾಗುವ ಸನ್ನಿವೇಶದಲ್ಲಿ ನಾವಿದ್ದೇವೆ.[೨೧]

ಬೇಂದ್ರೆ ಅವರ ಕವಿತೆಗಳಿಗೆ ವಾಸ್ತವದ ಪೀಠಿಕೆಯನ್ನು ರಚಿಸಿದ ಸಂಶೋಧಕರು ಕವಿತೆಗಳನ್ನು ಈ ರೀತಿ ಅಧ್ಯಯನ ನೀಡಿದ್ದಾರೆ. 'ಯುದ್ಧ ಬಂತು ಮನೆಯವರೆಗೆ', 'ಯಮದೇವನ ಒಕ್ಕಲು', 'ನರಬಲಿ', 'ಸಿಟ್ಟು – ಸಾಂತಿ' ಈ ಕವಿತೆಗಳ ಮೂಲಕ ವಿನಾಶದ ಕಥನವನ್ನು ಯುದ್ಧದ ಅನರ್ಥದಲ್ಲಿ ಕಂಡುಕೊಳ್ಳುತ್ತಿರುವ ಈ ಪರಿಸರ ವಿನಾಶ ವಿಚಾರವನ್ನು ಚರ್ಚಿಸಿದ್ದಾರೆ.

ಜಾಗತೀಕರದ ಪರಿಣಾಮಗಳನ್ನು ಇಲ್ಲಿ ಪ್ರಸ್ತುತ ನಮ್ಮ ಮೇಲೆ ಉಂಟಾಗುತ್ತಿರುವ ವಿನಾಶದ ವಿವಿಧ ಮುಖಗಳನ್ನು 'ಗರಿ' ಸಂಕಲನದ ಮೂಲಕ ಅರ್ಥೈಸಿದ್ದಾರೆ. ವಸಾಹತುಶಾಹಿಯ ಸಂಸ್ಕೃತಿಯ ಎಲ್ಲಾ ಬೇರುಗಳು ಇಲ್ಲಿನ ಪರಿಸರವನ್ನು ಸಂಪೂರ್ಣ ಅಸ್ತಿತ್ವದಿಂದಲೇ ನಾಶಮಾಡುತ್ತಿವೆ. ಮೋಹದ ಅನಾಗರೀಕತೆಯಲ್ಲಿ ಮನುಷ್ಯನು ದುರಂತದ ಬೀಜಗಳನ್ನು ತನ್ನ ಅಸ್ಥಿತ್ವದಲ್ಲಿಯೇ ಬೆಳೆಸುತ್ತಿರುವ ವಿಚಾರಗಳನ್ನು ಈ ಸಂಶೋಧನೆಯಲ್ಲಿ ಅಧ್ಯಯನ ಮಾಡಿದ್ದಾರೆ.

> ವಸಾಹತುಶಾಹಿ ಸಂಸ್ಕೃತಿಯ ಇಂಥ ಅಕೃತ್ಯಗಳು ಬಿತ್ತಿದ ಹಣದ ದಾಹದ ಬೀಜಗಳು ಅಂದಿನಿಂದ ಇಂದಿನವರೆಗೂ ಭಾರತದ ಕೃಷಿ ಪರಿಸರದಲ್ಲಿ ತನ್ನ ಮೇಲಾಟವನ್ನು ನಡೆಸಿವೆ. ಹಾಗಾಗಿ ವಿಶಾಲ ಭಾರತದ ವೈವಿಧ್ಯಮಯ ಕೃಷಿ, ಆಹಾರ ಪದ್ಧತಿ, ಬದುಕಿನ ಶೈಲಿ ಹಾಗೂ ಮನೋಧರ್ಮಗಳಲ್ಲಿ ಹಣದ ಹುಚ್ಚಿನ ಬೀಜಗಳು ನಾಟಿದವು. ಜಾಗತೀಕರಣದ ಸಂದರ್ಭದಲ್ಲಿ ಈ ಹುಚ್ಚು ತನ್ನ ರಾಕ್ಷಸೀ ಕಬಂಧಗಳಿಂದ ಇಡೀ ಜಗತ್ತಿಗೆ ವ್ಯಾಪಿಸಿದೆ. ಎಲ್ಲ ಕಡೆಯೂ ಬೃಹತ್ ನಗರಗಳ ವಿಸ್ತರಣೆ ಹಾಗೂ ಕೈಗಾರಿಕಾ ಎಸ್ಟೇಟ್ಗಳ ನಿರ್ಮಾಣದಿಂದಾಗಿ ಕೃಷಿ ಚಟುವಟಿಕೆಗಳು ಅಸ್ತವ್ಯಸ್ತಗೊಂಡಿವೆ. ಕೃಷಿಗಾಗಿ ಅರಣ್ಯಗಳ ಮೇಲೆ ಒತ್ತಡವು ಅಧಿಕಗೊಂಡಿದೆ. ಈ ಹಿಂದೆ ವಸಾಹತುಕಾಲದಲ್ಲಿ ಬ್ರಿಟೀಷ್ ಕೈಗಾರಿಕೆಗಳ ದಾಹಕ್ಕಾಗಿ ಬಲಿಯಾಗುತ್ತಿದ್ದ ಹೊಲಗದ್ದೆಗಳು ಇಂದು ಜಾಗತಿಕ ರಾಷ್ಟ್ರಗಳ ಹಸಿವಿನ ದಾಹವನ್ನು ಹಿಂಗಿಸುವಲ್ಲಿ ನಿಸ್ಸಾರಗೊಂಡು ಬಂಜೆಗೊಂಡಿವೆ.[೨]

ನಮ್ಮ ಅಭಿವೃದ್ಧಿ ಹೆಸರಿನಲ್ಲಿ ನಡೆಯುತ್ತಿರುವ ಹೊಸ ಯೋಜನೆಗಳೆಲ್ಲವೂ ನಿಜವಾದ ಅಲೋಚನೆಯಲ್ಲಿ ಗ್ರಹಿಸಿದರೆ ಅವು ಬಿತ್ತುತ್ತಿರುವುದು 'ಹಣದ ಹುಚ್ಚಿನ ಬೀಜಗಳು' ಎಂಬ ಹೆಸರನ್ನು ಪಿ. ಸಂಗೀತಾ ಅವರು ನೀಡುತ್ತಿದ್ದಾರೆ. ಹಣದ ಅಮಾನ್ಯೀಕರಣ, ವಿದೇಶಿ ಕಂಪನಿಗಳು ಹಣದ ಮೂಲಕ ಮಾಡುತ್ತಿರುವ ದೇಸೀಯ ವಂಚನೆ ಈ ಎಲ್ಲಾ ಅಂಶಗಳಿಗೆ ಪ್ರತಿನಿಧಿಕರಣವಾಗಿ ಈ ಪದವನ್ನು ಸೃಜಿಸಿದ್ದಾರೆ. ಈ ತಾತ್ವಿಕತೆಯಲ್ಲಿ ಹೊಸ ಸಂಶೋಧನೆಗಳಿಗೆ ಹಾದಿಯನ್ನು ತೆರೆದಿರುವುದು ಈ ಅಧ್ಯಯನದ ಶಕ್ತಿಯಾಗಿ ಗ್ರಹಿಸಬಹುದು.

'ಸ್ಥಳೀಯತೆ ಮತ್ತು ಸಖೀಗೀತ' ಹಾಗೂ 'ನಿಸರ್ಗದೃಷ್ಟಿ'ಯ ವಿಚಾರಗಳನ್ನು ಪ್ರತ್ಯೇಕ ಅಧ್ಯಾಯಗಳ ಆಯಾ ವಿಭಾಗಳಲ್ಲಿ ತೌಲನಿಕ ಅಧ್ಯಯನದೊಂದಿಗೆ ಚರ್ಚಿಸಲಾಗಿದೆ.

ಈ ಹೊಸ ಚಿಂತನೆಯ ಸಂಶೋಧನೆಗಳನ್ನು ಗಮನಿಸಿದಾಗ ಬೇಮದ್ರೆ ಅವರ ಸಾಹಿತ್ಯದ ವಿಸ್ತರಣೆಯು ಭವಿಷ್ಯದ ದುರಂತಗಳಿಗೆ ಉತ್ತರ ರೂಪಿಸುವ ಸಂಜೀವಿನಿಯಾಗಿರುವ ಬಗೆಯನ್ನು ತಿಳಿಯಬಹುದು. ಬೇಂದ್ರೆ ಅವರು ಸಾಹಿತ್ಯದ ಮೂಲಕ ಸಮಾಜದ ಪರಿವರ್ತನೆಗೆ ಹಂಬಲಿಸಿದ ಬಗೆಯು ಪ್ರಸ್ತುತ ಕಾಲಘಟ್ಟದಲ್ಲಿ ಈ ಶತಮಾನದ ಸಮಸ್ಯೆಗಳಿಗೂ ಉತ್ತರವಾಗುವ ಬಗೆಯಲ್ಲಿ ಅಧ್ಯಯನಗಳು ಕಂಡುಬರುತ್ತಿವೆ. ಈ ದೃಷ್ಟಿಯಲ್ಲಿ ವಸಾಹತುಶಾಹಿ ಧೋರಣೆಗಳ ವಿರುದ್ಧ ಹಲವು ಉತ್ತರಗಳನ್ನು ಬೇಂದ್ರೆ ಸಾಹಿತ್ಯದಲ್ಲಿ ಗಮನಿಸಲಾಗಿದೆ.

ಕೊನೆಟಿಪ್ಪಣಿಗಳು

೧. ಗೋಪಾಲಕೃಷ್ಣ ಅಡಿಗ., ೧೯೪೬., (ಬೇಂದ್ರೆ, ಮುನ್ನುಡಿ)., ಭಾವತರಂಗ

೨. ತೀನಂಶ್ರೀ., ೧೯೫೩., (ಕುವೆಂಪು., ಮುನ್ನುಡಿ)., ಭಾರತೀಯ ಕಾವ್ಯ ಮೀಮಾಂಸೆ

೩. ಗೋಪಾಲಕೃಷ್ಣ ಅಡಿಗ., ೧೯೪೬., ಭಾವತರಂಗ., ಮುನ್ನುಡಿ

೪. ಗುರುಲಿಂಗ ಕಾಪಸೆ., ೧೯೯೩., ಮಧುರಚೆನ್ನರ ಲೇಖನಗಳು; ಬೇಂದ್ರೆಯವರ ಭಾಷಾಶಾಸ್ತ್ರ ವಿಷಯಕ ವಿಚಾರಗಳ ರೂಪರೇಷೆ., ಪುಟ ಸಂಖ್ಯೆ ೨೧೬-೨೧೭

೫. ಶಂಕರಮೊಕಾಶಿ ಪುಣೇಕರ., ೧೯೬೨/೨೦೧೨., ಬೇಂದ್ರೆ ಕಾವ್ಯ ಮೀಮಾಂಸೆ; ಅಂಬಿಕಾತನಯದತ್ತರ ಕಾವ್ಯಮೀಮಾಂಸೆಯ ಕವನಗಳು., ಪುಟ ಸಂಖ್ಯೆ ೪-೫

೬. ಶಂಕರಮೊಕಾಶಿ ಪುಣೇಕರ., ೧೯೬೨/೨೦೧೨., ಬೇಂದ್ರೆ ಕಾವ್ಯ ಮೀಮಾಂಸೆ; ಮುನ್ನುಡಿ

೭. ಶಂಕರಮೊಕಾಶಿ ಪುಣೇಕರ., ೧೯೬೨/೨೦೧೨., ಬೇಂದ್ರೆ ಕಾವ್ಯ ಮೀಮಾಂಸೆ., ಪುಟ ಸಂಖ್ಯೆ, ೧೧

೮. ಶಂಕರಮೊಕಾಶಿ ಪುಣೇಕರ., ೧೯೬೨/೨೦೧೨., ಬೇಂದ್ರೆ ಕಾವ್ಯ ಮೀಮಾಂಸೆ., ಪುಟ ಸಂಖ್ಯೆ ೧೨-೧೩

೯. ಶಂಕರಮೊಕಾಶಿ ಪುಣೇಕರ., ೧೯೬೨/೨೦೧೨., ಬೇಂದ್ರೆ ಕಾವ್ಯ ಮೀಮಾಂಸೆ., ಪುಟ ಸಂಖ್ಯೆ ೧೮-೧೯

೧೦. ಶಂಕರಮೊಕಾಶಿ ಪುಣೇಕರ., ೧೯೬೨/೨೦೧೨., ಬೇಂದ್ರೆ ಕಾವ್ಯ ಮೀಮಾಂಸೆ., ಪುಟ ಸಂಖ್ಯೆ ೧೮-೧೯

೧೧. ಸುಮತೀಂದ್ರ ನಾಡಿಗ., ೧೯೮೯., ಬೇಂದ್ರೆಯವರ ಕಾವ್ಯದ ವಿಭಿನ್ನ ನೆಲೆಗಳು., ಪುಟಸಂಖ್ಯೆ ೨೩೮

೧೨. ಶಿವರುದ್ರಪ್ಪ ಜಿ.ಎಸ್(ಸಂ)., ೧೯೭೫., ಕವಿ ಬೇಂದ್ರೆ., ಬೇಂದ್ರೆಯವರ ಕಾವ್ಯ ಮೀಮಾಂಸೆ; ಕುಲಕರ್ಣಿ. ಆರ್., ಪುಟ ಸಂಖ್ಯೆ ೬೬

೧೩. ಮಣೂರ ವಿ.ಜ್ಞಿ., ೧೯೬೬., ಮಕರಂದ., ವರಕವಿ ಶ್ರೀ ದ.ರಾ. ಬೇಂದ್ರೆಯವರ ೭೦ನೆಯ ಹುಟ್ಟುಹಬ್ಬದ ಸಂಚಿಕೆ., ಶ್ರೀ ದ. ರಾ. ಬೇಂದ್ರೆ ಅವರ ವ್ಯಕ್ತಿತ್ವ ಮತ್ತು ಸಾಹಿತ್ಯ ಕೃತಿ., ಕುಲ್ಕರ್ಣಿ ಆರ್. ಜಿ., ಸಂಪುಟ ೪., ಸಂಚಿಕೆ ೭-೮., ಪುಟ ಸಂಖ್ಯೆ ೨೮

೧೪. ಕೃಷ್ಣರಾಯ ಅ.ನ., ೧೯೯೫., ಕನ್ನಡ ಕುಲ ರಸಿಕರು., ದ.ರಾ ಬೇಂದ್ರೆ., ಪುಟ ಸಂಖ್ಯೆ ೭೫-೮೨

೧೫. ಶಿವರುದ್ರಪ್ಪ ಜಿ. ಎಸ್., ೧೯೭೫., ಕವಿ ಬೇಂದ್ರೆ; ಬೇಂದ್ರೆಯವರ ಕಾವ್ಯದಲ್ಲಿ ಸಾಮಾಜಿಕ ಪ್ರಜ್ಞೆ., ಬರಗೂರು ರಾಮಚಂದ್ರಪ್ಪ., ಪುಟ ಸಂಖ್ಯೆ ೪೭-೪೮

೧೬. ಶಿವರುದ್ರಪ್ಪ ಜಿ. ಎಸ್., ೧೯೭೫., ಕವಿ ಬೇಂದ್ರೆ; ಬೇಂದ್ರೆಯವರ ಕಾವ್ಯದಲ್ಲಿ ಸಾಮಾಜಿಕ ಪ್ರಜ್ಞೆ., ಬರಗೂರು ರಾಮಚಂದ್ರಪ್ಪ., ಪುಟ ಸಂಖ್ಯೆ ೫೦

೧೭. ಶಿವರುದ್ರಪ್ಪ ಜಿ. ಎಸ್., ೧೯೭೫., ಕವಿ ಬೇಂದ್ರೆ; ಬೇಂದ್ರೆಯವರ ಕಾವ್ಯದಲ್ಲಿ ಸಾಮಾಜಿಕ ಪ್ರಜ್ಞೆ., ಬರಗೂರು ರಾಮಚಂದ್ರಪ್ಪ., ಪುಟ ಸಂಖ್ಯೆ ೫೩

೧೮. ಶಿವರುದ್ರಪ್ಪ ಜಿ. ಎಸ್., ೧೯೭೫., ಕವಿ ಬೇಂದ್ರೆ; ಬೇಂದ್ರೆಯವರ ಕಾವ್ಯದ ಮೂಲ ಪ್ರೇರಣೆಗಳು., ಕಾಳೇಗೌಡ ನಾಗವಾರ., ಪುಟ ಸಂಖ್ಯೆ ೧೯

೧೯. ಶಿವರುದ್ರಪ್ಪ ಜಿ. ಎಸ್., ೧೯೭೫., ಕವಿ ಬೇಂದ್ರೆ; ಬೇಂದ್ರೆಯವರ ಕಾವ್ಯ ವಿಕಾಸದ ಹಂತಗಳು., ದೊಡ್ಡ ರಂಗೇಗೌಡ., ಪುಟ ಸಂಖ್ಯೆ ೨೨

೨೦. ಶಿವರುದ್ರಪ್ಪ ಜಿ. ಎಸ್., ೧೯೭೫., ಕವಿ ಬೇಂದ್ರೆ; ಬೇಂದ್ರೆಯವರ ಕಾವ್ಯ ವಿಕಾಸದ ಹಂತಗಳು., ದೊಡ್ಡ ರಂಗೇಗೌಡ., ಪುಟ ಸಂಖ್ಯೆ ೨೪

೨೧. ಶಿವರುದ್ರಪ್ಪ ಜಿ. ಎಸ್., ೧೯೭೫., ಕವಿ ಬೇಂದ್ರೆ; ಬೇಂದ್ರೆಯವರ ಕಾವ್ಯ ವಿಕಾಸದ ಹಂತಗಳು., ದೊಡ್ಡ ರಂಗೇಗೌಡ., ಪುಟ ಸಂಖ್ಯೆ ೨೪

೨೨. ಶಿವರುದ್ರಪ್ಪ ಜಿ. ಎಸ್., ೧೯೭೫., ಕವಿ ಬೇಂದ್ರೆ; ಬೇಂದ್ರೆಯವರ ಕಾವ್ಯ ವಿಕಾಸದ ಹಂತಗಳು., ದೊಡ್ಡ ರಂಗೇಗೌಡ., ಪುಟ ಸಂಖ್ಯೆ ೨೮

೨೩. ಶಿವರುದ್ರಪ್ಪ ಜಿ. ಎಸ್., ೧೯೭೫., ಕವಿ ಬೇಂದ್ರೆ; ಬೇಂದ್ರೆಯವರ ಕಾವ್ಯ ವಿಕಾಸದ ಹಂತಗಳು., ದೊಡ್ಡ ರಂಗೇಗೌಡ., ಪುಟ ಸಂಖ್ಯೆ ೩೭

೨೪. ಶಿವರುದ್ರಪ್ಪ ಜಿ. ಎಸ್., ೧೯೭೫., ಕವಿ ಬೇಂದ್ರೆ; ಬೇಂದ್ರೆಯವರ ಕಾವ್ಯ ವಿಕಾಸದ ಹಂತಗಳು., ದೊಡ್ಡ ರಂಗೇಗೌಡ., ಪುಟ ಸಂಖ್ಯೆ ೩೭

೨೫. ಸುಮತೀಂದ್ರ ನಾಡಿಗರು., ೧೯೭೫., ಬೇಂದ್ರೆಯವರ ಕಾವ್ಯದ ವಿಭಿನ್ನ ನೆಲೆಗಳು; ಪುಟ ಸಂಖ್ಯೆ ೨೩೮

೨೬. ಮುಗಳಿ. ರಂ.ಶ್ರೀ., ೧೯೮೬/೨೦೧೧., ಬೇಂದ್ರೆ ಕಾವ್ಯ., ಪುಟ ಸಂಖ್ಯೆ ೮೬

೨೭. ಕೀರ್ತಿನಾಥ ಕುರ್ತಕೋಟಿ., ಬೇಂದ್ರೆಯವರ ಕಾವ್ಯದಲ್ಲಿ ಶ್ರುತಿ ಮತ್ತು ಕೃತಿ., ಪುಟ ಸಂಖ್ಯೆ ೨೫೦

೨೮. ಮುಗಳಿ ರಂ. ಶ್ರೀ., ೧೯೮೬/೨೦೧೧., ಬೇಂದ್ರೆ ಕಾವ್ಯ., ಪುಟ ಸಂಖ್ಯೆ ೮೭

೨೯. ಗೋಕಾಕ್. ವಿ.ಕೃ., ೨೦೧೪., ಬೇಂದ್ರೆಯವರ ಕಾವ್ಯ ಮತ್ತು ವ್ಯಕ್ತಿತ್ವ., ಪುಟ ಸಂಖ್ಯೆ ೫೩

೩೦. ಗೋಕಾಕ್. ವಿ.ಕೃ., ೨೦೧೪., ಬೇಂದ್ರೆಯವರ ಕಾವ್ಯ ಮತ್ತು ವ್ಯಕ್ತಿತ್ವ., ಪುಟ ಸಂಖ್ಯೆ ೪೩–೪೪

೩೧. ಗೋಕಾಕ್. ವಿ.ಕೃ., ೨೦೧೪., ಬೇಂದ್ರೆಯವರ ಕಾವ್ಯ ಮತ್ತು ವ್ಯಕ್ತಿತ್ವ., ಪುಟ ಸಂಖ್ಯೆ ೧೬

೩೨. ಗೋಕಾಕ್. ವಿ.ಕೃ., ೨೦೧೪., ಬೇಂದ್ರೆಯವರ ಕಾವ್ಯ ಮತ್ತು ವ್ಯಕ್ತಿತ್ವ., ಪುಟ ಸಂಖ್ಯೆ ೧೮–೧೯

೩೩. ಗೋಕಾಕ್. ವಿ.ಕೃ., ೨೦೧೪., ಬೇಂದ್ರೆಯವರ ಕಾವ್ಯ ಮತ್ತು ವ್ಯಕ್ತಿತ್ವ., ಪುಟ ಸಂಖ್ಯೆ ೩೩–೩೪

೩೪. ಬುದ್ದಣ್ಣ ಹಿಂಗಮಿರೆ(ಸಂ)., ೧೯೭೭., ಇಳಿದು ಬಾ ತಾಯಿ., ಪುಟ ಸಂಖ್ಯೆ ೨೦೮–೨೦೯

೩೫. ಬುದ್ದಣ್ಣ ಹಿಂಗಮಿರೆ(ಸಂ)., ೧೯೭೭., ಇಳಿದು ಬಾ ತಾಯಿ., ಪುಟ ಸಂಖ್ಯೆ ೨೧೨

೩೬. ಬುದ್ದಣ್ಣ ಹಿಂಗಮಿರೆ(ಸಂ)., ೧೯೭೭., ಇಳಿದು ಬಾ ತಾಯಿ., ಸಂಪಾದಕರ ನುಡಿ, ಪುಟ ಸಂಖ್ಯೆ

೩೭. ಗೋಪಾಲ ಸೋಹೊನಿ., ೧೯೮೯., ಗರಿ ಬರೆದವನ ವಿವಿಧ ಪರಿ (ಬೇಂದ್ರೆ ನಮನ)., ದ. ಲ ಕೆರೂರ ಅವರು ಹಿನ್ನುಡಿ

೩೮. ಆಮೂರ ಜಿ. ಎಸ್., ೧೯೮೮., ಅರ್ಥಲೋಕ., ಬೆನ್ನುಡಿ ಬರಹ

೩೯. ಕೀರ್ತಿನಾಥ ಕುರ್ತಕೋಟಿ., ೧೯೭೫., ಭೃಂಗದ ಬೆನ್ನೇರಿ., ಪ್ರಸ್ತಾವನೆ

೪೦. ಗಿರಡ್ಡಿ ಗೋವಿಂದರಾಜ., ೨೦೧೨., ಕೀರ್ತಿನಾಥ ಕುರ್ತಕೋಟಿ ಸಮಗ್ರ ಸಾಹಿತ್ಯ (ಸಂಪುಟ– ೪)., ಬೇಂದ್ರೆ ಕಾವ್ಯ ವಿಮರ್ಶೆ., ಪುಟ ಸಂಖ್ಯೆ ೧೬೬

೪೧. ಗಿರಡ್ಡಿ ಗೋವಿಂದರಾಜ., ೨೦೧೨., ಕೀರ್ತಿನಾಥ ಕುರ್ತಕೋಟಿ ಸಮಗ್ರ ಸಾಹಿತ್ಯ (ಸಂಪುಟ– ೪)., ಬೇಂದ್ರೆ ಕಾವ್ಯ ವಿಮರ್ಶೆ., ಪುಟ ಸಂಖ್ಯೆ ೧೭೬

೪೨. ಗಿರಡ್ಡಿ ಗೋವಿಂದರಾಜ., ೨೦೧೨., ಕೀರ್ತಿನಾಥ ಕುರ್ತಕೋಟಿ ಸಮಗ್ರ ಸಾಹಿತ್ಯ (ಸಂಪುಟ– ೪)., ಬೇಂದ್ರೆ ಕಾವ್ಯ ವಿಮರ್ಶೆ., ಪುಟ ಸಂಖ್ಯೆ ೧೮೦

೪೩. ಗಿರಡ್ಡಿ ಗೋವಿಂದರಾಜ., ೨೦೧೨., ಕೀರ್ತಿನಾಥ ಕುರ್ತಕೋಟಿ ಸಮಗ್ರ ಸಾಹಿತ್ಯ (ಸಂಪುಟ– ೪)., ಬೇಂದ್ರೆ ಕಾವ್ಯ ವಿಮರ್ಶೆ., ಪುಟ ಸಂಖ್ಯೆ ೩೪೩

೪೪. ಗಿರಡ್ಡಿ ಗೋವಿಂದರಾಜ., ೨೦೧೨., ಕೀರ್ತಿನಾಥ ಕುರ್ತಕೋಟಿ ಸಮಗ್ರ ಸಾಹಿತ್ಯ (ಸಂಪುಟ– ೪)., ಬೇಂದ್ರೆ ಕಾವ್ಯ ವಿಮರ್ಶೆ., ಪುಟ ಸಂಖ್ಯೆ ೩೫೦

೪೫. ಬುದ್ದಣ್ಣ ಹಿಂಗೆಮಿರೆ(ಸಂ)., ೧೯೭೭., ಇಳಿದು ಬಾ ತಾಯಿ., ಅರಳು–ಮರಳು ಕೃತಿಗೆ ಬರೆದ ಮುನ್ನುಡಿ

೪೬. ಗಿರಡ್ಡಿ ಗೋವಿಂದರಾಜ., ೨೦೧೨., ಕೀರ್ತಿನಾಥ ಕುರ್ತಕೋಟಿ ಸಮಗ್ರ ಸಾಹಿತ್ಯ (ಸಂಪುಟ– ೪)., ಬೇಂದ್ರೆ ಕಾವ್ಯ ವಿಮರ್ಶೆ., ಪುಟ ಸಂಖ್ಯೆ ೩೮೨

೪೭. ಗಿರಡ್ಡಿ ಗೋವಿಂದರಾಜ., ೨೦೧೨., ಕೀರ್ತಿನಾಥ ಕುರ್ತಕೋಟಿ ಸಮಗ್ರ ಸಾಹಿತ್ಯ (ಸಂಪುಟ– ೪)., ಬೇಂದ್ರೆ ಕಾವ್ಯ ವಿಮರ್ಶೆ., ಪುಟ ಸಂಖ್ಯೆ ೩೮೩

೪೮. ಗಿರಡ್ಡಿ ಗೋವಿಂದರಾಜ., ೨೦೧೨., ಕೀರ್ತಿನಾಥ ಕುರ್ತಕೋಟಿ ಸಮಗ್ರ ಸಾಹಿತ್ಯ (ಸಂಪುಟ– ೪)., ಬೇಂದ್ರೆ ಕಾವ್ಯ ವಿಮರ್ಶೆ., ಪುಟ ಸಂಖ್ಯೆ ೪೮೦

೪೯. ಕೀರ್ತಿನಾಥ ಕುರ್ತಕೋಟಿ (ಸಂ)., ೨೦೦೨., ಹೆಜ್ಜೇನು., ಪುಟ ಸಂಖ್ಯೆ ೧೧೪

೫೦. ಪ್ರಭುಶಂಕರ., ೧೯೬೬., ಕನ್ನಡದಲ್ಲಿ ಭಾವಗೀತೆ., ಪುಟ ಸಂಖ್ಯೆ ೨೪೪–೨೪೫

೫೧. ಪ್ರಭುಶಂಕರ., ೧೯೬೬., ಕನ್ನಡದಲ್ಲಿ ಭಾವಗೀತೆ., ಪುಟ ಸಂಖ್ಯೆ ೩೨೫

೫೨. ನಾಗರಾಜ್ ಡಿ. ಆರ್., ೧೯೮೭, ೨೦೧೫., ಶಕ್ತಿ ಶಾರದೆಯ ಮೇಳ., ಪುಟ ಸಂಖ್ಯೆ ೧೩–೧೪

೫೩. ಸುಮತೀಂದ್ರ ನಾಡಿಗ., ೧೯೮೯., ಬೇಂದ್ರೆಯವರ ಕಾವ್ಯದ ವಿಭಿನ್ನ ನೆಲೆಗಳು., ಮುನ್ನುಡಿ

೫೪. ಸುಮತೀಂದ್ರ ನಾಡಿಗ., ೧೯೮೯., ಬೇಂದ್ರೆಯವರ ಕಾವ್ಯದ ವಿಭಿನ್ನ ನೆಲೆಗಳು., ಮುನ್ನುಡಿ

೫೫. ಕನ್ನಡದಲ್ಲಿ ಭಾವಗೀತೆ., ಪ್ರಭುಶಂಕರ., ಪುಟ ಸಂಖ್ಯೆ ೩೮೭–೮೮

೫೬. ಕೃಷ್ಣಕುಮಾರ್ ಸಿ.ಪಿ., ೨೦೦೯., ಬೇಂದ್ರೆ ಪಂಚಮುಖ., ಪುಟ ಸಂಖ್ಯೆ ೧೫

೫೭. ಸುಮತೀಂದ್ರ ನಾಡಿಗ., ೧೯೮೯., ಬೇಂದ್ರೆಯವರ ಕಾವ್ಯದ ವಿಭಿನ್ನ ನೆಲೆಗಳು., ಪುಟಸಂಖ್ಯೆ ೧೩೦

೫೮. ಗಿರಡ್ಡಿ ಗೋವಿಂದರಾಜ., ೨೦೧೨., ಕೀರ್ತಿನಾಥ ಕುರ್ತಕೋಟಿ ಸಮಗ್ರ ಸಾಹಿತ್ಯ (ಸಂಪುಟ– ೪)., ಬೇಂದ್ರೆ ಕಾವ್ಯ ವಿಮರ್ಶೆ., ಪುಟ ಸಂಖ್ಯೆ ೫೨೫–೫೨೬

೫೯. ಆಮೂರ ಜಿ.ಎಸ್., ಭುವನದ ಭಾಗ್ಯ., ಪುಟ ಸಂಖ್ಯೆ ೨೦೧,೨೦೨

೬೦. ಸುಮತೀಂದ್ರ ನಾಡಿಗ., ೧೯೮೯., ಬೇಂದ್ರೆಯವರ ಕಾವ್ಯದ ವಿಭಿನ್ನ ನೆಲೆಗಳು., ಪುಟ ಸಂಖ್ಯೆ ೨೩೨

೬೧. ಕೃಷ್ಣಪ್ಪ ಜಿ., ೨೦೦೧., ಬೇಂದ್ರೆಯವರ ಸಾಹಿತ್ಯದಲ್ಲಿ ಸ್ತ್ರೀ – ಒಂದು ಅಧ್ಯಯನ., ಪುಟ ಸಂಖ್ಯೆ ೪೨

೬೨. ಇಳಿದು ಬಾ ತಾಯಿ., ಬುದ್ದಣ್ಣಹಿಂಗೆಮಿರೆ (ಸಂ)., ೧೯೭೭, ಪುಟ ಸಂಖ್ಯೆ ೩೩

೬೩. ತಿರುಮಲೇಶ್ ಕೆ.ವಿ., ೧೯೮೯., ಸಮ್ಮುಖ., ಬೇಂದ್ರೆಯವರ ಕಾವ್ಯ ಶೈಲಿ., ಪುಟ ಸಂಖ್ಯೆ ೧

೬೪. ತಿರುಮಲೇಶ್ ಕೆ.ವಿ., ೧೯೮೯., ಸಮ್ಮುಖ., ಬೇಂದ್ರೆಯವರ ಕಾವ್ಯ ಶೈಲಿ., ಪುಟ ಸಂಖ್ಯೆ ೧೭-೧೮

೬೫. ವಾಮನ ಬೇಂದ್ರೆ(ಸಂ)., ೨೦೦೩., ಅಂಬಿಕಾತನಯ ದತ್ತರ ಸಮಗ್ರ ಕಾವ್ಯ, ಸಿದ್ಧಾಂತ ಸಂಪುಟ ೬., ಆರು ಅನುಬಂಧಗಳು., ಪುಟ ಸಂಖ್ಯೆ ೯೨-೯೩)

೬೬. ವಾಮನ ಬೇಂದ್ರೆ(ಸಂ)., ೨೦೦೩., ಅಂಬಿಕಾತನಯ ದತ್ತರ ಸಮಗ್ರ ಕಾವ್ಯ, ಸಿದ್ಧಾಂತ ಸಂಪುಟ ೬., ಆರು ಅನುಬಂಧಗಳು., ಪುಟ ಸಂಖ್ಯೆ ೯೬

೬೭. ಚನ್ನಪ್ಪ (ಸಂ) ೨೦೦೭., ಪುಣೇಕರರ ಆಯ್ದ ಲೇಖನಗಳು., ಬೇಂದ್ರೆಯವರ ಕಾವ್ಯಾಭ್ಯಾಸ., ಪುಟಸಂಖ್ಯೆ ೩೮

೬೮. ಶಿವರುದ್ರಪ್ಪ ಜಿ. ಎಸ್., ೨೦೧೪., ಬೇಂದ್ರೆಯವರ ಕಾವ್ಯ ಸೃಷ್ಟಿಯ ಸ್ವರೂಪ; ದೇಸೀಯತೆಯಲ್ಲಿ ಬೇರೂರಿ ಅರಳಿದ ದತ್ತ ಪ್ರತಿಭೆ., ಪುಟ ಸಂಖ್ಯೆ ೧೯-೨೨

೬೯. ಗೋಪಾಲಕೃಷ್ಣಯ್ಯ ಕೆ. ಎಲ್., ೧೯೮೨, ಅಂಕಣ, ಮೇ-ಜುಲೈ, ಸಂಪುಟ-೩, ಸಂಚಿಕೆ-೫., ಗರುಡನ ಬೆನ್ನೇರಿದ್ದಿದ್ದರೆ., ಪುಟ ಸಂಖ್ಯೆ ೯-೧೦

೭೦. ಸಂಗೀತ .ಪಿ., ೨೦೦೮., ನವೋದಯ ಸಂದರ್ಭ ಬೇಂದ್ರೆ-ಕುವೆಂಪು ಕೃತಿಗಳಲ್ಲಿ ಪರಿಸರದ ಪ್ರಶ್ನೆಗಳು., ಪುಟ ಸಂಖ್ಯೆ ೫೧

೭೧. ಸಂಗೀತ .ಪಿ., ೨೦೦೮., ನವೋದಯ ಸಂದರ್ಭ ಬೇಂದ್ರೆ-ಕುವೆಂಪು ಕೃತಿಗಳಲ್ಲಿ ಪರಿಸರದ ಪ್ರಶ್ನೆಗಳು., ಪುಟ ಸಂಖ್ಯೆ ೫೫

೭೨. ಸಂಗೀತ .ಪಿ., ೨೦೦೮., ನವೋದಯ ಸಂದರ್ಭ ಬೇಂದ್ರೆ-ಕುವೆಂಪು ಕೃತಿಗಳಲ್ಲಿ ಪರಿಸರದ ಪ್ರಶ್ನೆಗಳು., ಪುಟ ಸಂಖ್ಯೆ ೫೮

* * * * *

ಅಧ್ಯಾಯ-೫

ಇತ್ತೀಚಿನ ವಿಮರ್ಶೆಗಳು

(೨೦೦೦ದಿಂದ ಇತ್ತೀಚಿನವರೆಗಿನ ವಿಮರ್ಶೆಗಳು)

೫. ೧. 'ಸ್ತ್ರೀ' ಚಿಂತನೆಯ ಅಧ್ಯಯನಗಳು

೫. ೨. ಮರಾಠಿ ಸಾಹಿತ್ಯದಲ್ಲಿ ಅಧ್ಯಯನ

೫. ೨. ೧. ಮರಾಠಿ ಸಾಹಿತ್ಯ: ವಸಾಹತುಶಾಹಿ ಚಿಂತನೆಯ ಅಭಿವ್ಯಕ್ತಿ

೫. ೩. ಬೇಂದ್ರೆ ಅವರ ಕಾವ್ಯ ಮತ್ತು ವ್ಯಕ್ತಿತ್ವ ಕುರಿತ ಪುನರ್ ಅಧ್ಯಯನಗಳು

೫. ೪. ವಸಾಹತುಶಾಹಿ ಸಂಸ್ಕೃತಿಗೆ ಆಧುನಿಕ ಕನ್ನಡ ಕಾವ್ಯ ತೋರಿದ ಪ್ರತಿಕ್ರಿಯೆಗಳ ಚಿಂತನೆ

೫. ೫. ಬೇಂದ್ರೆ ಸಾಹಿತ್ಯ : ನಿಸರ್ಗದ ಚಿಂತನೆಗಳು

೫. ೬. ಬೇಂದ್ರೆ ಸಾಹಿತ್ಯ : ಆಧ್ಯಾತ್ಮ ಚಿಂತನೆಗಳು

೫. ೬. ೧. ದರ್ಶನದ ಕಾರ್ಯದಲ್ಲಿ ಅಧ್ಯಯನಕಾರರು

೫. ೬. ೨. 'ಜೋಗಿ' ಕವಿತೆ ಕುರಿತ ವಿಮರ್ಶೆಗಳು

೫. ೭. ಪತ್ರಿಕಾ ಬರಹಗಳು

ಇತ್ತೀಚಿನ ವಿಮರ್ಶೆಗಳು

(೨೦೦೦ದಿಂದ ಇತ್ತೀಚಿನವರೆಗಿನ ವಿಮರ್ಶೆಗಳು)

ಬೇಂದ್ರೆ ಅವರ ಸಾಹಿತ್ಯದ ತಾತ್ವಿಕತೆಯನ್ನು ಕುರಿತು ಹೊಸ ಅಧ್ಯಯನಗಳು ಪ್ರಾರಂಭವಾದವು. ಕನ್ನಡ ಸಾಹಿತ್ಯದಲ್ಲಿ ನವೋದಯ, ನವ್ಯ, ದಲಿತ-ಬಂಡಾಯ, ಮಹಿಳಾ ಅಧ್ಯಯನ ಈ ಮೊದಲಾದ ಪರಿಕಲ್ಪನೆಗಳು ಸಾಹಿತ್ಯ ರಚಿಸುವ ಹಾಗೂ ಅಧ್ಯಯನ ಮಾಡುವ ಈ ಎರಡೂ ಕಾರ್ಯದಲ್ಲಿ ತೀವ್ರವಾಗಿ ವ್ಯಾಪಿಸಿತು. ಆದರೆ ಬೇಂದ್ರೆ, ಕುವೆಂಪು, ಕಾರಂತರು ಮೊದಲಾದವರಿಗೆ ಸಾಹಿತ್ಯ ರಚನೆ ಹಾಗೂ ಅಧ್ಯಯನಕ್ಕೆ ಈ ಯಾವುದೇ ಪರಿಕಲ್ಪನೆಯ ತೊಡಕು ಉಂಟಾಗಲಿಲ್ಲ. ಆದರೆ ಇವರ ಸಾಹಿತ್ಯ ಅಧ್ಯಯನ ಮಾಡುವವರು ಈ ಪರಿಕಲ್ಪನೆಗಳನ್ನು ಇವರ ಸಾಹಿತ್ಯದಲ್ಲಿ ಹುಡುಕುತ್ತಾ ಹೊಸ ಚಿಂತನೆಗಳನ್ನು ನಿರೂಪಿಸಿದರು. ಸಾಹಿತ್ಯದ ತಾತ್ವಿಕತೆಯನ್ನು ಕಂಡುಕೊಳ್ಳುವ ವಿಚಾರದಲ್ಲಿ ಉಂಟಾಗಿರುವ ಸೋಲುಗಳು ಚಿಕ್ಕ ಚಿಕ್ಕ ಹಾದಿಯಂತೆ ರಚನೆಗೊಂಡಿರುವುದನ್ನು ಅಧ್ಯಯನ ಮಾಡಬಹುದು.

ಬೇಂದ್ರೆ ಅವರ ಸಾಹಿತ್ಯವನ್ನು ಅವರು ಬದುಕಿದ್ದ ಕೊನೆಯ ದಶಕಗಳಲ್ಲಿ ಅಧ್ಯಯನ ಮಾಡುವ ಹೊಸ ಛಾಯೆಗಳನ್ನು ಹಿಂದಿನ ಅಧ್ಯಾಯದಲ್ಲಿ ಸ್ಪಷ್ಟವಾಗಿ ಕಂಡುಕೊಂಡಿದ್ದೇವೆ. ಲೇಖನಗಳು, ಸಂಶೋಧನೆಗಳು, ಪರಿಚಯಾತ್ಮಕ ಬರಹಗಳು ಹಲವು ಮಾದರಿಗಳ ಮೂಲಕ ಬೇಂದ್ರೆ ಅವರ ಸಾಹಿತ್ಯ ಅಧ್ಯಯನ ನಡೆದಿವೆ. ಇದೇ ಮಾದರಿಯಲ್ಲಿ ಇಪ್ಪತ್ತೊಂದನೇ ಶತಮಾನದಲ್ಲಿ ವಸಾಹತು ಚಿಂತನೆಗಳಿಗಿಂತ ಸಾಮಾಜಿಕ ಚಿಂತನೆಯ ಅಧ್ಯಯನಗಳು ನಡೆದಿವೆ. ಕುಟುಂಬ, ಸ್ತ್ರೀ ಚಿಂತನೆ, ವಿಮರ್ಶಾನೋಟದ ಹಲವು ಹೊಸ ಆಯಾಮಗಳನ್ನು ಇತ್ತೀಚಿನ ವಿಮರ್ಶಕರು ಗ್ರಹಿಸುತ್ತಿದ್ದಾರೆ. ಒಂದು ಕವಿತೆ ಸ್ಪಷ್ಟಪಡಿಸುವ ಸಮಕಾಲೀನ ಸ್ಪಂದನಗಳ ಹುಡುಕಾಟ ಪ್ರಸ್ತುತ ಮುಖ್ಯವಾಗುತ್ತಿದೆ. ಇತ್ತೀಚಿನ ವಿಮರ್ಶೆಗಳು ಸಮಕಾಲೀನ ಚಿಂತನೆಗಳನ್ನು ಕವಿಯ ಕಾಲಘಟ್ಟದ ಸಮಕಾಲೀನ ಕವಿಗಳ, ಬರಹಗಾರರ ಸಾಹಿತ್ಯದಲ್ಲಿ ಕೆಲವು ಸೂಕ್ಷ್ಮ ಅಂಶಗಳ ಮೂಲಕ ಸಾಹಿತ್ಯ ಅಧ್ಯಯನಕ್ಕೆ ತೊಡಗಿದ್ದಾರೆ. ಬೇಂದ್ರೆ ಅವರ ಸಾಕಷ್ಟು ಕವಿತೆಗಳಿಗೆ ಕುವೆಂಪು ಅವರ ಸಾಹಿತ್ಯದಲ್ಲಿ ಹೊಳಪುಗಳು, ಕೀಲಿಗಳು ದೊರೆಯುತ್ತವೆ. ಹಾಗೇಯೇ ಕುವೆಂಪು ಸಾಹಿತ್ಯಕ್ಕೂ ಕೂಡ. ಇಂತಹ ಹೊಸ ಅಧ್ಯಯನಗಳನ್ನು ಗಮನದಲ್ಲಿಟ್ಟುಕೊಂಡು ಇತ್ತೀಚಿನ ವಿಮರ್ಶೆಗಳನ್ನು ಅಧ್ಯಯನ ಮಾಡಬೇಕಾಗುತ್ತದೆ. ಇವೇ ಸಂಶೋಧನೆಯಲ್ಲಿ ಉಳಿಯುವ ಪ್ರಶ್ನೆಗಳು ಎನಿಸುತ್ತದೆ.

ಜಿ. ಕೃಷಪ್ಪ ಅವರು ಕಳೆದ ಶತಮಾನದ ಕೊನೆಯ ದಶಕಗಳಿಂದ ಬೇಂದ್ರೆ ಅವರ ಸಾಹಿತ್ಯವನ್ನು ಪೂರ್ಣವಾಗಿ ಅಧ್ಯಯನ ಮಾಡಲು ತೊಡಗಿದವರು. ಇವರದು ಸಂಶೋಧನಾ ಪ್ರವೃತ್ತಿ. ಬೇಂದ್ರೆ ಅವರ ಕಾವ್ಯದಲ್ಲಿ ಅಡಕವಾಗಿರುವ ತಾತ್ವಿಕತೆಯನ್ನು ತಾನೂ ಮೊದಲು ತಿಳಿದು ಆನಂದಪಡುವುದು ನಂತರ ಸಹೃದಯರಿಗೆ ಅರ್ಥೈಸುವ ಗುಣದವರು. ಕವಿಯ ಕಾವ್ಯದಲ್ಲಿ ಅಡಕವಾಗಿರುವ ಪದಸಂಪತ್ತನ್ನು ಅತ್ಯಂತ ಕುತೂಹಲವಾಗಿ ಗ್ರಹಿಸಿದವರು. ಹತ್ತಾರು ಕೃತಿಗಳಲ್ಲಿ ಬೇಂದ್ರೆ ಸಾಹಿತ್ಯ ಕುರಿತು ಅಧ್ಯಯನ ನಡೆಸಿದ್ದಾರೆ. ಬೇಂದ್ರೆ ಅವರು ತನ್ನ ಕಾವ್ಯದಲ್ಲಿ ಬಳಸಿದ ಹಲವು ಪದಗಳನ್ನು ಕುರಿತು ಸಂಶೋಧನೆಮಾಡಿ ಕವಿತೆಗಳಿಗೆ ಹೊಸ ಅರ್ಥ ನೀಡಿದ್ದಾರೆ. ಈ ರೀತಿಯಲ್ಲಿ ಸುಮಾರು ಮೂವತ್ತು ವರ್ಷಗಳ ಕಾಲ ಬೇಂದ್ರೆ ಅವರ ಕವಿತೆಗಳಲ್ಲಿನ ಪದಗಳ ಬೆನ್ನಟ್ಟಿ ಸಂಶೋಧನೆ ನಡೆಸಿ 'ಬೇಂದ್ರೆಕಾವ್ಯ: ಪದನಿರುಕ್ತ' ರಚಿಸಿದ್ದಾರೆ. ಬೇಂದ್ರೆ ಅವರ ಸಾಹಿತ್ಯ ಕುರಿತು ವಿಮರ್ಶಾತ್ಮಕವಾಗಿ ಅಧ್ಯಯನ ನಡೆಸಿದ ಸಮಕಾಲೀನ ವಿಮರ್ಶಕರೊಂದಿಗೆ ಚರ್ಚೆ, ಅಧ್ಯಯನ ಹಂಚಿಕೆ ಇವರದು. ಕೀರ್ತಿನಾಥ ಕುರ್ತಕೋಟಿ, ವಾಮನಬೇಂದ್ರೆ, ಶಂಕರಮೊಕಾಶಿ ಪುಣೇಕರ, ಆಮೂರ ಜಿ. ಎಸ್ ಮೊದಲಾದ ವಿಮರ್ಶಕರೊಂದಿಗೆ ಇವರ ಚರ್ಚೆ ಅಮೂಲಾಗ್ರವಾಗಿ ನಡೆದಿದೆ.

'ಹಾಡುಹಕ್ಕಿ ಅಂಬಿಕಾತನಯದತ್ತ', 'ಡಿ.ಆರ್ ಬೇಂದ್ರೆ', 'ನಾಕುತಂತಿ–ಒಂದು ಟಿಪ್ಪಣಿ', 'ಹೂತದ ಹುಣಸಿ', 'ಬೇಂದ್ರೆಯವರ ಸಾಹಿತ್ಯದಲ್ಲಿ ಸ್ತ್ರೀ–ಒಂದು ಅಧ್ಯಯನ', 'ಬರೆಹದಲ್ಲಿ ಬೇಂದ್ರೆಯವರ ಬದುಕು', 'ಅಂತರಂಗದತ್ತ ನಯನ', 'ತಿರು ತಿರುಗಿ ಹೊಸತಾಗಿರಿ', 'ಬೇಂದ್ರೆಯವರ ಸಾಹಿತ್ಯದಲ್ಲಿ ಶರಣ ಚಿಂತನೆ', 'ಬೇಂದ್ರೆ ಕಾವ್ಯದ ಪದ ನಿರುಕ್ತ' 'ಹಸಿರು ಹಚ್ಚಿ ಚುಚ್ಚಿ' ಈ ಕೃತಿಗಳನ್ನು ತಮ್ಮ ಅಧ್ಯಯನದ ಮೂಲಕ ಹೊಸ ಸಂಶೋಧನೆ ನೀಡುವ ರೂಪದಲ್ಲಿ ರಚಿಸಿರುವುದನ್ನು ಗಮನಿಸಬಹುದು.

'ಉದಯಭಾನು ಕಲಾಸಂಘ'ವು ಇವರ ಬೇಂದ್ರೆ ಸಾಹಿತ್ಯ ಅಧ್ಯಯನ ಗಮನಿಸಿ ವಿವಿಧ ವಿಮರ್ಶಕರಿಂದ 'ಡಾ. ಜಿ ಕೃಷ್ಣಪ್ಪ ಅವರ ಸಾಹಿತ್ಯ ಮಂಥನ' ಕಾರ್ಯ ಪ್ರಾರಂಭಿಸಿ ವಿಚಾರ ಸಂಕಿರಣ ಏರ್ಪಡಿಸಿ ಇದರ ಪ್ರಬಂಧಗಳನ್ನು 'ಕಾವ್ಯ ಶೋಧಕ' ಎಂಬ ಹೆಸರಿನಲ್ಲಿ ಪ್ರಕಟಗೊಳಿಸಿತು. ಇಂತಹ ಕಾರ್ಯವು ಬೇಂದ್ರೆ ಅವರ ಸಾಹಿತ್ಯದ ಮರುಚಿಂತನೆಗಳ, ತಾತ್ವಿಕ ವಿಸ್ತಾರದ ಚರ್ಚೆಗಳನ್ನು ಕಂಡುಕೊಳ್ಳಲು ಸಹಕಾರಿಯಾಗುತ್ತದೆ. ಈ ಕಾರ್ಯದ ಮೂಲಕ ಬೇಂದ್ರೆ ಅವರ ಸಾಹಿತ್ಯ ಕುರಿತ ಮರು ಅಧ್ಯಯನ ನಡೆದಿದೆ. ಕಳೆದ ಅಧ್ಯಾಯದಲ್ಲಿ ಇವರ 'ಹಾಡುಹಕ್ಕಿ ಅಂಬಿಕಾತನಯದತ್ತ', 'ಡಿ.ಆರ್ ಬೇಂದ್ರೆ' 'ನಾಕುತಂತಿ–ಒಂದು ಟಿಪ್ಪಣಿ', 'ಹೂತದ ಹುಣಸಿ' ಈ ಎಲ್ಲಾ ಕೃತಿಗಳನ್ನು ಅಧ್ಯಯನಗಳ ಜೊತೆಜೊತೆಗೆ ಬಳಸಲಾಗಿದೆ. 'ಬೇಂದ್ರೆಯವರ ಸಾಹಿತ್ಯದಲ್ಲಿ ಸ್ತ್ರೀ ಒಂದು ಅಧ್ಯಯನ' ಕೃತಿಯನ್ನು ಪ್ರತ್ಯೇಕವಾಗಿ ಸ್ತ್ರೀ ಚಿಂತನೆಯೆಂಬ ಶೀರ್ಷಿಕೆಯಲ್ಲಿ ಗ್ರಹಿಸಬಹುದು. ಇವರ ಪ್ರತಿಯೊಂದು ಅಧ್ಯಯನಗಳು ಕೂಡ ಜನಪದ ಗ್ರಹಿಕೆಯ ಆಧಾರದ ಮೇಲೆ ಒಂದು ಪ್ರಾದೇಶಿಕ ಸತ್ವವನ್ನು ಗ್ರಹಿಸುವ ನಿಟ್ಟಿನಲ್ಲಿ ಚರ್ಚಿಸಿದ್ದಾರೆ. ಈ ಕೃತಿಯ ಜೊತೆಗೆ ಸಮಕಾಲೀನ

ಇತರೆ ಬರಹಗಾರರು ಕೂಡ ಬೇಂದ್ರೆ ಅವರ ಸಾಹಿತ್ಯದಲ್ಲಿ ಸ್ತ್ರೀ ಚಿಂತನೆಗಳನ್ನು ನೋಡಿರುವ ವಿವಿಧ ದೃಷ್ಟಿಕೋನಗಳನ್ನು ಇಲ್ಲಿ ಗಮನಿಸಬಹುದು. ಮಹಿಳಾ ಚಿಂತನೆಯಾಗಿಯೂ ಬೇಂದ್ರೆ ಅವರ ಸಾಹಿತ್ಯದ ಸ್ತ್ರೀ ಅಧ್ಯಯನ ಪ್ರವೇಶಿಕೆಗಳು ಇಂದು ಲಭ್ಯವಾಗುತ್ತಿರುವುದು ಹೊಸ ಆಯಾಮದಲ್ಲಿ ವಿಮರ್ಶೆಯ ನೋಟವಾಗಿ ಗಮನಿಸಬಹುದು.

೫. ೧. 'ಸ್ತ್ರೀ' ಚಿಂತನೆಯ ಅಧ್ಯಯನಗಳು

ಬೇಂದ್ರೆ ಅವರ ಸಾಹಿತ್ಯ ಅಧ್ಯಯನ ನಡೆಸಿದವರೆಲ್ಲಾ ಬೇಂದ್ರೆ ಅವರು ಗ್ರಹಿಸಿರುವ ಸ್ತ್ರೀ ಪರವಾದ ಕಾಳಜಿಗಳ ಬಗ್ಗೆ ಚಿಂತನೆ ನಡೆಸಿದ್ದಾರೆ. ಬೇಂದ್ರೆ ಅವರ ಜೀವನ ಪ್ರವೇಶವಿಲ್ಲದೆ ಒಂದು ಶತಮಾನದಲ್ಲಿ ಮುಕ್ಕಾಲು ಪಾಲು ಬರಹಗಳು ಪೂರ್ಣಗೊಳ್ಳಲಿಲ್ಲ. ಇಲ್ಲಿ ಅವರ ತಾಯಿ ಹಾಗೂ ಅಜ್ಜಿಯ ನೆರವಿನೊಂದಿಗೆ ಬೇಂದ್ರೆಯೊಳಗೆ ಅಂಬಿಕಾತನಯದತ್ತನ ರೂಪುಗೊಳ್ಳುವಿಕೆಯನ್ನು ಕವಿಯೇ ಹಲವು ಕವಿತೆ, ಲೇಖನಗಳಲ್ಲಿ ಸ್ಪಷ್ಟಪಡಿದ್ದಾರೆ. ಒಲವಿನಲ್ಲಿ ಚೆಲುವು ಕಂಡ ಕವಿ 'ಸಖೀಗೀತ' ರಚಿಸಿ ಸಂತೃಪ್ತರಾಗಿ ಆಧ್ಯಾತ್ಮದ ಕಡೆ ಹೊರಳುತ್ತಾರೆ.

ಬೇಂದ್ರೆ ಅವರ ಸಾಹಿತ್ಯದ ನೆಲೆಯನ್ನು ಅದರ ಸ್ವರೂಪವನ್ನು ಸ್ತ್ರೀ ಚಿಂತನೆಯ ಮೂಲಕ ಗ್ರಹಿಸುವ ಹಲವು ಲೇಖನಗಳನ್ನು ಗಮನಿಸುವ ಮುನ್ನ ಜಿ. ಕೃಷ್ಣಪ್ಪ ಅವರ ಕೃತಿಯನ್ನು ಗಮನಿಸಿದರೆ ಸೂಕ್ತವೆನಿಸುತ್ತದೆ. 'ಬೇಂದ್ರೆಯವರ ಸಾಹಿತ್ಯದಲ್ಲಿ ಸ್ತ್ರೀ ಒಂದು ಅಧ್ಯಯನ' ಎಂಬುದು ಒಂದು ಸಂಶೋಧನಾ ಪ್ರಬಂಧ. ಈ ಕೃತಿಯಲ್ಲಿ ಭಾರತೀಯ ಸಮಾಜದಲ್ಲಿ ಸ್ತ್ರೀ-ಕುರಿತ ಸಾಹಿತ್ಯದ ಸ್ಥಾನಮಾನಗಳನ್ನು ಅವಲೋಕಿಸಿದ್ದಾರೆ. ಭಾರತೀಯ ಸ್ತ್ರೀ-ಚಿಂತನೆಯ ಮೂಲಕ ಪ್ರವೇಶ ಪಡೆಯುವ ಕೃಷ್ಣಪ್ಪನವರು ಬೇಂದ್ರೆ ಅವರ ಸಾಹಿತ್ಯದಲ್ಲಿ ಕಂಡು ಬರುವ ಸ್ತ್ರೀ-ಚಿಂತನೆಯನ್ನೂ ಅತ್ಯಂತ ಸೂಕ್ಷ್ಮವಾಗಿ ಗ್ರಹಿಸುತ್ತಾರೆ. ಆದರೆ ಇಲ್ಲಿ ಮುಖ್ಯ ಸಮಸ್ಯೆ ಎಂದರೆ ಕರ್ನಾಟಕದ ಪರಿಸರದಲ್ಲಿ ಅದರಲ್ಲೂ ಉತ್ತರ ಕರ್ನಾಟಕದ ಪರಿಸರದಲ್ಲಿ ಸ್ತ್ರೀ-ಚಿಂತನೆಗಳನ್ನು ಗ್ರಹಿಸಿದ್ದರೆ, ಬೇಂದ್ರೆ ಅವರ ಕಾವ್ಯದಲ್ಲಿ ಅಡಗಿರುವ ಸ್ತ್ರೀ-ದರ್ಶನ ನೇರವಾಗಿ ನಮಗೆ ದಕ್ಕುತ್ತಿತ್ತು. ಇಂತಹ ಅಲೋಚನೆಯಲ್ಲಿ ಇದುವರೆಗೂ ಯಾವುದೇ ಅಧ್ಯಯನಗಳು ನಡೆಯದಿರುವುದು ಹೊಸ ಸಂಶೋಧನೆಗೆ ದಾರಿ ನೀಡುತ್ತವೆ. ಜಿ. ಕೃಷ್ಣಪ್ಪ ಅವರ 'ಭಾರತೀಯ ಸಮಾಜ ಮತ್ತು ಸ್ತ್ರೀ' ಎಂಬ ಅಧ್ಯಾಯವು ಬೇಂದ್ರೆ ಅವರ ಸಾಹಿತ್ಯದಲ್ಲಿ ಬರುವ ಕಾವ್ಯನೆಲೆಗಳ ವಸ್ತುವಿಗೆ ಬೇಕಾದ ಹಿನ್ನಲೆ ಹಾಗೂ ಒಂದು ಚರಿತ್ರೆಯನ್ನು ಸಾಹಿತ್ಯದ ಮೂಲಕ ನಮಗೆ ದೊರಕಿಸುತ್ತದೆ. ಆದರೆ ಭಾರತೀಯ ಸಮಾಜ ನಿರೂಪಿಸಿದ ವೇದ, ಪುರಾಣ, ಉಪನಿಷತ್ತು, ಬೌದ್ಧ, ಜೈನ ಮೊದಲಾದ ಧಾರ್ಮಿಕ ಹಾಗೂ ಸಮಾಜಿಕ ಪದ್ಧತಿಗಳಲ್ಲಿ ಸ್ತ್ರೀ-ರೂಪಿತ ಜಗತ್ತು ಮಾತ್ರ ಬೇಂದ್ರೆ ಅವರ ಕಾವ್ಯದ ತಾತ್ವಿಕ ಸ್ವರೂಪವಾಗಿಲ್ಲ. ಬೇಂದ್ರೆ ಅವರ ಕಾವ್ಯವನ್ನು ಗ್ರಹಿಸುತ್ತಾ ಹೋದಂತೆಲ್ಲಾ ನಿರೂಪಿತಗೊಳ್ಳುವುದು. ಪರಿಸರ ಹಾಗೂ ಸಮಾಜಿಕ ಚಿಂತನೆಯು ಜನಪದ ಸೊಗಡಿನ ಬೇರಿಂದ ರಚನೆಗೊಂಡಿರುವ ಪರಿ. ಈ ಅಂಶಗಳನ್ನು ಕೃಷಪ್ಪನವರು ತಮ್ಮ ಎಲ್ಲಾ 'ಬೇಂದ್ರೆ ಸಾಹಿತ್ಯ ಅಧ್ಯಯನ'ಗಳಲ್ಲಿ ಸ್ಪಷ್ಟಪಡಿಸುತ್ತಲೇ ಸಾಗಿದ್ದಾರೆ.

ಬೇಂದ್ರೆ ಅವರ ಸಾಹಿತ್ಯದಲ್ಲಿ ಸ್ತ್ರೀ ಚಿಂತನೆಯ ಗ್ರಹಿಕೆಗೆ ಇನ್ನೊಂದು ಹಾದಿ ನಮಗೆ ದೊರಕುತ್ತದೆ. ಬೇಂದ್ರೆ ಅವರ ಬರಹದ ಸಮಕಾಲೀನ ಧಾರವಾಡ ಪರಿಸರದ ಬರಹಗಾರರಲ್ಲಿ ಮೂಡುವ ಸ್ತ್ರೀ ಚಿಂತನೆಗಳ ಅಧ್ಯಯನವು ಒಂದು ಚರಿತ್ರೆಯ ಬೆಸುಗೆಯನ್ನು ಸ್ಪಷ್ಟವಾಗಿ ತೋರಿಸಬಲ್ಲದು. ಗೆಳೆಯರ ಗುಂಪಿನಿಂದ ಬಂದ ಬರಹಗಾರರು, ಚನ್ನವೀರ ಕಣವಿ, ಈಶ್ವರ ಸಣಕಲ್ಲ, ಚಂದ್ರಶೇಖರ ಕಂಬಾರ, ಚಂದ್ರಶೇಖರ ಪಾಟೀಲ, ಸೋಮಶೇಖರ ಇಮ್ರಾಪುರ ಹೀಗೆ ಮೊದಲಾದ ಹಲವು ಬರಹಗಾರರು ಅದರಲ್ಲೂ ಪ್ರಸಿದ್ಧ ಹೊಂದದ ನೂರಾರು ಬರಹಗಾರರು ಈ ಉತ್ತರ ಕರ್ನಾಟಕ ಪರಿಸರದಲ್ಲಿ ಸಾಹಿತ್ಯ ರಚಿಸಿದ್ದಾರೆ. ಇವರ ಗ್ರಹಿಕೆಗಳಲ್ಲಿ ಹೆಣ್ಣಿನ ಅಭಿವ್ಯಕ್ತಿ ಕ್ರಮಗಳ ಒಂದು ಸಾಪೇಕ್ಷ ಸಂಬಂಧದ ಬಲೆಯಂತೂ ಮೂಡಿರುತ್ತದೆ ಎನಿಸುತ್ತದೆ.

ಬೇಂದ್ರೆ ಅವರ ಸಾಹಿತ್ಯದಲ್ಲಿ ಅಧ್ಯಯನ ಮಾಡುವುದಾದರೆ ಧಾರವಾಡದ ಪರಿಸರ ತಾಯಿ, ತನ್ನ ತಾಯಿ, ಕನ್ನಡ ತಾಯಿ, ಭಾರತ ತಾಯಿ, ವಿಶ್ವ ತಾಯಿ ಹೀಗೆ ಐದು ವಿಧದಲ್ಲಿ ಹಂಚಿಕೆಯಾಗುವ ಈ ಐದು ಐದೆಯರು ಅಂಬಿಕಾತನಯ ದತ್ತನ ನಿರೂಪಿತರು. ಇದು ಬೇಂದ್ರೆ ಅವರ ತಾಯಿ, ಗುರು, ಅಧ್ಯಾತ್ಮ, ಒಲವು, ವಸಂತ ಮೊದಲಾದ ಅಂಶಗಳ ಸಿದ್ಧಾಂತ ಕಾವ್ಯನೆಲೆಗೆ ಓದುಗ ಬಂಧಿತನಾಗುತ್ತಾನೆ. ಬೇಂದ್ರೆ ಅವರು ಓದುಗನನ್ನು ಪೂರ್ಣವಾಗಿ ತನ್ನ ಕಾವ್ಯಬೇರಿನ ಮೂಲಕ ಪ್ರೋಟಿನ್ ಸತ್ತ್ವರನ್ನಾಗಿ ಹೀರುತ್ತಾ ಗಾರುಡಿಗನಾಗಿ ನಿಲ್ಲುತ್ತಾರೆ. ಆದ್ದರಿಂದ ಬೇಂದ್ರೆ ಅವರನ್ನು ಅಪರೂಪವಾಗಿ ಓದಿರುವ ಲೇಖಕರು ಅತಿಕಡಿಮೆ. ಬೇಂದ್ರೆ ಅವರ ಕುರಿತು ಕೃಷ್ಣಪ್ಪನವರು ಕಾವ್ಯದ ಮೂಲಕ ಸಾಹಿತ್ಯ ಪ್ರವೇಶ ಮಾಡುತ್ತಾರೆ. ಧಾರವಾಡ ಪರಿಸರದೊಂದಿಗೆ ಜಾನಪದ ನೆಲೆಯನ್ನು ಬೇಂದ್ರೆ ಅವರ ಅತ್ಯಂತ ಸತ್ತ್ವಯುತವಾಗಿ ದುಡಿಸಿಕೊಳ್ಳುವ ಕ್ರಮಕ್ಕೆ ಶೋಧಕರಾಗಿ ಅಧ್ಯಯನ ನಡೆಸುತ್ತಾರೆ. ಕೃಷ್ಣಪ್ಪ ಅವರ ಪ್ರಸ್ತುತ ಅಧ್ಯಯನಗಳೂ ಕೂಡ ಶಬ್ದ, ಪದಗಳು ಮಾಡುವ ಜನಪದ ಪರಿಸರ ಅಭಿವ್ಯಕ್ತಿಯ ಮೂಲ ಸ್ವರೂಪದ ಹುಡುಕಾಟದ ಹಿನ್ನೆಲೆಯಲ್ಲಿಯೇ ಬೇಂದ್ರೆ ಅವರು ರೂಪಿಸಿದ ಧಾರವಾಡದ ಜಗತ್ತು ಆಧುನಿಕ ಜಗತ್ತಿನ ಭವಿಷ್ಯವಾಗಿದೆ ಎಂಬುದರ ನಿರೂಪಣೆ ಎನ್ನಬಹುದು.

ಬೇಂದ್ರೆ ಅವರು ಬೆಳೆದು ಬಂದ ಪರಿಸರವು ಮಾತೃ ನಿರ್ಮಾಣದ ವ್ಯಕ್ತಿತ್ವದ ದಾರಿಯಾಗಿದೆ. ಇದೇ ದಾರಿಯಲ್ಲಿ ಕೃಷ್ಣಪ್ಪನವರ ಅಧ್ಯಯನ ಸಾಗುತ್ತಾ ಬೇಂದ್ರೆ ಕಾವ್ಯದಲ್ಲಿ ಸ್ತ್ರೀ ಎಂಬ ಅಧ್ಯಾಯದ ಮೂಲಕ ಬೇಂದ್ರೆ ಅವರ ಬದುಕಿನಲ್ಲಿ ಆರು ಮುಖಗಳಲ್ಲಿ ದರ್ಶನವಾದ ಸ್ತ್ರೀ-ಚಿಂತನೆಗಳನ್ನು ವಿಶಾಲವಾಗಿ ಗಮನಿಸಬಹುದು. 'ಅಂಬಿಕಾತನಯ ದತ್ತನಲ್ಲಿನ ತಾಯಿ', 'ಪ್ರೇಮಗೀತೆಗಳಲ್ಲಿನ ಪ್ರೇಯಸಿ', 'ಸಖೀಗೀತ, ಮನದನ್ನೆ ಮುಂತಾದ ಕವನಗಳಲ್ಲಿನ ಮಡದಿ', 'ಮಗಳು, ಸಾಹಿತ್ಯ ಸಹೋದರಿಯರು, ಇತರ ಸ್ತ್ರೀಯರು', 'ಬಸವಿ, ಹುಬ್ಬಳಿಯಾಂವಾ', 'ಧಾರವಾಡದ ತಾಯಿ, ಕನ್ನಡ ತಾಯಿ, ಭಾರತಮಾತೆ, ಭೂಮಿತಾಯಿ, ಪ್ರಕೃತಿಮಾತೆ, ವಿಶ್ವಮಾತೆ' ಹೀಗೆ ಪ್ರತಿಯೊಂದು ಸೂಕ್ಷ್ಮಗಳನ್ನು ಕವಿತೆಗಳಿಂದಲೇ ಅರ್ಥೈಸುತ್ತಾ ಬೇಂದ್ರೆ ಅವರ ಅಭಿವ್ಯಕ್ತಿ ಕ್ರಮವನ್ನು ಸಾಣೆಯಿಡಿದಿದ್ದಾರೆ. ನಾಟಕ ಹಾಗೂ ಕಥೆಗಳಲ್ಲಿಯೂ ಸ್ತ್ರೀ-ಚಿಂತನೆಯ ಅಭಿವ್ಯಕ್ತಿಕ್ರಮವನ್ನೂ 'ಬೇಂದ್ರೆಯವರ ಇತರ ಕೃತಿಗಳಲ್ಲಿ ಸ್ತ್ರೀ' ಎಂಬ ಅಧ್ಯಾಯದಲ್ಲಿ ಗಮನಿಸಿದ್ದಾರೆ.

ಕೃಷ್ಣಪ್ಪ ಅವರು ಬೇಂದ್ರೆ ಅವರ ಕಾವ್ಯದ ಹೊಸ ಹೆಜ್ಜೆಗಳನ್ನು ಕಾಲಘಟ್ಟ ಹಾಗೂ ಚಿಂತನೆಗಳಿಗೆ ಅನುಗುಣವಾಗಿ ಏಳುನೆಲೆಗಳನ್ನು ಗುರ್ತಿಸಿದ್ದಾರೆ

> ವಾಲ್ಮೀಕಿ ಪರಂಪರೆಯನ್ನು ಬೇಂದ್ರೆಕಾವ್ಯ ತಳಹದಿಯಾಗಿ ಒಪ್ಪಿಕೊಂಡು, (ಕಾವ್ಯೋದ್ಯೋಗ ಯೋಗ, ಆಯೋಗ, ಪ್ರಯೋಗ, ವಿಯೋಗ, ಸಂಯೋಗ, ಅಭಿಯೋಗ ಮತ್ತು ಉತ್ ಯೋಗ) ಎಂಬ ಏಳು ನೆಲೆಗಳಲ್ಲಿ ಕಾವ್ಯವನ್ನು ಸೃಷ್ಟಿಸುವ ಹೊಸಹೆಜ್ಜೆ ಬೇಂದ್ರೆ ಇಟ್ಟರು.[೧]

ಬೇಂದ್ರೆ ಅವರ ಕವಿತೆಗಳಿಲ್ಲಿಯೇ ಅವರ ಆತ್ಮಚರಿತ್ರೆಯು ತೆರೆದುಕೊಳ್ಳುತ್ತದೆ. ಪ್ರತಿಯೊಂದು ಕವಿತೆಯಲ್ಲಿಯೂ ತಾವು ಬೆಳೆದ ಪರಿಸರ, ಪ್ರೇರಣೆ ಹೀಗೆ ಬೇಂದ್ರೆ ಅಂಬಿಕಾತನಯದತ್ತನಾಗುವ ಪರಿ ಅಭಿವ್ಯಕ್ತಗೊಳ್ಳುತ್ತದೆ. ಇಲ್ಲಿ ಪ್ರತಿ ಹಂತದಲ್ಲಿಯೂ ತಾಯಿಯ ಸ್ಥಾನವನ್ನು ಕವಿ ದರ್ಶನದಂತೆ ಗ್ರಹಿಸುತ್ತಾರೆ. ಈ ಪ್ರೇರಣೆಯ ಕ್ರಮವನ್ನು ಕೃಷ್ಣಪ್ಪ ಅವರು ಕವಿತೆಗಳ ಮೂಲಕ ಅಧ್ಯಯನ ಮಾಡಿದ್ದಾರೆ. ಈ ಅಧ್ಯಯನದಲ್ಲಿ ಬೇಂದ್ರೆ ಅವರು ಬದುಕಿದ್ದ ಪರಿಸರದ ಅಧ್ಯಯನವನ್ನೂ ಕಾಣಬಹುದು. ಇವರು ಬೇಂದ್ರೆ ಅವರ ಸಾಹಿತ್ಯವನ್ನು ಜನಪದ ಮೂಲದ ಅರ್ಥಗಳನ್ನು ಹುಡುಕುವ ಮೂಲಕ 'ಸಹೃದಯ' ವಿಮರ್ಶಾ ಮಾದರಿ ಇವರದು.

ಬೇಂದ್ರೆ ಅವರ ಕಾವ್ಯದ ವೈಚಾರಿಕ ನಿಲುವಾಗಿ ಪ್ರೇಮತತ್ತ್ವದೊಳಗೆ ಅಡಗಿರುವ ವಿಚಾರವನ್ನು ಕೃಷ್ಣಪ್ಪನವರು ತಾಯಿ, ಪ್ರೇಯಸಿ, ಮಡದಿ, ಮಗಳು, ಸಾಹಿತ್ಯದ ಸಹೋದರಿ, ವಿಧವೆ, ಬಸವಿ, ಭಿಕ್ಷುಕಿಯಾಗಿ ವಿವಿಧ ಮುಖಗಳನ್ನು ಕಾವ್ಯತತ್ತ್ವದ ಸಾರದಲ್ಲಿ ಗ್ರಹಿಸಿದ್ದಾರೆ.

> ಬೇಂದ್ರೆಯವರು ಅಖಂಡ ಬದುಕನ್ನು ಹಿಡಿಯುವ ಪ್ರಯತ್ನವನ್ನು ಮಾಡಿದ್ದರಿಂದ ಅವರ ಒಂದೊಂದು ಕವನದಲ್ಲಿಯೂ ಹಲವು ನೆಲೆಯ ಚಿಂತನೆಗಳು ಒಡಮೂಡಿ ಬಂದಿವೆ. ಅದು ಸಮಗ್ರವನ್ನು ಏಕದಲ್ಲಿ ಕಾಣಲಾಗದ ಕ್ಷುಲ್ಲಕ ಮನಸ್ಸುಗಳಿಗೆ ಭಿನ್ನ ಭಿನ್ನ ಭಾವವಾಗಿ ಕಂಡಿದೆ. ನೂರು ಮರ ನೂರು ಸ್ವರ। ಒಂದೊಂದು ಅತಿ ಮಧುರ। ಬಂಧವಿರದ ಬಂಧುರ। ಸ್ವಚ್ಛಂದ ಸುಂದರ'ದಂತೆ ತುಂಬ ಹೂವಿನ ಸೊಬಗು ತಾವರೆಯ ಬೆಳಗು ಒಂದೇ ಎಂದು ಅರಿತ ಅವರು ತುಂಬಿ ಬಂದ ಭಾವದಲ್ಲಿ ಹಾಡಿ– 'ಗಾಳಿ ಕೆನಿಲೇನ ಮಾಡಿದ್ದಾರ ತಾನ' ಎಂಬ ಚಿಟ್ಟೆಯ ಸೊಬಗಿನ ಪೂರ್ಣ ವಿಕಾಸ ಹೊಂದಿದ 'ಬೆಳಕಿಗಿಂತ ಬೆಳ್ಳಗೆ' ಇರುವ ದೇಶ ಕಾಲಾತೀತವಾದ ಚಿಂತನೆಯನ್ನು ತಮ್ಮ ಕಾವ್ಯದಲ್ಲಿ ನೀಡಿದರು. ಆ ಚಿಂತನೆಯಲ್ಲಿ ವಿಷಯ ವೈವಿಧ್ಯದಂತೆ ಛಂದೋ ವೈವಿಧ್ಯವಿದ್ದು; ದೇಶಿ ಮತ್ತು ಶಿಷ್ಟ ಬದುಕು ಹಾಗೂ ಭಾಷೆಯ ಸವಿಯರಿತ ಅವರು ಅದನ್ನು ಸಮರ್ಥವಾಗಿ ಅಭಿವ್ಯಕ್ತಿಸಿದರು.[೨]

ಭಾರತಿ ಟಿ.ಸಿ ಅವರ 'ಬೇಂದ್ರೆಯವರ ಕಾವ್ಯದಲ್ಲಿ ಮಾತೃತ್ವದ ಪರಿಕಲ್ಪನೆ' ಎಂಬ ಸಂಶೋಧನಾ ಪ್ರಬಂಧವನ್ನು ಕೃಷ್ಣಪ್ಪ ಅವರ ಸಂಶೋಧನಾ ಕೃತಿಯೊಂದಿಗೆ ತೌಲನಿಕ ಅಧ್ಯಯನ ನಡೆಸಬಹುದು. ಜಿ. ಕೃಷ್ಣಪ್ಪ ಅವರ 'ಬೇಂದ್ರೆಯವರ ಸಾಹಿತ್ಯದಲ್ಲಿ ಸ್ತ್ರೀ ಒಂದು ಅಧ್ಯಯನ'ವನ್ನು ನಡೆಸುವಾಗ ವಹಿಸುವ ಎಚ್ಚರಿಕೆಯನ್ನು ಭಾರತಿ ಅವರು ಅತ್ಯಂತ ಸಮರ್ಥವಾಗಿ ನಿರ್ವಹಿಸಿದ್ದಾರೆ. ಬೇಂದ್ರೆ ಅವರ ಕಾವ್ಯದಲ್ಲಿ ಮಾತೃ ಪರಿಕಲ್ಪನೆಯ ಅಧ್ಯಯನ ಇವರ ಮುಖ್ಯನೆಲೆಯಾಗಿದೆ. ಇವರ ಸಂಶೋಧನೆಯ ಮುಖ್ಯ ಉದ್ದೇಶವನ್ನು ಈ ರೀತಿ ಅಭಿವ್ಯಕ್ತಪಡಿಸಿದ್ದಾರೆ.

ಬೇಂದ್ರೆಯವರ ಕಾವ್ಯದ ಬಗೆಗೆ ಇದುವರೆಗೂ ನಡೆದಿರುವ ಅಧ್ಯಯನಗಳನ್ನು, ಸಂಶೋಧನಗಳನ್ನು ಗಮನಿಸಿದರೆ, ಅವುಗಳ ಅಧ್ಯಯನ ಸಾಮಾನ್ಯವಾಗಿ ಬೇಂದ್ರೆಯವರ ಸಮಗ್ರ ಕಾವ್ಯವನ್ನು ಕುರಿತದ್ದಾಗಿದೆ. ಅಥವಾ ನಿರ್ದಿಷ್ಟವಾದ ಮತ್ತು ಸೀಮೀತವಾದ ಅಂಶಗಳನ್ನು ಕುರಿತದ್ದಾಗಿದೆ. ಇಲ್ಲವೇ ಅವರ ಕಾವ್ಯದಲ್ಲಿನ ಭಾಷೆ, ಛಂದಸ್ಸು, ನಾದ ಲಯ, ಕಾವ್ಯ ಮೀಮಾಂಸೆ ಇತ್ಯಾದಿ ದೃಷ್ಟಿಕೋನಗಳಿಂದ ಅಧ್ಯಯನಗಳು ನಡೆದಿವೆ. ಇನ್ನು ಬೇಂದ್ರೆಯವ ಕಾವ್ಯದಲ್ಲಿನ ಪ್ರಕೃತಿ, ಭೂಮಿ, ಪ್ರೇಮ–ಕಾಮ, ಧರ್ಮ ಅನುಭಾವ, ಸಾಮಾಜಿಕ ಪ್ರಜ್ಞೆ ಇತ್ಯಾದಿ ಮುಖಗಳ ಅಧ್ಯಯನ ರೂಪಗಳಾಗಿ ಬಿಡಿಲೇಖನಗಳು ಪ್ರಕಟಗೊಂಡಿವೆ. ಅವರ ಪ್ರಸಿದ್ಧವಾದ ಕವನಗಳನ್ನು ಕುರಿತು ಉತ್ತಮ ವಿಮರ್ಶೆಗಳು ಪ್ರಕಟವಾಗಿವೆ.[೩]

ಈ ಬರಹಗಳಲ್ಲೆಲ್ಲಾ ಬೇಂದ್ರೆ ಅವರ ಸಾಹಿತ್ಯ ಅಧ್ಯಯನದಲ್ಲಿ ಮಾತೃತ್ವದ ಪರಿಕಲ್ಪನೆ ಕುರಿತು ಅಗತ್ಯವಿದ್ದ ಕಡೆ ಮಾತ್ರ ಗಮನಹರಿಸಿರುವ ಕಾರಣ ಇದನ್ನು ಮುಖ್ಯವಿಷಯವಾಗಿ ಸಂಶೋಧನೆ ಮಾಡಿರುವ ಉದ್ದೇಶವಾಗಿದೆ. ತಾಯಿ, ಅಜ್ಜಿ, ಬಾಲ್ಯದ ಸಂಸ್ಕಾರ, ಹಲವು ಪ್ರೇರಣೆ–ಪ್ರಭಾವಗಳನ್ನು ವ್ಯಾಪ್ತಿ ಮಾಡಿಕೊಂಡು ಇವೆಲ್ಲವುಗಳನ್ನು ಅಧ್ಯಯನ ಮಾಡಿದ್ದಾರೆ. ಇವರು ಸಹ ಜಿ. ಕೃಷ್ಣಪ್ಪ ಅವರ ಅಧ್ಯಯನ ವಿಧಾನವನ್ನೇ ಅನುಸರಿಸಿದ್ದರು ಅರ್ಥೈಸಿರುವ ರೀತಿ ಬೇರೆಯಾಗಿದೆ.

ಮಾತೃತ್ವದ ನೆಲೆಯನ್ನು ಗಮನಿಸುತ್ತಲೇ ವಸಾಹತುಶಾಹಿ ದಬ್ಬಾಳಿಕೆಯ ಕ್ರೂರತೆಯನ್ನು ಕಟ್ಟಿಕೊಡುತ್ತಾರೆ. ಭಾರತಿ ಟಿ.ಸಿ ಅವರು ಸಾಮಾನ್ಯಜನರ ತೊಳಲಾಟವನ್ನು ವಸಾಹತುಶಾಹಿಯ ಶೋಷಣೆಯ ಹಿನ್ನಲೆಯಲ್ಲಿ ಈ ರೀತಿಯಲ್ಲಿ ಸ್ಪಷ್ಟಪಡಿಸಿದ್ದಾರೆ.

> ಅಧಿಕಾರ ಶಾಹಿಗಳ, ಉಳ್ಳವರ ದೌರ್ಜನ್ಯದಿಂದ ಸಾಮಾನ್ಯ ಜನರು ಅರೆ ಸತ್ತು ಕೊಳೆಯುತ್ತಿದ್ದಾರೆ. ಆ ನೋವು ಭೂಮಿ ತಾಯಿಗೆ ಎಷ್ಟು ಭೀಕರವಾದುದೆಂದರೆ, ಬೇಂದ್ರೆಯವರು ಕೊಡುವ ಉಪಮೆ ಅನನ್ಯವಾದುದು. 'ಹಸುಗೂಸು ತಿರುಗಿ ಹೊಟ್ಯಾಗ ಹುಗಿದ್ಹಾಂಗ'– ಈ ನೋವು ನಿಜಕ್ಕೂ ಊಹಿಸಲೂ ಅಸಾಧ್ಯವಾದುದಾಗಿದೆ. ದೌರ್ಜನ್ಯಕ್ಕೊಳಗಾದ ಮನುಷ್ಯನು ಅರೆ ಜೀವವಾಗಿ ಇತ್ತ ಬದುಕಲೂ ಆಗದೆ, ಅತ್ತ ಸಾಯಲೂ ಆಗದ ಅತ್ತ ಸಾಯಲೂ ಆಗದ ಅತಂತ್ರವಾದ ಅಸಹ್ಯ ಸ್ಥಿತಿಯಲ್ಲಿದ್ದಾನೆ. ಕೊಳೆತು, ಹುಳಿತು, ಅಳುತ್ತಿರುವ ಮನುಷ್ಯ ಅನುಕಂಪಕ್ಕೀಡಾಗುತ್ತಾನೆ. ಇಲ್ಲಿ 'ಮಾನವನ ಮನವೆ ಮನುಜನ ವೈರಿ' ಎಂಬ ಬೇಂದ್ರೆಯವರ ಚಿಂತನೆ ಅದ್ಭುತವಾಗಿ ಕೆಲಸ ಮಾಡಿದೆ. ಈ ಸಾಲುಗಳು ಸಮಾಜದಲ್ಲಿನ ಸಾಮಾನ್ಯ ಮನುಷ್ಯನ ಮೇಲಿನ ಹಿಂಸೆಯನ್ನು ಕುರಿತದ್ದಾಗಿದೆ.[೪]

ಇಲ್ಲಿ ಮನುಷ್ಯ ಹಾಗೂ ಭೂಮಿ ನೆಲೆಯಲ್ಲಿ ದೌರ್ಜನ್ಯಗಳ ಶತಮಾನಗಳ ಚಿತ್ರಣವೇ ಇಪ್ಪತ್ತನೆ ಶತಮಾನದ ಪ್ರಮುಖ ಚಿಂತನೆಯಾಗಿ ಮೂಡಿಬಂದಿದೆ ಎನ್ನಬಹುದು. ಇಲ್ಲಿ ಭೂಮಿಯು ಹೆಣ್ಣಿನ ಅದರಲ್ಲೂ ಮಾತೃವಿನ ಸಂಕೇತವಾಗಿ ಅಧ್ಯಯನ ಮಾಡಲಾಗಿದೆ. ವಸಾಹತುಶಾಹಿಯ ಧೋರಣೆಯನ್ನು ಕವಿಯು ಠಾಗೂರರ, ಅರವಿಂದರ ಮಾತೃ ಪರಿಕಲ್ಪನೆಯನ್ನು ಗ್ರಹಿಸುವಾಗ, ಯಾವುದೇ ಪಾಶ್ಚಾತ್ಯ ಧೋರಣೆಗೆ ಸಮ್ಮಿಲಿಸದೆ ಭಾರತೀಯ ನೆಲೆಯಲ್ಲಿ ಇಲ್ಲಿನ ಜ್ಞಾನಶಿಸ್ತಿನ

ಅಧ್ಯಯನಕ್ಕೆ ಅಳವಡಿಸಿದ್ದಾರೆ. ಅದು ಕನ್ನಡದ ಚಳುವಳಿಯಾಗಿ ಸ್ವತಂತ್ರವಾಗಿ ಮೈದಳೆಯುವ ಶಕ್ತಿಯನ್ನು ಹೊಂದಿದೆ ಎನ್ನಬಹುದು.

'ಹಾಡುಹಕ್ಕಿ ಅಂಬಿಕಾತನಯದತ್ತ' ಕೃತಿಯನ್ನು ರಚಿಸಿದ ಕೃಷ್ಣಪ್ಪ ಜಿ ಅವರು ಅಧ್ಯಯನ ಪ್ರವೇಶಿಕೆಯನ್ನು ಈ ರೀತಿಯಲ್ಲಿ ಪಡೆಯುತ್ತಾರೆ

> ಕುವೆಂಪು ಮತ್ತು ಅಂಬಿಕಾತನಯದತ್ತ, ಕನ್ನಡ ಕಾವ್ಯ ಪರಂಪರೆಯನ್ನು ನವೋದಯ, ನವ್ಯ ಮತ್ತು ಬಂಡಾಯ ಕಾವ್ಯ ಮಾರ್ಗದಲ್ಲಿ ಜೀವಂತವಾಗಿ ಕಾಪಾಡಿದ ಮಹನೀಯರು. ಇವರಿಬ್ಬರಲ್ಲಿ ಹಲವು ಬಗೆಯ ಅಂತರಗಳ ಪ್ರಚಾರ ಮಾಡಿ, ವಾಚಕರನ್ನು ಎರಡು ದಂಡೆಗೆ ಎಳೆದುಕೊಂಡು ಹೋಗುವ ವಿಮರ್ಶಾಮಾರ್ಗ ಇದ್ದುದು ಒಂದು ದುರಂತ. ಕೀರ್ತಿಶೇಷರಾಗಿರುವ ಇಬ್ಬರ ಪರಸ್ಪರ ಅಂತಃಕರಣದ ದರ್ಶವನ್ನು ಮಾಡಿಸಿ, ಕನ್ನಡ ಸಾಹಿತ್ಯದ ಅಭ್ಯಾಸಿಗಳ ಮುಂದಿನ ಪೀಳಿಗೆಯನ್ನಾದರೂ ಸಮನ್ವಯದ ಹಾದಿಯಲ್ಲಿ ನಡೆಸುವುದು ಅವಶ್ಯವಾದ ಕಾರ್ಯ ಆ ಕಾರ್ಯವನ್ನು ಕೃಷ್ಣಪ್ಪನವರು ಸಮರ್ಥವಾಗಿ ಮಾಡಿದ್ದಾರೆ.[೫]

ಈ ಕೃತಿಯನ್ನು ಅವಲೋಕಿಸಿದಾಗ ಬೇಂದ್ರೆ ಅವರು ಸಾಹಿತ್ಯದ ವಿವಿಧ ಪ್ರಕಾರಗಳೊಂದಿಗೆ ರೂಪಿಸಿಕೊಂಡ 'ಸಾಹಿತ್ಯ ಸಿದ್ಧಿ'ಯ ವಿವಿಧ ಆಯಾಮಗಳನ್ನು ಅಧ್ಯಯನ ಮಾಡಿರುವುದನ್ನು ಗಮನಿಸಬಹುದು. ಕಾವ್ಯದಲ್ಲಿ 'ಕೃಷ್ಣ ಕುಮಾರಿ' ಸಂಕಲನವನ್ನು ಅವಲೋಕಿಸುತ್ತಾ ಒಂದು ಕಥೆಯನ್ನು ಕಾವ್ಯದ ಪ್ರೌಢಿಮೆಯಲ್ಲಿ ದುಡಿಸಿಕೊಳ್ಳುವ ಈ ತಾತ್ವಿಕ ಸ್ವರೂಪವನ್ನು ತಿಳಿಯಬಹುದು. 'ಗರಿ' ಸಂಕಲನದಿಂದ ಬಡತನದ ಸಾಂಕೇತಿಕ ಪ್ರತಿಮೆಗಳು ಧ್ವನಿಸುವ ಸಾಹಿತ್ಯದ ಅರ್ಥಗಳನ್ನು ಅತ್ಯಂತ ಸೂಕ್ಷ್ಮವಾಗಿ ಗ್ರಹಿಸಿರುವುದನ್ನು ಕಾಣಬಹುದು. ಆದರೆ ಇವರು ನಿರೂಪಿಸುವ ಹಕ್ಕಿಯ ಗರಿಗಳು ಮುಂದಿನ ವಿಮರ್ಶಕರ ಅಧ್ಯಯನಗಳಲ್ಲಿ ಕಾವ್ಯದ ಗರಿಗಳಾಗಿ ಸ್ವರೂಪಗೊಳ್ಳುವ ಬಗೆಯನ್ನೂ ವಿಸ್ತರಿಸಿಕೊಳ್ಳಬಹುದು. ಮಾತೃಪ್ರಜ್ಞೆ, ಒಲವಿನ ಕಿಚ್ಚು, ಪ್ರೇಮಗೀತೆಗಳ ಸ್ವರೂಪ ಒಂದೇ ಬಗೆಯದು. ಇವರ ವಿಮರ್ಶೆಯಲ್ಲಿ ಸಹೃದಯ ಚಿಂತನೆಯಿದೆ. ಜಾಗತಿಕ ಸಂದರ್ಭಗಳ ಧ್ವನಿಯು ಯಾವುದೇ ಒಳನೋಟಗಳನ್ನು ಗ್ರಹಿಸಲಾರದು.

ಕೃಷ್ಣಪ್ಪ ಜಿ ಅವರ 'ಅಂತರಂಗದತ್ತ ನಯನ' ಎಂಬ ಕೃತಿಯು ಕನ್ನಡ ಸಾಹಿತ್ಯದ ವಿವಿಧ ಆಯಾಮಗಳ ವಿಷಯಗಳನ್ನು ಹಾಗೂ ವ್ಯಕ್ತಿಗಳ ಸಾಹಿತ್ಯ ಕುರಿತ ವಿಮರ್ಶಾ ಲೇಖನಗಳಿರುವ ಕೃತಿಯಾಗಿದೆ. ಇದರಲ್ಲಿ 'ಬೇಂದ್ರೆ ಕಾವ್ಯ: ಅನುಭವ ಮತ್ತು ಅನುಭಾವ'., 'ಬೇಂದ್ರೆ ಕಾವ್ಯ: ಸ್ತ್ರೀ'., 'ಬೇಂದ್ರೆ ಕಾವ್ಯ: ದೇಶ ಭಕ್ತಿ' ಈ ಮೂರು ಲೇಖನಗಳು ಬೇಂದ್ರೆ ಸಾಹಿತ್ಯ ಕುರಿತ ಅಧ್ಯಯನಗಳಾಗಿವೆ. ಬೇಂದ್ರೆಯವರ ಸಾಹಿತ್ಯ ಪರಿಸರ, ಬದುಕು ಹಾಗೂ ಸಾಮಾಜಿಕ ಒಟನಾಟದೊಂದಿಗೆ ರೂಪಿತವಾದ ಅನುಭವದೊಳಗೆ ಅನುಭಾವವೂ ಪಕ್ವಗೊಳ್ಳುತ್ತಾ ಸಾಗಿರುವುದನ್ನು ಗಮನಿಸಬಹುದು. ಇದೇ ಪರಿಸರದಲ್ಲಿ ಅನುಭಾವಕ್ಕೆ ಬೇಕಾದ ಎಲ್ಲಾ ಮೂಲಾಂಶಗಳು ತನ್ನೊಳಗೆ ರಚಿತಗೊಳ್ಳುತ್ತಿದ್ದವು. ಆದ್ದರಿಂದಲೇ ಬೇಂದ್ರೆ ಅವರು ಈ ರೀತಿ ತಿಳಿಸಿದ್ದು...

> ಕಾವ್ಯ ಅಮೃತಕ್ಕೆ ಹಾರುವ ಗರುಡ; ಅವನ ಗರುಡಿಯಲ್ಲಿ ನವೋನವ ಗಾರುಡ ಮಂತ್ರ ಒಡಮೂಡಬೇಕು. ಅವನ ಗರಿಯಲ್ಲಿಯೂ ಶರಣಾಗುವ ಶರ-ಭಾವ ಇರುವದು.[೬]

ಎಂಬುದಾಗಿ. ಈ ಸಾಲುಗಳನ್ನೇ ಮುಂದುವರೆಸುತ್ತಾ ಕೃಷ್ಣಪ್ಪ .ಜಿ ಅವರು ಈ ರೀತಿ ತಿಳಿಸಿದ್ದಾರೆ.

> ಬೇಂದ್ರೆಯವರ ಅನುಭಾವ ಗಟ್ಟಿಗೊಂಡದ್ದು ಭಾರತೀಯ ಸಂತ ಪರಂಪರೆಯಿಂದ. ಅವರ ಕಾವ್ಯ ಆ ಪರಂಪರೆಯ ಮುಂದುವರಿದ ಕೊಂಡಿಯಂತಿದೆ.[೭]

ಭಾರತೀಯ ಸಂಸ್ಕೃತಿಯನ್ನು ವಿವಿಧ ಭಾಷೆಗಳ ಸಂಸ್ಕೃತಿಯೊಂದಿಗೆ ಗ್ರಹಿಸಿದ ಬೇಂದ್ರೆ ಅವರಿಗೆ ಪಾಶ್ಚಾತ್ಯ ದೃಷ್ಟಿಕೋನದ ಎಲ್ಲಾ ಸ್ವೀಕಾರಗಳ ಸೂಕ್ಷ್ಮ ಅವಲೋಕನ ಅರವಿಂದರು ಹಾಗೂ ಟಾಗೂರರ ಸಾಹಿತ್ಯದ ಪ್ರವೇಶಿಕೆಯ ಮೂಲಕ ದೊರಕಿತು. ಇಂತಹ ಪ್ರವೇಶದಲ್ಲಿ ದೊರೆತ ಅನುಭವವನ್ನು ಕೃಷ್ಣಪ್ಪ ಅವರು ಕವಿತೆಗಳ ಸಂಚಲನೆಯಲ್ಲಿ ಪಡೆದುಕೊಳ್ಳುವ ಬೇಂದ್ರೆ ಅವರ ಭೌತಿಕ ಹಾಗೂ ಭೌದ್ಧಿಕ ಕಾವ್ಯಶಕ್ತಿಯ ಅವಲೋಕನೆಯನ್ನು ಗ್ರಹಿಸಿದ್ದಾರೆ. 'ಉಯ್ಯಾಲೆ', 'ನಾದಲೀಲೆ', 'ಗಂಗಾವತರಣ', 'ಅರಳುಮರಳು', 'ನಾಕುತಂತಿ' ಮುಂತಾದ ಕವನ ಸಂಕಲನಗಳಲ್ಲಿ ಪ್ರತಿಯೊಂದು ಕವಿತೆಯು ಅನುಭವವನ್ನು ಕಟ್ಟುವ ಕವಿತೆಗಳನ್ನು ನಿರೂಪಿಸುತ್ತಲೇ ಅನುಭಾವವನ್ನು ಪ್ರತಿಬಿಂಬಿಸುತ್ತವೆ. ಏಳು ಕನ್ನಿಕೆಯರು, ನಾಕುತಂತಿ ಮೊದಲಾದ ಕವಿತೆಗಳ ಅನುಭಾವದ ಒಳಸಾರವನ್ನು ವಿಮರ್ಶೆ ಮಾಡಿದ್ದಾರೆ. ಬೇಂದ್ರೆ ಕಾವ್ಯ: ಸ್ತ್ರೀ ಎಂಬ ಲೇಖನವು ಈಗಾಗಲೇ ಮಹಾಪ್ರಬಂಧವಾಗಿ ಇವರೇ ರಚಿಸಿರುವ ಕಾರಣ ಅದರೊಳಗಿನ ಒಂದು ಭಾಗವು ಇಲ್ಲಿ ಲೇಖನವಾಗಿ ಪ್ರಕಟವಾಗಿದೆ.

> ಸ್ತ್ರೀಯರು ಮಾನವನನ್ನು ರೂಪಿಸುತ್ತ, ಸಂಸ್ಕೃತಿಯನ್ನು ಸೃಷ್ಟಿಸುತ್ತ, ಗರ್ಭಧಾರಣಾ ಶಕ್ತಿಯಿಂದ ಪುರುಷನಿಗಿಂತ ಮೇಲಾಗಿದ್ದಾರೆ. ಇದನ್ನು ತಿಳಿದೂ ಗಂಡಸರು ಪುರುಷಾಧಿಕ್ಯ ಮನೋಭಾವದಿಂದ ವರ್ತಿಸುವುದು ಸರಿಯಲ್ಲ. ಸ್ತ್ರೀ ಪುರುಷರು ಭಿನ್ನರೆಂಬ ಭಾವದಲ್ಲಿ ಮೇಲು ಕೀಳೆಂಬ ಅಹಂನಲ್ಲಿ ದಹಿಸಿ ಹೋಗಬಾರದು. ಅವರಲ್ಲಿ ಪ್ರೇಮ ಪಲ್ಲವಿಸಬೇಕು. ಅದು ಕೊಳಲಿನ ದನಿಯಂತೆ ಮಧುರ ಭಾವವನ್ನುಂಟು ಮಾಡಿ ಅವರಲ್ಲಿ ಮಧುವಾಗಿ ನೆಲೆಸಬೇಕು. ಹಾಗೆ ಪ್ರತಿ ಕುಟುಂಬದಲ್ಲಿ ಸುಮಧುರ ಭಾವ ನೆಲೆಸಿದಾಗ ಲೋಕ ಕಲ್ಯಾಣವಾಗುತ್ತದೆ ಎಂಬುದು ಬೇಂದ್ರೆಯವರ ಕಾವ್ಯ ಸಿದ್ಧಾಂತವಾಗಿದೆ.[೮]

ಬೇಂದ್ರೆ ಅವರು ಕುಟುಂಬಕ್ಕಾಗಿ ನಿರ್ಮಿಸಿದ ಭಾವ ಜಗತ್ತನ್ನು ತಮ್ಮ ಕವಿತೆಗಳಲ್ಲಿ ಕಾಣುವ ನೆಲೆಯೇ ಒಂದು ವಿಶಿಷ್ಠ ವಿಮರ್ಶಾ ಮಾರ್ಗವಾಗಬೇಕು ಅನಿಸುತ್ತದೆ. ಕವಿ ಕೇವಲ ಹೆಣ್ಣಿನ ಅಭಿವ್ಯಕ್ತಿಯನ್ನು ಮಾತ್ರ ಇಲ್ಲಿ ತನ್ನ ಕಾವ್ಯದ ನೆಲೆಯಾಗಿ ಬಳಸದೆ ಅದೊಂದು ಸೃಷ್ಠಿಯ ಮೂಲ ಅಭಿವ್ಯಕ್ತಿಯಾಗಿ ಪರಿಗಣಿಸಿದ್ದಾರೆ.

'ಬೇಂದ್ರೆ ಕಾವ್ಯ: ದೇಶಭಕ್ತಿ' ಎಂಬ ಲೇಖನದಲ್ಲಿ ಸ್ವತಂತ್ರ್ಯಾ ಪೂರ್ವ ಭಾರತದ ದೇಶಾಭಿಮಾನವನ್ನು ರಾಷ್ಟ್ರೀಯ ನೆಲೆಯಲ್ಲಿ ಅಧ್ಯಯನ ನಡೆಸಲು ಒಂದು ಪೀಠಿಕೆ ರಚಿಸಿದ್ದಾರೆ. 'ಯುದ್ಧ ಬಂತು ಮನೆಯವರೆಗೆ', 'ಭರತ ನವಶಕ್ತಿ', 'ಶ್ರೀಮನ್ ಮಹಾಭಾರತ' ಈ ಮೊದಲಾದ ಕವಿತೆಗಳನ್ನು ವಿಮರ್ಶೆ ನಡೆಸಿದ್ದಾರೆ. ಬಿಡುಗಡೆಗೆ ಹವಣಿಸಿದ ಭಾರತವನ್ನು ಕಂಡ ಬೇಂದ್ರೆ

ಕವಿಯು ಚೀನಾದ ಮೇಲೆ ಯುದ್ಧ ಮಾಡಿ ಗೆಲ್ಲುವ ಭರವಸೆಯನ್ನೂ ತಮ್ಮ ಕವಿತೆಯಲ್ಲಿ ಅಭಿವ್ಯಕ್ತಿಗೊಳಿಸಿರುವುದು ವಿಶೇಷ. ಈ ದೇಶ ಭಕ್ತಿಯಲ್ಲಿ ಬೇಂದ್ರೆ ಅವರ ನಿಜವಾದ ಒಲವಿನ ದಿಕ್ಕನ್ನು ಇತ್ತೀಚಿಗೆ ಹೊಸ ಅಧ್ಯಯನಗಳು ಪ್ರಾರಂಭವಾಗಿವೆ. 'ಬೇಂದ್ರೆಕಾವ್ಯ ಪದ ನಿರುಕ್ತ' ಕೃತಿ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ನಾರಾಯಣ ಪಿ.ವಿ ಅವರು ಬೇಂದ್ರೆ ಅವರು ತಾವು 'ನರಬಲಿ' ಕವಿತೆಯ ರಚಿಸಿದಕ್ಕೆ ಸರ್ಕಾರ ತನ್ನ ಬದುಕನ್ನೇ ಕಸಿದುಕೊಂಡಿತು. ಈ ಕಾರಣವಾಗಿ 'ನರಬಲಿ' ಕವಿತೆಯ ಮುಂದಿನ ಕವಿತೆಗಳ ಕವಿಯ ಅಭಿವ್ಯಕ್ತಿಯನ್ನು ತಿಳಿಸಿದರು. ಇಲ್ಲಿ ಕವಿ ತನ್ನ ಬದುಕು ಹಾಳಾದ ಕುರಿತು ವಿಷಾದವಿದೆ. ಸ್ವಾತಂತ್ರ್ಯ ಹೋರಾಟವು ಕೂಡ ಬದುಕನ್ನು ನಾಶಗೊಳಿಸಿತೆಂಬ ಇಂಗಿತವಿದೆ. ಈ ದಿಕ್ಕಿನಲ್ಲಿ ಬೇಂದ್ರೆ ಅವರು ಸ್ವತಂತ್ರ ಹೋರಾಟಗಾರರಷ್ಟು ದೇಶಾಭಿಮಾನ ಮೆರೆಯಲಿಲ್ಲವೆಂಬ ಚಿಂತನೆಯನ್ನು ನೀಡಿದರು. ಕವಿತೆಯು ತುಂಬುವ ತ್ಯಾಗ, ಸಾಂತ್ವಾನಗಳು, ಕಿಚ್ಚು, ಆವೇಶಗಳು ಎಲ್ಲಾ ರೂಪದಲ್ಲೂ ಎಲ್ಲರಿಗೂ ಸ್ಫೂರ್ತಿಯಾಗಲಾರವು ಎಂಬ ವಿಚಾರವನ್ನು ಕೂಡ ಗಮನಿಸಿಬಹುದು. ಸ್ವತಂತ್ರ್ಯಪೂರ್ವ ಹಾಗು ಸ್ವತಂತ್ರ್ಯಾ ನಂತರ ಸಾಹಿತ್ಯದೊಳಗೆ ಅಭಿವ್ಯಕ್ತಗೊಂಡ ರಾಷ್ಟ್ರಾಭಿಮಾನ ಇಪ್ಪತ್ತೊಂದನೆಯ ಶತಮಾನದ ಅಭಿವ್ಯಕ್ತಿಯಲ್ಲ. ಮನುಷ್ಯನ ಸ್ವತಂತ್ರಕ್ಕಾಗಿ ಧಮನೀಯತೆಯಿಂದ ಹೊರಬರುವ ಚಳುವಳಿಯು ಇಂದಿನ ಸಾಹಿತ್ಯದ ಸವಾಲು. ಅದು ಮನೆಯಿಂದ ಮಹಲಿನವರೆಗೆ ವ್ಯಾಪಿಸುವಷ್ಟು, ರಾಜ್ಯ-ರಾಷ್ಟ್ರವನ್ನು ಮುಟ್ಟಲಾರದು. ಈ ಎಲ್ಲಾ ವಿಚಾರಗಳಲ್ಲಿ ಇಂದು ಸಾಹಿತ್ಯದ ತುರ್ತನ್ನು ಗಮನಿಸಬಹುದು.

'ತಿರುತಿರುಗಿ ಹೊಸತಾಗಿರಿ' ಎಂಬ ಕೃತಿಯು 'ನಾದಲೀಲೆ' ಕವನ ಸಂಕಲನ ಕುರಿತ ಮಾರ್ಗದರ್ಶಿ ಪಠ್ಯವಾಗಿದೆ. 'ಮೈಸೂರು ವಿಶ್ವವಿದ್ಯಾಲಯ'ದ ದೂರ ಶಿಕ್ಷಣ ಹಾಗೂ 'ಕನ್ನಡ ವಿಶ್ವವಿದ್ಯಾಲಯ'ದ ದೂರಶಿಕ್ಷಣದ ಸ್ನಾತಕ ಪದವಿಗೆ ಅಧ್ಯಯನ ಪಠ್ಯವಾಗಿ ಅಧ್ಯಯನಕ್ಕೆ ಒಳಗಾಗಿದೆ. ಕನ್ನಡ ನವೋದಯ ಕಾವ್ಯವನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುತ್ತಾ ಬೇಂದ್ರೆ ಅವರ ಸಾಹಿತ್ಯ ಪ್ರವೇಶ ಮಾಡಿಸುತ್ತಾರೆ. ಕವಿಯ ಜೀವನ, ಸಾಹಿತ್ಯ ರಚನೆಯನ್ನು ಕವಿತೆಗಳ ಅಧ್ಯಯನದೊಂದಿಗೆ ಪರಿಚಯಿಸುತ್ತಾರೆ. 'ಬರೆಹದಲ್ಲಿ ಬೇಂದ್ರೆಯವರ ಬದುಕು' ಎಂಬ ಕೃತಿಯಲ್ಲಿ ಹಾಗೂ 'ಡಿ. ಆರ್. ಬೇಂದ್ರೆ' ಎಂಬ ಆಂಗ್ಲ ಕೃತಿಯಲ್ಲಿ ಅತ್ಯಂತ ವಿಸ್ತಾರವಾಗಿ ಬೇಂದ್ರೆ ಅವರ ಜೀವನವನ್ನು ನಿರೂಪಿಸಿದ್ದಾರೆ. ಇನ್ನು 'ನಾದಲೀಲೆ' ಕೃತಿಯನ್ನು ಹನ್ನೊಂದು ವಿಭಾಗಗಳಲ್ಲಿ ವಿಭಾಗಿಸಿ ಕವಿತೆಗಳನ್ನು ಅರ್ಥೈಸುತ್ತಾ ವಿಮರ್ಶೆ ನೀಡಿದ್ದಾರೆ.

'ನಾಕುತಂತಿ: ಒಂದು ಟಿಪ್ಪಣಿ' ಎಂಬ ಕಿರು ಹೊತ್ತಿಗೆಯು 'ನಾಕುತಂತಿ' ಸಂಕಲನದ 'ನಾಕುತಂತಿ' ಎಂಬ ಕವಿತೆಗೆ ಬರೆದ ವಿಸ್ತಾರ ಟಿಪ್ಪಣಿಯಾಗಿದೆ. ಜನಪದದೊಳಗಿನ ಅನುಭವಗಳು ಕವಿಯ ಅಧ್ಯಯನದ ವಿಸ್ತಾರದೊಳಗೆ ವಿಶ್ವ ಚೈತನ್ಯವಾಗಲು ತುಡಿಯುತ್ತಾ ಅನುಭಾವಗಳಾಗುವ ನೆಲೆಯನ್ನು ಕುರಿತು ಚರ್ಚಿಸಿದ್ದಾರೆ. 'ನಾಕುತಂತಿ' ಕವಿತೆ ಕುರಿತು ಹಲವು ವಿಮರ್ಶೆಗಳು ಬಂದಿರುವ ಕಾರಣ ಪ್ರತ್ಯೇಕವಾಗಿ ಅಧ್ಯಯನ ಮಾಡಲಾಗಿದೆ. 'ಬೇಂದ್ರೆ ಕಾವ್ಯದಲ್ಲಿ ಸ್ತ್ರೀ' ಎಂಬ ಲೇಖನದಲ್ಲಿ ಶೇಷನವರತ್ನ ಅವರು ಸ್ತ್ರೀ-ಪುರುಷ ಚಿಂತನೆಯನ್ನು ಅವಲೋಕಿಸುತ್ತಾ ಕನ್ನಡ

ಕಾವ್ಯದಲ್ಲಿ ಸ್ತ್ರೀ ಚಿಂತನೆಯನ್ನು ಕುರಿತು ಅಧ್ಯಯನ ಮಾಡಿದ್ದಾರೆ. ಈ ಪೀಠಿಕೆಯೊಂದಿಗೆ ಬೇಂದ್ರೆ ಸಾಹಿತ್ಯದಲ್ಲಿ ಸ್ತ್ರೀ ಕುರಿತ ಚಿಂತನೆಯನ್ನು ವಿಸ್ತಾರವಾಗಿ ವಿವರಿಸಿದ್ದಾರೆ. ಬೇಂದ್ರೆ ಅವರು ಸ್ತ್ರೀ ಕುರಿತು ಒಂದು ಶಕ್ತಿಯಾಗಿ, ಮಮತೆಯಾಗಿ ಗ್ರಹಿಸಿದ ರೀತಿಯನ್ನು ಜೊತೆಗೆ ಸ್ತ್ರೀಯು ಭೋಗದ ವಸ್ತುವಲ್ಲ ಎಂಬುದನ್ನು ಎಚ್ಚರವಾಗಿ ಭಾವನಾತ್ಮಕ ಔನತ್ಯವನ್ನು ಮೂಡಿಸಿದ್ದಾರೆ ಎಂಬುದಾಗಿ ಅರ್ಥೈಸಿದ್ದಾರೆ. ಒಲವು, ರಸೋಪಾಸನೆ, ಬಡತನ ಮೊದಲಾದ ಚೈತನ್ಯ ಶಕ್ತಿಗಳನ್ನು ಸೂಕ್ಷ್ಮ ಸಂವೇದನೆಗಳ ಮೂಲಕ ಚಿತ್ರಿಸಿದ್ದಾರೆ. ಸಂಸ್ಕೃತ, ಪಾಶ್ಚಾತ್ಯ ಸಾಹಿತ್ಯದ ಅರಿವಿದ್ದರೂ ಬೇಂದ್ರೆ ಅವರ ಜನಪದ ಮಣ್ಣಿನಿಂದಲೇ ಗ್ರಹಿಸಿದರು. ಇದು ಈ ಭೂಮಿಕೆಯ ಸ್ತ್ರೀ ಶಕ್ತಿಯನ್ನು ಗ್ರಹಿಸುವ ರೀತಿ ಎಂಬುದಾಗಿ ಇವರ ಲೇಖನವನ್ನು ಗಮನಿಸಬಹುದು.

> ಬೇಂದ್ರೆಯವರ ಕಾವ್ಯದಲ್ಲಿ ಹೆಣ್ತನದ ಅಂತಸ್ಸತ್ವವನ್ನು ಒಂದು ಹೊಸದಾದ ಆದರೆ ಭಾರತೀಯ ಸಾಂಸ್ಕೃತಿಕ ವೈಶಿಷ್ಟ್ಯಕ್ಕೆ ಸಂವಾದಿಯಾದ ರೀತಿಯಲ್ಲಿ ನಿರೂಪಿಸುವ ಕಾರ್ಯ ಸಾವಧಾನವಾಗಿ ನಡೆದದ್ದು ಅರಿವಿಗೆ ಬರುತ್ತದೆ. ಇಡೀ ಬೇಂದ್ರೆ ಕಾವ್ಯವು ಪ್ರಧಾನವಾಗಿ ಭಾವ ಜೀವನದ ನಿರೂಪಣೆಯಲ್ಲಿ ಆಸಕ್ತವಾಗಿದೆ. ನವೋದಯ ಕಾವ್ಯದ ಲಕ್ಷಣವೇ ಇದಾಗಿದೆ. ಅಲ್ಲಿ ಬುದ್ಧಿಯ ಕಸರತ್ತಿಗಿಂತಲೂ ಭಾವದ ಆಧಿಕ್ಯವೇ ಅಥವಾ ನವಿರಾದ ಭಾವಾವೇಶದ ಸಂಸ್ಪರ್ಶವೇ ಕವಿತೆಗಳ ಸ್ವಭಾವವನ್ನು ನಿರ್ಧರಿಸುವ ಸ್ವರೂಪವನ್ನು ನಿರ್ಮಿಸುವ ಮೂಲ ಆಕರವಾಗಿರುತ್ತದೆ.[೯]

ಬೇಂದ್ರೆ ಅವರು ಸ್ತ್ರೀ ದರ್ಶನದ ಕವಿತೆಗಳನ್ನಷ್ಟೇ ಬರೆಯದೇ ಅವರ ಕಾವ್ಯದ ಜೀವಾಳವೇ ಸ್ತ್ರೀ ದರ್ಶನವಾಗಿತ್ತು. ಶೇಷನವರತ್ನ ಅವರು ಇಂತಹ ಉದಾಹರಣೆಗಳಾಗಿ 'ಸಖೀಗೀತ', 'ಉಯ್ಯಾಲೆ', 'ನಾದಲೀಲೆ' ಮೊದಲಾದ ಸಂಕಲನಗಳ ಕೆಲವು ಕವಿತೆಗಳ ಮೂಲಕ ಅರ್ಥೈಸಿದ್ದಾರೆ.

ಕೃಷ್ಣಪ್ಪ ಜಿ. ಇವರ 'ಹಸಿರು ಹಚ್ಚಿ ಚುಚ್ಚಿ' ಎಂಬ ಬೇಂದ್ರೆ ಅವರ ಕಾವ್ಯ ವಿಮರ್ಶೆಯು ಎಂಟು ಭಾಗಗಳಲ್ಲಿ ನಲವತ್ತನಾಲ್ಕು ಲೇಖನಗಳನ್ನು ರಚಿಸಿದ್ದಾರೆ. ಈ ಎಲ್ಲಾ ಲೇಖನಗಳು ವಿವಿಧ ಪತ್ರಿಕೆಗಳಲ್ಲಿ ಪ್ರಕಟಗೊಂಡ ಲೇಖನಗಳಾಗಿವೆ. ಕವಿತೆಗಳು, ಕವನದ ವಿಶೇಷ ಸಾಲಿನ ವಿಶೇಷತೆಗಳು, ಕವನ ಸಂಕಲನಗಳು, ವ್ಯಕ್ತಿ ವಿಶೇಷತೆಗಳು ಹಾಗು ಬೇಂದ್ರೆ ಅವರ ಕುಟುಂಬದ ಹೆಣ್ಣು ಮಕ್ಕಳ ಸಂದರ್ಶನದ ವಿಶೇಷ ಭಾಗಗಳು ಇಲ್ಲಿವೆ. ಅತ್ಯಂತ ತಳಸ್ಪರ್ಷಿಯವಾದ ವಿಮರ್ಶೆಗಳು ಮಾನವ ಸಂಬಂಧಗಳ ನಾಡಿಮಿಡಿತದಂತೆ ಬೇಂದ್ರೆ ಅವರನ್ನು ಅರ್ಥೈಸಿಕೊಂಡಿರುವ ಬಗೆಯನ್ನು ತಿಳಿಯಬಹುದು.

ಗೀತಾ ವಸಂತ ಅವರ 'ಬೀಜದೊಳಗಣ ವೃಕ್ಷ' ಎಂಬ ಕೃತಿಯು 'ಬೇಂದ್ರೆ ಕಾವ್ಯದ ವಿರಾಟ್ ಸ್ವರೂಪ'ವನ್ನು ಅತ್ಯಂತ ಸರಳವಾಗಿ ಪರಿಚಯಿಸಿದ್ದಾರೆ. ಇವರ ಬೇಂದ್ರೆ ಸಾಹಿತ್ಯದ ಅಧ್ಯಯನವನ್ನು ಎಸ್. ಆರ್. ವಿಜಯಶಂಕರ ಅವರು ಈ ಕೃತಿಯ ಮುನ್ನುಡಿಯಲ್ಲಿ

> ವರಕವಿ ಬೇಂದ್ರೆ ಅವರ ಕಾವ್ಯ ಗೀತಾ ಅವರನ್ನು ಹಲವಾರು ವರುಷಗಳಿಂದ ಕಾಡುತ್ತಾ ಬಂದಿದೆ. ಅವರ 'ಬೆಳಕಿನ ಬೀಜ'(೨೦೦೪) ವಿಮರ್ಶಾ ಸಂಕಲನದಲ್ಲಿ ಬೇಂದ್ರೆಯವರ

> ಬಗೆಗಿರುವ ಆರು ಲೇಖನಗಳಲ್ಲಿ 'ಬೀಜದೊಳಗಣ ವೃಕ್ಷ' ಕೃತಿಯ ಮೂಲ ಚಿಂತನೆಗಳು ಪ್ರಾರಂಭವಾಗಿದೆ. ಮುಂದೆ ಈ ಚಿಂತನೆ ಡಾ. ಗೀತಾ ಅವರ 'ಬೇಂದ್ರೆ ಕಾವ್ಯ : ಅವಧೂತ ಪ್ರಜ್ಞೆ'(೨೦೧೦) ಎಂಬ ಕೃತಿಯಲ್ಲಿ ಅವಧೂತ ಪ್ರಜ್ಞೆಯೊಂದಿಗೆ ವಿಶ್ವಾತ್ಮಕ ನೆಲೆಯನ್ನು ಶೋಧಿಸುವುದರಿಂದ ಗೀತಾ ಅವರ ಅಧ್ಯಯನ ಭವ ಹಾಗೂ ಅನುಭಾವಗಳ ನೆಲೆಗಳನ್ನು ಸ್ಪಷ್ಟವಾಗಿ ಗ್ರಹಿಸುವ ಉತ್ಸಾಹ ಹೊಂದಿದೆ.[೧೦]

ಈ ರೀತಿ ಅಭಿವ್ಯಕ್ತಪಡಿಸಿದ್ದಾರೆ. ಈ ಕೃತಿಯಲ್ಲಿ 'ಬೇಂದ್ರೆ ಕಾವ್ಯದಲ್ಲಿ ಮಾತೃತತ್ವ' ಎಂಬ ಅಧ್ಯಾಯವು ಸ್ತ್ರೀವಾದಿ ಚಿಂತನೆಯ ಮೂಲಕ ಹೊಸ ಅರ್ಥಗಳನ್ನು ಕಂಡುಕೊಳ್ಳುವ ಕೆಲವು ಮಾದರಿಗಳನ್ನು ಚರ್ಚಿಸಿದೆ. ಬೇಂದ್ರೆ ಅವರ ಸೃಷ್ಟಿಯ ಕುರಿತು ಬಳಸುವ ಪದಗಳನ್ನು ಅವುಗಳ ತಾತ್ವಿಕ ಅರ್ಥವನ್ನು ಶೋಧಿಸಿದ್ದಾರೆ. ಉದಾಹರಣೆಗೆ 'ಮಾಯೆ' ಎಂಬ ಪದವು ಭಾರತೀಯ ವಿವಿಧ ಸಿದ್ಧಾಂತಗಳಲ್ಲಿ ಧ್ವನಿಸುವ ರೀತಿಯನ್ನು ಕುರಿತು ಚರ್ಚಿಸಿದ್ದಾರೆ. ಈ ರೀತಿಯಲ್ಲಿ ಸಾಂಖ್ಯದ ದೃಷ್ಟಿ, ಅನುಭಾವ, ಪ್ರತಿಭೆಯ ವಿಲಾಸ, ಪ್ರಜ್ಞೆ, ಪಂಚಭೂತ ವಿನ್ಯಾಸ, ಅಧಿಕಾರ ಚಿಂತನೆ ಈ ವಿಚಾರಗಳಲ್ಲಿ ಬೇಂದ್ರೆ ಅವರು ತಮ್ಮ ಕಾವ್ಯದಲ್ಲಿ ಅತ್ಯಂತ ಪ್ರೌಢಿಮೆಯಿಂದ ಬಳಸುವ ಪದಗಳನ್ನು ಕವಿತೆಗಳ ಮೂಲಕ ಚರ್ಚಿಸಿದ್ದಾರೆ.

> ತಮ್ಮ ಕಾವ್ಯವೇ ಆ ತಾಯಿಯ ಜೀವಧ್ವನಿ ಎಂದು ಹೇಳಿಕೊಂಡ ಬೇಂದ್ರೆ ಕಾವ್ಯದ ಸೃಷ್ಟಿಕ್ರಿಯೆಯ ಹಿಂದೆಯೂ ಸೃಜನಶಕ್ತಿಯ ವಿಲಾಸವನ್ನೆ ಕಂಡಿದ್ದಾರೆ. ಅವರಿಗೆ ಮಾತೃ-ಚಿಂತನೆಯು ಬೌದ್ಧಿಕ ಕಟ್ಟುವಿಕೆಯಲ್ಲ. ಅವರೊಳಗೆ ಪರಾವಾಣಿಯಾಗಿ ಮಿಡಿದ ಈ ತಂತು ಅವರ ವ್ಯಕ್ತಿತ್ವವನ್ನೇ ತನ್ನ ಮಾಧ್ಯಮವಾಗಿಸಿಕೊಂಡು ಹೊರಹೊಮ್ಮಿದೆ ಆದ್ದರಿಂದ ಮಾತೃತ್ವವು ಅವರ ಕನಸು, ಸುಪ್ತ ಪ್ರಜ್ಞೆಗಳನ್ನು ಆಳುವ ಪ್ರಬಲ ಬಿಂಬವಾಗಿದೆ. ಈ ಮಾತೃಶಕ್ತಿಯ ವಿಲಾಸವನ್ನು ಶೋಧಿಸಿದ ಬೇಂದ್ರೆ ಆ ಭಾವದೆದುರು ಮಗುವಾಗಿ ದೇಹಿ ಎಂದಿದ್ದಾರೆ. ಸೃಷ್ಟಿಯ ಸಹಜ ಲಯಕ್ಕೆ ತಮ್ಮ ಭಾಷೆಯನ್ನೇ ಬಗ್ಗಿಸಿಕೊಂಡಿದ್ದಾರೆ. ಪ್ರಕೃತಿಯನ್ನು ಆಳಬೇಕೆಂಬ ಪುರುಷ ಪ್ರಜ್ಞೆಯು ಕಟ್ಟಿದ ಭೋಗ ಸಂಸ್ಕೃತಿಯ ಎದುರು ಮಾತೃತ್ವದ ಅದಮನೀಯ ಚೈತನ್ಯವನ್ನು ನಿಲ್ಲಿಸಿ, ಅದರ ನಿರಂತರತೆಯನ್ನು ಬೆರಗಿನಿಂದ ಕಂಡಿದ್ದಾರೆ. ಬೇಂದ್ರೆ ಕಾವ್ಯದಲ್ಲಿ ಮಾತೃತತ್ವವು ಅನುಭವದ ತೀವ್ರತೆಯನ್ನು ಅನುಭಾವವಾಗಿಸುವಲ್ಲಿ ಸಫಲವಾಗಿದೆ.[೧೧]

ಇತಿಹಾಸವು ನಿರ್ಮಿಸಿದ ಜಗತ್ತನ್ನು ಪರಿಶೋಧಿಸುವ ನಿಟ್ಟಿನಲ್ಲಿ ಸಮಾಜದ ಗ್ರಹಿಕೆಗಳು ಬದಲಾದವು. ಇಂತಹ ಬದಲಾವಣೆಯನ್ನು ಸಾಹಿತ್ಯ ವ್ಯವಸ್ಥಿತವಾಗಿ ಮಾಡಿದೆ. ಈ ಸಾಹಿತ್ಯ ಕಾರ್ಯವನ್ನು ಬೇಂದ್ರೆ ಅವರ ಕಾವ್ಯದ ತಾತ್ವಿಕ ಸ್ವರೂಪವಾಗಿ ಅರ್ಥೈಸಿದ್ದಾರೆ.

ಜಿ. ಎಚ್. ನಾಯಕ್ ಅವರ 'ಬೇಂದ್ರೆ ಕಾವ್ಯ: ನಾದ, ಅರ್ಥ, ಅರಿವು' ಎಂಬ ಭಾಷಣದಲ್ಲಿ ಮಂಡಿಸಿದ 'ನಾದಲೀಲೆ' ಸಂಕಲನ ಕುರಿತ ವಿಮರ್ಶೆ ಇದಾಗಿದೆ. ಒಂದು ಕವಿತೆಯು ಧ್ವನಿಸುವ ಅನಂತಾರ್ಥಗಳ ಚಿಂತನೆ ಇಲ್ಲಿದೆ. 'ನಾದಲೀಲೆ' ಎಂಬ ಕವನವನ್ನು ಹಾಡಿ ಅರ್ಥೈಸುವ ದಾಟಿಯ ಸೊಗಸಿನಲ್ಲಿ ಅದರ ಒಳಾರ್ಥಗಳನ್ನು ಕುರಿತು ಚರ್ಚಿಸಿದ್ದಾರೆ.

ಈ ಕವನದಲ್ಲಿ ನಾದಗುಣದ ಸಮೃದ್ಧಿ ಇದೆ. ಕವನ ಪ್ರತಿಮಾವಿಧಾನದಲ್ಲಿ ಬೆಳೆದಿದೆ. ಚಿತ್ರವತ್ತಾದ ಸನ್ನಿವೇಶಗಳ ಸೃಷ್ಟಿ ಇದೆ. ಮೊದಲಿನಿಂದ ಕೊನೆಯವರೆಗೂ ಧ್ವನಿಶಕ್ತಿಯು ಪ್ರತಿಮೆಗಳ ಮೂಲಕ ಮಾತ್ರವಲ್ಲ, ಪದಪ್ರಯೋಗದಲ್ಲಿಯೂ ಅನುರಣಿಸುತ್ತದೆ. ಕವನದಲ್ಲಿ ಅನುಭವವನ್ನು ಅರಿವಿನ ನೆಲೆಗೆ ವಿಸ್ತರಿಸಿ ತಾತ್ವಿಕ ನಿಲುವನ್ನು ಪ್ರತಿಪಾದಿಸುವ ಅಥವಾ ತಾತ್ವಿಕ ತಿಳುವಳಿಕೆಯನ್ನು ಹಾಯಿಸುವ ಉತ್ಸಾಹ, ಉದ್ದೇಶ ಇದೆ. ಕವನದಲ್ಲಿ ಒಂದು ನಾಟಕೀಯ ಸನ್ನಿವೇಶದ ಸೃಷ್ಟಿಯೂ ಆಗಿದೆ. ಬೇಂದ್ರೆ ಅವರ ಬಹಳಷ್ಟು ಕವನಗಳಲ್ಲಿ ಭಾವಗೀತೆಯ ಸ್ವರೂಪ ಲಕ್ಷಣಗಳಲ್ಲಿ ಮುಖ್ಯವಾದ ಆತ್ಮನಿಷ್ಠ ಅಥವಾ ಸ್ವ–ನಿಷ್ಠ ದನಿ ಇರುವುದಿಲ್ಲ. ಅಂಥ ಕವನಗಳ ಸಾಲಿಗೇ ಈ ಕವನವೂ ಸೇರುತ್ತದೆ. ಆದರೆ ಒಟ್ಟಿನಲ್ಲಿ ಇದು ಬೇಂದ್ರೆ ಅವರ ಕಾವ್ಯದ ಅನೇಕ ಗುಣಲಕ್ಷಣಗಳನ್ನು, ಶಕ್ತಿ ಪರಿಮಿತಿಗಳನ್ನು ಪ್ರತಿನಿಧಿಸುವ ಒಂದು ಪ್ರಾತಿನಿಧಿಕ ಕವನ ಎಂದು ಹೇಳಬಹುದಾಗಿದೆ.[೨]

ಒಂದು ಕವಿತೆ ಕವಿಯ ಕಾವ್ಯ ಶೈಲಿಯನ್ನು, ಕಾವ್ಯದ ಗುಣಲಕ್ಷಣಗಳನ್ನು ಪ್ರತಿನಿಧಿಸುವುದಾದರೆ ಆತನ ಪ್ರತಿಯೊಂದು ಕವಿತೆ ಆ ಶಕ್ತಿಯನ್ನು ಪಡೆದಿರಲು ಸಾಧ್ಯ ಎನಿಸುತ್ತದೆ. ಅಧ್ಯಯನಕಾರರಾದ ನಾವು ಕೆಲವೇ ಕವಿತೆಗಳನ್ನು ಮಾತ್ರ ಮರು ಓದಿನಲ್ಲಿ ಚರ್ಚಿಸುತ್ತೇವೆ. ಇಂತಹ ಹೊಸ ಓದಿನ ನೆಲೆಯನ್ನು ಜಿ. ಎಚ್. ನಾಯಕ್ ಅವರು ಇಲ್ಲಿ ಪ್ರಾಯೋಗಿಕ ವಿಮರ್ಶೆಗೆ ಅಳವಡಿಸಿ ಚರ್ಚಿಸಿದ್ದಾರೆ.

ಬೇಂದ್ರೆ ಅವರ ಕಾವ್ಯದಲ್ಲಿ ವಿವಿಧ ವಿಚಾರಗಳನ್ನು ಕೆಲವು ಅಧ್ಯಯನಗಳ ಮೂಲಕ ಗುರ್ತಿಸುತ್ತಾ ಸಾಹಿತ್ಯ ಚಿಂತನೆಯನ್ನು ಗ್ರಹಿಸಬಹುದು. 'ಬೇಂದ್ರೆಯವರ ಕಾವ್ಯದಲ್ಲಿ ದೈವೋಪಾಸನೆ' ಎಂಬ ವಿಚಾರವನ್ನು ಸಾ. ಶಿ ಮರುಳಯ್ಯ ಅವರು ಬೇಂದ್ರೆ ಅವರ ಕಾವ್ಯಗಳಲ್ಲಿ ಗ್ರಹಿಸಿದ್ದಾರೆ. ಪುರಾಣ ಹಾಗೂ ಭಾಗವತಗಳನ್ನು ಅಧ್ಯಯನ ಮಾಡಿದ ಬೇಂದ್ರೆಯವರು ಅಗತ್ಯವಿರುವ ಕಡೆ ಅತ್ಯಂತ ಸ್ವತಂತ್ರವಾಗಿ ದೇವರೆಂಬ ಕಲ್ಪನೆಯನ್ನು ಉಪಾಸನ ರೂಪದಲ್ಲಿ ನೀಡಿದ್ದಾರೆ. ಈ ಕವಿತೆಗಳು ನನ್ನ ಕವಿತೆಗಳಲ್ಲ, ಕನ್ನಡದ ಕವಿತೆಗಳು ಎನ್ನುವಾಗ ಕನ್ನಡ ಸಾಹಿತ್ಯ ಅಧ್ಯಯನ ಮಾಡುವ ಪ್ರತಿಯೊಬ್ಬರ ರುಚಿಗೂ ಸಾಹಿತ್ಯ ಬಡಿಸಬೇಕಾಗುತ್ತದೆ. ಬೇಂದ್ರೆ ಅವರು ಮೂಲತಃ ದತ್ತೋಪಾಸಕರು. ಕೆಲವೊಮ್ಮೆ ರುದ್ರಾಕ್ಷಿ, ಜಪಮಣಿಗಳನ್ನು ಧರಿಸಿ ಋಷಿತನವನ್ನು ಅನುಭವಿಸಿದವರು. ಈ ಒಡನಾಟಗಳನ್ನು ಸಾಕಷ್ಟು ಲೇಖನಗಳಲ್ಲಿ ಅನುಭವದಂತೆ ಹಂಚಿಕೊಂಡಿದ್ದಾರೆ.

ಅನ್ಯ ಶಕ್ತಿ ಸಾಹಿತ್ಯಗಳು ಬೇಂದ್ರೆಯವರ ಮೇಲೆ ಪ್ರಭಾವ ಬೀರಿದಷ್ಟು ಪ್ರಮಾಣದಲ್ಲಿ ಬೇರಾವ ಕನ್ನಡ ಕವಿಯ ಮೇಲೂ ಬೀರಿಲ್ಲ. ಆದರೆ ಬೇಂದ್ರೆ ಬೇಂದ್ರೆಯೇ! ಅವರು ಯಾವ ಶಕ್ತಿಗೂ ಬಲಿಯಾಗಿಲ್ಲ. ಯಾವ ಸಾಹಿತ್ಯಕ್ಕೂ ಶರಣಾಗಿಲ್ಲ. ವೇದ ಉಪನಿಷತ್ತುಗಳು, ರಾಮಾಯಣ, ಮಹಾಭಾರತ, ಭಾಗವತಗಳು. ವಚನ ವಾಙ್ಮಯ, ದಾಸವಾಙ್ಮಯಗಳು, ಜೈನ ಬೌದ್ಧಾದಿ ಧರ್ಮಗಳು ಅಗಸ್ತ್ಯರಿಂದ ಅರವಿಂದರವರೆಗೆ, ಜಗನ್ಮಾತೆಯಿಂದ ಶ್ರೀಮಾತೆಯವರೆಗೆ, ಸಗುಣ ನಿರ್ಗುಣ ದೇವತೆಗಳಿಗೂ, ಸಾಕಾರ ನಿರಾಕಾರ ಬ್ರಹ್ಮರುಗಳೂ ಎಲ್ಲರೂ ದಾಳಿ ನಡೆಸಿದ್ದಾರೆ ಬೇಂದ್ರೆಯವರ ಮನೋಸಾಮ್ರಾಜ್ಯದ ಮೇಲೆ. ಆದರೆ ಪ್ರಭಾವ

ಎಷ್ಟೇ ಪ್ರಬಲವಾಗಿದ್ದರೂ ಬೇಂದ್ರೆತನ ಮಾತ್ರ ಎಲ್ಲೂ ಬತ್ತಿಲ್ಲ, ಬಾಡಿಲ್ಲ. ಎಲ್ಲ ದರ್ಶನಗಳನ್ನೂ, ಜ್ಯೋತಿಯನ್ನೂ ಅರಗಿಸಿ, ಅಡಗಿಸಿ ತನ್ನದನ್ನಾಗಿ ಮಾಡಿಕೊಳ್ಳುವ ಶಕ್ತಿ ಅದಕ್ಕಿದೆ.[೧೩]

ಇಲ್ಲಿ 'ದಾಳಿ' ಮತ್ತು 'ಬೇಂದ್ರೆತನ' ಎರಡು ವಿಶಿಷ್ಟ ಪದಗಳನ್ನು ಬಳಸಿದ್ದಾರೆ. 'ದಾಳಿ' ಎಂಬ ಪದವನ್ನು ಬೇಂದ್ರೆ ಅವರ ಅಧ್ಯಯನ ಹಾಗು ಒಡನಾಟದ ವಿಶಾಲತೆಯಾಗಿ ತಿಳಿಯುಬಹುದು. 'ಬೇಂದ್ರೆತನ' ಎಂಬುದು ಈ ಅಧ್ಯಯುನದಿಂದ ರೂಪಿತನಾದ ಅಂಬಿಕಾತನಯದತ್ತನಾಗಿ ಗ್ರಹಿಸಬಹುದು.

೫. ೨. ಮರಾಠಿ ಸಾಹಿತ್ಯದಲ್ಲಿ ಅಧ್ಯಯನ

ಬೇಂದ್ರೆ ಅವರು ಮಹಾರಾಷ್ಟ್ರದಲ್ಲಿಯೂ ಸಾಹಿತ್ಯ ಸೇವೆಯನ್ನು ಮಾಡಿದ್ದಾರೆ. ಧಾರವಾಡ ಮತ್ತು ಮಹಾರಾಷ್ಟ್ರಕ್ಕೂ ಕೌಟುಂಬಿಕ ನಂಟಿನಿಂದ ಮರಾಠಿ ಭಾಷೆಯ ಪ್ರೌಢಿಮೆ ಗಳಿಸಿ, ಆಳವಾದ ಅಧ್ಯಯನ ನಡೆಸಿ ಸಾಹಿತ್ಯ ಕೃತಿಗಳನ್ನು ರಚಿಸಿದರು. ಹಾಗೇಯೇ ಮರಾಠಿ ಸಾಹಿತ್ಯದಲ್ಲಿ ಓದುಗರು ಇವರ ಮರಾಠಿ ಹಾಗೂ ಕನ್ನಡ ಸಾಹಿತ್ಯವನ್ನು ಅಧ್ಯಯನ ನಡೆಸಿ ವಿಮರ್ಶೆಗಳನ್ನು ರಚಿಸಿದ್ದಾರೆ. ಅಂದಿನ ಮರಾಠಿ ಪತ್ರಿಕೆಗಳಾದ 'ಸನ್ಮತಿ', 'ನವಭಾರತ್' ಮೊದಲಾದ ಪತ್ರಿಕೆಗಳಲ್ಲಿ, ಸ್ಮರಣಸಂಚಿಕೆಗಳಲ್ಲಿ ಬೇಂದ್ರೆ ಸಾಹಿತ್ಯ ಹಾಗೂ ವ್ಯಕ್ತಿತ್ವ ಕುರಿತು ಲೇಖನಗಳು ಪ್ರಕಟಗೊಂಡಿವೆ. ಅವುಗಳನ್ನು ಕನ್ನಡಕ್ಕೆ ಅನುವಾದ ಮಾಡಿ ಪ್ರಕಟಿಸಲಾಗಿದೆ. ೧೯೫೧ರಲ್ಲಿ ಪ್ರಕಟವಾದ ಮಾ.ಜ ಭೀಸಿಕರ ಅವರ 'ಕ್ಷಮೆಯ ಅಂತರಂಗದಲ್ಲಿ', ಸುಮೇರ ಚಂದ ಕೆ. ಜೈನ ಅವರ 'ಪ್ರಾ ಬೇಂದ್ರೆಯವರ ಮಾರ್ದವ ಧರ್ಮವನ್ನು ಕುರಿತಾದ ವಿಚಾರಗಳು'(೧೯೫೩), 'ಸತ್ಯದ ಸ್ವರೂಪ'(೧೯೫೬), 'ನಿಷ್ಠೆ: ಒಂದುಚಿಂತನೆ'(೧೯೬೦), 'ವಿವೇಕ ಒಂದು ವಿವೇಚನೆ'(೧೯೬೦), 'ಚೇತನಾ: ಒಂದು ಚಿಂತನೆ'(೧೯೬೦), 'ಸ್ವಾತಂತ್ರದ ಪ್ರತಿಷ್ಠೆ'(೧೯೬೦), 'ಸಮತೆ: ಒಂದು ಚಿಂತನೆ'(೧೯೬೦), 'ಸುಭಾಷ್‌ಚಂದ್ರ ಅಕ್ಕೋಳೆ ಅವರ ಕನ್ನಡ ಕವಿ ತಿಲಕ 'ಪ್ರಾ. ದ. ರಾ. ಬೇಂದ್ರೆ'(೧೯೫೬), ತ್ರ್ಯ. ವಿ. ಸರದೇಶಮುಖ ಅವರ 'ಅಂಬಿಕಾತನಯದತ್ತರ ಕವಿತೆಗಳು: ಕೆಲವು ಟಿಪ್ಪಣಿಗಳು'(೧೯೭೯), 'ವಿಶ್ವ ಕವಿತೆಯ ವಿಹಂಗಮ ನೋಟ'(೧೯೯೬), ದಾ. ಗೋ. ದೇಶಪಾಂಡೆ ಅವರ 'ಬೇಂದ್ರೆ ಸಖ್ಯದ ಅಖ್ಯಾನಗಳು', 'ಮಹಾಕವಿ ಬೇಂದ್ರೆಯವರ ದೃಷ್ಟಿ ಹಾಗೂ ಸೃಷ್ಟಿ'(೧೯೭೪), 'ನಾಕುತಂತಿ'(೧೯೭೫), ಸುಹಾಸ ಪೂಜಾರಿ ಅವರ 'ವಿಶ್ವ ಕಲ್ಯಾಣದ ಸ್ವರವೆತ್ತಿದ ಮಹಾಕವಿ ದ.ರಾ ಬೇಂದ್ರೆ' ಈ ಎಲ್ಲಾ ಲೇಖನಗಳು ಮರಾಠಿ ಭಾಷೆಯ ಪ್ರಮುಖ ಲೇಖಕರು ಆಯಾ ಕಾಲಘಟ್ಟದಲ್ಲಿ ಬೇಂದ್ರೆ ಅವರನ್ನು ಹಾಗೂ ಅವರ ಸಾಹಿತ್ಯವನ್ನು ಗಮನಿಸಿದ ರೀತಿಯಾಗಿದೆ.

ಸುಭಾಷ್ ಚಂದ್ರ ಅಕ್ಕೋಳೆ ಅವರ ಲೇಖನವು ೧೯೫೬ರಲ್ಲಿ ರಚನೆಗೊಂಡಿದೆ. ಆ ಕಾಲದ ಸಾಹಿತ್ಯದ ವಿವಿಧ ಆಯಾಮಗಳನ್ನು ವಿಸ್ತರಿಸುವ ಲೇಖನವಾಗಿದೆ. ಒಬ್ಬ ಅಧ್ಯಯನಕಾರ ತನ್ನ ಅಧ್ಯಯನ ವ್ಯಾಪ್ತಿಯನ್ನು ಯಾವ ರೀತಿಯಲ್ಲಿ ಗಮನಿಸಬಹುದು ಎಂಬುದಕ್ಕೆ ಸ್ಪಷ್ಟವಾದ ಉದಾಹರಣೆಗಳಿವೆ. ಕನ್ನಡ ಸಾಹಿತ್ಯದಲ್ಲಿ ಸಮಕಾಲೀನ ಲೇಖಕರು ತಮ್ಮ ಸಾಹಿತ್ಯಗಳ ಮೂಲಕ

ಪರಸ್ಪರ ಒಂದು ಅಧ್ಯಯನ ಕೊಂಡಿಯಾಗಿ ರೂಪಿತಗೊಳ್ಳುವ ಬಗೆಯನ್ನು ಇಲ್ಲಿ ನಿರೂಪಿಸಲಾಗಿದೆ. ಕನ್ನಡದಲ್ಲಿ ಬೇಂದ್ರೆಯೊಂದಿಗೆ ಮಾಸ್ತಿ, ಕುವೆಂಪು, ಗೋಕಾಕರು ನಿರ್ಮಿಸಿಕೊಂಡ ಅಧ್ಯಯನ ಕೀಲಿಗಳನ್ನು ನಾವಿನ್ನೂ ಸೂಕ್ಷ್ಮವಾಗಿ ಗಮನಿಸಿಲ್ಲ ಎನಿಸುತ್ತದೆ. ಕೆ. ಸಿ. ಶಿವಾರೆಡ್ಡಿ ಅವರು ಕುವೆಂಪು ಸಾಹಿತ್ಯದಲ್ಲಿ ರೂಪಾಂತರಗಳನ್ನು ಕುರಿತು ಸಾರ್ವಜನಿಕ ಭಾಷಣದಲ್ಲಿ ಮಾತನಾಡುತ್ತಾ 'ಬೇಂದ್ರೆ ಅವರ ಸಾಹಿತ್ಯದ ಪ್ರವೇಶದ ಕೀಲಿಗಳು ಕುವೆಂಪು ಸಾಹಿತ್ಯದಲ್ಲಿ ಸಾಕಷ್ಟು ದೊರೆಯುತ್ತವೆ. ಅಷ್ಟೇ ಅಲ್ಲದೇ ಜನಪದ ಮೂಲದಿಂದ ಹಲವು ಉದಾಹರಣೆಗಳನ್ನು ನೀಡಬಹುದು' ಎಂದು ಕೆಲವು ಕವಿತೆಗಳನ್ನು ಸ್ಪಷ್ಟಪಡಿಸಿದರು. ಇಲ್ಲಿ ಸೂಕ್ಷ್ಮವಾಗಿ ಗಮನಿಸುವುದಾದರೆ ಒಬ್ಬ ಕವಿ ತಾನು ಗೌಣಗೊಳಿಸುವ ಸರಳ ಅಭಿವ್ಯಕ್ತಿಯನ್ನು ಇನ್ನೊಬ್ಬ ಕವಿ ತನ್ನ ಕಾವ್ಯದಲ್ಲಿ ಪೂರ್ಣವಾಗಿ ಕಾಣಿಸಿರುತ್ತಾನೆ ಎಂಬುದನ್ನು ಇನ್ನೂ ಅಧ್ಯಯನ ಮಾಡಬೇಕಾದ ವಿಷಯಗಳಾಗಿವೆ. ಬೇಂದ್ರೆ ಕೇವಲ ಧಾರವಾಡ ಪರಿಸರಕ್ಕೆ ಮಾತ್ರ ಸೀಮಿತವಾಗದೆ ಅಂದಿನ ಮಹಾರಾಷ್ಟ್ರದ ಸಾಹಿತ್ಯ ಅಧ್ಯಯನದೊಂದಿಗೆ ಕನ್ನಡ–ಮರಾಠಿಯನ್ನು ಒಂದು ನಂಟಾಗಿ ಬೆಳೆಸಿದ್ದರು. ಮರಾಠಿ ಸಾಹಿತ್ಯದ ಕವಿಗಳು ಹಾಗೂ ಅಧ್ಯಯನಕಾರರ ಪ್ರಭಾವಕ್ಕೆ ಒಳಗಾಗಿದ್ದರು. ಹಾಗೂ ಬೇಂದ್ರೆ ಸಾಹಿತ್ಯದ ಅಧ್ಯಯನಕಾರರು ಮರಾಠಿಯಲ್ಲೂ ಹೆಚ್ಚಿನ ಸಂಖ್ಯೆಯಲ್ಲಿ ಕಾಣಬಹುದಾಗಿದೆ. ಈ ಕಾರ್ಯಗಳಲ್ಲಿ 'ಗೆಳೆಯರ ಗುಂಪು' ಸಾಕಷ್ಟು ಕೆಲಸ ಮಾಡಿದೆ ಎಂಬುದನ್ನು ದಾಖಲಿಸಿರುವುದನ್ನು ಅಧ್ಯಯನಮಾಡಬಹುದು.

೫. ೨. ೧. ಮರಾಠಿ ಸಾಹಿತ್ಯ: ವಸಾಹತುಶಾಹಿ ಚಿಂತನೆಯ ಅಭಿವ್ಯಕ್ತಿ

ಮರಾಠಿ ಸಾಹಿತ್ಯವನ್ನು ವ್ಯವಸ್ಥಿತವಾಗಿ ಅಧ್ಯಯನ ನಡೆಸಿದ ಬೇಂದ್ರೆ ಅವರು ಮರಾಠಿಯಲ್ಲೂ ಕಾವ್ಯವನ್ನು ರಚಿಸಿದ್ದಾರೆ. ಕವಿ ವಾಸ್ತವಕ್ಕೆ ತುಡಿಯಲು ಭಾಷೆ, ಪರಿಸರ ಈ ಎಲ್ಲಾ ಎಲ್ಲೆಗಳು ಕಾರಣವಾಗಲಾರವು. ಮರಾಠಿ ಸಾಹಿತ್ಯ ಅಭಿವ್ಯಕ್ತಿಯಲ್ಲೂ ಜನರಲ್ಲಿ ಸ್ವಾತಂತ್ರ್ಯದ ಇಚ್ಛಾಶಕ್ತಿಯನ್ನು ಮೂಡಿಸಿಬೇಕಾದ ಕರ್ತವ್ಯವನ್ನು ಒಬ್ಬ ಕವಿಯಾಗಿ ನಿರ್ವಹಿಸಿದ್ದಾರೆ. ವಸಹಾತು ಧೋರಣೆಗಳನ್ನು ಸಾಧ್ಯವಾದಷ್ಟು ಬಂಧಮುಕ್ತಗೊಳಿಸುವ ನೈತಿಕತೆಯನ್ನು ಅನುಸರಿಸಿದರು. ಈ ವಿಚಾರಗಳನ್ನು ತ್ರ್ಯ ವಿ. ಸರದೇಶಮುಖ ಅವರು 'ಅಂಬಿಕಾತನಯದತ್ತರ ಕವಿತೆಗಳು: ಕೆಲವು ಟಿಪ್ಪಣಿಗಳು' ಎಂಬ ಲೇಖನದಲ್ಲಿ ಗಮನಿಸಿದ್ದಾರೆ.

> ಅಧಿಕಾರಿಶಾಹಿಯದೊಂದೇ ಗಾಳಿ ರಷಿಯಾದಲ್ಲಿ ಬೀಸುತ್ತಿದ್ದಾಗ ಆ ಬಿರುಗಾಳಿಯ ಮೇಲೆ ಸವಾರಿ ಮಾಡಲು ಸಾಧ್ಯವಿರದಿದ್ದರೆ ಅದರ ಭಕ್ತರಾಗಿ ಅದರ ಭಜನೆ ಹಾಡುತ್ತ ಕೂಡುವದೊಂದೇ ಆಗಿನ ಕಾಲದ ತರ್ಕಶುದ್ಧ ವಿಚಾರವಾಗಿತ್ತು. ಬೇಂದ್ರೆಯವರ ಶಬ್ದಗಳು ಈ ಬಗೆಯ ಉಪರೋಧಗಳಲ್ಲಿ ಹಾಯ್ದು ನಂತರ ಗಂಭೀರವಾದ ಶೋಕಾತ್ಮಕವಾದ ಸಂವೇದನೆಯತ್ತ ಓದುಗರನ್ನು ಒಯ್ಯುತ್ತವೆ.
>
> 'ಅರೆ, ಡರೋ ಮತ್' ಚಾ ಗಣವೇಶ
> ಬಾಂಧಾ ಗಳ್ಯಾತ ಅಸ್ವಲ–ಕೇಶ
> ಕುಠಲೀ ಭಾಷಾ, ಕಸಲಾ ದೇಶ?

> ಎಲ್ಲೆಡೆಗೂ ಹಾಹಾಕಾರ ಎಬ್ಬಿಸಿ, 'ಮಾಡು ಇಲ್ಲವೆ ಮಡಿ'ಯಂತದ ಘೋಷಣೆಗಳಿಂದ ಎಲ್ಲಾ ದುಡಿಮೆಗಾರರನ್ನೂ ಒಟ್ಟಿಗೆ ಸೇರಿಸಿ, ಶೇಂಗಾ-ಬೆಲ್ಲ ತಿನ್ನುತ್ತ ಬದುಕುತ್ತೇವೆಂಬ ಪ್ರಮಾಣ ಸ್ವೀಕರಿಸಿ ಬದುಕುವಂತಹ ದಯನೀಯ ಸ್ಥಿತಿಯೇ ಆಗ ಅಲ್ಲಿ ನಿರ್ಮಾಣವಾಗಿತ್ತು. ಈ ಸ್ಥಿತಿಯ ಬಗೆಗೆ ಬೇಂದ್ರೆಯವರಿಗಿದ್ದ ದುಃಖ ಹಾಗೂ ಕಾರ್ಮಿಕರ ಬಗೆಗಿದ್ದ ಕರುಣೆ ಎರಡನ್ನೂ ಅವರು ತಮ್ಮ ಎರಡು ಕವಿತೆಗಳಲ್ಲಿ ಸ್ಪಷ್ಟವಾಗಿ ದಾಖಲಿಸಿದ್ದಾರೆ.[೧೪]

ಇಂತಹ ಗಂಭೀರವಾದ ಅಧ್ಯಯನಯುಕ್ತ ಲೇಖನವನ್ನು ರಚಿಸುತ್ತಲೇ ತ್ರ್ಯ ವಿ. ಸರದೇಶಮುಖ ಅವರು ತೀರಿಹೋದದ್ದು ಬೇಂದ್ರೆ ಅವರು ಮರಾಠಿ ಸಾಹಿತ್ಯದಲ್ಲಿ ಆವರಿಸಿಕೊಂಡ ಬಗೆಯನ್ನು ತಿಳಿಯಬಹುದು. ಈ ಲೇಖನದಲ್ಲಿ ಸ್ವತಂತ್ರ್ಯಪೂರ್ವದ ಹಾಗೂ ನಂತರದ ಬೆಳವಣಿಗೆಗಳಿಗೆ ಬೇಂದ್ರೆ ಅವರ ಸಾಹಿತ್ಯ ಸ್ಪಂದಿಸಿದ ಬಗೆಯನ್ನು ಗಮನಿಸಿದ್ದಾರೆ. ಮಹಾರಾಷ್ಟ್ರದಲ್ಲಿ ಬೇಂದ್ರೆ ಅವರು ಹನ್ನೆರಡು ವರ್ಷ ಸೇವೆಯಲ್ಲಿದ್ದು ಮರಾಠಿ ಸಾಹಿತ್ಯ ಪರಿಸರವನ್ನು ಅವಲೋಕಿಸಿದ ಬಗೆಯನ್ನು ಅಂದಿನ ಭಾರತೀಯ ಚಿಂತನೆಗಳ ಅವಲೋಕವೂ ಈ ಲೇಖನದಲ್ಲಿ ಅಭಿವ್ಯಕ್ತಗೊಂಡಿದೆ.

ತ್ರ್ಯ ವಿ. ಸರದೇಶಮುಖ ಅವರು ೧೯೭೬ರಲ್ಲಿ ಮರಾಠಿಯ 'ನವಭಾರತ' ಎಂಬ ಪತ್ರಿಕೆಯಲ್ಲಿ ದ.ರಾ ಬೇಂದ್ರೆ ಅವರು ಒಬ್ಬ ಮಹಾಕವಿಯಾಗಿ ನಿಲ್ಲುತ್ತಾರೆ ಎಂಬುದನ್ನು ಹಲವು ಉದಾಹರಣೆಗಳ ಮೂಲಕ ನಿರೂಪಿಸುತ್ತಾರೆ.

> ಬೇಂದ್ರೆ ಅವರ ಕನ್ನಡ ಬರಹಗಳನ್ನು ನನಗೆ ಓದಲಾಗಲಿಲ್ಲ ಎಂಬ ಹಳಹಳಿಕೆಯಂತೂ ನನಗಿದ್ದೇ ಇದೆ. ಹಾಗೆ ನೋಡಿದರೆ ಆ ಬರಹ ಅತಿ ದೂರುಹ್ಯವೇನಲ್ಲ. ಏಕೆಂದರೆ ಸ್ಥೂಲಾರ್ಥದಲ್ಲಿ ಅದರ ರಚನೆಗಳನ್ನು ನಾನು ಮುಕ್ತವಾಗಿ ಕೇಳಿದ್ದೇನೆ. ಅವರೂ ಕೂಡ ಅನೇಕ ಸಲ ತಮ್ಮ ಕನ್ನಡ ಕವಿತೆಗಳನ್ನು ಹಾವಭಾವದೊಂದಿಗೆ, ತಾಳ-ಲಯಗಳೊಂದಿಗೆ ಓದಿ ನನಗೆ ತೋರಿಸಿದ್ದಾರೆ. ಆ ಕವಿತೆಗಳ ಹಿನ್ನಲೆ ಮುನ್ನಲೆಗಳನ್ನೂ ವಿವರಿಸಿದ್ದಾರೆ. ತಾವು ಬರೆಯಬೇಕೆಂದುಕೊಂಡಿರುವ ಎಷ್ಟೋ ಸಾಹಿತ್ಯ ಕೃತಿಗಳ ವಿವರಗಳನ್ನು ಅವರು ನನಗೆ ಹೇಳಿದ್ದಾರೆ. ಅವರಿಗೆ 'ಅಮೃತಾನುಭವ' ಹಾಗೂ ಉಮ್ಮರ್ ಖಯಾಮನ ರುಬಾಯಿತ್‌ಗಳ ಅನುವಾದವನ್ನು ಮಾಡುವ ಯೋಚನೆ ಇನ್ನೂ ಇದೆ. ಜ್ಞಾನೇಶ್ವರರಿಂದ ಹಿಡಿದು ಗೋವಿಂದಾಗ್ರಜ-ಮರ್ಢೇಕರರವರೆಗೆ, ಸಾಫೋಕ್ಲಿಸ್‌ನಿಂದ ಹಿಡಿದು ಎಲಿಯೆಟ್-ಬ್ರೆಕ್ಟ್‌ರವರೆಗೆ, ಶ್ರೀಕೃಷ್ಣನಿಂದ ಹಿಡಿದು ಸೈಡನ್‌ಬರ್ಗ್-ಇಮರ್ಸನ್‌ರವರೆಗೆ ಎಷ್ಟೋ ಧೀಮಂತರ ವಿಚಾರಗಳ, ಭಾವ ಕಲ್ಪನೆಗಳ ಬಗೆಗೆ ವಿಮರ್ಶಾತ್ಮಕವಾದ ಮಾತುಗಳು ಅವರ ವಾಣಿಯಲ್ಲಿ ತುಂಬಿಕೊಂಡಿವೆ. ಅವರು ತಮ್ಮ ವಿಮರ್ಶಾ ವಿಚಾರಗಳನ್ನು ಸ್ವಂತದ ಜೀವನಾನುಭವದ ಸಾಣೇಕಲ್ಲಿನ ಮೇಲೆ ಮತ್ತೆ ಮತ್ತೆ ತಿಕ್ಕಿ ನೋಡಿಕೊಳ್ಳುತ್ತಾರೆ. ನಾನಿದನ್ನು ಪ್ರತ್ಯಕ್ಷವಾಗಿ ನೋಡಿದ್ದೇನೆ.[೧೫]

ಈ ವಿಚಾರಗಳನ್ನು ಗಮನಿಸಿದರೆ ಬೇಂದ್ರೆ ಅವರಿಗಿದ್ದ ಜ್ಞಾನದ ಹರಹು, ಅಂದಿನ ಸಾಹಿತ್ಯದ ಕುತೂಹಲಗಳು ಹಾಗೂ ಅವರ ಸಾಹಿತ್ಯ ಅಧ್ಯಯನಕ್ಕೆ ಬೇಕಾಗುವ ಪ್ರವೇಶಿಕೆಗಳು ಅರ್ಥವಾಗುತ್ತವೆ. ಸಾಹಿತ್ಯವನ್ನು ಕೇವಲ ಜ್ಞಾನಕ್ಕಾಗಿ ಅಭ್ಯಾಸ ಮಾಡದೇ ತಮ್ಮ ಜೀವನಕ್ಕೆ ಅನ್ವಹಿಸಿಕೊಂಡು ವಿಮರ್ಶಿಸುವುದು ನಿಜವಾದ ಅಧ್ಯಯನ ಕ್ರಮ ಎನಿಸುತ್ತದೆ.

ಈ 'ಬಂಧವಿರದೆ ಬಂಧುರ' ಎಂಬ ಬೇಂದ್ರೆ ಕುರಿತು ಮರಾಠಿಯ ಲೇಖನಗಳ ಸಂಗ್ರಹ ಕೃತಿಯಲ್ಲಿ ಬೇಂದ್ರೆ ಮತ್ತು ಮಹಾರಾಷ್ಟ್ರದ ನಂಟು ಕಾಣುತ್ತದೆ. ಇಲ್ಲಿನ ಲೇಖಕರು ಸಮಕಾಲೀನ ಮರಾಠಿ ಲೇಖಕರೊಂದಿಗೆ ಬೇಂದ್ರೆ ಅವರನ್ನು ಹಾಗೂ ಅವರ ಸಾಹಿತ್ಯವನ್ನು ಗ್ರಹಿಸಿದ ಬಗೆಯನ್ನು ಅಂದಿನ ಪತ್ರಿಕೆಗಳಲ್ಲಿ ಮುಕ್ತವಾಗಿ ಹಂಚಿಕೊಂಡಿದ್ದಾರೆ. ಧರ್ಮ, ಪ್ರಶ್ನೆ, ಸತ್ಯ, ನಿಷ್ಠೆ, ವಿವೇಕ, ಚೇತನ ಹಾಗೂ ಸಮತೆ ಮೊದಲಾದ ಹಲವು ಅಂಶಗಳ ಕುರಿತು ಬೇಂದ್ರೆಯವರೊಂದಿಗೆ ತಾವು ನಡೆಸಿದ ಚರ್ಚೆಯನ್ನು ಇಲ್ಲಿ ನಿರೂಪಿಸಿದ್ದಾರೆ. ಇಂತಹ ಕೃತಿಗಳು ಬೇಂದ್ರೆ ಅವರ ಸಾಹಿತ್ಯದ ಹರಹನ್ನು ತಿಳಿಯಲು ಸಹಾಯ ಮಾಡುತ್ತವೆ. ಬೇಂದ್ರೆ ಇತರರೊಂದಿಗೆ ನಡೆಸಿದ ವಿಚಾರಗಳನ್ನು ಪ್ರತ್ಯೇಕವಾಗಿ ಅಧ್ಯಯನ ನಡೆಸಿ ಲೇಖನ, ಭಾಷಣ ರೂಪಗಳಲ್ಲಿ ನಮಗೆ ದೊರಕುವಂತೆ ಮಾಡಿದ್ದಾರೆ. ಕವಿಯ ಈ ಎಲ್ಲಾ ಚಿಂತನೆಗಳು ಸಾಹಿತ್ಯದ ವಿರಾಟ್ ಸ್ವರೂಪದಲ್ಲಿ ಸಂಗ್ರಹಗೊಂಡಿವೆ.

ಕರ್ನಾಟಕ ಮತ್ತು ಮಹಾರಾಷ್ಟ್ರ ಕುರಿತು ಬೇಂದ್ರೆ ಅವರು ಹತ್ತು ಲೇಖನಗಳನ್ನು ಹಲವು ಕವಿತೆಗಳನ್ನು ರಚಿಸಿದ್ದಾರೆ. ಕರ್ನಾಟಕ ಮತ್ತು ಮಹಾರಾಷ್ಟ್ರದ ನಡುವಿನ ಸಂಸ್ಕೃತಿ, ಬಾಂಧವ್ಯ, ಭಾಷೆ ಈ ಎಲ್ಲಾ ವಿಚಾರಗಳನ್ನು ಬೇಂದ್ರೆ ಅವರು ಕೆಲವು ನಿರ್ಣಯಗಳನ್ನು ನಿರೂಪಿಸಿದ್ದಾರೆ.

> ಕರ್ನಾಟಕ ಮತ್ತು ಮಹಾರಾಷ್ಟ್ರ ಪ್ರದೇಶಗಳಲ್ಲಿಯ ಋಣಾನುಬಂಧವು ಆಳವಾಗಿ ಬೇರೂರಿದೆ; ಹೀಗಿದ್ದೂ, ವಿಶಿಷ್ಟ ಪ್ರಸಂಗಗಳಲ್ಲಿ ತಪ್ಪು ತಿಳುವಳಿಕೆಯಾಗುವ ಸಂಭವವಿದೆ. ಇಂಥ ಕಗ್ಗಂಟುಗಳನ್ನು ಬಿಚ್ಚುವ ಬುದ್ಧಿಯಿಂದ ಈ ಲೇಖನದಲ್ಲಿ ಎರಡೂ ಪ್ರದೇಶಗಳ ಭಾಂದವ್ಯದ ಕೆಲವು ಮರ್ಮಸ್ಥಳಗಳನ್ನು ಸೂಚಿಸಿದ್ದೇವೆ. ಬುದ್ಧಿವಂತರಂತೆಯೇ ಭಾವುಕರೂ ಈ ವಿಷಯವಾಗಿ ಯಥಾಯೋಗ್ಯ ವಿಚಾರಗಳನ್ನು ಮಾಡಬೇಕು. ... ಕರ್ನಾಟಕದ ಉತ್ತರ ಸೀಮೆಯೆ ಮಹಾರಾಷ್ಟ್ರದ ದಕ್ಷಿಣ ಸೀಮೆ ಆಗಿರುವುದರಿಂದ ಈ ಸೀಮಾರೇಖೆಯನ್ನು ಅವಲೋಕಿಸುವವರಿಗೆ ಎರಡೂ ಪ್ರಾಂತ್ಯಗಳಲ್ಲಿಯ ಸಾಮ್ಯವು ಖಚಿತವಾಗಿ ಲಕ್ಷ್ಯಕ್ಕೆ ಬರುತ್ತದೆ. ಈ ಸೀಮಾರೇಖೆಯ ಮೇಲೆಯೇ ನರಸೋಬಾವಾಡಿ, ಗಾಣಗಾಪೂರ, ಔದುಂಬರ, ಕುರುಗುಡ್ಡಿ, ಎಂಬ ದತ್ತ ಕ್ಷೇತ್ರಗಳು; ಪ್ರಖ್ಯಾತ ವಿಠಲ ಕ್ಷೇತ್ರ–ಪಂಢರಪುರ; ಸಿದ್ಧರಾಮ ಕ್ಷೇತ್ರ– ಸೋಲಾಪೂರ; ಭವಾನೀಕ್ಷೇತ್ರ– ತುಳಜಾಪೂರ; ಮಂಗಳವೇಢೆ, ಗೋಕರ್ಣ, ಕೋಲ್ಹಾಪೂರ, ಬಾಹುಬಲಿ ಮೊದಲಾದ ಸಾಂಸ್ಕೃತಿಕ ಸ್ಥಳಗಳು ಇವೆ. ಈ ಧಾರ್ಮಿಕ ಕ್ಷೇತ್ರಗಳ ಉಲ್ಲೇಖವನ್ನು ಸದುದ್ದೇಶದಿಂದಲೇ ಮಾಡಿದ್ದೇವೆ. ಭರತಖಂಡದಲ್ಲಿಯ ಇರವು ಮತ್ತು ಸಾವು. ಧಾರ್ಮಿಕ ಸಂಸ್ಕೃತಿ ಮತ್ತು ವಿಕೃತಿಯನ್ನೇ ಅವಲಂಬಿಸಿರುತ್ತದೆ. ಈ ಸೀಮಾರೇಖೆಯ ಮೇಲೆ ದ್ವಿಭಾಷೆಗಳ ಬಳಕೆ ಮತ್ತು ನಿಜವಾದ ನೆರೆಹೊರೆ, ಧರ್ಮದ ಆತ್ಮೀಯತೆ, ದೃಢವಾದರೆ ಅದರಂಥ ಸೌಭಾಗ್ಯ ಇನ್ನೊಂದಿಲ್ಲ.[೧೬]

ಈ ವಿಚಾರಗಳು ಬೇಂದ್ರೆ ಅವರು ಕರ್ನಾಟಕ ಮತ್ತು ಮಹಾರಾಷ್ಟ್ರದ ನಡುವೆ ಕಟ್ಟಿದ್ದ ಸಾಹಿತ್ಯದ ಸೇತುವೆಯ ಅಭಿವ್ಯಕ್ತಿಯನ್ನು ತಿಳಿಸುತ್ತವೆ. ಇದರಿಂದ ಬೇಂದ್ರೆ ಅವರ ಸಾಹಿತ್ಯ ಅಧ್ಯಯನವು ಎರಡು ಪ್ರಾದೇಶಿಕ ಭಾಷೆಗಳ ನಡುವಿನ ಸಾಂಸ್ಕೃತಿಕ ಅಧ್ಯಯನದಂತೆ ಕಂಡುಬರುತ್ತದೆ.

ಈ ಕುರಿತ ವಿಮರ್ಶೆಗಳ ಸ್ವರೂಪವನ್ನು ಅಧ್ಯಯನ ಮಾಡಲು ಬೇಂದ್ರೆ ಅವರ ಹತ್ತು ಲೇಖನಗಳು ಸಹಾಯಕವಾಗುತ್ತವೆ.

ಬೇಂದ್ರೆ ಅವರ ವ್ಯಕ್ತಿತ್ವದ ಹಲವು ಚಹರೆಗಳನ್ನು ಮಂಡಿಸುವ ಮರಾಠಿ ಲೇಖಕರ ಮತ್ತೊಂದು ಕೃತಿಯನ್ನು ಗಮನಿಸಬಹುದು. ಆನಂದ ಝುಂಜರವಾಡ ಅವರು ಇಪ್ಪತ್ತಮೂರು ಲೇಖನಗಳನ್ನು ಸೇರಿಸಿ 'ದೂರ್ವಾಂಕುರ' ಎಂಬ ಕೃತಿಯನ್ನು ಸಂಪಾದಿಸಿದ್ದಾರೆ.

ಬೇಂದ್ರೆ ಅವರೊಂದಿಗೆ ತಾವು ಕಳೆದ ಕ್ಷಣಗಳನ್ನು ಅವರ ಅಧ್ಯಯನದ ವಿಸ್ತಾರವನ್ನು ಅನಿಲ ದೇಶಪಾಂಡೆಯವರು 'ಗ್ರಂಥಗಳೆನ್ನುತ್ತಿವೆ ಇದು ನನ್ನ ಮನೆ' ಎಂಬ ಲೇಖನದಲ್ಲಿ ಪರಿಚಯಿಸಿದ್ದಾರೆ. ಇಂತಹ ಅನುಭವಗಳನ್ನು ೧೯೪೬ರ ಗೌರಾರ್ಪಣೆಯಲ್ಲಿ ಸಾಕಷ್ಟು ಲೇಖಕರು ಮಂಡಿಸಿರುವುದನ್ನು ಗಮನಿಸಿದ್ದೆವು. ಬೇಂದ್ರೆ ಅವರು ಒಬ್ಬ ಸಾಮಾನ್ಯ ಅಧ್ಯಯನಕಾರನಾಗಿರದೆ ಹಲವು ವಿಷಯಗಳನ್ನು ಒಟ್ಟೊಟ್ಟಿಗೆ ಮಂಡಿಸುವ ಅವಧಾನ ಕಲೆಯನ್ನು ರೂಢಿಸಿಕೊಂಡಿದ್ದರು ಎಂಬುದಕ್ಕೆ ಇವೆಲ್ಲಾ ಸಾಕ್ಷಿಗಳಾಗಿವೆ.

> ಬೇಂದ್ರೆಯವರು 'ಕವಿರಾಜ'ರಂತೂ ಇದ್ದೇ ಇದ್ದಾರೆ. ಅವರಿಗೆ ಗೌರವದಿಂದ 'ಯೋಗಿರಾಜ' ರೆಂದು ಕರೆಯುತ್ತಾರೆ. ಮಹಾನುಭವ ಪಂಥದಲ್ಲಿ ವರ್ಣನೆಯಂತೆ, ಯಾವುದಾದರೂ ವ್ಯಕ್ತಿಗೆ 'ಅವಸ್ಥಾ' ಪ್ರಾಪ್ತಿ ಆಯಿತೆಂದರೆ ಅವನು 'ಟ್ರಾನ್ಸ್' ದಲ್ಲಿ ಹೋದನೆಂದೇ ಅರ್ಥ. ಬೇಂದ್ರೆ ಅವರ ಮಾತು, ನಡಿಗೆ, ಹಾವಭಾವ, ಕವಿತೆಯನ್ನೋದುವ ಕ್ರಮ, ಇವುಗಳನ್ನೆಲ್ಲಾ ನೋಡಿದಾಗ ಇವರು ನಿರಂತರವಾಗಿಯೂ 'ಟ್ರಾನ್ಸ್'ದಲ್ಲಿ ಅಂದರೆ ಅವಸ್ಥಾದಲ್ಲಿ ಇರುತ್ತಾರೆಂಬುದು ಅರಿವಿಗೆ ಬರುತ್ತದೆ. ಇದು ಒಮ್ಮೆ ತಿಳಿಯಿತೆಂದರೆ ಅವರ ವಿಸಂವಾದಗಳೊಳಗಿನ 'ಸಂವಾದ'ಗಳು ಅರ್ಥವಾಗುತ್ತವೆ. ಅಸಂಬದ್ಧತೆಗಳೊಳಗಿನ 'ಸುಸಂಬದ್ಧತೆ' ತಿಳಿಯುತ್ತದೆ ಹಾಗೂ ಪ್ರತಿಯೊಬ್ಬರಿಗೂ ಅವರ ವ್ಯಕ್ತಿತ್ವಕ್ಕೆ ಒಂದು ವಿಶಿಷ್ಟವಾದ ಅನುಭವವೇ ಒದಗುತ್ತದೆ.[೧೭]

ಈ ಅನುಭವದೊಂದಿಗೆ ಬೇಂದ್ರೆ ಅವರ ಸಾಹಿತ್ಯದ ಅಧ್ಯಯನವು ಸಾಗಿಬಂದಿತು. ಈ ವ್ಯಕ್ತಿತ್ವದ ತೌಲನಿಕ ಗ್ರಹಿಕೆಯಾಗಿ ಮಾರಾಠಿ ಸಾಹಿತ್ಯದೊಂದಿಗೆ ಬೇಂದ್ರೆ ಅವರು ನಿರ್ಮಿಸಿಕೊಂಡಿದ್ದ ವ್ಯಕ್ತಿತ್ವವನ್ನು 'ಜಾಗರಿಸುವ ವ್ಯಕ್ತಿತ್ವ' ಎಂಬುದಾಗಿ ನಿರ್ಮಲಕುಮಾರ ಫಡಕುಲೆ ಅವರು ಲೇಖನದಲ್ಲಿ ಗ್ರಹಿಸಿದ್ದಾರೆ. ರಂಗನಾಥ ತಿವಾರಿ ಅವರು 'ತೀರ್ಥರೂಪೀ ಸಂವೇದನೆ' ಎಂಬ ಲೇಖನದಲ್ಲಿ ತಾವು ಸಾಧನಕೇರಿಗೆ ಭೇಟಿ ನೀಡಿದಾಗ ಉಂಟಾದ ಆಪ್ತವಾದ ಅನುಭವಗಳನ್ನು ಗ್ರಹಿಸಿದ್ದಾರೆ. ಒಂದು ಅಧ್ಯಯನ ಹೇಗಿರಬೇಕು., ಸಾಹಿತ್ಯದ ತಿಳಿವಳಿಕೆಗಳಾವುವು ಎಂಬುದನ್ನು ಬೇಂದ್ರೆ ಅವರ ಮಾತಿನಿಂದಲೇ ಅರ್ಥೈಸಿದ್ದಾರೆ.

'ಆತ್ಮತುಂದಿಲವಾದ ಜ್ಞಾನಪೀಠ' ಎಂಬ ಲೇಖನದಲ್ಲಿ ಯ.ದಿ. ಫಡಕೆ ಅವರು ಬೇಂದ್ರೆ ಅವರು ತನ್ನ ಸುತ್ತನ ಪರಿಸರದೊಂದಿಗೆ ಸಾಮಾನ್ಯ ಸಂಬಂಧವನ್ನು ಪರಿಚಯಿಸುತ್ತಾರೆ. ಎಲ್ಲರನ್ನೂ ಆಪ್ತವಾಗಿ ಕಾಣುವ, ತನ್ನ ಸಾಕಷ್ಟು ನೆನಪಿನೊಂದಿಗೆ ಮನೆಗೆ ಬಂದವರೊಂದಿಗೆ ತೋರುವ

ಪ್ರೀತಿ, ಹಾಸ್ಯ ವಿನೋದಗಳು, ಅಲೌಕಿಕವಾದ ಸ್ವಭಾವಗಳನ್ನು ಸೂಕ್ಷ್ಮವಾದ ಬರಹದೊಂದಿಗೆ ಚರ್ಚಿಸಿದ್ದಾರೆ.

ಬೇಂದ್ರೆ ಅವರು ಸೊಲ್ಲಾಪುರದಲ್ಲಿ ಬದುಕಿದ ಕೆಲವು ವರ್ಷಗಳ ನೆನಪಲ್ಲಿ ತಾನು ಗಳಿಸಿಕೊಂಡ ಆಪ್ತತೆಯನ್ನು ಕವಿ ಕುಂಜವಿಹಾರಿ ಅವರು 'ಒಂದು ಪ್ರಸನ್ನ ವ್ಯಕ್ತಿತ್ವ' ಎಂಬ ಲೇಖನದಲ್ಲಿ ಸುಮಾರು ನಲವತ್ತೈದು ವರ್ಷಗಳ ನೆನಪಿನಲ್ಲಿ ಅವಲೋಕಿಸಿದ್ದಾರೆ. 'ಆಕಲ್ಪ ಆಯುಷ್ಯ ಆಗಲವಗೆ' ಎಂಬ ಲೇಖನದಲ್ಲಿ ಪೂ.ಜ. ಬುವಾ ಅವರು ಕೂಡ ಈ ಸೊಲ್ಲಾಪುರದ ದಿನಗಳನ್ನು, ಅವರೊಂದಿಗೆ ಒಡನಾಡಿದ ಸಾಹಿತ್ಯ ಅಭಿಮುಖತೆಯನ್ನು ಕುರಿತು ಚರ್ಚಿಸಿದ್ದಾರೆ. ಬೇಂದ್ರೆ ಅವರ ಮೇಲೆ ಅಭಿಮಾನದಿಂದ ಅವರ ಬದುಕಿನ ಬಹು ಮುಖ್ಯಭಾಗವಾಗಿದ್ದ ಅಧ್ಯಯನವನ್ನು 'ನನ್ನಯ ಕರಗಳು ನಮಿಪವು ಅಲ್ಲಿ' ಎಂಬ ಲೇಖನದ ಮೂಲಕ ವಿ. ಮ. ಕುಲಕರ್ಣಿ ಅವರು ಪರಿಚಯಿಸಿದ್ದಾರೆ.

> ಅಧ್ಯಯನ, ಅಧ್ಯಾಪನ ಆಧ್ಯಾತ್ಮಚಿಂತನ ಮತ್ತು ಭಗವಂತನ ಅನುಸರಣೆ ಇವುಗಳಲ್ಲೇ ಬೇಂದ್ರೆ ಅವರ ಇಡೀ ಬದುಕು ಒಂದಾಗಿದೆ. ತಮ್ಮ ನಿವೃತ್ತಿಯ ನಂತರವೂ ಅವರು ತಮ್ಮ ಈ ಅಖಂಡಿತವಾದ ಜ್ಞಾನ ಸಾಧನೆ ಮತ್ತು ಜ್ಞಾನದಾಹಗಳ ಕಾರ್ಯಗಳಿಂದ ತಮ್ಮ ಕರ್ಮಭೂಮಿಯ ಸುತ್ತಲಿನ ಪರಿಸರವನ್ನು ಉಜ್ವಲತೆಗೊಳಿಸುತ್ತಲೇ ಇದ್ದಾರೆ.[೧೮]

ಹೀಗೆ ಬೇಂದ್ರೆ ಅವರು ತಾವು ಅಳವಡಿಸಿಕೊಂಡಿದ್ದ ಅರವಿಂದರ ಕುರಿತ ಉಪಾಸನೆಯನ್ನು ಇಲ್ಲಿ ಚರ್ಚಿಸಿದ್ದಾರೆ.

ವಿ.ಪ. ಅಗ್ನಿಹೋತ್ರಿ ಅವರ 'ವಂದನೀಯ ಅಣ್ಣಾಸಾಹೇಬ', ನೃಸಿಂಹಾಚಾರ್ಯ ಬಾಗೇವಾಡಿಕರ ಅವರ 'ಮಾನನೀಯ ಕವಿವರ್ಯ', ಬಾಪೂಸಾಹೇಬ ಕುಬಡೆ ಅವರ 'ಕವಿವರ್ಯ ಬೇಂದ್ರೆ ಹಾಗೂ ಯೋಗಿರಾಜ ಶ್ರೀ ಗುಳವಣೀ ಮಹಾರಾಜರು' ಈ ಮೂರು ಲೇಖನಗಳು ಬೇಂದ್ರೆ ಅವರು ಸೊಲ್ಲಾಪುರದಿಂದ ಧಾರವಾಡಕ್ಕೆ ಬಂದ ಬಗೆಯನ್ನು ತಮ್ಮ ಆಪ್ತ ಅನುಭವಗಳ ಮೂಲಕ ಕವಿಯ ಅಂತಃಕರಣದಲ್ಲಿನ ಮೃದುತ್ವದ ಅಭಿವ್ಯಕ್ತಿಯನ್ನು ಬಿಚ್ಚಿಡುತ್ತಾರೆ.

ಮರಾಠಿಯ 'ಗೌರವಿಕಾ' ಎಂಬ ಪತ್ರಿಕೆಯಲ್ಲಿ ಕುಮಾರ ಕೋಠಾವಳೆ ಅವರು 'ಮಹಾಕವಿ ಬೇಂದ್ರೆ' ಎಂಬ ಲೇಖನ ರಚಿಸಿದ್ದಾರೆ. ಇವರ ಲೇಖನದಲ್ಲಿ ಪರಿಚಯದ ವಿಚಾರಗಳೇ ಇದ್ದರೂ 'ವಿಚಾರ ದರ್ಶನ' ಎಂಬ ಭಾಗವು ಹೊಸ ಅಂಶಗಳನ್ನು ಅಭಿವ್ಯಕ್ತಪಡಿಸುತ್ತದೆ. ವಸಾಹತು ಧೋರಣೆಗಳನ್ನು ರಾಷ್ಟ್ರೀಯ ವೈಚಾರಿಕ ಅಂಶಗಳ ಮೂಲಕ ಧ್ವನಿಸುತ್ತದೆ.

> ಭಾರತದ ಒಟ್ಟು ಸ್ಥಿತಿಯ ಬಗೆಗೂ ಬೇಂದ್ರೆಯವರು ತಮ್ಮ ತೆರೆದ ಕಣ್ಣುಗಳ ವಿಚಾರಗಳನ್ನು ಮಂಡಿಸಿದ್ದಾರೆ. ಅವರು ಹೇಳುವಂತೆ ಕೇವಲ ಜನಸಂಖ್ಯೆಯ ಬಲದ ಮೇಲೆ ಒಂದು ಪ್ರದೇಶವು ರಾಷ್ಟ್ರವಾಗುವುದಿಲ್ಲ. ಅಲ್ಲಿ ವಿಚಾರಗಳ ಅಧಿಷ್ಠಾನವಿರಬೇಕು. ಅದರ ಮೇಲೆಯೇ ಆ ರಾಷ್ಟ್ರದ ಸ್ಥೈರ್ಯವು ಅವಲಂಬಿಸಿರುತ್ತದೆ. ನಮ್ಮ ದೇಶದಲ್ಲಿ ಈ ಬಗೆಯ ವೈಚಾರಿಕ ಅಧಿಷ್ಠಾನ ಉಳ್ಳ ವ್ಯಕ್ತಿತ್ವಗಳ ಬಲವನ್ನು ನಾವು ಪರಿಗಣಿಸಿದರೆ ನಾವು ಯಾವ ನೆಲೆಯಲ್ಲಿ

> ಬದುಕುತ್ತಿದ್ದೇವೆ, ಎಂಬುದರ ಕಲ್ಪನೆಯೂ ನಮಗೆ ಬರುತ್ತದೆ. ಯಾವ ದೇಶದಲ್ಲಿ ಈ ವೈಚಾರಿಕ ಅಧಿಷ್ಠಾನವಿಲ್ಲವೋ ಆ ದೇಶದ ಜನತೆ ಮೂಕ ಬಸವಣ್ಣ'ನಾಗಿ ಬಿಡುತ್ತಾರೆ ಎಂದು ಅವರು ಒಂದೆಡೆ ಪ್ರತಿಪಾದನೆ ಮಾಡಿದ್ದಾರೆ.[೧೯]

ದೇಶದ ವಾಸ್ತವದಲ್ಲಿ ವೈಚಾರಿಕ ಜಾಗೃತಿಯನ್ನು ಇಲ್ಲಿ ಗ್ರಹಿಸಿದ್ದಾರೆ. ಭಾರತದಂತಹ ದೇಶವು ಸದ್ಯ ಎದುರಿಸುತ್ತಿರುವ ಸಮಸ್ಯೆಗಳಲ್ಲಿ ಈ ವೈಚಾರಿಕ ಕೊರತೆಯೂ, ಆದರ್ಶದ ಮೌನವೂ ಬಹುಮುಖ್ಯ ವಿಚಾರವಾಗಿದೆ. ಕಮಾರ ಕೋಠಾವಳೆ ಅವರು ಅವಲೋಕಿಸಿರುವ ಜಾಗೃತಿಯ ನಿಲುವು ಬೇಂದ್ರೆ ಅವರ ಜ್ಞಾನಕ್ಕೆ ಕನ್ನಡಿಯಂತಿದೆ.

ದಾ. ಗೋ. ದೇಶಪಾಂಡೆ ಅವರ 'ಸಂವಾದಕ್ಕೆ ಒಂದು ಮನೋಗತ' ಎಂಬ ಲೇಖನವು ಬೇಂದ್ರೆ ಅವರ ಸಾಹಿತ್ಯ ಹಾಗೂ ಮರಾಠಿ ಸಂಬಂಧವನ್ನು ಅಭಿವ್ಯಕ್ತಪಡಿಸಿದೆ. ಕವಿ ಕನ್ನಡದಲ್ಲಿ ಸಾಕಷ್ಟು ಸಾರವತ್ತಾಗಿ ಸಾಹಿತ್ಯ ರಚಿಸಿದ್ದರೂ ಅವರ ಮೂಲನೆಲೆ ಮರಾಠಿಯಿಂದ ಪ್ರೇರಿತವಾದುದು. ಆಧ್ಯಾತ್ಮಿಕ ಪರಂಪರೆ, ಮರಾಠಿ ಸಂತರ ಪ್ರೇರಣೆ ಮೊದಲಾದ ವೈಚಾರಿಕ ಪೋಷಣೆಯು ಮಹಾರಾಷ್ಟ್ರದ ಮಣ್ಣಿನಿಂದಲೇ ದೊರೆತಿದೆ. ಮರಾಠಿಗರಿಗೆ ಕನ್ನಡ ಭಾಷೆಯ ಶ್ರೀಮಂತಿಕೆಯನ್ನು ಪರಿಚಯದ ಬೇಂದ್ರೆಯ ಕುರಿತು ಈ ರೀತಿ ಹೇಳಿದ್ದಾರೆ

> ಅಮೇರಿಕದ ಪ್ರಸಿದ್ಧ ಮಾಸಪತ್ರಿಕೆ 'ದ ಫೆಸಿಫಿಕ್ ಸ್ಪೆಕ್ಟೇಟರ್'ದ ಸಂಪಾದಕ ಪ್ರೋ. ಆರ್. ಸಿ. ನಾರ್ಥ್ ೧೯೫೪ರಲ್ಲಿ ಭಾರತಕ್ಕೆ ಬಂದಾಗ ಬೇಂದ್ರೆಯವರನ್ನು ಭೇಟಿಯಾಗಲೆಂದೇ ಮುದ್ದಾಂ ಆಗಿ ಸೊಲ್ಲಾಪುರಕ್ಕೆ ಹೋದರು. ಬೇಂದ್ರೆಯವರನ್ನು ಭೇಟಿಯಾಗಿ ಆ ನಂತರ ತಮ್ಮ ಸ್ವದೇಶಕ್ಕೆ ಮರಳಿದ ಮೇಲೆ ಆಗಿನ ಅಮೇರಿಕದ ಅಧ್ಯಕ್ಷರಾಗಿದ್ದ ಆಯ್ ಸೆನ್ ಹಾವರ್ ಇವರ ಆಪ್ತ ಸಹಾಯಕರಾಗಿದ್ದ Mr. strassen 'As a first step we commend Mr. strassen to Prof. bendre of solapur who in his plea for uncontaminated earth and river bend and a hill for watching the stars speaks for the whole word of us' ಕನಿಷ್ಠ ಪಕ್ಷ ಮರಾಠಿ ಭಾಷಿಕರಿಗಂತೂ ಕನ್ನಡ ಭಾಷೆಯ ಶ್ರೀಮಂತಿಕೆಯ ತಿಳಿವು ಬೇಂದ್ರೆಯವರ ಮೂಲಕವೇ ಬಂದಿದೆ ಎನ್ನುವಲ್ಲಿ ಭಿನ್ನಾಭಿಪ್ರಾಯವಿರಲಾರದು.[೨೦]

ಇದಕ್ಕಿಂತ ಹೆಚ್ಚಿನ ವಿವರಣೆ ಬೇಕಿಲ್ಲ ಎನ್ನುವಷ್ಟು ಆಪ್ತವಾದ ಮಾತುಗಳನ್ನು ನೀಡಿದ್ದಾರೆ.

ಪಂಡಿತ ಅವಳೀಕರ ಅವರ 'ಚೋಖಾಮೀಳಾ, ಪುರಂದರದಾಸ ಮತ್ತು ಬೇಂದ್ರೆ' ಈ ಲೇಖನದಲ್ಲಿ ಪರಸ್ಪರ ಈ ಮೂವರ ಸಾಹಿತ್ಯ ಪ್ರೇರಣೆಯನ್ನು ಕುರಿತು ಚರ್ಚಿಸಿದ್ದಾರೆ. ಕಾಲಘಟ್ಟಗಳು ಬೇರೆಯಾದರೂ ಕನ್ನಡ, ಮರಾಠಿ ಭಾಷೆಗಳ ನಡುವಿನ ಪ್ರೇರಣೆ ಮತ್ತು ಪ್ರಭಾವ ಆಯಾ ಕಾಲಘಟ್ಟದಲ್ಲಿ ಸಾಗುತ್ತಾ ಬಂದಿದೆ. ಇಲ್ಲಿ ಇಂತಹ ಪ್ರೇರಣೆಯನ್ನು ಕೆಲವು ಕವಿತೆಗಳ ಸಾಲಿನ ಮೂಲಕ ಜೊತೆಗೆ ಅದರ ಮರಾಠಿ ರೂಪದೊಂದಿಗೆ ಅರ್ಥೈಸಿದ್ದಾರೆ.

> ಬೇಂದ್ರೆಯವರ 'ರಸಿಕಾ ಪೇಳೋ' ಈ ಗೀತೆಯ ಹಿನ್ನೆಲೆಯ ಪ್ರೇರಣೆಗಳೇನು? ಚೋಖೋಬಾನ ಅಭಂಗವೇ? ಪುರಂದರದಾಸರ ಕೀರ್ತನೆಯೇ? ಅಥವಾ ಈ

ಎರಡರಿಂದಲೂ ಅವರು ಪ್ರೇರಣೆ ಪಡೆದಿದ್ದಾರೆಯೇ? ಬೇಂದ್ರೆಯವರು 'ಉಭಯಭಾಷಾ ಕವಿ'ಗಳಾಗಿದ್ದರು. ಅವರು ಉಭಯ ಭಾಷೆಗಳ ಅಧ್ಯಾಪಕರೂ ಆಗಿದ್ದರು. ಎರಡೂ ಭಾಷೆಗಳಲ್ಲಿ ಮಾತನಾಡಬಲ್ಲವರಾಗಿದ್ದರು. ಮಾರಾಠಿ ಮತ್ತು ಕನ್ನಡ ಭಾಷೆಗಳ ಪ್ರಾಚೀನ ಸಾಹಿತ್ಯದ ಅವರ ಅಧ್ಯಯನ ಪ್ರಚಂಡವಾಗಿತ್ತು.[೨೧]

ಬೇಂದ್ರೆ ಅವರು ಸಾಹಿತ್ಯ, ಕಲೆ, ಸಂಸ್ಕೃತಿಗಳನ್ನು ಒಂದು ಗುಂಪು ಚಟುವಟಿಕೆಯಾಗಿ, ಸ್ನೇಹದ ಸಂಕೇತವಾಗಿ ರೂಪಿಸಿದ ಬಗೆ ವಿಶೇಷವಾದುದು. ಇದು ಮರಾಠಿ ಸಾಹಿತ್ಯದ ಮೇಲೂ ಪ್ರಭಾವಬೀರಿದೆ. ಅಲ್ಲಿನ ನಂಟನ್ನೂ ಬೇಂದ್ರೆ ಅವರು ಒಂದು ಬೌದ್ಧಿಕ ಚಟುವಟಿಕೆಯಾಗಿ ರೂಪಿಸಿಕೊಂಡಿದ್ದರು. ಬಾ. ಕೃ. ಗಲಗಲಿ ಅವರು 'ಸಾಹಿತ್ಯ, ಕಲೆ, ಸಂಸ್ಕೃತಿಗಳ ಅಭಿವೃದ್ಧಿಗಾಗಿ ಧಡಪಡಿಸುವ ಕವಿವರ್ಯ ಬೇಂದ್ರೆ' ಎಂಬ ಲೇಖನದಲ್ಲಿ ವಿಸ್ತಾರವಾಗಿ ಈ ಚಿಂತನೆಗಳನ್ನು ಅರ್ಥೈಸಿದ್ದಾರೆ. ಕನ್ನಡದಲ್ಲಿ ರೂಪಿತವಾದ ಗೆಳೆಯರ ಗುಂಪು ಹೊಸ ಜೀವನ ಮೌಲ್ಯಗಳ ಬೌದ್ಧಿಕ ಚಳುವಳಿಯಾಗಿ ರೂಪಿತವಾಯಿತು. ನಾಡಹಬ್ಬವನ್ನು ಸ್ವಾತಂತ್ರ್ಯಪೂರ್ವದಲ್ಲಿ ಪ್ರಾರಂಭಿಸಿ ಅಖಂಡ ಭಾಷಾ ರಾಜ್ಯಗಳನ್ನು ಸಾಂಸ್ಕೃತಿಕ ಚೈತನ್ಯದ ಮೂಲಕ ನಿರ್ಮಿಸಲು ಪ್ರಾರಂಭಿಸಿದರು. ಈ ಹೊಸ ಕ್ರಾಂತಿಗೆ ಪುಣೆಯಲ್ಲಿ ಪ್ರಾರಂಭವಾಗಿದ್ದ 'ರವಿಕಿರಣ ಮಂಡಳ'ದ ಪ್ರಭಾವವನ್ನು ಗಮನಿಸಿದ್ದಾರೆ. ಈ ಮೂಲಕ ಸಾಹಿತ್ಯದ ಅಭಿಪ್ರೇರಣೆಗಳು ಒಂದು ಸಾಂಸ್ಕೃತಿಕ ಪ್ರಭಾವವಾಗಿಯೂ ಮೂಡುತ್ತವೆ ಎಂಬುದರ ಚಿಂತನೆಯನ್ನು ಗಮನಿಸಬಹುದು.

'ಬೇಂದ್ರೆ ಮರಾಠಿ ಸಾಂಸ್ಕೃತಿಕ ಸಂಬಂಧ' ಎಂಬ ಲೇಖನದಲ್ಲಿ ಜಿ. ಎಂ. ಹೆಗಡೆ ಅವರು ತಮ್ಮ ಅಧ್ಯಯನವನ್ನು ಈ ರೀತಿ ಅರ್ಥೈಸಿದ್ದಾರೆ ಬೇಂದ್ರೆ ಅವರ ಮರಾಠಿ ಸಂಬಂಧದ ನೆಲೆಯನ್ನು ನಾಲ್ಕು ರೀತಿಯಲ್ಲಿ ಗುರ್ತಿಸಿದ್ದಾರೆ ೧. ಅವರು ಕವಿತೆಗಳ ಮೂಲಕ ತಮ್ಮ ಸೃಜನಾತ್ಮಕ ಸಂವೇದನೆಯನ್ನು ಪ್ರಕಟಿಸಿದರು ೨. ಕನ್ನಡ ಮರಾಠಿ ಸಾಹಿತ್ಯದ ತೌಲನಿಕ ಅಧ್ಯಯನಕ್ಕೆ ನೆಲೆ ಕಲ್ಪಿಸಿದರು ೩. ಕನ್ನಡ ಮರಾಠಿ ಸಾಂಸ್ಕೃತಿಕ ಬಾಂಧವ್ಯವನ್ನು ಅಭಿವೃದ್ಧಿ ಪಡಿಸಿದರು ೪. ಕನ್ನಡ ಮರಾಠಿ ಭಾಷಿಕ ಸಂಬಂಧವನ್ನು, ಸ್ನೇಹ ಪರಂಪರೆ ಅಭಿವೃದ್ಧಿ ಪಡಿಸಲು ಶ್ರಮಿಸಿದರು ಈ ಅಂಶಗಳಲ್ಲಿಯೇ ಹೆಗಡೆ ಅವರು ಒಂದು ಸಾಂಸ್ಕೃತಿಕ ಸಂಬಂಧವನ್ನು ಬೇಂದ್ರೆ ಅವರ ಯಾವ ಸೃಷ್ಟಿಸಿದರು ಎಂಬುದನ್ನು ಗಮನಿಸಿದ್ದಾರೆ. 'ಅನ್ನಯಜ್ಞ' ದಂತಹ ಬಡತನದ ಧಾರುಣ ಸ್ಥಿತಿಯ ಕವಿತೆ, 'ಪುಟ್ಟ ವಿಧವೆ'ಯಂತಹ ಕೆಟ್ಟ ಸಂಪ್ರದಾಯದ ವಿರುದ್ಧ ಧ್ವನಿಸಿದ ಕವಿತೆ ಇವು ಕನ್ನಡದಲ್ಲಿ ರಚನೆಯಾಗಿದ್ದರೂ ಸಮಾಜದ ವಾಸ್ತವವನ್ನು ಹೇಳುವ ಕವಿತೆಗಳು. ಮಹಾರಾಷ್ಟ್ರ ಹಾಗೂ ಕರ್ನಾಟಕ ಈ ಎರಡೂ ರಾಜ್ಯಗಳ ಧಾರುಣ ಸ್ಥಿತಿಯು ಹೀಗೆ ಇತ್ತು. ಮಹಾರಾಷ್ಟ್ರದಲ್ಲಿದ್ದ ವಧುವಿನ ಆಯ್ಕೆಯ ಸಂಪ್ರದಾಯಗಳು, ಬಾಲವಿಧವೆಯ ಸ್ಥಿತಿಗತಿ, ಸ್ತ್ರೀ ಮಾರಾಟ ಇವುಗಳ ಚಿತ್ರಣವನ್ನು ಬೇಂದ್ರೆ ಅವರು ಕನ್ನಡ ಕಾವ್ಯ ಹಾಗೂ ಮರಾಠಿ ಕಾವ್ಯದಲ್ಲಿಯೂ ನೀಡಿದ್ದಾರೆ ಎಂಬುದಾಗಿ ಗ್ರಹಿಸಿದ್ದಾರೆ. ಸ್ಟಾಲಿನ್ ಸಾವಿಗೂ ಗೊಮ್ಮಟನ ಮಹಾಮಸ್ತಕಾಭಿಷೇಕಕ್ಕೂ ಶಾಂತಿ ಮತ್ತು ಶಕ್ತಿಯ ಸಂಬಂಧವಾಗಿ ಬೇಂದ್ರೆ ಅವರು ಕವಿತೆ ರಚಿಸಿದ್ದಾರೆ ಎಂದು ಹೇಳುವ ಹೆಗಡೆ ಅವರ ಮಾತನ್ನು ಗಮನಿಸಿದರೆ ಅಷ್ಟು ಸಮಂಜಸ

ಎನಿಸದು. ರಷ್ಯಾದಲ್ಲಿ ಬಂಡವಾಳಶಾಹಿ ಧೋರಣೆಯನ್ನು ಅಂತ್ಯಗೊಳಿಸಿದ ಎಂಬ ಕಾರಣವು ಅವನೂ ಇತಿಹಾಸದಲ್ಲಿ ಅಜರಾಮರ ಎಂದರ್ಥವಷ್ಟೇ. ಆದರೆ ಜೈನಪರಂಪರೆಯನ್ನು ಅತ್ಯಂತ ಸೂಕ್ಷ್ಮವಾಗಿ ಗ್ರಹಿಸಿದ್ದ ಬೇಂದ್ರೆ ಅವರಿಗೆ ಶಾಂತಿ ಮತ್ತು ಶಕ್ತಿಯನ್ನು ಆಧ್ಯಾತ್ಮ ಮತ್ತು ರಾಜಕೀಯದ ನಡುವೆ ಗ್ರಹಿಸಲಾರರು ಎನಿಸುತ್ತದೆ. ಬೇಂದ್ರೆ ಅವರು ತಮ್ಮ ಸಾಹಿತ್ಯದ ಮೂಲಕ ಹಾಗು ಒಡನಾಟದ ಮೂಲಕ ಗ್ರಹಿಸಿದ ಕನ್ನಡದ ವಚನಸಾಹಿತ್ಯ, ಶೈವ ಪರಂಪರೆ ಹಾಗೂ ಮಹಾರಾಷ್ಟ್ರದ ಭಕ್ತಿ ಮಾರ್ಗ ಪರಂಪರೆಗಳ ತೌಲನಿಕ ಅಧ್ಯಯನವನ್ನು ಕುರಿತು ಜಿ. ಎಂ. ಹೆಗಡೆ ಅವರು ಅಧ್ಯಯನ ಮಾಡಿದ್ದಾರೆ.

> ಕನ್ನಡ ಮರಾಠಿ ಭಾಷೆಗಳಲ್ಲಿ ಭಾವ ಸಾಮರಸ್ಯ ಸಾಂಸ್ಕೃತಿಕ ಪರಿಮಳವನ್ನು ಬೇಂದ್ರೆ ಅವರು ಗುರುತಿಸಿದರು. ಕನ್ನಡ ಮರಾಠಿ ಸಾಹಿತ್ಯದ ತೌಲನಿಕ ಅಧ್ಯಯನದ ನೆಲೆಗಳನ್ನು ಅವರು ಪ್ರಚುರಪಡಿಸಿದರು. ಅವರು ಕನ್ನಡ ಮರಾಠಿ ಭಾಷಿಕ ಜಗಳವನ್ನು ವಿರೋಧಿಸಿದರು. ಧಾರ್ಮಿಕ ಸಂಬಂಧದ ಮೂಲಕ ಹೃದಯ ಸಂಬಂಧ ಉಂಟಾಗುವಂತೆ ಕರೆ ನೀಡಿದರು. ಬೇಂದ್ರೆಯವರು ಸೀಮಾರೇಖೆಯಲ್ಲಿರುವವರು ದ್ವಿಭಾಷಿಕತೆಯನ್ನು ಮುಂದುವರೆಸಿಕೊಂಡು ಏಕತೆ, ಸಾಮರಸ್ಯತೆಯ ಮೂಲಕ ಪರಸ್ಪರ ಕೊಡು ಕೊಳ್ಳುವಿಕೆಯಿಂದ ಸಾಮಾಜಿಕ, ಸಾಂಸ್ಕೃತಿಕ ಪ್ರಬುದ್ಧತೆ ಸಾಧಿಸಲು ಒತ್ತು ನೀಡಿದರು. ಬೇಂದ್ರೆಯವರು ಏಕಾಭಾಷಾ ಪ್ರಭುತ್ವವನ್ನು ವಿರೋಧಿಸಿದರು. ಅವರೇ ಹೇಳಿದಂತೆ 'ವಿಶ್ವದೊಳ ನುಡಿಯಾಗಿ ಕನ್ನಡಿಸುತಿಹನಿಲ್ಲಿ ಅಂಬಿಕಾತನಯದತ್ತನಿವನು' ಎಂಬ ಆದರ್ಶ ಅವರ ಸಾಹಿತ್ಯದಲ್ಲಿ ಅಂತಸ್ಥವಾಗಿದೆ.[೨೨]

೫. ೩. ಬೇಂದ್ರೆ ಅವರ ಕಾವ್ಯ ಮತ್ತು ವ್ಯಕ್ತಿತ್ವ ಕುರಿತ ಪುನರ್ ಅಧ್ಯಯನಗಳು

ಬೇಂದ್ರೆ ಅವರ ಕಾವ್ಯ ಮತ್ತು ವ್ಯಕ್ತಿತ್ವವನ್ನು ಕುರಿತು ವಿ. ಕೃ. ಗೋಕಾಕ್ ಅವರ ಮೂರು ಲೇಖನಗಳನ್ನು ಗಮನಿಸಬಹುದು. ೧೯೮೩ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಮಂಡಿಸಿದ ಭಾಷಣವೇ 'ಬೇಂದ್ರೆಯವರ ಕಾವ್ಯಗುಣ ಹಾಗೂ ಪ್ರಯೋಗಶೀಲತೆ'. ಈ ಭಾಷಣದಲ್ಲಿ ಬೇಂದ್ರೆ ಅವರೊಂದಿಗೆ ತಮ್ಮ ಒಡನಾಟವನ್ನು ತಿಳಿಸುತ್ತಾರೆ. ಗೆಳೆಯರ ಗುಂಪಿನ ಸಂದರ್ಭದಲ್ಲಿ ಬೇಂದ್ರೆ–ಗೋಕಾಕ್ ಎಂಬ ಬಾಂಧವ್ಯದ ಸಾಹಿತ್ಯ ಅಭಿಪ್ರೇರಣೆಗಳನ್ನು ತಿಳಿಸಿದ್ದಾರೆ. ಗೆಳೆಯರ ಗುಂಪಿನ ಕಾರ್ಯಗಳಲ್ಲಿ 'ಜಯ ಕರ್ನಾಟಕ' ಪತ್ರಿಕೆಯ ಹೊಣೆಗಾರಿಕೆ, ನಿರ್ವಹಣೆ ಸಾಧಕ ಬಾಧಕಗಳನ್ನು ತಿಳಿಸಿದ್ದಾರೆ. ವಿ. ಕೃ. ಗೋಕಾಕ್ ಅವರ ಚಿಂತನೆಯ ಪ್ರಕಾರ ಗುಂಪಿನ ಸಮನ್ವಯತೆಯನ್ನು ಸಾಧಿಸುತ್ತಿದ್ದ ಬೇಂದ್ರೆಗೆ ಈ ಗೆಳೆಯರ ಗುಂಪಿನ ಒಡಕುಗಳ ನಿವಾರಣೆ ಕಷ್ಟವಾಗಲು ಸೂಕ್ತ ಕಾರಣ ನೀಡುತ್ತಾರೆ. ಬೇಂದ್ರೆ ಅವರಿಗೆ ವ್ಯವಹಾರ ಜ್ಞಾನದಲ್ಲಿ ಆಸಕ್ತಿ ಇಲ್ಲದಿರುವುದು, ೧೯೩೨ರ ವೇಳಗೆ 'ನರಬಲಿ' ಕವಿತೆಯನ್ನು ರಚನೆ ಮಾಡಿದ ಕಾರಣದಿಂದ ಬ್ರಿಟಿಷರು ಬೇಂದ್ರೆ ಅವರಿಗೆ 'ಜೈಲು ಶಿಕ್ಷೆ' ನೀಡಿದ ಕಾರಣ ಗೆಳೆಯರ ಗುಂಪಿನ ನಡುವೆ ಸಮನ್ವಯತೆ ಕಾಪಾಡಲು ಕಷ್ಟವಾಯಿತು. ಪ್ರತಿಯೊಬ್ಬರೂ ಪರಸ್ಪರ ವ್ಯವಹಾರದ ಮುನಿಸಿನಿಂದ ಪ್ರತ್ಯೇಕವಾದರು. ಈ ಎಲ್ಲಾ ಸೂಕ್ತ ಕಾರಣಗಳ ಮೂಲಕ ಬೇಂದ್ರೆ ಅವರ ಕವಿತೆಗಳ ಸ್ಪಷ್ಟತೆ ನೀಡುತ್ತಾರೆ. ಗೆಳೆಯರ

ಗುಂಪು ನಿಂತು ಹೋದರೂ ಪ್ರತಿಯೊಬ್ಬರ ಮೇಲೂ ಬೇಂದ್ರೆ ಅವರಿಗೆ ಸಾಹಿತ್ಯದ ಅಕ್ಕರೆ ಕಡಿಮೆಯಾಗಲಿಲ್ಲ. ಪರಸ್ಪರ ಗೌರವ, ಅಭಿಮಾನ ಮುಂದುವರೆದವು. ಈ ಗುಂಪಿನ ಹಲವು ಲೇಖಕರು ಕನ್ನಡ ಸಾಹಿತ್ಯ ಸೇವೆಯಲ್ಲಿ ತನ್ನದೇ ಆದ ವಿಶೇಷವಾದ ಹೆಸರುಗಳನ್ನು ಗಳಿಸಿದರು. ಈ ನಿಟ್ಟಿನಲ್ಲಿ ಬೇಂದ್ರೆ–ಗೋಕಾಕರ ಸಂಬಂಧದ ವಿವರಗಳು ಇಲ್ಲಿ ಕಾಣಸಿಗುತ್ತವೆ. ಒಂದು ಕಾವ್ಯ ಹಾಗೂ ಇತರ ಯಾವುದೇ ಬರಹವನ್ನು ಅಧ್ಯಯನ ಮಾಡುತ್ತಾ ವಿಮರ್ಶಾ ಕಣ್ಣಿನಿಂದ ಪರಿಶೀಲಿಸುವ ಬಗೆಯನ್ನು ಗೋಕಾಕರು ಈ ರೀತಿ ಅಭಿಪ್ರಾಯಪಡುತ್ತಾರೆ.

> ವಿಮರ್ಶೆಯು ಬಲು ತೊಡಕಿನ ಕೆಲಸ. ಅದರಿಂದ ಒಟ್ಟಿಗೆ ಕಾವ್ಯಕ್ಕೆ ಸಹಾಯವಾಗದಿದ್ದರೂ ಅನ್ಯಾಯವಾಗಿರಬಾರದು. ಒಂದು ದೋಷವನ್ನು ಎತ್ತಿ ತೋರಿಸಬೇಕಾದಾಗ ಎಲ್ಲ ದೃಷ್ಟಿಕೋನಗಳಿಂದಲೂ ಅದು ದೋಷವೇನೆಂಬುದನ್ನು ನಾವು ಪರೀಕ್ಷಿಸಬೇಕು. ತತ್ವಮೋಹ, ಶೈಲಿಮೋಹ, ಪ್ರತಿಮಾ ಮೋಹ, ಛಂದೋ ಮೋಹ–ಹೀಗೆ ಹಲವಾರು ಮೋಹಗಳು, ವಿಮರ್ಶಕನನ್ನು ಮುತ್ತಿಕೊಂಡು ಬರುತ್ತವೆ. ಒಮ್ಮೊಮ್ಮೆ, ಎತ್ತಿಕೊಂಡ ಕವಿಯ ಬಗ್ಗೆ ಒಂದು ಪೂರ್ವಾಗ್ರಹವು ಇಲ್ಲವೆ ಪೂರ್ವಾಭಿಪ್ರಾಯವು ವಿಮರ್ಶಕನಲ್ಲಿ ಇದ್ದಿರಬಹುದು. ಇವುಗಳನ್ನೆಲ್ಲಾ ಬದಿಗೆ ಸರಿಸಿಟ್ಟು ಶುದ್ಧ ಮುಕ್ತ ಮನಸ್ಸುಳ್ಳವನಾಗಿ ವಿಮರ್ಶಕನು ಕಾವ್ಯವನ್ನು ಅವಲೋಕಿಸ ಬೇಕಾಗುತ್ತದೆ, ಆಗ ವಿಮರ್ಶೆಗೆ ಒಂದು ಹೆಚ್ಚಿನ ಬೆಲೆ ಬರುವುದುಂಟು.೨೩
> [ಬೇಂದ್ರೆಯವರ ಕಾವ್ಯಗುಣ ಹಾಗೂ ಪ್ರಯೋಗಶೀಲತೆ(೧೯೮೩)]

ಈ ಅಂಶಗಳು ಸಮಕಾಲೀನ ವಿಮರ್ಶೆಗಳನ್ನು, ವಿಮರ್ಶೆಗಳ ಹೊಣೆಗಾರಿಕೆಯನ್ನು ಹಾಗೂ ಅಧ್ಯಯನದ ದೃಷ್ಟಿಕೋನಗಳನ್ನು ತಿಳಿಸುತ್ತದೆ.

ಬುದ್ದಣ್ಣ ಹಿಂಗಮಿರೆ ಅವರ ಸಂಪಾದನೆಯಲ್ಲಿ 'ಇಳಿದು ಬಾ ತಾಯಿ' ಎಂಬ ಲೇಖನಗಳ ಸಂಗ್ರಹವು ಕನ್ನಡ ಸಾಹಿತ್ಯದಲ್ಲಿ ಹಲವು ಗಂಭೀರ ಓದುಗರು ತಮ್ಮ ಸಮಕಾಲೀನವಾಗಿ ಬೇಂದ್ರೆ ಅವರ ವ್ಯಕ್ತಿತ್ವ ಹಾಗೂ ಸಾಹಿತ್ಯವನ್ನು ಗ್ರಹಿಸಿದ ಬಗೆಯನ್ನು ಸಂಗ್ರಹಿಸಲಾಗಿದೆ. ಇದರಲ್ಲಿ ಗೋಕಾಕರ 'ಬೇಂದ್ರೆಯವರ ಕಾವ್ಯ ಹಾಗೂ ವ್ಯಕ್ತಿತ್ವದ ಕೆಲವು ಮುಖಗಳು' ಎಂಬ ಲೇಖನವಿದೆ. ಬೇಂದ್ರೆ ಅವರ ಕವಿತೆಗಳ ಮೂಲಕ ಅವರ ವ್ಯಕ್ತಿತ್ವದ ಪ್ರವೇಶವನ್ನು ಮಾಡುತ್ತಾರೆ. ಅದೊಂದು ಕಾವ್ಯದ ಅನುಸಂಧಾನ, ಕಾವ್ಯಾಧ್ಯಯುನದ ಮೂಲಕ ಆತ್ಮಚರಿತ್ರೆಯ ನೋಟವೆನ್ನಬಹುದು. ಇದೊಂದು ಬೇಂದ್ರೆ ಸಾಹಿತ್ಯದ ಅಧ್ಯಯನದ ತೊಡಕು ಕೂಡ. ಪ್ರಸ್ತುತ ಕೂಡ ಬೇಂದ್ರೆ ಅವರ ಕೆಲವು ಗಂಭೀರ ಕವಿತೆಗಳ ಅರ್ಥಗ್ರಹಿಕೆಯಲ್ಲಿ ದರ್ಶನವೇ ತಪ್ಪಿಹೋಗಿದೆ. 'ಅಭಿಮಾನದಲ್ಲಿ ಅಪಮಾನವಿಲ್ಲ' ಎಂಬಂತೆ ಬೇಂದ್ರೆ ಅವರ ಕಾವ್ಯದ ನಿಜವಾದ ವಿಮರ್ಶೆಯ ಖಚಿತತೆ ಇಲ್ಲವಾಗಿದೆ. ವಿಸ್ತಾರವಾದ, ಆಳವಾದ ಅಧ್ಯಯನಕ್ಕೂ ತೊಡಕಾಗಿದೆ. ಈ ಅಂಶಗಳನ್ನು ೧೯೬೩ರ ವೇಳೆಗೆ ಶಂಕರ ಮೊಕಾಶಿ ಪುಣೇಕರರು ಗುರ್ತಿಸಿದ್ದರು.

> ಆಧ್ಯಾತ್ಮಿಕತೆ ಹಾಗೂ ಅಪ್ಪಟ ಭಾವುಕತೆ, ಬೇಂದ್ರೆ ಅವರ ಕಾವ್ಯದ ಎರಡೂ ಮುಖ್ಯ ಎಳೆಗಳಾದರೆ, ವಿಡಂಬನೆಯೂ ಅಷ್ಟೇ ಮುಖ್ಯವಾದ ಎಳೆ. ಈ ಎಲ್ಲ ವಿಧದ ಎಳೆಗಳೂ–ಉದ್ದೇಶಗಳೂ, ಬೇಂದ್ರೆಯವರ ಬಹುಮುಖ ವ್ಯಕ್ತಿತ್ವದಲ್ಲಿ ಹೊಂದಾಣಿಕೆಯೊಡನೆ ಅಡಕವಾಗಿವೆ.

ವ್ಹಿಟ್‌ಮನ್ ಕವಿಯ ಹಾಗೆ, ಬೇಂದ್ರೆಯವರು ವಿಕ್ಷಿಪ್ತತೆಯನ್ನು ಮೀರಿ ವಿವಿಧತೆಯನ್ನು ತಮ್ಮಲ್ಲಿ ಒಳಗೊಳ್ಳುತ್ತಾರೆ. ಅವರ ಕಾವ್ಯಪ್ರಜ್ಞೆ ಹಾಗೂ ಅದರಿಂದ ಮೂಡಿಬರುವ ದರ್ಶನ, ಅವರ ವಿವಿಧ ಅನುಭವದ ಕ್ಷೇತ್ರಗಳನ್ನು ಸುಲಭವಾಗಿ, ನಿರಾಯಾಸವಾಗಿ ಒಂದು ಗೂಡಿಸುತ್ತವೆ.೨೪

ಹೀಗೆ ಕಾವ್ಯದ ದರ್ಶನದಲ್ಲಿ ವ್ಯಕ್ತಿತ್ವ ರೂಪುಗೊಳ್ಳುವ ಬಗೆಯನ್ನು ಚಿಂತಿಸಿದ್ದಾರೆ. ಪಾಶ್ಚಾತ್ಯ ಸಾಹಿತ್ಯವನ್ನು ಅಧ್ಯಯನ ಮಾಡಿದ್ದ ಗೋಕಾಕರು ಬೇಂದ್ರೆಕಾವ್ಯವು ಪಾಶ್ಚಾತ್ಯ ಕವಿಗಳ ಕಾವ್ಯ ಪರಂಪರೆಗಳಿಗೆ ಹೊಂದಾಣಿಕೆಯಾಗುವ ಸಾಂಕೇತಿಕ ರೂಪಗಳನ್ನು ಗ್ರಹಿಸಿದ್ದಾರೆ. ಈ ವಿಚಾರವನ್ನು ಕವಿದೃಷ್ಟಿಯು ಋಷಿದೃಷ್ಟಿಯಾಗಿ ಅಭಿವ್ಯಕ್ತಗೊಳ್ಳುವ ಮಾದರಿಯನ್ನು ಕೃಷ್ಣಕುಮಾರಿ ಸಂಕಲನದಿಂದ, ನಾಟಕಗಳು, ಗದ್ಯ ಸಾಹಿತ್ಯ ಮೊದಲಾಗಿ 'ನಮನ'ದವರೆಗೂ ಒಂದು ಸಮಗ್ರದೃಷ್ಟಿಯನ್ನು ಅರ್ಥೈಸಿದ್ದಾರೆ.

ಬೇಂದ್ರೆ ಅವರ ಕವನಸಂಕಲನಗಳಿಗೆ ಅವರೇ ಮುನ್ನುಡಿ, ಪ್ರವೇಶಿಕೆಯ ಪ್ರಸ್ತಾವನೆಗಳನ್ನು ಬರೆದಿದ್ದಾರೆ ಆದರೆ 'ನಾದಲೀಲೆ', 'ಅರಳು ಮರಳು' ಈ ಎರಡು ಸಂಕಲನಗಳಿಗೆ ಮಾಸ್ತಿ ಹಾಗೂ ಗೋಕಾಕರ ಮುನ್ನುಡಿಗಳನ್ನು ಗಮನಿಸಬಹುದು. ಈ ಎರಡೂ ಬರಹಗಳು ಕನ್ನಡ ಸಾಹಿತ್ಯದಲ್ಲಿ ವಿಭಿನ್ನ ಬರಹಗಳು. ಇನ್ನು ಆಮೂರ ಜಿ.ಎಸ್., ಕುಲಕರ್ಣಿ ಆರ್. ಜಿ., ಪು.ತಿ.ನ., ನಾರಾಯಣಚಾರ್ಯ ಕೆ. ಎಸ್., ಪಂಡರಿನಾಥಾಚಾರ್ಯ ಗಲಗಲಿ., ದೇಸಾಯಿ ದತ್ತಮೂರ್ತಿ., ಶರ್ಮಾ ಕೆ.ಎಸ್., ಕುಲಕರ್ಣಿ ಎಸ್. ಎಸ್., ರಾಜಪುರೋಹಿತ ಬಿ.ಬಿ., ರಾಘವೇಂದ್ರರಾವ್ ಕೆ. ಮೊದಲಾದವರು ಅಧ್ಯಯನಗಳು ಬೇಂದ್ರೆಯವರ ಕೃತಿಗಳ ಮರು ಮುದ್ರಣಗಳಿಗೆ ಮುನ್ನುಡಿ, ಹಿನ್ನುಡಿ ಹಾಗೂ ಅಧ್ಯಯನ ಬರಹಗಳು ಪೀಠಿಕೆಗಳಾಗಿ ಸೇರ್ಪಡೆಗೊಂಡಿವೆ.

ಮುನ್ನುಡಿಗಳ ವಿಚಾರವನ್ನು ಈಗಾಗಲೇ ಚರ್ಚಿಸಿರುವ ಕಾರಣ ಇದೊಂದು ಪುನರ್ ಅವಲೋಕನದ ಕೆಲಸವೆಂದೇ ಮತ್ತೆ ಭಾವಿಸಬಹುದು. ಗೋಕಾಕರು ಬೇಂದ್ರೆ ಸಾಹಿತ್ಯ ಕುರಿತು ಮೂವತ್ತು ವರ್ಷಗಳ ದೀರ್ಘ ಅಧ್ಯಯನವನ್ನು ಸಂಕ್ಷಿಪ್ತವಾಗಿ ತಿಳಿಸಿದ್ದಾರೆ. ಪರಂಪರೆಯ ಮುಂದುವರಿಕೆಯ ಭಾಗವಾಗಿ ಗಮನಿಸುವ ಈ ಕೃತಿಯಲ್ಲಿ ಕವಿಯು ತನ್ನ ನಿರ್ಮಿತಿಯನ್ನು ತನ್ನದೇ ಹಾದಿಯಲ್ಲಿ ಮುಂದುವರೆಸುವ ಬಗೆಯನ್ನು ಸ್ಪಷ್ಟಪಡಿಸುತ್ತಾರೆ. ಕಾವ್ಯಶೈಲಿ, ಪ್ರತಿಭಾಶಕ್ತಿ, ವಿನೋದ ವಿಡಂಬನೆಗಳ ಮೂಲಕ ಸಾಮಾಜಿಕ ಸೂಕ್ಷ್ಮಗಳನ್ನು ಕಾವ್ಯದಲ್ಲಿ ಹಿಡಿದಿಡಲು ತನ್ನದೇ ಆದ ಮಾರ್ಗವನ್ನು ರೂಪಿಸಿಕೊಳ್ಳುವ ಬಗೆಯನ್ನು ಚರ್ಚಿಸಿದ್ದಾರೆ.

ಬೇಂದ್ರೆಯವರ ಶಬ್ದ ಸೃಷ್ಟಿಯಲ್ಲಿ ಕೆಲವೊಂದು ಚಮತ್ಕಾರಗಳು ಜರುಗುತ್ತವೆ. ಅವುಗಳನ್ನೆಲ್ಲ ಇಲ್ಲಿ ಕ್ರೋಡೀಕರಿಸುವದಾಗದಿದ್ದರೂ ದಿಗ್ದರ್ಶನ ಸಾಧ್ಯ. ಶ್ಲೇಷವಿಲ್ಲದ ಭಾಷೆಯೇ ಅವರಿಗಿಲ್ಲ. 'ಸಾವಿರದ ಮನೆ' ಎಂದಾಗ ಸಾವಿರವೆಂಬ ಸಂಖ್ಯಾವಾಚಕದೊಡನೆ ಸಾವು ಇರದ ಎಂಬ ಸಂಧಿಯು ನಮ್ಮನ್ನು ಸಂಧಿಸುತ್ತದೆ. ಪ್ರಾಸದ ಪ್ರೀತಿ ಶ್ಲೇಷದೊಡನೆ ಸೇರಿಕೊಂಡು ಪದ ಗುಂಪುಗಳನ್ನು ಕಟ್ಟುತ್ತದೆ. ಎಲ್ಲೆಲ್ಲಿಯ ಕಥೆಗಳೋ ಸಂಬಂಧಗಳು ಬಂದು ಬೇಂದ್ರೆಯವರನ್ನು ಆಕರ್ಷಿಸುವ ವಿಷಯವಿಲ್ಲ–ಶಬ್ದಗಳ ಆವರಣಗಳಾಗುತ್ತವೆ.೨೫

ಹೀಗೆ ಬೇಂದ್ರೆ ಅವರಿಗೆ ಹೊಳೆಯುವ ಅರ್ಥ ನಮಗೆ ಏಕೆ ಹೊಳೆಯದು ಎಂಬ ಪ್ರಶ್ನೆಗೆ ಇವರಲ್ಲೇ ಉತ್ತರವಿದೆ. ಅನುಭವ ಬೇಂದ್ರೆಯದೇ ಹೊರೆತು ನಮ್ಮದಲ್ಲ. ನಮ್ಮದು ಕಾವ್ಯಾನುಭವ ಮಾತ್ರ. ಹೀಗಿರುವಾಗ ಒಬ್ಬ ಕಾಲಪ್ರಜ್ಞೆಯನ್ನು ಮೀರಿ ಸಾಹಿತ್ಯದೊಂದಿಗೆ ಸ್ಪಂದಿಸುವ ಕವಿ ಮಹಾಕವಿಯಾಗುತ್ತಾನೆ ಎಂಬ ಅರ್ಥವನ್ನು ಧ್ವನಿಸಿದ್ದಾರೆ.

'ಹೊಸ ಜಗವನು, ಹೊಸ ಯುಗವನು,
ಹೊಸ ನಲುಮೆಯ, ಹೊಸ ನೇಹವ,
ಹೊಸತು ವ್ಯಷ್ಟಿ-ಸಮಷ್ಟಿಗಳ ನಿನ್ನ ಕಬ್ಬವು
ಚಿತ್ರಿಸಿತ್ತು, ಮೂಡಿಸಿತ್ತು,
ಆಡಿಸಿತ್ತು, ಕೂಡಿಸಿತ್ತು,

ನಾಡಿಗಹುದು ನಿನ್ನ ಕಾವ್ಯ ಹಿರಿಯ ಹಬ್ಬವು'(ಕಾವ್ಯ ಗುರು; ಬಾಳದೇಗುಲದಲ್ಲಿ)

ಬನ್ನಂಜೆ ಗೋವಿಂದಾಚಾರ್ಯ ಅವರ 'ಒಲವೇ ನಮ್ಮ ಬದುಕು', 'ಸಾಕು ಭ್ರಾಂತಿಯ ಕಾವ್ಯ-ಬರಲಿ ಸಂಕ್ರಾಂತಿ', 'ಪ್ರಯೋಗಶೀಲ ಕವಿ ಬೇಂದ್ರೆ' ಈ ಮೂರು ಲೇಖನಗಳು 'ಪ್ರಯೋಗಶೀಲ ಕವಿ ಬೇಂದ್ರೆ' ಎಂಬ ಕೃತಿಯಲ್ಲಿ ಸಂಗ್ರಹವಾಗಿವೆ. ಬೇಂದ್ರೆ ಅವರ ಒಲವಿನ ಕವಿತೆಗಳನ್ನು ಸಂಗ್ರಹಿಸಿ 'ಒಲವೇ ನಮ್ಮ ಬದುಕು' ಎಂಬ ಸಂಕಲನ ಪ್ರಕಟಗೊಂಡಿದೆ. ಇದಕ್ಕೆ ಬನ್ನಂಜೆ ಅವರು ಪೀಠಿಕೆ ರಚಿಸಿದ್ದಾರೆ.

ಒಲವಿನ ಪೀಠಿಕೆಯನ್ನು ಬೇಂದ್ರೆ ಅವರ ಕಾವ್ಯದಿಂದಲೇ ಗುರ್ತಿಸುತ್ತಾರೆ. ಬೇಂದ್ರೆ ಅವರು ಅರ್ಥೈಸಿರುವ ರಸಗಳ ವಿಚಾರದಲ್ಲಿ ಮುಂದುವರೆದು ಸ್ನೇಹ, ಭಕ್ತಿ, ವಾತ್ಸಲ್ಯವೆಂಬ ರಸಗಳ ಚಿಂತನೆ ವಿಶೇಷವಾದುದು. ಇದೇ ವಿಷಯಗಳನ್ನು ಒಲವಿನ ಗ್ರಹಿಕೆಗೆ ಬನ್ನಂಜೆ ಅವರು ಬಳಸಿದ್ದಾರೆ. ಇದನ್ನು ಬೇಂದ್ರೆ ಅವರ ಕಾವ್ಯದ ಧಾತುವಾಗಿ ಗಮನಿಸಿದ್ದಾರೆ.

> ಒಲವೆ ನಮ್ಮ ಬದುಕು ಎಂಬ ಅಂಬಿಕಾತನಯದತ್ತರ ಕಾವ್ಯಸೂತ್ರ ಈ ಎಲ್ಲ ಭಾವಗಳನ್ನು ಸಮಷ್ಟಿಯಾಗಿ ನಮ್ಮ ಮುಂದಿರಿಸುತ್ತದೆ. ಈ ದೃಷ್ಟಿಯಿಂದ ಸಂಕಲನವನ್ನು ಕಂಡಾಗ ಇಲ್ಲಿಯ ಆಯ್ಕೆಯ ಔಚಿತ್ಯ ಸ್ಫುಟವಾಗುತ್ತದೆ. ಅಂಬಿಕಾತನಯದತ್ತರ ಮಿಸ್ಟಿಕ್ ಕವನಗಳು ಶ್ರೇಷ್ಠ ಪ್ರಣಯ ಕಾವ್ಯ. ಹೀಗೆ ನೋಡಿದರೆ ಪ್ರಣಯ ಕಾವ್ಯ – ಪ್ರಣಯೇತರ ಕಾವ್ಯ ಎಂಬ ವಿಭಾಗವೆ ಅರ್ಥಶೂನ್ಯವಾಗುತ್ತದೆ. ಏಕೆಂದರೆ ಈ ಪ್ರಣಯ ಕಾವ್ಯ ವಿಭಾಗದಲ್ಲಿ ಹೊರತುಪಡಿಸಬೇಕಾದ ಕವಿತೆಯೆ ಉಳಿದಿರುವುದಿಲ್ಲ. ಅದಕ್ಕಾಗಿ ಈ ಪ್ರೀತಿಯ ಹರವು ಎತ್ತರಗಳಿಗೆ ಒಂದು ಸೀಮಾರೇಖೆ ಎಳೆದು ಆ ಲಕ್ಷ್ಮಣರೇಖೆಯ ಒಳಗೆಯೆ ನಮ್ಮನ್ನು ಬಂಧಿಸಿಕೊಂಡು ನಾವು ಕವಿತೆಗಳನ್ನು ಆಯುವ ಕೆಲಸ ಮಾಡಬೇಕಾಯಿತು.[೨೬]

ಎಂಬ ಕಾರ್ಯಕಾರಣವನ್ನು ನೀಡಿ ಕವಿ ಜವಾಬ್ದಾರಿಗಿಂತ ಸಹೃದಯನ ಜವಾಬ್ದಾರಿಯ ಕಡೆಗೆ ಹೆಚ್ಚು ಅರ್ಥ ಗ್ರಹಿಕೆಯನ್ನು ಅನ್ವಯಿಸಿದ್ದಾರೆ. ಸಹೃದಯನಿಗೆ ಕಾವ್ಯವನ್ನು ಪಡೆಯುವ

ಪ್ರಜ್ಞೆ ಮತ್ತು ಪ್ರತಿಜ್ಞೆ ಇರಬೇಕೆಂಬ ಅಂಶಗಳನ್ನು ಸೂಚಿಸಿದ್ದಾರೆ. 'ಪ್ರಯೋಗಶೀಲ ಕವಿ ಬೇಂದ್ರೆ' ಎಂಬ ಭಾಷಣದಲ್ಲಿ ಬನ್ನಂಜೆ ಅವರು ಹೀಗಾಗಲೇ ಮಂಡಿಸಿರುವ ವಿಚಾರಗಳನ್ನೇ ಇಲ್ಲಿ ಪುನರ್ ಅವಲೋಕಿಸಿದ್ದಾರೆ ಎನ್ನಬಹುದು. 'ಜೋಗಿ' ಕವನ ಕುರಿತ ವಿಚಾರ, 'ನಾಕುತಂತಿ' ಕವನ ಕುರಿತ ಇವರ ವಿಚಾರಗಳನ್ನು ಪ್ರತ್ಯೇಕ ಅಧ್ಯಯನದಲ್ಲಿ ಗಮನಿಸುತ್ತೇನೆ.

ಬೇಂದ್ರೆ ಅವರ ಕಾವ್ಯದಲ್ಲಿ ಹಾಸ್ಯದ ವ್ಯಕ್ತಿತ್ವವನ್ನು ಅಧ್ಯಯನ ಮಾಡಿರುವ ಲೇಖನ ರಾಮಚಂದ್ರ ಎಂ. ಅವರ 'ಬೇಂದ್ರೆ ಕಾವ್ಯದಲ್ಲಿ ಹಾಸ್ಯ'. ಬೇಂದ್ರೆ ಅವರ ತಮ್ಮ ಕಾವ್ಯಗಳಿಗೆ ಮೊದಲಿನ ವಿಮರ್ಶಕರೆಂದರೆ ಅವರೇ ಆಗಿದ್ದರು. ಕಾವ್ಯದ ಸತ್ವವನ್ನು ಹೇಳುವ ಜೊತೆಗೆ ಅದರ ವ್ಯಂಗ್ಯವನ್ನು ಗ್ರಹಿಸುತ್ತಿದ್ದರು. ಒಂದು ಕಾವ್ಯಕ್ಕೆ ಇರಬಹುದಾದ ಅಧ್ಯಯನದ ವಿವಿಧ ಮುಖಗಳನ್ನು ಕೃತಿಯ ಮುನ್ನುಡಿ, ಪ್ರಾಸ್ತವಿಕ ನುಡಿ, ಕವಿತೆಯನ್ನು ಓದುವ ಶೈಲಿ ಈ ಹಲವಾರು ಮಾರ್ಗಗಳಲ್ಲಿ ಬೇಂದ್ರೆ ಅವರು ಕಾವ್ಯದ ಅಧ್ಯಯನ ಮಾರ್ಗವನ್ನು ನಿರೂಪಿಸಿದ್ದಾರೆ. ರಾಮಚಂದ್ರ ಅವರು ತಿಳಿಸುವಂತೆ 'ಹಕ್ಕಿ ಹಾರುತಿದೆ ನೋಡಿದಿರಾ!' ಎಂಬ ಕವಿತೆಗೆ ಬೇಂದ್ರೆ ಅವರೇ ಬರೆದ 'ಬೆಕ್ಕು ಹಾರುತಿದೆ ನೋಡಿದಿರಾ!' ಎಂಬ ಕವಿತೆ. ಈ ಅಣಕವಾಡಿನ ರಚನೆಯಲ್ಲಿ ಕಾವ್ಯದೊಳಗೆ ಇರುವ ವಿನೋದದ ಸಾಧ್ಯತೆಗಳನ್ನು ಗ್ರಹಿಸಿದ್ದಾರೆ. 'ನಿರಾಭರಣ ಸುಂದರಿ' ಸಂಕಲನದ 'ಒರದಾ ತಗಣಿ ಒರದಾ! ಕವಿತೆಯು ಗೋಪಾಲ ದಾಸರ 'ವರದಾ! ಕಂಚೀ ವರದಾ' ಎಂಬ ಸ್ತೋತ್ರದೊಂದಿಗೆ ಅಣಕವಾಗಿ ಮೂಡಿರುವ ಬಗೆಯನ್ನು ಗ್ರಹಿಸಿದ್ದಾರೆ. 'ನಾದಲೀಲೆ'ಯ 'ಅವರ್ಣನೀಯ ಅರ್ವಾಚೀನ ಸೌಂದರ್ಯ', 'ಯಾರಿಗೆ ಬೇಕಾಗೈತಿ ನಿಮ್ಮ ಕವಿತಾ' ಉತ್ತರಾಯಣದ 'ಪಂಟು' ಕವಿತೆ ಹಾಗೂ ಬೇಂದ್ರೆ ಅವರ ನಾಟಕಗಳಲ್ಲಿ ಕಂಡು ಬರುವ ಹಾಸ್ಯದ ಚಿಂತನೆಯನ್ನು ಗ್ರಹಿಸಿದ್ದಾರೆ. ಇಲ್ಲಿ ಬೇಂದ್ರೆ ಅವರ ವ್ಯಕ್ತಿತ್ವದಲ್ಲಿ ಹಾಸ್ಯದ ಅಭಿವ್ಯಕ್ತಿಯೂ ಅಡಗಿತ್ತೆಂಬುದಕ್ಕೆ ಈ ಲೇಖನ ಸೂಕ್ತವಾಗಿ ಬಿಂಬಿಸಿದೆ ಎನ್ನಬಹುದು.

'ಕನ್ನಡದ ಜ್ಞಾನ ಕಲಶಗಳು' ಎಂಬ ಕೃತಿಯಲ್ಲಿ ಭಗವಾನ್ ಕೆ. ಎನ್. ಅವರು 'ವರಕವಿ'– ಬೇಂದ್ರೆ ಎಂಬ ಲೇಖನ ರಚಿಸಿದ್ದಾರೆ. ಇದು ಕಲ್ಪನೆಯಿಂದ ಮೂಡಿದ ಬೇಂದ್ರೆ ಅವರ ವ್ಯಕ್ತಿತ್ವ ದರ್ಶನದ ರೂಪಕ. ರೇಡಿಯೋ ರೂಪಕದಲ್ಲಿ ಮೂರು ಧ್ವನಿಗಳು ಪರಸ್ಪರ ಮಾತನಾಡಿದಂತೆ ಇಲ್ಲಿ ಪರಿಚಯಿಸಿದ್ದಾರೆ. ಬೇಂದ್ರೆ ಅವರೇ ತಮ್ಮ ಕಾವ್ಯವನ್ನು ಕುರಿತಂತೆ ಯಾವ ರೀತಿ ಪರಿಚಯಿಸಬಲ್ಲರು ಎಂಬುದನ್ನು ಕಲ್ಪಿಸಲಾಗಿದೆ. ಕಾವ್ಯ ಪರಿಚಯದ ಜೊತೆಗೆ ವ್ಯಕ್ತಿತ್ವವನ್ನು ಗ್ರಹಿಸುವ ಸೂಕ್ಷ್ಮ ಬರಹವಾಗಿ ಕಾಣಬಹುದು.

೫.೪. ವಸಾಹತುಶಾಹಿ ಸಂಸ್ಕೃತಿಗೆ ಆಧುನಿಕ ಕನ್ನಡ ಕಾವ್ಯ ತೋರಿದ ಪ್ರತಿಕ್ರಿಯೆಗಳ ಚಿಂತನೆ

ಇಪ್ಪತ್ತೊಂದನೇ ಶತಮಾನದ ಹೊಸ ಆಲೋಚನೆಗಳಿಗೆ ಒಂದು ಸುದೀರ್ಘವಾದ ಹಿನ್ನೋಟದ ಅಧ್ಯಯನಗಳು ಮುಖ್ಯವೆನಿಸುತ್ತದೆ. ಇಪ್ಪತ್ತನೆಯ ಶತಮಾನವು ಅಧ್ಯಯನದ ಕ್ರಾಂತಿಯಂತೆ ಕಂಡುಬರುತ್ತದೆ. ಈ ಕ್ರಾಂತಿಯಿಂದ ಹೊಸ ತತ್ವಗಳನ್ನು ನಿರ್ಮಿಸಿಕೊಳ್ಳಲು ಸಹಾಯಕವಾಗುತ್ತದೆ.

ಈ ಕಾರಣದಿಂದ ಪ್ರಸ್ತುತ ಕೂಡ ಕಳೆದ ಶತಮಾನಗಳ ಸಾಹಿತ್ಯದ ಪಲ್ಲಟಗಳನ್ನು ಅಧ್ಯಯನ ಮಾಡುತ್ತಿದ್ದೇವೆ. ವಸಾಹತುಶಾಹಿ ಚಿಂತನೆಯು ಕೂಡ ಇದೇ ರೀತಿಯ ಅಧ್ಯಯನವಾದರೂ ಪ್ರಸ್ತುತ ಪ್ರಾದೇಶಿಕತೆಯನ್ನು ಮೆರುಗುಗೊಳಿಸಿ ಶೋಷಣೆ ಮಾಡುತ್ತಿರುವ ಬಹುದೊಡ್ಡ ಸವಾಲಾಗಿದೆ.

'ಸ್ಥಿತ್ಯಂತರ' ಎಂಬ ಕೃತಿಯಲ್ಲಿ ಕೆ.ಸಿ ಶಿವಾರೆಡ್ಡಿ ಅವರು ಇಂತಹ ಸೂಕ್ಷ್ಮಗಳನ್ನು ಕುವೆಂಪು, ಬೇಂದ್ರೆ, ಅಡಿಗರ ಕಾವ್ಯಗಳಲ್ಲಿ, ಕುವೆಂಪು, ಚದುರಂಗ, ತೇಜಸ್ವಿ ಮೊದಲಾದವರ ಕಾದಂಬರಿಗಳಲ್ಲಿ ವ್ಯಕ್ತಗೊಂಡಿರುವ ಸಮಕಾಲೀನ ಸ್ಥಿತ್ಯಂತರಗಳನ್ನು ಈ ರೀತಿಯಲ್ಲಿ ಗ್ರಹಿಸಿದ್ದಾರೆ.

> ಇಂಗ್ಲಿಶ್ ವಿದ್ಯಾಭ್ಯಾಸ ಹೊಸ ವಿಚಾರಗಳು ಹೆಚ್ಚು ತಾಂತ್ರಿಕವಾಗಿ ನಮ್ಮನ್ನು ಅವತರಿಸಿದರೂ ಆ ಕಾಲದ ಮಹತ್ವದ ವ್ಯಕ್ತಿಗಳು ಹಾಗೂ ಸಾಂಘಿಕ ಚಟುವಟಿಕೆಗಳು ಕೂಡ ಅದೇ ವಿಚಾರ ಧಾರೆಯಿಂದ ನಮ್ಮ ಸಾಂಸ್ಕೃತಿಕ ಜೀವನದ ವಿನ್ಯಾಸವನ್ನು ಪರಿಷ್ಕರಿಸಲು ಪ್ರಯತ್ನಿಸಿದ್ದನ್ನು ನಾವು ಗಮನಿಸುತ್ತೇವೆ. ಬ್ರಿಟಿಶರ ರಾಜಕೀಯ ಯಂತ್ರ ತನ್ನ ಅಸ್ತಿತ್ವವನ್ನು ಬಲಪಡಿಸಿಕೊಳ್ಳುವ ದಿಸೆಯಲ್ಲಿ ಅನೇಕ ಸುಧಾರಣಾವಾದಿ ಪ್ರಯತ್ನಗಳಿಗೆ ಕೈ ಹಾಕಿತು. ಇದರಿಂದಾಗಿ ಪಾರಂಪರಿಕ ಸಮಾಜ ವ್ಯವಸ್ಥೆಯ ಅನೇಕ ಅಸಾಂಗತ್ಯಗಳು ಮೂಲಭೂತವಾಗಿ ಅಲ್ಲದಿದ್ದರೂ ಮೇಲ್ಮಟ್ಟದ ಕೆಲವು ಬದಲಾವಣೆಗಳಿಗೆ ದಾರಿಮಾಡಿಕೊಟ್ಟಿತು.[೨]

ಈ ಬದಲಾವಣೆಯೇ ಇಂದು ಸಮಾಜವನ್ನು ತಲ್ಲಣಕ್ಕೆ ಒಳಗಾಗುವಂತೆ ಮಾಡಿದೆ. ಶಿಕ್ಷಣ, ಸಂಸ್ಕೃತಿ ಮೊದಲಾದ ಧೋರಣೆಗಳು ಈ ಪರಿಸರಕ್ಕೆ ಹೊಂದಿಕೊಳ್ಳುವ ಸಂಕಷ್ಟದಲ್ಲಿ ತನ್ನ ಮೂಲಭೂತವಾದ ಅಸ್ಥಿತ್ವವನ್ನು ಕಳೆದುಕೊಳ್ಳಲು ಮುಂದಾಯಿತು. ಈ ಚಿಂತನೆಗಳನ್ನು ಕಳೆದ ಶತಮಾನದ ಸ್ವಾತಂತ್ರ್ಯಪೂರ್ವದಲ್ಲಿಯೇ ಕವಿತೆ, ಕಥೆ, ಕಾದಂಬರಿಗಳಲ್ಲಿ ಧ್ವನಿಸಿರುವುದನ್ನು ನಾವು ಗಮನಿಸಬೇಕಾದ ಅಗತ್ಯವಿದೆ. ಈ ದಿಸೆಯಲ್ಲಿ ನಡೆದ ಸಂಶೋಧನೆಗಳನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

'ವಸಾಹತುಶಾಹಿ ಸಂಸ್ಕೃತಿಗೆ ಆಧುನಿಕ ಕನ್ನಡ ಕಾವ್ಯ ತೋರಿದ ಪ್ರತಿಕ್ರಿಯೆ' ಎಂಬ ಪ್ರಬಂಧವು ಕೆ. ಸಿ ಶಿವಾರೆಡ್ಡಿ ಅವರ ಸಂಶೋಧನಾ ಅಧ್ಯಯನವಾಗಿದೆ. ಈ ಪ್ರಬಂಧದಲ್ಲಿ ಬೇಂದ್ರೆ, ಕುವೆಂಪು, ಅಡಿಗ, ಕಂಬಾರರ ಕಾವ್ಯದ ಅಧ್ಯಯನದಲ್ಲಿ ಸ್ವಾತಂತ್ರ್ಯ ಪೂರ್ವದಿಂದ ಸ್ವಾತಂತ್ರ್ಯ ನಂತರದವರೆಗೂ ಸಾಹಿತ್ಯದ ಮೇಲೆ ಬೀರಿದ ಪ್ರಭಾವಗಳನ್ನು ಇಲ್ಲಿ ಗುರ್ತಿಸಲಾಗಿದೆ. ಬೇಂದ್ರೆಕಾವ್ಯದಲ್ಲಿ ಸ್ಥಳೀಯತೆ ಮತ್ತು ವಸಾಹತುಶಾಹಿಯ ಮುಖಾಮುಖಿಯಿಂದ ಉಂಟಾದ ಚಿಂತನೆಗಳನ್ನು ಗ್ರಹಿಸಿದ್ದಾರೆ. ಪಾಶ್ಚಾತ್ಯ, ಭಾರತೀಯ ಹಾಗೂ ಕನ್ನಡ ಕಾವ್ಯ ತತ್ವಗಳ ಪರಿಶೀಲನೆಯೊಂದಿಗೆ ಆಧುನಿಕ ಕನ್ನಡ ಕಾವ್ಯವನ್ನು ವಿಶ್ಲೇಷಿಸುವ ವಿಧಿವಿಧಾನಗಳನ್ನು ಗುರುತಿಸಿಕೊಳ್ಳುವುದು ಹಾಗು ವಿಭಿನ್ನ ಕಾಲಮಾನಗಳಲ್ಲಿ ಉಂಟಾಗಿರುವ ಅವಸ್ಥಾಂತಗಳನ್ನು ಸಂಸ್ಕೃತಿಯ ಪ್ರಕ್ರಿಯೆಯೊಂದಿಗೆ ಇಲ್ಲಿ ವಿಶ್ಲೇಷಣೆಗೆ ಗುರಿಪಡಿಸಲಾಗಿದೆ.

ಪರಂಪರೆ, ನೆನಪು ಮತ್ತು ವರ್ತಮಾನ ಇವುಗಳ ಆಂತರಿಕ ಸಂಬಂಧಗಳನ್ನು ಪರಿಶೀಲಿಸುವುದು ಹಾಗು ಜಾತಿ, ಧರ್ಮ, ಸಂಸ್ಕೃತಿ ಇವುಗಳ ಪರಸ್ಪರ ಸಂಬಂಧಗಳನ್ನು ಮತ್ತು ಅದರ ಘರ್ಷಣೆಯ ನೆಲೆಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಇಂಗ್ಲಿಶ್ ಶಿಕ್ಷಣಕ್ಕೆ ಒಳಗಾದ ನಮ್ಮ ಭಾರತವು ಏಕರಾಷ್ಟ್ರವೆಂಬ ಕಲ್ಪನೆ ಉಂಟಾದದ್ದು ಅಥವಾ ಬ್ರಿಟಿಷರ ಶಿಕ್ಷಣ ವ್ಯವಸ್ಥೆಯು ಅಂತಹ ಕಲ್ಪನೆಯೊಂದನ್ನು ಉಂಟುಮಾಡಿದ್ದು ಸ್ವಾತಂತ್ರ್ಯದ ಹಾದಿಗೆ ಅವರು ಕೊಟ್ಟ ಕೊಡುಗೆ ಎನ್ನಬಹುದು.

> ಕ್ರೈಸ್ತ ಧರ್ಮದ ಪ್ರಚಾರಣೆಗೆ ತೊಡಗಲು ಪರಕೀಯರು ನೇರವಾಗಿ ವೈದಿಕ ಧರ್ಮದ ಮೌಢ್ಯಗಳನ್ನು, ಆಚಾರ ವಿಚಾರಗಳನ್ನು ಕಟು ವಿಮರ್ಶೆ ಹಾಗು ಟೀಕೆಗಳಿಗೆ ಗುರಿಮಾಡಿದರು. ಇಂಥ ಆಕ್ರಮಣಕಾರಿ ನೆಲೆಗಳಿಂದ ಹೊರಟ ವಸಾಹತುಶಾಹಿಗೆ, ಸ್ಥಳೀಯ ಪುರೋಹಿತಶಾಹಿ ಮೌಢ್ಯಗಳಿಗೆ ಒಳಗಾದ ಜನತೆ ಪಾಶ್ಚಾತ್ಯ ವಿಚಾರ ಧಾರೆಗೆ ಸುಲಭವಾಗಿ ಆಕರ್ಷಿತವಾಗುವುದರೊಂದಿಗೆ ಪಾಶ್ಚಾತ್ಯ ಸಂಸ್ಕೃತಿಯನ್ನು ಜೀವನದ ಬಹುಮುಖ್ಯ ಮೌಲ್ಯ ಎಂಬಂತೆ ಅನುಕರಿಸಿತು. ಆದರೆ ಅಂಥ ಅನುಕರಣೆಯಿಂದ ಹೊರಬಂದು ತಮ್ಮ ಅನನ್ಯತೆಗಳನ್ನು ಶೋಧಿಸಿಕೊಳ್ಳಲು ತೊಡಗಿದ್ದು ನವೋದಯ ಕಾಲದ ಮುಖ್ಯ ಪ್ರವೃತ್ತಿ.[೨೮]

ಇಂತಹ ಸಂದರ್ಭದಲ್ಲಿ ಬೇಂದ್ರೆ, ಕುವೆಂಪು, ಅಡಿಗರ ಕಾವ್ಯಗಳು ಸ್ಪಂದಿಸಿದ ರೀತಿಯನ್ನು ಈ ಅಧ್ಯಯನದಲ್ಲಿ ಗಮನಿಸಬಹುದು.

ಬೇಂದ್ರೆ ಅವರ ಸೃಜನಕ್ರಿಯೆಗೆ ತಾತ್ವಿಕತೆಯೊಂದು ಒದಗಿಬರುವುದು ವಸಾಹತುಶಾಹಿ ಚಾರಿತ್ರಿಕ ಸಂದಿಗ್ಧತೆಗಳಿಗೆ ತೋರಿದ ಪ್ರಕ್ರಿಯೆಗಳಿಂದಲೇ ಎಂದು ಹೇಳಬಹುದು. ದೇಶಿಯ ಹಾಗೂ ಧಾರವಾಡದ ಬದುಕಿನ ಅನುಭವಗಳ ಅನನ್ಯತೆಯ ಶೋಧ ಬೇಂದ್ರೆ ಅವರ ಕಾವ್ಯದ ಮುಖ್ಯ ಕೇಂದ್ರ ಬಿಂದು. ಬದುಕಿನ ಅತ್ಯಂತ ಗಾಢ ಅನುಭವ ದಾಖಲೆಗಳ ಮುಖೇನ ಇವರ ಕಾವ್ಯ ಸಾಂಸ್ಕೃತಿಕ ಅನನ್ಯತೆಗಳ ಹುಡುಕಾಟಕ್ಕೆ ಮುಖಾಮುಖಿಯಾಗುತ್ತದೆ. ಇಂಥ ಹುಡುಕಾಟ ಆತ್ಮಕಥನ ಹಾಗೂ ಆತ್ಮವಿಮರ್ಶೆಯ ಮುಖೇನ ಮೈಪಡೆಯುತ್ತಲೇ ಸಾಂಸ್ಕೃತಿಕ ಧ್ವನಿಯೊಂದನ್ನು ಪ್ರಕಟಿಸುತ್ತದೆ. ಇದು ಬೇಂದ್ರೆ ಅವರ ಕಾವ್ಯದ ಬಹುಮುಖ್ಯ ಆಶಯವೂ ಆಗಿದೆ. ಇವರ ಒಟ್ಟು ಕಾವ್ಯ ಸ್ವರೂಪದ ಚಿಂತನಾಕ್ರಮವು ಈ ಬಗೆಯದು. ಈ ರೀತಿಯಲ್ಲಿ ಬೇಂದ್ರೆ ಅವರ ಕಾವ್ಯತತ್ವದ ಸ್ವರೂಪವನ್ನು ಅಧ್ಯಯನ ಮಾಡಿದ್ದಾರೆ.

'ಬೇಂದ್ರೆ ಕುವೆಂಪು ವಿರಾಟ್ ದರ್ಶನ' ಎಂಬ ಕೃತಿಯಲ್ಲಿ ಕೆ. ಸಿ ಶಿವಾರೆಡ್ಡಿ ಅವರು ಕನ್ನಡ ಸಾಹಿತ್ಯದ ಹೊಸ ಸ್ಥಿತ್ಯಂತರಗಳಿಗೆ ಹಲವು ಉತ್ತರಗಳನ್ನು ಗ್ರಹಿಸಿದ್ದಾರೆ. ಇಲ್ಲಿ ಪ್ರತಿ ಅಧ್ಯಾಯದಲ್ಲಿಯೂ ಫಲಿತಗಳ ಸೂಕ್ಷ್ಮತೆಯಲ್ಲಿಯೇ ಹಲವು ಸಮಸ್ಯೆಗಳನ್ನು ಸೂಚಿಸಿದ್ದಾರೆ. ಈ ಸಮಸ್ಯೆಗಳನ್ನು ಮುಂದಿನ ಸಂಶೋಧನೆಗಳಿಗೆ ಅಧ್ಯಯನ ವ್ಯಾಪ್ತಿಯ ಪ್ರವೇಶ ನೀಡುವ ಮೂಲಕ ಹೊಸ ಅಲೋಚನೆಗೆ ದಾರಿ ಮಾಡಿಕೊಟ್ಟಿದ್ದಾರೆ.

> ಕುವೆಂಪು ಮತ್ತು ಬೇಂದ್ರೆ ಈ ಎರಡೂ ಪ್ರತಿಭೆಗಳು ಸೃಷ್ಟಿಸಿರುವ ಸಾವಿರಾರು ಪುಟಗಳ ಬರಹಗಳಲ್ಲಿ ಅವರ ಅಲೋಚನೆಯ ಕ್ರಮ, ಚಿಂತನೆಗಳು, ತಾವು ನಡೆಸಿದ ಸಂಘರ್ಷ, ಅನುಸಂಧಾನ, ಪ್ರತಿರೋಧ, ಮತ್ತು ಅಭಿವ್ಯಕ್ತಿಯ ಸಾಧ್ಯತೆ ಮತ್ತು ಸವಾಲುಗಳು ಇವೆ. ಇದರೊಂದಿಗೆ ಸ್ಥಳೀಯ ಭಾಷೆ, ಸಾಹಿತ್ಯ, ಧರ್ಮ, ರಾಜಕೀಯ, ಸಾಮಾಜಿಕ ಮತ್ತು ವ್ಯಕ್ತಿನಿಷ್ಠನೆಲೆಗಳ ಅಸ್ತಿತ್ವದ ಶೋಧನೆಯೂ ಸೇರಿಕೊಂಡಿದೆ. ವ್ಯಕ್ತಿನಿಷ್ಠ ಬದುಕಿನ ಜೊತೆ

> ಜೊತೆಯಲ್ಲಿಯೇ ಜೀವ ಕೇಂದ್ರಿತ ನೆಲೆಯ ಶೋಧವೂ ಈ ಎರಡು ಸಂವೇದನೆಗಳು ಸೃಷ್ಟಿಸಿದ ಸಾಹಿತ್ಯ ಕಥನಗಳಲ್ಲಿ ಮುಖ್ಯ ಆಯಾಮವಾಗಿ ವಿಕಾಸ ಹೊಂದಿರುವುದು ವಿಶೇಷ.[೨೯]

ಇಂತಹ ಹಲವಾರು ಪ್ರಶ್ನೆಗಳನ್ನು ಸಂಯೋಜಿಸಿಕೊಳ್ಳದೆ ಬೇಂದ್ರೆ ಹಾಗು ಕುವೆಂಪು ಅವರ ಸಾಹಿತ್ಯದ ಪ್ರವೇಶ ಮಾಡುವುದು ಸರಿಯೆನಿಸದು. ಇಲ್ಲಿ ಸಮಾಜದ ತಲ್ಲಣಗಳಿಗೆ ದೊರಕುವ ಉತ್ತರಗಳು ಪ್ರಸ್ತುತ ಸಮಾಜದ ಪ್ರಶ್ನೆಗಳೂ ಕೂಡ ಎನ್ನಬಹುದು.

> ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಅಭಿವೃದ್ಧಿಯ ನೆಲೆಗಳನ್ನು ಇವರ ಪಠ್ಯಗಳು ಪರಿಭಾವಿಸಿರುವ ಬಗೆ ಯಾವುದು? ಸರ್ವೋದಯ, ಸಹಬಾಳ್ವೆಗೆ ಕಾರಣವಾಗಬೇಕಾದ ಪರಿಕಲ್ಪನೆಗಳು, ಪರಿಸರ ಮತ್ತು ಮನುಷ್ಯನ ವ್ಯಕ್ತಿಗತ ನೆಲೆಗಳಿಗೆ ಮಾರಕವಾದ ಬಗೆಯನ್ನು ಇವರ ಕೃತಿಗಳು ಅನಾವರಣಗೊಳಿಸುತ್ತವೆ. ಅದರ ಸ್ವರೂಪದ ನೆಲೆಗಳನ್ನು ವಿಶ್ಲೇಷಿಸಿಕೊಂಡು ಆ ಮೂಲಕ ಅಭಿವೃದ್ಧಿ ಮತ್ತು ಪರಿಸರದ ಮೀಮಾಂಸೆಗಳನ್ನು ಕಂಡುಕೊಳ್ಳುವುದು ತುಂಬಾ ಅಗತ್ಯ. ಹಣವೇ ಪ್ರಧಾನ ಎಂಬ ಮನೋಭಾವನೆ ಮೂಡಿರುವ ಸಂದರ್ಭದಲ್ಲಿ ಅಭಿವೃದ್ಧಿ, ಸಹಬಾಳ್ವೆ ಸಮಾನತೆ ಇವುಗಳನ್ನು ಯಾವ ರೀತಿ ಅರ್ಥೈಸಿಕೊಳ್ಳಬೇಕೆಂಬ ವಿಚಾರ ಇವರಿಬ್ಬರ ಪಠ್ಯಗಳಲ್ಲಿ ಅಂತರ್ಗತವಾಗಿದೆ. ಇದರ ಸ್ವರೂಪವನ್ನು ತೌಲನಿಕವಾಗಿ ವಿಶ್ಲೇಷಣೆ ಮಾಡುವುದು ಇಂದಿನ ಅಗತ್ಯವಾಗಿದೆ.[೩೦]

ಈ ಸ್ವರೂಪದೊಂದಿಗೆ ಬೇಂದ್ರೆ ಮತ್ತು ಕುವೆಂಪು ಸಾಹಿತ್ಯವನ್ನು ಕುರಿತು ಒಂದು ಸಮಗ್ರ ನೋಟದಲ್ಲಿ ಗಮನಿಸಲಾಗಿದೆ. ಕುವೆಂಪು ಅವರ ಕಾವ್ಯ ಚಿಂತನೆಯ ನೆಲೆಗಳನ್ನು ಅವರ ಕಾವ್ಯ ಹಾಗೂ ಗದ್ಯ ಸಾಹಿತ್ಯ ಬರಹದಲ್ಲಿ ಗುರ್ತಿಸುತ್ತಾ ಇವು ಕನ್ನಡ ಕಾವ್ಯದ ಗ್ರಹಿಕೆಯ ನೆಲೆಗಳಾಗಿ ಪರಿಣಮಿಸುವ ಬಗೆಯನ್ನು ಕುರಿತು ವಿವರಿಸಲಾಗಿದೆ. ಇಲ್ಲಿ ಕವಿತೆ, ಸಾಹಿತ್ಯ ಇವುಗಳಿಗೆ ಸೂಕ್ತವಾದ ಹೊಸ ವ್ಯಾಖ್ಯಾನಗಳನ್ನು ಕಂಡುಕೊಳ್ಳುವ ಅಧ್ಯಯನ ಇಲ್ಲಿದೆ. ಸಾಹಿತ್ಯ ಮೀಮಾಂಸೆ, ರಾಷ್ಟ್ರೀಯತೆ, ಭಾವಕೈತೆಯ ಪ್ರಶ್ನೆಗಳು, ಸೌಂದರ್ಯ ಮೀಮಾಂಸೆ, ಅನ್ನ, ಅಭಿವೃದ್ಧಿ, ಪರಿಸರ, ಸಾಮರಸ್ಯ ಅಸಾಮರಸ್ಯದ ವಿಚಾರದಲ್ಲಿ ಭಗವದ್ಗೀತೆ, ಪುರಾಣಗಳ ಮರು ಸೃಷ್ಟಿ, ಪರಂಪರೆ, ವಸಾಹತು ಶಿಕ್ಷಣ, ಮತಾಂತರ ಕುರಿತಾದ ಚಿಂತನೆಗಳು, ನಾಟಕ ತತ್ವದ ಕುರಿತು ಬೇಂದ್ರೆಯವರ ಚಿಂತನೆ, ಅನುವಾದದ ಬೇರೆ ಬೇರೆ ಆಯಾಮಗಳು ಈ ಎಲ್ಲಾ ವಿಚಾರಗಳನ್ನು ಕುರಿತು ಅಧ್ಯಯನ ನಡೆಸುತ್ತಾ ಈ ಅಧ್ಯಯನದಲ್ಲಿ ದೊರಕುವ ಹೊಸ ಹೊಸ ಸಂಶೋಧನಾ ಸಮಸ್ಯೆಗಳನ್ನು ಕೂಡ ಪರಿಚಯಿಸಿದ್ದಾರೆ. ಕೆ.ಸಿ ಶಿವಾರೆಡ್ಡಿ ಅವರ 'ಬೇಂದ್ರೆ ಕುವೆಂಪು ವಿರಾಟ್ ದರ್ಶನ' ಎಂಬ ಈ ಕೃತಿಯು ಸಾಹಿತ್ಯ ಅಧ್ಯಯನಕ್ಕೆ, ಸಂಶೋಧನೆಗಳಿಗೆ ಮಾರ್ಗದರ್ಶನವಾಗಿ ಕಂಡುಬರುತ್ತದೆ.

ಬೇಂದ್ರೆ ಅವರ 'ಜೋಗಿ', 'ಚಿಗರಿಗಂಗಳ ಚೆಲುವಿ', 'ನಾಕುತಂತಿ' ಈ ಮೂರು ಕವಿತೆಗಳ ವಿಶ್ಲೇಷಣೆಯನ್ನು ಒಳಗೊಂಡಿರುವ ಕೃತಿ ಶಿವಾರೆಡ್ಡಿ ಅವರ 'ಸಂಧಿಕಾಲದ ಅನುಸಂಧಾನ'. 'ಜೋಗಿ' ಕವಿತೆಯು ಕನ್ನಡ ಸಾಹಿತ್ಯದಲ್ಲಿ ಸೃಷ್ಟಿಸಿದ ವಾಗ್ವಾದಗಳು, ಅಧ್ಯಯನಗಳ ಕುರಿತು

ಶತಮಾನದ ಕವಿತೆ ಎಂಬ ಕೃತಿಯಲ್ಲಿ ಉಂಟಾಗಿರುವ ಚಿಂತನೆಯನ್ನು ಚರ್ಚಿಸಿದ್ದಾರೆ. ಕಾಲಘಟ್ಟದ ವ್ಯಾತ್ಯಾಸವಿಲ್ಲದೆ ಒಂದು ಕವಿತೆಯು ಸಮಾಜದ ಬದುಕನ್ನು ಹೇಳುತ್ತಾ ಸಾಗಿದರೆ ಕವಿಯು ಜಗದ ಕವಿಯಾಗುತ್ತಾನೆ. ಕವಿ-ಕೃತಿಯು ಮುಖಾಮುಖಿಯಾಗಿ ಅಧ್ಯಯನಕ್ಕೆ ಒಳಪಡುವ ಬೇಂದ್ರೆ ಹಾಗೂ ಕುವೆಂಪು ಅವರ ಗ್ರಹಿಕೆಗಳ ತಾತ್ವಿಕ ಸ್ವರೂಪವನ್ನು ತಿಳಿಯಲಾಗಿದೆ.

> ಈ ಶತಮಾನದ ಭಾರತದ ಚರಿತ್ರೆಯಲ್ಲಿ ಸಂಕಟದ ಕಾಲವೂ ಹೌದು, ಸತ್ವಪರೀಕ್ಷೆಯ ಕಾಲವೂ ಹೌದು. ರಾಜಕೀಯ ಅರಾಜಕತೆ, ಶುಷ್ಕ ಪಾಂಡಿತ್ಯಗಳು, ಮತಾಂಧತೆಗಳು ಇಲ್ಲಿನ ಬದುಕನ್ನು ಗಂಡಾಂತರಕ್ಕೆ ಈಡುಮಾಡಿದ್ದವು. ಅಂಥ ಪರಿಸರ ಪರಕೀಯರಿಗೆ ಈ ನೆಲದಲ್ಲಿ ನೆಲೆಯೂರಲು ಅನುಕೂಲವಾಗಿ ಪರಿಣಮಿಸಿದ್ದು ನಮ್ಮ ದುರಂತ. ಇದನ್ನು ಸಂತ ಅರವಿಂದರು 'ಅವಸರ್ಪಿಣಿಕಾಲದ ಅಧೋಬಿಂದುವಿನ ಸ್ಥಿತಿ' ಎಂದು ಕರೆದಿದ್ದಾರೆ. ಆದರೆ ಅವಸರ್ಪಿಣಿ ಕಾಲ'ದಲ್ಲಿ ಪಾಶ್ಚಾತ್ಯರು ನೆಲೆಯೂರಿದ್ದು ಒಂದರ್ಥದಲ್ಲಿ ಗಂಡಾಂತರದ ಸ್ಥಿತಿಯಾದರೂ, ಮತ್ತೊಂದರ್ಥದಲ್ಲಿ ಭಾರತೀಯ ಸಂಸ್ಕೃತಿಯ ಸತ್ವ ಪರೀಕ್ಷೆಯ ಗಳಿಗೆಯಾಗಿಯೂ ಪರಿಣಮಿಸಿತು. ಹೊಸ ಸಂಸ್ಕೃತಿಯೊಂದರ ಸಂಘರ್ಷದಿಂದ ಏರ್ಪಟ್ಟ ಗೊಂದಲಗಳು ಭಾರತೀಯ ಪರಿಸರದಲ್ಲಿ ಅತ್ಯಂತ ವಿಷಮಾವಸ್ಥೆಯನ್ನು ಉಂಟುಮಾಡಿದವು. ಸಾಂಪ್ರದಾಯಿಕ ನಂಬಿಕೆಗಳ, ಆಚರಣೆಗಳ ಹೊರೆ ಹಾಗೂ ಪರಕೀಯ ಸಂಸ್ಕೃತಿಯ ಅನುಕರಣೆ, ಆಕರ್ಷಣೆಗಳು ಭಾರತೀಯ ಜನಜೀವನವನ್ನು ಸಂಕಟಕ್ಕೆ ಗುರಿಪಡಿಸಿದವು. ಹಾಗಾಗಿ ಸ್ವವಿಮರ್ಶೆ, ಸ್ವ-ಎಚ್ಚರಗಳಿಂದ ಭಾರತೀಯ ಸಂವೇದನೆ ಕ್ರಿಯಾಶೀಲಗೊಂಡು, ತನಗೊದಗಿದ ವಿಷಮಾವಸ್ಥೆಯಿಂದ ಮುಕ್ತಿ ಪಡೆಯಲು ಕನಸಿದ್ದು, ಹವಣಿಸಿದ್ದು, ಅಂಥ ಹವಣಿಕೆಯೇ ದೇಶದ ಅಭೀಪ್ಸೆಯಂತೆ, ಮಂತ್ರದಂತೆ ಮೊಳಗಿ ಸ್ವಾತಂತ್ರ್ಯ ಸಂಪಾದನೆಗೆ ದುಡಿದದ್ದು ಭಾರತೀಯ ಚರಿತ್ರೆಯಲ್ಲಿ ಅತ್ಯಂತ ಮಹತ್ವದ ಘಟ್ಟ. ದಾಸ್ಯದ ಅವಸರ್ಪಿಣಿ ಕಾಲದಿಂದ ಉತ್ಸರ್ಪಿಣಿಕಾಲದ ಕಡೆಗೆ ಕರೆದೊಯ್ಯುವ ಕ್ರಿಯಾಶೀಲತೆ ಈ ಕಾಲದ್ದಾಗಿದ್ದಂತೆ ಕಾಣುತ್ತದೆ.[೨೧]

ಇಪ್ಪತ್ತನೇ ಶತಮಾನದಲ್ಲಿ ಭಾರತದ ಸ್ಥಿತಿ-ಗತಿಯನ್ನು ವಸಾಹತುಶಾಹಿ ಚಿಂತನೆಗಳು ಬದಲಿಸಿದವು. ಈ ಬದಲಾವಣೆಗಳನ್ನು ಒಂದು ಕ್ರಾಂತಿಯಂತೆ ಎಲ್ಲಾ ಕ್ಷೇತ್ರಗಳಲ್ಲೂ ಎದುರಿಸುವ ಸ್ಥಿತಿ ಭಾರತಕ್ಕೆ ಒದಗಿಬಂದಿತು. ಭಾರತೀಯ ಸಾಹಿತ್ಯ ಕ್ಷೇತ್ರದಲ್ಲಿ ಇಂತಹ ತಲ್ಲಣ ಹಾಗು ಬದಲಾವಣೆಗಳನ್ನು ಕಾವ್ಯ, ಕಾದಂಬರಿ ಮೊದಲಾದ ಆಧುನಿಕ ಸಾಹಿತ್ಯ ಪ್ರಕಾರಗಳಲ್ಲಿ ನಿರೂಪಿಸಿದರು. ಹಲವು ಪ್ರಶ್ನೆಗಳನ್ನು ಹಾಗೂ ಉತ್ತರಗಳನ್ನು ಶ್ರೀಸಾಮಾನ್ಯನಿಗೂ ತಿಳಿವಳಿಕೆ ಮೂಡುವಂತೆ ಚಿಂತನೆನಡೆಸಿದರು. ಕೆ. ಸಿ. ಶಿವಾರೆಡ್ಡಿ ಇವರ ಅಧ್ಯಯನ ದೃಷ್ಟಿಕೋನವು ಇಂತಹ ಚಿಂತನೆಗಳನ್ನು ಮರು ಓದಿಗೆ ಒಳಪಡಿಸುವ, ಸಂಶೋಧಿಸುವ ವ್ಯಾಖ್ಯಾನವೇ ಆಗಿದೆ. 'ಜೋಗಿ' ಕವಿತೆಯ ಓದಿನ ಫಲಿತಗಳನ್ನು ಚರ್ಚಿಸುತ್ತಾ 'ಬೇಂದ್ರೆ ಅವರ ಕಾವ್ಯ ಮತ್ತಷ್ಟು ಅರ್ಥಪೂರ್ಣಗೊಳ್ಳುತ್ತ, ಮುಂದಿನ ಶತಮಾನದ 'ಮುಂಗೋಳಿ'ಯ ಕೂಗಿನೊಂದಿಗೆ ಚೈತನ್ಯವನ್ನು ಉಂಟುಮಾಡುವ ಹವಣಿಸುತ್ತಿರುವ ಕಾವ್ಯ' ಎಂದಿದ್ದಾರೆ. ಬೇಂದ್ರೆ ಅವರ ಕಾವ್ಯವನ್ನು ಪ್ರಸ್ತುತ ಓದಿಗೆ ಅಳವಡಿಸಬೇಕಾದ ಹೊಸ ಶೈಲಿಗಳನ್ನು ಕುರಿತು ತಾತ್ವಿಕ ಸ್ವರೂಪವನ್ನು ನೀಡಿದ್ದಾರೆ.

೫. ೫. ಬೇಂದ್ರೆ ಸಾಹಿತ್ಯ : ನಿಸರ್ಗದ ಚಿಂತನೆಗಳು

ಬೇಂದ್ರೆ ಅವರು ದೇಸಿಕವಿಯಾಗಿ ಈ ಸಮಾಜದ ಪರಿಸರವನ್ನು ಇಲ್ಲಿನ ಜನಪದರೊಂದಿಗೆ ನಿರ್ಮಿಸಿಕೊಂಡು ತನ್ನ ಕಾವ್ಯಶಕ್ತಿಯಲ್ಲಿ ಕಟ್ಟಿದ್ದಾರೆ. ಪ್ರತಿಯೊಬ್ಬ ಬೇಂದ್ರೆ ಸಾಹಿತ್ಯ ಅಧ್ಯಯನಕಾರರು ಬೇಂದ್ರೆಯ ಸಾಹಿತ್ಯವನ್ನು ಈ ನೆಲೆಯಿಂದಲೇ ಪ್ರವೇಶಿಸುತ್ತಾರೆ. ಆದರೆ ಕೆಲವು ವಿಮರ್ಶಕರು ಪ್ರವೇಶದಲ್ಲಿಯೇ ತಲ್ಲೀನರಾಗಿ ಪ್ರಕೃತಿಯಲ್ಲಿ ಕವಿಯ ಜೀವಂತಿಕೆಯ ತಾತ್ವಿಕತೆಯನ್ನು ಗ್ರಹಿಸುತ್ತಾರೆ. ಪ್ರಕೃತಿಯ ಪಂಚಭೂತಗಳ ರಸಾನಂದವು ನವೋದಯ ಚಿಂತನೆ ಎಂಬ ಅಧ್ಯಯನಗಳಿಗೆ ಒಳಪಟ್ಟರೂ ಅದರಲ್ಲಿ ಆಧ್ಯಾತ್ಮದ ದರ್ಶನಮಾಡುವ ಸ್ವರೂಪವನ್ನು ಅನೇಕ ಲೇಖನಗಳಲ್ಲಿ ಕಾಣಬಹುದು. ಅನುಭಾವದ ನೆಲೆಯಲ್ಲಿ ಪ್ರಕೃತಿಯನ್ನು ಸಾಹಿತ್ಯದ ಕೇಂದ್ರ ನೆಲೆಯಾಗಿಸಿಕೊಂಡು ವಿವಿಧ ಸಾಹಿತ್ಯದ ಆಯಾಮಗಳನ್ನು ರೂಪಿಸಿದ ಜಾನಪದರ ಶಕ್ತಿಯ ಬೇರುಗಳು ಬೇಂದ್ರೆ ಅವರ ನಿಸರ್ಗ ಸಾಹಿತ್ಯದ ಮೇಲೆ ದಟ್ಟವಾದ ಪರಿಣಾಮ ಬೀರಿದೆ. 'ಬೆಳಕಿನ ಹಕ್ಕಿ ಬೇಂದ್ರೆ ನಿಸರ್ಗ ಕಾವ್ಯ' ಎಂಬ ಪ್ರಬಂಧವನ್ನು ಬಸು ಬೇವಿನಗಿಡದ ಅವರು ಮಂಡಿಸಿದ್ದಾರೆ. ಈ ಪ್ರಬಂಧವು ನಿಸರ್ಗದ ಜೊತೆಗೆ ಬೇಂದ್ರೆ ಅವರ ಸಾಹಿತ್ಯದ ರೂಪುರೇಷೆಗಳನ್ನು ಇಲ್ಲಿ ಪರಿಚಯಿಸಿದೆ. ಪ್ರಕೃತಿಯಾರಾಧನೆಯ ಪರಂಪರೆಯನ್ನು ಪರಿಚಯಿಸುತ್ತಾ ಪಂಪನಿಂದ ಹೊಸಗನ್ನಡದವರೆಗೂ ಸಾಹಿತ್ಯದೊಳಗೆ ನಿಸರ್ಗ ಚಿಂತನೆಯನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿದ್ದಾರೆ.

> ಜನಪದ ಸಾಹಿತ್ಯದ ಸಂಸ್ಕಾರವನ್ನು ಇತರ ಹಲವು ಪ್ರೇರಣೆಗಳ ಜೊತೆಗೆ ಬೇಂದ್ರೆಯವರು ಪಡೆದಿದುರ ಪರಿಣಾಮದಿಂದಾಗಿ ಅವರ ಕಾವ್ಯ ಆಡುಮಾತು, ದೇಸಿತನ ಹಾಗೂ ಮಾರ್ಗದ ಎರಕದಲ್ಲಿ ಹುಟ್ಟಿಬಂದಿತು. ಆಡುನುಡಿ, ಜನಪದ, ನುಡಿಗಟ್ಟು, ಗಾದೆಮಾತುಗಳ ಬಳಕೆ ಮುಂತಾದವುಗಳನ್ನು ಕಾವ್ಯದಲ್ಲಿ ಬಳಸಬಹುದೆ ಎನ್ನುವಷ್ಟರ ಮಟ್ಟಿಗೆ ಬೇಂದ್ರೆಯವರ ಕಾಲಕ್ಕೆ ಜನಪದ ಭಾಷೆಯ ಬಗ್ಗೆ ಅಲಕ್ಷ್ಯವಿತ್ತು. ಅಂತಹ ಪೂರ್ವಾಗ್ರಹ, ಅಲಕ್ಷ್ಯಗಳನ್ನು ದೂರಮಾಡಿಅದರಲ್ಲಿನ ಸತ್ವವನ್ನು ಸೂರೆಮಾಡಿದ ಅವರು ಜನಪದ ಕವಿಯನ್ನು ಮೀರಿ ತಮ್ಮ ತಾತ್ವಿಕತೆ, ಅನುಭಾವ, ದರ್ಶನ, ಪ್ರತಿಭಟನೆ, ವಾತ್ಸಲ್ಯಭಾವಗಳನ್ನು ಪ್ರಕಟಿಸಿದರು. ಜನಪದದ ಪ್ರಕಾರಗಳಾದ ತ್ರಿಪದಿ, ಗೀಗಿಪದ, ಲಾವಣಿ, ಗೊಂದಲಿಗರ ಪದ, ಹಾಡುಗಬ್ಬ, ಸಂವಾದ ಮುಂತಾದ ಹತ್ತು ಹಲವು ಮೌಖಿಕ ಛಂದೋರೂಪಗಳು ಬೇಂದ್ರೆಯವರನ್ನು ಸೆಳೆದವು. ಜಾನಪದದ ಗತ್ತು, ಗುಂಗು, ಲಯ, ತಾಳಗಳು ಅವರ ಕಾವ್ಯದಲ್ಲಿ ಉಸಿರು ತಾಳುತ್ತವೆ.[೨]

ಈ ಪ್ರಕೃತಿಯ ವರ್ಣನೆಯಲ್ಲಿ ಅನುಭೂತಿ ಇದೆ, ಆಧ್ಯಾತ್ಮವಿದೆ ಎಂಬ ನೇರ ಹೇಳಿಕೆಯಲ್ಲಿಯೇ ಸಾಕಷ್ಟು ಬರಹಗಳು ನಿಂತುಹೋಗಿವೆ. ಆದರೆ ಈ ಅಂಶಗಳಲ್ಲಿ ಅಡಗಿರುವ ತತ್ವವನ್ನು ಸಂಶೋಧಿಸುವ ಬರಹಗಳು ಅತ್ಯಂತ ಕಡಿಮೆ. ಬಸು ಬೇವಿನಗಿಡದ ಅವರು ಪ್ರಕೃತಿಯ ದರ್ಶನದಲ್ಲಿ ಅಭೇದ್ಯ ಕಲ್ಪನೆಗಳು ಇವೆ ಎಂಬ ವಿಚಾರ ಹೇಳಿದ್ದಾರೆ. ಆದರೆ ಗುರ್ತಿಸಿಲ್ಲ. 'ಮೂಡಲ ಮನೆಯ ಮುತ್ತಿನ ನೀರಿನ' ಎಂಬ ಸಾಲು ಕೇವಲ ಸೂರ್ಯೋದಯವನ್ನು ಕುರಿತು ಹೇಳುವ ಸಾಲುಗಳಲ್ಲ. ಅಲಂಕಾರ ಸೂರ್ಯನ ಉದಯವನ್ನೇ ಬಳಸಿದರೂ, ಪಶ್ಚಿಮದ

ಪ್ರಭಾವವನ್ನೂ, ಕವಿತ್ವದ ಉದಯವನ್ನು ಹಲವು ಅರ್ಥಗಳನ್ನು ತನ್ನೊಳಗೆ ಉದಿಸಿರುವುದನ್ನು ಸರಳವಾಗಿಯೇ ಅರ್ಥೈಸಬಹುದು. ಈ ಹೊಸ ಚಿಂತನೆಯಲ್ಲಿ ಅಧ್ಯಯನಗಳು ಸಾಗಿವೆ. ಜಾನಪದ, ವಚನ ಸಂಸ್ಕೃತಿ, ಕೀರ್ತನೆಗಳ ಪ್ರಭಾವವನ್ನು ಪದ್ಯಗಳ ವಿಚಾರದೊಂದಿಗೆ ಬಸು ಬೇವಿನಗಿಡದ ಅವರ ಪ್ರಬಂಧವು ಹಲವು ವಿಚಾರಗಳನ್ನು ಗಮನಿಸಿದೆ. ಭಕ್ತಿಯ ತತ್ವ, ಕೀರ್ತನೆಯ ಪ್ರಭಾವ ಹಾಗೂ ವಿಸ್ತರಣೆ, ಶರೀಫರ ಪ್ರಭಾವ ಮೊದಲಾದ ಅಂಶಗಳನ್ನು ಗಮನಿಸಿದ್ದಾರೆ. ಬೇಂದ್ರೆ ಹಾಗೂ ಸಮಕಾಲೀನರಲ್ಲಿ ನಿಸರ್ಗ ಪ್ರಭಾವವನ್ನು ಗಮನಿಸಿದ್ದಾರೆ. ಮಧುರಚೆನ್ನ, ಕುವೆಂಪು, ಕಣವಿ ಈ ಮುಂತಾದ ಕನ್ನಡ ಕವಿಗಳು ಮೂಡಿಸಿದ ನಿಸರ್ಗ ಚಿಂತನೆಯನ್ನು ಬಸು ಅವರು ಚರ್ಚಿದ್ದಾರೆ. ಭಾರತೀಯ ಸಾಹಿತ್ಯದಲ್ಲಿ ರವೀಂದ್ರನಾಥ ಟಾಗೋರ್, ಅರವಿಂದರ ಪ್ರಭಾವವಿದ್ದರೆ, ಪಾಶ್ಚಿಮಾತ್ಯ ಕವಿಗಳಾದ ಕೀಟ್ಸ್, ವರ್ಡ್‌ವರ್ತ್, ಷೆಲ್ಲಿ, ಎ. ಈ. ಮೊದಲಾದ ಕವಿಗಳ ಪ್ರಭಾವವನ್ನು ಗಮನಿಸಿದ್ದಾರೆ. ಬೇಂದ್ರೆ ಅವರ ಕವಿತೆಗಳ ಬಗೆಗೆ ವಿಶ್ಲೇಷಣೆ ಹಾಗೂ ವಿಮರ್ಶೆಗೆ ಕೊನೆಯಿಲ್ಲವೆಂಬ ತೀರ್ಮಾನಕ್ಕೆ ಬರುತ್ತಾರೆ.

ಬೇಂದ್ರೆ ಅವರ ಸಮಗ್ರ ಕಾವ್ಯದ ಅಧ್ಯಯನದೊಂದಿಗೆ ವಿದ್ಯಧರ ಮುತಾಲಿಕ ದೇಸಾಯಿ ಅವರು 'ಬೇಂದ್ರೆ ಅಂದ್ರೆ' ಎಂಬ ಲೇಖನ ರಚಿಸಿದ್ದಾರೆ. ಈ ಲೇಖನವು ಬೇಂದ್ರೆ ಸಾಹಿತ್ಯದ ವಿವಿಧ ನೆಲೆಗಳನ್ನು ಗ್ರಹಿಸಿದಂತೆ ಕಾಣುವುದಾದರೂ ಬೇಂದ್ರೆ ಅವರ ಕೆಲವು ಕವಿತೆಗಳ ಮೂಲಕ ಪ್ರವೇಶದ ಸೂಚ್ಯಗಳನ್ನು ಮಾತ್ರ ತಿಳಿಸಿದಂತೆ ಕಾಣುತ್ತದೆ. ತತ್ವಚಿಂತನೆ, ಒಲವು, ದೇಶಭಕ್ತಿ, ಅನುಭಾವ, ಆಧ್ಯಾತ್ಮ ಈ ಎಲ್ಲಾ ವಿಚಾರಗಳನ್ನು ಗ್ರಹಿಸಿದ್ದಾರೆ. ಬದುಕನ್ನು ಕಾವ್ಯವಾಗಿ ಎಣೆಯುವಾಗ ಲೌಕಿಕ-ಅಲೌಕಿಕವಾದ ಕಾವ್ಯ ಪ್ರವೇಶಗಳ ಕುರಿತು ಚರ್ಚಿಸಿದ್ದಾರೆ.

> ಬೇಂದ್ರೆಯವರ ಸಮಗ್ರ ಕಾವ್ಯವನ್ನು ಹೇಗೆ ಆರಂಭಿಸಿದರೂ ಅದೊಂದು ವರ್ತುಲದಂತೆಯೇ ಅಧ್ಯಯನಕ್ಕೆ ಅನುಕೂಲವಾಗುವಂತೆ. ೧. ದೇಶಿವಾದದ ನೆಲೆ ೨. ಜಾನಪದ ಸಂವೇದನೆಯ ಅಭಿವ್ಯಕ್ತಿ, ೩. ಸಂಖ್ಯಾಶಾಸ್ತ್ರ, ೪. ಆಧ್ಯಾತ್ಮ ೫. ವೈಜ್ಞಾನಿಕತೆ ೬. ಕಲ್ಪನಾ ವೈಖರಿ ೭. ಮಾನವಧರ್ಮ ೮. ದೇಶಭಕ್ತಿ ಅಥವಾ ರಾಷ್ಟ್ರಭಕ್ತಿ ೯. ಮನೋವಿಜ್ಞಾನ ೧೦. ಭಾಷಾ ಸೊಗಡು. ಹೀಗೆ ವಿಭಜನೆ ಮಾಡುತ್ತಾ ಸಾಗಬಹುದು. ಬೇಂದ್ರೆ ಕಾವ್ಯದ ಗರ್ಭಗುಡಿಗೆ ನೂರಾರು ಬಾಗಿಲು ಹೇಗೊ ಪ್ರವೇಶಿಸಿ ದರ್ಶನಾನುಭವ ಪಡೆಯಬಹುದು.[೫]

ಇವರ ಚಿಂತನೆಗಳನ್ನು ಹಲವು ಆಯಾಮಗಳಲ್ಲಿ ಮುಂದುವರೆಸಬಹುದು.

ಆಹಿತಾನಲ(ನಾಗ ಐತಾಳ), ನಳಿನಿ ಮೈಯ ಇವರು ಸಂಪಾದಿಸಿರುವ 'ಬೇಂದ್ರೆ ಅಂದ್ರೆ.' ಎಂಬ ಕೃತಿಯು ವಿದ್ಯಧರ ಮುತಾಲಿಕ ದೇಸಾಯಿ ಅವರ ಅಧ್ಯಯನದ ಹೊಸ ಸಾಧ್ಯತೆಗಳನ್ನು ಒಂದು ಕಡೆ ಸಂಗ್ರಹಿಸಿದಂತೆ ಕಾಣುವ ಕೃತಿಯಿದು. ಕೀರ್ತಿನಾಥ ಕುರ್ತಕೋಟಿ ಅವರ 'ಬೇಂದ್ರೆ ಹಾಗೂ ಕನ್ನಡ ಕಾವ್ಯದ ಸ್ವರೂಪ' ಲೇಖನವೂ ಸೇರಿದಂತೆ ಕನ್ನಡದ ಪ್ರಮುಖ ವಿಮರ್ಶಕರ ಬೇಂದ್ರೆ ಸಾಹಿತ್ಯ ಕುರಿತ ಅಧ್ಯಯನಗಳು ಇಲ್ಲಿ ಸಂಪಾದನೆಗೊಂಡಿವೆ. ಅನಿಲ್ ದೇಶಪಾಂಡೆ ಅವರು 'ಮೂರ್ಧನ್ಯ ತೇಜಸ್ಸಿನ ಕಿರಣ' ಎಂಬ ಲೇಖನದಲ್ಲಿ ತಮ್ಮ ಓದುವಿಗೆ

ದೊರಕಿದ ಹೊಸ ಆಯಾಮಗಳನ್ನು ಇಲ್ಲಿ ನೀಡಿದ್ದಾರೆ. ಒಬ್ಬ ಕವಿಯ ಒಂದು ಕವಿತೆ ಜಗತ್ತಿನ ಬೇರೆ ಯಾವುದೋ ಕೃತಿಯಲ್ಲಿ ಅರ್ಥ ಬದ್ಧತೆಯ ಕೀಲಿಗಳನ್ನು ತನ್ನೊಳಗೆ ಅಡಗಿಸಿಕೊಂಡಿರಬಹುದು. ಈ ವಿಚಾರದಲ್ಲಿ ಎಡ್ವಿನ್ ಅಬ್ಬೋಟ್ ಅವರ 'ಫ್ಲಾಟ್ ಲ್ಯಾಂಡ್' ಎಂಬ ಕೃತಿಯಲ್ಲಿ ಬೇಂದ್ರೆ ಅವರ 'ಕುರುಡು ಕಾಂಚಾಣ', 'ನಾಕುತಂತಿ' ಮೊದಲಾದ ಕವಿತೆಗಳ ಕಾವ್ಯ ಸ್ವರೂಪ ದಕ್ಕುತ್ತದೆ ಎಂದು ಅರ್ಥೈಸಿದ್ದಾರೆ. ಬೇಂದ್ರೆ ಅವರು ಅಧ್ಯಯನ ಮಾಡಿದ ವಿಜ್ಞಾನದ ವಿವಿಧ ಶಾಖೆಗಳು, ಸಂಖ್ಯಾಶಾಸ್ತ್ರದ ಅರಿವು, ವೇದಗಳ ಆಳವಾದ ಅಧ್ಯಯನ ಮೊದಲಾದ ಗ್ರಹಿಕೆಗಳನ್ನು ಸರಳವಾಗಿ ಜನಪದ ಭಾಷೆಯಲ್ಲಿ ತಿಳಿಸುತ್ತಾರೆ ಎಂಬ ಚಿಂತನೆಯನ್ನು ನೀಡಿದ್ದಾರೆ.

ನಿಸರ್ಗದೃಷ್ಟಿಯಿಂದ ಬೇಂದ್ರೆ ಅವರ ಕಾವ್ಯವನ್ನು ಪ್ರತಿಯೊಂದು ವಿಮರ್ಶೆಯಲ್ಲೂ ವಿಮರ್ಶೆ ಮಾಡಿದ್ದಾರೆ. ಎಲ್ಲಾ ವಿಮರ್ಶೆಗಳೂ ಪರಿಸರ, ದೇಶಿಯತೆ, ಸ್ತ್ರೀ, ಸಮಾಜದ ಸಮಸ್ಯೆಗಳು ಈ ವಿಚಾರಗಳನ್ನು ಚರ್ಚಿಸುವಾಗ ನಿಸರ್ಗದ ಅಂಶಗಳನ್ನು ಅಧ್ಯಯನ ಮಾಡಿದ್ದಾರೆ.

ಬೇಂದ್ರೆ ಅವರ 'ಗರಿ' ಸಂಕಲನ 'ಬೆಳಗು' ಕವಿತೆಯು ಈ ವರ್ಷ 'ಶತಮಾನದ ಕವಿತೆ'ಯಾಗಿ ನಮಗೆ ಹೊಸ ಓದುಗಳನ್ನು ಒದಗಿಸುತ್ತಿರುವುದು ಒಬ್ಬ ಕವಿಯ ಭವಿಷ್ಯದ ಸಾತ್ವಿಕ ನೋಟ ಹಾಗೂ ಕವಿತೆಯ ಶಕ್ತಿಯನ್ನು ತಿಳಿಸುತ್ತದೆ. ಈ ದೃಷ್ಟಿಯಲ್ಲಿ 'ಬೆಳಗು' ಕವಿತೆಯ ಪ್ರತಿಯೊಂದು ವಿಮರ್ಶೆಗಳು ನಿಸರ್ಗವನ್ನು ಪ್ರತಿನಿಧಿಸುತ್ತಾ ಮನುಷ್ಯನ ವಿವಿಧ ಆಯಾಮಗಳನ್ನು ದರ್ಶನಮಾಡುತ್ತವೆ. ಈ ಕವಿತೆ ಕುರಿತು ವಿವಿಧ ಪರಿಕಲ್ಪನೆಗಳ ಚರ್ಚೆಯಲ್ಲಿ ಅಧ್ಯಯನ ಮಾಡಿದ್ದೇನೆ. ನಿಸರ್ಗದ ದೃಷ್ಟಿಯಲ್ಲಿ ಗಮನಿಸುವುದಾದರೆ ಹಲವು ಅಧ್ಯಯನಗಳ ಫಲಿತವಾಗಿ ಪಿ. ಸಂಗೀತಾ ಅವರ 'ನವೋದಯ ಸಂದರ್ಭ ಬೇಂದ್ರೆ–ಕುವೆಂಪು ಕೃತಿಗಳಲ್ಲಿ ಪರಿಸರದ ಪ್ರಶ್ನೆಗಳು' ಎಂಬ ಸಂಶೋಧನಾ ಪ್ರಬಂಧದಲ್ಲಿ ನಿಸರ್ಗದ ದೃಷ್ಟಿಯನ್ನು 'ಬೆಳಗು', 'ಚಂದ್ರ' 'ಯುಗಾದಿ' ಈ ಎಲ್ಲಾ ಕವಿತೆಗಳ ಮೂಲಕ ಅಧ್ಯಯನ ನಡೆಸಿದ್ದಾರೆ.

'ಬೆಳಗು' ಕವಿತೆಯಲ್ಲಿ ನಿಸರ್ಗದ ಅಭಿವ್ಯಕ್ತಿಯೂ ಕಾವ್ಯದ ಅಭಿವ್ಯಕ್ತಿಯೂ ಜೊತೆಯಲ್ಲಿ ಸಾಗುವ ಋತುಮಾನದ ಚಲನೆಯಾಗಿ ಮೂಡಿಬರುತ್ತದೆ. ಇಲ್ಲಿ ಜೈವಿಕ ನೆಲೆಯ ಚೈತನ್ಯವನ್ನು ಪಿ. ಸಂಗೀತಾ ಅವರು ಶೋಧಿಸಿದ್ದಾರೆ. ಜೈವಿಕ ಅಭಿವ್ಯಕ್ತಿಯು ಕಾವ್ಯದ ಗ್ರಹಿಕೆಯಲ್ಲಿ ಮಾನವ ಸಮುದಾಯಗಳ ಸಂಬಂಧವನ್ನು ಪ್ರತಿನಿಧಿಸುವ ಛಾಯೆಯನ್ನು ಅರ್ಥೈಸಿದ್ದಾರೆ. ಭೂಮಿಯ ಸೌಂದರ್ಯದಲ್ಲಿ ಚತುರ್ಮುಖ ಸೌಂದರ್ಯದ ಮೂಲಕ ಕಾವ್ಯದ ಅಭಿವ್ಯಕ್ತಿಯನ್ನು ಚರ್ಚಿಸಿದ್ದಾರೆ. ಪಂಚಭೂತಗಳ ಅಭಿವ್ಯಕ್ತಿಯಲ್ಲಿ ಕಾವ್ಯತತ್ತ್ವವು ನಿಸರ್ಗಕಾವ್ಯವಾಗಿ ವೈಭವಗೊಳ್ಳುವ ಬಗೆಯನ್ನು ಅಧ್ಯಯನಮಾಡಿದ್ದಾರೆ. ಈ ದೇಹವು ಆಸ್ವಾದಿಸುವ ಅನುಭವಗಳೆಲ್ಲವೂ ನಿಸರ್ಗದ ಅನುಭೂತಿಗಳಾಗಿಯೇ ದೊರೆಯುತ್ತವೆ. ಬೆಳಗು, ಶ್ರಾವಣ ಇಂತಹ ಕವಿತೆಗಳು ಒಂದು ಅರ್ಥಕ್ಕೆ ಸೀಮಿತವಾಗದೆ ನಿರಂತರ ಚಲನೆಯ ಚಿಕಿತ್ಸಾಭಿವ್ಯಕ್ತಿಗಳಾಗಿ ಕಂಡುಬರುತ್ತವೆ. ಈ ಕವಿತೆಗಳಲ್ಲಿ ನಿಸರ್ಗಾನುಭವದ ಮೂಲಕ ಮಾನವನ ಅಭಿವ್ಯಕ್ತಿಯ ತಾತ್ವಿಕತೆಯನ್ನು ಇವರ ಪ್ರಬಂಧದ ಮೂಲಕ ಗಮನಿಸಬಹುದು.

೫. ೬. ಬೇಂದ್ರೆ ಸಾಹಿತ್ಯ : ಆಧ್ಯಾತ್ಮ ಚಿಂತನೆಗಳು

ಬೇಂದ್ರೆ ಅವರಿಗೆ ಅನುಭವಗಳೇ ಅನುಭಾವಗಳಾಗಿ ಕಾವ್ಯದಲ್ಲಿ ಉದಿಸಿದವು. ಈ ಅನುಭವಗಳನ್ನು ನೀಡಿದವರಲ್ಲಿ ಕುಟುಂಬದ ಮಾತೃಶಕ್ತಿ ಹಾಗೂ ಗುರುಭಕ್ತಿ. ರವೀಂದ್ರರು ಹಾಗೂ ಅರವಿಂದರು ಈ ಆಧ್ಯಾತ್ಮ ಶಕ್ತಿಯನ್ನು ನೀಡಿದರು. ಅರವಿಂದರ ಪೂರ್ಣಯೋಗದ ಪ್ರಭಾವ ಬೇಂದ್ರೆ ಅವರಲ್ಲಿ ನೆಲೆಯಾಗಿರುವುದನ್ನು ಕಾಣಬಹುದು. ಅರವಿಂದರ ಪರಿಚಯವು ೧೯೧೪-೧೮ರ ತನಕ ಪತ್ರಿಕೆಯ ಬರಹಗಳ ಮೂಲಕ ಅಭ್ಯಾಸವಾಯಿತು. ಇದೇ ಸಂದರ್ಭದಲ್ಲಿ ಬೇಂದ್ರೆ ರೂಪಿಸಿಕೊಂಡಿದ್ದ ಪರಿಸರವು ಅರವಿಂದರ ಪ್ರಭಾವಕ್ಕೆ ಒಳಗಾದುದು ಇವರಿಗೆ ಇನ್ನಷ್ಟು ಚೈತನ್ಯ ತುಂಬಿತು. ಬೇಂದ್ರೆ ಅವರು 'ಗರಿ' ಸಂಕಲನವನ್ನು ಅರ್ಪಿಸುವ ಮೂಲಕ ಅರವಿಂದರನ್ನು ೧೨ ಲೇಖನಗಳಲ್ಲಿ, ಎರಡು ಕವನ ಸಂಕಲನಗಳಲ್ಲಿ ಹಾಗೂ ಅನುವಾದಗಳಲ್ಲಿ ಕನ್ನಡಕ್ಕೆ ನೀಡಿರುವ ವಿವರಣೆಗಳು ನಮಗೆ ಪೂರ್ಣವಾಗಿ ಲಭ್ಯ ಇವೆ. ಇದು ಅರವಿಂದರ ಪ್ರಭಾವವು ಆಧ್ಯಾತ್ಮವಾಗಿ ಪರಿವರ್ತನೆಯಾಗಲು ಕಾರಣಗಳು. ಆದರೆ ಬೇಂದ್ರೆ ಅವರಲ್ಲಿಯೇ ಜನಿಸಿದ ಆಧ್ಯಾತ್ಮವೊಂದಿದೆ. ಅದು ಅನುಭಾವಿ ನೆಲೆಯಲ್ಲಿ ಪರಿಸರದ ಪ್ರತಿಮೆಗಳ ಜೊತೆ ಮಾತನಾಡುತ್ತದೆ. ಈ ಅನುಭಾವಕ್ಕೆ ಭಾರತೀಯ ಸನಾತನ ಧರ್ಮ, ವೇದ, ಶಾಸ್ತ್ರಗಳ ಆಳವಾದ ಅಧ್ಯಯನ, ಭಾರತೀಯ ಇತರ ಭಾಷೆಗಳ ಸಾಹಿತ್ಯ ಸೃಜಶೀಲತೆಯ ಅಧ್ಯಯನ, ಪಾಶ್ಚಾತ್ಯ ಸಾಹಿತ್ಯದ ಪ್ರಭಾವ ಈ ಎಲ್ಲಾ ಅಂಶಗಳು ಬೇಂದ್ರೆ ಅವರಿಗೆ ಅಧ್ಯಾತ್ಮ ಚೈತನ್ಯವನ್ನು ತುಂಬಿತು ಎನ್ನಬಹುದು.

ಈ ಆಧ್ಯಾತ್ಮ ಚಿಂತನೆಯ ಸ್ವರೂಪವನ್ನು ತಾತ್ವಿಕವಾಗಿ ಗ್ರಹಿಸುವುದಾದರೆ ವಿವಿಧ ಅಧ್ಯಯನಗಳು ಸೂಕ್ತವಾಗುತ್ತವೆ. ಬೇಂದ್ರೆ ಅವರ ಸಾಹಿತ್ಯದಲ್ಲಿ ರೂಪುಗೊಂಡ ಚಿಂತನೆಯನ್ನು ಹಲವು ವಿಮರ್ಶಾ ಲೇಖನಗಳ ಮೂಲಕ ಅಧ್ಯಯನ ಮಾಡಬಹುದು. ಇಂತಹ ಅಧ್ಯಯನಗಳಲ್ಲಿ ಮಿರ್ಜಿ ಅಣ್ಣಾರಾಯರ 'ದತ್ತವಾಣಿ' ಕೃತಿಯಿಂದ 'ಅಂಬಿಕಾತನಯದತ್ತರ ಆಧ್ಯಾತ್ಮಿಕತೆ' ಲೇಖನವನ್ನು ಮೊದಲಿಗೆ ಗ್ರಹಿಸಬಹುದು. ಕವಿಯ ಕಾವ್ಯದ ಶೋಧವನ್ನು ಮಾಡುತ್ತಾ ಅದು ಆತ್ಮದ ಅನುಸಂಧಾನವೆಂಬ ತೀರ್ಮಾನಕ್ಕೆ ಬರುವಾಗ ಈ ಆಧ್ಯಾತ್ಮದ ವಿಚಾರ ಪ್ರಾರಂಭವಾಗುತ್ತದೆ. ಒಂದು ಕವಿತೆಯನ್ನು ಗ್ರಹಿಸುವ ನೆಪದಲ್ಲಿ ಸಾಕಷ್ಟು ಕಾವ್ಯ ಎಂದರೇನು? ಸಾಹಿತ್ಯದ ವ್ಯುತ್ಪತ್ತಿ ಹೇಗೆ? ಸಹೃದಯ ಹಾಗೂ ಕವಿಯ ಅಂತರಗಳೇನು? ಪರಸ್ಪರ ರಸಸೇತುವಾಗಲು ಅಗತ್ಯವಾದ ಮೀಮಾಂಸೆ ಯಾವುದು ಎಂಬ ಹಲವು ಪ್ರಶ್ನೆಗಗಳು ಇಪ್ಪತ್ತನೇ ಶತಮಾನದ ಕಾವ್ಯಾಸ್ವಾದದ ಚಿಂತನೆಯಾಗಿತ್ತು. ಇಂತಹ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುತ್ತಲೇ ಕಾವ್ಯ ಪ್ರವೇಶ ಮಾಡುವ ಪರಂಪರೆಯನ್ನು ನಿರ್ಮಿಸಿದ್ದರು. ಪ್ರಬುದ್ಧ ಕರ್ಣಾಟಕ, ಜೀವನ, ಜಯಕರ್ನಾಟಕ, ಪರಿಷತ್ಪತ್ರಿಕೆ ಮೊದಲಾದ ಸಾಹಿತ್ಯ ಪತ್ರಿಕೆಗಳೇ ಈ ಮಾರ್ಗವನ್ನು ಸೃಜಿಸಿದವು ಎನ್ನಬಹುದು.

> ಕವಿಯ ಸಮಗ್ರವಾದ ರಸಾನುಭವವು ನುಡಿಯ ನೆರವನ್ನು ಪಡೆದು ಕಾವ್ಯರೂಪವನ್ನು ತಾಳುವುದು. ಇದೊಂದು ಕವಿಯ ಆತ್ಮಕ್ಕೂ ಹೊರಗಿನ ಜಗತ್ತಿಗೂ ಇರುವ ಅಖಂಡವಾದ ಸಂಬಂಧವನ್ನು ನಿದರ್ಶಿಸುವ ಕನ್ನಡಿ. ಈ ಕನ್ನಡಿಯಲ್ಲಿ ಕವಿಯ ಅಂತರಂಗ ಸ್ಪಷ್ಟವಾಗಿ

ಮೂಡಿದಷ್ಟು ಅದಕ್ಕೆ ಮಹತಿ ಹೆಚ್ಚುವುದು. ಆಧ್ಯಾತ್ಮ ಒಡಮೂಡುವುದು. ಯಾಕೆಂದರೆ ಕವಿಯ ಧ್ವನಿಯು, ಕವಿಯ ಆತ್ಮವು. ತನ್ನ ಗರ್ಭಗುಡಿಯ ಗರ್ಭದಲ್ಲಿ ಅಂದರೆ ಆತ್ಮದ ಅತ್ಯಂತ ಆಂತರ್ಯದಲ್ಲಿ ಪಡಿನುಡಿಯುವ ಮಂತ್ರವಾಗಿರುವುದು. ಜೇಡ ತನ್ನ ಒಡಲ ನೂಲಿನಿಂದ ಜಾಲವನ್ನು ನೇಯುವಂತೆ ಕವಿಯ ಅಂತರ್ಭಾವ ಗೀತೆಯಾಗಿ ಹೊರ ಹೊಮ್ಮುವುದು. 'ಅಂತು ಇಂತು ಪ್ರಾಣ ತಂತುವೇ' ಹೆಣೆದು ಕಾವ್ಯವಾಗುವುದು. ಕವಿಯ ನಾದ ಆ ಏಕತಾನದಲ್ಲಿ ಲೀನವಾದಾಗ ಕವನ ರೂಹುಗೊಂಡರೆ ಅದು ಎಂಕಾರದ ಶಂಕನಾದದ ಶ್ರೇಷ್ಠತೆಯ ಸೀಮೆಯನ್ನು ಸಮೀಪಿಸುವುದರಲ್ಲಿ ಸಂಶಯವಿಲ್ಲ. ಈ ಮಾರ್ಗದಲ್ಲಿ ಮುನ್ನೆಡೆವ ಕವಿಯ ಕಾವ್ಯವು ಆ ಆಧ್ಯಾತ್ಮಿಕಾನುಭವದ ಪ್ರತಿಬಿಂಬವೇ ಆಗಿರುವುದು.[೩೪]

ಇಲ್ಲಿ ಕಾವ್ಯದ ಸೃಷ್ಟಿಯನ್ನು ಕುರಿತು ಆಳವಾದ ಅಧ್ಯಯನವಿದೆ. ಬೇಂದ್ರೆ ಅವರ ಸಾಹಿತ್ಯವನ್ನು ಗ್ರಹಿಸುವ ಮುನ್ನ ಸಾಹಿತ್ಯದ ಸೂಕ್ಷ್ಮತೆಗಳನ್ನು ಬಿಡಿಸುವ 'ದತ್ತವಾಣಿ' ಕೃತಿಯು ಕನ್ನಡ ಸಾಹಿತ್ಯದಲ್ಲಿ ಹೊಸ ಓದುಗಳನ್ನು ಒದಗಿಸಿದ ಕೃತಿಯಾಗಿ ನಿಲ್ಲುತ್ತದೆ. ಆತ್ಮ ಹಾಗೂ ಪರಮಾತ್ಮನ ನಡುವಿನ ಗ್ರಹಿಕೆಯಲ್ಲಿ ಕಾವ್ಯ ಸೃಷ್ಟಿಯಾಗಿ ಸಹೃದಯನಲ್ಲಿ ನೆಲೆಗೊಳ್ಳುವ ಆಧ್ಯಾತ್ಮ ಚಿಂತನೆಯನ್ನು ಗಮನಿಸಬಹುದು.

ದೇಶಪಾಂಡೆ ಎಸ್. ಎಲ್ ಅವರ 'ಬೇಂದ್ರೆ ಶರೀಫರ ಕಾವ್ಯಯಾನ' ಎಂಬ ಕೃತಿಯು ಸಲ್ಲಾಪ ಎಂಬ ಬ್ಲಾಗ್ ಬರಹದ ಸಂಗ್ರಹವಾಗಿದೆ. ಇಲ್ಲಿ ಆಧ್ಯಾತ್ಮ ಚಿಂತನೆಯನ್ನು ವಿಶೇಷವಾಗಿಯೇನು ಗ್ರಹಿಸಿಲ್ಲ. ಕೆಲವು ಅನುಭಾವದ ತತ್ವವನ್ನು ಒಳಗೊಂಡ ಕವಿತೆಗಳನ್ನು ಅರ್ಥಪಡಿಸಿದ್ದಾರೆ. ಈ ಅರ್ಥಗ್ರಹಿಕೆಗಳು ಅಧ್ಯಯನ ಫಲಗಳಾಗಿವೆ. ಬೇರೆ ಬೇರೆ ವಿಮರ್ಶಕರ ಅಭಿಪ್ರಾಯಗಳೇ ದೇಶಪಾಂಡೆಯವರಲ್ಲಿ ಅತ್ಯಂತ ಸರಳವಾಗಿ ಮೂಡಿವೆ. ಇವರ ಸರಳವಾದ ಅರ್ಥಗ್ರಹಿಕೆಯಲ್ಲಿ ಉಂಟಾಗಿರುವ ದೋಷಗಳನ್ನು ಆಯಾ ಕವಿತೆಗಳ ತೌಲನಿಕ ಅಧ್ಯಯನದಲ್ಲಿ ಗ್ರಹಿಸಿದ್ದೇನೆ.

ನರಸಿಂಹಮೂರ್ತಿ ಹೂವಿನಹಳ್ಳಿ ಅವರ 'ಬೇಂದ್ರೆ ಮತ್ತು ಕಂಬಾರರ ಕಾವ್ಯದಲ್ಲಿ ಪುರಾಣಪ್ರಜ್ಞೆ ಮತ್ತು ಸಮಕಾಲೀನತೆ' ಎಂಬ ಸಂಶೋಧನಾ ಪ್ರಬಂಧವು ಪುರಾಣವನ್ನು ಸಮಕಾಲೀನವಾಗಿ ಅರ್ಥೈಸುವ ಕೃತಿಯಾಗಿದೆ. ಪುರಾಣದ ಅಧ್ಯಯನವನ್ನು ಸಮಕಾಲೀನ ಕವಿಗಳು ಗ್ರಹಿಸುವ ರೀತಿ, ಆಧ್ಯಾತ್ಮ ಚಿಂತನೆಯ ಒಳನೋಟಗಳನ್ನು ಅತ್ಯಂತ ಶಾಸ್ತ್ರೀಯವಾಗಿ ಗ್ರಹಿಸಿದ್ದಾರೆ. ಬೇಂದ್ರೆ ಅವರ ಕಾವ್ಯವನ್ನು ಕುರಿತ ಇವರ ಚಿಂತನೆಗಳು ಸಂಸ್ಕೃತಿಯ ಹುಡುಕಾಟ, ಮಾತೃನೆಲೆಯಲ್ಲಿ ಭಾರತೀಯ ಚಿಂತನೆ, ಪುರಾಣದ ಪಾತ್ರಗಳು ವಾಸ್ತವಕ್ಕೆ ಹೊಂದುವ ರೀತಿಗಳನ್ನು ಮೊದಲಾದ ಅಂಶಗಳನ್ನು ಒಳಗೊಂಡಿವೆ.

ವಸಾಹತುಶಾಹಿಯ ಆಗಮನದಿಂದ ಸ್ವಾತಂತ್ರ್ಯೋತ್ತರ ಭಾರತದಲ್ಲಿ ಬದಲಾಗುತ್ತಿರುವ ಮೌಲ್ಯಗಳನ್ನು ಗುರುತಿಸಿದ್ದಾರೆ. ಕಾಮ-ಪ್ರೇಮವು ತನ್ನ ಪವಿತ್ರತೆಯನ್ನು ಕಳೆದುಕೊಳ್ಳುವುದರ ಜೊತೆಗೆ ಬೇರೊಂದು ದಾರಿ ಹಿಡಿಯುತ್ತಿರುವುದನ್ನು ಹೇಳಬಯಸಿದ್ದಾರೆ. ಶ್ರೀರಾಮನ

> ಪತ್ನಿಯ ವಿರಹದ ನಡುವೆ ಅಹಲ್ಯೆಯ ವಿರಹದ ಮಸೆದಾಟ ನಡೆಯುತ್ತಿರುವುದನ್ನು ತಿಳಿಸುತ್ತಾ, ಪ್ರೇಮ–ಕಾಮಗಳು ಸನ್ಮಾರ್ಗದತ್ತ ನಡೆಯಬೇಕೇ ವಿನಃ ಕಲುಷಿತಗೊಳ್ಳಬಾರದು, ಅದು ತನ್ನ ಸಂಸ್ಕೃತಿಯ ಮೌಲ್ಯಗಳನ್ನು ಉಳಿಸಿಕೊಂಡು ಹೋಗಬೇಕೇ ವಿನಃ ಕಾಮದ ಬಯಕೆಗಾಗಿ ಬೇರೊಬ್ಬನ ಜೊತೆ ಸರಸ ವಿರಸಗಳನ್ನು ಹಂಚಿಕೊಳ್ಳುವ ಕ್ರಿಯೆಯನ್ನು ಖಂಡಿಸುತ್ತಾರೆ [೨೫]

ಹೀಗೆ ವಸಾಹತುಶಾಹಿಯು ತಂದ ಆಧುನಿಕ ಸಂಸ್ಕೃತಿಯ ಪಲ್ಲಟಗಳನ್ನು ನಮ್ಮ ಪುರಾಣದ ಪಾತ್ರಗಳು ಪ್ರತಿನಿಧಿಸುತ್ತಾ ಅರ್ಥೈಸಿವೆ. ಭಾರತೀಯ ಸಂಸ್ಕೃತಿಯನ್ನು ಅತ್ಯಂತ ವೈಚಾರಿಕವಾಗಿ ಪ್ರತಿಪಾದಿಸಿದ ಬೇಂದ್ರೆ ಅವರ ಸಾಹಿತ್ಯ ಚಿಂತನೆಯು ಇಂತಹ ಅಧ್ಯಯನಗಳ ಮೂಲಕ ಬೆಳಕು ಕಾಣುತ್ತದೆ. ಈ ಆಧುನಿಕ ಕಾಲದಲ್ಲಿ ಯಾವುದೇ ಮತ–ಧರ್ಮದ, ಲೌಕಿಕ ವಿಚಾರಗಳಿಗೆ ಒಳಗಾಗದೆ ಪುರಾಣ ಕೃತಿಗಳು ಸ್ವರೂಪಗೊಂಡಿವೆ. ಈ ಆಧುನಿಕ ಪುರಾಣಗಳಲ್ಲಿ ಮನುಷ್ಯಕ್ರಿಯೆ, ಸೌಂದರ್ಯಪ್ರಿಯತೆ, ನಿಸರ್ಗದ ತಾತ್ವಿಕತೆ, ಮಾನವ ಬದುಕಿನ ಪಲ್ಲಟಗಳು, ವಾಸ್ತವ ಬದುಕಿನ ಹಂಬಲಗಳು, ರಾಷ್ಟ್ರಪ್ರಜ್ಞೆ ಇವೇ ಮೊದಲಾದ ಮನುಷ್ಯ ಬದುಕಿನ ವಿವರಗಳನ್ನು ದಾಖಲಿಸಿರುವುದನ್ನು ಕಾಣಬಹುದು. ಆಧುನಿಕ ಸಾಹಿತ್ಯ ರಚನಾಕಾರರು ಪುರಾಣಗಳಿಂದ ಪ್ರೇರಣೆ ಪಡೆದು ಪುರಾಣ ಕಾವ್ಯಗಳಲ್ಲಿ ಜೀವನದ ವಿವಿಧ ಮುಖಗಳನ್ನು ತಮ್ಮ ಕಾವ್ಯಗಳಲ್ಲಿ ಚಿತ್ರಿಸಿದ್ದಾರೆ. ಅಂಥ ಕವಿಗಳಲ್ಲಿ ಬೇಂದ್ರೆ, ಕುವೆಂಪು, ಪು.ತಿ.ನ., ಅಡಿಗ, ಮುಧುರಚೆನ್ನ, ಚಂದ್ರಶೇಖರ ಕಂಬಾರ, ಸು. ರಂ. ಎಕ್ಕುಂಡಿ, ಎಚ್. ಎಸ್. ಶಿವಪ್ರಕಾಶ್ ಮೊದಲಾದವರನ್ನು ಪ್ರಮುಖವಾಗಿ ಗಮನಿಸಬಹುದು.

'ರಮಣ ಹೃದಯ' ಈ ಕೃತಿಯು ಟಿ. ಎನ್. ವಾಸುದೇವಮೂರ್ತಿ ಅವರು ಬೇಂದ್ರೆ ಕಾವ್ಯದಲ್ಲಿ ಗ್ರಹಿಸಿದ ಅನುಭಾವ ಮೀಮಾಂಸೆಯಾಗಿ ರಚಿಸಿದ್ದಾರೆ. ಶ್ರೀರಮಣರನ್ನು ಅಧ್ಯಯನ ಮಾಡಲು ಬೇಂದ್ರೆ ಅವರ ಕಾವ್ಯ ಎಷ್ಟೆಲ್ಲಾ ಸಹಕಾರಿಯಾಗಬಲ್ಲದು ಎಂಬ ತತ್ವ ಚಿಂತನೆ ಇಲ್ಲಿದೆ. ರಮಣರ ಚಿಂತನೆಗಳನ್ನು ಆಂಧ್ರಪ್ರದೇಶದ ಕಾವ್ಯಕಂಠ ಗಣಪತಿ ಮುನಿ ಅವರು ಅದ್ವೈತ ವೇದಾಂತದಲ್ಲಿ ಸಂಗ್ರಹಿಸಿದ ಬಗೆಯನ್ನು ಬೇಂದ್ರೆ ಅವರು ಭಾವಗ್ರಹಣ ಮಾಡಿದ್ದಾರೆ. ಈ ಭಾವಗ್ರಹಣದ ಆಧ್ಯಾತ್ಮ ಚಿಂತನೆಗಳ ಮೂಲಕ ರಮಣಮಹರ್ಷಿಗಳ ಚಿಂತನೆಗಳನ್ನು ಸೂಕ್ಷ್ಮವಾಗಿ ಗ್ರಹಿಸಲು ಅರ್ಥಪೂರ್ಣ ಚಿಂತನಾ ಕೃತಿ ಇದಾಗಿದೆ. ಇಲ್ಲಿ ನಲವತ್ತೆರಡು ಪದ್ಯಗಳ ಗ್ರಹಿಕೆ ಇದೆ. ಪ್ರತಿಪದ್ಯದ ವಿಸ್ತಾರ ಚಿಂತನೆಗಳ ಮೂಲಕ ಕೊನೆಯಲ್ಲಿ ರಮಣರೊಂದಿಗೆ ಪ್ರಶ್ನೋತ್ತರ ಚರ್ಚೆಯೂ ವಿಷಯವನ್ನು ಇನ್ನೂ ವಿಸ್ತಾರವಾಗಿ ಗ್ರಹಿಸಲು ಸಹಕಾರಿಯಾಗುತ್ತದೆ.

> ಶ್ರೀರಮಣರಿಗೆ ಪರಂಪರೆಯೊಂದಿಗೆ ಯಾವುದೇ ಸಂಬಂಧ ಸೂತಕ ಇರದ ಕಾರಣ ತಮ್ಮ ಅನುಭವವನ್ನು ಸ್ವತಂತ್ರವಾಗಿ ನಿರ್ಭಾವುಕವಾಗಿ ನಿರ್ವಚಿಸಲು ಅವರಿಗೆ ಸಾಧ್ಯವಾಯಿತು. ಇದನ್ನೇ ಅಲ್ಲಮ 'ಭಾವದಗ್ಧ ಸ್ಥಿತಿ' ಎಂದು ಕರೆದುದೆನಿಸುತ್ತದೆ. ಪರಂಪರೆಯೊಂದಿಗೆ ರಾಗದ್ವೇಷಗಳನ್ನೇ ಹೊಂದಿರದ ರಮಣರ ಈ ಭಾವದಗ್ಧ ನಿಲುವು ತನ್ನ ಅಧ್ಯಾತ್ಮ ಚಿಂತನೆಗೆ

ತಕ್ಕ ನೆಲವಾಗಬಹುದು, ತನ್ನ ಅನುಭಾವ ಮೀಮಾಂಸೆಯನ್ನು ಬೆಳಗಿಸಬಹುದು ಎಂಬ ಭರವಸೆಯಿಂದ ಬೇಂದ್ರೆ 'ರಮಣ ಹೃದಯ'ವನ್ನು ಆಯ್ಕೆಮಾಡಿಕೊಂಡರು.೩೬

ವಾಸುದೇವಮೂರ್ತಿ ಟಿ. ಎನ್ ಅವರು ತಮ್ಮ ಸಂಶೋಧನಾ ಪ್ರಬಂಧದಲ್ಲಿ ಅಲ್ಲಮಪ್ರಭು ಮತ್ತು ಇಂದಿನ ಕನ್ನಡ ಕಾವ್ಯ ಕುರಿತು ಚರ್ಚಿಸುವಾಗ ಬೇಂದ್ರೆಯವರ ಕಾವ್ಯವನ್ನು ಕುರಿತು ಅಧ್ಯಯನ ಮಾಡಿದ್ದಾರೆ. ಈ ಅಧ್ಯಯನದಲ್ಲಿ ಅನುಭಾವ ನೆಲೆಯನ್ನು ಬೇಂದ್ರೆ ಅವರು ಗ್ರಹಿಸುವ ಅಷ್ಟೇ ಸಹಜವಾಗಿ ಒಂದು ಜನಪದ ಹಾಡಿನಂತೆ ನಿರೂಪಿಸುವ ಕ್ರಮವನ್ನು ಕುರಿತು ಚರ್ಚಿಸಿದ್ದಾರೆ. ಒಂದು ಕವಿತೆಯ ಹಿಂದೆ ಧ್ವನಿಸುವ ಪ್ರಭಾವಗಳು ಓದಿನ ವಿಸ್ತಾರವನ್ನು ತಿಳಿಸಬಲ್ಲವು ಎಂಬುದನ್ನು ಅರ್ಥೈಸಿದ್ದಾರೆ. ಬೇಂದ್ರೆ ಅವರ ಅಧ್ಯಯನದ ಹಿಂದೆ ಶಂಕರಾಚಾರ್ಯ, ರಾಮಕೃಷ್ಣರು, ಅರವಿಂದರು ಜೊತೆಗೆ ನೀಷೆಯಂತಹ ಪಾಶ್ಚಾತ್ಯ ಚಿಂತಕನ ಆಧ್ಯಾತ್ಮ ಸಾರವಿಚಾರವೂ ಪ್ರಭಾವಿಸಿದೆ. ಆದ್ದರಿಂದಲೇ ಪ್ರಸ್ತುತ ಕೂಡ 'ಜೋಗಿ', 'ನಾಕುತಂತಿ' ಮೊದಲಾದ ಕವಿತೆಗಳು ಹೊಸ ಓದುಗಳನ್ನು ಪಡೆಯುತ್ತಿವೆ. ಬೇಂದ್ರೆ ಕಾವ್ಯವನ್ನು ಸಮಗ್ರೀಕರಿಸಿ ನೋಡುವ ಹೊಳಹುವಿನಲ್ಲಿ ಬಿಡಿ ಬಿಡಿಯಾಗಿ ಗ್ರಹಿಕೆಗೆ ದಕ್ಕದು. ಬೇಂದ್ರೆ ಅವರದು ಒಂದೇ ಕಾವ್ಯ ಆದರೆ ರಸಸ್ವಾದನೆ ಅಪರಿಮಿತ ಎಂಬ ಅಲೌಕಿಕ ಚಿಂತನೆಗೆ, ಆತ್ಮಕಥನದ ಕುತೂಹಲತೆಗೆ ಹೊಸ ವ್ಯಾಖ್ಯಾನ ನೀಡುತ್ತಾರೆ.

೫. ೬. ೧. ದರ್ಶನದ ಕಾರ್ಯದಲ್ಲಿ ಅಧ್ಯಯನಕಾರರು

ವಾಮನ ಬೇಂದ್ರೆ, ಕೀರ್ತಿನಾಥ ಕುರ್ತಕೋಟಿ., ಆಮೂರ ಜಿ. ಎಸ್., ಕುಲಕರ್ಣಿ ಜಿ. ವಿ., ಶರ್ಮಾ ಕೆ. ಎಸ್ (ಕುವಲಯ)., ಕೃಷ್ಣಪ್ಪ ಜಿ. ಮೊದಲಾದ ಅಧ್ಯಯನಕಾರರು ಉದ್ದೇಶವಾಗಿಯೇ ಬೇಂದ್ರೆ ಸಾಹಿತ್ಯ ಅಧ್ಯಯನಕ್ಕಾಗಿ ತಮ್ಮ ಜೀವನ ವಿನಿಯೋಗಿಸಿದವರು ಎನ್ನಬಹುದು. ಈ ಎಲ್ಲಾ ಅಧ್ಯಯನಕಾರರ ಗ್ರಹಿಕೆಯ ನೋಟ, ತಾತ್ವಿಕ ಸ್ವರೂಪ ಒಂದೇ ಮಾದರಿಯದು. ಕುರ್ತಕೋಟಿ, ಆಮೂರ, ಕೃಷ್ಣಪ್ಪ ಈ ಮೂವರ ಅಧ್ಯಯನದಲ್ಲಿ ವಿಮರ್ಶಾತ್ಮಕ ನೋಟಗಳು ಅವರದೇ ಆದ ಹಾದಿಯಲ್ಲಿ ನಿರೂಪಿಸಲ್ಪಟ್ಟವು. ಆದರೆ ವಾಮನ ಬೇಂದ್ರೆ, ಕುಲಕರ್ಣಿ, ಶರ್ಮಾ ಇವರ ಅಧ್ಯಯನ ಮಾರ್ಗ ಸಹೃದಯರ ಓದುವಿಕೆಗೆ ಬೆಂಬಲಿಸುವ ಹಾದಿಯಲ್ಲಿ ನಿರೂಪಿತವಾದುದು. ಆ ಕಾರಣಕ್ಕಾಗಿ ಇವರು ಮರು ಮುದ್ರಣಗಳಿಗೆ ಮತ್ತೆ ಮುನ್ನುಡಿ, ಪ್ರಾಸ್ತಾವಿಕ ನುಡಿಗಳು, ಸಂಪಾದಕೀಯವನ್ನು ವಿಶೇಷವಾಗಿ ಹಾಗೂ ವಿಸ್ತಾರವಾಗಿ ರಚಿಸಿದ್ದಾರೆ. ಪ್ರತಿಯೊಂದು ಕೃತಿಯನ್ನು ಒಂದು ಕಥಾ ಮಾದರಿಯಲ್ಲಿ ಪ್ರವೇಶ ಮಾಡುವ ಕ್ರಮವನ್ನು ವಿಮರ್ಶೆಯ ಹಾದಿಯಂತೆ ಸ್ವರೂಪಗೊಳಿಸಿದವರು.

ವಾಮನ ಬೇಂದ್ರೆ ಅವರು ಬೇಂದ್ರೆ ಅವರ ಮಗನಾಗಿ ಅವರ ಒಡನಾಟದಿಂದ ದೊರೆತ ಅಂಶಗಳನ್ನು ಬೇಂದ್ರೆ ಅವರ ಸಮಗ್ರ ಸಾಹಿತ್ಯದ ಮರುಮುದ್ರಣಗಳಿಗೆ 'ಔದುಂಬರ ಗಾಥೆ' ಸಮಗ್ರ ಸಂಪುಟಗಳ ಸಂಪಾದಕೀಯ ಕಾರ್ಯದಲ್ಲಿ ಪೂರ್ಣವಾಗಿ ಬಳಸಿಕೊಂಡಿದ್ದಾರೆ. 'ಬೇಂದ್ರೆ ಕಾವ್ಯ ಲೋಲಕ', 'ದ. ರಾ. ಬೇಂದ್ರೆಯವರ ಜೀವನ ಪರಿಚಯ', 'ಕುಣಿಯೋಣ ಬಾರ',

‘ಅಂಬಿಕಾತನಯದತ್ತ ಹಾಡ ಬೆಳದಿಂಗಳ ನೋಡ’, ನ್ಯೋಡ್ಯಾನ ದಶಾವತಾರ’, ‘ಅಂಬಿಕಾತನಯ ಹಾಡ್ಯಾನ’, ‘ನಾಳಿನ ಕನಸು’, ‘ಚೈತನ್ಯದ ಪೂಜೆ’, ಔದುಂಬರ ಗಾಥೆ ಸಂಪುಟಗಳ ನಮನ–ದರ್ಶನ–ವಿಕಾಸ–ವಿನ್ಯಾಸ–ತತ್ತ್ವ–ಸಿದ್ಧಾಂತ ಹಾಗೇಯೇ ಒಟ್ಟು ೧೬ ಸಂಪುಟಗಳಲ್ಲಿ ಸಮಗ್ರ ಸಾಹಿತ್ಯವನ್ನು ಸಂಪಾದಿಸಿದ್ದಾರೆ. ಎಲ್ಲಾ ಕೃತಿಗಳಿಗೂ ವಿಶಾಲವಾದ ಸಂಪಾದಕೀಯವನ್ನು ವಿಷಯ ವಿಸ್ತರಣೆಯ ದೃಷ್ಟಿಯಿಂದ ರಚಿಸಿದ್ದಾರೆ. ಈ ಕಾರ್ಯದಲ್ಲಿ ಕೆ. ಎಸ್. ಶರ್ಮಾ ಅವರು ಕೂಡ ‘ಪರೋಗಾಮಿ ಸಾಹಿತ್ಯ ಪ್ರಕಾಶನ’ದ ಮೂಲಕ ಕೈ ಜೋಡಿಸಿದ್ದಾರೆ. ಇವರು ಬೇಂದ್ರೆ ಅವರನ್ನು ಕುರಿತು ಬರೆದ ಪ್ರಕಾಶನದ ನುಡಿಗಳು, ಸಂಪಾದಕೀಯಗಳನ್ನೆಲ್ಲಾ ಸೇರಿಸಿ ‘ಕುವಲಯ ಕಂಡ ಅಂದತ್ತ’ ಎಂಬುದಾಗಿ ಕೆ. ಎಸ್. ಶರ್ಮಾ ಅವರ ‘ಕುವಲಯ ಬೆಳಗು’ ಎಂಬ ಸಮಗ್ರ ಸಾಹಿತ್ಯ ದರ್ಶನದ ಐದನೇ ಸಂಪುಟವಾಗಿ ಪ್ರಕಟಿಸಿದ್ದಾರೆ. ಈ ಕೃತಿಯ ಮೂಲಕ ಬೇಂದ್ರೆ ಅವರ ಸಾಹಿತ್ಯ ಕುರಿತು ಕೆ. ಎಸ್. ಶರ್ಮಾ ಅವರ ಅಧ್ಯಯನದ ಪೂರ್ಣ ಸ್ವರೂಪವನ್ನು ಗ್ರಹಿಸಬಹುದು.

ಬೇಂದ್ರೆ ಅವರನ್ನು ತನ್ನ ತಂದೆಯಾಗಿ ಯಾವುದೇ ಚರಿತ್ರೆಯನ್ನು ವಾಮನಬೇಂದ್ರೆ ಅವರು ದಾಖಲಿಸುವುದಿಲ್ಲ. ತಾನು ಕಂಡ ಅಂಶಗಳ ಜೊತೆಗೆ ಒಬ್ಬ ಕವಿಯ ಸಾಹಿತ್ಯ ಕುರಿತ ತನ್ನ ಅಭಿಪ್ರಾಯದಂತೆ ತಿಳಿಸುವುದನ್ನು ಕಾಣಬಹುದು. ಇಲ್ಲಿ ವಿಮರ್ಶೆಗಿಂತ ‘ಪರಿಚಯಾತ್ಮಕ ಮಾದರಿ’ಯ ಅನುಸರಣೆಯು ಕಂಡುಬರುತ್ತದೆ. ಇವರ ಸಂಪಾದನಾ ಕಾರ್ಯವೇ ಅತ್ಯಂತ ಮಹತ್ವವಾದುದು. ಓದುಗರಿಗೆ ಮಾಹಿತಿಯನ್ನು ವಿಸ್ತಾರವಾಗಿ ನೀಡುತ್ತಾರೆ. ವಿಮರ್ಶಾ ದೃಷ್ಟಿಯಿಂದ ಈ ಅರ್ಥದ ಗ್ರಹಿಕೆ ಸೀಮಿತ ಚಿಂತನೆಗೂ ದಾರಿಯುಂಟುಮಾಡಬಹುದು. ಆದರೆ ಧಾರವಾಡ ಪರಿಸರದ ಕೆಲವು ಶಬ್ದಗಳಿಗೆ ಇವರ ಪರಿಚಯಾತ್ಮಕ ಮಾದರಿಯು ಅಧ್ಯಯನಗಳಿಗೆ ಅನುಕೂಲವುಂಟು ಮಾಡುತ್ತದೆ.

ಶರ್ಮಾ ಕೆ.ಎಸ್. ಅವರು ‘ಕುವಲಯ’ ಎಂಬ ಹೆಸರಿನಲ್ಲಿ ಸಾವಿರದ ಏಳುನೂರ ಇಪ್ಪತ್ತೆಂಟು ಪುಟದಷ್ಟು ವಿಸ್ತಾರವಾಗಿ ಬೇಂದ್ರೆ ಸಾಹಿತ್ಯ ಕುರಿತು ಬರೆದಿದ್ದಾರೆ. ಇದರಲ್ಲಿ ಒಟ್ಟು ಹತ್ತು ಭಾಗಗಳಾಗಿ ವಿಂಗಡಿಸಿದ್ದಾರೆ. ತಾವು ‘ಪುರೋಗಾಮಿ ಸಾಹಿತ್ಯ ಪ್ರಕಾಶನ’ದ ಮೂಲಕ ಬೇಂದ್ರೆ ಅವರ ಸಾಹಿತ್ಯವನ್ನು ಪ್ರಕಟಿಸುವಾಗ ಬರೆದ ಸಂಪಾದಕೀಯಗಳ ಸಂಗ್ರಹವಿಲ್ಲಿದೆ. ಈ ಸಂಪಾದಕೀಯ ನುಡಿಗಳಲ್ಲಿ ಬೇಂದ್ರೆ ಅವರ ಸಾಹಿತ್ಯ ಕುರಿತು ತಾವು ನಡೆಸಿದ ಅಧ್ಯಯನಗಳ ವಿಮರ್ಶೆಯನ್ನು ವಿಸ್ತಾರವಾಗಿ ಗ್ರಹಿಸಿದ್ದಾರೆ. ಬೇಂದ್ರೆ ಅವರ ಸಮಗ್ರ ಸಾಹಿತ್ಯ ಕುರಿತು ಇವರ ಅವಲೋಕನವಿದೆ.

> ಬೇಂದ್ರೆಯವರ ಸಮಗ್ರ ಸಾಹಿತ್ಯದ ರಸಾಸ್ವಾದನೆಗೆ ಅನುವಾಗುವಂತೆ ಸಹೃದಯ ರಸ ಸಮೀಕ್ಷೆ ಮಾತ್ರ ಅವರ ಅಗಾಧ ಸಾಹಿತ್ಯದ ಅಂತರಾರ್ಥದ ಮರ್ಮವನ್ನು ಬೇಧಿಸಲು ಸಹಕಾರಿಯಾಗುತ್ತದೆ ಎಂದು ಹೇಳಬೇಕಾಗುತ್ತದೆ. ಡಾ. ವಾಮನಬೇಂದ್ರೆ ಅವರು ಬೇಂದ್ರೆಯವರ ಪ್ರತಿಯೊಂದು ಕೃತಿಗೂ ಬರೆದಿರುವ ‘ಸಂಪಾದಕರ ಭೂಮಿಕೆ’ಗಳು ಈ

> ದಿಶೆಯಲ್ಲಿ ರಸಿಕರ ಕಣ್ತೆರಿಸುವಂತಿವೆ. ಅದೇ ರೀತಿಯಲ್ಲಿ ಬೇಂದ್ರೆಯವರ ಸಮಗ್ರ ಸಾಹಿತ್ಯದ ಪ್ರಕಾಶನದ ಹೊಣೆಯನ್ನು ಹೊತ್ತ ನಾನು, ನನ್ನ 'ಪ್ರಕಾಶಕರ ನುಡಿ'ಗಳ ಮೂಲಕ, ವಾಮನ ಬೇಂದ್ರೆಯವರ 'ಭೂಮಿಕೆ'ಯ ಕೃಷಿಗೆ, ಸಾಥು ನೀಡುವ ಕಾರ್ಯ ಮಾಡಿದ್ದೇನೆ ಎಂಬುದು ನನ್ನ ಭಾವನೆ.[೩೭]

ಈ ರೀತಿಯಲ್ಲಿ ಬೇಂದ್ರೆ ಅವರ ಸಾಹಿತ್ಯವನ್ನು ಪ್ರತಿ 'ಪ್ರಕಟಣಾ ಹಂತ'ದಲ್ಲಿಯೂ ವಿಶ್ಲೇಷಣೆ ನಡೆಸಿರುವುದನ್ನು ಗಮನಿಸಬಹುದು.

ಕುಲಕರ್ಣಿ ಜಿ.ವಿ. ಅವರ 'ನಾ ಕಂಡ ಬೇಂದ್ರೆ– ಜೀವನ ಮತ್ತು ಸಾಹಿತ್ಯ', 'ಬೇಂದ್ರೆ ಒಳನೋಟ', 'ಬೇಂದ್ರೆ ಸಮಗ್ರ ಕಾವ್ಯ ದರ್ಶನ' ಈ ಕೃತಿಗಳ ಮೂಲಕ ಬೇಂದ್ರೆ ಸಾಹಿತ್ಯದ ವಿವಿಧ ಅಧ್ಯಯನ ಕ್ರಮಗಳನ್ನು ಪರಿಚಯಿಸಿದ್ದಾರೆ. ಬೇಂದ್ರೆಯೊಂದಿಗೆ ತಮ್ಮ ಒಡನಾಟದ ಪರಿಚಯುವನ್ನು ಅವರ ಸಾಹಿತ್ಯ ಜೀವನವನ್ನು ಅಧ್ಯಯುನವಾಡಿದ್ದಾರೆ. ಬೇಂದ್ರೆ ಒಳನೋಟವೆಂಬುದು ವಿಶಿಷ್ಟವಾದ ಕೃತಿಯಾಗಿದೆ. ಇದರಲ್ಲಿ ಮೂರು ವಿಭಾಗಗಳಿದ್ದು ಬೇಂದ್ರೆ ಸಾಹಿತ್ಯವನ್ನು ಅಧ್ಯಯನ ಮಾಡಿದ ವಿವಿಧ ಅಧ್ಯಯನಕಾರರ ಸಂದರ್ಶನವಿದೆ. 'ಎನ್ಕೆ' ಕುಲಕರ್ಣಿ, ವೆಂಕಟೇಶ ಲಕ್ಷ್ಮಣ ಜೋಷಿ, ಆಮೂರ ಜಿ. ಎಸ್., ಶಂಕರ ಮೊಕಾಶಿ ಪುಣೇಕರ, ಕೀರ್ತಿನಾಥ ಕುರ್ತಕೋಟಿ, ರುಕ್ಮಿಣಿ ಪರ್ವತಿ, ವಸಂತ ದಿವಾಣಜಿ, ವಾಮನ ಬೇಂದ್ರೆ, ಬನ್ನಂಜೆ ಗೋವಿಂದಾಚಾರ್ಯರು, ಸುರೇಶ ಕುಲಕರ್ಣಿ, ಶರ್ಮಾ ಕೆ. ಎಸ್ ಇವರೊಂದಿಗೆ ಬೇಂದ್ರೆ ಕುರಿತು ಸಂದರ್ಶನ ಮಾಡಿದ್ದಾರೆ. ಈ ಸಂದರ್ಶನಗಳು ಅಂದಿನ ಪರಿಸರ, ಚಿಂತನೆ, ಸಹಭಾಗಿತ್ವ ಒಡನಾಟಗಳು ಹಾಗೂ ಇವುಗಳೊಂದಿಗೆ ಬೇಂದ್ರೆ ಅವರ ಸಾಹಿತ್ಯವನ್ನು ಕುರಿತು ತಿಳಿಸುತ್ತವೆ. ಈ ಸಂವಾದದಲ್ಲಿ ವಿಮರ್ಶೆಯ ಸ್ವರೂಪವು ಸಹೃದಯ ಮಾದರಿ ಇದ್ದು ಬೇರೆ ಬೇರೆ ಹೊಸ ಓದುಗಳನ್ನು ದೊರಕಿಸಿಕೊಡುತ್ತದೆ. ಉದಾಹರಣೆಗೆ ಜೀವಿ ಅವರು ಬನ್ನಂಜೆ ಅವರನ್ನು ಸಂದರ್ಶನ ಮಾಡುವಾಗ ಬನ್ನಂಜೆ ಅವರ ಮಾತು ಈ ರೀತಿಯಲ್ಲಿದೆ

> ಹಿಂದೆ ನಾನು 'ಪ್ರಕಾಶ' ಎಂಬ ಪತ್ರಿಕೆಯ ವಿಶೇಷಾಂಕವನ್ನು ಸಂಪಾದಿಸಿದ್ದೆ. ಅದಕ್ಕೆ ಒಂದು ಪದ್ಯ ಬರೆಯಲು ಬೇಂದ್ರೆ ಅವರನ್ನು ವಿನಂತಿಸಿಕೊಂಡೆ. ಆಗ ಬೇಂದ್ರೆ ಅವರು 'ನೋ' ಎಂಬ ಪದ್ಯ ಕಳಿಸಿದ್ದರು. ನಂತರ ಅದು 'ನಾಕುತಂತಿ' ಸಂಗ್ರಹದಲ್ಲಿ ಪ್ರಕಟವಾಯಿತು. ಇಂಥ ಕವಿತಗಳ ಅರ್ಥ ಹೇಗೆ ಮಾಡಬೇಕು ಎಂದು ಕೇಳಿದಾಗ ಬೇಂದ್ರೆ ಅವರು ಉತ್ತರಿಸಿದಂತೆ, 'ಕ್ರಾಸ್ ವರ್ಡ್‌ನಲ್ಲಿ ಸಿದ್ಧ ಶಬ್ದಗಳಿರುತ್ತವೆ. ನನ್ನ ಕವನಗಳಿಗೆ ಸಿದ್ಧ ಅರ್ಥಗಳಿಲ್ಲ. ನಿಮಗೆ ಹೊಳೆದದ್ದೇ ಅದರ ಅರ್ಥ' ಎಂದು.[೩೮]

ಹೀಗೆ ಸಾಹಿತ್ಯ, ಬದುಕು ಜೊತೆ ಜೊತೆಯಾಗಿಯೇ ಸಾಗುವ ನೆನೆಪುಗಳನ್ನು ಇಲ್ಲಿ ಚರ್ಚಿಸುವುದನ್ನು ಕಾಣಬಹುದು.

'ದರ್ಶನ ಭಾಗ'ದಲ್ಲಿ ಕೆಲವು ಕವಿತೆಗಳ ಭಾವ ಸಂದರ್ಭವನ್ನು ವಿಮರ್ಶೆ ಮಾಡಿದ್ದಾರೆ. ಕವಿತೆಯು ಕಾರಣವಿಲ್ಲದೆ ಸೃಷ್ಟಿಯಾಗದೆಂಬ ಇವರ ವಿಮರ್ಶಾ ಮಾದರಿಯು ಸಹೃದಯ ವಿಮರ್ಶೆಯಾಗಿ ಗ್ರಹಿಸಬಹುದು.

> ಬೇಂದ್ರೆಯವರು ಒಂದೊಂದು ಶಬ್ದದಲ್ಲೂ ಅರ್ಥದ ಪದರುಗಳನ್ನು ಬಿಚ್ಚುತ್ತಾ ಹೋಗುತ್ತಾರೆ. ತಮ್ಮ ವಿಫಲ ಅನುವಾದವನ್ನು 'ಬಂಜೆಯ ಹೂ'ವಿಗೆ ಹೋಲಿಸುತ್ತಾರೆ. ಇದು 'ಕಾಯದ' ಹೂ ಅನ್ನುತ್ತಾರೆ. ಇದಕ್ಕಾಗಿ ತಾವು ಕಾಯಬೇಕು ಎಂಬುದು ಒಂದರ್ಥವಾದರೆ ಕಾಯ ಅಂದರೆ=ದೇಹದ ಆತುರದಿಂದ ಬಂದ ಹೂವು, ಹೃದಯ ಕಮಲದಿಂದ ಅರಳಿ ಬಂದ ಹೂ ಅಲ್ಲ ಎಂಬ ಅರ್ಥವಿದೆ. ಅಲ್ಲದೆ, 'ಕಾಯಿ+ಆಗದ' ಎಂಬ ಅರ್ಥವೂ ಕಾಯದ ಹೂವಿಗೆ ಇದೆ. 'ಪೊರೆ ಮಾತ್ರ ದೊರೆತಿದೆ, ಹಾವು ಜಾರಿ ಹೋಗಿದೆ' ಇದೆಂತಹ ಅದ್ಭುತ ಪ್ರತಿಮೆ! ಮೇಲಿನ ಆವರಣವೇ ಪೊರೆ. 'ಅನುವಾದದಲ್ಲಿ ಪೊರೆ ಮಾತ್ರ ಬಂತು, ಮೂಲ ಅರ್ಥ ಹಾವಿನಂತೆ ಜಾರಿ ಹೋಯಿತು' ಎಂಬ ಭಾವವಿದೆ.[೨೬]

ಹೀಗೆ ಕವಿತೆಯು ಪಡೆಯುವ ದ್ವಂದ್ವ ಅರ್ಥಗಳನ್ನು ಅವಲೋಕಿಸುವಾಗ ಪಡೆದುಕೊಳ್ಳಬೇಕಾದ ಎಚ್ಚರಿಕೆಯನ್ನು ಜೀವಿ ಕುಲಕರ್ಣಿ ಅವರು ಸ್ಪಷ್ಟಪಡಿಸಿರುವುದನ್ನು ಕಾಣಬಹುದು.

ಬೇಂದ್ರೆ ಅವರ ಸಮಗ್ರ ಸಾಹಿತ್ಯವನ್ನು ಸಂಪಾದನಾ ಕಾರ್ಯದೊಂದಿಗೆ ವಾಮನ ಬೇಂದ್ರೆ ಅವರು 'ಔದುಂಬರ ಗಾಥೆ' ಎಂಬ ಹೆಸರಿನಲ್ಲಿ ಪ್ರಕಟಿಸಿದರು. ಕಾವ್ಯಭಾಗದ ಆರು ಸಂಪುಟಗಳನ್ನು ಅತ್ಯಂತ ವಿಸ್ತಾರವಾಗಿ ಪರಿಚಯಿಸುವ ಕಾರ್ಯವನ್ನು 'ಬೇಂದ್ರೆ ಸಮಗ್ರ ಕಾವ್ಯದರ್ಶನ' ಎಂಬ ಕೃತಿಯ ಮೂಲಕ ಜೀವಿ ಕುಲಕರ್ಣಿ ಅವರು ಅಧ್ಯಯನ ಮಾಡಿದ್ದಾರೆ. ಇದೊಂದು ಪರಿಚಯ ಮಾದರಿಯ ಕೃತಿಯಾದರೂ ಕೆಲವು ವಿಶೇಷ ಎನಿಸಿದ ಕವಿತೆಗಳ ವಿಮರ್ಶೆ ಮಾಡಿರುವುದನ್ನು ಗಮನಿಸಬಹುದು.

> ಕನಸಿನೊಳಗೊಂದು ಕಣಸು'(ಗರಿ) ಇದೊಂದು ನಾಡ ಭಕ್ತಿ ಗೀತ. 'ಯಾರು ನಿಂದವರಲ್ಲಿ ತಾಯೇ' ಎಂದು ಕೇಳಿದಾಗ ಉತ್ತರವಾಗಿ, 'ಯಾರು ಕೇಳುವರೆನಗೆ, ಯಾಕೆ ತಂದೆ?' ಎನ್ನುತ್ತಾಳೆ. ಈ ಸಂವಾದ ರೋಚಕವಾಗಿ ಮುಂದುವರಿಯುತ್ತದೆ. 'ಬೇಸರದ ದನಿಯೇಕೆ ಹೆಸರ ಹೇಳಲ್ಲ?' ಅಂದರೆ, 'ಹೆಸರಾಗಿಯೂ ಕೂಡ ಹೇಳ ಹೆಸರಿಲ್ಲ' ಎನ್ನುತ್ತಾಳೆ ಕನ್ನಡ ತಾಯಿ ತನ್ನ ಹೀನ ಸ್ಥಿತಿಯನ್ನು ತೋಡಿಕೊಳ್ಳುತ್ತಾಳೆ. ಕೊನೆಗೆ ತರುಣ ಕೇಳುತ್ತಾನೆ, 'ಚಂಡಿ ಚಾಮುಂಡಿ ಪೇಳ್ ಬೇಕಾದುದೇನು?' ಮನ ನಡುಗುತ್ತದೆ. ಎಚ್ಚರಗೊಂಡು ಹೊರಗೆ ನೋಡಿದಾಗ ಬೆಳಗಾಗಿರುತ್ತದೆ. ಕನ್ನಡ ನಾಡಿನ ಸ್ಥಿತಿ–ಗತಿಯ ವರ್ಣನೆ ಇಲ್ಲಿದೆ.[೬೦]

ಹೀಗೆ ಒಂದು ಕವಿತೆಯೊಳಗಿನ ಅರ್ಥವನ್ನು ಅದರ ಧ್ವನಿಭಾವವನ್ನೂ ಅಧ್ಯಯನ ಮಾಡಿದ್ದಾರೆ ಎನ್ನಬಹುದು. ಹಿಂದಿನ ಕವಿಗಳು ನೀಡುವ ಪ್ರತಿಯೊಂದು ಕಾರನಗಳು ಕಾರ್ಯಸ್ಥಿತಿಯನ್ನು ಅತ್ಯಂತ ಸೂಕ್ಷ್ಮವಾಗಿ ಅವಲೋಕಿಸುತ್ತಿದ್ದವು. ಬಿ.ಎಂ.ಶ್ರೀ. ಅವರನ್ನು ಕುರಿತು 'ವಿಷ ನುಂಗೆ ಶ್ರೀ ಕಂಠ, ಬೇರೆ ಭೂಷಣ ಬೇಕೆ?' ಎಂಬ ನುಡಿಯು ಬಿ.ಎಂ.ಶ್ರೀ. ಅವರ ಬದುಕನ್ನು ಪ್ರತಿನಿಧಿಸುವ ಸಾಲಾಗಿದೆ. ಒಂದು ವ್ಯಕ್ತಿತ್ವವನ್ನು ಕೆಲವೇ ಪದಗಳಲ್ಲಿ ಕವಿತ್ವದ ಹಾದಿಯಲ್ಲಿ ನಿರ್ಮಿಸುವ ಚಾತುರ್ಯ ವಿಶೇಷವಾದದು. ಇಂತಹ ಅಂಶಗಳನ್ನು ಜೀವಿ ಅವರು ಅವಲೋಕಿಸಿದ್ದಾರೆ. ವಾಮನಬೇಂದ್ರೆ ಅವರ ಸಮಗ್ರ ಸಂಪಾದನೆಯ ಕಾರ್ಯದಲ್ಲಿ ಬೇಂದ್ರೆ ಅವರ ಕವಿತೆಗಳಿಗೆ ಚಿತ್ರವನ್ನು ರೂಪಿಸಿದವರು ಸುರೇಶ ಕುಲಕರ್ಣಿ. ಇವರು ಬೇಂದ್ರೆ ಅವರ

ಒಡನಾಡಿಗಳು, ಒಂದು ಇತಿಹಾಸವೆಂಬಂತೆ ಬೇಂದ್ರೆ ಅವರನ್ನು ಭಾವ ರೇಖೆಯಲ್ಲಿ ಮೂಡಿಸಿದವರು. ಕಾವ್ಯದ ಸಂದರ್ಭವನ್ನು ಹೇಳುವ ಈ ರೇಖಾಚಿತ್ರಗಳು ಕೂಡ ಒಂದು ರೀತಿಯ ವಿಮರ್ಶೆಗಳೇ ಆಗಿವೆ. ಹೊಸ ರೀತಿಯ ಓದುಗಳನ್ನು ಸೃಷ್ಟಿಸುವ ಕಾರ್ಯವನ್ನು ಈ ಚಿತ್ರಗಳು ಮಾಡುತ್ತವೆ, 'ಭಾವರೇಖೆಯಲ್ಲಿ ಬೇಂದ್ರೆ' ಎಂಬ ಚಿತ್ರಗಳ ಕಿರುಹೊತ್ತಿಗೆಯನ್ನು ತಂದಿದ್ದಾರೆ. ಮನೋಹರ ಗ್ರಂಥಮಾಲಾ ಅವರು ಪ್ರಕಟಿಸಿರುವ ಈ ಕೃತಿಗೆ ಕೀರ್ತಿನಾಥ ಕುರ್ತುಕೋಟಿ ಅವರು ಮುನ್ನುಡಿ ರಚಿಸಿದ್ದಾರೆ. 'ಮನುಷ್ಯನ ದೇಹ ಒಂದು ದೃಶ್ಯವಸ್ತು, ಅದು ಕಣ್ಣಿನ ಬದುಕು. ಅದು ಇಲ್ಲದಾದಾಗ ಆ ದೇಹದ ಭಾವರೇಖೆಗಳು ಉಳಿದು ಬಿಡುತ್ತವೆ.' ಸುರೇಶ ಕುಲಕರ್ಣಿ ಅವರ ಕಾರ್ಯಕ್ಕೆ ಕುರ್ತಕೋಟಿ ಅವರ ಅಭಿಪ್ರಾಯವಿದು. ಚಿತ್ರವೂ ಕೂಡ ಕಾವ್ಯದ ಸ್ವರೂಪವನ್ನು ಹೇಳಬಲ್ಲದು ಕವಿಯ ವ್ಯಕ್ತಿತ್ವವನ್ನು ನಿರೂಪಿಸಬಲ್ಲದು ಎಂಬುದನ್ನು ಈ ಕೃತಿಯಲ್ಲಿ ಅಧ್ಯಯನ ಮಾಡಬಹುದು.

ಕಿ. ರಂ. ನಾಗರಾಜ ಅವರು ಬೇಂದ್ರೆ ಅವರ ಕಾವ್ಯವನ್ನು ಕುರಿತು ಅತ್ಯಂತ ಸಮರ್ಥವಾಗಿ ಮಾತನಾಡಬಲ್ಲ ಪ್ರಾಧ್ಯಾಪಕರಾಗಿದ್ದರು. ಬೇಂದ್ರೆ ಸಾಹಿತ್ಯ ಕುರಿತ ಇವರ ಭಾಷಣಗಳ ಸಂಗ್ರಹವೇ 'ಮತ್ತೆ ಮತ್ತೆ ಬೇಂದ್ರೆ'. ಈ ಕೃತಿಯ ಐದು ಲೇಖನಗಳು ಕೂಡ ಒಂದೇ ನೆಲೆಯ ಗ್ರಹಿಕೆಯಲ್ಲಿ ಗಮನಿಸಬಹುದು. ಒಂದು ಕವಿತೆ ವಿಶ್ವಾತ್ಮಕ ನೆಲೆಯನ್ನು ಪ್ರತಿನಿಧಿಸುವ ಅಂಶಗಳು ಇಲ್ಲಿವೆ. ಬೇಂದ್ರೆ ಅವರು ಕನ್ನಡ ಸಾಹಿತ್ಯದ ಮೂಲಕ ವಿಶ್ವದ ಸಾಹಿತ್ಯವನ್ನು ಸ್ಪರ್ಷಿಸುವ ನೆಲೆಗಳನ್ನು ಕುರಿತು ಚರ್ಚಿಸಿದ್ದಾರೆ. ಒಂದು ಕವಿತೆಯನ್ನು ಓದುವ ಶೈಲಿಯಲ್ಲಿಯೂ ಕವಿತೆಯ ಅರ್ಥ ಗ್ರಹಿಕೆಗಳು ವಿಸ್ತಾರಗೊಳ್ಳುತ್ತವೆ ಎಂಬುದೇ ಕಿ.ರಂ. ನಾಗರಾಜ ಅವರ ಅಭಿಪ್ರಾಯ. ಓ. ಎಲ್ ನಾಗಭೂಷಣ ಸ್ವಾಮಿ ಅವರು 'ಮತ್ತೆ ಮತ್ತೆ ಬೇಂದ್ರೆ' ಕೃತಿಗೆ ಪ್ರಾರಂಭದ ನುಡಿಗಳನ್ನು ಬರೆಯುತ್ತಾ ಈ ರೀತಿ ಹೇಳಿದ್ದಾರೆ.

> ಅವರು ಕವಿತೆಯನ್ನು ನೋಡುವ ಕ್ರಮವೂ ಹಾಗೆಯೇ ಇತ್ತು. ಸಂಗೀತಗಾರನ ಅಭ್ಯಾಸದ ಹಾಗೆ. ಕವಿತೆ ಯಾಕೆ ಕಷ್ಟ? ಯಾಕೆ ಅರ್ಥವಾಗುವುದಿಲ್ಲ. ಅರ್ಥವಾಗುವ ಪದಗಳಿಂದ ಅರ್ಥವಾಗದ ಪದಗಳನ್ನೂ, ಅರ್ಥವಾದ ಸಾಲುಗಳಿಂದ ಅರ್ಥವಾಗದ ಸಾಲುಗಳನ್ನೂ ಮತ್ತೆ ಮತ್ತೆ ನೋಡಬೇಕು ಅನ್ನುತ್ತಿದ್ದರು. ಹಾಗೆ ಮತ್ತೆ ಮತ್ತೆ ನೋಡುವುದೇ ಅವರ ಕ್ರಮವಾಗಿತ್ತು. ಕ್ರಮೇಣ ಬಹುಶಃ ಎಂಬತ್ತರ ದಶಕದಲ್ಲಿರಬೇಕು. 'ಒರಾಲಿಟಿ ಅಂಡ್ ಲಿಟರಸಿ' ಪುಸ್ತಕದ ಬಗ್ಗೆ ಉತ್ಸಾಹದಿಂದ ಮಾತನಾಡುವುದಕ್ಕೆ ಶುರುಮಾಡಿದ್ದರು. ಮಾತು ಮತ್ತು ಬರವಣಿಗೆಗಳ ವ್ಯತ್ಯಾಸ, ಮಿತಿ, ಸಾಧ್ಯತೆಗಳು ಅವರ ಗಮನ ಸೆಳೆದಿದ್ದವು. ಹಾಗೆಯೇ ಗ್ಯುಟೆನ್ ಬರ್ಗ್ ಗ್ಯಾಲಾಕ್ಸಿ ಅವರ ಇನ್ನೊಂದು ಮೆಚ್ಚಿನ ಪುಸ್ತಕ. ಬರವಣಿಗೆ, ಮುದ್ರಣ, ಸಾಹಿತ್ಯದ ಅನುಭವದ ಮೇಲೆ ಅದರ ಪರಿಣಾಮ ಇವು ಅಭ್ಯಾಸವನ್ನು ಇನ್ನೊಂದು ದಿಕ್ಕಿಗೆ ಎಳೆದೊಯ್ದವು. ಅಕ್ಷರ ರೂಪ ಪಡೆದ ಮಾತು ಅರ್ಥದ ಖಚಿತತೆಯ ಕಾರಣದಿಂದಲೇ ನಿರ್ಜಿವವಾಗುತ್ತದೆ ಅಂದುಕೊಂಡರೋ ಏನೋ. ಬರವಣಿಗೆ ಮಾತಿನ ಜೀವಂತಿಕೆಯನ್ನು ಕಳೆಯುತ್ತದೆ ಅನಿಸಿತೋ ಅಥವಾ ಬರವಣಿಗೆಯಲ್ಲಿ ತಾನು ಹೇಳಬೇಕಾದ್ದನ್ನು ಹೇಳಲಾರೆ

ಅನ್ನುವ ಆತಂಕ ಕಾಡಿತೋ, ಬರವಣಿಗೆ ಎಂದೂ ಸ್ಥೂಲ, ಅಪೂರ್ಣ, ಮಾತು ತನ್ನ ಅಪೂರ್ಣತೆಯಲ್ಲೂ ಜೀವಂತ ಪೂರ್ಣ ಅನ್ನಿಸಿತೋ ಆದರೂ ಕಿರಂ ಬರವಣಿಗೆಗೆ ತೀರ ವಿಮುಖರಲ್ಲ. ಬರೆಯಲೇಬೇಕಾದ ಒತ್ತಾಯವಿದ್ದಾಗ ಬರೆದದ್ದು ಉಂಟು.[೪೧]

ಹೀಗೆ ಕಿ. ರಂ. ನಾಗರಾಜ ಅವರ ವ್ಯಕ್ತಿತ್ವದಲ್ಲಿಯೇ ಸಾಹಿತ್ಯವು ಒಡನಾಡಿಯಾಗಿ ಸ್ಪಂದಿಸುತ್ತಿದ್ದ ಎಲ್ಲಾ ಆಯಾಮಗಳನ್ನು ಇಲ್ಲಿ ಸ್ಪಷ್ಟಪಡಿಸಿದ್ದಾರೆ. ಈ ಕೃತಿಯ ಐದು ಲೇಖನಗಳು ಹಾಗೂ ಕೊನೆಯ ಭಾಷಣದವರೆಗೂ ಬೇಂದ್ರೆ ಅವರ ಕಾವ್ಯವನ್ನು ವಿಶ್ವಾತ್ಮಕ ನೆಲೆಯಲ್ಲಿ ಸಮೀಕರಿಸುವ ಕಿ. ರಂ. ನಾಗರಾಜ ಅವರ ಭಾಷಣದಲ್ಲಿ ವಿಶ್ವದ ಹಲವು ಕವಿಗಳು, ಭಾರತೀಯ ಪ್ರಜ್ಞೆ, ಕನ್ನಡದ ವಿವಿಧ ದೇಸಿ ಪ್ರಜ್ಞೆಗಳ ಪ್ರಭಾವವೂ ಕಂಡುಬರುತ್ತದೆ. ಆದರೆ ಯಾವುದೇ ಪ್ರಜ್ಞೆಗೆ ಬೇಂದ್ರೆ ಅವರನ್ನು ಸೋಕಿಸದೆ ಬೇಂದ್ರೆ ಅವರು ವಿಶಿಷ್ಟವಾಗಿ ನಿಲ್ಲುವ ಸಾಂಕೇತಿಕತೆಯನ್ನು ಗುರ್ತಿಸುತ್ತಾ ಸಾಗುವುದನ್ನು ಅಧ್ಯಯನಮಾಡಬಹುದು. ಬೇಂದ್ರೆ ಅವರ 'ಬೆಳಗು', 'ಪರಾಗ', 'ಜೋಗಿ', 'ನಾನು' ಇಂತಹ ಕವಿತೆಗಳನ್ನು ಅತ್ಯಂತ ಸೂಕ್ಷ್ಮವಾಗಿ ಗ್ರಹಿಸಿರುವುದನ್ನು ಕಾಣಬಹುದು. ಕಿ.ರಂ. ನಾಗರಾಜ ಅವರ ಭಾಷಣದಲ್ಲಿ ಹೊಸ ಓದುವಿನ ಅವಕಾಶಗಳಿರುತ್ತವೆ. ಯಾವುದೇ ತೀರ್ಮಾನಗಳಿರುವುದಿಲ್ಲ.

ಕಿ.ರಂ. ಅವರ ಭಾಷಣವನ್ನು ಗಮನಿಸುವಾಗ ಈ ಬೇಂದ್ರೆ ಒಬ್ಬ ಫಿಲಾಸಫಿ ವ್ಯಕ್ತಿಯಾಗಿ ಸಾಕಷ್ಟು ದಾರಿಗಳನ್ನು ತೆರೆಯುವ ಸೂಕ್ಷ್ಮದರ್ಶಿಯಾಗಿ ನಮಗೆ ದೊರೆಯಬಹುದು.

> ವಿಶ್ವಾತ್ಮಕ ಎನ್ನುವುದು ನನ್ನ ನೆಲವನ್ನು ಮೀರಿದ ಒಂದು ನೆಲೆ. ಬೇರೆ ಬೇರೆ ರೀತಿಯಲ್ಲಿ ಬೇಂದ್ರೆ ಈ ಜಿಜ್ಞಾಸೆಯನ್ನು ಎದುರಾಗುವುದನ್ನು ನಾವು ನೋಡುತ್ತೇವೆ. ಬೇಂದ್ರೆಗೆ ಈ ನೆಲ ಬೇರೆ ಅಲ್ಲ. ಈ ನೆಲವನ್ನು ಮೀರಿದ ಇನ್ನಿತರ ನೆಲೆಗಳು ಅದನ್ನು ಅಮೂರ್ತ ಅಂತ ನಾವೇನು ತಿಳಿಯುತ್ತೇವೆ ಅದು ಬೇರೆ ಅಲ್ಲ. ನೆಲ ಮತ್ತು ಮನುಷ್ಯನ ವಿಭಿನ್ನ ಕಲ್ಪನೆಗಳು ಒಂದು ಮತ್ತೊಂದನ್ನು ತಪ್ಪಗೊಳಿಸುತ್ತ ನಡೆಯುವ ಒಂದು ಚಲನೆ. ಬೇಂದ್ರೆ ಅದಕ್ಕೆ ಒಂದು ಪದ್ಯದಲ್ಲಿ 'ಘುರ್‍ರೆ ಘುರ್‍ರೆ ಘೋಟಕಾ/ ನಡೆ ಅಂತಃಸ್ಫೋಟಕಾ'(ವಿಶ್ವ ಒಂದು ಅಶ್ವ ಅರಳು ಮರಳು) ಎನ್ನುತ್ತಾರೆ. ಭೂಮಿಯನ್ನೇ ಕುರಿತು ಹೇಳುತ್ತಿರುವ ರಚನೆ ಇದು. ಇಡೀ ಜೀವ ಚೈತನ್ಯವನ್ನು ಒಂದು ಕುದುರೆಯೊಂದಿಗೆ ಹೋಲಿಸಿ ಕವಿ ಮಾತನಾಡುತ್ತಿದ್ದಾರೆ. ಹೀಗಾಗಿ ಬೇಂದ್ರೆಯವರ ಕಾವ್ಯದ ಮುಖ್ಯ ವಸ್ತುಗಳನ್ನು ವಿಂಗಡಿಸಿ ತೋರಿಸುವುದಾದರೂ ಅದು ಕೇವಲ ಕೃತಕ ವಿಂಗಡನೆ. ಬೇಂದ್ರೆಯದು ಇದು ತಾಯಿಯನ್ನು ಕುರಿತ ಕವಿತೆ, ಇದು ನಿಸರ್ಗವನ್ನು ಕುರಿತ ಕವಿತೆ, ಆಧ್ಯಾತ್ಮಿಕ ಅನುಭೂತಿಯನ್ನು ಕುರಿತ ಕವಿತೆ ಎಂದು ಮೇಲುಮಟ್ಟದಲ್ಲಿ ವಿಂಗಡಿಸಿ ನೋಡಬಹುದೇ ಹೊರತು ಆ ರೀತಿಯಾದಂತಹ ವಿಂಗಡನೆಗೆ ಬೇಂದ್ರೆ ಕವಿತೆ ಸಿಲುಕುವುದಿಲ್ಲ. ನನಗಂತೂ ಆ ರೀತಿಯ ವರ್ಗಿಕರಣ ಮಾಡಿದರೆ ಅದು ಒಂದು ಪ್ರಯೋಗ ಆಗಿರುತ್ತದೆಯೇ ಹೊರತು ಕವಿತೆ ಮತ್ತೊಂದು ನೆಲೆಯಲ್ಲಿ ಪ್ರವೇಶಿಸಿ ಬಿಡುತ್ತದೆ.[೪೨]

ಇದೇ ವಿಚಾರವನ್ನು ಲಕ್ಷ್ಮೀಶ ತೋಳ್ಪಾಡಿ ಅವರ ಭಾಷಣದಲ್ಲಿಯೂ ಗ್ರಹಿಸಬಹುದು. ಒಂದು ಕವಿತೆಯ ಗ್ರಹಿಕೆಯ ಆಯಾಮಗಳು ಸಿದ್ಧಮಾದರಿಯಲ್ಲಿ ಸಿಗುವುದಿಲ್ಲ. ಕವಿತೆಯನ್ನು

ಪ್ರವೇಶ ಮಾಡಿದಾಗ ದೊರಕುವ ಮೂಲಾಂಶಗಳೆಲ್ಲಾ ಹೊಸ ಹಾದಿಯನ್ನು ಸೃಷ್ಟಿಸಬಹುದೆನ್ನುವ ಅಭಿಪ್ರಾಯಗಳು ಕಿ.ರಂ. ನಾಗರಾಜ, ಲಕ್ಷೀಶ ತೋಳ್ಪಾಡಿ ಇವರ ಭಾಷಣಗಳಲ್ಲಿ ತಿಳಿಯಬಹುದು.

೫. ೬. ೨. 'ಜೋಗಿ' ಕವಿತೆ ಕುರಿತ ವಿಮರ್ಶೆಗಳು

'ಜೋಗಿ' ಕವಿತೆಯು ಅನುಭವಗಳ ಸರಳೀಕೃತ ನೆಲೆಯಲ್ಲಿ ಅನುಭಾವದ ಸ್ಥರವನ್ನು ಅತ್ಯಂತ ಸೂಕ್ಷ್ಮವಾಗಿ ಅವಲೋಕಿಸುವ ಕವಿತೆಯಾಗಿ ಹಲವು ಅಧ್ಯಯನಗಳು ನಡೆದಿವೆ. ಕೆ. ಸಿ. ಶಿವಾರೆಡ್ಡಿ ಅವರು ಮುಖ್ಯವಾದ ಅಧ್ಯಯನಗಳನ್ನು ಒಂದೆಡೆ ಸೇರಿಸಿ ವಿಸ್ತಾರವಾದ ಪ್ರಾಸ್ತಾವಿಕ ನುಡಿಯನ್ನು ಬರೆದಿದ್ದಾರೆ.

> ಜೋಗಿ ಕವಿತೆ ಪ್ರಕಟವಾಗಿ (ಗಂಗಾವತರಣ-೧೯೫೧) ಅರ್ಧಶತಮಾನ ಸಂದಿದೆ. ಓದುಗರು ಅಂದಿನಿಂದ ಇಂದಿನವರೆಗೂ ಈ ಕವಿತೆಯ ಕುರಿತು ಪ್ರತಿಕ್ರಿಯೆಗಳು ನಿರಂತರವಾಗಿ ನಡೆಸಿರುವುದರ ಬಗೆಗೆ ಮೊದಲೇ ಹೇಳಿದಂತೆ ಅಸಂಖ್ಯ ಲಿಖಿತ ಹಾಗೂ ಅಲಿಖಿತ ದಾಖಲೆಗಳಿವೆ. ಅಲಿಖಿತ ದಾಖಲೆಗಳನ್ನು ಇಂತಿಷ್ಟೆ ಎಂದು ತೋರಿಸಲು ಸಾಧ್ಯವಿಲ್ಲವಾದರೂ ತರಗತಿಗಳ ಸಂವಾದಗಳೂ, ಚರ್ಚಾಗೋಷ್ಠಿಗಳೂ, ಪ್ರತಿಯೊಬ್ಬ ಓದುಗನ ಒಳಗೇ ನಿರ್ಮಿತವಾದ ವಾಗ್ವಾದಗಳ ನೆಲೆಗಳಲ್ಲಿ ಅಂಥ ದಾಖಲೆಗಳು ಒಂದು ಮೌಖಿಕ ನವ ಪುರಾಣವನ್ನೆ ಸೃಷ್ಟಿಸಿವೆ. ಇದುವರೆಗಿನ ಈ ಕವಿತೆಯ ಬಗೆಗಿನ ಜಿಜ್ಞಾಸೆಗಳು ಕವಿತೆಯ ಹಲವು ಆಯಾಮಗಳನ್ನು ಗ್ರಹಿಸಿವೆ. ಈ ಕವಿತೆಯು ಗ್ರಹಿಕೆಗೆ ಒಡ್ಡುವ ಸವಾಲುಗಳ ಬಗೆಗೂ ಕನ್ನಡ ವಿಮರ್ಶೆ ಪ್ರಶ್ನೆಗಳನ್ನೆತ್ತಿದೆ. ಅಂಥ ಸವಾಲುಗಳು ಈ ಕವನದ ಮಿತಿಯೆಂಬ ದನಿಗಳೂ ಹುಟ್ಟಿವೆ. ಇಷ್ಟೆಲ್ಲ ವಿಮರ್ಶೆ-ವಿಶ್ಲೇಷಣೆಗಳು ಕನ್ನಡ ಸಾಂಸ್ಕೃತಿಕ ಪರಿಸರದಲ್ಲಿ ನಡೆದಿದ್ದರೂ, ಈ ಕವಿತೆಯ ಜತೆಗೆ ಐವತ್ತು ವರ್ಷಗಳ ಸ್ನೇಹ, ಸಂಧಾನ, ಮುಖಾಮುಖಿಗಳ ಸಂಬಂಧ ಮುನ್ನಡೆದಿದ್ದರೂ ಕವನದ ವಸ್ತು, ಆಶಯ, ದರ್ಶನ, ಅದರಿಂದ ಉತ್ಪನ್ನವಾಗುವ ಧ್ವನಿ ಇಂತಿಷ್ಟೇ ಎಂದು ಹೇಳುವ ಸಾಹಸ ಯಾರೂ ಮಾಡಿಲ್ಲ. ಏಕೆಂದರೆ ಈ ಕವಿತೆ ಎತ್ತುವ ಪ್ರಶ್ನೆಗಳು, ಬದುಕಿನ ಸಂಕೀರ್ಣಾವಸ್ಥೆಗಳು, ಅಸ್ಪಷ್ಟತೆಗಳು, ದ್ವಂದ್ವಗಳು ಅದಕ್ಕೆ ಕಾರಣವೆನ್ನಬಹುದು. ಹಾಗಾಗಿಯೇ ತನ್ನ ಆಕರ್ಷಣೆಯನ್ನು ಕಳೆದುಕೊಳ್ಳದೆ ಕಾಲ ಕಾಲಕ್ಕೆ ವಿಭಿನ್ನ ಕಾಣ್ಕೆಗಳನ್ನು ಪ್ರಕಟಿಸುತ್ತ, ಓದುಗನನ್ನು ತನ್ನತ್ತ ಮತ್ತೆ ಮತ್ತೆ ಆಕರ್ಷಿಸುವ ಶಕ್ತಿ ಈ ಕವಿತೆಯದಾಗಿದೆ.[೪]

ಕೆ. ಸಿ. ಶಿವಾರೆಡ್ಡಿ ಅವರು ಈ ಕವಿತೆಯನ್ನು ಜಗತ್ತು ಜೀವಾತ್ಮಗಳ ಸಂಧಾನವಾಗಿ, ಆಧುನಿಕ ಪುರಾಣವಾಗಿಯೂ ಕಂಡುಬರುವ ಅನನ್ಯತೆಯನ್ನು ಗಮನಿಸಿದ್ದಾರೆ. ಶಂಕರ ಮೊಕಾಶಿ ಪುಣೇಕರ ಅವರು 'ಪ್ರತ್ಯಕ್ಷ ಕಂಡ ಕನಸುಗಳ ಮೇಲೆ ಕಟ್ಟಿದ' ಕವಿತೆಯಾಗಿ ಗಮನಿಸಿದ್ದಾರೆ. 'ಜೋಗಿ' ಕವನದಲ್ಲಿ ಪ್ರಭುಶಂಕರ ಅವರು 'ಅನಂತತೆಯ ನಿರಂತರ ಆಹ್ವಾನ'ವನ್ನು 'ಅದಕ್ಕೆ ಎಚ್ಚೆತ್ತ ಜೀವಿಯ ಪ್ರತಿಧ್ವನಿ'ಯನ್ನು ಗಮನಿಸಿದ್ದಾರೆ.

'ಜೋಗಿ : ಆಧ್ಯಾತ್ಮಿಕ ಬಿಕ್ಕಟ್ಟು' ಎಂಬ ಲೇಖನದಲ್ಲಿ ತಾನು ಗ್ರಹಿಸಿದ ಆಧ್ಯಾತ್ಮನೆಲೆಯನ್ನು ಕವಿತೆಯಲ್ಲಿ ನಾಡಿಗರು ಗುರ್ತಿಸಿದ್ದಾರೆ. ಬೇರೆ ಕವನಗಳಿಗಿಂತ ಬೇಂದ್ರೆಯವರ ಶಕ್ತಿಯುತ

ಕವಿತೆಯಾಗಿ ಕಂಡುಬರುವ ವಿಚಾರಗಳನ್ನು ಗುರ್ತಿಸಿದ್ದಾರೆ. ಆದರೆ ಆಧ್ಯಾತ್ಮದ ಬಿಕ್ಕಟ್ಟನ್ನು ಗಮನಿಸಬೇಕಾದ ವಿಮರ್ಶಕನು ಕವಿತೆಯನ್ನು ಓದುತ್ತಾ ಕವಿಯೊಳಗಿನ ತಾತ್ವಿಕತೆಯನ್ನು ಶಕ್ತಿಯಾಗಿ ಒಪ್ಪುತ್ತಾರೆ. ಆರ್. ಜಿ. ಕುಲಕರ್ಣಿ ಅವರು 'ಜೋಗಿ ಕವನದ ನಾದಧ್ವನಿ' ಲೇಖನದಲ್ಲಿ 'ತಾತ್ವಿಕವಾದ ವಿವಾದಗಳಗೆಡೆಯಿಲ್ಲದೆ ಒಂದು ಸಾಧಕ ಜೀವಿಯ ನವಜೀವನ ಧ್ವನಿಯನ್ನು ಹೊರಡಿಸುವ ಕವನ' ಎಂದು ವಿಮರ್ಶಿಸಿದ್ದಾರೆ. ಕುರ್ತಕೋಟಿ ಅವರು 'ಅನುಭಾವದ ಬಿತ್ತರ' ಲೇಖನದಲ್ಲಿ 'ಬೇಂದ್ರೆಯವರ ಕಾವ್ಯದಲ್ಲಿ ಅರ್ಥವಿಸಲಿಕ್ಕೆ ಕಠಿಣವಾದ ಕವಿತೆಗಳಲ್ಲಿ ಒಂದು'ಎಂದಿದ್ದಾರೆ. ಕಾಳೇಗೌಡ ನಾಗವಾರ ಅವರು 'ಐಂದ್ರಿಕ ಸಂವಾದ' ಲೇಖನದಲ್ಲಿ (ಅನುಭಾವದ) ಉತ್ಕಟತೆಯನ್ನು ಓದುಗನಿಗೆ ಅಸಮಗ್ರವಾಗಿಯಾದರೂ ಮುಟ್ಟಿಸುವ ಯಶಸ್ವೀ ಕವನವೆಂದರೆ ಜೋಗಿ' ಎಂದು ಗುರ್ತಿಸಿದ್ದಾರೆ. ಚಂಪಾಬಾಯಿ ಸೆಟ್ಲೂರ ಅವರು 'ಜೋಗಿ ಒಂದು ಟಿಪ್ಪಣಿ' ಎಂಬ ಲೇಖನದಲ್ಲಿ 'ಇದರಲ್ಲಿ ಕೊಡುವ ಚಿತ್ರ ಏನೋ ಒಂದು ತತ್ವವನ್ನು ಕೇಂದ್ರೀಕರಿಸಲು ಹೊರಟಿದೆ ಎಂದರೆ ತಪ್ಪಾಗಲಾರದು' ಎಂದಿದ್ದಾರೆ. ಗೌರೀಶ ಕಾಯ್ಕಿಣಿ ಅವರು 'ಜೋಗಿ ಆಧ್ಯಾತ್ಮಿಕ ಕಳವಳ' ಎಂಬ ಲೇಖನ ವಿಚಾರದಲ್ಲಿ 'ಪ್ರತಿಕತ್ವವನ್ನು ತಾಳಿ ತೊಳಗುವ ಶ್ರೇಷ್ಠ ಕೃತಿ' ಎಂದು ಗುರ್ತಿಸಿದ್ದಾರೆ. ಎಚ್. ಎಸ್. ರಾಘವೇಂದ್ರರಾವ್ ಅವರು 'ಜೋಗಿ ಒಂದು ವಿಶ್ಲೇಷಣೆ' ಎಂಬ ವಿಮರ್ಶೆಯಲ್ಲಿ ಸುಮತೀಂದ್ರ ನಾಡಿಗರ 'ಜೋಗಿ' ಕವಿತೆ ಕುರಿತ ವಿಮರ್ಶೆಯನ್ನು ಮುಖ್ಯವಾಗಿ ಕೇಂದ್ರೀಕರಿಸಿ 'ಆಂಶಿಕ ಸಫಲತೆ'ಯನ್ನು ಚರ್ಚಿಸಿದ್ದಾರೆ. ತಾತ್ವಿಕ ವಿಚಾರಗಳನ್ನು ಮಾತ್ರ ಚರ್ಚಿಸಿದ್ದಾರೆ. ಕವಿತೆಯ ವಿಮರ್ಶೆಯೊಂದಿಗೆ ಮೌಲ್ಯನಿರ್ಣಯ ಮಾಡುವ ಕಾರ್ಯ ಮಾಡಿಲ್ಲವೆಂಬ ವಿಚಾರದೊಂದಿಗೆ 'ತಾತ್ವಿಕ ಗ್ರಹಿಕೆ'ಯ ಕವಿತೆಯಿದು ಎಂಬುದನ್ನು ಮುಖ್ಯವಾಗಿಸಿದ್ದಾರೆ. ರುಕ್ಮಿಣಿ ಪರ್ವತಿ ಅವರು ತಮ್ಮ ಪ್ರಬಂಧದಲ್ಲಿ 'ಅನುಭಾವ ಮತ್ತು ದರ್ಶನ'ದ ವಿಚಾರವಾಗಿ ವಿಶ್ಲೇಷಿಸಿದ್ದಾರೆ. ರಂ. ಶ್ರೀ ಮುಗಳಿ ಅವರು 'ಅನುಭಾವ ಗೀತ' ಎಂದು ಕರೆಯುತ್ತಾ 'ದಟ್ಟವಾದ ಅಧ್ಯಾತ್ಮಿಕ ಅನುಭವಗಳನ್ನು ನುಡಿನುಡಿಯಲ್ಲಿ ಪ್ರತಿಮಿಸಿದ ಅನುಭಾವಗೀತ, ಕೇವಲ ಭಾವಗೀತವಲ್ಲ'ವೆಂದು ವಿಶ್ಲೇಷಿಸಿದ್ದಾರೆ. ವಿಜಯಾ ದಬ್ಬೆ ಅವರ 'ಅನುಭಾವದ ಒಂದು ನಿಚ್ಚಳಿಕೆ' ಎಂಬ ಲೇಖನದಲ್ಲಿ 'ಜೋಗಿ ಪ್ರಜ್ಞೆಯೊಂದರ ಅಸ್ತಿತ್ವದಿಂದ ಅನುಭವದೊಳಗಿರುವ ಅನುಭಾವದೆಡೆಗಿನ ನಿಚ್ಚಳಿಕೆ ಕಾಣುತ್ತದೆ' ಎಂಬ ಇವರ ವಿಚಾರವನ್ನು ಗಮನಿಸಬಹುದು. ರಾಜೇಂದ್ರ ಚೆನ್ನಿ ಅವರು 'ಸಾರ್ಥಕ ಪ್ರತೀಕ' ಲೇಖನದಲ್ಲಿ ಬೇಂದ್ರೆ ಅವರ ಕವಿತೆಗಳ ರೂಪಕ ಪ್ರತೀಕಗಳನ್ನು ಚರ್ಚಿಸುತ್ತಾ 'ಜೋಗಿ' ಕವನ ತನ್ನ ಅರ್ಥವನ್ನು ಪೂರ್ತಿಯಾಗಿ ಬಿಟ್ಟುಕೊಟ್ಟಿರುವುದಕ್ಕೆ ಕಾರಣವೆಂದರೆ ಅದು ಸಂವಿಧಾನವಿರುವ ಒಂದು allegory ಯಾಗಿರಬಹುದು ಎನ್ನುವ ಹಸಿ ಅಪೇಕ್ಷೆಯನ್ನು ಹುಟ್ಟಿಸುತ್ತದೆ' ಎಂಬುದಾಗಿ ಗ್ರಹಿಸಿರುವುದನ್ನು ಅಧ್ಯಯನ ಮಾಡುತ್ತಾ ಇವರ ತಾತ್ವಿಕ ಒಳನೋಟವು ಕಾವ್ಯತತ್ತ್ವವನ್ನು ಐಡಿಯಾಲಜಿ ಮಿಥ್‌ಗಳಿಂದ ಬಿಡಿಸುವ ಪ್ರಯೋಗದಲ್ಲಿಯೂ ಸಾಗುವುದನ್ನು ಗಮನಿಸಬಹುದು.

'ಜೋಗಿ' ಕವಿತೆಯು ಬೇಂದ್ರೆ ಅವರು ಬರೆದ ಇತರ ಕವಿತೆಗಳನ್ನು ತನ್ನೊಳಗೆ ತುಂಬಿಕೊಂಡು, ಆಧ್ಯಾತ್ಮದ ಚಿಂತನೆಯನ್ನು ಪುರಾಣ ಪ್ರಜ್ಞೆಯೊಂದಿಗೆ ಸೂಕ್ಷ್ಮವಾಗಿ ಸಮೀಕರಿಸುವ ದೃಷ್ಟಿಯನ್ನು

'ಭುವನದ ಭಾಗ್ಯ' ಕೃತಿಯಲ್ಲಿ ಆಮೂರರು 'ಕಲ್ಯಾಣದ ದಾರಿ' ಎಂಬಂತೆ ಗಮನಿಸಿರುವುದನ್ನು ಕಾಣಬಹುದು. ರಾಮಲಿಂಗಪ್ಪ ಟಿ. ಬೇಗೂರು ಅವರು 'ಶ್ರಾವಣ' ಎಂಬ ಕೃತಿಯಲ್ಲಿ 'ಜೋಗಿಯ ಹಲವು ಮುಖಗಳು' ಎಂಬ ಚಿಂತನೆಯ ವಿಮರ್ಶೆ ಮಾಡಿದ್ದಾರೆ. ಇಲ್ಲಿ 'ಜೋಗಿ' ಕವಿತೆಯು ಪ್ರತಿಮಾನಿಷ್ಠ ಕವಿತೆಯಾಗಿ, ಇಡೀ ಕವಿತೆಯೇ ಸಮಷ್ಟಿಯಾದೊಂದು ಪ್ರತಿಮೆಯಾಗುವ ರೀತಿಯನ್ನು ಚರ್ಚಿಸಿದ್ದಾರೆ. ಇಲ್ಲಿನ ಪ್ರಕೃತಿ, ಪ್ರಾಣಿ, ಪಕ್ಷಿಗಳು ಆಧ್ಯಾತ್ಮಿಕ ಸಂಕೇತವಾಗಿ ಸ್ವರೂಪಗೊಳ್ಳುವ ಬಗೆಯನ್ನು ಗ್ರಹಿಸಿದ್ದಾರೆ. ಇದೇ ದೃಷ್ಟಿಯಲ್ಲಿಯೇ 'ಜೋಗಿ' ಕವಿತೆ ಕುರಿತ ಬನ್ನಂಜೆ ಗೋವಿಂದಾಚಾರ್ಯ ಅವರ ಅಭಿಪ್ರಾಯವನ್ನೂ ಅಧ್ಯಯನಮಾಡಬಹುದು.

'ಜೋಗಿ' ಕವಿತೆಯಲ್ಲಿ ಮೂಡಿರುವ ಅನುಭಾವದ ಅಂಶಗಳನ್ನು ಆಧ್ಯಾತ್ಮದ ಸಂಕೇತದಂತೆ ಪ್ರತಿಮೆ ಹಾಗೂ ಪ್ರಯೋಗದ ಪೂರ್ವತಾತ್ವಿಕತೆಯಲ್ಲಿ ಕಂಡುಬರುವ ವಿಚಾರಗಳನ್ನು ಮಂಗಳಾಪ್ರಿಯದರ್ಶಿನಿ ಡಿ. ಅವರು 'ನವೋದಯದಲ್ಲಿ ಅನುಭಾವದ ಅಂಶಗಳು: ಒಂದು ಅಧ್ಯಯನ' ಎಂಬ ಕೃತಿಯಲ್ಲಿ ಚರ್ಚಿಸಿದ್ದಾರೆ. ಎ. ಎಸ್. ಜಯರಾಂ ಅವರು 'ಅನನ್ಯತೆಗೆ ಸಾಕ್ಷಿ'ಯಾಗಿ, ದೊಡ್ಡರಂಗೇಗೌಡ ಅವರು 'ಬೆಡಗಿನ ವಚನದಂತೆ', ಕರೀಗೌಡ ಬೀಚನಹಳ್ಳಿ ಅವರು 'ಅನುಭಾವದ ಸಂಘರ್ಷ'ವಾಗಿ ಗ್ರಹಿಸಿದ್ದಾರೆ. ಹೊಸ ಜಿಜ್ಞಾಸೆಗಳಿಲ್ಲದ ಈ ಎಲ್ಲಾ ಲೇಖನಗಳು ವಿವಿಧ ದೃಷ್ಟಿಯ ಓದುಗಳಾಗಿ ಗಮನಿಸಬಹುದು. 'ಜೋಗಿ' ಕವಿತೆಯನ್ನು 'ಸಾಧನೆಯ ಸಿದ್ಧಿ'ಯಾಗಿ ಗ್ರಹಿಸಿದ ಜಿ. ಕೃಷ್ಣಪ್ಪ ಅವರು ಕವಿತೆಯೊಳಗಿನ ಜೋಗಿ ಸ್ವಯಂ ಕವಿಯೇ ಆಗಿದ್ದಾನೆ. ಅಲ್ಲಿ ತನ್ನ ಆತ್ಮದ ಸಂಭಾಷಣೆಯೊಂದಿಗೆ ಪರಮಾತ್ಮನನ್ನುಅರಿಯುವ ಪ್ರಯತ್ನಮಾಡುವ ಒಂದು ಜೀವ ಸಂವಾದ' ಎಂದಿದ್ದಾರೆ.(ಹಾಡುಹಕ್ಕಿ ಅಂಬಿಕಾತನಯದತ್ತ -೧೯೯೫; ಪುಟ ಸಂಖ್ಯೆ ೭೪-೮೦) 'ನಾ ಕಂಡ ಬೇಂದ್ರೆ : ಜೀವನ ಮತ್ತು ಸಾಹಿತ್ಯ' ಎಂಬ ಕೃತಿಯಲ್ಲಿ ಕುಲಕರ್ಣಿ ಜೀವಿ ಅವರು 'ಜೋಗಿ' ಕವಿತೆ ಕುರಿತು ಕೆಲವು ಹೊಸ ವಿಚಾರಗಳನ್ನು ಚರ್ಚಿಸಿದ್ದಾರೆ. ಇದೊಂದು ಅಪೂರ್ಣ ಕವಿತೆಯಾಗಿ ಬೇಂದ್ರೆ ಅವರಿಂದಲೇ ಪಡೆದ ವಿಷಯ. ಈ ಕವಿತೆಗೆ ಪಾಶ್ಚಾತ್ಯ ಕವಿಗಳ ಪ್ರಭಾವದಂತೆ, ಭಾರತೀಯ ಆಧ್ಯಾತ್ಮದ 'ಅರವಿಂದರ' ಪ್ರಭಾವಿವೆಲ್ಲವೂ ಅಂತರಂಗದ ವಿಶ್ಲೇಷಣೆಯನ್ನು ಬಾಹ್ಯ ಚೌಕಟ್ಟಿನಲ್ಲಿ ನೀಡುವ ಗ್ರಹಿಕೆಗಳಾಗಿ ವಿಶ್ಲೇಷಿಸಿದ್ದಾರೆ. 'ಬೆಳಗು' ಕವಿತೆಯೊಂದಿಗೆ 'ಜೋಗಿ' ಕವಿತೆಯನ್ನು ತೌಲನಿಕ ಅಧ್ಯಯನ ಮಾಡಿರುವ ವೇಣುಗೋಪಾಲ ಕಾಸರಗೋಡು ಅವರು

> "ಬೆಳಗು ಕವನದ ನಾಯಕನಿಗೆ ಪ್ರಕೃತಿಯ ಲೌಕಿಕ ಸೌಂದರ್ಯದೊಂದಿಗೆ ಬೆಸೆದುಕೊಂಡಿರುವ ಆಧ್ಯಾತ್ಮದ ಸೊಗಸಿಗೆ ಬೆರಗಾಗುವ ಅಚ್ಚರಿಯ ಮನಸ್ಥಿತಿ ಹಾಗೂ ಮೆಚ್ಚುಗೆಯ ನಿಲುವುಗಳಿವೆ. ಇವಕ್ಕೆ ಸ್ವೀಕೃತ ಸಿದ್ಧಾಂತಗಳ, ಪ್ರಕೃತಿಯ ನಿಗೂಢ ಚೈತನ್ಯದ ಆಸರೆಯಿದೆ. ವೈರಾಗ್ಯದ ಈ ದೃಷ್ಟಿಕೋನ ಯಾವುದೇ ತಿಕ್ಕಾಟಗಳಿಂದ ಜನಿಸಿದ ತತ್ವದರ್ಶನವಲ್ಲ. ಆದುದರಿಂದ ಈ ಪಾರಮಾರ್ಥಿಕ ಒಲವು ಒಮ್ಮುಖವಾದದ್ದು. 'ಜೋಗಿ'ಯ ನಾಯಕ ಈತನಿಗಿಂತ ತೀರ ಭಿನ್ನ. ಅವನಿಗೆ ಜೀವನದ ಎಡು ಪಾರ್ಶ್ವಗಳಲ್ಲಿ ಕಂಡುಬರುವ ಲೋಲುಪತೆಯನ್ನು ಕಂಡು ಬೇಸತ್ತು, ತನ್ನ ತಾರತಮ್ಯ ಜ್ಞಾನವನ್ನು ಸಾಕ್ಷಿಯ ಸಹಾಯದಿಂದ

ಅವೆರಡರ ಒಳಿತು–ಕೆಡುಕುಗಳನ್ನು ತೂಗಿನೋಡಿ, ಕೊನೆಗೆ ಅವುಗಳ ನಿಶ್ಚಿತ ಕೂಡುವಿಕೆಯ ನಿಷ್ಪತ್ತಿಯಲ್ಲೇ ಜೀವನದ ಸಾರ್ಥಕತೆಯಿದೆ. ಎಂದೊಪ್ಪಿಕೊಳ್ಳುವ ವಿಮರ್ಶಕ ಪ್ರಜ್ಞೆ ಹಾಗೂ ಅನ್ವೇಷಕ ನಿಲುಮೆಗಳಿವೆ. ಹೀಗ ಕವನಗಳ ನಾಯಕ ಹಾಗು ಅವರ ಕ್ರಿಯೆಗಳು ವಿಭಿನ್ನವಾದರೂ ಮೊದಲು ಹೇಳಿದ ಕೆಲವು ಸಮಾನವಾದ ಪರಸ್ಪರ ಪೂರಕವಾದ ಅಂಶಗಳು ಇಲ್ಲದಿಲ್ಲ".(ವೇಣುಗೋಪಾಲ ಕಾಸರಗೋಡು, ೧೯೭೬., ಕರ್ನಾಟಕ ಭಾರತಿ(ತ್ರೈಮಾಸಿಕ, ಸಂಪುಟ–೮, ಸಂಚಿಕೆ–೪) ಕಲಬುರ್ಗಿ ಎಂ.ಎಂ(ಸಂ), ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಪುಟ ಸಂಖ್ಯೆ ೩೭)

ಕೆಲವು ವಿಶಿಷ್ಟ ಅಂಶಗಳನ್ನು ದೀರ್ಘ ವಿಮರ್ಶೆಯೊಂದಿಗೆ ಚರ್ಚಿಸಿರುವ ಲೇಖನಗಳೆಂದರೆ ಎಂ. ವಿ. ಶ್ರೀನಿವಾಸಮೂರ್ತಿ ಅವರ 'ಬೇಂದ್ರೆಯವರ 'ಜೋಗಿ'– ಒಂದು ವಿಶ್ಲೇಷಣೆ', ಬಸವರಾಜ ವಕ್ಕುಂದ ಅವರ 'ಮೂರು ಬಟ್ಟೆಗಳಾಚೆ ಕರೆದೊಯ್ಯುವ 'ಜೋಗಿ', ಮಲ್ಲೇಪುರಂ .ಜಿ. ವೆಂಕಟೇಶ ಅವರ 'ಜೋಗಿ : ಅನುಭಾವಿ ಪ್ರತಿನಿಧೀಕರಣ', ಪಿ. ಲಂಕೇಶ್ ಅವರ 'ಜೋಗಿಯ ಶಕ್ತಿ ಮತ್ತು ಐಬು' ಈ ನಾಲ್ಕು ಲೇಖನಗಳು ವಿವಿಧ ತಮ್ಮ ಅಧ್ಯಯನದ ಚಿಂತನೆಗಳನ್ನು ಸಮಕಾಲೀನಗೊಳಿಸುವ ಮೂಲಕ ಆಧ್ಯಾತ್ಮ, ಪ್ರಕೃತಿಯ ನವೀಕರಣದ ತಾತ್ವಿಕತೆಯನ್ನು ದರ್ಶನವಾಗಿಯೂ, ವೈಚಾರಿಕವಾಗಿಯೂ ಚರ್ಚಿಸಿದ್ದಾರೆ. ಬೇಂದ್ರೆ ಅವರ ಬೆಳಗು, ನಾಕುತಂತಿ, ನಾದಲೀಲೆ, ಕುರುಡು ಕಾಂಚಾಣ, ಅನ್ನಾವತಾರ ಮೊದಲಾದ ಕವಿತೆಗಳು ವಿಮರ್ಶಾ ದೃಷ್ಟಿಯಿಂದ ಅಧ್ಯಯನಕ್ಕೆ ಒಳಗಾದರೂ ಸಂಶೋಧನೆಯ ದೃಷ್ಟಿಯೊಂದಿಗೆ ತಾತ್ವಿಕಗೊಂಡಿವೆ. ಇಂತಹ ಕೆಲವು ಕವಿತೆಗಳೊಂದಿಗೆ ಪ್ರಸ್ತುತ ಸಮಾಜದ ಸಂಕೀರ್ಣ ಪರಿಸ್ಥಿತಿಗಳನ್ನು ಅರ್ಥೈಸುವ ಹೊಸ ಸಂಶೋಧನೆಗೆ ಇಲ್ಲಿ ಅವಕಾಶವಿದೆ.

೫. ೭. ಪತ್ರಿಕಾ ಬರಹಗಳು

ಇತ್ತೀಚೆಗೆ ಅತ್ಯಂತ ಬೇಗ ಓದುಗರನ್ನು ತಲುಪುವ ಜನಪ್ರಿಯ ಮಾಧ್ಯಮವೆಂದರೆ ಪತ್ರಿಕೆಗಳು. ಪತ್ರಿಕೆಗಳಲ್ಲಿ ಸಾಹಿತ್ಯ ಚಿಂತನೆಯೂ ಒಂದು ಭಾಗವಾಗಿ ಅದು ನಮ್ಮ ಅಧ್ಯಯನದ ಆಸಕ್ತಿಗಳನ್ನು ವಿಸ್ತರಿಸುತ್ತಾ ಸಾಗುತ್ತಿದೆ. ಬೇಂದ್ರೆ ಅವರ ಸಾಹಿತ್ಯ ಕುರಿತ ಅಧ್ಯಯನಗಳ ಬರವಣಿಗೆಗಳು ಮೊದಲಿಗೆ ಪತ್ರಿಕೆಯಲ್ಲಿಯೇ ಪ್ರಾರಂಭವಾಯಿತು. ಈ ಅಧ್ಯಯನದ ಮೊದಲ ಚಿಂತನೆಗಳನ್ನು ಈಗಾಗಲೇ ವಿಸ್ತೃತವಾಗಿ ಅಧ್ಯಯನಮಾಡಲಾಗಿದೆ. ಇಪ್ಪತ್ತೊಂದನೇ ಶತಮಾನದ ಬರಹಗಳನ್ನು ಗಮನಿಸಿದಾಗ ತಮ್ಮ ಅಧ್ಯಯನದ ವ್ಯಾಪ್ತಿಯ ಪ್ರತಿನಿಧೀಕರಣವೆಂಬಂತೆ ವಿಮರ್ಶಾ ಲೇಖನಗಳು ಕಂಡುಬರುತ್ತವೆ. ಪ್ರಭಾವ ಹಾಗೂ ವೈಯಕ್ತಿಕ ಚಿಂತನೆಯ ಮೂಲಕ ಸಾಕಷ್ಟು ಹೊಸ ಅಧ್ಯಯನಗಳು ಪ್ರಾರಂಭಗೊಂಡವು. ಇವುಗಳಿಗೆ ಸೂಕ್ತ ವೇದಿಕೆಯಂತೆ ಈ ಪತ್ರಿಕೆಗಳು ಕಾರ್ಯನಿರ್ವಹಿಸಿವೆ. ಪ್ರಜಾವಾಣಿ, ಕನ್ನಡಪ್ರಭ, ಉದಯವಾಣಿ, ವಿಜಯ ಕರ್ನಾಟಕ, ವಿಜಯವಾಣಿ, ಸಂಯುಕ್ತ ಕರ್ನಾಟಕ, ವಿಶ್ವವಾಣಿ ಮೊದಲಾದ ಪತ್ರಿಕೆಗಳಲ್ಲಿ ವಿಶೇಷ ಸಂಚಿಕೆಗಳಾಗಿ ಸುಧಾ, ಕರ್ಮವೀರ, ಕರವೇ ನಲ್ನುಡಿ, ಕಾಂತಾವರ, ಹೊಸತು ಮೊದಲಾದ ಮಾಸಿಕಗಳಲ್ಲಿ ವಿಮರ್ಶಾ ಲೇಖನಗಳನ್ನು ಗಮನಿಸಬಹುದು. ಇವುಗಳಲ್ಲಿ ಕೆಲವು ಲೇಖನಗಳು ಈಗಾಗಲೇ ಪುಸ್ತಕ ರೂಪದಲ್ಲಿ ಪ್ರಕಟಗೊಂಡಿವೆ.

ಯು. ಎನ್. ಸಂಗನಾಳ ಮಠ ಇವರು ಈ ಪತ್ರಿಕೆಗಳ ಬರಹಗಳನ್ನು ಅದರಲ್ಲೂ ವಿಶಿಷ್ಟ ಲೇಖನಗಳನ್ನು ಸಂಗ್ರಹಿಸಿದ್ದಾರೆ. ಬೇಂದ್ರೆ ಅವರ ಸಾಹಿತ್ಯದ ನಿರಂತರ ಅಧ್ಯಯನದೊಂದಿಗೆ ಇಂತಹ ಸಹೃದಯ ಕಾರ್ಯ ಮಾಡಿರುವುದನ್ನು ಗಮನಿಸಬಹುದು. ಸುಮಾರು ಎಪ್ಪತ್ತು ಲೇಖನಗಳ ಸಂಗ್ರಹ ರೂಪವೇ 'ಕಾವ್ಯ ಲೋಕದ ಗಾರುಡಿಗ' ಈ ಕೃತಿ ರೂಪವಾಗಿದೆ. ಈ ಲೇಖನಗಳನ್ನು ಅಧ್ಯಯನ ಮಾಡಿದಾಗ ಬೇಂದ್ರೆ ಅವರ ಜೀವನ ದರ್ಶನ, ಕಾವ್ಯ-ಗದ್ಯ ಸಾಹಿತ್ಯ ಕುರಿತ ಚರ್ಚೆಗಳು, ವಿಮರ್ಶೆಗಳ ಅಧ್ಯಯನ, ಒಡನಾಟದ ಪ್ರಸಂಗಗಳು, ಬೇಂದ್ರೆಯವರ ಸಾಹಿತ್ಯ ಪರಿಸರದ ಚಿಂತನೆಗಳನ್ನು ಗಮನಿಸಬಹುದು.

'ಕಾವ್ಯಲೋಕದ ಗಾರುಡಿಗ' ಈ ಕೃತಿಯಲ್ಲಿ ಐದು ವಿಭಾಗಗಳಲ್ಲಿ ವಿಭಿನ್ನ ಲೇಖನಗಳು ಸಂಗ್ರಹವಾಗಿವೆ. ಈ ಲೇಖನಗಳನ್ನು ಅಧ್ಯಯನ ಮಾಡಿ ಇವುಗಳಲ್ಲಿ ವಿಭಿನ್ನ ಮಾದರಿಯ ವಿಮರ್ಶಾ ಬರಹಗಳನ್ನು ಈ ಪ್ರಬಂಧದಲ್ಲಿ ಚರ್ಚಿಸಲಾಗಿದೆ. ಮಾಧವ ಕುಲಕರ್ಣಿಯವರು ಜೋಗಿ ಕವಿತೆ ಕುರಿತು ಈ ರೀತಿಯಲ್ಲಿ ಗ್ರಹಿಸಿದ್ದಾರೆ

> ಜೋಗಿ ಎಂಬುದು ಬೇಂದ್ರೆಯವರ ಅತ್ಯಂತ ಮಹತ್ವದ ಕವನವಾಗಿದೆ. ಕೆಲವು ವಿಮರ್ಶಕರು 'ಜೋಗಿ' ಕವನವನ್ನು 'ಶತಮಾನದ ಕವಿತೆ' ಎಂದು ಕೂಡ ಗುರ್ತಿಸಿದ್ದಾರೆ. ಈ ಕವನವನ್ನು ಹಲವಾರು ವಿಮರ್ಶಕರು ವಿವಿಧ ದೃಷ್ಟಿಕೋನಗಳಿಂದ ನೋಡಿದ್ದಾರೆ. ಆದರೆ ಇದರ ಹಿನ್ನಲೆಯನ್ನು ನೋಡಿದಾಗ, ಇದು ಬೇಂದ್ರೆಯವರ 'ಮೌನ ವ್ರತ'ದ ಫಲವಾಗಿ ಬಂದ ಕವನವೆಂದು ತಿಳಿದು ಬರುತ್ತದೆ. ಹೀಗಾಗಿ ಇದನ್ನು ಅವರ ಆಧ್ಯಾತ್ಮಿಕ ನೆಲೆಯಿಂದ ಬಂದ ಕವನಗಳ ಸಾಲಿಗೇ ಸೇರಿಸಬೇಕಾಗುತ್ತದೆ. ಆಧ್ಯಾತ್ಮದ ಕೇಂದ್ರ ಸ್ಥಾನಕ್ಕೆ ಬಂದು ನೆಲೆನಿಲ್ಲಬೇಕಾದ ಸಂದರ್ಭದಲ್ಲಿ ಬರೆದ ಕವನವೇ ಇದು. ಇಂಥ ನೆಲೆಗಳ ಸ್ಪರ್ಷವಿಲ್ಲದಿರುವುದು ಈ ಕವನವನ್ನು ಅನವಶ್ಯಕವಾಗಿ 'ಕಾಮ'ದ ನೆಲೆಯಲ್ಲಿ ಕೂಡ ನಿಂತು ವಿಶ್ಲೇಷಿಸಿದ್ದಾರೆ! ಇದು ಬೇಂದ್ರೆಯವರ ಒಟ್ಟು ಕಾವ್ಯಲೋಕಕ್ಕೆ ಅನ್ವಯಿಸುವ ಮಾತಾಗಿದೆ.''

ಶತಮಾನದ ಕವಿತೆಯೆಂದು ಕರೆಯಲು ಕೆಲವು ಕಾರಣಗಳಿವೆ. ಒಂದು ಕವಿತೆಯನ್ನು ವಿವಿಧ ವಿಮರ್ಶಕರು ಹೊಸ ಓದುಗಳೊಂದಿಗೆ ಮತ್ತೆ ಸಾಧ್ಯತೆಗಳನ್ನು ಸೃಷ್ಟಿಸುವ ಸಾಲಿನಲ್ಲಿ ಜೋಗಿ, ನಾಕುತಂತಿ, ನಾದಲೀಲೆ, ಗಂಗಾವತರಣ, ಸಖೀಗೀತ ಮೊದಲಾದ ಕವಿತೆಗಳು ಹಾಗೂ ಸಂಕಲನಗಳು ಓದುಗಳ ನಡುವೆ ಉಳಿಯುತ್ತವೆ. ವಿಮರ್ಶೆ ವೈಯಕ್ತಿಕವಾದುದು. ಬೇಂದ್ರೆ ಅವರು ಬದುಕಿದ್ದಾಗಲೇ ಬೇಂದ್ರೆ ಅವರ ಕವಿತೆ ಕುರಿತು ಸಾಕಷ್ಟು ತರ್ಕಗಳು ಬಂದದ್ದು ಇದೆ. ಆ ಸಂದರ್ಭಗಳಲ್ಲಿ ಬೇಂದ್ರೆ ಅವರದು ಒಂದೇ ತೀರ್ಮಾನ! 'ಓದುಗನಿಗೆ ಕವಿತೆ ಇನ್ನೂ ಅರ್ಥವಾಗಿಲ್ಲ'ವೆಂದು. ಪ್ರತಿಯೊಂದು ಕವಿತೆಗೂ ಓದುವ ಸಾಧ್ಯತೆಗಳು ಭಿನ್ನವಾಗಿರುತ್ತವೆ. ವಿಮರ್ಶೆಯ ಸಾಧ್ಯತೆಗಳು ಈ ಹೊಸ ಓದುವಿನ ಹಾದಿಯಲ್ಲಿ ಸಾಗುತ್ತವೆ. ಅಧ್ಯಯನಕ್ಕೆ 'ಸಹೃದಯತೆ' ಮುಖ್ಯ ಎನಿಸುತ್ತದೆ. ಎಸ್.ಎಲ್. ಭೈರಪ್ಪನವರು ಬೇಂದ್ರೆ ಅವರ ಓದುವಿನ ಅರವು ಹಾಗೂ ಶಕ್ತಿಯನ್ನು ಗಮನಿಸುತ್ತಾ 'ಪ್ರಚಂಡ ಕಾವ್ಯ ಪ್ರತಿಭೆ'ಯು ಜ್ಞಾನಬಲದಿಂದ

ಬಂದಿರುವಂತಹದು. ಅದು ಬೇಂದ್ರೆ ಅವರು ಸಾಧಿಸಿದ್ದಾರೆ ಎಂದು 'ಬೇಂದ್ರೆ ಅಂದರೆ..' ಎಂಬ ಲೇಖನದಲ್ಲಿ ತಿಳಿಸಿದ್ದಾರೆ. ಎಸ್. ಆರ್. ವಿಜಯಶಂಕರ ಅವರು 'ಕವಿ ದಿನದ ನೆನಪಲ್ಲಿ ಮತ್ತೆ ಬೇಂದ್ರೆ' ಎಂಬ ಲೇಖದಲ್ಲಿ ಬೇಂದ್ರೆಯವರ ಕಾವ್ಯವು ಒಂದು ನೆನಪಿನ ಲಹರಿಯಂತೆ ಸಾಗುತ್ತದೆ ಎಂಬುದಕ್ಕೆ 'ಚಂದ್ರ' ಪ್ರತಿಮೆಯ ವಿವರಿಸುತ್ತಾರೆ. 'ವರಕವಿ ದೃಷ್ಟಿಯಲ್ಲಿ ನಾಡಹಬ್ಬ' ಈ ಲೇಖನದಲ್ಲಿ ಸಿ. ಪಿ. ಮಾಯಾಚಾರಿ ಅವರು ಕನ್ನಡದ ನಾಡಹಬ್ಬವನ್ನು ಮೊದಲು ಬೇಂದ್ರೆಯವರು ಗೆಳೆಯರ ಗುಂಪಿನ ಮೂಲಕ ಪ್ರಾರಂಭಿಸಿದ ಬಗೆಯನ್ನು ತಿಳಿಸಿದ್ದಾರೆ. ಜೊತೆಗೆ ನಾಡಹಬ್ಬದೊಂದಿಗೆ ಕರ್ನಾಟಕದ ಸಂಸ್ಕೃತಿ–ಪರಂಪರೆಯನ್ನು ಗಮನಾರ್ಹವಾಗಿ ಪರಿಶೀಲಿಸಲಾಗಿದೆ. ಇದೇ ವಿಚಾರವನ್ನು ಜಿ. ಕೃಷ್ಣಪ್ಪನವರು ವಿಜಯಕರ್ನಾಟಕ ಪತ್ರಿಕೆಯಲ್ಲಿ ಅಂಕಣ ರೂಪದಲ್ಲಿ ಚರ್ಚಿಸಿ ಹೊಸ ಆಯಾಮ ನೀಡಿದ್ದಾರೆ. ಗೆಳೆಯರ ಗುಂಪು ನಿರ್ವಹಿಸಿದ ಪ್ರಮುಖ ಕಾರ್ಯಗಳಲ್ಲಿ ನಾಡಹಬ್ಬದ ಸಂಘಟನೆಯು ಮುಖ್ಯವಾದುದು. ಆದರೆ ಕನ್ನಡ ಸಾಹಿತ್ಯದಲ್ಲಿ ಈ ಕುರಿತು ಚರ್ಚೆಗಳು, ಸಂಸ್ಕೃತಿಯ ಚಿಂತನೆ ಅತಿ ಕಡಿಮೆ ನಡೆದಿದೆ.

'ಜಾನ್ ಕೀಟ್ಸ್ ಮತ್ತು ಬೇಂದ್ರೆ' ಎಂಬ ಲೇಖನದಲ್ಲಿ ಬಸವರಾಜ ಪಿ. ಡೋಣೂರ ಅವರು ಬೇಂದ್ರೆ ಅವರ ಕವಿತೆಗಳನ್ನು ಜಾನ್ ಕೀಟ್ಸ್ ಅವರ ಕವಿತೆಗಳೊಂದಿಗೆ ತೌಲನಿಕ ಅಧ್ಯಯನ ಮಾಡಿದ್ದಾರೆ.

ಕೀಟ್ಸ್, ಕಾಳಿದಾಸ ಮೊದಲಾದವರಂತೆ ಕಾಮವನ್ನು ಬೇಂದ್ರೆ ಅವರು ತನ್ನ ಕಾವ್ಯದಲ್ಲಿ ಬಳಸಿದ್ದಾರೆ ಎನ್ನುವ ಈ ಲೇಖನದಲ್ಲಿ ಸೀಮಿತ ಚರ್ಚೆ ಮಾಡಿದ್ದಾರೆ. ಕುರ್ತಕೋಟಿ ಒಬ್ಬರೇ ಈ ಕ್ಷೇತ್ರ ಕುರಿತು ಚರ್ಚಿಸಿರುವುದು ಎನ್ನುವ ವಿಮರ್ಶಕರು ಅಧ್ಯಯನದ ವಿಸ್ತಾರ ತಲುಪಿಲ್ಲ. ಪ್ರತಿ ವಿಮರ್ಶಕರು ಬೇಂದ್ರೆ ಅವರ ಕಾವ್ಯದಲ್ಲಿ ಕಾಮದ ಚಿಂತನೆಯು ಕಾವ್ಯದ ಒಂದು ಅನುರಾಗವಾಗಿಯೇ ಒಡಮೂಡಿದೆ. ಡೇಣೂರ ಅವರು

ಕುರ್ತಕೋಟಿಯವರನ್ನು ಹೊರತುಪಡಿಸಿ ಇನ್ನುಳಿದ ವಿಮರ್ಶಕರು ಬೇಂದ್ರೆ ಅವರ ಕಾವ್ಯದ ಮುಖ್ಯ ಧ್ವನಿಯಾಗಿರುವ ಕಾಮಪ್ರಕೃತಿಯನ್ನು ಗಂಭೀರವಾದ ಅಧ್ಯಯನಕ್ಕೆ ಒಳಪಡಿಸದಿರುವುದು ದುರದೃಷ್ಟಕರ ಸಂಗತಿ. ಬೇಂದ್ರೆ ಮೂಲಭೂತವಾಗಿ ಕವಿ ಎಂದು ತಿಳಿದರೆ ಅವರ ಕಾವ್ಯದಲ್ಲಿಯ ಕಾಮದ ಬಗ್ಗೆ ಇಷ್ಟು ತಲೆ ಕೆಡಿಸಿಕೊಳ್ಳುವ ಪ್ರಮೇಯವೇ ಬರುವುದಿಲ್ಲ. .. ಬೇಂದ್ರೆಯವರ ಕಾವ್ಯದ ಹಲವು ಮಗ್ಗಲುಗಳ ಕುರಿತು ಕನ್ನಡದಲ್ಲಿ ಮೌಲಿಕವಾದ ವಿಮರ್ಶೆ ಬಂದಿದೆ. ಅವರ ಕಾವ್ಯದ ಸತ್ವವನ್ನು ಕುರ್ತಕೋಟಿಯವರು ತಮ್ಮ ಹಲವು ಕೃತಿಗಳಲ್ಲಿ ಸಮರ್ಥವಾಗಿ ಸುದೀರ್ಘವಾಗಿ ಮಾಡಿದ್ದಾರೆ. ಅವರು ಬೇಂದ್ರೆ ಕಾವ್ಯದಲ್ಲಿಯ 'ಶ್ರಾವಣ ಪ್ರತಿಭೆ' ಕುರಿತು ಪ್ರಸ್ತಾಪಿಸಿದ್ದಾರೆ. ಗೋಕಾಕರು ಬೇಂದ್ರೆಯವರು 'ಆರ್ಷದೃಷ್ಟಿ'ಯ ಕುರಿತು ಬರೆದಿದ್ದಾರೆ. ಅವರ ಕಾವ್ಯದಲ್ಲಿಯ 'ಆಧ್ಯಾತ್ಮಿಕತೆ'ಯ ಕುರಿತು ಇನ್ನೂ ಹಲವರು ಬರೆದಿದ್ದಾರೆ.೪೫

ಕೀಟ್ಸ್ ತನ್ನ ಕಾವ್ಯದಲ್ಲಿ ಸ್ಮರಿಸಿದ್ದನ್ನು ಬದುಕಿನಲ್ಲಿ ಗೆಲ್ಲಲಾಗಲಿಲ್ಲ. ಬೇಂದ್ರೆ ಸಾಧಿಸಿದರು ಎಂಬ ತೌಲನಿಕ ಚರ್ಚೆಯ ಮೂಲಕ ಅಧ್ಯಯನ ಮಾಡಿದ್ದಾರೆ.

ಈ ಕೃತಿಯ ಸಂಪಾದಕರಾದ 'ಕಾವ್ಯ ಲೋಕದ ಗಾರುಡಿಗ ಬೇಂದ್ರೆ' ಎಂಬ ಲೇಖನವು ಮಹತ್ವದ ವಿಷಯಗಳನ್ನು ತಿಳಿಸುತ್ತದೆ. ಇಲ್ಲಿ ಯಾವುದೇ ವಿಮರ್ಶೆಯ ವಿಚಾರಗಳು ಇಲ್ಲದಿದ್ದರೂ ಬೇಂದ್ರೆ ಅವರ ಬದುಕಿಗೆ ಸಂಬಂಧಿಸಿದ ವಿಶೇಷ ಅನುಭವದ ನೆನಪುಗಳು ಇಲ್ಲಿವೆ. ಅದಕ್ಕೆ ಪೂರಕವಾಗಿ ಕೆಲವು ಕವಿತೆಗಳೊಂದಿಗೆ ಚರ್ಚಿಸಿದ್ದಾರೆ.

> ಡಾ. ಗಂಗೂಬಾಯಿ ಹಾನಗಲ್ ಅವರು ಹಿರಿಯರಾದ ಬೇಂದ್ರೆ ಅವರಿಗೆ ಅಮೆರಿಕದಿಂದ ನೆನಪಿಗೆ ಎಂದು ನಶೆಪುಡಿ ಬಣ್ಣದ ಮಂಕಿಕ್ಯಾಪ್ ತಂದಿದ್ದರು. ಇದನ್ನು ಬೇಂದ್ರೆ ತಮ್ಮ ಕೊನೆಗಾಲದವರೆಗೂ ಧರಿಸಿದ್ದರು. ತಮ್ಮ ಮಗ ಡಾ. ವಾಮನ ಬೇಂದ್ರೆ ಕೊಂಡಾವೆಸ್ಪಾ೧೫೦ ಸ್ಕೂಟರಿನಲ್ಲಿ ಬೇಂದ್ರೆ ಬದುಕಿರುವವರೆಗೂ ಅಲ್ಲಲ್ಲಿ ಸಂಚರಿಸುತ್ತಿದ್ದರು. ೧೯೧೮ರಿಂದಲೂ ಕಬ್ಬಿಣದ ಛತ್ರಿ ಬೇಂದ್ರೆಯವರ ಸಂಗಾತಿ. ಛತ್ರಿಯನ್ನು ಬಿಸಿಲು, ಮಳೆಯಿಂದ ರಕ್ಷಣೆಗಾಗಿ, ನಾಯಿ, ದನ ಹೊಡೆಯಲು, ಊರುಗೋಲಾಗಿ ಉಪಯೋಗಿಸುತ್ತಿದ್ದರು. ಬೇಂದ್ರೆಯವರು ಸೊಲ್ಲಾಪುರದ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದಾಗ ಸಮಯ ನೋಡಲು ಪತ್ನಿ ಅಷ್ಟಿಷ್ಟು ಹಣ ಕೂಡಿಸಿ ಕೊಡಿಸಿದ್ದ ಫೆವರಲ್ಯೂಬಾ ರಿಸ್ಟ್ ವಾಚ್‌ನ್ನು ಕೊನೆಯವರೆಗೂ ಕಟ್ಟಿಕೊಳ್ಳುತ್ತಿದ್ದರು.[೪೭]

ಹೀಗೆ ಅತ್ಯಂತ ಮೌಲ್ಯಯುತವಾದ ನೆನಪುಗಳು ದಾಖಲಾಗಿವೆ. ಪ್ರಸ್ತುತ ನಮ್ಮ ಸಮಾಜದಲ್ಲಿ ಕೆಲವು ಮಂದಿ ಬೇಂದ್ರೆ ಅವರನ್ನು ಕಂಡವರು ಇದ್ದಾರೆ. ಅವರ ನೆನಪಿನಲ್ಲಿ ಬೇಂದ್ರೆ ಮತ್ತು ಸಮಾಜದ ಚಿತ್ರಗಳು ನಿಚ್ಚಳವಾಗಿ ಮೂಡಿಬರುತ್ತವೆ.

ಪ್ರಕಾಶ್ ಖಾಡೆಯವರ 'ಬೇಂದ್ರೆ ಕಾವ್ಯದಲ್ಲಿ ಗಾದೆ, ನಾಣ್ನುಡಿ, ಪಡೆನುಡಿ, ನುಡಿಗಟ್ಟುಗಳ ಸಮೃದ್ಧತೆ' ಎಂಬ ಲೇಖನ ಹೊಸದಿಗಂತದ ಯುಗಾದಿ ವಿಶೇಷಾಂಕದಲ್ಲಿ ೨೦೧೩ರಲ್ಲಿ ಪ್ರಕಟವಾಯಿತು. ಈ ಲೇಖನವು ಇನ್ನೂ ವಿಸ್ತಾರಗೊಳ್ಳುವ ಅಗತ್ಯವಿದೆ. ಇದೊಂದು ಪೀಠಿಕೆಯಂತೆ ಭಾವಿಸಬಹುದು. ಉಕ್ತಿ, ಚತುರೋಕ್ತಿ, ಗಾದೆ, ನಾಣ್ನುಡಿಗಳನ್ನು ಅತ್ಯಂತ ಲೀಲಾಜಾಲವಾಗಿ ಬಳಸಿದ್ದಾರೆ. ಈ ಲೇಖನವನ್ನು ಅಧ್ಯಯನ ಮಾಡಿದಾಗ ಕೆಲವು ಉದಾಹರಣೆಗಳು ತಿಳಿಯುತ್ತವೆ. ಇದೇ ಸಂಗ್ರಹದಲ್ಲಿ ಕೆಲವು ಭಿನ್ನವಾದ ಲೇಖನಗಳನ್ನು ಅಧ್ಯಯನ ಮಾಡಬಹುದು. ನಾಗೇಗೌಡ ಬಿ. ಆರ್ ಅವರ 'ರೈತ ಧ್ವನಿಯಾಗಿ ಬೇಂದ್ರೆ' ಈ ಲೇಖನವು ಶ್ರಾವಣ ಕವಿಯಾಗಿ ಬೇಂದ್ರೆ ಹಾಗೂ ಬಡತನ, ಅನ್ನದ ಮಹತ್ವ ಮೊದಲಾದ ಅಲೋಚನೆಗಳನ್ನು ಕುರಿತ ಚಿಂತನೆಯು ಪರಿಚಯಾತ್ಮಕವಾಗಿ ಮೂಡಿದೆ. ಒಕ್ಕುಂದ ಎಂ. ಡಿ. ಅವರು ೨೦೧೨ರ ಫೆಬ್ರವರಿಯ ಹೊಸತು ಪತ್ರಿಕೆಯಲ್ಲಿ 'ಬೇಂದ್ರೆಯವರ 'ಶ್ರದ್ಧಾಂಜಲಿ' ಹಾಗೂ ಕೋಮುವಾದ ವಿರೋಧಿ ಸೃಜನಾತ್ಮಕ ನೆಲೆ' ಎಂಬ ಈ ಲೇಖನವನ್ನು ರಚಿಸಿದ್ದಾರೆ. ವಸಾಹತುಶಾಹಿ ಚಿಂತನೆಯಿಂದ ಮೂಡಿದ ಕೋಮುವಾದಿ ಚಿಂತನೆಯನ್ನು ಬೇಂದ್ರೆ ನಿರೂಪಿಸಿದ ಜೊತೆಗೆ ನಿರಾಕರಿಸಿದ ಬಗೆಯನ್ನು ಕಾವ್ಯತತ್ತ್ವದಮೇಲೆ ಚರ್ಚಿಸಿದ್ದಾರೆ.

ಗಾಂಧೀಜಿಯವರ ಸಾವನ್ನು ಕುರಿತಾದ ಉದಾರವಾದಿ ಬರವಣಿಗೆಗೂ, ಮತೀಯ ನಿರ್ಮತೀಯ ರಾಷ್ಟ್ರೀಯತೆಯ ಅನುಸಂಧಾನದ ಅಭಿವ್ಯಕ್ತಿಗೂ, ಸಂಕರಶೀಲ ನೆಲೆಯಿಂದ ವಿರೋಧಿಸುವ ಕಾವ್ಯಕ್ಕೂ, ವ್ಯಾತ್ಯಾಸವಿದೆ. ಬೇಂದ್ರೆಯವರು 'ಗಾಂಧೀಜಿ'ಯವರನ್ನು ಕುರಿತಾಗಿ 'ಶ್ರದ್ಧಾಂಜಲಿ'ಯಂಥ ಕವಿತೆಯನ್ನು ಬರೆಯಲು ಸಾಧ್ಯವಾಗಿದ್ದು ಬಹುತ್ವವನ್ನು ಒಪ್ಪುವ ಸಂಕರಿತ ಪ್ರಜ್ಞೆಯ ನೆಲೆಯಿಂದ. ಇದನ್ನು ಕೋಮವಾದ ವಿರೋಧಿ ಸೃಜನಶೀಲ ನೆಲೆ ಎಂದು ಗುರುತಿಸಬಹುದಾಗಿದೆ.[೪]

ಬೇಂದ್ರೆ ಅವರ ಕಾವ್ಯದಲ್ಲಿ ಅಭಿವ್ಯಕ್ತಗೊಳ್ಳುವ ರಾಜಕೀಯ ಹಿನ್ನಲೆಯನ್ನು ಗುರ್ತಿಸದೇ ಇರುವ ಕಾರಣ ವಸಾಹತುಶಾಹಿ ಹಾಗೂ ವಸಾಹತೋತ್ತರ ಬದುಕಿಗೆ ನೀಡಿದ ಪ್ರತಿಕ್ರಿಯೆಗಳನ್ನು ಗುರ್ತಿಸುವುದು ಕಷ್ಟವಾಗಿದೆ ಎಂದು ತೀರ್ಮಾನಿಸುವ ಎಂ. ಡಿ. ಒಕ್ಕುಂದ ಅವರ ಅಭಿಪ್ರಾಯವು ಸರಿಯಾಗಿದ್ದರೂ ಸಮಗ್ರವಾಗಿಲ್ಲ. ಈ ಕುರಿತು ಕೆ.ಸಿ. ಶಿವಾರೆಡ್ಡಿ ಅವರ ಸಂಶೋಧನಾ ಕೃತಿಯು ಕೇವಲ ಬೇಂದ್ರೆ ಅವರನ್ನು ಪ್ರತ್ಯೇಕವಾಗಿ ಚರ್ಚಿಸದೇ ಕುವೆಂಪು, ಅಡಿಗರು, ಕಂಬಾರರ ಕಾವ್ಯದಲ್ಲಿಯೂ ಈ ಪ್ರತಿಕ್ರಿಯೆಗಳನ್ನೇ ಮುಖ್ಯ ಧೋರಣೆಯನ್ನಾಗಿ ಚರ್ಚಿಸಲಾಗಿದೆ. ಒಕ್ಕುಂದ ಅವರ ಲೇಖನ ಉತ್ತಮ ಮಾದರಿಯ ಹೊಸ ಚಿಂತನೆಯನ್ನು ನಮಗೆ ನೀಡುತ್ತದೆ. ಬೇಂದ್ರೆ ಅವರ ಸಂಕರಶೀಲ ಪ್ರತಿಭೆಯನ್ನು ಭಾರತೀಯ ಸಂಸ್ಕೃತಿಯ ಬಹುಮುಖತೆ ಹಾಗು ಸಂಕರಶೀಲತೆಗಳು ಬೇಂದ್ರೆ ವ್ಯಕ್ತಿತ್ವದ ಜೀವದ್ರವ್ಯಗಳಾಗಿ ಕೆಲಸಮಾಡಿರುವುದನ್ನು ಇವರ ವಿಮರ್ಶೆಯ ಸ್ವರೂಪವಾಗಿ ಗುರ್ತಿಸಬಹುದು. ರಾಷ್ಟ್ರೀಯವಾದಿ ಚಿಂತನೆಗಳು ನಿರ್ಮತೀಯವಾಗಿ ಸ್ವೀಕರಿಸಿದ ನವೋದಯ ಕವಿಗಳಲ್ಲಿ ಬೇಂದ್ರೆ ಅವರು ಪ್ರಮುಖರು ಎಂಬುದಕ್ಕೆ ಗಾಂಧೀ ಕುರಿತ 'ಶ್ರದ್ಧಾಂಜಲಿ' ಕವಿತೆಯೊಂದಿಗೆ ಚರ್ಚಿಸಿದ್ದಾರೆ. ಬೇಂದ್ರೆ ಅವರಲ್ಲಿ ಕಾವ್ಯಕುತೂಹಲವನ್ನು ಪ್ರತಿನಿಧಿಸುವ ಇವರ ವಿಮರ್ಶೆಯು ಕೆಲವು ತಾತ್ವಿಕ ಚಿಂತನೆಗಳನ್ನು ನೀಡುತ್ತದೆ. ಹಿಂಸೆ ಮತ್ತು ಅಹಿಂಸೆಯ ಪ್ರತಿನಿಧೀಕರಣವಾಗಿ ಬೇಂದ್ರೆ ಅವರು 'ಶ್ರದ್ಧಾಂಜಲಿ' ಕವಿತೆಯಲ್ಲಿ ಗಾಂಧೀ ಮತ್ತು ಗೂಡ್ಸೆಯನ್ನು ಪ್ರತಿಮೆಗಳಲ್ಲಿ ಅವಲೋಕಿಸುತ್ತಾರೆ. ಒಂದು ಪ್ರಶ್ನಾರ್ಥಕ ಚಿಹ್ನೆಯು ಆಶ್ಚರ್ಯಸೂಚಕ ಚಿಹ್ನೆಯಾಗಿಯೂ, ನಿಷೇದಾರ್ಥಕವಾಗಿಯೂ ಕೂಡ ಅಭಿವ್ಯಕ್ತಗೊಳ್ಳುವ ಬಗೆಯು ಅತ್ಯಂತ ವಿಶೇಷವಾದುದು. ಈ ದಿಸೆಯಲ್ಲಿ ಬೇಂದ್ರೆ ಅವರ ವೈಚಾರಿಕತೆಯು ನಿರ್ಮತೀಯವಾದರೂ ಜನಾಂಗದ ಒಳದನಿಯಾಗಿಯೂ ಅಭಿವ್ಯಕ್ತಗೊಂಡ ಬಗೆಯನ್ನು ಗಮನಿಸಿದ್ದಾರೆ. ಇಂತಹ ಲೇಖನಗಳು ಅಧ್ಯಯನದ ಹೊಸ ಸಾಧ್ಯತೆಗಳನ್ನು ನಿರ್ಮಿಸುತ್ತವೆ ಎನ್ನಬಹುದು.

'ಹುಬ್ಬಳ್ಳಿಯಾಂವಾ' ಎಂಬ ಕವಿತೆಯು ಹಲವು ವಿಮರ್ಶೆಗಳನ್ನು ಪಡೆದ ಕವಿತೆ. ವಿಭಿನ್ನ ಬಗೆಯ ಅಧ್ಯಯನದ ಸಾಧ್ಯತೆಗಳನ್ನು ಪಡೆದುಕೊಂಡರೂ ಒಂದು ಪ್ರಶ್ನಾತೀತವಾಗಿ ಉಳಿಯುವ ಹಲವು ಚಿಂತನೆಗಳು ಒಡಮೂಡಿವೆ. ಇದೊಂದು ಕವಿತೆಯ ಹಿನ್ನಲೆಯಲ್ಲಿ ವಿವಿಧ ಪತ್ರಿಕೆಗಳಲ್ಲಿ ೨೦೧೧ರ ವೇಳೆಗೆ ನಡೆದ ಚರ್ಚೆಗಳೊಂದಿಗೆ ಕನ್ನಡ ಸಾಹಿತ್ಯದಲ್ಲಿ ಇದುವರೆಗೂ ನಡೆದ ಚರ್ಚೆಗಳನ್ನು ಗಮನಿಸಬಹುದು. ಶ್ರೀನಿವಾಸ ವೈದ್ಯ, ಕುರ್ತಕೋಟಿ ಇವರೆಲ್ಲಾ ಬೇಂದ್ರೆ ಅವರನ್ನು

ಅತ್ಯಂತ ಹತ್ತಿರದಿಂದ ಬಲ್ಲವರು. ಸುಮತೀಂದ್ರ ನಾಡಿಗರು ಸರಿಯಾದ ಅಧ್ಯಯನವಿಲ್ಲದೆ ಚರ್ಚಿಸಿರುವ ಸಂಶೋಧನಾ ಪ್ರಬಂಧದ ಹಲವು ವಿಚಾರಗಳು ಸಾಕಷ್ಟು ಚರ್ಚೆಗೆ ಕಾರಣವಾಗಿದೆ. ಈಗಾಗಲೇ ನನ್ನ ಪ್ರಬಂಧದಲ್ಲಿಯೂ ವಿಸ್ತಾರವಾಗಿ ಚರ್ಚಿಸಿದ್ದೇನೆ. ಸುಮತೀಂದ್ರ ನಾಡಿಗ ಅವರ ಪತ್ರಿಕಾ ಬರಹವು ಗಿರಡ್ಡಿ ಗೋವಿಂದರಾಜ ಅವರು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಬೇಂದ್ರೆ ಅವರ ಸಾಹಿತ್ಯ ಕುರಿತು 'ಕನ್ನಡ ಕಾವ್ಯ ಪರಂಪರೆ ಮತ್ತು ಬೇಂದ್ರೆಯವರ ಕಾವ್ಯ' ಎಂಬ ಭಾಷಣಕ್ಕೆ ಪ್ರತಿಕ್ರಿಯೆ ಎಂಬಂತೆ ಮೂಡಿಬಂದಿರುತ್ತದೆ. ಇದಕ್ಕೆ ವಾಮನಬೇಂದ್ರೆ ಅವರು ಪತ್ರಿಕೆಯಲ್ಲಿಯೇ ಪ್ರತಿಕ್ರಿಯೆ ನೀಡುತ್ತಾರೆ. ಜೊತೆಗೆ ಗಿರಡ್ಡಿ ಗೋವಿಂದರಾಜ ಅವರು ನಾಡಿಗರಿಗೆ ಕವಿತೆ ಅರ್ಥವಾಗಿಲ್ಲದ ಮಾದರಿಗಳೊಂದಿಗೆ ಪತ್ರಿಕೆಯಲ್ಲಿ ಪ್ರತಿಕ್ರಿಯಿಸುತ್ತಾರೆ. ಜೊತೆಗೆ ಈ ಪ್ರತಿಕ್ರಿಯೆಗಳನ್ನು ಗಮನಿಸಿದ ಶ್ರೀನಿವಾಸ ವೈದ್ಯ ಅವರು ಕವಿತೆಯ ಕಥಾನಾಯಕಿಯಾದ ಜೋಗತಿಯನ್ನು ಕಂಡ ಅನುಭವಗಳನ್ನು ಹಂಚಿಕೊಳ್ಳುವ ಮೂಲಕ ಚರ್ಚೆಗೆ ಉತ್ತರ ವನ್ನೊದಗಿಸಿದ್ದಾರೆ.

ಪ್ರಶ್ನೆ ಇರುವುದು ನಾಯಕಿಯ ಕುರಿತಲ್ಲ. ಈ ಕವಿತೆಯನ್ನು ಅನುಭಾವ ಕವಿತೆಯಾಗಿ ನೋಡುವ ದೃಷ್ಟಿಯ ಕುರಿತಾಗಿ. ಈ ವಿಚಾರವನ್ನು ಕೀರ್ತಿನಾಥ ಕುರ್ತಕೋಟಿ ಅವರು ಪ್ರಾರಂಭಿಸಿದ್ದರೂ ರಂ. ಶ್ರೀ ಮುಗಳಿ ಅವರಿಂದ ಮುಂದುವರೆಯುತ್ತದೆ. ಗಿರಡ್ಡಿ ಅವರು ಇದನ್ನು ವಿಸ್ತಾರವಾಗಿ ಚರ್ಚಿಸಿದ್ದಾರೆ.

> ಇದನ್ನೊಂದು ಅನುಭಾವ ಕವಿತೆಯಾಗಿ ಪರಿಗಣಿಸಬಹುದೆಂಬುದಕ್ಕೆ ಕವಿತೆಯಲ್ಲಿಯೇ ಕೆಲವು ಅಂತರ್ಪಠ್ಯೀಯ ಸೂಚನೆಗಳು ಸಿಗುತ್ತವೆ. ೧. ಅನುಭಾವ ಕಾವ್ಯದಲ್ಲಿ ಮತ್ತು ಮಧುರಾಭಕ್ತಿಯಲ್ಲಿ 'ಶರಣಸತಿ ಲಿಂಗಪತಿ' ಎಂಬ ಪರಿಕಲ್ಪನೆ ಸಾಕಷ್ಟು ವ್ಯಾಪಕವಾಗಿ ಕಾಣಿಸಿಕೊಳ್ಳುತ್ತದೆ. ವಚನಗಳಲ್ಲಿ ಮತ್ತು ತತ್ವಪದಗಳಲ್ಲಿ ಇದನ್ನು ಧಾರಾಳವಾಗಿ ನೋಡಬಹುದು. 'ಹುಬ್ಬಳ್ಳಿಯಾಂವ' ಕವಿತೆಯ ನಾಯಕ–ನಾಯಕಿಯರನ್ನು ಆ ಪರಿಕಲ್ಪನೆಯಲ್ಲಿ ನೋಡುವುದು ಸಾಧ್ಯವಿದೆ. ಹಾಗಿದ್ದರೆ ಅವನು ಹುಬ್ಬಳ್ಳಿಯವನೇಕೆ? ಅವನ ಉಡಿಗೆ–ತೊಡಿಗೆ, ಹಾವಭಾವಗಳಿಗೆ ಅವೇ ನಿರ್ದಿಷ್ಟ ಚಹರೆಗಳೇ? ಇವುಗಳಿಗೆ ವಿಶೇಷ ಅರ್ಥಗಳೇನೂ ಇರಬೇಕಾಗಿಲ್ಲ. ಶರೀಫರ ಹಾಡುಗಳಲ್ಲಿ ಈ ಬದುಕೆಂಬ ಸಂತೆ 'ಹುಲಗೂರ ಸಂತೆ'ಯಾಗುತ್ತದೆ; ಅನುಭಾವದ ಕೊಡ ಹುಬ್ಬಳ್ಳಿಯ ಮಾಟ ಪಡೆಯುತ್ತದೆ. ಇವೆಲ್ಲ ಅಮೂರ್ತಗಳಿಗೆ ನಾಮರೂಪಗಳನ್ನು ಕೊಡುವ, ಅನುಭಾವವನ್ನು ಲೌಕಿಕದ ಬದುಕಿಗೆ ಎಳೆದುಕೊಳ್ಳುವ ವಿಧಾನಗಳು; ಸಾಮಾನ್ಯ ದೈನಿಕರಗಳಲ್ಲೇ ಅನುಭಾವದ ದರ್ಶನ ಮೂಡಿಸುವ ಪರಿಗಳು.[೮]

ಒಂದು ಕವಿತೆ ಸಾಮಾನ್ಯ ಜಿಜ್ಞಾಸೆಗಳಲ್ಲಿಯೇ ಕಳೆದುಹೋಗುವ ವಿಮರ್ಶೆಗಳಿಗಿಂತ ಒಳಹರಿವು ಮೂಡಿಸುವ ವಿಮರ್ಶೆಗಳ ಅಧ್ಯಯನ ಮುಖ್ಯವಾಗಿದೆ. ಇಂತಹ ಬರಹಗಳಲ್ಲಿ ಏಕಮುಖ ಅಧ್ಯಯನ ಮೂಡಿಬರದೆ ಹಲವು ಕವಿತೆಗಳೊಂದಿಗೆ ಒಂದು ಕವಿತೆಯ ತಾತ್ವಿಕತೆಯನ್ನು ಗ್ರಹಿಸುವ ಆಯಾಮಗಳು ದೊರಕುತ್ತವೆ.

ಬೇಂದ್ರೆ ಸಾಹಿತ್ಯ ಕುರಿತು ಇನ್ನೂ ಹಲವು ವಿಮರ್ಶೆಗಳು ರಚನೆಗೊಂಡಿವೆ. ನನ್ನ ಪ್ರಬಂಧದ ದೃಷ್ಟಿಯಲ್ಲಿ ದೊರಕಿದ ಎಲ್ಲಾ ಕೃತಿಗಳನ್ನು ಅಧ್ಯಯನ ಮಾಡಿದ್ದೇನೆ. ಮೌಲ್ಯಯುತವಾದ ಬರಹಗಳನ್ನು ಈ ಪ್ರಬಂಧದಲ್ಲಿ ಅಧ್ಯಯನರೂಪವಾಗಿ ಬಳಸಿಕೊಂಡಿರುವೆ. ತೌಲನಿಕ ಅಧ್ಯಯನ ರೂಪದಲ್ಲಿ ವಿಮರ್ಶೆ ಮಾಡದೆ, ಅಗತ್ಯವಿರುವ ಕಡೆ ಮಾತ್ರ ಪರಸ್ಪರ ಕೃತಿಗಳನ್ನು ಹೋಲಿಸಿದ್ದೇನೆ. ಉಳಿದಂತೆ ಪ್ರತ್ಯೇಕವಾಗಿಯೇ ಒಂದು ಕೃತಿಯ ಅಧ್ಯಯನದ ಸಾಧ್ಯತೆಗಳನ್ನು ಗುರ್ತಿಸಿದ್ದೇನೆ. ವಿಮರ್ಶೆಯ ಸ್ವರೂಪ ಹಾಗೂ ತಾತ್ವಿಕತೆಯನ್ನು ಪೂರ್ಣವಾಗಿ ಗ್ರಹಿಸಲು ಕಷ್ಟವಾಗಿದ್ದರೂ ಮುಂದಿನ ಅಧ್ಯಯನಗಳಲ್ಲಿ ಈ ಪ್ರಬಂಧವನ್ನು ಇನ್ನು ಹೆಚ್ಚು ಮೌಲ್ಯಯುತಗೊಳಿಸಲು ಪ್ರಯತ್ನಮಾಡುವೆ.

ಕೊನೆಟಿಪ್ಪಣಿಗಳು

೧. ಕೃಷ್ಣಪ್ಪ., ೨೦೦೧., ಬೇಂದ್ರೆಯವರ ಸಾಹಿತ್ಯದಲ್ಲಿ ಸ್ತ್ರೀ– ಒಂದು ಅಧ್ಯಯನ., ಪುಟ ಸಂಖ್ಯೆ ೪೫

೨. ಕೃಷ್ಣಪ್ಪ., ೨೦೦೧., ಬೇಂದ್ರೆಯವರ ಸಾಹಿತ್ಯದಲ್ಲಿ ಸ್ತ್ರೀ– ಒಂದು ಅಧ್ಯಯನ., ಪುಟ ಸಂಖ್ಯೆ ೨೪೩

೩. ಭಾರತಿ ಟಿ.ಸಿ., ೨೦೧೧., ಬೇಂದ್ರೆಯವರ ಕಾವ್ಯದಲ್ಲಿ ಮಾತೃತ್ವದ ಪರಿಕಲ್ಪನೆ., ಪುಟ ಸಂಖ್ಯೆ ೩

೪. ಭಾರತಿ ಟಿ.ಸಿ., ಬೇಂದ್ರೆಯವರ ಕಾವ್ಯದಲ್ಲಿ ಮಾತೃತ್ವದ ಪರಿಕಲ್ಪನೆ., ೨೦೧೧., ಪುಟ ಸಂಖ್ಯೆ ೧೨೫

೫. ಕೃಷ್ಣಪ್ಪ ಜಿ., ೧೯೯೫., ಹಾಡು ಹಕ್ಕಿ ಅಂಬಿಕಾತನಯದತ್ತ., ವಾಮನ ಬೇಂದ್ರೆ, ಮುನ್ನುಡಿ

೬. ಬೇಂದ್ರೆ ದ. ರಾ., ೧೯೭೪., ಸಾಹಿತ್ಯದ ವಿರಾಟ್ ಸ್ವರೂಪ., ಪುಟ ಸಂಖ್ಯೆ ೮೪

೭. ಕೃಷ್ಣಪ್ಪ ಜಿ., ೨೦೧೦., ಅಂತರಂಗದತ್ತ ನಯನ., ಪುಟ ಸಂಖ್ಯೆ ೧೦

೮. ಕೃಷ್ಣಪ್ಪ ಜಿ., ೨೦೧೦., ಅಂತರಂಗದತ್ತ ನಯನ., ಪುಟ ಸಂಖ್ಯೆ ೨೬

೯. ಶೇಷ ನವರತ್ನ., ೨೦೧೪., ಬೇಂದ್ರೆ ಕಾವ್ಯದ ಪ್ರತಿಮಾಸೃಷ್ಟಿ., ಬೇಂದ್ರೆ ಕಾವ್ಯದಲ್ಲಿ ಸ್ತ್ರೀ., ಅಭಿನವ, ಬೆಂಗಳೂರು, ಪುಟ ಸಂಖ್ಯೆ ೧೫

೧೦. ಗೀತಾ ವಸಂತ., ೨೦೧೬., ಬೀಜದೊಳಗಣ ವೃಕ್ಷ– ಬೇಂದ್ರೆ ಕಾವ್ಯದ ವಿರಾಟ್ ಸ್ವರೂಪ., ಮುನ್ನುಡಿ

೧೧. ಗೀತಾ ವಸಂತ., ೨೦೧೬., ಬೀಜದೊಳಗಣ ವೃಕ್ಷ– ಬೇಂದ್ರೆ ಕಾವ್ಯದ ವಿರಾಟ್ ಸ್ವರೂಪ., ಪುಟ ಸಂಖ್ಯೆ ೩೪

೧೨. ನಾಯಕ್. ಜಿ. ಎಚ್., ೨೦೦೭., ಸ್ಥಿತಿಪ್ರಜ್ಞೆ., ಬೇಂದ್ರೆಯವರ ಕವನ: 'ನಾದಲೀಲೆ'., ಪುಟ ಸಂಖ್ಯೆ ೧೩೦

೧೩. ಸಾಶಿಮ : ವಿಮರ್ಶೆ., ಬೇಂದ್ರೆಯವರ ಕಾವ್ಯದಲ್ಲಿ ದೈವೋಪಾಸನೆ., ಪುಟಸಂಖ್ಯೆ ೩೭೧

೧೪. ಆನಂದ ಝುಂಜರವಾಡ., ೨೦೧೬., ಬಂಧವಿರದೆ ಬಂಧುರ., ತ್ರ್ಯ.ವಿ.ಸರದೇಶಮುಖ; ಅಂಬಿಕಾತನಯದತ್ತರ ಕವಿತೆಗಳು : ಕೆಲವು ಟಿಪ್ಪಣಿಗಳು., ಪುಟಸಂಖ್ಯೆ ೩೭

೧೫. ಆನಂದಝುಂಜರವಾಡ., ೨೦೧೬., ಬಂಧವಿರದೆ ಬಂಧುರ., ತ್ರ್ಯ.ವಿ.ಸರದೇಶಮುಖ; ಮಹಾಕವಿ ದ.ರಾ. ಬೇಂದ್ರೆ, ಪುಟಸಂಖ್ಯೆ ೫೦

೧೬. ಬೇಂದ್ರೆ ದ. ರಾ., ೧೯೭೪., ಸಾಹಿತ್ಯದ ವಿರಾಟ್ ಸ್ವರೂಪ., ಕರ್ನಾಟಕ ಮತ್ತು ಮಹಾರಾಷ್ಟ್ರ ಇವುಗಳ ಬಾಂಧವ್ಯದ ಮರ್ಮಸ್ಥಳಗಳು., ಪುಟಸಂಖ್ಯೆ ೮೫೨–೮೫೩

೧೭. ಅನಿಲ ದೇಶಪಾಂಡೆ., ಆನಂದ ಝುಂಜರವಾಡ(ಸಂ)., ೨೦೧೪., ದೂರ್ವಾಂಕುರ., ಗ್ರಂಥಗಳೆನ್ನುತ್ತಿವೆ 'ಇದು ನನ್ನ ಮನೆ'., ಪುಟಸಂಖ್ಯೆ ೦೬

೧೮. ಅನಿಲ ದೇಶಪಾಂಡೆ., ಆನಂದ ಝುಂಜರವಾಡ(ಸಂ)., ೨೦೧೪., ದೂರ್ವಾಂಕುರ., ಗ್ರಂಥಗಳೆನ್ನುತ್ತಿವೆ 'ಇದು ನನ್ನ ಮನೆ'., ಪುಟ ಸಂಖ್ಯೆ ೨೯

೧೯. ಅನಿಲ ದೇಶಪಾಂಡೆ., ಆನಂದ ಝುಂಜರವಾಡ(ಸಂ)., ೨೦೧೪., ದೂರ್ವಾಂಕುರ., ಗ್ರಂಥಗಳೆನ್ನುತ್ತಿವೆ 'ಇದು ನನ್ನ ಮನೆ'., ಪುಟ ಸಂಖ್ಯೆ ೪೮

೨೦. ಅನಿಲ ದೇಶಪಾಂಡೆ., ಆನಂದ ಝುಂಜರವಾಡ(ಸಂ)., ೨೦೧೪., ದೂರ್ವಾಂಕುರ., ಗ್ರಂಥಗಳೆನ್ನುತ್ತಿವೆ 'ಇದು ನನ್ನ ಮನೆ'., ಪುಟ ಸಂಖ್ಯೆ ೫೧

೨೧. ಅನಿಲ ದೇಶಪಾಂಡೆ., ಆನಂದ ಝುಂಜರವಾಡ(ಸಂ)., ೨೦೧೪., ದೂರ್ವಾಂಕುರ., ಗ್ರಂಥಗಳೆನ್ನುತ್ತಿವೆ 'ಇದು ನನ್ನ ಮನೆ'., ಸಂಖ್ಯೆ ೧೨೩

೨೨. ಹೆಗಡೆ ಜಿ. ಎಂ., ವಿಮರ್ಶಾ ವಿವೇಕ., ಬೇಂದ್ರೆ ಮರಾಠಿ ಸಾಂಸ್ಕೃತಿಕ ಸಂಬಂಧ., ಪುಟ ಸಂಖ್ಯೆ ೪೩

೨೩. ಗೋಕಾಕ್ .ವಿ.ಕೃ., ೨೦೧೪., ಬೇಂದ್ರೆಯವರ ಕಾವ್ಯ ಮತ್ತು ವ್ಯಕ್ತಿತ್ವ, ಪುಟಸಂಖ್ಯೆ ೩೪

೨೪. ಗೋಕಾಕ್ ವಿ.ಕೃ., ೨೦೧೪.,ಬೇಂದ್ರೆಯವರ ಕಾವ್ಯ ಮತ್ತು ವ್ಯಕ್ತಿತ್ವ, ಪುಟಸಂಖ್ಯೆ ೪೨

೨೫. ಗೋಕಾಕ್ ವಿ.ಕೃ.೨೦೧೪.,ಬೇಂದ್ರೆಯವರ ಕಾವ್ಯ ಮತ್ತು ವ್ಯಕ್ತಿತ್ವ, ಪುಟ ಸಂಖ್ಯೆ ೬೧

೨೬. ಬನ್ನಂಜೆ ಗೋವಿಂದಾಚಾರ್ಯ., ೨೦೧೪., ಪ್ರಯೋಗಶೀಲ ಕವಿ ಬೇಂದ್ರೆ., ಒಲವೆ ನಮ್ಮ ಬದುಕು., ಪುಟಸಂಖ್ಯೆ ೨೫-೨೬

೨೭. ಶಿವಾರೆಡ್ಡಿ ಕೆ.ಸಿ., ೨೦೦೦., ಸ್ಥಿತ್ಯಂತರ., ಪುಟಸಂಖ್ಯೆ ೩೪

೨೮. ಕನ್ನಡದ ಹಾಡು-ಪಾಡು., ಶಿವಾರೆಡ್ಡಿ ಕೆ.ಸಿ., ೨೦೦೩., ೨೦೦೩., ಪುಟಸಂಖ್ಯೆ ೬೫

೨೯. ಶಿವಾರೆಡ್ಡಿ ಕೆ.ಸಿ., ೨೦೧೭., ಬೇಂದ್ರೆ ಕುವೆಂಪು ವಿರಾಟ್ ದರ್ಶನ., ಪುಟಸಂಖ್ಯೆ ೧

೩೦. ಶಿವಾರೆಡ್ಡಿ ಕೆ.ಸಿ., ೨೦೧೭., ಬೇಂದ್ರೆ ಕುವೆಂಪು ವಿರಾಟ್ ದರ್ಶನ., ಪುಟಸಂಖ್ಯೆ ೦೫

೩೧. ಶಿವಾರೆಡ್ಡಿ ಕೆ.ಸಿ., ೨೦೦೧., ಸಂಧಿಕಾಲದ ಅನುಸಂಧಾನ., ಪುಟಸಂಖ್ಯೆ ೨೩

೩೨. ಬಸು ಬೇವಿನಗಿಡದ., ೨೦೧೩., ಬೆಳಕಿನ ಹಕ್ಕಿ ಬೇಂದ್ರೆ ನಿಸರ್ಗ ಕಾವ್ಯ : ಅನುಭೂತಿ ಹಾಗೂ ಅಭಿವ್ಯಕ್ತಿ., ಪುಟಸಂಖ್ಯೆ ೪೩

೩೩. ವಿದ್ಯಾಧರ ಮುತಾಲಿಕ ದೇಸಾಯಿ., ೨೦೦೫., ಕನ್ನಡ ಸಪ್ತ ಶೃಂಗಗಳು., ಪುಟ ಸಂಖ್ಯೆ ೩೬

೩೪. ದತ್ತವಾಣಿ., ಮಿರ್ಜಿಅಣ್ಣಾರಾಯ., ಪುಟಸಂಖ್ಯೆ ೪೭

೩೫. ನರಸಿಂಹಮೂರ್ತಿ ಹೂವಿನಹಳ್ಳಿ., ೨೦೦೯., ಬೇಂದ್ರೆ ಮತ್ತು ಕಂಬಾರರ ಕಾವ್ಯದಲ್ಲಿ ಪುರಾಣಪ್ರಜ್ಞೆ ಮತ್ತು ಸಮಕಾಲೀನತೆ., ಪುಟ ಸಂಖ್ಯೆ ೧೧೧

೩೬. ವಾಸುದೇವಮೂರ್ತಿ ಟಿ. ಎನ್.,೨೦೧೭.,ರಮಣ ಹೃದಯ, ಬೇಂದ್ರೆ ಅನುಭಾವ ಮೀಮಾಂಸೆ., ಪುಟಸಂಖ್ಯೆ ೮

೩೭. ಶರ್ಮಾ ಕೆ. ಎಸ್., ೨೦೦೯., ಕುವಲಯ ಕಂಡ 'ಅಂದತ್ತ'., ಸಂಪಾದಕೀಯ

೩೮. ಕುಲಕರ್ಣಿ ಜಿ.ವಿ., ೨೦೧೦., ಬೇಂದ್ರೆ ಒಳನೋಟ., ಪುಟಸಂಖ್ಯೆ ೧೨೬

೩೯. ಕುಲಕರ್ಣಿ ಜಿ.ವಿ., ೨೦೧೦., ಬೇಂದ್ರೆ ಒಳನೋಟ., ಪುಟಸಂಖ್ಯೆ ೧೮೨

೪೦. ಕುಲಕರ್ಣಿ ಜಿ. ವಿ., ೨೦೧೦., ಬೇಂದ್ರೆ ಸಮಗ್ರ ಕಾವ್ಯ ದರ್ಶನ., ಪುಟಸಂಖ್ಯೆ ೮೭

೪೧. ಅಕ್ಷತಾ ಕೆ(ಸಂ)., ಮತ್ತೆ ಮತ್ತೆ ಬೇಂದ್ರೆ., ನಾಗರಾಜ ಕಿ. ರಂ., ಮುನ್ನುಡಿ., ನಾಗಭೂಷಣ ಸ್ವಾಮಿ ಓ. ಎಲ್., ಪುಟಸಂಖ್ಯೆ ೧೩

೪೨. ಅಕ್ಷತಾ ಕೆ(ಸಂ)., ಮತ್ತೆ ಮತ್ತೆ ಬೇಂದ್ರೆ., ನಾಗರಾಜ ಕಿ. ರಂ., ಪುಟಸಂಖ್ಯೆ ೪೧

೪೩. ಶಿವಾರೆಡ್ಡಿ ಕೆ.ಸಿ., ೧೯೯೯., ಶತಮಾನದ ಕವಿತೆ ಜೋಗಿ., ಸಂಧಿಕಾಲದ ಆಧುನಿಕ ಪುರಾಣ., ಪ್ರಾಸ್ತಾವಿಕ ನುಡಿ.

೪೪. ಸಂಗನಾಳ ಮಠ ಯು.ಎನ್., ೨೦೧೪., ಕಾವ್ಯಲೋಕದ ಗಾರುಡಿಗ., ಡಾ.ದ.ರಾ. ಬೇಂದ್ರೆ; ಸಂಯುಕ್ತ ಕರ್ನಾಟಕ ೨೮.೦೫.೨೦೦೬., ಮಾಧವ ಕುಲಕರ್ಣಿ., ಪುಟ ಸಂಖ್ಯೆ ೩–೪

೪೫. ಸಂಗನಾಳ ಮಠ ಯು.ಎನ್., ೨೦೧೪., ಕಾವ್ಯಲೋಕದ ಗಾರುಡಿಗ., ಜಾನ್ ಕೀಟ್ಸ್‌ಮತ್ತು ಬೇಂದ್ರೆ., ಬಸವರಾಜ ಪಿ. ಡೋಣೂರ; ಸಂಕಲನ: ನವಂಬರ್ ೨೦೧೪., ಪುಟಸಂಖ್ಯೆ ೫೬–೫೭

೪೬. ಸಂಗನಾಳ ಮಠ ಯು.ಎನ್., ೨೦೧೪., ಕಾವ್ಯಲೋಕದ ಗಾರುಡಿಗ., ಕರವೇ ನಲ್ನುಡಿ : ಜನವರಿ ೨೦೧೨., ಪುಟ ಸಂಖ್ಯೆ ೫೬–೫೭

೪೭. ಸಂಗನಾಳ ಮಠ ಯು.ಎನ್., ೨೦೧೪., ಕಾವ್ಯಲೋಕದ ಗಾರುಡಿಗ., 'ಬೇಂದ್ರೆಯವರ 'ಶ್ರದ್ಧಾಂಜಲಿ' ಹಾಗೂ ಕೋಮುವಾದ ವಿರೋಧಿ ಸೃಜನಾತ್ಮಕ ನೆಲೆ'; ಹೊಸತು : ೨೦೧೨., ಎಂ.ಡಿ. ಒಕ್ಕುಂದ., ಪುಟ ಸಂಖ್ಯೆ ೧೯೪–೧೯೫

೪೮. ಸಂಗನಾಳ ಮಠ ಯು.ಎನ್., ೨೦೧೪., ಕಾವ್ಯಲೋಕದ ಗಾರುಡಿಗ., ಕನ್ನಡಪ್ರಭ; 'ಗಿರಡ್ಡಿ ಗೋವಿಂದರಾಜ., ಪುಟಸಂಖ್ಯೆ ೨೩೦–೨೩೧

ಅಧ್ಯಾಯ–೬

ಸಮಾರೋಪ

ಅಧ್ಯಯನದ ಫಲಿತಗಳು

ಅಧ್ಯಾಯ-೬

ಸಮಾರೋಪ

ಅಧ್ಯಯನದ ಫಲಿತಗಳು

ಅಧ್ಯಯನದ ಫಲಿತಗಳು

ಬೇಂದ್ರೆ ಅವರ ಸಾಹಿತ್ಯವನ್ನು ಕುರಿತು ಇದುವರೆಗೂ ನಡೆದಿರುವ ಅಧ್ಯಯನಗಳ ವಿಮರ್ಶಾ ಸ್ವರೂಪ, ತಾತ್ವಿಕ ಚಿಂತನೆಯನ್ನು ಅಧ್ಯಯನ ಮಾಡಲಾಗಿದೆ. ಪ್ರಬಂಧ ರಚಿಸುವಾಗ ಅಧ್ಯಯನವನ್ನು ಒಂದು ವ್ಯವಸ್ಥಿತ ರೂಪುರೇಷೆಯ ಮೂಲಕ ನೀಡಲು ಇಲ್ಲಿ ಆರು ಅಧ್ಯಾಯಗಳಾಗಿ ವಿಂಗಡಿಸಲಾಗಿದೆ. ಪ್ರಬಂಧವು ಅತ್ಯಂತ ವಿಸ್ತಾರವಾದ ವ್ಯಾಪ್ತಿಯನ್ನು ಹೊಂದಿದ್ದು, ನನ್ನ ಗ್ರಹಿಕೆಯ ಸ್ವರೂಪಕ್ಕೆ ಅನುಗುಣವಾಗಿ ಇಲ್ಲಿ ಅಧ್ಯಯನ ಮಾಡಿದ್ದೇನೆ.

೧. ಕನ್ನಡ ಸಾಹಿತ್ಯದಲ್ಲಿ ವಿಮರ್ಶೆಯು ಅಧ್ಯಯನ ಮಾದರಿಯಲ್ಲಿ ನಿರ್ಮಿತವಾದರೂ ಇಂದು ಅದರ ಚಹರೆಗಳು ಬದಲಾಗಿವೆ. ಇಂತಹ ಅಧ್ಯಯನ ರೂಪದ ವಿಮರ್ಶಾ ತಾತ್ವಿಕತೆಯನ್ನು ಇಲ್ಲಿ ಗ್ರಹಿಸಲಾಗಿದೆ. ಇಪ್ಪತ್ತನೆಯ ಶತಮಾನದ ಪ್ರಾರಂಭದ ದಶಕಗಳಲ್ಲಿ ವಿಮರ್ಶಾ ಚಿಂತನೆಯ ಅಧ್ಯಯನವೆಂಬುದು ಪ್ರತ್ಯೇಕವಾಗಿ ನಡೆಯದಿದ್ದರೂ ಕೃತಿಯ ಮುನ್ನುಡಿ, ಪರಿಚಯ, ಪತ್ರಿಕಾ ಬರಹಗಳಲ್ಲಿ ಕಂಡುಬಂದಿತು. ಈ ದೃಷ್ಟಿಕೋನದಲ್ಲಿ ಮಾಸ್ತಿಯವರ ವಿಮರ್ಶೆ ಎಂಬ ಕೃತಿಯಿಂದ ಪ್ರಾರಂಭಿಸಿ ಆ ಕಾಲಘಟ್ಟದ ಮುಖ್ಯ ಚಿಂತನೆಗಳಾಗಿ ಪ್ರತಿನಿಧಿಸುವ ಕೆಲವು ಕೃತಿಗಳ ಮುನ್ನುಡಿಗಳನ್ನು ಅಧ್ಯಯನ ನಡೆಸಲಾಗಿದೆ. ಕಾಲಘಟ್ಟದ ತುರ್ತುಗಳನ್ನು, ಬೆಳವಣಿಗೆಯ ಸೂಕ್ಷ್ಮಗಳನ್ನು, ವಿಮರ್ಶೆಯ ಹೊಸ ಅರ್ಥಗಳನ್ನು ತಿಳಿಯಲಾಗಿದೆ.

೨. ಬೇಂದ್ರೆ ಸಾಹಿತ್ಯ ಕುರಿತು ಆರಂಭದಿಂದ ೧೯೫೦ರವರಗಿನ ವಿಮರ್ಶೆಗಳನ್ನು ಮೂರು ವಿಧವಾಗಿ ಅಧ್ಯಯನ ನಡೆಸಲಾಗಿದೆ. ಆಪ್ತವಲಯದ ಮೂಲಕ ಕವಿಯ ಕುರಿತು ಚಿಂತನೆಗಳು. ಸಾಹಿತ್ಯ ಅಧ್ಯಯನ ಮೂಲಕ ಚಿಂತನೆಗಳು. ಬೇಂದ್ರೆ ಅವರೇ ತಮ್ಮ ಕೃತಿಗೆ ಮುನ್ನುಡಿ ಮೂಲಕ ನೀಡಿದ ಚಿಂತನೆಗಳು. ಈ ವಿಚಾರಗಳಲ್ಲಿ ವಿಮರ್ಶೆಯು ಆಧುನಿಕ ಸಾಹಿತ್ಯವನ್ನು ಪ್ರವೇಶಿಸಿದ ರೀತಿಯನ್ನು ಗ್ರಹಿಸಲಾಗಿದೆ. ೧೯೪೬ರಲ್ಲಿ ಬೇಂದ್ರೆ ಅವರಿಗೆ ಸಲ್ಲಿಸಿದ ಆಪ್ತರ ಗೌರವವನ್ನು ವ್ಯಕ್ತಿತ್ವ ಗ್ರಹಿಕೆಯ ಹಿನ್ನಲೆಯಲ್ಲಿ ಗಮನಿಸಲಾಗಿದೆ. ತೀ.ನಂ.ಶ್ರೀ., ವೀ.ಸಿ.,

ಮಾಸ್ತಿ ಮೊದಲಾದವರ ಪ್ರಾರಂಭದ ಗ್ರಹಿಕೆಗಳು ಇಲ್ಲಿ ಸಾಹಿತ್ಯ ಅಧ್ಯಯನದ ಪ್ರವೇಶಗಳಾಗಿ ಅಧ್ಯಯನ ಮಾಡಲಾಗಿದೆ. ಜೀವನ ಪತ್ರಿಕೆ, ಸಮಾಜ ಪುಸ್ತಕಾಲಯ ಮೊದಲಾದ ಮಾರ್ಗಗಳ ಮೂಲಕ ಕವಿತೆ, ಲೇಖನಗಳನ್ನು, ಸ್ವತಂತ್ರ ಕೃತಿಗಳನ್ನು ಅರ್ಪಿಸಿದ ಬಗೆಯಲ್ಲಿ ಹೊರಬಂದ ವಿಮರ್ಶೆಯ ಸ್ವರೂಪ ಇಲ್ಲಿ ಮುಖ್ಯವಾಗಿದೆ. ಮಾಸ್ತಿ ಅವರು ನಾದಲೀಲೆಗೆ ಬರೆದ ಮುನ್ನುಡಿಯು ಬೇಂದ್ರೆ ಸಾಹಿತ್ಯ ಗ್ರಹಿಕೆಯ ಜೊತೆಗೆ ಕನ್ನಡ ಸಾಹಿತ್ಯ ಅಧ್ಯಯನ ಕ್ರಮವಾಗಿಯೂ ಕಂಡು ಬರುವ ಸೂಕ್ಷ್ಮತೆಗಳನ್ನು ತಿಳಿಯಲಾಗಿದೆ.

೩. ಅಭಿಮಾನದ ಬೇಂದ್ರೆ ಅವರನ್ನು ಅಧ್ಯಯನದ ಬೇಂದ್ರೆ ಅವರನ್ನಾಗಿ ಕಾಣುವ ವಿವಿಧ ಕೃತಿಗಳು, ಲೇಖನಗಳನ್ನು ವಸಾಹಾತೋತ್ತರ ಚಿಂತನೆಗಳಲ್ಲಿ ಅಧ್ಯಯನ ಮಾಡಲಾಗಿದೆ. ಭಾಷಾವಿಜ್ಞಾನ, ಆಧ್ಯಾತ್ಮಿಕ ಚಿಂತನೆ, ಕಾವ್ಯಮೀಮಾಂಸೆ ಹೀಗೆ ಮೊದಲಾದ ಅಂಶಗಳು ಬೇಂದ್ರೆ ಅವರ ಸಾಹಿತ್ಯ ಕುರಿತು ಪ್ರಜ್ಞೆ ಹಾಗೂ ಪರಿಸರದ ಚಿಂತನೆಗಳನ್ನು ಬಳಸಿ ಅಧ್ಯಯನ ಮಾಡಿರುವುದನ್ನು ಗಮನಿಸಲಾಗಿದೆ. ಭಾಷಾ ಚಿಂತನೆಯಾಗಿ, ಭಾಷಾ ಸಮನ್ವಯದ 'ಬೀಜಾಕ್ಷರ ಪದ್ಧತಿ'ಯ ಗ್ರಹಿಕೆಗಳಾದ ಮಧುರ ಚೆನ್ನರ ಚಿಂತನೆಗಳನ್ನು ಭಾಷಾವಿಜ್ಞಾನದ ಗ್ರಹಿಕೆಯಲ್ಲಿ ಗಮನಿಸಲಾಗಿದೆ. ಕಾವ್ಯ ಮೀಮಾಂಸೆಯ ವಿಚಾರದಲ್ಲಿ ಬೇಂದ್ರೆಯವರ ಕಾವ್ಯ ಶೈಲಿ ಕುರಿತು ಮೊದಲ ಅಧ್ಯಯನವಾದ ಶಂಕರ ಮೊಕಾಶಿ ಪುಣೇಕರ ಅವರ ಚಿಂತನೆಗಳನ್ನು ಅಧ್ಯಯನ ಮಾಡಲಾಗಿದೆ. ಇವರ ಗ್ರಹಿಕೆಯ ಜೊತೆಗೆ ಬೇರೆ ಬೇರೆ ಲೇಖಕರು ಬೇಂದ್ರೆ ಸಾಹಿತ್ಯದ ಕಾವ್ಯ ಮೀಮಾಂಸೆಯ ಕುರಿತು ಅಧ್ಯಯನಗಳನ್ನು ಚರ್ಚಿಸಲಾಗಿದೆ.

೪. ಬೇಂದ್ರೆ ಅವರ ಸಾಹಿತ್ಯದ ಭಾಷೆಯು ವಸಾಹಾತೋತ್ತರ ನಿಲುವುಗಳನ್ನು ಪ್ರಾದೇಶಿಕ ಚಿಂತನೆಯ ಮೂಲಕ ಧಿಕ್ಕರಿಸಿದ ವಿಮರ್ಶೆಯ ಒಳವುಗಳನ್ನು ಗುರ್ತಿಸಲಾಗಿದೆ. ಬಂಡಾಯದ ಧ್ವನಿಯನ್ನು ಭಾರತದ ಬಡತನ, ಜಾತಿಯತೆ ಮೊದಲಾದ ಅಂಶಗಳೊಂದಿಗೆ ಮಾರ್ಕ್ಸ್‌ವಾದದ ಚಿಂತನೆಯನ್ನು ಅ.ನ.ಕೃ ನಿರೂಪಿಸುವ ಬಗೆಯನ್ನು ಗ್ರಹಿಸಬಹುದು. ಪುನರುಜ್ಜೀವನ ಕಾಲಘಟ್ಟದಲ್ಲಿ ಉಂಟಾದ ಹೊಸ ಬದಲಾವಣೆಗಳು ನಿರೂಪಿಸಿದ ವಿಚಾರಗಳನ್ನು ವಿಮರ್ಶೆಯ ಮೂಲಾಂಶವಾಗಿ ಬಳಸಿದ ಲೇಖನಗಳನ್ನು ಅಧ್ಯಯನ ಮಾಡಬಹುದು. ಆದರೆ ಈ ಅಧ್ಯಯನಗಳ ವಿರುದ್ಧವೇ ಬೇಂದ್ರೆ ಅವರ ಕಾವ್ಯ ಸೋಲುವ ಅಂಶಗಳನ್ನು ಮಂಡಿಸುವ ಕೆಲವು ವಿಮರ್ಶಾ ಲೇಖನಗಳು ಬಂದವು. ಆದರೆ ಇವುಗಳನ್ನು ಅಧ್ಯಯನ ಮಾಡುತ್ತಾ ಇಂತಹ ಬರಹಗಳನ್ನೇ ಅಧ್ಯಯನ ಮಾಡಿದ ಬೇರೆ ಬೇರೆ ವಿಮರ್ಶೆಗಳನ್ನು ಗಮನಿಸಿದಾಗ ನಮಗೆ ದೊರಕುವ ಚಿಂತನೆಯನ್ನು ಪ್ರಬಂಧದಲ್ಲಿ ವಿಶೇಷವಾಗಿ ಅಧ್ಯಯನ ಮಾಡಲಾಗಿದೆ. ಇವು ಬೇಂದ್ರೆ ಅವರು ತಮ್ಮ ಕಾವ್ಯದಲ್ಲಿ ನಿರೂಪಿಸಿದ ಸಾಮಾಜಿಕ ಪ್ರಜ್ಞೆಯನ್ನು ಪ್ರಶ್ನಿಸುವ ಲೇಖನಗಳಾದ ಕಾರಣ ಸೂಕ್ತ ಉತ್ತರಗಳನ್ನು ಹುಡುಕುವ ಪ್ರಯತ್ನವನ್ನು ಮಾಡಲಾಗಿದೆ.

೫. ಬೇಂದ್ರೆ ಅವರನ್ನು ಸತ್ಕರಿಸಿದ ಬಗೆಯು ಕೂಡ ಕನ್ನಡ ಸಾಹಿತ್ಯದಲ್ಲಿ ಒಂದು ವಿಶಿಷ್ಟವಾದ ಅಧ್ಯಯನವೇ ಆಗಿದೆ. ಒಡನಾಡಿಗಳ ಅಭಿಮಾನಕ್ಕಿಂತ, ಆ ಅಭಿಮಾನದಲ್ಲಿ ಬೇಂದ್ರೆ ಅವರು ಪಸರಿಸಿದ ಜ್ಞಾನವನ್ನು ಕುರಿತು ಹಲವು ಲೇಖನಗಳು ಪ್ರಕಟಗೊಂಡಿವೆ. ಪತ್ರಿಕಾ ಬರಹಗಳು ಕೂಡ ವಿಶೇಷಾಂಕ ಮಾಡಿ ಬೇಂದ್ರೆ ಸಾಹಿತ್ಯದ ಜಿಜ್ಞಾಸೆಯನ್ನು ಕಂಡುಕೊಂಡವು. ಈ ಬರಹಗಳನ್ನು ಶೂದ್ರ, ಮಕರಂದ, ಅಂಕಣ, ಪುಸ್ತಕ ಪ್ರಪಂಚ, ಮರಾಠಿಯ ತಾಯ್ನುಡಿ ಮೊದಲಾದ ಪತ್ರಿಕೆಗಳು ನಿರ್ವಹಿಸಿದ ಜವಾಬ್ದಾರಿಯುತ ಕಾರ್ಯವನ್ನು ಗ್ರಹಿಸಲಾಗಿದೆ. 'ಇಳಿದು ಬಾ ತಾಯಿ'ಯಂತಹ ಅಭಿನಂದನಾ ಗ್ರಂಥಗಳು ರೂಪಿಸಿದ ವಿಮರ್ಶಾ ಅಧ್ಯಯನದ ಸ್ವರೂಪ ಮತ್ತು ತಾತ್ವಿಕತೆಯನ್ನು ಅಧ್ಯಯನ ಮಾಡಲಾಗಿದೆ.

೬. ವಸ್ತು, ವಿಷಯ ಹಾಗೂ ಸಮಾಜಿಕ ಚಿಂತನೆಗಳ ಮೂಲಕ ಬೇಂದ್ರೆ ಅವರ ಸಾಹಿತ್ಯವನ್ನು ಗ್ರಹಿಸಿದ ವಿವಿಧ ಲೇಖನಗಳನ್ನು ಅಧ್ಯಯನ ಮಾಡಲಾಗಿದೆ. ಈ ದೃಷ್ಟಿಕೋನದಲ್ಲಿ ರಚನೆಯಾದ ಹಲವು ಕೃತಿಗಳು, ಲೇಖನಗಳು ಇರುವ ಕಾರಣ ಇವುಗಳ ಅಧ್ಯಯನದಿಂದ ಲಭಿಸಿದ ಒಟ್ಟು ವಿಮರ್ಶಾ ಸ್ವರೂಪವನ್ನು ಮಾತ್ರ ಇಲ್ಲಿ ನೀಡಲಾಗಿದೆ. ಕೀರ್ತಿನಾಥ ಕುರ್ತಕೋಟಿ ಅವರು ಬೇಂದ್ರೆ ಅವರ ಸಾಹಿತ್ಯವನ್ನು ಅತ್ಯಂತ ಪ್ರಯೋಗಶೀಲವಾಗಿ ಗ್ರಹಿಸಿದ ಕಾರಣ ಅವರ ಎಲ್ಲಾ ಕೃತಿಗಳನ್ನು ಪ್ರತ್ಯೇಕ ಅಧ್ಯಯನ ಮಾಡಲಾಗಿದೆ. ಕುರ್ತಕೋಟಿ ಅವರ ಅಧ್ಯಯನದ ವಿಮರ್ಶೆಗಳು ಬೇಂದ್ರೆ ಅವರ ಕಾವ್ಯದ ಒಟ್ಟು ಸ್ವರೂಪವನ್ನು ದೊರಕಿಸಿಕೊಡುತ್ತವೆ. ಹಲವು ಕವಿತೆಗಳಿಗೆ ಪೂರ್ಣವಿವರಣೆ ನೀಡುತ್ತಾರೆ. ಇವರ ವಿವರಣೆಯಲ್ಲಿ ಉಂಟಾಗಿರುವ ಗ್ರಹಿಕೆಯ ದೋಷಗಳನ್ನು, ಪರಸ್ಪರ ಸರಿಪಡಿಸಿಕೊಳ್ಳುವ ಕ್ರಮಗಳನ್ನು ಅಧ್ಯಯನಮಾಡಿ ಕಾವ್ಯದ ಸ್ವರೂಪದಲ್ಲಿ ಹೊಸ ತಾತ್ವಿಕತೆಗಳನ್ನು ಕಂಡುಕೊಳ್ಳಲಾಗಿದೆ. 'ಕಂಪಿನ ಕರೆ', 'ಭುವನದ ಭಾಗ್ಯ', 'ಹಾಡೆ ಹಾದಿಯ ತೋರಿತು' ಮೊದಲಾದ ಕೃತಿಗಳನ್ನು ಅಧ್ಯಯನಕ್ಕೆ ಒಳಪಡಿಸಿ ದೊರಕುವ ವಿಶೇಷ ಅಂಶಗಳನ್ನು ಗ್ರಹಿಸಲಾಗಿದೆ.

೭. ಬೇಂದ್ರೆ ಕಾವ್ಯದ ಅಧ್ಯಯನ ಹಾಗೂ ಒಡನಾಟದಲ್ಲಿ ಗ್ರಹಿಸುವ ಅನಂತಮೂರ್ತಿ, ಬರಗೂರು ರಾಮಚಂದ್ರಪ್ಪ, ಕಾಳೇಗೌಡ ನಾಗವಾರ ಮೊದಲಾದ ಲೇಖಕರು ಸಮಾಜಿಕ ಪ್ರಜ್ಞೆಯಲ್ಲಿ ವಾಸ್ತವದಿಂದ ದೂರ ಉಳಿಯುವ ಸ್ಥಿತಿಯನ್ನು ಚರ್ಚಿಸಿದ್ದಾರೆ. ಇವರ ಬರಹಗಳಲ್ಲಿ ಸ್ವತಂತ್ರೋತ್ತರ ಭಾರತದ ಸ್ಥಿತಿಗತಿಯನ್ನು ಬೇಂದ್ರೆ ಅವರ ಕಾವ್ಯ ಮುಂದುವರೆಯದೇ ತನ್ನದೇ ಪ್ರತ್ಯೇಕ ನಿಲುವಿಗೆ ಬದ್ಧವಾಗಿ ಸ್ಥಗಿತಗೊಂಡಿತು ಎಂಬ ಅಂಶವನ್ನು ಚರ್ಚಿಸಿದ್ದಾರೆ. ಇವರು ಗ್ರಹಿಸಿರುವ ಸಾಧ್ಯತೆಗಳನ್ನು ರಂಶ್ರೀ, ಆಮೂರ, ಕೃಷ್ಣಪ್ಪ ಮೊದಲಾದವರು ತಮ್ಮ ಕೃತಿಗಳಲ್ಲಿ ಚರ್ಚಿಸಿದ್ದಾರೆ. ಈ ವಾಗ್ವಾದಗಳು ಅಧ್ಯಯನದ ಪುನರ್‌ಪರಿಶೀಲನೆಯಂತೆ ಸಾಕಷ್ಟು ಕಾಲಘಟ್ಟಗಳ ಅಂತರದಲ್ಲಿ ದೊರಕುವ ಕಾರಣ ಒಂದು ಚರ್ಚೆಯಾಗಿ ಮುಂದುವರೆಯಲಿಲ್ಲ. ಸಂಶೋಧನೆಯಾಗಿ ಫಲಿತಕಾಣಲಿಲ್ಲ.

ಈ ವಿಚಾರ ಕುರಿತು ನನ್ನ ಅಧ್ಯಯನದ ಗ್ರಹಿಕೆಯ ತಾತ್ವಿಕ ಅಂಶಗಳನ್ನು ಇಲ್ಲಿ ನಿರೂಪಿಸಲಾಗಿದೆ.

೮. ನಾದಲೀಲೆ, ಮೇಘದೂತ, ಸಖೀಗೀತ, ಉಯ್ಯಾಲೆ, ಗಂಗಾವತರಣ, ಅರಳು ಮರಳು, ನಾಕುತಂತಿ ಈ ಸಂಕಲನಗಳು ವಿಶೇಷ ಅಧ್ಯಯನಕ್ಕೆ ಒಳಗಾಗಿ ಪ್ರತಿ ಕವಿತೆಯನ್ನು ವಸ್ತು, ತಾತ್ವಿಕತೆಯ ಸ್ವರೂಪ ಮೊದಲಾದ ದೃಷ್ಟಿಯಿಂದ ವಿಮರ್ಶಕರು ಗಮನಿಸದ್ದಾರೆ. ಕವಿ ನೀಡುವ ಅರ್ಥಕ್ಕಿಂತ ಭಿನ್ನವಾದ ಆಯಾಮಗಳನ್ನು ಹಲವು ವಿಮರ್ಶೆಗಳು ಧ್ವನಿಸಿವೆ. ಈ ಆಧಾರದ ಮೇಲೆ ಒಂದು ಕೃತಿಯ ವಿಮರ್ಶೆಗೆ ಬೇಕಾಗುವ ಅರ್ಥ ಸಾತತ್ಯಗಳನ್ನು ಗಮನಿಸಲಾಗಿದೆ. ಕೊನೆಯ ಅಧ್ಯಾಯದಲ್ಲಿ ಕೆಲವು ಕವಿತೆಗಳನ್ನು ಪ್ರತ್ಯೇಕವಾಗಿ ಅಧ್ಯಯನ ನಡೆಸಲಾಗಿದೆ. ಈ ಕವಿತೆಗಳ ಅಧ್ಯಯನದಿಂದ ಒಂದು ಕವಿತೆಯನ್ನು ಓದುವ ಹಾಗೂ ಅನ್ವಯಿಸುವ ವಿವಿಧ ಆಯಾಮಗಳು ನಮಗೆ ದೊರಕುತ್ತವೆ.

೯. ಭೂಮಿ, ಕಾಲ, ಕಾಮ ಈ ಮೂರು ಪರಿಕಲ್ಪನೆಗಳ ಮೂಲಕ ಡಿ. ಆರ್. ನಾಗರಾಜ್ ಅವರ ಲೇಖನವು ಕೆಲವು ಹೊಸ ಹೊಳಹುಗಳನ್ನು ನೀಡುತ್ತದೆ. ಸಂಶೋಧನಾತ್ಮಕ ಬರಹವಾದ ಕಾರಣ ಇಡೀ ಕನ್ನಡ ವಿಮರ್ಶಾ ಚರ್ಚೆಗಳಲ್ಲಿ ನಡೆದಿರುವ ಕಾರ್ಯಗಳ ಹಿನ್ನೋಟವಿರುವುದರಿಂದ ಹೊಸ ಅಧ್ಯಯನಕ್ಕೆ ಕೆಲವು ಸಮಸ್ಯೆಗಳನ್ನು ನಿರೂಪಿಸುತ್ತಾರೆ. ಬೇಂದ್ರೆ ಕಾವ್ಯದ ಕಾಲ ಚಿಂತನೆಯಲ್ಲಿ ಹಕ್ಕಿಯ ಸಂಕೇತವನ್ನು ಡಿ. ಆರ್. ನಾಗರಾಜ ಅವರು ನಿರ್ಧರಿಸಿದರೆ ಈ ಚಿಂತನೆಯನ್ನು ಮೀರಿ, ಕಾಲ ಮೀರಿದ ಕ್ರಿಯೆಯಾಗಿ ಈ ಕವಿತೆಯನ್ನು ಗ್ರಹಿಸುವ ಹೊಸ ತಾತ್ವಿಕತೆಗಳನ್ನು ಕಂಡುಕೊಳ್ಳಲಾಗಿದೆ.

೧೦. ಬೇಂದ್ರೆ ಸಾಹಿತ್ಯ ಕುರಿತು ಇದುವರೆಗೂ ನಡೆದ ಸಂಶೋಧನೆಗಳನ್ನು ಅಧ್ಯಯನ ಮಾಡುತ್ತಾ ಕಾವ್ಯಕ್ರಿಯೆ, ಕವಿತೆಗಳ ಒಳ ಅರ್ಥ, ತೌಲನಿಕ ಅಧ್ಯಯನಗಳು, ವಸಾಹತು ಧೋರಣೆಯಿಂದ ಉಂಟಾದ ಪಲ್ಲಟಗಳಿಗೆ ಉತ್ತರ, ಆಧ್ಯಾತ್ಮ ಈ ಮೊದಲಾದ ವಿಷಯಗಳ ಸ್ವರೂಪವನ್ನು ಗ್ರಹಿಸಲಾಗಿದೆ. ಈ ಸಂಶೋಧನಾ ಫಲಿತಗಳು ಬೇಂದ್ರೆ ಸಾಹಿತ್ಯವನ್ನು ವಿಮರ್ಶಾತ್ಮಕವಾಗಿ ನೋಡಲು ಸಹಕಾರಿಯಾಗಿವೆ. ಲೇಖನ ಹಾಗೂ ಇತರ ಕೃತಿಗಳೊಂದಿಗೆ ತೌಲನಿಕ ಅಧ್ಯಯನ ನಡೆಸಿ ಉಂಟಾಗಿರುವ ಸಾಧ್ಯತೆ, ಅಸಾಧ್ಯತೆಗಳನ್ನು ಗ್ರಹಿಸಲಾಗಿದೆ. ಪ್ರಭುಶಂಕರ ಅವರ ಸಂಶೋಧನೆಯಲ್ಲಿ ಸಿಗುವ ವಿಮರ್ಶಾ ಮಾದರಿಯನ್ನು ಹಲವು ಲೇಖನಗಳು ಋಣಾತ್ಮಕವಾಗಿ ಬಳಸಿಕೊಂಡವು. ಆದರೆ ಭಾವಗೀತೆಯ ಅಧ್ಯಯನ ಕ್ರಮವನ್ನು ಅನುಸರಿಸಲಿಲ್ಲ. ಬೇಂದ್ರೆಯವರ ಕವಿತೆಯಲ್ಲಿ ಅಗತ್ಯವಾಗಿದ್ದ ಸಾಧ್ಯತೆಗಳನ್ನು ಮೊದಲಿಗೆ ಪ್ರಭುಶಂಕರ ಅವರು ನಿರೂಪಿಸುತ್ತಾರೆ. ಅದು ಮುಂದೆ ಸಮಾಜದ ಬಡತನದ ವಸ್ತುವನ್ನು ಪ್ರತಿನಿಧಿಸುವ ಕವಿತೆಗಳಲ್ಲಿ ಉಂಟಾಗಿರುವ ದ್ವಂದ್ವಗಳ ಗ್ರಹಿಕೆಗೆ ಸಹಾಯಕವಾಗುತ್ತದೆ. ಸುಮತೀಂದ್ರ ನಾಡಿಗರ ಪ್ರಬಂಧವು ವಿಶ್ಲೇಷಣೆಯ ವಿಧಾನಗಳಲ್ಲಿ

ಅನುಸರಣೆಯ ದೋಷದಿಂದ ಸ್ವತಂತ್ರ ಅಭಿವ್ಯಕ್ತಿಯನ್ನು ಕಳೆದುಕೊಂಡಿದೆ. ಕೊನೆಗೆ ವಿಮರ್ಶಾ ಸಾಧ್ಯತೆಗಳ ಮಾದರಿಯನ್ನು ನೀಡಿ ಒಂದು ತೌಲನಿಕ ಅಧ್ಯಯನದ ಗ್ರಹಿಕೆಗಳನ್ನು ಪಡೆದುಕೊಳ್ಳಲು ನೆರವಾಗುತ್ತದೆ. ಆದರೂ ಸಂಶೋಧಕನ ಜವಾಬ್ದಾರಿ ಗುಣಗಳಾದ ಸಮಸ್ಯೆಯ ವಿಶ್ಲೇಷಣೆಯ ಹಂತವನ್ನು ನಿರ್ವಹಿಸದೆ ಪ್ರಬಂಧ ಸೋಲುತ್ತದೆ. ಈ ವಿಚಾರದಲ್ಲಿ ಉಂಟಾಗಿರುವ ತೊಂದರೆಗಳನ್ನು ಸುಮತೀಂದ್ರ ನಾಡಿಗರ ಸಾಧ್ಯತೆಗಳನ್ನು ಕುರಿತು ಚರ್ಚಿಸಲಾಗಿದೆ.

೧೧. ಬೇಂದ್ರೆ ಅವರ ಕಾವ್ಯಶೈಲಿಯನ್ನು ಹಲವು ವಿಮರ್ಶಕರು ಅಧ್ಯಯನ ಮಾಡಿದ್ದಾರೆ. ಕಾವ್ಯ ಪ್ರವೇಶಿಕೆಗಾಗಿ, ಪರಿಕಲ್ಪನೆಗಳ ಅರ್ಥಗ್ರಹಿಕೆಗಾಗಿ, ಕೆಲವರು ಕಾವ್ಯಶೈಲಿಗಾಗಿ ಅಧ್ಯಯನ ನಡೆಸಿದಾಗ ಬೇಂದ್ರೆಯವರ ಕಾವ್ಯಶೈಲಿಯು ಜನಪದ ಮೂಲದಿಂದ ರೂಪಿತವಾದದ್ದು. ಪಾಶ್ಚಾತ್ಯ ಪ್ರಭಾವವನ್ನು ಕೂಡ ಜನಪದ ಸತ್ವಕ್ಕೆ ಒಗ್ಗಿಸುವ ಬೇಂದ್ರೆತನವನ್ನು ಹಲವು ವಿಮರ್ಶಕರ ಅಧ್ಯಯನದ ನೆರವಿನಿಂದ ಪಡೆಯಬಹುದು. ಜಿ. ಎಸ್. ಶಿವರುದ್ರಪ್ಪ ಅವರ ಅತ್ಯಂತ ಸರಳ ಲೇಖನದಿಂದ ಕೆ. ವಿ. ತಿರುಮಲೇಶ್ ಅವರ ಅತ್ಯಂತ ಸಂಕೀರ್ಣ ಲೇಖನದ ತನಕ ನಮ್ಮ ಅಧ್ಯಯನ ವಿಸ್ತಾರವಾಗಿ ಗಮನಿಸಬಹುದು. ಪ್ರಸ್ತುತ ಕೂಡ ಬೇಂದ್ರೆ ಅವರ ಕಾವ್ಯ ಗ್ರಹಿಕೆಯಲ್ಲಿ ನಿರ್ಮಿಸಿಕೊಳ್ಳುತ್ತಿರುವ ಹೊಸ ಶೈಲಿಗಳನ್ನು ಲಕ್ಷ್ಯವಿರಿಸಿ ನೋಡಿದರೆ ಬೇಂದ್ರೆ ಅವರ ಕಾವ್ಯದ ಶಕ್ತಿಯೇ ಹೊಸ ಹೊಸ ಶೈಲಿಗಳ ಉದಯಕ್ಕೆ ಕಾರಣವಾಗಿವೆ ಎಂಬ ತೀರ್ಮಾನಕ್ಕೆ ಬರಬಹುದು.

೧೧. 'ನಾದಲೀಲೆ' ಸಂಕಲನಕ್ಕೆ ಬರೆದ ಎರಡು ಲೇಖನಗಳು ಬೇಂದ್ರೆ ಸಾಹಿತ್ಯವನ್ನು ಹೊಸ ಆಯಾಮದಲ್ಲಿ ಅಧ್ಯಯನಮಾಡಿರುವ ಕ್ರಮವನ್ನು ಕಾಣಬಹುದು. ಮಾಸ್ತಿ ಅವರು ನಾದಲೀಲೆಗೆ ಬರೆದ ಮುನ್ನುಡಿ ಹಾಗೂ ಪು.ತಿ.ನ. ಅವರ ೧೯೮೮ರ ಭಾಷಣ. ಈ ಎರಡೂ ಅಧ್ಯಯನಗಳ ನಡುವೆ ಮೊಕಾಶಿ ಅವರ 'ಬೇಂದ್ರೆಯವರ ಕಾವ್ಯಾಭ್ಯಾಸ' ಲೇಖನವನ್ನು ಗ್ರಹಿಸುತ್ತಾ ಅಧ್ಯಯನ ಮಾಡಿದರೆ ನಮಗೆ ಕನ್ನಡ ಕಾವ್ಯ ಅಧ್ಯಯನದ ರೂಪುರೇಷೆಗಳನ್ನು ಸುಲಭವಾಗಿ ಗ್ರಹಿಸಬಹುದು. ಕಾವ್ಯದ ಸ್ವರೂಪ, ಅಭ್ಯಾಸ ಹಾಗೂ ಕಾವ್ಯದ ಆಸ್ವಾದ ಎಂಬ ಮೂರು ಅಂಶಗಳನ್ನು ಪಡೆಯಲು ಸಹಾಯಕವಾಗುತ್ತವೆ. ಇಲ್ಲಿ ಅಧ್ಯಯನ, ದೋಷ, ಸರಿಯಾದ ಗ್ರಹಿಕೆ ಈ ಮೂರು ಮಾದರಿಗಳನ್ನು ವಿಮರ್ಶಕರಲ್ಲಿ ಪತ್ತೆಹಚ್ಚುವ ಅಂಶಗಳನ್ನು ಕುರಿತು ಇಲ್ಲಿ ಅಭ್ಯಾಸ ಮಾಡಲಾಗಿದೆ.

೧೨. ವಸಾಹತುಶಾಹಿಯ ಪ್ರಭಾವಗಳು ಸಾಹಿತ್ಯದ ಪರಿಸರವನ್ನು ಬದಲಿಸಿದವು. ಹೊಸ ಆಲೋಚನೆಗೆ ಕಾರಣವಾದವು. ಭಾರತದಂತಹ ದೇಶಗಳಿಗೆ ಸ್ವಯಂಶಕ್ತಿಯ ಅರಿವುಗಳ ಕುರಿತು ಎಚ್ಚರವಹಿಸಲು ಕಾರಣವಾದವು. ಹೊರಗಿನ ವಸಾಹತು ಪ್ರಭಾವ ಹಾಗೂ ಒಳಗಿನ ಪುರೋಹಿತ ದಬ್ಬಾಳಿಕೆಗಳು ಈ ಎರಡು ಕ್ರಮಗಳು ಉಂಟುಮಾಡಿದ ಶತಮಾನಗಳ

ದಬ್ಬಾಳಿಕೆಯಿಂದ ಹೊರಬರುವ ಸಾಹಿತ್ಯದ ಕಾರ್ಯ ಅತ್ಯಂತ ಸೂಕ್ಷ್ಮವಾದುದು. ಬೇಂದ್ರೆ, ಕುವೆಂಪು, ಪು.ತಿ.ನ., ಅಡಿಗರ ಕಾವ್ಯಗಳನ್ನು ಈ ನೆಲೆಯಲ್ಲಿ ಅಧ್ಯಯನ ಮಾಡುವ ಹೊಸ ಓದು ಲಭಿಸಿತು. ಈ ಅಂಶಗಳಿಗೆ ಪ್ರತಿರೋಧ ಒಡ್ಡುತ್ತಲೇ ಬೆಳದು ಬಂದ ಸಾಹಿತ್ಯದಲ್ಲಿ ಬೇಂದ್ರೆ ಅವರ ಕಾವ್ಯ ಅತಿ ಹೆಚ್ಚು ಕೆಲಸಮಾಡಿದೆ ಎಂದು ಗ್ರಹಿಸಬಹುದು. ಕನ್ನಡ ಪರ ಚಿಂತನೆಗೆ, ಜಾನಪದ ನೆಲೆಯ ಗ್ರಹಿಕೆಗೆ ಇವೆಲ್ಲವೂ ಸಾಂಸ್ಕೃತಿಕ ಜವಾಬ್ದಾರಿಯನ್ನು ತರುತ್ತವೆ.

೧೩. ಕೀರ್ತಿನಾಥ ಕುರ್ತಕೋಟಿ, ಆಮೂರ, ಜಿ. ಕೃಷ್ಣಪ್ಪ ಇವರ ಬರಹಗಳಲ್ಲಿ ಬೇಂದ್ರೆ ಸಾಹಿತ್ಯ ಕುರಿತು ವಿಶಾಲ ನೋಟವಿದೆ. ಆಪ್ತವಾದ ವಿಮರ್ಶೆ ಇದೆ. ಪರಸ್ಪರ ಚರ್ಚೆಗಳಿವೆ. ಹಿಂದಿನ ವಿಮರ್ಶೆಗಳಿಗೆ ಉತ್ತರವಿದೆ ಈ ಎಲ್ಲಾ ಅಂಶಗಳನ್ನು ಈ ಅಧ್ಯಯನಕಾರರ ತಾತ್ವಿಕ ನೆಲೆಯನ್ನು ಹಾಗು ಇವರು ಗ್ರಹಿಸಿದ ಬೇಂದ್ರೆ ಕಾವ್ಯದ ಸ್ವರೂಪವನ್ನು ಗ್ರಹಿಸಲಾಗಿದೆ. ಆವು, ಮದಗ, ಹಡಗದ ಹುಡುಗಿ, ಮಾವಿನ ಪೀಪಿ ಮೊದಲಾದ ಪದಗಳು ಪಡೆದುಕೊಂಡಿರುವ ಅರ್ಥ ಸಾದೃಶ್ಯತೆಯನ್ನು ಮತ್ತು ಈ ಪದಗಳಿಗೆ ಬೇರೆ ಬೇರೆ ವಿಮರ್ಶಕರು ಗಮನಿಸಿರುವ ಅಧ್ಯಯನಗಳ ರೀತಿಯನ್ನು, ತಪ್ಪು ಗ್ರಹಿಕೆಗಳನ್ನು ಕುರಿತು ಚರ್ಚಿಸಲಾಗಿದೆ. ಈ ಚರ್ಚೆಯಿಂದ ಕಾವ್ಯದ ಓದುವಿನ ಹೊಸ ಸಾಧ್ಯತೆಗಳು ದೊರಕುತ್ತವೆ. ಅಕಾಡೆಮಿಕ್ ಓದುವಿನಿಂದ ಆಚೆ ನಿಂತು ಬೇಂದ್ರೆ ಸಾಹಿತ್ಯವನ್ನು ಗ್ರಹಿಸುವ ರೀತಿಯನ್ನು ಅನುಭವ–ಅಭ್ಯಾಸ–ಅಧ್ಯಯನಗಳ ಮೂಲಕ ನಮಗೆ ಹೊಸ ಅರ್ಥಗಳನ್ನು ನಿರೂಪಿಸುವ ಬಗೆಯನ್ನು ತಿಳಿಯಲಾಗಿದೆ.

೧೪. ಮರಾಠಿ ಸಾಹಿತ್ಯದ ವಿಮರ್ಶಕರು ಬೇಂದ್ರೆ ಅವರನ್ನು, ಇವರ ಸಾಹಿತ್ಯವನ್ನು ಗ್ರಹಿಸುವ ವಿಧಾನ ಹಾಗೂ ಬರಹಗಳು ಭಿನ್ನ ಮಾದರಿಯವು. ಸೊಲ್ಲಾಪುರದಿಂದ ಬೆಳೆಯುವ ನಂಟು ಧಾರವಾಡದ ತನಕ ಆಪ್ತವಾಗುತ್ತದೆ. ಏಕೀಕರಣ ಪ್ರಕ್ರಿಯೆಯಲ್ಲಿ ಸಾಂಸ್ಕೃತಿಕವಾಗಿ ಎರಡು ರಾಜ್ಯಗಳನ್ನು ಏಕಮುಖವಾಗಿ ಕಂಡ ಬೇಂದ್ರೆ ಅವರ ಒಂದು ಕಾಲದ ಸಾಂಸ್ಕೃತಿಕ ರಾಯಬಾರಿಯನ್ನಾಗಿ ವಿಮರ್ಶಕರು ಗಮನಿಸಿದ್ದಾರೆ. ಇಲ್ಲಿ ಒಡನಾಟ, ಸಾಹಿತ್ಯ ಕಲಿಕೆ, ಪರಸ್ಪರ ಮನುಷ್ಯ ಸಂಬಂಧಗಳನ್ನು ಬೇಂದ್ರೆಯವರು ನಿರ್ವಹಿಸಿದ ಬಗೆಯನ್ನು ವಿಮರ್ಶಕರು ತಾತ್ವಿಕವಾಗಿ ಚರ್ಚಿಸಿದ್ದಾರೆ. ವಸಾಹತು ಪ್ರಜೆಯಲ್ಲಿ ಮರಾಠಿ ಸಾಹಿತ್ಯದ ಮೇಲೆ ಉಂಟಾದ ಪ್ರಭಾವವನ್ನು ಬೇಂದ್ರೆ ಅನುಭವಿಸುವ ಜವಾಬ್ದಾರಿಯನ್ನು ಗ್ರಹಿಸಿದ್ದಾರೆ. ಬೇಂದ್ರೆ ಅವರು ಸಾಹಿತ್ಯ, ಕಲೆ, ಸಂಸ್ಕೃತಿಗಳನ್ನು ಒಂದು ಗುಂಪು ಚಟುವಟಿಕೆಯಾಗಿ, ಸ್ನೇಹದ ಸಂಕೇತವಾಗಿ ರೂಪಿಸಿದ ಬಗೆಯನ್ನು ಶಾರದ ಮಂಡಳ, ಗೆಳೆಯರ ಗುಂಪು ಇವುಗಳ ಮೂಲಕ ಚರ್ಚಿಸಲಾಗಿದೆ. ಇದು ಮರಾಠಿ ಸಾಹಿತ್ಯದ ಮೇಲೂ ಪ್ರಭಾವ ಬೀರಿದೆ. ಅಲ್ಲಿನ ನಂಟನ್ನೂ ಬೇಂದ್ರೆ ಅವರು ಒಂದು ಬೌದ್ಧಿಕ ಚಟುವಟಿಕೆಯಾಗಿ ರೂಪಿಸಿಕೊಂಡಿದ್ದರು ಎಂಬುದಕ್ಕೆ

ಮರಾಠಿಯಲ್ಲಿ ಸೃಷ್ಟಿಯಾದ ಲೇಖಕರು, ಕನ್ನಡದಲ್ಲಿ ಬೆಳಕಿಗೆ ಬಂದ ಪ್ರಮುಖ ಕವಿಗಳು, ವಿಮರ್ಶಕರು ಅವರ ಬರಹಗಳ ಮೂಲಕ ಸಾಕ್ಷಿಯಾಗಿರುವುದನ್ನು ಗಮನಿಸಲಾಗಿದೆ.

೧೫. ಬೇಂದ್ರೆ ಅವರ ವ್ಯಕ್ತಿತ್ವವನ್ನು ಅವರ ಕಾವ್ಯದ ಮೂಲಕ ಗ್ರಹಿಸುತ್ತಾ ಕಾವ್ಯ ವಿಮರ್ಶೆಗೆ ಪ್ರವೇಶಿಕೆ ನೀಡುವವರನ್ನು ಗಮನಿಸಬಹುದು. ಇಂತಹ ಹಲವು ಲೇಖನಗಳಲ್ಲಿ ದೊರೆಯುವ ವಿಭಿನ್ನ ಮಾದರಿಯ ಬೇಂದ್ರೆ ವ್ಯಕ್ತಿತ್ವವನ್ನು ಅತ್ಯಂತ ಸೂಕ್ಷ್ಮವಾಗಿ ಗ್ರಹಿಸಬಹುದು. ಬೇಂದ್ರೆ ಸಾಹಿತ್ಯ ಕುರಿತು ವಿಮರ್ಶೆಗಳು ಪ್ರಾರಂಭವಾದ ಕಾಲಘಟ್ಟದಿಂದಲೂ ವ್ಯಕ್ತಿತ್ವದ ಮೂಲಕ ಪ್ರವೇಶ ಪಡೆಯುವ ಹಲವು ಲೇಖನಗಳು ರಚನೆಗೊಂಡವು. ಆದರೆ ಇವೆಲ್ಲಾ ಕನ್ನಡಿಯ ಕೆಲಸವನ್ನು ಮಾತ್ರ ಮಾಡಿದ್ದಾವೆಂದು ಈ ಮಾರ್ಗದಲ್ಲಿ ಉಂಟಾಗಿರುವ ದೋಷಗಳನ್ನು ಸ್ಪಷ್ಟಪಡಿಸಬಹುದು. ಚಂಪಾರಂತಹ ಬರಹಗಾರರು ವ್ಯಕ್ತಿತ್ವ ಹಾಗೂ ಸಾಹಿತ್ಯ ಬೇರೆ ಬೇರೆ ಎಂಬುದನ್ನು ಬೇಂದ್ರೆ ಒಡನಾಟದ ಮೂಲಕ ಚರ್ಚಿಸಿದ್ದಾರೆ. ಈ ನನ್ನ ಅಧ್ಯಯನದಲ್ಲಿ ಗ್ರಹಿಸಿದ ವಿಚಾರವೆಂದರೆ ವ್ಯಕ್ತಿತ್ವದ ಮೂಲಕ ಕಾವ್ಯ ಪ್ರವೇಶ ಹಲವು ಎಡವುಗಳನ್ನು ಉಂಟುಮಾಡುತ್ತದೆ. ಕಾವ್ಯವೇ ಕವಿಯ ವಿಭಿನ್ನ ವ್ಯಕ್ತಿತ್ವವನ್ನು ದರ್ಶನಮಾಡುತ್ತದೆ ಎಂಬುದು ಈ ವಿಮರ್ಶೆಗಳಿಂದ ಪಡೆಯುವ ತಾತ್ವಿಕ ಸ್ವರೂಪವಾಗಿದೆ.

೧೬. ಬೇಂದ್ರೆ ಸಾಹಿತ್ಯ ಮತ್ತು ನಿಸರ್ಗ ಚಿಂತನೆಗಳು ಪರಸ್ಪರ ಪೂರಕದಂತೆ ಮೂಡಿಬಂದವು. ಜಿ. ಕೃಷ್ಣಪ್ಪ ಅವರ 'ಬೇಂದ್ರೆಕಾವ್ಯ: ಪದನಿರುಕ್ತ' ಕೃತಿಯನ್ನು ಅಭ್ಯಾಸ ಮಾಡಿದಾಗ ಹಲವು ಒಳಹುಗಳು ಲಭಿಸುತ್ತವೆ. ಬೇಂದ್ರೆ ಅವರು ತಮ್ಮ ಕಾವ್ಯದಲ್ಲಿ ಬಳಸಿದ ಹಲವು ಜನಪದರ ಪದತತ್ವಗಳು ಕಾವ್ಯದ ಜೀವಾಳಗಳೇ ಆಗಿವೆ. ಕನ್ನಡ ಪರಂಪರೆಯ ಶಕ್ತಿಯನ್ನು ಅರಿಯಲು ಇಂತಹ ಪ್ರಯೋಗಗಳನ್ನು ಅಮೂಲಾಗ್ರವಾಗಿ ಅಧ್ಯಯನ ಮಾಡಬೇಕಿದೆ. ಇಲ್ಲಿ ಗ್ರಾಮೀಣ ಪದಗಳು, ಸಾಂಸ್ಕೃತಿಕವಾಗಿ ಜಾತಿ, ಧರ್ಮಗಳ ಮೂಲಕ ಸೃಷ್ಟಿಗೊಂಡು ತಲೆಮಾರುಗಳ ಇತಿಹಾಸವನ್ನು ಪರಂಪರೆಯಂತೆ ಮೂಂದೂಡುತ್ತಿದ್ದ ಭಾಷೆ, ಸಂಸ್ಕೃತಿಗಳನ್ನು ಬೇಂದ್ರೆ ಅವರು ಅತ್ಯಂತ ಸೂಕ್ಷ್ಮವಾಗಿ ಗ್ರಹಿಸಿರುವುದನ್ನು ಕಾಣಬಹುದು. ಈ ಗ್ರಹಿಕೆಯ ಆಧಾರದ ಮೇಲೆ ಕಾವ್ಯ ಸ್ವರೂಪ ಹಾಗೂ ತಾತ್ವಿಕ ಚಿಂತನೆಗಳನ್ನು ಗ್ರಹಿಸಬಹುದು. ಸಾಕಷ್ಟು ವಿಮರ್ಶೆಗಳು ಪರಿಸರದ ವಿಭಿನ್ನಾರ್ಥಗಳೊಂದಿಗೆ ಕಾವ್ಯದ ನೆಲೆಯನ್ನೇ ತಪ್ಪಾಗಿ ಗ್ರಹಿಸಿರುವುದನ್ನು ಪುನರ್ ಅಧ್ಯಯನಗಳು ನಿರೂಪಿಸುತ್ತವೆ. ಇಲ್ಲಿ ಬೇಂದ್ರೆ ರೂಪಿಸಿದ ಪರಿಸರ ಚಿಂತನೆಯು ಅಂಬಿಕಾತನಯದತ್ತನನ್ನು ನಿರೂಪಿಸಿದ ಹೊಸ ಅಧ್ಯಯನಗಳನ್ನು ತಿಳಿಯಬಹುದು.

೧೭. ಆಧ್ಯಾತ್ಮ ಚಿಂತನೆಗಳು ಭಾರತೀಯ ಸಾಹಿತ್ಯಕ್ಕೆ ಆಧಾರ ಮೂಲಗಳು. ಇಂತಹ ಮೂಲಗಳ ಶೋಧನೆಯನ್ನು ಬೇಂದ್ರೆ ಅವರು ನಾಲ್ಕು ವಿಧದಲ್ಲಿ ಗ್ರಹಿಸಿದ್ದಾರೆ ಎನ್ನಬಹುದು. ಪ್ರಾದೇಶಿಕ ನೆಲೆಯಲ್ಲಿ ದೊರೆತ ಅನುಭವಗಳು, ಭಾರತೀಯ ತಾತ್ವಿಕ ಪರಂಪರೆಯ ಅಧ್ಯಯನ,

ಪಾಶ್ಚಾತ್ಯ ಚಿಂತನೆಗಳ ಅಧ್ಯಯನ ಹಾಗೂ ಪ್ರಭಾವ, ಮತ್ತು ಈ ಮೂರು ಅಂಶಗಳಿಗೆ ತನ್ನ ಅಂತರಂಗದಿಂದ ನಿರ್ಮಿಸಿದ ಕಾವ್ಯ ಜಗತ್ತು. ಈ ದೃಷ್ಟಿಕೋನಗಳಿಗೆ ಹಲವು ಲೇಖನಗಳು, ಕೃತಿಗಳು ಅಧ್ಯಯನ ಮಾರ್ಗವನ್ನು ಅರ್ಥೈಸುತ್ತವೆ. ಈ ಮಾರ್ಗದಲ್ಲಿ ಆಧ್ಯಾತ್ಮಿಕತೆ, ಪುರಾಣ ಪ್ರಜ್ಞೆ ಹಾಗೂ ಅನುಭಾವಮೀಮಾಂಸೆಯನ್ನು ತಿಳಿಯಬಹುದು. ಬೇಂದ್ರೆಯವರ ಕಾವ್ಯವು ಜನಪದಮೂಲದ ಸತ್ವವನ್ನು ಪಡೆದಿದೆ ಎಂಬ ಅಧ್ಯಯನದಂತೆಯೇ ವೇದಾಂತಗರ್ಭಿತವಾದುದು ಎಂಬುದನ್ನು ಕೆಲವು ವಿಮರ್ಶೆಗಳಿಂದ ತಿಳಿಯಬಹುದು. ಆಧ್ಯಾತ್ಮ ಚಿಂತನೆಯು ಒಳ ಅರಿವಿನ ಮೂಲಕ ವಿಜ್ಞಾನದ ವಿವಿಧ ಶಾಖೆಗಳನ್ನು ದರ್ಶನ ಮಾಡುವ ವಾಸ್ತವ ಕೈಪಿಡಿಯಾಗಿ ಹೊಸ ಸಂಶೋಧನೆಗಳಿಗೆ ಕಾರಣಗಳನ್ನು ಹುಡುಕಲಾಗಿದೆ.

೧೮. ಬೇಂದ್ರೆ ಅವರ ಕಾವ್ಯವನ್ನು ಪರಂಪರೆಯಂತೆ, ಪ್ರಚಲಿತ ಕವಿತೆಗಳ ಮೂಲಕ ಗ್ರಹಿಸುವ ಪದ್ಧತಿಗಿಂತ ಹಲವು ಹೊಸ ವಿಧಾನಗಳು ಬೇಕಿವೆ. ಬೇಂದ್ರೆ ಅವರ ಸಮಕಾಲೀನ ಬರಹಗಾರರ ಕೃತಿಗಳಲ್ಲಿ ದೊರಕುವ ಪ್ರಶ್ನೋತ್ತರಗಳ ಮೂಲಕ ಸಮಸ್ಯೆಗಳನ್ನು ಗ್ರಹಿಸಬಹುದು. ವಿಮರ್ಶೆ ಎಂಬುದು ಅಧ್ಯಯನವಾಗಿ, ಪುನರ್ ರಚನಾ ಮಾರ್ಗವಾಗಿ ಕಾರ್ಯನಿರ್ವಹಿಸುವ ಬಗೆಯನ್ನು ಅರಿಯಬೇಕಾಗಿದೆ. ಪಾಶ್ಚಾತ್ಯ ವಿಮರ್ಶಾ ದೃಷ್ಟಿಕೋನಗಳು ಜ್ಞಾನವನ್ನು ತುಂಬುತ್ತವೆ. ಆದರೆ ಇವುಗಳೇ ವಿಮರ್ಶಾ ಮಾದರಿಗಳಾಗಬಾರದು. ಬೇಂದ್ರೆ ಕಾವ್ಯವು ಭಾರತೀಯ ತತ್ವ ಪರಂಪರೆಯ ಕರಗತದಿಂದ ಜನಪದಮೂಲ ತಾತ್ವಿಕತೆಯನ್ನು ಪ್ರತಿಪಾದಿಸುತ್ತಾ ಅಗತ್ಯಗಳಿಗನುಗುಣವಾಗಿ ಸಂಸ್ಕೃತಿಯ ಮಿಳಿತ ಕಾಣಬಹುದಾಗಿದೆ. ಪಾಶ್ಚಾತ್ಯ ಸಂಸ್ಕೃತಿಯ ಭಾಷೆ, ಪರಿಸರವನ್ನು ತಮ್ಮ ಕಾವ್ಯಗಳಲ್ಲಿ ಅತ್ಯಂತ ಸಹಜವಾಗಿ ನಿರೂಪಿಸುವ ಕಾರಣ ಬೇಂದ್ರೆ ಅವರು ವಾಸ್ತವದ ಕವಿಯಾಗಿ ನಮಗೆ ಅರ್ಥವಾಗುತ್ತಾರೆ. ಮೇಲ್ಪದರದ ಅಧ್ಯಯನಗಳನ್ನು ಗುರ್ತಿಸಲು ದಾರಿ ಮಾಡಿಕೊಡುತ್ತದೆ. ಆಳವಾದ ಹೊಸ ಅಧ್ಯಯನಗಳಿಗೆ ತಾತ್ವಿಕ ಚಿಂತನೆ ನೀಡುತ್ತದೆ.

ಅನುಬಂಧಗಳು

೧. ಅಧ್ಯಯನ ಆಕರಗಳು

ಗ್ರಂಥಸೂಚಿ

ಆಕರ ಗ್ರಂಥಗಳು

೧. ಅನಂತಮೂರ್ತಿ ಯು. ಆರ್. ೨೦೧೪., ಯುಗದ ಕವಿ ಬೇಂದ್ರೆ., ಅಭಿನವ, ಬೆಂಗಳೂರು.

೨. ಆಮೂರ ಜಿ.ಎಸ್.,೨೦೦೦.,ದತ್ತಾತ್ರೇಯ ರಾಮಚಂದ್ರ ಬೇಂದ್ರೆ (ಅಂಬಿಕಾತನಯದತ್ತ).,ಸಾಹಿತ್ಯ ಅಕಾಡೆಮಿ, ಬೆಂಗಳೂರು

೩. ಆಮೂರ ಜಿ.ಎಸ್., ೨೦೧೨., ಸಂಭಾವಿತ, ಬೇಂದ್ರೆಕೇಂದ್ರಿತ ಬರೆಹಗಳು.,ಸಪ್ನ ಬುಕ್ ಹೌಸ್, ಬೆಂಗಳೂರು

೪. ಆಮೂರ ಜಿ. ಎಸ್., ೨೦೧೬., ಒಮ್ಮುಖ., ಸಾಹಿತ್ಯ ಪ್ರಕಾಶನ., ಹುಬ್ಬಳಿ

೫. ಆಮೂರ ಜಿ. ಎಸ್., ೨೦೦೦., ದತ್ತಾತ್ರೇಯ ರಾಮಚಂದ್ರ ಬೇಂದ್ರೆ., ಸಾಹಿತ್ಯ ಅಕಾಡೆಮಿ, ನವದೆಹಲಿ

೬. ಆಮೂರ ಜಿ. ಎಸ್., ೨೦೦೦., ಬೇಂದ್ರೆಕಾವ್ಯದ ಪ್ರತಿಮಾಲೋಕ., ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೭. ಆಮೂರ ಜಿ. ಎಸ್., ೧೯೯೧., ಭುವನದ ಭಾಗ್ಯ., ಬೇಂದ್ರೆ ಸಾಹಿತ್ಯ ಸಮೀಕ್ಷೆ, ಸ್ನೇಹ ಪ್ರಕಾಶನ, ಬೆಂಗಳೂರು

೮. ಆನಂದ ಝುಂಜರವಾಡ., ೨೦೧೪.,ದೂರ್ವಾಂಕುರ., ದ.ರಾ,ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ಧಾರವಾಡ

೯. ಆನಂದ ಝುಂಜರವಾಡ., ೨೦೧೪.,ದೂರ್ವಾಂಕುರ., ಪ್ರಸಾರಾಂಗ., ದ.ರಾ ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ಧಾರವಾಡ

೧೦. ಕರ್ಣಾಟಕ ಸಂಘದ ಸದಸ್ಯರು, ೧೯೫೭., ನಮ್ಮ ಬೇಂದ್ರೆಯವರು., ಸೆಂಟ್ರಲ್ ಕಾಲೇಜ್, ಬೆಂಗಳೂರು.

೧೧. ಕಿರಣ ನೀ ತೋಟಗಂಟಿ., ೨೦೧೩., ಕವಿಯ ಕಂಗಳಲಿ ವರಕವಿ., ಪ್ರಸಾರಾಂಗ, ಬೇಂದ್ರೆ ಸ್ಮಾರಕ ಟ್ರಸ್ಟ್, ಧಾರವಾಡ

೧೨. ಕೀರ್ತಿನಾಥ ಕುರ್ತಕೋಟಿ., ೨೦೦೧., ಪಂಡಿತರ ತಪ್ಪು., ಮನೋಹರ ಗ್ರಂಥಮಾಲಾ, ಧಾರವಾಡ

೧೩. ಕುಲಕರ್ಣಿ ಎನ್ಕೆ., ೧೯೮೨., ಸಾವಿರದ ವರಕವಿ ಬೇಂದ್ರೆ., ಐ.ಬಿ.ಎಚ್. ಪ್ರಕಾಶನ, ಬೆಂಗಳೂರು

೧೪. ಕುಲಕರ್ಣಿ ಎನ್ಕೆ., ೨೦೦೧., ದ.ರಾ. ಬೇಂದ್ರೆ., ನವಕರ್ನಾಟಕ ಪ್ರಕಾಶನ, ಬೆಂಗಳೂರು

೧೫. ಕುಲಕರ್ಣಿ ಜಿ.ವಿ., ೨೦೧೦., ಬೇಂದ್ರೆ ಒಳನೋಟ., ಪುರೋಗಾಮಿ ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ

೧೬. ಕುಲಕರ್ಣಿ ಜಿ.ವಿ., ೨೦೧೫., ಮಂಗಳ ಲೋಕದ ಅಂಗಳಕೇರಿ., ಪುರೋಗಾಮಿ ಪ್ರಕಾಶನ, ಹುಬ್ಬಳ್ಳಿ

೧೭. ಕುಲಕರ್ಣಿ ಜಿ.ವಿ., ೨೦೧೦., ಬೇಂದ್ರೆ ಸಮಗ್ರ ಕಾವ್ಯ ದರ್ಶನ., ಪುರೋಗಾಮಿ ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ

೧೮. ಕುಲಕರ್ಣಿ ಜಿ.ವಿ., ೧೯೯೭., ನಾ ಕಂಡ ಬೇಂದ್ರೆ: ಜೀವನ ಮತ್ತು ಸಾಹಿತ್ಯ., ಹರ್ಷವರ್ಧನ ಪ್ರಕಾಶನ, ಮುಂಬಯಿ
೧೯. ಕುಲಕರ್ಣಿ ಜಿ.ವಿ., ೧೯೯೭., ನಾ ಕಂಡ ಬೇಂದ್ರೆ., ಹರ್ಷವರ್ಧನ ಪ್ರಕಾಶನ, ಮುಂಬೈ
೨೦. ಕುಲಕರ್ಣಿ ಆರ್.ಜಿ., ೧೯೯೯., ಬೇಂದ್ರೆಯವರ 'ಮಹಾಪ್ರಸ್ಥಾನ' ಕವನ ವಿಮರ್ಶೆ., ಶ್ರೀ ದ.ರಾ.ಬೇಂದ್ರೆ ಸ್ನೇಹ ಮಂಡಳ, ಬೆಂಗಳೂರು
೨೧. ಕುಲಕರ್ಣಿ ಆರ್.ಜಿ., ೧೯೮೬., ಜೋಗಿಯ ನಾದಧ್ವನಿ., ಅರವಿಂದ ಮಂಡಳ ಪ್ರಕಾಶನ, ಬೆಂಗಳೂರು.
೨೨. ಕುಲಕರ್ಣಿ ವ್ಹಿ.ಬಿ., ೧೯೯೪., ವರಕವಿ ಅಂಬಿಕಾತನಯದತ್ತ ಜೀವನದರ್ಶನ., ಲಲಿತ ಸಾಹಿತ್ಯಮಾಲೆ, ಧಾರವಾಡ
೨೩. ಕುಲಕರ್ಣಿ ಶೇ.ಗೋ(ಸಂ),. ೧೯೪೬.,ಕವಿ ಅಂಬಿಕಾತನಯದತ್ತ., ಲಲಿತ ಸಾಹಿತ್ಯ ಮಾಲೆ, ಧಾರವಾಡ
೨೪. ಕುಸುಮಾಕರ ದೇವರಗೆಣ್ಣೂರ., ೨೦೦೮., ಗಾಳಿಹೆಜ್ಜೆ ಹಿಡಿದ ಸುಗಂಧ., ಸಂಚಯ,ಬೆಂಗಳೂರು.
೨೫. ಕುಲಕರ್ಣಿ ಎನ್ಕೆ.,೧೯೯೯., ಧಾರವಾಡದ ದತ್ತೂಮಾಸ್ತರ., ಅಮೋಘವಾಙ್ಮಯ ಪ್ರಸಾರ, ಬೆಳಗಾವಿ
೨೬. ಕುಲಕರ್ಣಿ ಎನ್ಕೆ., ೧೯೯೧., ಕನ್ನಡನಾಟಕ ಸಾಹಿತ್ಯದಲ್ಲಿ ದ.ರಾ.ಬೇಂದ್ರೆ ಅವರ ಸ್ಥಾನಮಾನ. ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೨೭. ಕುಲಕರ್ಣಿ ಎನ್ಕೆ., ೧೯೭೬., ಬೇಂದ್ರೆ ನಾದ ಸಂವಾದ., ಶ್ರೀಅರವಿಂದ ಕರ್ಮಧಾರಾ ಪ್ರಕಾಶನ, ಹುಬ್ಬಳ್ಳಿ
೨೮. ಕೊಟ್ಟಲಗಿ ಗದಗಕರ(ಸಂ), ೧೯೭೫., ಬೇಂದ್ರೆ ಸಾಹಿತ್ಯ ಸೌರಭ., ಸಮಾಜ ಪುಸ್ತಕಾಲಯ, ಧಾರವಾಡ.
೨೯. ಕೃಷ್ಣಕುಮಾರ್ .ಸಿ. ಪಿ., ೧೯೯೫., ಬೇಂದ್ರೆ : ನಾಲ್ಕು ನೋಟ., ಶಕ್ತಿ ಪ್ರಕಾಶನ, ಮೈಸೂರು.
೩೦. ಕೃಷ್ಣಪ್ಪ ಜಿ., ೨೦೦೮., ಬರೆಹದಲ್ಲಿ ಬೇಂದ್ರೆಯವರ ಬದುಕು., ಪ್ರಸಾರಾಂಗ, ದ.ರಾ. ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ಧಾರವಾಡ
೩೧. ಕೃಷ್ಣಪ್ಪ ಜಿ., ೨೦೦೦., ಹೂತದ ಹುಣಸಿ., ದ. ರಾ. ಬೇಂದ್ರೆ ಕಾವ್ಯವಿಮರ್ಶೆ., ಶ್ರೀರಂಗಪ್ರಕಾಶನ., ಮೈಸೂರು
೩೨. ಕೃಷ್ಣಪ್ಪ ಜಿ., ೧೯೯೫., ಹಾಡು ಹಕ್ಕಿ ಅಂಬಿಕಾತನಯದತ್ತ., ಶ್ರೀರಂಗ ಪ್ರಕಾಶನ, ಮೈಸೂರು
೩೩. ಕೃಷ್ಣಪ್ಪ ಜಿ., ೨೦೧೧., ಅಂತರಂಗದತ್ತ ನಯನ., ಬಸವ ಪ್ರಕಾಶನ ಮತ್ತು ಪುಸ್ತಕ ವ್ಯಾಪಾರಿಗಳು., ಗುಲಬರ್ಗಾ
೩೪. ಕೃಷ್ಣಪ್ಪ ಜಿ., ೨೦೦೦., ನಾಕುತಂತಿ ಒಂದು ಟಿಪ್ಪಣಿ., ಕಾಮಧೇನು ಪುಸ್ತಕ ಭವನ, ಬೆಂಗಳೂರು
೩೫. ಕೃಷ್ಣಾ ಕಟ್ಟಿ., ೨೦೧೦., ಶ್ರಾವಣದ ಕವಿ ಬೇಂದ್ರೆ., ಪ್ರಸಾರಾಂಗ, ಕನ್ನಡ ವಿಶ್ವ ವಿದ್ಯಾಲಯ,ಹಂಪಿ
೩೬. ಗಿರಡ್ಡಿ ಗೋವಿಂದರಾಜ., ೨೦೧೨., ಕೀರ್ತಿನಾಥ ಕುರ್ತಕೋಟಿ ಸಮಗ್ರ ಸಾಹಿತ್ಯ, ಬೇಂದ್ರೆ ಕಾವ್ಯವಿಮರ್ಶೆ., ಕನ್ನಡ ಮತ್ತು ಸಂಸ್ಕೃತಿ ಇಲಾಖೆ., ಬೆಂಗಳೂರು
೩೭. ಗಿರಡ್ಡಿ ಗೋವಿಂದರಾಜ., ೨೦೦೨., ಕನ್ನಡ ಕಾವ್ಯಪರಂಪರೆ ಮತ್ತು ಬೇಂದ್ರೆಯವರ ಕಾವ್ಯ., ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೩೮. ಗೀತಾವಸಂತ., ೨೦೧೦., ಬೇಂದ್ರೆಕಾವ್ಯ: ಅವಧೂತಪ್ರಜ್ಞೆ., ಪ್ರಸಾರಾಂಗ., ದ.ರಾ ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ಧಾರವಾಡ

೩೯. ಗೀತಾ ವಸಂತ., ೨೦೧೦., ಬೇಂದ್ರೆ ಕಾವ್ಯ: ಅವಧೂತ ಪ್ರಜ್ಞೆ., ಪ್ರಸಾರಾಂಗ, ಬೇಂದ್ರೆ ಸ್ಮಾರಕ ಟ್ರಸ್ಟ್, ಧಾರವಾಡ
೪೦. ಗೀತಾ ವಸಂತ., ೨೦೧೦., ಬೇಂದ್ರೆ ಕಾವ್ಯ: ಅವಧೂತ ಪ್ರಜ್ಞೆ., ದ.ರಾ. ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್., ಧಾರವಾಡ
೪೧. ಗೋಕಾಕ್ ವಿ.ಕೃ., ೨೦೧೪., ಬೇಂದ್ರೆ ಕಾವ್ಯ ಮತ್ತು ವ್ಯಕ್ತಿತ್ವ, ಅಭಿನವ, ಬೆಂಗಳೂರು.
೪೨. ಗೋಕಾಕ ವಿ. ಕೃ., ೧೯೮೩., ಬೇಂದ್ರೆಯವರ ಕಾವ್ಯಗುಣ ಹಾಗೂ ಪ್ರಯೋಗಶೀಲತೆ., ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೪೩. ಗೋವಿಂದರಾವ್ ಚುಳಕಿ(ಸಂ)., ೧೯೪೬., ಕವಿವರ ಬೇಂದ್ರೆ, ಲಲಿತ ಸಾಹಿತ್ಯ ಮಾಲೆ, ಧಾರವಾಡ
೪೪. ಗೋವಿಂದ ಜಾಲೀಹಾಳ., ೧೯೮೦., ಕಾವ್ಯಮಂಥನ., ಸಮಾಜ ಪುಸ್ತಕಾಲಯ, ಧಾರವಾಡ
೪೫. ಗೋಪಾಲಕೃಷ್ಣ ಅಡಿಗ., ೧೯೯೧., ಬೇಂದ್ರೆಯವರ ಕಾವ್ಯ., ಬೇಂದ್ರೆ ಸ್ಮೃತಿ ಉಪನ್ಯಾಸ ಮಾಲೆ, ಕನ್ನಡ ಸಂಘ, ಕ್ರೈಸ್ಟ್ ಕಾಲೇಜು, ಬೆಂಗಳೂರು
೪೬. ಗೋಪಾಲ ಸೋಹೊನಿ., ೧೯೮೯., ಗರಿ ಬರೆದವನ ವಿವಿಧ ಪರಿ., ವಿನಾಯಕ ಪ್ರಿಂಟಿಂಗ್ ಪ್ರೆಸ್, ಹುಬ್ಬಳ್ಳಿ
೪೭. ಗೌರೀಶ ಕಾಯ್ಕಿಣಿ., ೧೯೮೦., ಕಂಪಿನ ಕರೆ., ಗೌರೀಶ ಕಾಯ್ಕಿಣಿ., ೧೯೮೦., ಸಮಾಜ ಪುಸ್ತಕಾಲಯ, ಧಾರವಾಡ
೪೮. ಚನ್ನಪ್ಪ ಎಸ್(ಸಂ)., ೧೯೯೭., ಬೇಂದ್ರೆ ಸಾಹಿತ್ಯ ಚಿಂತನ., ಎಸ್.ಬಿ.ಎಸ್ ಪಬ್ಲಿಷರ್ಸ್, ಬೆಂಗಳೂರು
೪೯. ಚೆನ್ನವೀರ ಕಣವಿ., ೨೦೧೨., ಬೇಂದ್ರೆ ಕಾವ್ಯದ ಕುಹು ಕುಹೂ., ಪ್ರಸಾರಾಂಗ, ಬೇಂದ್ರೆ ಸ್ಮಾರಕ ಟ್ರಸ್ಟ್, ಧಾರವಾಡ
೫೦. ಚೆನ್ನವೀರ ಕಣವಿ., ೨೦೧೨., ಬೇಂದ್ರೆ ಕಾವ್ಯದ ಕುಹು ಕ್ಕುಹೂ., ಪ್ರಸಾರಾಂಗ, ದ.ರಾ. ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ಧಾರವಾಡ
೫೧. ಚೆನ್ನಪ್ಪ., ೧೯೮೨., ಬೇಂದ್ರೆ ಸ್ಮರಣೆ., ಎಸ್.ಅರ್ಕಾವತಿ ಪ್ರಕಾಶನ, ಮೈಸೂರು
೫೨. ಜಗದೀಶ ಕೊಪ್ಪ ಎನ್., ೨೦೦೯., ಉತ್ತರ–ದಕ್ಷಿಣ, ಬೇಂದ್ರೆ–ಕುವೆಂಪು ವ್ಯಕ್ತಿತ್ವ ಮತ್ತು ಕವಿತೆಗಳ ತೌಲನಿಕ ಅಧ್ಯಯನ., ದ.ರಾ. ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್., ಧಾರವಾಡ
೫೩. ಜೋಷಿ ಹೆಚ್. ಜಿ (ಸಂ).,೧೯೪೬., ಬೇಂದ್ರೆ ವಾಙ್ಮಯ ದರ್ಶನ., ಹಿಂದ ಮಾತಾ ಮುದ್ರಣಾಲಯ, ಧಾರವಾಡ
೫೪. ತಿರುಮಲೇಶ ಕೆ. ವಿ., ೧೯೮೬., ಬೇಂದ್ರೆಯವರ ಕಾವ್ಯಶೈಲಿ., ಬೇಂದ್ರೆ ಸ್ಮೃತಿ ಉಪನ್ಯಾಸ ಮಾಲೆ, ಕನ್ನಡ ಸಂಘ, ಕ್ರೈಸ್ಟ್ ಕಾಲೇಜು, ಬೆಂಗಳೂರು
೫೫. ದೇಶಪಾಂಡೆ ಎಸ್.ಎಲ್., ೨೦೧೩., ಬೇಂದ್ರೆ–ಶರೀಫರ ಕಾವ್ಯಾಯಾನ., ದೇಸಿ ಪುಸ್ತಕ, ಬೆಂಗಳೂರು
೫೬. ದಾಸೇಗೌಡ ಜಿ.ವಿ., ೧೯೯೬., ಸಾಹಿತ್ಯದ ವಿರಾಟ್ ಸ್ವರೂಪ– ಒಂದು ಸಮೀಕ್ಷೆ., ಚೇತನ ಬುಕ್ ಹೌಸ್, ಮೈಸೂರು
೫೭. ನಿ.ಶ್ರೀಶ. ಬಲ್ಲಾಳ, ೧೯೭೭., ಒಲವೆ ನಮ್ಮ ಬದುಕು., ಪೀಠಿಕೆ., ರಾಷ್ಟ್ರಕವಿ ಗೋವಿಂದಪೈ ಸ್ಮಾರಕ ಸಂಶೋಧನ ಕೇಂದ್ರ, ಉಡುಪಿ
೫೮. ನಾಗರಾಜ್ ಡಿ.ಆರ್., ೧೯೮೭., ಶಕ್ತಿ ಶಾರದೆಯ ಮೇಳ., ಅಕ್ಷರ ಪ್ರಕಾಶನ, ಸಾಗರ
೫೯. ನಾಗರಾಜ ಕಿ.ರಂ, ೨೦೧೦.,ಮತ್ತೆ ಮತ್ತೆ ಬೇಂದ್ರೆ, ಅಹರ್ನಿಶಿ ಪ್ರಕಾಶನ, ಶಿವಮೊಗ್ಗ
೬೦. ನಾರಾಯಣಾಚಾರ್ಯಕೆ.ಎಸ್., ೧೯೯೬.,ಬೇಂದ್ರೆ ಕಾವ್ಯದಲ್ಲಿ ಆಧ್ಯಾತ್ಮಿಕ ನೆಲೆ ಮತ್ತು ಆರ್ಷ್ಯದೃಷ್ಟಿ., ಶ್ರೀಮಾತಾ ಪ್ರಕಾಶನ, ಧಾರವಾಡ

೬೧. ನಾರಾಯಣ ಕೆ.ವಿ., ೧೯೮೩., ಸಾಹಿತ್ಯತತ್ವ : ಬೇಂದ್ರೆ ದೃಷ್ಟಿ, ಬೇಂದ್ರೆ ಸ್ಮೃತಿ ಉಪನ್ಯಾಸ ಮಾಲೆ, ಬೇಂದ್ರೆ ಸ್ಮೃತಿ ಉಪನ್ಯಾಸ ಮಾಲೆ, ಕನ್ನಡ ಸಂಘ, ಕ್ರೈಸ್ಟ್ ಕಾಲೇಜು, ಬೆಂಗಳೂರು

೬೨. ನಾರಾಯಣ ಪ್ರಸಾದ ಕೆ.ಜಿ., ೧೯೯೬., ಬೇಂದ್ರೆ ಕಾವ್ಯದ ಛಂದಸ್ಸು., ಅರ್ಕಾವತಿ ಪ್ರಕಾಶನ, ಮೈಸೂರು

೬೩. ನಾಯಕ್ .ಜಿ.ಎಚ್., ೨೦೧೪., ಬೇಂದ್ರೆ ನಾದ ನಾಡು ಒಲವು., ಅಭಿನವ ಬೆಂಗಳೂರು

೬೪. ಪಂಢರಿನಾಥಾಚಾರ್ಯ ಗಲಗಲಿ(ಸಂ)., ೧೯೭೪., ಬೇಂದ್ರೆ ವಾಙ್ಮಯ ದರ್ಶನ., ಪಂಚಾಮೃತ ಪ್ರಕಾಶನ., ಧಾರವಾಡ

೬೫. ಪೂಜಾರ್‌ಎಚ್. ಬಿ., ೨೦೧೨., ಬೇಂದ್ರೆ ಅಂದದ್ದು ಆಡಿದ್ದು., ಪ್ರಸಾರಾಂಗ, ಬೇಂದ್ರೆ ಸ್ಮಾರಕ ಟ್ರಸ್ಟ್, ಧಾರವಾಡ

೬೬. ಬನ್ನಂಜೆ ಗೋವಿಂದಾಚಾರ್ಯ., ೨೦೧೪., ಪ್ರಯೋಗಶೀಲ ಕವಿ ಬೇಂದ್ರೆ, ಅಭಿನವ, ಬೆಂಗಳೂರು

೬೭. ಬನ್ನಂಜೆ ಗೋವಿಂದಾಚಾರ್ಯ, ೧೯೭೭., ಒಲವೆ ನಮ್ಮ ಬದುಕು., ಪೀಠಿಕೆ ೧., ರಾಷ್ಟ್ರಕವಿ ಗೋವಿಂದಪೈ ಸ್ಮಾರಕ ಸಂಶೋಧನ ಕೇಂದ್ರ, ಉಡುಪಿ

೬೮. ಬಸವರಾಜ ಕಲ್ಗುಡಿ., ೧೯೮೪., ಬೇಂದ್ರೆಯವರ ಕಾವ್ಯದಲ್ಲಿ ಪ್ರೇಮದ ಆವಿಷ್ಕಾರ ಸ್ವರೂಪಗಳು., ಬೇಂದ್ರೆ ಸ್ಮೃತಿ ಉಪನ್ಯಾಸ ಮಾಲೆ, ಕನ್ನಡ ಸಂಘ, ಕ್ರೈಸ್ಟ್ ಕಾಲೇಜು, ಬೆಂಗಳೂರು

೬೯. ಬುದ್ದಣ್ಣ ಹಿಂಗಮಿರೆ(ಸಂ)., ೧೯೭೭., ಇಳಿದು ಬಾ ತಾಯಿ., ಸಾಹಿತ್ಯ ಮಂಟಪ, ಹುಬ್ಬಳ್ಳಿ ಹಾಗೂ ಸಮಾಜ ಪುಸ್ತಕಾಲಯ, ಧಾರವಾಡ

೭೦. ಮಂಗಳಾ ಪ್ರಿಯದರ್ಶಿನಿ ಡಿ., ೧೯೯೫., ಬೇಂದ್ರೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೭೧. ಮಂಜುಳಾ ರಾಜು ಕೆ., ೨೦೧೧., ದ.ರಾ ಬೇಂದ್ರೆ, ಸಿರಿಗನ್ನಡ ಪುಸ್ತಕ ಮನೆ., ಶಿವಮೊಗ್ಗ

೭೨. ಮಿರ್ಜಿ ಅಣ್ಣಾರಾಯ(ಸಂ), ೧೯೪೬., ದತ್ತವಾಣಿ., ಮನೋಹರ ಗ್ರಂಥ ಪ್ರಕಾಶನ, ಧಾರವಾಡ

೭೩. ಮುಗಳಿ ರಂ.ಶ್ರೀ., ೧೯೮೬., ಬೇಂದ್ರೆ ಕಾವ್ಯ., ಅಭಿನವ, ಬೆಂಗಳೂರು

೭೪. ಮುಗಳಿ ರಂ.ಶ್ರೀ., ೧೯೮೫., ಬೇಂದ್ರೆಯವರ ಕಾವ್ಯದಲ್ಲಿ ವಿರಾಟ ದರ್ಶನ., ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೭೫. ರಂಗಸ್ವಾಮಿ(ಸಂ)., ೧೯೭೫., ವರಕವಿ., ಹಂಸಧ್ವನಿ ಪ್ರಕಾಶನ, ಬೆಂಗಳೂರು.

೭೬. ರಮೇಶ್ ಬೇ.ಗೋ., ೨೦೧೩., ದ. ರಾ ಬೇಂದ್ರೆ, ಸಾಧನಾ ಪ್ರಕಾಶನ, ಬೆಂಗಳೂರು

೭೭. ರಮೇಶ್ ಬೆ. ಗೋ., ೧೯೯೬., ವರಕವಿ ದ.ರಾ.ಬೇಂದ್ರೆ, ವಾಸನ್ ಬುಕ್ ಡಿಪೋ, ಬೆಂಗಳೂರು

೭೮. ರಾಘವೇಂದ್ರರಾವ್ .ಕೆ (ಸಂ)., ೨೦೦೬., ಬೇಂದ್ರೆ ಅನುಸಂಧಾನ., ಪ್ರಸಾರಾಂಗ, ಬೇಂದ್ರೆ ಸ್ಮಾರಕ ಟ್ರಸ್ಟ್, ಧಾರವಾಡ

೭೯. ರಾಜೇಂದ್ರ ಚೆನ್ನಿ., ೨೦೦೧., ಕರುಳು ಬಳ್ಳಿಯ ಸೊಲ್ಲು., ಅಭಿನವ ಪ್ರಕಾಶನ, ಬೆಂಗಳೂರು

೮೦. ರಾಜೇಂದ್ರ ಚೆನ್ನಿ., ೧೯೮೮., ಬೇಂದ್ರೆಕಾವ್ಯ : ಸಂಪ್ರದಾಯ ಮತ್ತು ಸ್ವಂತಿಕೆ., ಬೇಂದ್ರೆ ಸ್ಮೃತಿ ಉಪನ್ಯಾಸ ಮಾಲೆ, ಕನ್ನಡ ಸಂಘ, ಕ್ರೈಸ್ಟ್ ಕಾಲೇಜು, ಬೆಂಗಳೂರು

೮೧. ರಾಜಪುರೋಹಿತ ಬಿ.ಬಿ., ೧೯೮೮.,ಬೇಂದ್ರೆಯವರ ಕಾವ್ಯಭಾಷೆ., ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೮೨. ರಾಮೇಗೌಡ(ಸಂ)., ೧೯೯೬., ಬೇಂದ್ರೆ ಸಾಹಿತ್ಯ ಸಮಾಲೋಚನೆ., ಕುವೆಂಪು ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು

೮೩. ರಾಮಚಂದ್ರನ್ ಸಿ. ಎನ್., ೨೦೧೧., ಸಾಹಿತ್ಯ ವಿಮರ್ಶೆ., ಕನ್ನಡ ಮತ್ತು ಸಂಸ್ಕೃತಿ ಇಲಾಖೆ., ಬೆಂಗಳೂರು

೮೪. ಲಿಂಗಣ್ಣ ಸಿಂ.ಪಿ., ೧೯೪೬., ದತ್ತ ಸಾಹಿತ್ಯ., ಸಾಧನಾ ಪ್ರಕಾಶನ, ಧಾರವಾಡ

೮೫. ವಸಂತ ಅ. ಕುಲಕರ್ಣಿ., ೨೦೧೪., ಬೇಂದ್ರೆ ಕಾವ್ಯ ಮತ್ತು ಶರೀರ ಶಾಸ್ತ್ರ., ಅಭಿನವ, ಬೆಂಗಳೂರು

೮೬. ವಸಂತ ಅ. ಕುಲಕರ್ಣಿ., ೨೦೧೧., ನಂದನದ ನೋಟ–ಸಾಧನಕೇರಿ., ವಿಕ್ರಂ ಪ್ರಕಾಶನ, ಬೆಂಗಳೂರು

೮೭. ವಾಮನ ಬೇಂದ್ರೆ., ೧೯೯೯., ಗೆಳೆಯರ ಗುಂಪು., ಕನ್ನಡ ವಿಶ್ವವಿದ್ಯಾಲಯ, ಹಂಪಿ

೮೮. ವಾಮನ ಬೇಂದ್ರೆ., ೧೯೯೫.,ಬೇಂದ್ರೆ ಸಾಂಖ್ಯ ವಿಜ್ಞಾನ ಸಿದ್ಧಾಂತ., ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೮೯. ವಾಮನ ಬೇಂದ್ರೆ., ೧೯೯೨., ವರಕವಿ ಡಾ। ದ.ರಾ.ಬೇಂದ್ರೆ ಸ್ಮರಣೆ., ಭಾರತೀಯ ಸ್ಟೇಟ್ ಬ್ಯಾಂಕ್, ಬೆಂಗಳೂರು

೯೦. ವಾಮನ ಬೇಂದ್ರೆ., ೧೯೯೦., ಬೇಂದ್ರೆ ಜೀವನ ಪರಿಚಯ., ವಿಶಾಖಾಪ್ರಕಾಶನ, ಅಂಬಿಕಾತನಯದತ್ತ ವೇದಿಕೆ, ಹುಬ್ಬಳ್ಳಿ

೯೧. ವಾಮನ ಬೇಂದ್ರೆ., ೧೯೮೨., ಬೇಂದ್ರೆ ಕಾವ್ಯಲೋಲಕ., ಸಮಾಜ ಪುಸ್ತಕಾಲಯ, ಧಾರವಾಡ

೯೨. ವಾಮನ ಬೇಂದ್ರೆ (ಸಂ)., ೨೦೦೫., ಅಂಬಿಕಾತನಯದತ್ತರ ಸಮಗ್ರ ಸಾಹಿತ್ಯ, ಔದುಂಬರ ಗಾಥೆ, ಶ್ರೀ ಮಾತಾರವಿಂದ ಪ್ರಜ್ಞಾ ಪ್ರಕಾಶ., ವರಕವಿ ಡಾ॥ ದ. ರಾ. ಬೇಂದ್ರೆ ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ

೯೩. ವಾಮನ ಬೇಂದ್ರೆ (ಸಂ)., ೨೦೦೫.,ಅಂಬಿಕಾತನಯದತ್ತರ ಸಮಗ್ರ ಸಾಹಿತ್ಯ, ಔದುಂಬರ ಗಾಥೆ (ಆರು ಸಂಪುಟಗಳು)., ವರಕವಿ ಡಾ॥ ದ. ರಾ. ಬೇಂದ್ರೆ ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ

೯೪. ವಾಸುದೇವಮೂರ್ತಿ ಟಿ. ಎನ್., ೨೦೧೭., ರಮಣ ಹೃದಯ., ವಂಶಿ ಪಬ್ಲಿಕೇಷನ್ಸ್, ಬೆಂಗಳೂರು

೯೫. ವಿಠಲರಾವ ಗಾಯಕವಾಡ., ೨೦೧೦., ಬೇಂದ್ರೆಯವರ ಮರಾಠಿ ಸಾಹಿತ್ಯ ಕೃಷಿ., ದ.ರಾ,ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ಧಾರವಾಡ

೯೬. ವಿಜಯಾ ದಬ್ಬೆ., ೧೯೮೫., ಬೇಂದ್ರೆ ಕಾವ್ಯದಲ್ಲಿ ಅನುಭಾವದ ಒಂದು ನಿಚ್ಚಣಿಕೆ., ಬೇಂದ್ರೆ ಸ್ಮೃತಿ ಉಪನ್ಯಾಸ ಮಾಲೆ, ಕನ್ನಡ ಸಂಘ, ಕ್ರೈಸ್ಟ್ ಕಾಲೇಜು, ಬೆಂಗಳೂರು

೯೭. ವಿವಿಧ ಲೇಖಕರು., ೧೯೪೬., ಶ್ರೀ ಬೇಂದ್ರೆಯವರಿಗೆ., ಬೇಂದ್ರೆ ಸತ್ಕಾರ ಸಮಿತಿ, ಧಾರವಾಡ

೯೮. ವಿವಿಧ ಲೇಖಕರು., ೧೯೮೫., ಕನ್ನಡ ಪ್ರತಿಭೆ., ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು

೯೯. ವೆಂಕಟೇಶ ಮೂರ್ತಿಎಚ್. ಎಸ್.,೧೯೮೯., ಮೇಘದೂತ : ಕಾಳಿದಾಸ ಮತ್ತು ಬೇಂದ್ರೆ., ಬೇಂದ್ರೆ ಸ್ಮೃತಿ ಉಪನ್ಯಾಸ ಮಾಲೆ, ಕನ್ನಡ ಸಂಘ, ಕ್ರೈಸ್ಟ್ ಕಾಲೇಜು, ಬೆಂಗಳೂರು

೧೦೦. ಶಂಕರಲಿಂಗ ಜಿ. ಹೆಂಬಾಡಿ., ಗೀತಾ ಎಸ್. ಹೆಂಬಾಡಿ., ೨೦೧೩., ಗಾರುಡಿಗ ಕವಿ ದ.ರಾ ಬೇಂದ್ರೆ., ಶರಣ ಪ್ರಕಾಶನ, ಗುಲಬರ್ಗಾ

೧೦೧. ಶಂಕರ ಗಂಗಣ್ಣವರ., ೧೯೯೫., ಕನ್ನಡದ ಷಟ್ಮುಖಗಳು ಬೇಂದ್ರೆ., ಶಿಶುಕುಮಾರ ಪ್ರಕಾಶನ, ಕುರುಡಗಿ

೧೦೨. ಶಂಕರ ಮೊಕಾಶಿ ಪುಣೇಕರ., ೧೯೮೨., ಶ್ರೀ ಬೇಂದ್ರೆಯವರ ಕಾವ್ಯಮೀಮಾಂಸೆ., ಸಮಾಜ ಪುಸ್ತಕಾಲಯ, ಧಾರವಾಡ

೧೦೩. ಶರ್ಮಾ ಕೆ. ಎಸ್., ವಾಮನ ಬೇಂದ್ರೆ., ೨೦೦೬., ಬೇಂದ್ರೆ ಹಾಗೂ ವಿಜ್ಞಾನ., ಶ್ರೀಮಾತಾ ಪ್ರಕಾಶನ, ಹುಬ್ಬಳ್ಳಿ

೧೦೪. ಶರ್ಮಾ ಕೆ. ಎಸ್., ೨೦೦೯., ಕುವಲಯ ಕಂಡ 'ಅಂದತ್ತ' ಸಂಪುಟ ೫., ಪುರೋಗಾಮಿ ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ

೧೦೫. ಶ್ರೀನಿವಾಸರಾಜು ಚಿ. (ಸಂ)., ೨೦೦೦., ಬೇಂದ್ರೆಸಾಹಿತ್ಯ : ಒಂದು ಅಧ್ಯಯನ., ಕನ್ನಡ ಸಂಘ, ಕ್ರೈಸ್ಟ್ ಕಾಲೇಜು, ಬೆಂಗಳೂರು

೧೦೬. ಶಿವಾರೆಡ್ಡಿ ಕೆ.ಸಿ(ಸಂ)., ೧೯೯೯., ಶತಮಾನದ ಕವಿತೆ 'ಜೋಗಿ'., ಕನ್ನಡವಿಶ್ವವಿದ್ಯಾಲಯ, ಹಂಪಿ

೧೦೭. ಶಿವಾರೆಡ್ಡಿ ಕೆ.ಸಿ(ಸಂ)., ೧೯೯೯., ಅಂಬಿಕಾತನಯ ನಂಬಿಕೆಯ ಹಾಡು., ಕನ್ನಡವಿಶ್ವವಿದ್ಯಾಲಯ, ಹಂಪಿ

೧೦೮. ಶಿವಾರೆಡ್ಡಿ ಕೆ.ಸಿ., ೨೦೦೦., ಸ್ಥಿತ್ಯಂತರ., ಶಕ್ತಿ ಮುದ್ರಣ ಮತ್ತು ಪ್ರಕಾಶನ, ಬೆಂಗಳೂರು

೧೦೯. ಶಿವಾರೆಡ್ಡಿ, ಕೆ. ಸಿ., ೨೦೧೭., ಬೇಂದ್ರೆ ಕುವೆಂಪು ವಿರಾಟ್ ದರ್ಶನ., ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಕಲಾಗ್ರಾಮ, ಬೆಂಗಳೂರು

೧೧೦. ಶಿವಾರೆಡ್ಡಿ, ಕೆ.ಸಿ., ೨೦೦೧., ಸಂಧಿಕಾಲದ ಅನುಸಂಧಾನ., ಸಿ.ವಿ.ಜಿ ಪಬ್ಲಿಕೇಷನ್ಸ್., ಬೆಂಗಳೂರು

೧೧೧. ಶಿವರುದ್ರಪ್ಪ ಜಿ.ಎಸ್., ೨೦೧೪.,ಬೇಂದ್ರೆಯವರ ಕಾವ್ಯ ಸೃಷ್ಟಿಯ ಸ್ವರೂಪ., ಅಭಿನವ, ಬೆಂಗಳೂರು

೧೧೨. ಶಿವರುದ್ರಪ್ಪ ಜಿ.ಎಸ್., ೧೯೯೯., ದೇಸೀಯತೆಯಲ್ಲಿ ಬೇರೂರಿ ಅರಳಿದ ದತ್ತಪ್ರತಿಭೆ., ಅಭಿನವ ಬೆಂಗಳೂರು

೧೧೩. ಶಿವರುದ್ರಪ್ಪ ಜಿ.ಎಸ್., ೧೯೭೫., ಕವಿ ಬೇಂದ್ರೆ., ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

೧೧೪. ಶ್ರೀಧರ ಬಿ. ಎಚ್., ೧೯೮೭., ಪಸರಿಪ ಕನ್ನಡಕ್ಕೊಡೆಯನೀಗ ದರಾಂಕಿತ ಬೇಂದ್ರೆ., ಅಂಬಿಕಾತನಯದತ್ತ ವೇದಿಕೆ, ಧಾರವಾಡ

೧೧೫. ಶ್ರೀಧರ ಬಿ. ಎಚ್., ೧೯೫೬., ಬೇಂದ್ರೆ., ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜ, ಉಡುಪಿ

೧೧೬. ಶ್ರೀಪಾದಭಟ್., ೧೯೯೬., ಮೇಘದೂತ- ಒಂದು ಅವಲೋಕನ., ಚೇತನ ಬುಕ್ ಹೌಸ್, ಮೈಸೂರು

೧೧೭. ಶೇಷಗಿರಿರಾವ್ ಎಲ್. ಎಸ್., ೧೯೮೭, ಬೇಂದ್ರೆಯವರು ಮತ್ತು ನವೋದಯ ಕಾವ್ಯ., ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೧೮. ಶೇಷಗಿರಿರಾವ್ ಎಲ್. ಎಸ್., ೨೦೧೪., ನವೋದಯ ಕಾವ್ಯ ಮತ್ತು ಬೇಂದ್ರೆ., ಅಭಿನವ ಬೆಂಗಳೂರು.

೧೧೯. ಶೇಷನವರತ್ನ., ೨೦೧೪., ಬೇಂದ್ರೆ ಕಾವ್ಯದ ಪ್ರತಿಮಾ ಸೃಷ್ಟಿ., ಅಭಿನವ, ಬೆಂಗಳೂರು.

೧೨೦. ಶ್ವೇತಾ ಎಂ. ಬಿ., ೨೦೧೪., ಪಥ್ಯ ಪ್ರೀತಿ., ಅವಿರತ ಪುಸ್ತಕ, ಬೆಂಗಳೂರು

೧೨೧. ಸದಾನಂದ ನಾಯಕ., ೧೯೮೧., ಬೇಂದ್ರೆ ಕಾವ್ಯಜೀವನ., ವಾರ್ತಾ ಮತ್ತು ಪ್ರಚಾರ ಇಲಾಖೆ, ಬೆಂಗಳೂರು

೧೨೨. ಸತ್ಯಕಾಮ ೨೦೧೪., ಬೇಂದ್ರೆಯವರ ಕಾವ್ಯದಲ್ಲಿ ರಸ ಸಿದ್ಧಿ., ಅಭಿನವ, ಬೆಂಗಳೂರು

೧೨೩. ಸೀತಾರಾಮಯ್ಯ ಎಂ. ವಿ., ಗೋವಿಂದ ಜಾಲಿಹಾಳ, ೧೯೮೨.,ಬೇಂದ್ರೆಸ್ಮೃತಿ., ಬಿ.ಎಂ.ಶ್ರೀ ಪ್ರತಿಷ್ಠಾನ, ಬೆಂಗಳೂರು

೧೨೪. ಸಂಗನಾಳ ಮಠ ಯು. ಆರ್ (ಸಂ)., ೨೦೧೪., ಕಾವ್ಯ ಲೋಕದ ಗಾರುಡಿಗ., ಗಾಯತ್ರಿ ಎಂಟರ್ ಪ್ರೈಸಸ್, ಬೆಂಗಳೂರು

೧೨೫. ಸುಂದರ್ ರಾಜ್ ಎಂ. ಎಸ್., ೨೦೧೬., ಕುಂತ್ರೆ ನಿಂತ್ರೆ ಬೇಂದ್ರೆ., ಸ್ನೇಹ ಬುಕ್ ಹೌಸ್, ಬೆಂಗಳೂರು

೧೨೬. ಸುರೇಶ ಕುಲಕರ್ಣಿ., ೧೯೯೫., ಭಾವರೇಖೆಯಲ್ಲಿ ಬೇಂದ್ರೆ., ಮನೋಹರ ಗ್ರಂಥಮಾಲಾ, ಧಾರವಾಡ

೧೨೭. ಸುಮತೀಂದ್ರ ನಾಡಿಗ., ೧೯೯೪., ಬೇಂದ್ರೆಯವರ ಸಖೀಗೀತದಲ್ಲಿ ಋತುವರ್ಣನೆ., ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೨೮. ಹರಿದಾಸ ಭಟ್ಟ ಕು. ಸಿ., ೧೯೭೭., ಒಲವೆ ನಮ್ಮ ಬದುಕು., ಪೀಠಿಕೆ ३., ರಾಷ್ಟ್ರಕವಿ ಗೋವಿಂದಪೈ ಸ್ಮಾರಕ ಸಂಶೋಧನ ಕೇಂದ್ರ, ಉಡುಪಿ

ಸಂಶೋಧನಾ ಪ್ರಬಂಧಗಳು

1. ಕೃಷ್ಣಪ್ಪ ಜಿ., 2001., ಬೇಂದ್ರೆಯವರ ಕಾವ್ಯದಲ್ಲಿ ಸ್ತ್ರೀ., ಕಾಮಧೇನು ಪುಸ್ತಕ ಭವನ, ಬೆಂಗಳೂರು
2. ಕೃಷ್ಣಾ ಕಟ್ಟಿ., 2013., ನಾದದ ನವನೀತ., ಯಾಜಿ ಪ್ರಕಾಶನ, ಹೊಸಪೇಟೆ
3. ಗೀತಾ ವಸಂತ., 2016., ಬೀಜದೊಳಗಣ ವೃಕ್ಷ., ಮನೋಹರ ಗ್ರಂಥಮಾಲಾ, ಧಾರವಾಡ
4. ನರಸಿಂಹಮೂರ್ತಿ ಹೂವಿನಹಳ್ಳಿ., 2009., ಬೇಂದ್ರೆ ಮತ್ತು ಕಂಬಾರರ ಕಾವ್ಯದಲ್ಲಿ ಪುರಾಣಪ್ರಜ್ಞೆ ಮತ್ತು ಸಮಕಾಲೀನತೆ., ಪ್ರೇರಣ ಪ್ರಕಾಶನ, ಬೆಂಗಳೂರು
5. ಪ್ರಭುಶಂಕರ., 2000., ಕನ್ನಡದಲ್ಲಿ ಭಾವಗೀತೆ., ಡಿ.ವಿ.ಕೆ. ಮೂರ್ತಿ, ಪ್ರಕಾಶಕರು, ಮೈಸೂರು
6. ಬಸು ಬೇವಿನಗಿಡದ., 2013., ಬೆಳಕಿನ ಹಕ್ಕಿ ಬೇಂದ್ರೆ ನಿಸರ್ಗ ಕಾವ್ಯ : ಅನುಭೂತಿ ಹಾಗೂ ಅಭಿವ್ಯಕ್ತಿ., ಸುಂದರ ಪುಸ್ತಕ ಪ್ರಕಾಶನ, ಧಾರವಾಡ, ಪುಟ ಸಂಖ್ಯೆ 43
7. ಭಾರತಿ ಟಿ.ಸಿ., 2011., ಬೇಂದ್ರೆಯವರ ಕಾವ್ಯದಲ್ಲಿ ಮಾತೃತ್ವದ ಪರಿಕಲ್ಪನೆ., ನಿರಂತರ, ಬೆಂಗಳೂರು
8. ರಾಘವೇಂದ್ರರಾವ್ ಎಚ್.ಎಸ್., 1992., ಹಾಡೆ ಹಾದಿಯ ತೋರಿತು., ಕನ್ನಡ ಸಂಘ, ಕ್ರೈಸ್ಟ್ ಕಾಲೇಜು, ಬೆಂಗಳೂರು
9. ರುಕ್ಮಿಣಿ ಪಾರ್ವತಿ., 1982., ಬೇಂದ್ರೆಯವರ ಭಾವಗೀತೆಗಳು., ಉಷಾ ಸಾಹಿತ್ಯ ಮಾಲೆ, ಮೈಸೂರು
10. ಶ್ರೀಶೈಲೇಶ ವಿ. ಹಿರೇಮಠ., 2008., ದ. ರಾ ಬೇಂದ್ರೆಯವರ ಕಾವ್ಯೇತರ ಸಾಹಿತ್ಯ ಒಂದು ಅಧ್ಯಯನ., ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
11. ಶಿವಾರೆಡ್ಡಿ ಕೆ.ಸಿ., 2003., ಕನ್ನಡದ ಹಾಡು ಪಾಡು., ಅಧ್ಯಯನ ಮಂಡಲ, ಬೆಂಗಳೂರು
12. ಸದಾಶಿವ ದೊಡಮನಿ., 2014., ಧಾರವಾಡ ಮತ್ತು ಹಲಸಂಗಿ ಗೆಳೆಯರ ಗುಂಪು : ಒಂದು ಸಾಂಸ್ಕೃತಿಕ ಅಧ್ಯಯನ., ಚಂದ್ರಭಾಗ ಪ್ರಕಾಶನ, ಗದಗ, ಹುಲಕೋಟಿ
13. ಸುಮತೀಂದ್ರ ನಾಡಿಗ., 1989., ಬೇಂದ್ರೆಯವರ ಕಾವ್ಯದ ವಿಭಿನ್ನ ನೆಲೆಗಳು; ಸುವಿದ್ಯಾ ಪ್ರಕಾಶನ., ಬೆಂಗಳೂರು
14. ಸಂಗೀತ .ಪಿ., 2008., ನವೋದಯ ಸಂದರ್ಭ ಬೇಂದ್ರೆ-ಕುವೆಂಪು ಕೃತಿಗಳಲ್ಲಿ ಪರಿಸರದ ಪ್ರಶ್ನೆಗಳು., ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸಾಹಿತ್ಯ ಪತ್ರಿಕೆಗಳು

೧. ಉಪಾಧ್ಯ ಆರ್. ಎ., ಫೆಬ್ರವರಿ ೧೯೯೧., ಕಸ್ತೂರಿ., ಕಸ್ತೂರಿ ಕಾರ್ಯಾಲಯ, ಹುಬ್ಬಳ್ಳಿ

೨. ಜವರೇಗೌಡ ದೇ., ನವಂಬರ್–ಡಿಸೆಂಬರ್ ೧೯೯೫., ಸಂಚಿಕೆ ೨–೩., ಸಂಪುಟ ೪೬., ಪುಸ್ತಕ ಪ್ರಪಂಚ., ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು

೩. ಜವರೇಗೌಡ ದೇ., ಜನವರಿ ೧೯೬೭, ಸಂಪುಟ ೪೮, ಸಂಚಿಕೆ ೪., ಪ್ರಬುದ್ಧ ಕರ್ಣಾಟಕ., ಮೈಸೂರು ವಿಶ್ವವಿದ್ಯಾಲಯ, ಮೈಸೂರು

೪. ಜೋಷಿ ಎನ್. ವಿ., ಫೆಬ್ರವರಿ ೧೯೯೫., ಕಸ್ತೂರಿ., ಕಸ್ತೂರಿ ಕಾರ್ಯಾಲಯ, ಹುಬ್ಬಳ್ಳಿ

೫. ಜೋಷಿ ಎನ್. ವಿ., ಡಿಸೆಂಬರ್ ೧೯೯೫., ಕಸ್ತೂರಿ., ಕಸ್ತೂರಿ ಕಾರ್ಯಾಲಯ, ಹುಬ್ಬಳ್ಳಿ

೬. ಪಿ.ಪಿ ಬಳಗದ ಗೆಳೆಯರು., ಮೇ–ಜುಲೈ, ೧೯೮೨., ಸಂಚಿಕೆ ೫., ಸಂಪುಟ–೩., ಅಂಕಣ., ಚಿರಂಜೀವಿ, ಬೆಂಗಳೂರು

೭. ಪ್ರಹ್ಲಾದ್ ಡಿ. ವಿ., ಮಾರ್ಚ್–ಏಪ್ರಿಲ್ ೨೦೧೨, ಸಂಚಿಕೆ ೯೭., ಸಂಚಯ., ಸಂಚಯ, ಬೆಂಗಳೂರು

೮. ಪ್ರಹ್ಲಾದ್ ಡಿ. ವಿ., ಜನವರಿ–ಮಾರ್ಚ್ ೨೦೧೫, ಸಂಚಿಕೆ ೧೦೬., ಸಂಚಯ., ಸಂಚಯ, ಬೆಂಗಳೂರು

೯. ಮಣೂರ ವ್ಹಿ. ಜಿ., ೧೯೬೬ ಮಾರ್ಚ್–ಸಂಪುಟ ೪, ಸಂಚಿಕೆ ೭–೮., ಮಕರಂದ., ರಸಿಕ ಪ್ರಕಾಶನ ಅಹಮ್ಮದಾಬಾದ ಮತ್ತು ಹುಬ್ಬಳ್ಳಿ

೧೦. ಪ್ರಬುದ್ಧ ಕರ್ಣಾಟಕ, ವಿಕ್ರಮ ಸಂವತ್ಸರ, ಕಾಮನ ಸಂಚಿಕೆ, ಸಂಚಿಕೆ ೪, ೧೯೪೧ (ಜಯಕರ್ನಾಟಕ ೧೯೩೩)., ಗರಿ(೧೯೩೨)., ಮೈಸೂರು ವಿಶ್ವವಿದ್ಯಾಲಯ., ಮೈಸೂರು

೧೧. ಮಾಸ್ತಿ ವೆಂಕಟೇಶ ಅಯ್ಯಾಂಗಾರ್೧೯೪೬., ಜೀವನ, ಸಂಪುಟ ೦೭, ಸಂಚಿಕೆ ೦೨, ಜೂನ್ ವಿಶೇಷಾಂಕ

೧೨. ರಂಗನಾಥ ದಿವಾಕರ., ಫೆಬ್ರವರಿ ೧೯೫೯., ಕಸ್ತೂರಿ., ಲೋಕ ಶಿಕ್ಷಣ ಟ್ರಸ್ಟ್, ಹುಬ್ಬಳ್ಳಿ

೧೩. ರಾಘವೇಂದ್ರ ರಾವ್ ಎಚ್. ಎಸ್., ಕನ್ನಡ ಅಧ್ಯಯನ– ಅರ್ಧವಾರ್ಷಿಕ ಪತ್ರಿಕೆ ಸಂಪುಟ ೧೨ ಸಂಚಿಕೆ ೦೧., ಕನ್ನಡ ಕಾವ್ಯ ಪರಂಪರೆ ಮತ್ತು ಬೇಂದ್ರೆ ಪ್ರತಿಭೆ., ಕನ್ನಡ ವಿಶ್ವ ವಿದ್ಯಾಲಯ, ಹಂಪಿ

೧೪. ಲಕ್ಷ್ಮಣ ಕೊಡಸೆ., ಜೂನ್–ಡಿಸೆಂಬರ್, ಸಂಚಿಕೆ ೧–೨, ೧೯೮೦, ಸಂಪುಟ ೬೫, ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ., ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೧೫. ಶಿವರುದ್ರಪ್ಪ ಜಿ. ಎಸ್., ಕಾವ್ಯ, ಲಕ್ಷ್ಮೀನಾರಾಯಣ ಭಟ್ಟ, ಸಾಹಿತ್ಯ ವಾರ್ಷಿಕ ೧೯೭೩, ಬೆಂಗಳೂರು ವಿಶ್ವವಿದ್ಯಾಲಯ., ಬೆಂಗಳೂರು

೧೬. ರಾಘವೇಂದ್ರ ಪಾಟೀಲ., ಸಾಹಿತ್ಯ ಸಂವಾದ : ೬೦ – ೬೧, ಜನವರಿ ಮಾರ್ಚ್ ೨೦೦೫., ಸಾಂಸ್ಕೃತಿಕ ಮುಖಾಮುಖಿ : ವಸಾಹತು ಸಂದರ್ಭ., ರಾಜಾರಾಮ ಹೆಗಡೆ., ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ

ಲೇಖನಗಳು

೧. ಆಶಾದೇವಿ. ಎಂ. ಎಸ್., ೨೦೧೧., ನಡುವೆ ಸುಳಿವ ಆತ್ಮ., ಸಖೀಗೀತ : ಮೃಣ್ಮಯ ದಾಂಪತ್ಯ-ಚಿನ್ಮಯ ಸಖ್ಯ., ಅಹರ್ನಿಶಿ ಪ್ರಕಾಶನ, ಶಿವಮೊಗ್ಗ, ಪುಟ ಸಂಖ್ಯೆ ೩೧-೩೮

೨. ಉಮಾಪತಿ ಕೆ.ಎಸ್ (ಸಂ)., ೧೯೯೮., ಚಿಂತಾಮಣಿ ಕೂಡ್ಲೆಕೆರೆ., ನಾ ಮೆಚ್ಚಿದ ಪುಸ್ತಕ., ಗರಿ., ಅಂಕಿತ ಪುಸ್ತಕ, ಬೆಂಗಳೂರು, ಪುಟ ಸಂಖ್ಯೆ ೧೪-೨೧

೩. ಉಪಾಧ್ಯ ಜಿ. ಎನ್., ೨೦೦೫., ವಿಚಾರದ ಬೆಳಕು., ಕಾವ್ಯ ಮೀಮಾಂಸೆ-ವಿಮರ್ಶೆ-ಬೇಂದ್ರೆ ಒಲವು-ನಿಲುವು., ಅಭಿಜಿತ್ ಪ್ರಕಾಶನ, ಮುಂಬಯಿ, ಪುಟ ಸಂಖ್ಯೆ ೫೭-೭೫

೪. ಕರ್ಕಿ ಡಿ.ಎಸ್., ೧೯೭೪., ಸಾಹಿತ್ಯ-ಸಂಸ್ಕೃತಿ- ಶ್ರುತಿ., ಬೇಂದ್ರೆ ಗೀತ ಶ್ರುತಿ., ಐ ಬಿ ಎಚ್ ಪ್ರಕಾಶನ, ಬೆಂಗಳೂರು, ಪುಟ ಸಂಖ್ಯೆ ೭೨-೮೫

೫. ಕೃಷ್ಣರಾಯ. ಅ. ನ., ೧೯೯೫., ಕನ್ನಡ ಕುಲ ರಸಿಕರು., ದ.ರಾ ಬೇಂದ್ರೆ., ಕರ್ನಾಟಕ ಬುಕ್ ಏಜನ್ಸಿ, ಬೆಂಗಳೂರು, ಪುಟ ಸಂಖ್ಯೆ೭೫-೮೨

೬. ಕುಲಕರ್ಣಿ ದ.ಬಾ., ೧೯೯೪., ಹಕ್ಕಿ ನೋಟ., ಬೇಂದ್ರೆ ಕಾವ್ಯಕ್ಕೆ ಇನ್ನೊಂದು ಹೆಸರು., ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪುಟ ಸಂಖ್ಯೆ ೧-೧೪

೭. ಗಣೇಶ್ ಆರ್., ೨೦೦೯., ಹಾಸು ಬೀಸು., ಬೇಂದ್ರೆ : ಅಧ್ಯಾರೋಪ ಮತ್ತು ಅಪವಾದ., ವಸಂತ ಪ್ರಕಾಶನ, ಬೆಂಗಳೂರು, ಪುಟ ಸಂಖ್ಯೆ ೬೭-೭೨

೮. ಗುರುಲಿಂಗ ಕಾಪಾಸೆ., (೧೯೫೧), ೧೯೯೩., ಮಧುರ ಚೆನ್ನರ ಲೇಖನಗಳು., ಬೇಂದ್ರೆಯವರ ಭಾಷಾಶಾಸ್ತ್ರ ವಿಷಯಕ ವಿಚಾರಗಳ ರೂಪರೇಷೆ., ಕನ್ನಡ ವಿಶ್ವ ವಿದ್ಯಾಲಯ, ಹಂಪಿ, ಪುಟ ಸಂಖ್ಯೆ ೨೧೬-೨೪೧

೯. ಚಂದ್ರ ಶೇಖರ ನಂಗಲಿ., ೨೦೦೨.,ತಿಟ್ಟತ್ತಿ ತಿರುಗಿ., ಬೇಂದ್ರೆ ಕಾವ್ಯದ ದ್ವಂದ್ವ ವಸ್ತು ವಿನ್ಯಾಸ ಒಂದು ಟಿಪ್ಪಣಿ., ಸಿ.ವಿ.ಜಿ ಪಬ್ಲಿಕೇಷನ್ಸ್., ಬೆಂಗಳೂರು, ಪುಟ ಸಂಖ್ಯೆ ೬೧-೯೨

೧೦. ಚನ್ನಪ್ಪ., ೨೦೦೭., ಪುಣೇಕರರ ಆಯ್ದ ಲೇಖನಗಳು., ಬೇಂದ್ರೆಯವರ ಕಾವ್ಯಾಭ್ಯಾಸ., ಸಾಹಿತ್ಯ ನಿಧಿ, ಮೈಸೂರು, ಪುಟ ಸಂಖ್ಯೆ ೩೪-೪೩

೧೧. ತಿರುಮಲೇಶ್., ೧೯೮೯.,ಸಮ್ಮುಖ., ಬೇಂದ್ರೆಯವರ ಕಾವ್ಯ ಶೈಲಿ., ಅಕ್ಷರ ಪ್ರಕಾಶನ, ಹೆಗ್ಗೋಡು, ಪುಟ ಸಂಖ್ಯೆ ೧-೩೫

೧೨. ತಿಪ್ಪೇರುದ್ರಸ್ವಾಮಿ ಎಚ್., ೧೯೯೨., ಸಹೃದಯಿ., ಕುವೆಂಪು ಅವರ 'ಪಕ್ಷಿ' ಹಾಗೂ ಬೇಂದ್ರೆಯವರ 'ಕುರುಡು ಕಾಂಚಾಣ' : ಒಂದು ರೂಪನಿಷ್ಠವಿಮರ್ಶೆ., ಶ್ರೀ ಅನ್ನದಾನ ವಿಜಯ ವಿದ್ಯಾ ಪ್ರಸಾರಕ ಸಮಿತಿ, ನರೇಗಲ್ಲ, ಪುಟ ಸಂಖ್ಯೆ ೧೪೪-೧೫೩

೧೩. ದೊಡ್ಡರಂಗೇಗೌಡ., ಕನ್ನಡ ನವೋದಯ ಕಾವ್ಯ., ದೇಸಿ ಸೊಗಡನ್ನು ದಟ್ಟವಾಗಿ ದುಡಿಸಿಕೊಂಡ ದಿಟ್ಟ ಕವಿ : ದತ್ತಾತ್ರೇಯ ರಾಮಚಂದ್ರ ಬೇಂದ್ರೆ., ಸುಮುಖ ಪ್ರಕಾಶನ, ಬೆಂಗಳೂರು ಪುಟ ಸಂಖ್ಯೆ ೨೦೧-೨೪೩

೧೪. ದೊಡ್ಡರಂಗೇಗೌಡ., ೨೦೧೨., ಸಮತೋಲನ ಸಾಹಿತ್ಯ., ಬೇಂದ್ರೆ ಅವರ ಬದುಕಿನ ಕಥೆ-ವ್ಯಥೆ ಸುಜ್ಞಾನ ಗೀತೆ : ಔದುಂಬರ ಗಾಥೆ., ಸಪ್ನ ಬುಕ್ ಹೌಸ್, ಬೆಂಗಳೂರು

೧೫. ನಾರಾಯಣಸ್ವಾಮಿ ಕೆ. ವೈ., ೨೦೧೦., ನೆನೆವ ಪರಿ., ತುಂಬಿತ್ತು ಹಾಲಗೇರಿ: ಕೆಲವು ಅನಿಸಿಕೆಗಳು., 'ಶ್ರೇಷ್ಠ ಕಾವ್ಯ' ಎಂಬ ಸಾಂಸ್ಕೃತಿಕ ಹುನ್ನಾರವೂ ಬೇಂದ್ರೆ, ಕುವೆಂಪು ಕಾವ್ಯವೂ..., ಬರಹ ಪಬ್ಲಿಷಿಂಗ್ ಹೌಸ್., ಬೆಂಗಳೂರು, ಪುಟ ಸಂಖ್ಯೆ ೮೯–೧೦೦

೧೬. ನಾಯಕ್ ಜಿ ಎಚ್., ೨೦೦೭., ಸ್ಥಿತಿ ಪ್ರಜ್ಞೆ., ಬೇಂದ್ರೆಯವರ ಕವನ: ನಾದಲೀಲೆ., ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ಸಂಖ್ಯೆ ೧೩೦–೧೪೦

೧೭. ನಾಯಕ ಹಾ.ಮಾ., ೧೯೬೬., ಸಂಕೀರ್ಣ., ಬೇಂದ್ರೆ., ಸುರುಚಿ ಪ್ರಕಾಶನ, ಮೈಸೂರು, ಪುಟ ಸಂಖ್ಯೆ ೦೪–೦೯

೧೮. ಪ್ರೀತಿ ಶುಭಚಂದ್ರ., ೨೦೦೭., ಕನ್ನಡಿ ಕೈದೀವಿಗೆ., ಶ್ರೀ ದ. ರಾ ಬೇಂದ್ರೆ, ವಿವೇಕ ಪ್ರಕಾಶನ., ಮೈಸೂರು, ಪುಟ ಸಂಖ್ಯೆ ೫೧–೭೯

೧೯. ಬರಗೂರು ರಾಮಚಂದ್ರಪ್ಪ., ೧೯೭೪, ೨೦೦೫., ಸಂಸ್ಕೃತಿ : ಶ್ರಮ ಮತ್ತು ಸೃಜನಶೀಲತೆ., ಬೇಂದ್ರೆಯವರ ಕಾವ್ಯದಲ್ಲಿ ಸಾಮಾಜಿಕ ಪ್ರಜ್ಞೆ., ಅಂಕಿತ ಪುಸ್ತಕ, ಬೆಂಗಳೂರು, ಪುಟ ಸಂಖ್ಯೆ ೨೬೯–೨೮೦

೨೦. ಬಸವರಾಜ ಸಾದರ.,೨೦೦೯., ಅನುಮಿತಿ., ಬೇಂದ್ರೆಯವರ ಅದಕು ಇದಕು ಎದಕು., ಕಿರಣ್ ಬುಕ್ ಡಿಸ್ಟ್ರಿಬ್ಯುಟರ್ಸ್., ಬೆಂಗಳೂರು, ಪುಟ ಸಂಖ್ಯೆ ೧–೬

೨೧. ಭಗವಾನ್ ಕೆ.ಎನ್., ಕನ್ನಡದ ಜ್ಞಾನ ಕಲಶಗಳು., ವರಕವಿ ದ.ರಾ ಬೇಂದ್ರೆ., ಸುಮುಖ ಪ್ರಕಾಶನ, ಬೆಂಗಳೂರು, ಪುಟ ಸಂಖ್ಯೆ ೨೩–೩೮

೨೨. ಮಂಗಳ ಜಿ.ನ., ೧೯೭೫., ಕಾವ್ಯ ಕಲ್ಪನೆ., ಬೇಂದ್ರೆಯವರ ಕಾವ್ಯದಲ್ಲಿ ಅರವಿಂದ ದರ್ಶನ., ಬೆಂಗಳೂರು, ಪುಟ ಸಂಖ್ಯೆ ೩೮–೪೯

೨೩. ಮಲ್ಲೇಪುರಂ ಜಿ. ವೆಂಕಟೇಶ (ಸಂ)., ಶಂಬಾ–ಜೋಶಿಯವರ ಆಯ್ದ ಲೇಖನಗಳು., ಬೇಂದ್ರೆಯವರ ತಪಸ್ಸು., ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪುಟ ಸಂಖ್ಯೆ ೧೪೨–೧೪೭

೨೪. ಮಲ್ಲೇಪುರಂ ಜಿ. ವೆಂಕಟೇಶ., ೧೯೯೬., ತಿಳಿವ ತೇಜದ ಮುಂದೆ., ಬೇಂದ್ರೆ ಕಾವ್ಯದ ಮೂಲ ನೆಲೆಗಳು : ಒಂದು ಟಿಪ್ಪಣಿ., ಸಾಹಿತ್ಯ ಪ್ರಕಾಶನ, ಹುಬ್ಬಳಿ, ಪುಟ ಸಂಖ್ಯೆ ೧೪–೧೯

೨೫. ಮರುಳಯ್ಯ ಸಾ. ಶಿ., ೨೦೦೧., ಸಾಶಿಮ : ವಿಮರ್ಶೆ., ಬೇಂದ್ರೆಯವರ ಕಾವ್ಯದಲ್ಲಿ ದೈವೋಪಾಸನೆ., ಸಪ್ನ ಬುಕ್ ಹೌಸ್, ಬೆಂಗಳೂರು, ಪುಟ ಸಂಖ್ಯೆ ೩೬೯–೩೮೦

೨೬. ಮಾಳವಾಡ ಸ. ಸ., ೧೯೭೦., ಸಾಹಿತ್ಯ ಸಂಗಮ., ಜಯ ಪ್ರಕಾಶನ, ಧಾರವಾಡ

೨೭. ಮೊಗಳ್ಳಿ ಗಣೇಶ್., ೨೦೦೮., ತಕರಾರು., ಬೇಂದ್ರೆ ಕುವೆಂಪು ಕಾವ್ಯದ ನೆಲೆಗಳು., ಪಲ್ಲವ ಪ್ರಕಾಶನ, ಚೆನ್ನಪಟ್ಟಣ, ಪುಟ ಸಂಖ್ಯೆ ೦೮–೧೭

೨೮. ಮೊಗಸಾಲೆ ನಾ.(ಸಂ)., ಮಾಧವ ಕುಲಕರ್ಣಿ(ಲೇ)., ೨೦೦೯., ನುಡಿಹಾರ೧., ದ. ರಾ. ಬೇಂದ್ರೆಯವರ ನಾಟಕಗಳು., ಕಾಂತಾವರ ಕನ್ನಡ ಸಂಘ., ಕಾರ್ಕಳ, ಪುಟ ಸಂಖ್ಯೆ ೧೧೨–೧೨೧

೨೯. ರಹಮತ್ ತರೀಕೆರೆ., ೨೦೦೫., ಇಲ್ಲಿ ಯಾರೂ ಮುಖ್ಯರಲ್ಲ., ಬೇಂದ್ರೆ : ಲೀಲಾ ಪ್ರಜ್ಞೆ ಹಾಗೂ ಕಾವ್ಯತತ್ವ., ಕನ್ನಡ ವಿಶ್ವ ವಿದ್ಯಾಲಯ., ಹಂಪಿ, ಪುಟ ಸಂಖ್ಯೆ ೧೯೪–೧೯೭

೩೦. ರಾಜೇಂದ್ರ ಚೆನ್ನಿ., ೧೯೮೭., ಅಧ್ಯಯನ., ಬೇಂದ್ರೆ ಕಾವ್ಯ : ಕೆಲವು ಟಿಪ್ಪಣಿಗಳು., ಪರಿಸರ ಸಾಹಿತ್ಯ ಪ್ರಕಾಶನ, ಶಿವಮೊಗ್ಗ, ಪುಟ ಸಂಖ್ಯೆ ೧೩-೩೩

೩೧. ರಾಮಚಂದ್ರ ಎಂ., ೨೦೦೭., ಸಮುಚ್ಚಯ., ಬೇಂದ್ರೆ ಕಾವ್ಯದಲ್ಲಿ ಹಾಸ್ಯ., ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ಸಂಖ್ಯೆ ೧೩೦-೧೪೦

೩೨. ಲಕ್ಷ್ಮೀ ನಾರಾಯಣ ಭಟ್ಟ., ೨೦೦೪., ಸಾಹಿತ್ಯ ರತ್ನ ಸಂಪುಟ., ಕಾವ್ಯ ಲೋಕದ ಗಾರುಡಿಗ ದ.ರಾ ಬೇಂದ್ರೆ., ವಸಂತ ಪ್ರಕಾಶನ., ಬೆಂಗಳೂರು, ಪುಟ ಸಂಖ್ಯೆ ೬೭-೭೨

೩೩. ಲಿಂಗಣ್ಣ ಗೋನಾಲ., ೨೦೦೭., ಸಮಕ್ಷ., ಪುಟ್ಟ ವಿಧವೆ : ಧರ್ಮದ ಕುರುಡುತನದಲ್ಲಿ ಕಮರಿದ ಕಂದಮ್ಮನ ಬಾಳು., ಶರಣು ಪ್ರಕಾಶನ., ಕಲಬುರ್ಗಿ, ಪುಟ ಸಂಖ್ಯೆ ೧೧೧-೧೧೪

೩೪. ವೆಂಕಟೇಶ ಮೂರ್ತಿ ಎಚ್. ಎಸ್., ೧೯೮೩., ನೂರು ಮರ ನೂರು ಸ್ವರ., ಬೇಂದ್ರೆ ಕಾವ್ಯದ ಕೆಲವು ಅಭೀಪ್ಸೆಗಳು., ಕೃತಿ, ಬೆಂಗಳೂರು, ಪುಟ ಸಂಖ್ಯೆ ೧-೯

೩೫. ವಿದ್ಯಾಧರ ಮುತಾಲಿಕ ದೇಸಾಯಿ., ೨೦೦೫., ಕನ್ನಡ ಸಪ್ತ ಶೃಂಗಗಳು., ಬೇಂದ್ರೆ ಅಂದ್ರೆ., ಮುಂಬೆಳಕು ಕನ್ನಡ ಬಳಗ., ಥಾಣ ಜಿಲ್ಲೆ, ಪುಟ ಸಂಖ್ಯೆ ೧೭-೪೯

೩೬. ವಿಜಯಾ ಸುಬ್ಬರಾಜ್., ೨೦೦೫., ಸಮಾಲೋಚನೆ., ಬೇಂದ್ರೆಯವರ 'ಸಾಯೋ ಆಟ' ಒಂದು ಅನಿಸಿಕೆ., ಶಕ್ತಿ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಬೆಂಗಳೂರು, ಪುಟ ಸಂಖ್ಯೆ ೭೬-೮೧

೩೭. ವಿನೀತಾ ಕುಲಕರ್ಣಿ., ೨೦೦೫., ನನ್ನ ದಾಂಪತ್ಯ ವಲಯ., ಕವಿ ಬೇಂದ್ರೆಯವರ ಮೇಲೆ ಶ್ರೀ ಅರವಿಂದರ ಪ್ರಭಾವ : ನವ್ಯ ಆಧ್ಯಾತ್ಮಿಕತೆಯ ಸ್ರೋತ ಗಂಗೋತ್ರಿ., ಶ್ರೀ ಅರವಿಂದ ಶತಾಬ್ಧಿ ಗ್ರಂಥಮಾಲೆ, ಪಾಂಡಿಚೆರಿ, ಪುಟ ಸಂಖ್ಯೆ ೧೦೩-೧೧೫

೩೮. ಶಾಸ್ತ್ರಿ ಬಿ.ವಿ.ಕೆ., ೧೯೯೪., ಕಲೆಯ ಗೊಂಚಲು., ದೃಶ್ಯ ಕಾವ್ಯದ ಬೇಂದ್ರೆ., ಕನ್ನಡ ಮಸ್ತಕ ಪ್ರಾಧಿಕಾರ, ಬೆಂಗಳೂರು, ಪುಟ ಸಂಖ್ಯೆ ೨೫೨-೨೫೮

೩೯. ಸುಮತೀಂದ್ರ ನಾಡಿಗ., ೨೦೦೫., ಮತ್ತೊಂದು ಸಾಹಿತ್ಯ ಚರಿತ್ರೆ., ಬೇಂದ್ರೆಯವರ ಕಾಲ್ಪನಿಕ ಸಂದರ್ಶನ., ಬೇಂದ್ರೆಯವರ 'ಹಾಡಿ'ನ ಸ್ವರೂಪ., ಸಪ್ನ ಬುಕ್ ಹೌಸ್., ಬೆಂಗಳೂರು, ಪುಟ ಸಂಖ್ಯೆ ೧೮-೨೮

೪೦. ಸುಮತೀಂದ್ರ ನಾಡಿಗ., ೨೦೦೫., ನಾಲ್ಕನೆಯ ಸಾಹಿತ್ಯ ಚರಿತ್ರೆ., ಬೇಂದ್ರೆ ಕುರಿತು ಕಥೆಗಳು., ಸಪ್ನ ಬುಕ್ ಹೌಸ್., ಬೆಂಗಳೂರು, ಪುಟ ಸಂಖ್ಯೆ ೨೭-೩೬

೪೧. ಸುಮಿತ್ರಾ ಎಲ್.ಸಿ., ೧೯೯೭., ವಿಭಾವ., ಬೇಂದ್ರೆಯವರ ಕಾವ್ಯದಲ್ಲಿ ದಾಂಪತ್ಯದ ಸ್ವರೂಪ., ಅಕ್ಷರ ಪ್ರಕಾಶನ, ಹೆಗ್ಗೋಡು, ಪುಟ ಸಂಖ್ಯೆ ೦೯-೧೭

೪೨. ಹೇಮಾಪಟ್ಟಣ ಶೆಟ್ಟಿ., ೧೯೯೯., ಅನುಲೇಖ., ಅನನ್ಯ ಪ್ರಕಾಶನ., ಧಾರವಾಡ, ಪುಟ ಸಂಖ್ಯೆ ೩೯-೪೮

೪೩. ಹೆಗಡೆ ಜಿ. ಎಂ., ೨೦೧೦., ವಿಮರ್ಶಾ ವಿವೇಕ., ಬೇಂದ್ರೆ ಮರಾಠಿ ಸಾಂಸ್ಕೃತಿಕ ಸಂಬಂಧ., ರಂಜನಾ ಪ್ರಕಾಶನ, ಧಾರವಾಡ, ಪುಟ ಸಂಖ್ಯೆ ೩೫-೪೩

೨. ಅಧ್ಯಯನ ಆಕರಗಳ ವಿವರಣಾತ್ಮಕ ಸೂಚಿ

೧. **೧೯೩೨, ೧೯೪೫., ೨೦೦೬., ಗರಿ., ಜಯ ಕರ್ನಾಟಕ, ಪ್ರಬುದ್ಧ ಕರ್ಣಾಟಕ., ತೀ.ನಂ.ಶ್ರೀಕಂಠಯ್ಯ., ಗರಿ, ಸಖೀಗೀತ**

ತೀ.ನಂ.ಶ್ರೀ ಅವರು 'ಅಂಬಿಕಾತನಯದತ್ತ : ಗರಿ' ಎಂಬ ಲೇಖನವನ್ನು ೧೯೩೩ರಲ್ಲಿ ಜಯಕರ್ನಾಟಕ ಪತ್ರಿಕೆಯಲ್ಲಿ ರಚಿಸಿದ್ದಾರೆ. ಈ ಲೇಖನವು ೨೦೦೬ರಲ್ಲಿ ತೀ.ನಂ.ಶ್ರೀ ಅವರ ಸಮಗ್ರ ಗದ್ಯ ಸಂಪುಟದೊಳಗೆ ಸೇರ್ಪಡೆಗೊಂಡಿದೆ. ಮೈಸೂರು ವಿಶ್ವವಿದ್ಯಾಲಯದ 'ಪ್ರಬುದ್ಧ ಕರ್ಣಾಟಕ' ಪತ್ರಿಕೆಯ ವಿಕ್ರಮ ಸಂವತ್ಸರ, ಕಾಮನ ಸಂಚಿಕೆ ೧೯೪೧ರಲ್ಲಿ 'ಸಖೀಗೀತ ಕುರಿತ ವಿಮರ್ಶೆ' ಪ್ರಕಟವಾಗಿದೆ.

ಗರಿ, ಸಖೀಗೀತ : ಈ ಎರಡೂ ವಿಮರ್ಶಾ ಲೇಖನಗಳು ಬೇಂದ್ರೆ ಸಾಹಿತ್ಯ ಕುರಿತು ಮೊದಲ ಹಂತದ ವಿಮರ್ಶೆಗಳಾಗಿ ಮೂಡಿಬಂದಿವೆ.

೨. **೧೯೪೫., ೧೯೫೭., ಕುಲಕರಣಿ ದ. ಬಾ., ಹಕ್ಕಿನೋಟ**

೧೯೪೫ರಲ್ಲಿ ದ. ಬಾ. ಕುಲಕರಣಿ ಅವರು ಕೆಲವು ವ್ಯಕ್ತಿ ಚಿತ್ರಣಗಳನ್ನು ನೀಡಿದ್ದಾರೆ. ಈ ಕೃತಿಯು ಲಲಿತ ಸಾಹಿತ್ಯ ಮಾಲೆಯ ಹದಿಮೂರನೆಯ ಕುಡಿಯಾಗಿ ಪ್ರಕಟಗೊಂಡ ಈ ಕೃತಿಯು ೧೯೫೭ರಲ್ಲಿ ಮರುಮುದ್ರಣಗೊಂಡಿದೆ. ಈ ಕೃತಿಗೆ ಪಾಡಿಗಾರು ವೆಂಕಟರಮಾಣಾಚಾರ್ಯ ಅವರು ಮುನ್ನುಡಿ ರಚಿಸಿದ್ದಾರೆ. ಈ ಮುನ್ನುಡಿಯಲ್ಲಿ ವ್ಯಕ್ತಿ ಚಿತ್ರಣದ ಸ್ವರೂಪ, ವ್ಯಕ್ತಿತ್ವದ ರೂಪುರೇಷೆಯ ಚಿತ್ರಣದ ವಿಶ್ಲೇಷಣೆಯನ್ನು ನೀಡಿದ್ದಾರೆ. ಈ ಕೃತಿಯಲ್ಲಿ 'ಬೇಂದ್ರೆ- ಕಾವ್ಯಕ್ಕೆ ಇನ್ನೊಂದು ಹೆಸರು'., 'ಶಿವರಾಮ ಕಾರಂತ'., 'ಗೋಕಾಕ ವಿನಾಯಕ ರಾಯರು'., 'ಕುಲಕರಣಿ ಶ್ರೀನಿವಾಸ'., 'ನಾನು ಕಂಡ ಕೆಲ ಕನ್ನಡ ಕವಿಗಳು'., 'ಒಂದು ಹೂವಿನೆಸಳು ದಿ॥ ಮುಳಿಯ ತಿಮ್ಮಪ್ಪಯ್ಯನವರಿಗೆ ಶ್ರದ್ಧಾಂಜಲಿ', 'ದಿ॥ ಪೋತದಾರ ಶ್ರೀನಿವಾಸರಾಯರು', 'ದಿ॥ ಬಸವನಾಳರ ನೆನಪು', 'ದಿ॥ ಸೌ. ಶ್ಯಾಮಾದೇವಿ', 'ನಾನು ಕಂಡ ಗೌರಮ್ಮ' ಎಂಬ ಲೇಖನಗಳಿವೆ. 'ನಾನು ಕಂಡ ಕೆಲ ಕನ್ನಡ ಕವಿಗಳು' ಎಂಬ ಲೇಖನದಲ್ಲಿ ಬೇಂದ್ರೆ ಕವಿತೆ ವಾಚಿಸುವ ಶೈಲಿ, ಕುವೆಂಪು ದರ್ಶನ, ಜಿ. ಪಿ. ರಾಜರತ್ನಂ ಅವರ ವ್ಯಕ್ತಿತ್ವ, ವೀ. ಸೀ ಅವರ ವೇಷ, ಮಧುರಚೆನ್ನರ ವೇದಾಂತ, ಕಡೆಗೋಂಡ್ಲು ಶಂಕರಭಟ್ಟರ ಗಂಭೀರತೆ, ಗೋವಿಂದ ಪೈ ಅವರ ಮೌನ, ಪು.ತಿ.ನ, ಮಾಸ್ತಿ, ಬಿ. ಎಂ. ಶ್ರೀಕಂಠಯ್ಯ ಪಂಜೆ ಮಂಗೇಶರಾಯರ ಪರಿಚಯ, ಗೋಕಾಕರ ನಿಲುವು, ಮುಗಳಿ, ಆನಂದಕಂದ ಇವರ ವ್ಯಕ್ತಿತ್ವಗಳನ್ನು ತಮಗೆ ತಿಳಿದಂತೆ ಸ್ಫುಟವಾಗಿ ಚರ್ಚಿಸಿದ್ದಾರೆ. ಆದ್ದರಿಂದಲೇ ಮುನ್ನುಡಿಯಲ್ಲಿ ಪಾ.ವೆಂ. ಆಚಾರ್ಯರು 'ಕಡಿಮೆ ಮಾತುಗಳಲ್ಲಿ ಹೆಚ್ಚು ಹೇಳುವ ಕಲೆ ಲೇಖಕರಿಗೆ ಸಾಧಿಸಿದೆ' ಎಂದಿದ್ದಾರೆ. ಕೊನೆಯ ಲೇಖನ ಕುರಿತು ಮುನ್ನುಡಿಯಲ್ಲಿ ಪಾ.ವೆಂ. ಆಚಾರ್ಯರು ಇಡೀ ಸಂಗ್ರಹದಲ್ಲಿ ಕೊನೆಯದಾದ 'ನಾನು ಕಂಡ ಗೌರಮ್ಮ' ಒಂದು ನಾಯಕ ರತ್ನ ಎಂದಿದ್ದಾರೆ.

೩. **೧೯೪೬., ಜೀವನ., ಮಾಸ್ತಿ ವೆಂಕಟೇಶ ಅಯ್ಯಂಗಾರ್**

ಜೀವನ ಪತ್ರಿಕೆ(ಸಂಪುಟ ೭, ಸಂಚಿಕೆ ೨, ಜೂನ್ ೧೯೪೬) ಬೇಂದ್ರೆ ಅವರಿಗೆ ಐವತ್ತು ವರ್ಷಗಳು ತುಂಬಿದ ಸಂದರ್ಭಕ್ಕಾಗಿ ವಿಶೇಷ ಸಂಚಿಕೆಯನ್ನು ತಂದಿದೆ. ಇದರ ಸಂಪಾದನಾ ಕಾರ್ಯವನ್ನು ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ನಿರ್ವಹಿಸಿದ್ದಾರೆ. ಈ ಪತ್ರಿಕೆಗೆ ಶ್ರೀ ಅರವಿಂದರ ಆಶೀರ್ವಾದದ ಬರೆಹವನ್ನು ಪ್ರಕಟಿಸಿದ್ದಾರೆ.

ಜೀವನ (ವಿಶೇಷ ಸಂಚಿಕೆ) : ಈ ಸಂಚಿಕೆಯಲ್ಲಿ ಇಪ್ಪತ್ತೆರಡು ಲೇಖನಗಳಿವೆ. ಮಾಸ್ತಿ ಅವರ ಜೀವನ ಪತ್ರಿಕೆಯಲ್ಲಿ ಜೂನ್ ೧೯೪೬ರ ವಿಶೇಷ ಸಂಚಿಕೆಯಾಗಿ ಕೆಲವು ಲೇಖನಗಳು ಪ್ರಕಟಗೊಂಡವು. ಎಲ್ಲಾ ಲೇಖಕರೂ ಕೂಡ ಕವಿಯನ್ನು ತಾವು ಕಂಡ ಆಪ್ತತೆಯಲ್ಲಿ ಉಲ್ಲೇಖಿಸಿದ್ದಾರೆ. ಡಿ.ವಿ.ಜಿ, ಗೋವಿಂದ ಪೈ, ಡಿ. ವಿ. ಕರ್ವೆ ಇವರು ತಮ್ಮ ಹರಕೆಯನ್ನು ನುಡಿದಿದ್ದಾರೆ.

೪. **೧೯೪೬., ಮಿರ್ಜಿ ಅಣ್ಣಾರಾಯ., ದತ್ತವಾಣಿ**

ಮಿರ್ಜಿ ಅಣ್ಣಾರಾಯ ಅವರ 'ದತ್ತವಾಣಿ' ಕೃತಿಯನ್ನು ಬೇರೆ ಬೇರೆ ಕೃತಿಗಳ ಅಧ್ಯಯನದ ಮೂಲಕ ೧೯೪೬ರಲ್ಲಿ ಪ್ರಕಟಿಸಲಾಗಿದೆ ಎಂದು ನಿರ್ಧರಿಸಬಹುದು. ಈ ಕೃತಿಯನ್ನು ಮನೋಹರ ಗ್ರಂಥಪ್ರಕಾಶನ ಸಮಿತಿ, ಧಾರವಾಡ ಇವರು ಪ್ರಕಟಿಸಿದ್ದಾರೆ. ಪ್ರಕಟಣೆಯ ವರ್ಷ ಎಲ್ಲಿಯೂ ನಮೂದಿಸಿಲ್ಲ. ಜ್ಞಾನ ಪ್ರಸಾರಕ ಗ್ರಂಥಮಾಲೆ ಸರಣಿಯ ಮೊದಲ ಗ್ರಂಥವಾಗಿ ಪ್ರಕಟಿಸಿದ್ದಾರೆ. ಇದರ ಸಂಪಾದಕ ಜವಾಬ್ದಾರಿಯನ್ನು ಜಿ.ಬಿ. ಜೋಶಿ ಅವರು ನಿರ್ವಹಿಸಿದ್ದಾರೆ. ಈ ಕೃತಿಯನ್ನು ಕವಿ ಅಂಬಿಕಾತನಯದತ್ತರಿಗೆ ಅರ್ಪಿಸಲಾಗಿದೆ.

ದತ್ತವಾಣಿ : ಮಿರ್ಜಿ ಅಣ್ಣಾರಾಯರು ಬೇಂದ್ರೆ ಅವರ ಸಾಹಿತ್ಯದಲ್ಲಿ ಕಾವ್ಯವಿಮರ್ಶೆ ಎಂಬ ಅಡಿಬರೆಹದಿಂದ ರಚಿಸಿದ ಕೃತಿಯಾಗಿದೆ. ಈ ಕೃತಿಯಲ್ಲಿ ಕವಿವರ್ಯ, ದತ್ತವಾಣಿಯಲ್ಲಿ ರಾಷ್ಟ್ರೀಯ ಉದ್ಬೋದನೆ, ಪ್ರಕೃತಿಯ ಮಡಿಲಲ್ಲಿ ಬೇಂದ್ರೆ, ಬೇಂದ್ರೆಯವರ ಸಾಮಾಜಿಕ ಕವನಗಳು, ಅಂಬಿಕಾತನಯದತ್ತರ ಆಧ್ಯಾತ್ಮಿಕತೆ, ಬೇಂದ್ರೆಯವರ ಪ್ರೇಮಗೀತೆಗಳು, ಸಖೀಗೀತ, ಮೂರ್ತಿ ಹೀಗೆ ಎಂಟು ಅಧ್ಯಾಯಗಳಲ್ಲಿ ಅಧ್ಯಯನ ಮಾಡಿರುವ ವಿಮರ್ಶಾ ಕೃತಿಯಾಗಿದೆ.

೫. **೧೯೪೬., ಎಚ್. ಜಿ. ಜೋಶಿ., ಬೇಂದ್ರೆ ವಾಙ್ಮಯ ದರ್ಶನ**

ಎಚ್. ಜಿ. ಜೋಶಿ ಅವರು 'ಬೇಂದ್ರೆ ವಾಙ್ಮಯ ದರ್ಶನ' ಕೃತಿಯನ್ನು ಸಂಪಾದಿಸಿದ್ದಾರೆ. ರಾಮಾಚಾರ್ಯ ಕಾಖಂಡಿಕಿ ಅವರು ಪ್ರಕಟಿಸಿದ್ದಾರೆ. ಗಲಗಲಿ ಗ್ರಾಮದ ಹಿರಿಯರು ಕಿರಿಯರು ಸೇರಿ ರಚಿಸಿದ ಈ ಕೃತಿಗೆ ಸ.ಸ ಮಾಳವಾಡರು ಮುನ್ನುಡಿ ರಚಿಸಿದ್ದಾರೆ.

ಬೇಂದ್ರೆ ವಾಙ್ಮಯ ದರ್ಶನ : ಈ ಕೃತಿಯಲ್ಲಿ ವಿವಿಧ ಲೇಖಕರು ಬರೆದ ಒಂಬತ್ತು ಲೇಖನಗಳಿವೆ. ಕೇಶವ ಶರ್ಮಾ ಗಲಗಲಿ ಅವರ 'ಬೇಂದ್ರೆಯವರ ಕವಿತ್ವ', 'ಬೇಂದ್ರೆಯವರ ಪ್ರತಿಭಾ ವಿಲಾಸ', 'ದತ್ತರ ದೈವ ವಿವೇಚನೆ', ಎಚ್. ಜಿ ಜೋಶಿ ಅವರ 'ಅಂಬಿಕಾತನಯರ ಅಲಂಕಾರಗಳು', 'ರತಿ ದರ್ಶನ', ಶಾಂತ ಗಲಗಲಿಯವರ 'ರಸಸಿದ್ಧಿ', 'ನಾದಲೀಲೆ', ಎಸ್. ಎಮ್ ಸೋಲಾಪುರ ಅವರ 'ಅನ್ನದೇವರು' ಈ ಎಂಟು ಲೇಖನಗಳ ಜೊತೆಗೆ ಜಾತವೇದ ಅವರು ರಚಿಸಿದ 'ಬೇಂದ್ರೆ' ಎಂಬ ಕವಿತೆಯನ್ನು ಅಧ್ಯಯನ ಮಾಡಬಹುದು.

೬ **೧೯೪೬., ಸಿಂ.ಪಿ. ಲಿಂಗಣ್ಣ., ದತ್ತ ಸಾಹಿತ್ಯ**

ಸಿಂ. ಪಿ ಲಿಂಗಣ್ಣ ಅವರು ಬೇಂದ್ರೆ ಅವರ ಕೃತಿ ವಿಚಾರಗಳ ಪರಿಚಯ ಎಂಬ ಅಡಿಬರಹದಲ್ಲಿ ದತ್ತಸಾಹಿತ್ಯವನ್ನು ರಚಿಸಿದ್ದಾರೆ. ಬೇಂದ್ರೆ ಸತ್ಕಾರ ಸಮಿತಿಯವರ ಅಪೇಕ್ಷೆಯ ಮೇರೆಗೆ ಈ ಕೃತಿ ರಚನೆಗೊಂಡಿದೆ. ೧೯೪೫–೪೬ರವರೆಗೆ ಬೇಂದ್ರೆ ಅವರು ರಚಿಸಿದ ಸಾಹಿತ್ಯವನ್ನು ಆಪ್ತವಾಗಿ ಅಧ್ಯಯನ ಮಾಡಿದ ಸಿಂಪಿ ಅವರು ಪರಿಚಯಾತ್ಮಕ ನೆಲೆಯಲ್ಲಿ ಅರ್ಥೈಸಿದ್ದಾರೆ. ಈ ಕೃತಿಯನ್ನು ಶೇ.ಗೋ. ಕುಲಕರ್ಣಿ ಅವರ ತಮ್ಮ ಸಾಧನ ಮುದ್ರಣಾಲಯದ ಮೂಲಕ ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ ೧೭–೦೨–೧೯೪೬ರಲ್ಲಿ ತೆಗೆದ ಬೇಂದ್ರೆ ಅವರ ಚಿತ್ರವಿದೆ.

೭. ೧೯೪೬., ಬೇಂದ್ರೆ ಸತ್ಕಾರ ಸಮಿತಿ, ಧಾರವಾಡ(ಸಂ)., ಕವಿವರ ಬೇಂದ್ರೆ

ಬೇಂದ್ರೆ ಸತ್ಕಾರ ಸಮಿತಿ, ಧಾರವಾಡ ಇವರು ಬೇಂದ್ರೆ ಅವರಿಗೆ ಐವತ್ತು ವರ್ಷ ತುಂಬಿದ ಸಂದರ್ಭಕ್ಕಾಗಿ ಸಂಪಾದಿಸಿದ ಕೃತಿ 'ಕವಿವರ ಬೇಂದ್ರೆ'. ಈ ಕೃತಿಯನ್ನು ಲಲಿತ ಸಾಹಿತ್ಯ ಮಾಲೆ ಧಾರವಾಡ ಇವರು ಪ್ರಕಟಿಸಿದ್ದಾರೆ. ಇದರ ಸಂಪಾದಕ ಕಾರ್ಯವನ್ನು ಚುಳಕಿ ಗೋವಿಂದರಾಯರು ನಿರ್ವಹಿಸಿದ್ದಾರೆ. ಲಲಿತ ಸಾಹಿತ್ಯ ಮಾಲೆಯ ಮೂರನೇ ವರ್ಷದ ಮೂರನೇ ಕುಡಿಯಾಗಿ ಈ ಕೃತಿಯನ್ನು ಪ್ರಕಟಿಸಿದ್ದಾರೆ.

ಕವಿವರ ಬೇಂದ್ರೆ : ಈ ಕೃತಿಯಲ್ಲಿ ಬೇಂದ್ರೆ ಅವರ ಕುರಿತು ಮಾಸ್ತಿ ಅವರ 'ಹರಕೆ'ಯ ನುಡಿಯು ಸೇರಿ ಹದಿನೈದು ಲೇಖನಗಳಿವೆ. ಮಹಿಷಿ ಅಶ್ವತ್ಥ ರಾಯರ 'ಬೇಂದ್ರೆ ಅವರ ಮನೆತನ', ಶ್ರೀಧರ ಖಾನೋಳಕರ 'ಗೆಳೆಯ ಬೇಂದ್ರೆ', ಸ.ಪ. ಗಾಂವಕರರ 'ನಾ ಕಂಡ ದತ್ತು', ವಿ.ಕೃ. ಗೋಕಾಕರ 'ಗೆಳೆಯರ ಗುಂಪಿನ ಕಣಸು', ಶ್ರೀ ಮಧುರ ಚೆನ್ನರ 'ಅಣ್ಣನ ಕಾರ್ಯ', ವೆಂಕೋಬಾಚಾರ್ಯರ 'ಕವಿ ಬೇಂದ್ರೆ' ಕವನ, ಸಿಂ. ಪಿ. ಲಿಂಗಣ್ಣ ಅವರ 'ನಾನೂ ಶ್ರೀ ಬೇಂದ್ರೆಯವರೂ', ಮ. ಗೋಪಾಲಕೃಷ್ಣರ 'ವಿಚಿತ್ರ ಬೇಂದ್ರೆಯವರು', ಗೊರೂರು ರಾಮಸ್ವಾಮಿ ಅಯ್ಯಾಂಗಾರರ 'ಬೇಂದ್ರೆಯವರ ವ್ಯಕ್ತಿತ್ವ', ಸಿ.ಜಿ. ಕುಲಕರ್ಣಿ ಅವರ 'ಅಪೇಕ್ಷೆ', ಗೋ.ವೆ.ಚುಳಕಿ ಅವರ 'ಗೆಳೆಯರ ಗುಂಪಿನ ಮೊದಲು', ನಾ. ಶ್ರೀ. ರಾಜಪುರೋಹಿತ ಅವರ ಮುಮುಕ್ಷು ಬೇಂದ್ರೆ', ಬಿ.ಎಚ್. ಶ್ರೀಧರ ಅವರ 'ಶ್ರೀ ಬೇಂದ್ರೆ ಅವರಿಗೆ' ಕವಿತೆ, ಶ್ರೀಮಂತ ಬಸವಪ್ರಭು ಸರದೇಸಾಯಿ ಹಾಗೂ ರಂಗನಾಥ ದಿವಾಕರ ಅವರ 'ಶುಭಾಷಯಗಳು' ಈ ಎಲ್ಲಾ ಬರಹಗಳನ್ನು ಗಮನಿಸಬಹುದು.

೮. ೧೯೫೬., ಬಿ. ಎಚ್. ಶ್ರೀಧರ., ಬನ್ನಂಜೆ ಗೋವಿಂದಾಚಾರ್ಯ., ಬೇಂದ್ರೆ

ಉಡುಪಿಯ ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜಿನ ಮುದ್ದಣ ಸ್ಮಾರಕ ಸಾಹಿತ್ಯೋತ್ಸವದ ಸರಣಿಯಾಗಿ 'ನವೋದಯ ಪ್ರಚಾರ ಪುಸ್ತಕಮಾಲೆ' ಏರ್ಪಡಿಸಿ ಪುಸ್ತಕರೂಪದಲ್ಲಿ ಮುದ್ರಿಸಲು ಪ್ರಾರಂಭಿಸಿತು. ಆದರೆ ಮುದ್ರಣ ವೆಚ್ಚದ ತೊಂದರೆಯಿಂದ ಈ ಯೋಜನೆ ನಿಂತು ಹೋದ ಮೇಲೆ ೧೯೫೫ರಲ್ಲಿ ರಾಷ್ಟ್ರಕವಿ ಗೋವಿಂದಪೈ ಸಂಶೋಧನಾ ಕೇಂದ್ರ ಇವರು.

ಬೇಂದ್ರೆ : ಈ ಯೋಜನೆಯಲ್ಲಿ ಬೇಂದ್ರೆ ಕುರಿತು ಬಿ. ಎಚ್. ಶ್ರೀಧರ ಅವರಿಂದ ಉಪನ್ಯಾಸ ಏರ್ಪಡಿಸಿ ಆ ಭಾಷಣವನ್ನು ಲೇಖನರೂಪದಲ್ಲಿ ಪ್ರಕಟಿಸಲಾಗಿದೆ. ಹಾಗೂ ಈ ಕೃತಿಯಲ್ಲಿ ಎರಡು ಅನುಬಂಧಗಳನ್ನು ಬೇಂದ್ರೆ ಸಾಹಿತ್ಯ ಅಧ್ಯಯನಕ್ಕಾಗಿ ಸೇರಿಸಲಾಗಿದೆ. ಈ ಅನುಬಂಧದಲ್ಲಿ ಮಂಗಳೂರು ಆಕಾಶವಾಣಿಯಲ್ಲಿ ಕಾರ್ಯಕ್ರಮ ನೀಡಿದ ನಿ. ಶ್ರೀಶ ಬಲ್ಲಾಳ ಅವರ 'ದ.ರಾ. ಬೇಂದ್ರೆ ಮತ್ತು ಕನ್ನಡ' ಹಾಗೂ ಬನ್ನಂಜೆ ಗೋವಿಂದಾಚಾರ್ಯ ಅವರ 'ಬೇಂದ್ರೆ : ಒಂದು ಸಮೀಕ್ಷೆ' ಈ ಮೂರು ಲೇಖನಗಳು 'ಬೇಂದ್ರೆ' ಎಂಬ ಈ ಕೃತಿಯಲ್ಲಿ ಸೇರ್ಪಡೆಗೊಂಡಿವೆ. ಈ ಕೃತಿಯನ್ನು ೧೯೫೫ರಲ್ಲಿ ರಾಷ್ಟ್ರಕವಿ ಗೋವಿಂದಪೈ ಸಂಶೋಧನಾ ಕೇಂದ್ರ ಇವರು ಪ್ರಕಟಿಸಿದ್ದಾರೆ. ಬಿ. ಎಚ್. ಶ್ರೀಧರ ಅವರ ಉಪನ್ಯಾಸದ ಲೇಖನವನ್ನು ೧೯೫೬ರಲ್ಲಿ ಮಹಾತ್ಮ ಗಾಂಧೀ ಮೆಮೋರಿಯಲ್ ಕಾಲೇಜು, ಉಡುಪಿ ಇವರು ಮೊದಲಿಗೆ ಪ್ರತ್ಯೇಕವಾಗಿ 'ನವೋದಯ ಪ್ರಚಾರ ಪುಸ್ತಕಮಾಲೆ'ಯ ಎರಡನೇ ಕೃತಿಯಾಗಿ ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ ಎಂ.ಎಸ್.ಶಿರಾಳಿ ಅವರು ತೆಗೆದ ಬೇಂದ್ರೆ ಅವರ ಚಿತ್ರವು ಸೇರ್ಪಡೆಗೊಂಡಿದೆ.

೯. ೧೯೫೭., ಕರ್ಣಾಟಕ ಸಂಘದ ಸದಸ್ಯರು., ನಮ್ಮ ಬೇಂದ್ರೆಯವರು

೧೯೧೮ರಲ್ಲಿ ಸೆಂಟ್ರಲ್ ಕಾಲೇಜ್ ಕರ್ಣಾಟಕ ಸಂಘವನ್ನು ಸ್ಥಾಪಿಸಿ, ಕರ್ಣಾಟಕ ಸಂಘದ ಸದಸ್ಯರು ೧೯೫೩ರಲ್ಲಿ 'ಬಾಲಸರಸ್ವತಿ' ಎಂಬ ಪುಸ್ತಕವನ್ನು ಪ್ರಕಟಿಸಿದರು. ಈ ಕಾರ್ಯದಿಂದ ಕಾಲೇಜ್ ಬರವಣಿಗೆ ಪುಸ್ತಕಮಾಲೆ ಪ್ರಾರಂಭವಾಯಿತು. ಒಟ್ಟು ಹತ್ತು ಕೃತಿಗಳನ್ನು ಪ್ರಕಟಿಸಿ, ಹನ್ನೊಂದನೆಯ ಕೃತಿ ರಚನೆಯೇ ಈ 'ನಮ್ಮ ಬೇಂದ್ರೆಯವರು'. ಈ ಕೃತಿಯು ೧೯೫೭ರಲ್ಲಿ ಪ್ರಕಟಗೊಂಡಿತು.

ನಮ್ಮ ಬೇಂದ್ರೆಯವರು : ಈ ಕೃತಿಯಲ್ಲಿ ಹತ್ತು ಲೇಖನಗಳಿವೆ. ಈ ಎಲ್ಲಾ ಲೇಖಕರು ಕರ್ಣಾಟಕ ಸಂಘದ ಸದಸ್ಯರು. ಎಲ್. ಜಿ. ಸುಮಿತ್ರಾ ಅವರ 'ಹೃದಯ ಸಮುದ್ರ', ಬಿ. ಕೆ. ಸುಬ್ರಮಣ್ಯಸ್ವಾಮಿ ಅವರ 'ಮಹಾಪ್ರಸ್ಥಾನ', ಕೆ. ಎಸ್. ಸೀತಾರಾಂ ಅವರ 'ಬಾಪೂಜಿಯವರ ಬಗ್ಗೆ ನಾಲ್ಕು ಗೀತಗಳು' ಹಾಗೂ 'ಕರಡಿ ಕುಣಿತ' ಲೇಖನಗಳು, ಚಿ. ನ. ಮಂಗಳಾ ಅವರ 'ಬೇಂದ್ರೆಯವರ ವೈಶಿಷ್ಟ್ಯ', ಆರ್. ರಾಮರಾವ್ ಬರೆದಿರುವ 'ಶ್ರಾವಣಕ ಹುಚ್ಚ ಆಗ್ಯಾರಾ...', 'ಬೇಂದ್ರೆಯವರ ವೈಶಿಷ್ಟ್ಯ', 'ಹಾಡು ಪಾಡು'., ಲಂಕೇಶ ಅವರ 'ದುಃಖ ಕಸ್ತೂರಿ', ಎಂ. ಕೆ. ಗುರುರಾಜರಾವ್ ಬರೆದಿರುವ 'ಕೆಲವು ಪ್ರೇಮಕವನಗಳು' ಈ ಹತ್ತು ಲೇಖನಗಳಿವೆ.

೧೦. ೧೯೬೨., ೨೦೧೨., ಶಂಕರ ಮೊಕಾಶಿ ಪುಣೇಕರ., ಬೇಂದ್ರೆ ಕಾವ್ಯ ಮೀಮಾಂಸೆ

ಪ್ರತಿಭಾ ಗ್ರಂಥಮಾಲೆ ೧೯೬೨ರಲ್ಲಿ ಪ್ರಕಟಿಸಿದ ಈ ಕೃತಿಯನ್ನು ಕೆಲವು ಲೇಖನಗಳ ಜೊತೆಗೆ ೨೦೧೨ರಲ್ಲಿ ವಸಂತ ಪ್ರಕಾಶನದ ಮೂಲಕ ಮೂರನೇ ಮುದ್ರಣವನ್ನು ಮರುಮುದ್ರಣವಾಗಿ ಶಂಕರಮೊಕಾಶಿ ಪುಣೇಕರ ಅವರು ಪ್ರಕಟಿಸಿದ್ದಾರೆ.

ಬೇಂದ್ರೆ ಕಾವ್ಯ ಮೀಮಾಂಸೆ : ಈ ಕೃತಿಯಲ್ಲಿ 'ಅಂಬಿಕಾತನದತ್ತರ ಕಾವ್ಯಮೀಮಾಂಸೆಯ ಕವನಗಳು', 'ಬೇಂದ್ರೆಯವರ ಕಾವ್ಯಾಭ್ಯಾಸ', 'ಬೇಂದ್ರೆ : ಒಂದು ಒಳನೋಟ', 'ಬೇಂದ್ರೆಯವರ ವ್ಯಕ್ತಿತ್ವ ಮತ್ತು ಕಾವ್ಯ', 'ಬೇಂದ್ರೆ : ಒಂದು ಅವಲೋಕನ', 'ಬೇಂದ್ರೆಯವರ ನಲ್ಲನಲ್ಲೆಯರ ಲಲ್ಲೆ', 'ಓ ತಾಯಿ ಮಾಯಿ' ಈ ಶೀರ್ಷಿಕೆಗಳ ಮೂಲಕ ಬೇಂದ್ರೆ ಕಾವ್ಯವನ್ನು ಶಂಕರಮೊಕಾಶಿ ಪುಣೇಕರ ಅವರು ಅಧ್ಯಯನಮಾಡಿದ್ದಾರೆ. ಈ ಕೃತಿಯು ಇಂದಿಗೂ ಮಾರ್ಗದರ್ಶಿ ಕೃತಿಯಾಗಿ ಅಧ್ಯಯನಕಾರರಿಗೆ ಉಪಯುಕ್ತವಾಗಿದೆ. ಕೃತಿಯ ಮಹತ್ವದ ಜೊತೆಗೆ ಸಾಹಿತ್ಯ ಅಧ್ಯಯನ ಕುರಿತು ಶಂಕರಮೊಕಾಶಿ ಪುಣೇಕರ ಅವರು ಈ ರೀತಿ ಅಭಿವ್ಯಕ್ತಪಡಿಸಿದ್ದಾರೆ. "ಇವು ಯಾವುವೂ ನವ್ಯ ವಿಮರ್ಶೆಗಳಲ್ಲ. ಒಂದೇ ಕವನದ ವಿಶ್ಲೇಷಣೆಯಲ್ಲೂ ನಾನು ನವ್ಯ ವಿಮರ್ಶೆಯ ಇತಿಮಿತಿಗಳಿಗೆ ಬದ್ಧನಾಗಿಲ್ಲ. ಆಯಾ ಕವನದ ಸಾಮಾಜಿಕ ಪರಿಸರದ ಹಿನ್ನಲೆಯನ್ನು ಗಮನಿಸಿಯೇ ಬರೆದಿದ್ದೇನೆ. ರೆನ್ ವೆಲೆಕ್‌ನನ್ನು ಓದಿದ ಮೇಲೆ ಇವೆಲ್ಲ ತೌಲನಿಕ ಅಧ್ಯಯನಗಳೆಂದು ತಿಳಿದು ಧೈರ್ಯ ಬಂದಿತು. ತೌಲನಿಕ ಅಧ್ಯಯನವೆಂದರೆ ಎರಡು ಸಿದ್ಧಕೃತಿಗಳ ಸಾಮ್ಯ-ವೈಷಮ್ಯಗಳನ್ನು ಯಾಂತ್ರಿಕವಾಗಿ ತೋರ್ಪಡಿಸುವುದೆಂದೇ ತಪ್ಪು ತಿಳಿವಳಿಕೆಯಲ್ಲಿ ನಾವು ಇದ್ದೇವೆ. ವಿಸ್ತಾರ ಹಿನ್ನಲೆಯಲ್ಲಿಯೇ ಆಯಾ ಕವನ ತನ್ನ ವೈಷಿಷ್ಟ್ಯವನ್ನು ತೋರ್ಪಡಿಸುವುದು. ಕವಿಯ ಉದ್ದೇಶವನ್ನೇ ತಿಳಿದುಕೊಳ್ಳದೆ ಕಾವ್ಯ ಓದುವುದು ನವ್ಯವಿಮರ್ಶೆಯ ತಾತ್ತ್ವಿಕ ಚಟ. ಕೃತಿಯನ್ನಷ್ಟೇ ಓದಿದರೆ ಸಾಲದು, ಕೃತಿಯೊಂದೇ ಸಾಮಾಗ್ರಿಯಲ್ಲ; ನವ್ಯ ವಿಮರ್ಶೆಯ ತತ್ತ್ವಾಗ್ರೇಸರರು ಕವಿಯ ಉದ್ದೇಶದ ಬಗ್ಗೆ ಬರೆಯುವುದು ಅಪ್ರಸ್ತುತವೆಂದು ಬಗೆಯುತ್ತಾರೆ. ಇಂಥ ಬಂಧನಗಳಿಗೆ ವಿದಾಯ ಹೇಳುವುದೇ ತೌಲನಿಕ ಅಧ್ಯಯನದ ಉದ್ದೇಶ. ಬರಿ ಸಾಮ್ಯ-ವೈಷಮ್ಯಗಳ ಅಧ್ಯಯನವಲ್ಲ. comparative ಶಬ್ದವನ್ನು ಶಬ್ದಶಃ ಗ್ರಹಿಸಿದರೆ

ಸಾಲದು. ವಿಸ್ತಾರ ಹಿನ್ನಲೆಯಲ್ಲಿ ಕವನದ ಅರ್ಥಗ್ರಹಣವೇ ನಿಜವಾದ ಭಿಂಟಠಿಚಿಡಿಚಿಣುತಿಜ ವಿಮರ್ಶೆ. ತೋಲನೆ, ವೈಚಾರಿಕ, ಸಾಮಾಜಿಕ, ಸಾಂದರ್ಭಿಕವಿರಬಹುದು. ಕೇವಲ ಎರಡು ಕೃತಿಗಳ ಸಾಮ್ಯ-ವೈಷಮ್ಯ ಹೇಳಿದರೆ ಇದರ ವಿಮರ್ಶೆಯೂ ಪೂರ್ಣವಲ್ಲ; ಅದರ ವಿಮರ್ಶೆಯೂ ಪೂರ್ಣವಾಗುವುದಿಲ್ಲ. ನವ್ಯ ವಿಮರ್ಶೆ ಸಂದರ್ಭಾಭಾವದಿಂದ ಬಳಲುವುದಾದರೆ; ತೌಲನಿಕ ವಿಮರ್ಶೆ ತಪ್ಪು ಗ್ರಹಿಕೆಗಳಿಂದ ದೋಷಾರ್ಹ." ಈ ರೀತಿಯಲ್ಲಿ ನವ್ಯ ಸಾಹಿತ್ಯದ ಅಧ್ಯಯನ ಕ್ರಮದಲ್ಲಿ ಉಂಟಾಗಿರುವ ದೋಷಗಳನ್ನು ಕೃತಿಯ ಮುನ್ನುಡಿಯಲ್ಲಿ ವಿಸ್ತರಿಸಿ ಹೇಳಿದ್ದಾರೆ. ಈ ವಿವರಣೆಯು ಬೇಂದ್ರೆ ಸಾಹಿತ್ಯವನ್ನು ಗ್ರಹಿಸಬೇಕಾದ ಕ್ರಮವನ್ನು ಕೂಡ ತಿಳಿಸುತ್ತದೆ.

೧೧. ೧೯೬೬., ಪ್ರಭುಶಂಕರ., ಕನ್ನಡದಲ್ಲಿ ಭಾವಗೀತೆ

ಮೈಸೂರು ವಿಶ್ವವಿದ್ಯಾಲಯದಲ್ಲಿ ಕುವೆಂಪು ಅವರ ಮಾರ್ಗದರ್ಶನದೊಂದಿಗೆ ಪ್ರಭುಶಂಕರ ಅವರ ಸಂಶೋಧನಾ ಪ್ರಬಂಧವನ್ನು ೧೯೫೯ರಲ್ಲಿ ಮಂಡಿಸಿದರು. ಈ ಪ್ರಬಂಧವನ್ನು ೧೯೬೬ರಲ್ಲಿ ಪ್ರಭುಶಂಕರ ಅವರು 'ಕನ್ನಡದಲ್ಲಿ ಭಾವಗೀತೆ' ಎಂಬ ಶೀರ್ಷಿಕೆಯೊಂದಿಗೆ ಡಿ.ವಿ.ಕೆ ಮೂರ್ತಿ ಪ್ರಕಾಶಕರು, ಮೈಸೂರು ಇವರ ಮೂಲಕ ಪ್ರಕಟಿಸಿದ್ದಾರೆ.

ಕನ್ನಡದಲ್ಲಿ ಭಾವಗೀತೆ : ಈ ಸಂಶೋಧನಾ ಪ್ರಬಂಧದಲ್ಲಿ ಅಧ್ಯಯನ ದೃಷ್ಟಿಯಿಂದ ಬೇಂದ್ರೆ ಅವರ ಕಾವ್ಯವನ್ನು ಅಲ್ಲಲ್ಲಿ ಆಯಾ ವಿಚಾರಗಳಿಗನುಗುಣವಾಗಿ ಚರ್ಚಿಸಿದ್ದಾರೆ. ಪ್ರಕೃತಿಗೀತೆಗಳು, ಪ್ರೇಮಗೀತೆಗಳು, ಕೌಟುಂಬಿಕ ಗೀತೆಗಳು, ಸಾಮಾಜಿಕ ಗೀತೆಗಳು ಹೀಗೆ ಕೆಲವು ವಿಚಾರಗಳ ಅಧ್ಯಯನದಲ್ಲಿ ಬೇಂದ್ರೆ ಅವರ ಕಾವ್ಯ ಅಧ್ಯಯನಕ್ಕೆ ಒಳಪಟ್ಟಿದೆ.

೧೨. ೧೯೬೬., ಮಣೂರ ವ್ಹಿ. ಜಿ.(ಸಂ)., ಮಕರಂದ

ವರಕವಿ ಶ್ರೀ ದ.ರಾ. ಬೇಂದ್ರೆ ಅವರ ೭೦ನೆಯ ಹುಟ್ಟುಹಬ್ಬದ ಸಂಚಿಕೆಯಾಗಿ 'ಮಕರಂದ' ಪತ್ರಿಕೆಯು ೧೯೬೬ರಲ್ಲಿ ಮಕರಂದ ಪತ್ರಿಕೆಯ ಸಂಪುಟ ನಾಲ್ಕು, ಸಂಚಿಕೆ ೭-೮ರಲ್ಲಿ ಪ್ರಕಟಗೊಂಡಿದೆ. ಮಣೂರ ವ್ಹಿ. ಜಿ. ಅವರು ಬೇಂದ್ರೆ ಅವರನ್ನು ಕುರಿತು ವಿವಿಧ ಕವಿಗಳು ಬರೆದ ಕವಿತೆಗಳು ಹಾಗೂ ವಿವಿಧ ಲೇಖಕರ ಲೇಖನಗಳನ್ನು ಇಲ್ಲಿ ಸಂಪಾದಿಸಿದ್ದಾರೆ. ಈ ಪತ್ರಿಕೆಯನ್ನು ಹುಬ್ಬಳಿಯ ರಸಿಕ ಪ್ರಕಾಶನದವರು ಪ್ರಕಾಶನಗೊಳಿಸಿದ್ದಾರೆ.

ಮಕರಂದ : 'ವರಕವಿ'ಗಳನ್ನು ಇತರ ಕವಿಗಳು ಕಂಡಂತೆ ಕವನ-ದವನದಲ್ಲಿ ಮಾಸ್ತಿ ವೆಂಕಟೇಶ ಅಯ್ಯಾಂಗಾರ ಅವರ 'ಶ್ರೀ ಬೇಂದ್ರೆಯವರನ್ನು ಕುರಿತು', ಡಿ. ಎಸ್. ಕರ್ಕಿ ಅವರ 'ಗೀತ ಗಾರುಡ', ಬಿ. ಎಚ್. ಶ್ರೀಧರ ಅವರ 'ಗಾಥಾ ಸಮರ್ಪಣ', ಚೆನ್ನವೀರ ಕಣವಿ ಅವರ 'ಎಪ್ಪತ್ತರ ಬೇಂದ್ರೆ', ಬಂಗಾರ ಕಡಿಯಾಲು ರಾಮಚಾರ್ಯ ಅವರ 'ಚಿರಕಾಲ ಬಾಳ್ಳೈ', ಇಟಗಿ ರಾಘವೇಂದ್ರ ಅವರ 'ಕವಿಹೃದಯ ಕಮಲಸಖ', ಕರಿಯಪ್ಪ ಹುಚ್ಚಣ್ಣನವರ 'ವರಕವಿ ಬೇಂದ್ರೆ', ಸೋಮಶೇಖರ ಇಮ್ರಾಪೂರ ಅವರ 'ದತ್ತ-ಬೆಲ್ಲ', ಹರಿಪ್ರಸಾದ ಪಾಂಡೆ ಅವರ 'ನಾನು-ನೀನು' ಈ ಒಂಬತ್ತು ಕವಿತೆಗಳು ಹಾಗೂ ಜಿ.ಎಸ್. ಅನ್ನದಾನಿ ಅವರ 'ಬೇಂದ್ರೆಯವರ ಗೀತಗಳು', 'ಚುಟುಕಮ್ಮನ ಆಶೀರ್ವಾದ', 'ಶ್ರೀ ದ. ರಾ. ಬೇಂದ್ರೆ', 'ಇಂದಿರಾ ಉವಾಚ' ಚುಟುಕುಗಳು ಸೇರಿವೆ. ಗದ್ಯ - ಪುಷ್ಪ ಎಂಬ ಭಾಗದಲ್ಲಿ 'ನಾ ಕಂಡ ಬೇಂದ್ರೆ' ಭಾಗದಲ್ಲಿ ಚಕ್ರಾಂಕಿತ ಅವರ ಬೇಂದ್ರೆ ಮಾಸ್ತರು, ಆರ್. ಜಿ. ಕುಲ್ಕರ್ಣಿ ಅವರ 'ಶ್ರೀ ದ.ರಾ. ಬೇಂದ್ರೆ ಅವರ ವ್ಯಕ್ತಿತ್ವ ಮತ್ತು ಸಾಹಿತ್ಯ ಕೃತಿ', ಕುವಲಯ ಅವರ 'ಶ್ರೀ ಬೇಂದ್ರೆಯವರು ಯೋಜಿಸಿದ ಗೆಳೆಯರ ಗುಂಪು' ಹಾಗೂ ಬೇಂದ್ರೆ ಹಾಗೂ ಶ್ರೀ ಧರ ಖಾನೋಳಕರ ಅವರ ನಡುವಿನ ಸಾಹಿತ್ಯ ಬಾಂಧವ್ಯ ಸಾರುವ ಲೇಖನ 'ವರಕವಿ ಶ್ರೀ ದ.ರಾ.

ಬೇಂದ್ರೆ ಕವಿ ಶ್ರೀ ಶ್ರೀಧರ ಖಾನೋಳಕರ್', ವಿಶಾಖ ಬೇಂದ್ರೆ ಅವರ ಮರಾಠಿ ಲೇಖನದ ಅನುವಾದ 'ಮಾವ ಬೇಂದ್ರೆ', ಎನ್. ಕೆ. ಜೋಗಳೇಕರ ಅವರು ಬೇಂದ್ರೆಯವರ ಭವಿಷ್ಯದ ಬಗ್ಗೆ ಜೋತಿಷ್ಯ ಹೇಳಿರುವ ಲೇಖನ ಕೂಡ ಇದೆ ಅದುವೆ 'ಶ್ರೀ ಬೇಂದ್ರೆ ಜಾತಕ ದರ್ಶನ', ಕೆ. ಕೃಷ್ಣಮೂರ್ತಿ ಅವರ 'ಬೇಂದ್ರೆಯವರ ವೇದ-ದರ್ಶನ', ವಾಮನ ಬೇಂದ್ರೆಯವರ 'ಅಂಬಿಕಾತನಯ ದತ್ತರ ಹೂದೋಟ', ಈ ಎಲ್ಲಾ ಲೇಖನಗಳ ಜೊತೆಗೆ ಜಿ. ವೆಂಕಟಸುಬ್ಬಯ್ಯನವರ ಭಾಷಣ ಹಾಗೂ ಕೆ. ಎಸ್. ಶರ್ಮಾ ಹಾಗೂ ಕೆ. ಗೋಪಾಲಕೃಷ್ಣರಾಯರು ಬೇಂದ್ರೆಯವರೊಂದಿಗೆ ನಡೆಸಿದ ಸಂದರ್ಶನಗಳು ಸೇರಿವೆ. ವಾಮನ ಬೇಂದ್ರೆ ಅವರ ಸಹಕಾರದೊಂದಿಗೆ ಬೇಂದ್ರೆ ಅವರನ್ನು ಕುರಿತು 'ನಾ ಕಳೆದ ಎಪ್ಪತ್ತು ವರ್ಷ' ಎಂಬ ಲೇಖನವನ್ನು ಕೆ. ಎಸ್. ಶರ್ಮಾ ಅವರು ರಚಿಸಿದ್ದಾರೆ ಈ ಎಲ್ಲಾ ಕವಿತೆಗಳು, ಲೇಖನಗಳು 'ಎಪ್ಪತ್ತರ ಈ ಹೊತ್ತು' ಎಂಬ ಶೀರ್ಷಿಕೆಯ ಮಕರಂದ ಪತ್ರಿಕೆಯಲ್ಲಿ ಪ್ರಕಟಗೊಂಡಿವೆ.

೧೩. **೧೯೬೬., ಕುಲಕರ್ಣಿ ಜಿ. ಆರ್., ಜೋಗಿಯ ನಾದಧ್ವನಿ**

ಶ್ರೀ ಅರವಿಂದ ಮಂಡಳ ಪ್ರಕಾಶನ ಸಂಸ್ಥೆಯು ವಿದ್ಯಾರ್ಥಿಗಳಲ್ಲಿ ಹಾಗೂ ಜನಸಾಮಾನ್ಯರಲ್ಲಿ ಭಾರತೀಯ ಪ್ರಾಚೀನ ಸಂಸ್ಕೃತಿ, ಆಧ್ಯಾತ್ಮಿಕ ಪರಂಪರೆಗಳ ಬಗೆಗೆ ಆರೋಗ್ಯಕರ ಜಾಗೃತಿಯನ್ನುಂಟುಮಾಡಲು, ಬಹು ಮುಖ್ಯವಾಗಿ ಬೆಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ಆನರ್ಸ್ ವಿದ್ಯಾರ್ಥಿಗಳಿಗಾಗಿ 'ಜೋಗಿಯ ನಾದಧ್ವನಿ' ಕೃತಿಯನ್ನು ೧೯೬೬ರಲ್ಲಿ ಪ್ರಕಟಿಸಿತು. ಈ ಕೃತಿಯನ್ನು ಜಿ. ಆರ್ ಕುಲಕರ್ಣಿ ಅವರು ರಚಿಸಿದ್ದಾರೆ.

ಜೋಗಿಯ ನಾದಧ್ವನಿ : ಈ ಕೃತಿಯಲ್ಲಿ ಏಳು ಲೇಖನಗಳಿವೆ. ಶ್ರೀ ಬೇಂದ್ರೆಯವರ ಕವನಗಳಲ್ಲಿ ನವೀನ ಭಾಷಾ ಪ್ರಯೋಗ., ಜೋಗಿ ಕವನದ ನಾದಧ್ವನಿ., ಜಿಜ್ಞಾಸೆಯ ಲೀಲಾ ವಿಲಾಸ., ಬ್ರಹ್ಮ-ಮಾಯೆ., ಹೂವಿನ ಸೃಷ್ಟಿ-ಸಂಕೇತ., ಮೌನದ ಕೊನೆ-ಗೊನೆ., ಗಂಗಾವತರಣದಲ್ಲಿ ಕರ್ನಾಟಕದ ನೋಟ ಈ ಲೇಖನಗಳಿವೆ. ಶ್ರೀ ಬೇಂದ್ರೆಯವರ ಕವನಗಳಲ್ಲಿ ನವೀನ ಭಾಷಾ ಪ್ರಯೋಗ ಲೇಖನದಲ್ಲಿ 'ನೀ ನಾದಿನೀ' ಎಂಬ ದೇವತಾಸ್ತುತಿಯನ್ನು ವಿವರಿಸುತ್ತಾ ಸಮಾಗಾನದ ಮಾಂತ್ರಿಕತೆ ಮತ್ತು ಸಮಾನ ಸಂಪ್ರದಾಯಗಳೆಂಬ ವಿಚಾರದೊಂದಿಗೆ ಕಾವ್ಯಧ್ವನಿಯನ್ನು ಕುರಿತು ವಿಶ್ಲೇಷಣೆ ಮಾಡಿದ್ದಾರೆ. ಜೋಗಿ ಕವನದ ನಾದಧ್ವನಿಯನ್ನು ವಿಶ್ಲೇಷಣೆ ಮಾಡುತ್ತಾ ಸುಮತೀಂದ್ರ ನಾಡಿಗರ ತಪ್ಪು ಗ್ರಹಿಕೆಗಳನ್ನು ಹಾಗೂ ಕೆಲವು ಕಾರಣಗಳನ್ನು ಚರ್ಚಿಸಿದ್ದಾರೆ. ಪರಿಸರ, ವಾತವರಣದೊಂದಿಗೆ ಜೋಗಿ ಹಾಗೂ ಸಣ್ಣಸೋಮವಾರ ಕವಿತೆಗಳ ಕುರಿತ ಚರ್ಚೆ ಇಲ್ಲಿದೆ. ಜಿಜ್ಞಾಸೆಯ ಲೀಲಾ ವಿಲಾಸ ಲೇಖನವು ಗಂಗಾಷ್ಟಕ, ಗಂಗಾವತರಣ ಹಾಗೂ ತೇಲಾಡುವಾಗ ಎಂಬ ಕವನಗಳ ವಿಶ್ಲೇಷಣೆ ಇದೆ. ಬ್ರಹ್ಮ-ಮಾಯೆ ಎಂಬ ಲೇಖನದಲ್ಲಿ ಹಂಸದ ಹಾಡು, ಬದುಕು ಮಾಯೆಯ ಮಾಟ ಕವಿತೆಗಳ ಕುರಿತು ಚರ್ಚೆ ಇದೆ. ಹೂವಿನ ಸೃಷ್ಟಿ-ಸಂಕೇತ ಎಂಬ ಲೇಖನದಲ್ಲಿ ಮಲ್ಲಿಗೆ, ಹೂವೆ, ನಸುಕು ಬಂತು ನಸುಕು ಈ ಮೂರು ಕವಿತೆಗಳನ್ನು ಕುರಿತು ವಿಶ್ಲೇಷಣೆ ಮಾಡಿದ್ದಾರೆ. ಮೌನದ ಕೊನೆ-ಗೊನೆ ಲೇಖನದಲ್ಲಿ ಶ್ರೀ ಬೇಂದ್ರೆಯವರ ತತ್ವ : ಸೃಷ್ಟಿಯನ್ನು ಚರ್ಚಿಸಿದ್ದಾರೆ. ಗಂಗಾವತರಣದಲ್ಲಿ ಕರ್ನಾಟಕದ ನೋಟ ಈ ಲೇಖನದಲ್ಲಿ ಒಂದೇ ಕರ್ನಾಟಕ-ನಾಸ್ತಿಗೆ ಜಯಕಾರ, ನೀವಾರಲ-ವಿಶ್ವತಾಳ ಹಿಡಿವ ಕನ್ನಡಿಗರು, ಸಿದ್ಧರಾಮರ ವಚನವನ್ನು ನೆನೆದು- ವಿಶ್ವ ಮೈತ್ರಿಯ ಮೋಡಿ ಎಂಬುದಾಗಿ ಬೇಂದ್ರೆಯವರ ಕವಿತೆಗಳನ್ನು ಚರ್ಚಿಸಿದ್ದಾರೆ.

೧೪. ೧೯೭೫., ಕೀರ್ತಿನಾಥ ಕುರ್ತಕೋಟಿ., ಭೃಂಗದ ಬೆನ್ನೇರಿ

ಕೀರ್ತಿನಾಥ ಕುರ್ತಕೋಟಿ ಅವರ 'ಭೃಂಗದ ಬೆನ್ನೇರಿ' ಬೇಂದ್ರೆ–ಕಾವ್ಯ–ದರ್ಶನ ಕೃತಿಯನ್ನು ೧೯೭೫ರಲ್ಲಿ ಮನೋಹರ ಗ್ರಂಥಮಾಲಾ, ಧಾರವಾಡ ಇವರು ಪ್ರಕಟಿಸಿದರು. ಈ ಕೃತಿಯ ಸಂಪಾದಕ–ಪ್ರಕಾಶಕರಾಗಿ ಜಿ.ಬಿ. ಜೋಶಿ ಅವರು ಕಾರ್ಯನಿರ್ವಹಿಸಿದ್ದಾರೆ. ಜಿ.ಬಿ. ಜೋಶಿ ಅವರು ಮನ್ವಂತರ ಪ್ರಕಾಶನದ ಮೂಲಕ ಮನೋಹರ ಗ್ರಂಥಮಾಲೆಯನ್ನು ಸ್ಥಾಪಿಸಿದರು. ಈ ಗ್ರಂಥಮಾಲೆಯ ಮೂಲಕ ಬೇಂದ್ರೆ ಕೃತಿಗಳು, ಇತರೆ ವಿಮರ್ಶಾ ಕೃತಿಗಳನ್ನು ಪ್ರಕಟಿಸಿದ್ದಾರೆ.

ಭೃಂಗದ ಬೆನ್ನೇರಿ: ಈ ಕೃತಿಯನ್ನು ದರ್ಶನ, ಶ್ರುತಿ, ಕೃತಿ, ಶಬ್ದ ಎಂಬುದಾಗಿ ವಿಂಗಡಿಸಿ ಬೇಂದ್ರೆ ಅವರ ಕಾವ್ಯ ವಿಮರ್ಶೆಯ ಸ್ವರೂಪವನ್ನು ನವ್ಯವಿಮರ್ಶೆಯ ಕಾಲದಲ್ಲಿ ಅದರ ತಾತ್ವಿಕ ಪರಿಧಿಗೆ ಬೇಂದ್ರೆ ಅವರ ಕಾವ್ಯ ಹೊಂದದ ಕಾರಣ ಬೇಂದ್ರೆ ಅವರ ಕಾವ್ಯ–ಪ್ರಜ್ಞೆಯನ್ನು ಪರಿಶೀಲಿಸುವ ಕಾರ್ಯ ಮಾಡಿದ್ದಾರೆ. ಈ ಕೃತಿಯ ಪ್ರಸ್ತಾವನೆಯಲ್ಲಿ ವಿಮರ್ಶೆ ಕುರಿತು, ನವ್ಯ ವಿಮರ್ಶೆಯ ಕುರಿತು ದೀರ್ಘವಾದ ಪೀಠಿಕೆಯನ್ನು ತಿಳಿಸಿದ್ದಾರೆ. ಇಲ್ಲಿ ಚೆಲುವ, ಜೋಗಿ, ಮೊದಲಗಿತ್ತಿ, ಮರೆಯುವೆಯೋ ಅರಿಯುವೆಯೋ, ಸ್ವರೂಪದೀಪ, ಸಣ್ಣಸೋಮವಾರ ಈ ಎಲ್ಲಾ ಕವಿತೆಗಳಿಗೆ ವಿಮರ್ಶೆ ನೀಡಿದ್ದಾರೆ. ಈ ಕವಿತೆಗಳಿಗೆ 'ಶ್ರೀ ಆರ್ಯ' ಅವರ ಸಂದರ್ಭೋಚಿತ ಚಿತ್ರ ರಚನೆ ಕಾಣಬಹುದು.

೧೫. ೧೯೭೫., ಜಿ. ಎಸ್. ಶಿವರುದ್ರಪ್ಪ(ಸಂ)., ಕವಿಬೇಂದ್ರೆ

ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರವು ೧೯೭೫ರ ಜನವರಿಯಲ್ಲಿ ಬೇಂದ್ರೆ ಅವರನ್ನು ಕುರಿತು ಏರ್ಪಡಿಸಿದ್ದ ವಿಚಾರ ಸಂಕಿರಣದಲ್ಲಿ ವಿವಿಧ ಲೇಖಕರು ಮಂಡಿಸಿದ ಹತ್ತು ಪ್ರಬಂಧಗಳ ಕೃತಿಯೇ 'ಕವಿಬೇಂದ್ರೆ'. ಈ ಕೃತಿಯನ್ನು ಕನ್ನಡ ಅಧ್ಯಯನ ಕೇಂದ್ರದ ಮಾಲೆ ೨೨ರ ಕೃತಿಯಾಗಿ ಬೆಂಗಳೂರು ವಿಶ್ವವಿದ್ಯಾಲಯ ೧೯೭೫ರಲ್ಲಿ ಪ್ರಕಟಿಸಿದೆ. ಈ ಕೃತಿಗೆ ಮೊದಲಮಾತಿನಡಿ ಉಪಕುಲಪತಿಗಳಾಗಿದ್ದ ಎಚ್. ನರಸಿಂಹಯ್ಯ ಅವರು ಅಭಿನಂದನೆ ಸಲ್ಲಿಸಿದ್ದಾರೆ. ಸಂಪಾದಕರಾದ ಜಿ.ಎಸ್ ಶಿವರುದ್ರಪ್ಪ ಇವರು ಮುನ್ನುಡಿ ರಚಿಸಿದ್ದಾರೆ. ಈ ಕೃತಿಯಲ್ಲಿ ಚಂದ್ರಶೇಖರ ಕಂಬಾರ ಅವರ 'ಬೇಂದ್ರೆ ಮತ್ತು ಕನ್ನಡ ಕಾವ್ಯ',ಕಾಳೇಗೌಡ ನಾಗವಾರ ಅವರ 'ಬೇಂದ್ರೆಯವರ ಕಾವ್ಯದ ಮೂಲ ಪ್ರೇರಣೆಗಳು', ದೊಡ್ಡ ರಂಗೇಗೌಡ ಅವರ 'ಬೇಂದ್ರೆಯವರ ಕಾವ್ಯ ವಿಕಾಸದ ಹಂತಗಳು', ಬರಗೂರು ರಾಮಚಂದ್ರಪ್ಪ ಅವರ 'ಬೇಂದ್ರೆಯವರ ಕಾವ್ಯದಲ್ಲಿ ಸಾಮಾಜಿಕ ಪ್ರಜ್ಞೆ', ಸೋಮಶೇಖರ ಇಮ್ರಾಪೂರ ಅವ 'ಬೇಂದ್ರೆ ಅವರ ಕಾವ್ಯ ಭಾಷೆ', ಎಚ್. ಎಸ್ ರಾಘವೇಂದ್ರರಾವ್ ಅವರ 'ಬೇಂದ್ರೆಯವರ ಛಂದಸ್ಸಿನ ಅಭ್ಯಾಸ', ಚಿ.ಶ್ರೀನಿವಾಸರಾಜು ಅವರ 'ಬೇಂದ್ರೆಯವರ ನಾಟಕಗಳು', ಆರ್.ಸಿ. ಕುಲಕರ್ಣಿ ಅವರ 'ಬೇಂದ್ರೆ ಅವರ ಕಾವ್ಯ ಮೀಮಾಂಸೆ', ಎನ್, ಬೋರಲಿಂಗಯ್ಯ ಅವರ 'ಬೇಂದ್ರೆ ಅವರ ಸಾಹಿತ್ಯ ವಿಮರ್ಶೆ', 'ವಾಮನ ಬೇಂದ್ರೆ ಅವರ 'ಬೇಂದ್ರೆ ಅವರ ಮರಾಠಿ ಸಾಹಿತ್ಯ' ಈ ಎಲ್ಲಾ ಲೇಖನಗಳು ಅತ್ಯಂತ ಗಂಭೀರವಾಗಿ ಬೇಂದ್ರೆ ಸಾಹಿತ್ಯವನ್ನು ಚರ್ಚಿಸಿವೆ.

೧೬. ೧೯೭೫., ರಂಗಸ್ವಾಮಿ ಸು. (ಸಂ)., ವರಕವಿ

ವರಕವಿ ಕೃತಿಯಲ್ಲಿ ಸು. ರಂಗಸ್ವಾಮಿಯವರು ಕನ್ನಡ ಸಾಹಿತ್ಯದ ವಿವಿಧ ಸಾಹಿತಿಗಳು ಬೇಂದ್ರೆಯವರನ್ನು ಕುರಿತು ಬರೆದಿರುವ ಕವಿತೆಗಳನ್ನು ಸಂಪಾದಿಸಲಾಗಿದೆ. ಬೆಂಗಳೂರಿನ ರಾಘವ ಪ್ರಿಂಟರ್ಸ್ ಅವರು ೧೯೭೫ರಲ್ಲಿ ಮುದ್ರಿಸಿದ್ದಾರೆ.

ವರಕವಿ : ಶ್ರೀನಿವಾಸರ 'ಶ್ರೀ ಬೇಂದ್ರೆಯವರನ್ನು ಕುರಿತು'., ಡಿ.ಎಸ್. ಕರ್ಕಿ ಅವರ 'ಗೀತಗಾರುಡ', ಅಮ್ಮೆಂಬಳ ಶಂಕರನಾರಾಯಣ ಅವರ 'ಶ್ರೀ ದ.ರಾ. ಬೇಂದ್ರೆ', ಚೆನ್ನವೀರ ಕಣವಿ ಅವರ 'ಎಪ್ಪತ್ತರ ಬೇಂದ್ರೆ', ಕೃಷ್ಣಮೂರ್ತಿ ಪುರಾಣಿಕರ 'ಬೇಂದ್ರೆ', ದತ್ತಾತ್ರೇಯ ಕುಲಕರ್ಣಿ ಅವರ 'ನೂರು ಕಾಲ ಬಾಳು', ಬಂಗಾರ ಕಡಿಯಾಲು ರಾಮಾಚಾರ್ಯ 'ಚಿರಕಾಲ ಬಾಳೈ', ಸಿ.ಪಿ.ಕೆ ಅವರ 'ತೀರ್ಥಕರ', ಪು.ತಿ. ನರಸಿಂಹಾಚಾರ್ ಅವರ 'ಕವಿ ಬೇಂದ್ರೆಯವರನ್ನು ಕುರಿತು', ಎನ್ಕೆ ಅವರ 'ದತ್ತ ಸಿದ್ಧ', ಹಿಮನಾ ಅವರ 'ರಸಪೂರ್ಣ ಬೇಂದ್ರೆ', ಬಿ.ಎಚ್. ಶ್ರೀಧರ ಅವರ 'ದತ್ತರಾಮಗೀತ', ಗುಂಡ್ಮಿ, ಚಂದ್ರಶೇಖರ ಐತಾಳ ಅವರ 'ಈ ಲೋಕದಿಂದ ಆ ಲೋಕಕ್ಕ ಏಣಿ ಹಾಕ್ತದ!', ನ.ಮ.ಕೊ. ಸೋಗಿ ಅವರ 'ಶತಕಾಲ ಬಾಳಲೀ ಕನ್ನಡದ ನಾಡೋಜ', ಹ.ವೆಂ. ನಾಗರಾಜರಾವ್ ಅವರ 'ಅಂಬಿಕಾತನಯ ದತ್ತ', ಕ್ಯಾತ್ಸಂದ್ರ ಚಂದ್ರಶೇಖರ್ ಅವರ 'ವರಕವಿ ದ.ರಾ. ಬೇಂದ್ರೆ', ಹ.ಬ. ಕೊಣ್ಣೂರ ಅವರ 'ಉಡುಗೊರೆ', ವಿನಾಯಕರ 'ಕನ್ನಡ ಕುಲದ ಗಂಧರ್ವ', ಗೀತಾಪ್ರಿಯ ಅವರ 'ಕವಿ-ಅಂಬಿಕಾತನಯದತ್ತ' ಒಟ್ಟು ಹತ್ತೊಂಬತ್ತು ಕವಿತೆಗಳನ್ನು ಇಲ್ಲಿ ಸಂಪಾದಿಸಿದ್ದಾರೆ. ಈ ಎಲ್ಲಾ ಕವಿತೆಗಳು ಬೇರೆ ಬೇರೆ ಕೃತಿಗಳಲ್ಲಿ ಆಯಾ ಸಂದರ್ಭಕ್ಕೆ ರಚನೆಗೊಂಡವು.

೧೭. ೧೯೭೩., ಕೊಟ್ಟಲಗಿ, ಗದಗಕರ., ಬೇಂದ್ರೆ ಸಾಹಿತ್ಯ ಸೌರಭ

ಸಮಾಜ ಪುಸ್ತಕಾಲಯ, ಧಾರವಾಡ ಇವರು ೧೯೭೩ರಲ್ಲಿ ಪ್ರಕಟಿಸಿದ 'ಬೇಂದ್ರೆ ಸಾಹಿತ್ಯ ಸೌರಭ' ಎಂಬ ಕೃತಿಯಲ್ಲಿ ಕೊಟ್ಟಲಗಿ ಅವರ ಒಂಬತ್ತು ಲೇಖನಗಳಿವೆ. ಗದಗಕರ ಅವರ ಮೂರು ಲೇಖನಗಳಿವೆ. ಇವುಗಳನ್ನು ಲಘು ಸಮೀಕ್ಷೆಗಳು ಎಂದು ಕರೆಯಲಾಗಿದೆ.

ಬೇಂದ್ರೆ ಸಾಹಿತ್ಯ ಸೌರಭ : ಕೊಟ್ಟಲಗಿ ಅವರು ಬೇಂದ್ರೆಯವರ 'ಕನ್ನಡ ಮೇಘದೂತ' ಕೃತಿಯನ್ನು ಒಂದು ರಸಸ್ಯಂದಿ ಅನುವಾದ ಎಂದು ಕರೆದಿದ್ದಾರೆ. ಇಲ್ಲಿ ಬೇಂದ್ರೆಯವರ ಅನುವಾದ ಕುರಿತು ಈ ರೀತಿ ಗಮನಿಸಿರುವುದನ್ನು ಕಾಣಬಹುದು. "ಬೇಂದ್ರೆಯವರು ತಮ್ಮ ಅನುವಾದದಲ್ಲಿ ಅನುಸರಿಸಿದ ಸರಸ ರೀತಿ; ಮೂಲ ಮಂದಾಕ್ರಾಂತ ವೃತ್ತವೇ ಅನುವಾದಕ್ಕೂ ಆದಿಯಾದರೂ ಅದನ್ನು ಕನ್ನಡದ ಜಾಯಮಾನಕ್ಕೆ ತಕ್ಕಂತೆ ಹೊಂದುವಂತೆ, ಬಳಸುವ ರೀತಿಯಲ್ಲಿ ಕವಿಯು ಅನುಸರಿಸಿದ ಧೋರಣೆಯು ಶ್ಲಾಘನೀಯವಾಗಿದೆ. ಅನುವಾದವನ್ನು ಕೇವಲ ಗ್ರಾಂಥಿಕವನ್ನಾಗಿ ಮಾಡದೆ ರೂಢಿಯಲ್ಲಿಯ ಶಬ್ದ, ಬಳಕೆ ಮಾತುಗಳನ್ನು ಉಪಯೋಗಿಸಿ ಕವಿಗಳು ಈ ತಮ್ಮ ಅನುವಾದ ಮಂದಿರವನ್ನು ನಿಲ್ಲಿಸಿದ್ದಾರೆ. ಮೇಘದೂತವೆಂದು ಹೆಸರಿಡದೆ, ಯಕ್ಷಸಂದೇಶವೆಂದು-ಇಲ್ಲವೆ ಯಕ್ಷನ ವಿರಹಗೀತವೆಂದು ಇದನ್ನು ಹೆಸರಿಸಿದ್ದರೆ, ಯಾರಿಗೂ ಇದು ಅನುವಾದವೆಂದು ತೋರದಷ್ಟು ಸ್ವತಂತ್ರ ಕೃತಿಯಾಗಿ ಕಾಣಬರಬಹುದಾಗಿತ್ತು." ಬೇಂದ್ರೆಯವರು ತಮ್ಮ ನಾಲ್ಕು ನಾಟಕಗಳನ್ನು ಹುಚ್ಚಾಟಗಳು ಎಂದು ಕರೆದಿದ್ದಾರೆ. ಇವುಗಳನ್ನು ಕೊಟ್ಟಲಗಿಯವರು 'ನಗೆಯಾಟಗಳು' ಎಂದು ಕರೆದಿದ್ದಾರೆ. "ಈ ಹುಚ್ಚಾಟಗಳಲ್ಲಿ ಸಮಾಜದ ಟೀಕೆ ಇದೆ. ಸಮಾಜದಲ್ಲಿಯ ವ್ಯಂಗ್ಯವನ್ನು ಕಂಡು ನಕ್ಕು ನಗಿಸುವ ತಿಳಿಯಾದ ಹಾಸ್ಯವಿದೆ. ಆದರೆ ಆ ಹಾಸ್ಯ ಸರ್ವಸಾಮಾನ್ಯವಾಗಿದೆ. ಅದರಲ್ಲಿ ಯಾರನ್ನೋ ಯಾವುದನ್ನೋ ಗುರುಯಾಗಿ ಮಾಡಿಕೊಂಡು ಬಾಣವೆಸೆದು ಆಘಾತಿಸುವ ಉದ್ದೇಶವಿಲ್ಲ. ಸಮಾಜವನ್ನು ಟೀಕಿಸಿದರೂ ಅದರಲ್ಲಿಯ ಟೀಕೆ, ವ್ಯಕ್ತಿ, ಸಮಾಜಗತವಾಗಿಲ್ಲ. ಸಾಮಾನ್ಯವಾಗಿದೆ. ಇದೇ ಇಲ್ಲಿಯ ಹುಚ್ಚಾಟಗಳಲ್ಲಿಯ ಮುಖ್ಯ ಬಹುಮೂಲ್ಯವಾದ ಆಶಯ"ಎಂದಿದ್ದಾರೆ. ಸಖೀಗೀತ, ಗರಿ, ಮೂರ್ತಿ ಮತ್ತು ಕಾಮಕಸ್ತೂರಿ, ಉತ್ತರಾಯಣ ಕವನ ಸಂಕಲನಗಳನ್ನು ಹಾಗೂ ನಿರಾಭರಣ ಸುಂದರಿ ಎಂಬ ಕಥಾ ಸಂಕಲನ,

ಹೊಸ ಸಂಸಾರ ಎಂಬ ಪ್ರಹಸನ ಸಂಗ್ರಹ ಕುರಿತು ಕುರಿತು ಕೊಟ್ಟಲಗಿಯವರು ಅಧ್ಯಯನ ರೂಪದ ವಿಮರ್ಶೆ ನೀಡಿದ್ದಾರೆ. ಸಖೀಗೀತದಂತಹ ಖಂಡಕಾವ್ಯ, ಹಾಗೂ ಸಾಹಿತ್ಯ ಸಂಶೋಧನ ಎಂಬ ಲೇಖನಗಳ ವಿಮರ್ಶಾ ಕೃತಿಯನ್ನು ಕುರಿತು ಗದಗಕರ ಅವರು ಲೇಖನ ರಚಿಸಿದ್ದಾರೆ. ಸಖೀಗೀತ ಕುರಿತು ರಸವಿಮರ್ಶೆ ನಡೆಸಿದ್ದಾರೆ. 'ಸಾಹಿತ್ಯ ಸಂಶೋಧನ'ಎಂಬ ಕೃತಿಯ ಪ್ರಬಂಧಗಳ ಭಾವಗ್ರಹಣವನ್ನು ನೀಡಿರುವುದಾಗಿ ತಿಳಿಸಿದ್ದಾರೆ.

೧೮. **೧೯೭೭., ಬುದ್ದಣ್ಣ ಹಿಂಗಮಿರೆ., ಇಳಿದು ಬಾ ತಾಯಿ (ಶ್ರೀ ಬೇಂದ್ರೆ ಅಭಿನಂದನ ಗ್ರಂಥ)**

ಬುದ್ದಣ್ಣ ಹಿಂಗಮಿರೆ ಅವರು ಕನ್ನಡದ ವಿವಿಧ ಲೇಖಕರಿಂದ ಅರವತ್ತಾರು ಲೇಖನಗಳನ್ನು ತಯಾರಿಸಿ ಸಂಪಾದಿಸಿದ್ದಾರೆ. ಈ ಕೃತಿಯನ್ನು ಸಾಹಿತ್ಯ ಮಂಟಪ, ಹುಬ್ಬಳ್ಳಿ., ಸಮಾಜ ಪುಸ್ತಕಾಲಯ, ಧಾರವಾಡ ಇವರು ಪ್ರಕಟಿಸಿದ್ದಾರೆ. ಈ ಕೃತಿಯ ಮುಖಪುಟದಲ್ಲಿ ಬೇಂದ್ರೆ ಅವರ ವೃದ್ದಾಪ್ಯದ ಚಿತ್ರವಿದೆ. ಬೆನ್ನುಡಿಯಲ್ಲಿ ಈ ಕೃತಿಯ ಎಲ್ಲಾ ಲೇಖಕರ ಹೆಸರುಗಳಿವೆ.

ಇಳಿದು ಬಾ ತಾಯಿ : ಈ ಕೃತಿಯು ಬೇಂದ್ರೆ ಅವರಿಗೆ ಸಲ್ಲಿಸಿದ ಅಭಿನಂದನಾ ಗ್ರಂಥವಾಗಿದೆ. ಈ ಗ್ರಂಥವನ್ನು ಏಳು ಭಾಗಗಳಾಗಿ ವಿಂಗಡಿಸಲಾಗಿದೆ. 'ವಿಮರ್ಶಾತ್ಮಕ ಲೇಖನಗಳು', 'ಕೆಲವು ಬಿಡಿಪದ್ಯಗಳ ಹಾಗೂ ಕೃತಿಗಳ ವಿಶ್ಲೇಷಣೆ', 'ಬೇಂದ್ರೆಯವರ ಜೀವನ ಪರಿಚಯ', 'ಪರಿಚಯ-ಅಭಿಮಾನ', 'ರಸನಿಮಿಷಗಳು', 'ವೈಜ್ಞಾನಿಕ-ವಿಶ್ಲೇಷಣೆ', 'ವಿಶೇಷ ಲೇಖನಗಳು' ಈ ಲೇಖನಗಳ ಮೂಲಕ ಅರವತ್ತಾರು ಲೇಖನಗಳಿವೆ. ಮಾಸ್ತಿ ಅವರ 'ನಾದಲೀಲೆ'ಯಿಂದ ನಿ. ಶ್ರೀಶ ಬಲ್ಲಾಳ 'ಅಂಬಿಕಾತನಯದತ್ತರ ಕವನಗಳಲ್ಲಿ ಮಾನವ ಭವಿಷ್ಯ ದರ್ಶನ' ಲೇಖನದವರೆಗೂ ಬೇಂದ್ರೆ ಸಮಕಾಲೀನ ಲೇಖಕರೆಲ್ಲರ ಬರಹಗಳಿರುವುದು ಈ ಕೃತಿಯು ವಿಶೇಷವಾಗಿ ನಮಗೆ ಲಭಿಸುತ್ತದೆ.

೧೯. **೧೯೮೦., ಗೌರೀಶ ಕಾಯ್ಕಿಣಿ., ಕಂಪಿನ ಕರೆ**

'ಕಂಪಿನ ಕರೆ'ಯು ಗೌರೀಶ ಕಾಯ್ಕಿಣಿ ಅವರ ವಿಮರ್ಶಾಕೃತಿ. ಈ ಕೃತಿಯನ್ನು ೧೯೮೦ರಲ್ಲಿ ಸಮಾಜ ಪುಸ್ತಕಾಲಯ, ಧಾರವಾಡ ಇವರು ಪ್ರಕಟಿಸಿದ್ದಾರೆ. ಈ ಕೃತಿಗೆ ಮಾರ್ನುಡಿ ಎಂಬ ಶೀರ್ಷಿಕೆಯಲ್ಲಿ ಎನ್ಕೆ ಕುಲಕರ್ಣಿ ಅವರ ನುಡಿಗಳಿವೆ. ಹಿನ್ನುಡಿಯಾಗಿ ವಿ.ಕೃ.ಗೋಕಾಕರ ಬರಹವಿದೆ. ಈ ಕೃತಿಯು ೧೯ವಿಭಾಗಗಳಲ್ಲಿ ಬೇಂದ್ರೆ ಸಾಹಿತ್ಯವನ್ನು ಅಧ್ಯಯನಮಾಡಿದೆ. ಈ ಅಧ್ಯಯನವು ಕಾವ್ಯಸೃಷ್ಠಿಯಿಂದ ಕಾವ್ಯ ಸಾಧನೆಯ ಎಲ್ಲಾ ಹಂತಗಳನ್ನು ವಿವಿಧ ಪರಿಕಲ್ಪನೆಗಳ ಮೂಲಕ ವಿಸ್ತರಿಸಿರುವುದನ್ನು ಕಾಣಬಹುದು. ೧೪೫ಪುಟಗಳ ಈ ಕೃತಿಯು 'ಬೇಂದ್ರೆ ಕಾವ್ಯದೃಷ್ಟಿ-ಒಂದು ಅಧ್ಯಯನ' ಎಂಬ ಅಡಿಶೀರ್ಷಿಕೆಯೊಂದಿಗೆ ಹೊಸ ವಿಮರ್ಶೆಯ ನೋಟವನ್ನು ನೀಡಿದೆ.

೨೦. **೧೯೮೧., ಸದಾನಂದ ನಾಯಕ., ಬೇಂದ್ರೆ ಕಾವ್ಯ- ಜೀವನ**

ಬೇಂದ್ರೆ ಕಾವ್ಯ-ಜೀವನ ಕೃತಿಯು ಎರಡು ವಿಷಯಗಳಲ್ಲಿ ವಿಶೇಷತೆ ಪಡೆದಿದೆ. ಈ ಕೃತಿಯ ಅಂದಾಜಿನ ಪ್ರಕಾರ ಬೇಂದ್ರೆಯವರ ಕೊನೆಯ ಸಂದರ್ಶನ ಹಾಗೂ ಅವರ ಚಿತ್ರಗಳು ದೊರೆತದ್ದು ಈ ಕೃತಿಯನ್ನು ಪ್ರಕಟಿಸಿದ ವಾರ್ತಾ ಮತ್ತು ಪ್ರಚಾರ ಇಲಾಖೆಯವರಿಗೆ ಎಂಬುದು. ಸಹಜವಾಗಿ ಇರಲು ಬಯಸುತ್ತಿದ್ದ ಬೇಂದ್ರೆಯವರ ಎರಡು ಚಿತ್ರಗಳನ್ನು ಪ್ರಕಟಿಸಲಾಗಿದೆ. ಹಾಗೂ ಈ ಚಿತ್ರಗಳನ್ನು ಎನ್. ಕೆ ದಾಸಪ್ಪನವರು ಕ್ಲಿಕ್ಕಿಸಿದ್ದಾರೆ. ಈ ಕೃತಿಗೆ ವಾರ್ತಾ ಮತ್ತು ಪ್ರಚಾರ ಇಲಾಖೆಯ ನಿರ್ದೇಶಕರಾಗಿದ್ದ ವಿಜಯ ಸಾಸನೂರು ಅವರ ಮುನ್ನುಡಿ ಇದೆ. ಕರ್ನಾಟಕ ರಾಜ್ಯದ ಬೆಳ್ಳಿಹಬ್ಬದ ಸಂದರ್ಭದಲ್ಲಿ ವಾರ್ತಾ ಮತ್ತು ಪ್ರಚಾರ ಇಲಾಖೆಯ 'ಜನಪದ' ಪತ್ರಿಕೆಯ ವಿಶೇಷಾಂಕಕ್ಕಾಗಿ ಮಾಡಿದ ಸಂದರ್ಶನ ಇಲ್ಲಿದೆ. ಮುಂಬಯಿಯ ಕನ್ನಡಿಗ ಪೋಲೀಸ್ ಅಧಿಕಾರಿ ಸಮಗೊಂಡ್‌ರವರು ಈ ಸಂದರ್ಶನ ಮಾಡಿದ್ದಾರೆ.

ಬೇಂದ್ರೆ ಕಾವ್ಯ- ಜೀವನ : ಈ ಕೃತಿಯಲ್ಲಿ ಬೇಂದ್ರೆಯವರು ನಾಡು, ಯುವಕರ ಕರ್ತವ್ಯ, ಭಾಷಾಪ್ರೇಮ ಹಾಗೂ ಅಧ್ಯಯನ ಕುರಿತು ಸಂದರ್ಶನ ನೀಡಿದ್ದಾರೆ. 'ಕೃಷ್ಣಕುಮಾರಿ'ಯಿಂದ ಮರಾಠಿ ಕೃತಿ 'ಸಂವಾದ'ದ ತನಕ ಕೃತಿಯ ಮೂಲಕ ಪರಿಚಯಾತ್ಮಕ ವಿಮರ್ಶೆ ನೀಡಿದ್ದಾರೆ. ಈ ಕೃತಿಗಳಲ್ಲಿ ಅಭಿವ್ಯಕ್ತಗೊಳ್ಳುವ ಬೇಂದ್ರೆಯವರ ಜೀವನ ಚರಿತ್ರೆ, ಸಂದೇಶಗಳನ್ನು ಕುರಿತು ಚರ್ಚಿಸಲಾಗಿದೆ. ಈ ಕೃತಿಯ ಲೇಖಕರಾದ ಸದಾನಂದ ನಾಯಕ ಅವರು ಬೇಂದ್ರೆಯವರ 'ನಾಕುತಂತಿ' ಕುರಿತು ವಿಮರ್ಶಾ ಕೃತಿಯನ್ನು ರಚಿಸಿದ್ದಾರೆ.

೨೧. ೧೯೮೨., ಅಂಕಣ., ಮೇ-ಜುಲೈ, ಸಂಪುಟ-೩., ಸಂಚಿಕೆ-೫.

ದ.ರಾ.ಬೇಂದ್ರೆ ಅವರ ಸಾಹಿತ್ಯ ಕುರಿತು ೧೯೮೨ರಲ್ಲಿ ಅಂಕಣ ಪತ್ರಿಕೆಯು ಮೇ-ಜುಲೈ, ಸಂಪುಟ-೩., ಸಂಚಿಕೆ-೫ರಲ್ಲಿ ಬೇಂದ್ರೆ ವಿಶೇಷಾಂಕವನ್ನು ಹೊರತಂದಿದೆ. ಈ ಸಂಪುಟದಲ್ಲಿ ಆರು ಲೇಖನಗಳಿವೆ. ಕೆ.ಎಲ್ ಗೋಪಾಲಕೃಷ್ಣಯ್ಯ ಅವರ 'ಗರುಡನ ಬೆನ್ನೇರಿದ್ದಿದ್ದರೆ..'., ಸು.ರಂ.ಎಕ್ಕುಂಡಿ ಅವರ "ನೆಲದ ಒಕ್ಕಲಿಗ'., ಆರ್.ಜಿ. ಕುಲಕರ್ಣಿ ಅವರ 'ಶ್ರೀ ವಿವೇಕಾನಂದ ಶಿಖರ-ಪ್ರಗಾಥಾ'., ಜಿ.ಬಿ. ಜೋಷಿ ಅವರ 'ಬೇಂದ್ರೆ : ಜೀವನ ಮತ್ತು ಕಾವ್ಯ'., ಕೀರ್ತಿನಾಥ ಕುರ್ತಕೋಟಿ ಅವರ 'ಬೇಂದ್ರೆಯವರ ಕಾವ್ಯ ಸೃಷ್ಟಿ'., ಪಿ.ಆರ್. ಮುತಾಲಿಕ್ ಅವರ 'ಬೇಂದ್ರೆಯವರ ನಾಟಕಗಳು' ಈ ಲೇಖನಗಳ ಜೊತೆಗೆ ಬೇಂದ್ರೆ ಕಾವ್ಯ ಕುರಿತು ಅಂಕಣ ಪತ್ರಿಕೆಯು ಕನ್ನಡ ಸಾಹಿತ್ಯದ ವಿವಿಧ ಕವಿಗಳಿಗೆ ನೀಡಿದ ಪ್ರಶ್ನಾವಳಿಗಳ ಪ್ರತಿಕ್ರಿಯೆಯನ್ನು ಪ್ರಕಟಿಸಲಾಗಿದೆ. ಈ ಪ್ರತಿಕ್ರಿಯೆಯಲ್ಲಿ ಕಾಳೇಗೌಡ ನಾಗವಾರ.,ಚಿಕ್ಕವೀರಯ್ಯ ವಿ., ಜಯಂತ ಕಾಯ್ಕಿಣಿ., ಕೆ.ವಿ. ತಿರುಮಲೇಶ್., ಬಿ.ಆರ್. ಲಕ್ಷ್ಮಣರಾವ್, ನಾ. ಮೊಗಸಾಲೆ, ಎಚ್.ಎಸ್ ವೆಂಕಟೇಶ ಮೂರ್ತಿ, ವೇಣು ಗೋಪಾಲ ಸೊರಬ, ಶಾಮ ಸುಂದರ ಬಿದರಕುಂದಿ, ಎಚ್. ಎಸ್. ಶಿವಪ್ರಕಾಶ್, ಸಿದ್ಧಲಿಂಗ ದೇಸಾಯಿ ಈ ಎಲ್ಲರ ಪ್ರತಿಕ್ರಿಯೆಗಳು ಪತ್ರಿಕೆಯಲ್ಲಿ ಪ್ರಕಟವಾಗಿವೆ.

೨೨. ೧೯೮೨., ವಾಮನ ಬೇಂದ್ರೆ., ಬೇಂದ್ರೆ ಕಾವ್ಯಲೋಲಕ

ವಾಮನ ಬೇಂದ್ರೆಯವರು ಬರೆದಿರುವ ಬೇಂದ್ರೆ ಕಾವ್ಯಲೋಲಕ ಎಂಬ ವಿಮರ್ಶಾ ಕೃತಿಯನ್ನು ಸಮಾಜ ಪುಸ್ತಕಾಲಯದವರು ೧೯೮೨ರಲ್ಲಿ ಪ್ರಕಟಿಸಿದರು. ಕಾವ್ಯಲೋಲಕ ಎಂಬ ಪದವನ್ನು ಬೇಂದ್ರೆಯವರ ಸಾಹಿತ್ಯಕ್ಕೆ ನೀಡಿದ್ದು ವಿ. ಕೃ. ಗೋಕಾಕ್ ಅವರು. ಈ ಕೃತಿಯನ್ನು ಗೋಕಾಕ್ ಅವರಿಗೆ ಅರ್ಪಿಸಲಾಗಿದೆ. ಈ ಕೃತಿಗೆ ಸದಾನಂದ ನಾಯಕರ ಮುನ್ನುಡಿ ಬರಹವಿದೆ.

ಬೇಂದ್ರೆ ಕಾವ್ಯಲೋಲಕ : ಈ ಕೃತಿಯಲ್ಲಿ ಒಟ್ಟು ಹತ್ತು ಪ್ರಬಂಧಗಳಿವೆ. ಐದು ಪ್ರಾಯೋಗಿಕ ವಿಮರ್ಶಾ ಪ್ರಬಂಧಗಳು. ಒಂದು ಬೇಂದ್ರೆಯವರನ್ನು ಕುರಿತ ವ್ಯಕ್ತಿ ಪ್ರಬಂಧ, ನಾಲ್ಕು ಬೇಂದ್ರೆ ಕಾವ್ಯ ಭೂಮಿಕೆಯ ಸ್ಥಲವಿನ್ಯಾಸ ಪ್ರಬಂಧಗಳು. ಇವುಗಳಲ್ಲಿ ಆರು ಲೇಖನಗಳನ್ನು ಮಕರಂದ, ಕಲಾದರ್ಶನ, ತಾಯಿನುಡಿ ಮೊದಲಾದ ಪತ್ರಿಕೆಗಳು ಪ್ರಕಟಿಸಿವೆ. ನಾಕುತಂತಿ ಕೃತಿಯ ಐದು ಕವಿತೆಗಳ ವಿಮರ್ಶೆ ಕಾಣಬಹುದು. 'ನಾಕುತಂತಿ', 'ಡೂ', 'ನೋ', 'ಮಹಾತ್ಮ ವಚನ', 'ಶಿಶುಮಾರನ ಲಾಲಿ' ಈ ಕವಿತೆಗಳನ್ನು ಕುರಿತು ಪ್ರಾಯೋಗಿಕ ವಿಮರ್ಶೆಯನ್ನು ಕಾಣಬಹುದು. 'ಬೇಂದ್ರೆಯವರ ಉಪಾಸನೆ', 'ಬೇಂದ್ರೆಯವರ ವೈಚಾರಿಕ ಭೂಮಿಕೆ', 'ಅಂಬಿಕಾತನಯದತ್ತರ ಕಿಟೆಲ್ ಕೋಶಾಭ್ಯಾಸ', 'ಅಂಬಿಕಾತನದತ್ತರ ಹೂದೋಟ' ಹಾಗೂ 'ರಾಜಾಕಾಲಸ್ಯ ಕಾರಣಂ- ಉಕ್ತಿಯ ಸಾಂಖ್ಯ ವಿಚಾರ' ಎಂಬ ಲೇಖನಗಳನ್ನು ಕಾಣಬಹುದು.

೨೩. ೧೯೮೨., ಕೀರ್ತಿನಾಥ ಕುರ್ತಕೋಟಿ., ದ.ರಾ. ಬೇಂದ್ರೆ

ಜನಸಾಮಾನ್ಯರಿಗೆ ಜಗತ್ತಿನ ಹಾಗೂ ನಮ್ಮ ರಾಷ್ಟ್ರದ ಪ್ರಮುಖ ವ್ಯಕ್ತಿಗಳ ಜೀವನ, ಸಿದ್ಧಿ-ಸಾಧನೆ ಹಾಗೂ ಸಾಹಿತ್ಯ ಪ್ರಕಾರಗಳನ್ನು ಸರಳವಾಗಿ ಪರಿಚಯಮಾಡಿಕೊಡುವಂತ ಹಲವಾರು ಕಿರುಕೃತಿಗಳನ್ನು 'ಮನೆಗೊಂದು ಮಣಿದೀಪ ಮಾಲೆ' ಯೋಜನೆಯನ್ನು ಬೆಂಗಳೂರು ವಿಶ್ವವಿದ್ಯಾಲಯವು ರೂಪಿಸಿತು. ಈ ಯೋಜನೆಯಲ್ಲಿ ದ.ರಾ. ಬೇಂದ್ರೆ ಕೃತಿಯನ್ನು ಕೀರ್ತಿನಾಥ ಕುರ್ತಕೋಟಿಯವರು ೧೯೮೨ರಲ್ಲಿ ರಚಿಸಿಕೊಟ್ಟರು. ವಿಶ್ವವಿದ್ಯಾಲಯ ಪ್ರಕಾಶನದ ಈ ಕೃತಿಯ ಪ್ರಧಾನ ಸಂಪಾದಕರಾಗಿ ಜಿ. ಎಸ್. ಶಿವರುದ್ರಪ್ಪ ಹಾಗೂ ಸಹಾಯಕ ಸಂಪಾದಕರಾಗಿ ಪುಂಡಲೀಕ ಹಾಲಂಬಿ ಅವರು ಕಾರ್ಯ ನಿರ್ವಹಿಸಿದ್ದಾರೆ. ಈ ಕೃತಿ ರಚನೆ ಕುರಿತು ಜಿ. ಎಸ್. ಶಿವರುದ್ರಪ್ಪನವರು ತಮ್ಮ ಸಂಪಾದಕೀಯ ನುಡಿಗಳಲ್ಲಿ ಈ ರೀತಿ ಹೇಳಿದ್ದಾರೆ "ಕುರ್ತಕೋಟಿಯವರ ಈ ಬರೆಹ ಕೇವಲ 'ಮನೆಗೊಂದು ಮಣಿದೀಪ ಮಾಲೆ'ಗಾಗಿಯೇ ಪ್ರಜ್ಞಾಪೂರ್ವಕವಾಗಿ ರಚಿತವಾದದ್ದಲ್ಲ. ಆದರೂ, ಈ ಮಾಲೆಯ ಮೂಲಕವಾದರೂ ಇಂಥದೊಂದು ಕೃತಿ ಪ್ರಕಟವಾಗುವುದು ನಮಗೆ ಪ್ರಿಯವಾದ ಸಂಗತಿಯಾಗಿದೆ. ಅಲ್ಲದೆ, ಈ ಕೃತಿ ಬೇಂದ್ರೆಯವರು, ನಿಧನರಾಗುವ ಪೂರ್ವದಲ್ಲೇ ಕುರ್ತುಕೋಟಿಯವರು ಬರೆದು ಕಳುಹಿಸಿದ್ದು. ಹೀಗಾಗಿ ಬೇಂದ್ರೆಯವರ ಜೀವನದ ವಿವರಗಳ ನಿರೂಪಣೆಯ ಕೆಲವೆಡೆಗಳಲ್ಲಿ ವರ್ತಮಾನಕಾಲದ ಪ್ರಯೋಗಗಳಿವೆ. ಅವುಗಳು ಹಾಗೆಯೇ ಉಳಿದಿರುವುದರಿಂದ ಅಂತಹ ಅಸಾಂಗತ್ಯವೇನೂ ಆಗಲಾರದೆಂದು ಭಾವಿಸಿದ್ದೇನೆ. ಯಾಕೆಂದರೆ, ಒಂದು ಅರ್ಥದಲ್ಲಿ ಬೇಂದ್ರೆಯವರು ಈಗಾಗಲೇ 'ನಿತ್ಯವರ್ತಮಾನ'ಕ್ಕೆ ಸಂದ ವ್ಯಕ್ತಿಯಾಗಿದ್ದಾರೆ." ಬೆಂಗಳೂರು ವಿಶ್ವವಿದ್ಯಾಲಯದ ಪ್ರಸಾರಂಗದ ವಿವಿಧ ಮಾಲೆಗಳಲ್ಲಿ 'ಮಣಿದೀಪ ಮಾಲೆ' ಯೋಜನೆಯ ನಾಲ್ಕನೇ ಕೃತಿಯಿದು.

ದ.ರಾ. ಬೇಂದ್ರೆ : ಜೀವನ, ಪ್ರಾಸ್ತಾವಿಕ ಹಾಗೂ ಕಲ್ಪವೃಕ್ಷ ವೃಂದಾವನಂಗಳಲಿ ಎಂಬ ಮೂರು ಪರಿಕಲ್ಪನೆಗಳ ಮೂಲಕ ಈ ಕೃತಿಯನ್ನು ನಿರ್ಮಿಸಿದ್ದಾರೆ. ಬೇಂದ್ರೆಯವರ ಜೀವನ ಚರಿತ್ರೆಯನ್ನು ಅವರ ಕವಿತೆಗಳ ಮೂಲಕವೇ ಅಭಿವ್ಯಕ್ತಗೊಳಿಸಿದ್ದಾರೆ ಪ್ರಾಸ್ತಾವಿಕ ಭಾಗದಲ್ಲಿ ಬೇಂದ್ರೆಯವರ ಸಾಹಿತ್ಯದ ಪ್ರಯೋಗ ಪಕ್ವತೆ ಕುರಿತು ಚಿಂತನೆ ಇದೆ. ಸಖೀಗೀತದ ತನಕ ಕವಿತೆಗಳ ಒಂದು ವ್ಯವಸ್ಥಿತ ಪ್ರಕಟಣೆ ನಡೆದು, ಉಳಿದ ಸಂಕಲಗಳು ಬಿಡಿಕವಿತೆಗಳ ಸಂಗ್ರಹದಂತೆ ಕಾಣುತ್ತದೆ. ಈ ಕವಿತೆಗಳಲ್ಲಿ ನಾಟಕ, ಅನುವಾದ ಮೊದಲಾದ ಸಾಹಿತ್ಯವೂ ಸೇರಿದೆ. 'ಕಲ್ಪವೃಕ್ಷ ವೃಂದಾವನಂಗಳಲಿ' ಎಂಬ ಭಾಗದಲ್ಲಿ ಪ್ರತಿಭೆ, ಕಾವ್ಯ ಶೈಲಿ ಕುರಿತು ಚರ್ಚೆ ಇದೆ. 'ಪಾತರಗಿತ್ತಿ ಪಕ್ಕಾ, ರಾಗರತಿ, ಚಳಿಯಾಕೆ, ಬೆಳಗು, ಕಲ್ಪವೃಕ್ಷ ವೃಂದಾವನಗಳಲಿ, ಯುಗಾದಿ, ಚಿಂತೆ, ಹೂ, ಕುಣಿಯೋಣು ಬಾರ, ಹುಬ್ಬಳಿಯಾಂವಾ, ಬಾರೋ ಸಾಧನಕೇರಿಗೆ, ಹಾಗೂ ಸಖೀಗೀತ, ಗಾಯತ್ರಿ ಸೂಕ್ತ, ಗಣಪತಿ ಸ್ತುತಿ ಇಂತಹ ಕವಿತೆಗಳಲ್ಲಿ ಕಂಡುಬರುವ ಕಾವ್ಯ ಪ್ರತಿಭೆಯನ್ನು ಚರ್ಚಿಸುತ್ತಾರೆ. "ಭಕ್ತಿ ಕಾವ್ಯ ಆಧುನಿಕ ಕಾಲದ ಸ್ವಭಾವಕ್ಕೆ ಒಗ್ಗುವುದೇ ಎಂದು ಕೇಳುವ ಪ್ರಶ್ನೆ ಅಪ್ರಸ್ತುತವಾಗಿದೆ. ದೇವರ ಅಸ್ತಿತ್ವದಲ್ಲಿ ನಂಬಿಗೆಯನ್ನು ಕಳೆದುಕೊಳ್ಳುವುದು ಈಗ ಸುಲಭವಾದ ಮಾತಾಗಿದೆ. ಆದರೆ ದೇವರಿಲ್ಲ ಎಂಬ ಮಾತಿನ ಸತ್ಯವನ್ನು ಅಷ್ಟೇ ಸುಲಭವಾಗಿ ಯಾವ ತರ್ಕದ ನೆರವಿಲ್ಲದೆ ಒಪ್ಪುವದಾದರೂ ಹೇಗೆ? ಬೇಂದ್ರೆಯವರ ಕಾವ್ಯದಲ್ಲಿ ಅಸ್ತಿತ್ವ ಮತ್ತು ಆಸ್ತಿಕತೆಗಲು ಒಂದಕ್ಕೊಂದು ಹೊಂದಿಕೊಂಡೇ ಇವೆ. ಅವನ್ನು ಬಿಡಿಸಬರುವದಿಲ್ಲ. ಒಪ್ಪಿಕೊಳ್ಳುವ ಅಥವಾ ಒಪ್ಪದಿರುವ ಗೊಡವೆಯೇ ಇಲ್ಲಿಲ್ಲ. ಒಂದು ರೀತಿಯಿಂದ ವಾದಕ್ಕೆ ಮೀರಿದ ಸಂಗತಿ ಇದಾಗಿದೆ. ಅದಕ್ಕಿಂತ ಇಂಥ ಕಾವ್ಯದ ಆಸ್ವಾದ ಹೆಚ್ಚು ಪ್ರಯೋಜನಕಾರಿಯಾಗಿದೆ." ಹೀಗೆ ಕಾವ್ಯದ ಪ್ರತಿಭೆಯನ್ನು ಕುರ್ತಕೋಟಿಯವರು ಅತ್ಯಂತ ಸರಳವಾಗಿ ಚರ್ಚಿಸಿದ್ದಾರೆ.

೨೪. ೧೯೮೨., ರುಕ್ಮಿಣಿ ಪರ್ವತಿ., ಅಂಬಿಕಾತನಯದತ್ತರ ಭಾವಗೀತೆಗಳು

ಕರ್ನಾಟಕ ವಿಶ್ವವಿದ್ಯಾಲಯವು ೧೯೭೭ರಲ್ಲಿ 'ಅಂಬಿಕಾತನಯದತ್ತರ ಭಾವಗೀತೆಗಳು' ಎಂಬ ಪ್ರಬಂಧಕ್ಕೆ ಪಿಎಚ್.ಡಿ. ಪ್ರಧಾನಮಾಡಿತು. ಇದು ಬೇಂದ್ರೆ ಅವರನ್ನು ಕುರಿತು ಪೂರ್ಣವಾಗಿ ಮೊದಲಿಗೆ ಪ್ರಕಟವಾದ ಸಂಶೋಧನ ಪ್ರಬಂಧವಾಗಿದೆ. ಇದನ್ನು ರಚಿಸಲು ರುಕ್ಮಿಣಿ ಅವರು ಬೇಂದ್ರೆ ಅವರಿಂದ ಸಲಹೆ ಪಡೆದವರು. ೧೯೮೨ರಲ್ಲಿ ಉಷಾ ಸಾಹಿತ್ಯ ಮಾಲೆ, ಮೈಸೂರು ಇವರು ಕೃತಿಯಾಗಿ ಪ್ರಕಟವಾಗುತ್ತಿದೆ. ಈ ಕೃತಿಗೆ ರಂ. ಶ್ರೀ. ಮುಗಳಿ ಅವರ ಮುನ್ನುಡಿಯ ಬರಹವಿದೆ.

ಅಂಬಿಕಾತನಯದತ್ತರ ಭಾವಗೀತೆಗಳು : ಈ ಕೃತಿಯ ಪ್ರಾರಂಭದಲ್ಲಿ ಬೇಂದ್ರೆ ಅವರ 'ಅಂಬಿಕಾತನಯದತ್ತ', 'ಭಾವ-ಭಾಷೆ' ಕವಿತೆಗಳನ್ನು ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ ಅಂಬಿಕಾತನದತ್ತರ ಜೀವನ ಮತ್ತು ವ್ಯಕ್ತಿತ್ವ, ಕಾವ್ಯ ಸೌಂದರ್ಯ., ಭಾವಗೀತೆಗಳಲ್ಲಿ ವಿಷಯ, ವೈವಿಧ್ಯ ಮತ್ತು ವೈಶಿಷ್ಟ್ಯ, ಅಂಬಿಕಾತನದತ್ತರ ಚಿಂತನ ಮಂಥನ ಈ ಎಲ್ಲಾ ಭಾಗಗಳ ಮೂಲಕ ಬೇಂದ್ರೆ ಅವರ ಕಾವ್ಯದ ಅಧ್ಯಯನ ನಡೆಸಿದ್ದಾರೆ. ಈ ಕೃತಿಯಲ್ಲಿ ಬೇಂದ್ರೆ ಅವರ ವಯಕ್ತಿಕ ಜೀವನ, ಸಾಹಿತ್ಯ ರಚನೆ, ಅಭ್ಯಾಸ ಕ್ರಮ ಈ ಅಂಶಗಳೊಂದಿಗೆ ಬೇಂದ್ರೆ ಅವರ ಕಾವ್ಯದ ಶೈಲಿ, ಬರವಣಿಗೆಯ ವಿವಿಧ ಕ್ರಮಗಳನ್ನು ಬೇಂದ್ರೆ ಅವರ ಆರಂಭದ ಕವಿತೆಗಳಿಂದ ೧೯೭೭ರ ಕಾಲದವರೆಗೂ ಅಧ್ಯಯನಕ್ಕೆ ಬಳಸಿದ್ದಾರೆ. ಈ ಪ್ರಬಂಧದ ವಿಶೇಷವೆಂದರೆ ಬೇಂದ್ರೆ ಅವರ ಸಲಹೆ, ಸೂಚನೆ, ಅರ್ಥ-ಗ್ರಹಿಕೆಯ ರೀತಿ ನೀತಿ ನೇರವಾಗಿ ದೊರೆತಿರುವುದು ವಿಶೇಷವಾಗಿ ಅಧ್ಯಯನ ಮಾಡಬಹುದು.

೨೫. ೧೯೮೨., ಸೀತಾರಾಮಯ್ಯ ಎಂ.ವಿ., ಜಾಲಿಹಾಳ ಗೋ. ಅ (ಸಂ)., ಬೇಂದ್ರೆ ಸ್ಮೃತಿ

ಸೀತಾರಾಮಯ್ಯ ಎಂ.ವಿ., ಜಾಲಿಹಾಳ ಗೋ. ಅ. ಇವರು ಸಂಪಾದಿಸಿದ 'ಬೇಂದ್ರೆ ಸ್ಮೃತಿ' ಎಂಬ ಕೃತಿಯನ್ನು ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಅಧ್ಯಕ್ಷರಾಗಿದ್ದ ನಿಟ್ಟೂರು ಶ್ರೀನಿವಾಸರಾವ್ ಅವರು ಪ್ರಕಟಗೊಳಿಸಿದರು. ಇವರೇ ಕೃತಿಗೆ ಮುನ್ನುಡಿಯನ್ನು ಕೂಡ ಬರೆದಿದ್ದಾರೆ. ಬೇಂದ್ರೆಯವರನ್ನು ಕುರಿತು ನಾ. ಗೀತಾಚಾರ್ಯ ಅವರ ಸಂಧ್ಯಾರಾಗ ಹಾಗೂ ಜಾ. ಗೋ ಅವರ ಅಂಬಿಕಾತನಯದತ್ತ ಎಂಬ ಎರಡು ಕವಿತೆಗಳು ಪ್ರಾರಂಭದಲ್ಲಿಯೇ ಸೇರಿವೆ.

ಬೇಂದ್ರೆ ಸ್ಮೃತಿ : ಬೇಂದ್ರೆಯವರು ಮರಣ ಹೊಂದಿದಾಗ ಕಂಬನಿ ಮತ್ತು ಶ್ರದ್ಧಾಂಜಲಿಯ ಬರಹಗಳನ್ನು ಅರ್ಪಿಸಲು ಈ ಕೃತಿ ಸಂಪಾದಿಸಲಾಗಿದೆ. ಅಂದಿನ ಕರ್ನಾಟಕದ ರಾಜ್ಯಪಾಲರಾದ ಗೋವಿಂದ ನಾರಾಯಣ ಮತ್ತು ಮುಖ್ಯಮಂತ್ರಿಗಳಾದ ಆರ್. ಗುಂಡೂರಾವ್ ಅವರು ಬೇಂದ್ರೆ ಅವರ ನಿಧನಕ್ಕೆ ಸಂತಾಪವನ್ನು ವ್ಯಕ್ತಪಡಿಸಿದ ಬರಹಗಳಿವೆ. ಮಾಸ್ತಿ ವೆಂಕಟೇಶ ಅಯ್ಯಾಂಗಾರ್ ಅವರ 'ಆರಾಧನ'., ಎಂ. ವಿ ಸೀತಾರಾಮಯ್ಯ ಅವರ 'ಚಾರಣಕವಿ ಬೇಂದ್ರೆ'., ಕೀರ್ತಿನಾಥ ಕುರ್ತಕೋಟಿ ಅವರ 'ಬೇಂದ್ರೆ : ವ್ಯಕ್ತಿತ್ವ, ವಕ್ತೃತ್ವ ಮತ್ತು ಕವಿತ್ವ ಒಂದು ನಿಕಟ ನೋಟ'., ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ 'ಕರ್ನಾಟಕದ ರವೀಂದ್ರನಾಥ ಠಾಕೂರರು'., ಶಕುಂತಲಾ ನಾಯಿಕ ಅವರ 'ಬೇಂದ್ರೆ ಅಣ್ಣಾ' ಈ ಲೇಖನವನ್ನು ತಾರಾ ದೀಕ್ಷಿತ ಅವರು ಅನುವಾದಿಸಿದ್ದಾರೆ ಈ ಪ್ರಮುಖ ಬೇಂದ್ರೆ ಒಡನಾಡಿಗಳ ಲೇಖನಗಳಿವೆ. ಮಾಸ್ತಿಯವರ ಲೇಖನದಲ್ಲಿ ಸ್ಮರಣೆಯ ಜೊತೆಗೆ ಹಕ್ಕಿ ಹಾರುತಿದೆ ನೋಡಿದಿರಾ, ಬೆಳಗು, ಪಾತರಗಿತ್ತಿ ಪಕ್ಕಾ ಈ ಕವಿತೆಗಳನ್ನು ಕುರಿತು ಚಿಂತನೆ ಇದೆ. ಕೀರ್ತಿನಾಥ ಕುರ್ತಕೋಟಿ ಅವರು ದಿನಾಂಕ ೧೩-೧೨-೧೯೮೧ರಲ್ಲಿ ಪ್ರಜಾವಾಣಿ ಸಂಚಿಕೆಗೆ ಬರೆದ 'ಬೇಂದ್ರೆ : ವ್ಯಕ್ತಿತ್ವ, ವಕ್ತೃತ್ವ ಮತ್ತು ಕವಿತ್ವ ಒಂದು ನಿಕಟ ನೋಟ' ಎಂಬ ಲೇಖನದಲ್ಲಿ

ಕವಿಯ ಪರಿಚಯ, ಕಾವ್ಯಶಕ್ತಿ, ಗೆಳೆಯರ ಗುಂಪು, ಬೇಂದ್ರೆ-ಕಾವ್ಯದ ಬೆಳವಣಿಗೆ ಮತ್ತು ವಿಮರ್ಶೆ ಹಾಗು ಬೇಂದ್ರೆ ಒಡನಾಟದ ಕೊನೆಯ ಕ್ಷಣದ ನೆನಪುಗಳನ್ನು ಇಲ್ಲಿ ಹಂಚಿಕೊಂಡಿದ್ದಾರೆ. ಬೇಂದ್ರೆಯವರ ನಿಧನಕ್ಕೆ ಅಂದು ಶ್ರದ್ಧಾಂಜಲಿ ಅರ್ಪಿಸಿದ ಆಕಾಶವಾಣಿ, ಪತ್ರಿಕೆಗಳಾದ ಪ್ರಜಾವಾಣಿ, ಕನ್ನಡ ಪ್ರಭ, ಸಂಯುಕ್ತ ಕರ್ನಾಟಕ, ಲಂಕೇಶ್ ಪತ್ರಿಕೆ., ಕನ್ನಡ ಸಾಹಿತ್ಯ ಪರಿಷತ್ತಿನ ಸಭೆ, ಕುವೆಂಪು, ಪು.ತಿ.ನ, ಹಾ. ಮಾ. ನಾಯಕ್, ಶಂಬಾ ಜೋಶಿ ಹಾಗೂ ನಾಡಿನ ವಿವಿಧ ಪತ್ರಿಕೆಗಳು, ಸಂಘ-ಸಂಸ್ಥೆಗಳು ಹಾಗೂ ಹಲವು ಜನರ ಶ್ರದ್ಧಾಂಜಲಿಯ ಅಭಿಪ್ರಾಯಗಳು ಇಲ್ಲಿ ಸಂಕಲನಗೊಂಡಿವೆ.

೨೬. **೧೯೮೪., ಗೋಕಾಕ ವಿ.ಕೃ., ಬೇಂದ್ರೆಯವರ ಕಾವ್ಯಗುಣ ಹಾಗೂ ಪ್ರಯೋಗಶೀಲತೆ**

ಬೇಂದ್ರೆಯವರ ಜನ್ಮದಿನಾಚರಣೆಯ ನಿಮಿತ್ತ ೩೧-೦೧-೧೯೮೩ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಗೋಕಾಕರು ಮಾಡಿದ ೨೧ ಪುಟದ ಭಾಷಣವಿದು. ೧೯೮೪ರಲ್ಲಿ ವಿಶ್ವವಿದ್ಯಾಲಯವೇ ಕಿರುಹೊತ್ತಿಗೆಯಂತೆ ಪ್ರಕಟಿಸಿದೆ.

ಬೇಂದ್ರೆಯವರ ಕಾವ್ಯಗುಣ ಹಾಗೂ ಪ್ರಯೋಗಶೀಲತೆ : ಬೇಂದ್ರೆಯವರ ಜೀವನ ಚಿತ್ರಣವನ್ನು ಅವರ ಕವಿತೆಗಳ ಮೂಲಕ ಅರ್ಥೈಸುವ ವಿಮರ್ಶೆ ಇವರ ಶೈಲಿಯಾಗಿದೆ. ಮಲ್ಲಾಡದ ಗಿಣಿಯೆ, ಶ್ರಾವಣ ಬಂತು, ಪಾತರಗಿತ್ತಿ ಪಕ್ಕಾ, ಭಾವಗೀತ ಮೊದಲಾದ ಕವಿತೆಗಳನ್ನು ಭಾವಸಂದರ್ಭಕ್ಕೆ ಅನುಸಾರವಾಗಿ ವಿಶ್ಲೇಷಿಸಿದ್ದಾರೆ. ಈ ಭಾಷಣವು ಅಭಿನವ ಪ್ರಕಾಶನದ 'ಸರಸ್ವತಿ ನೆನಪು' ಮಾಲಿಕೆಯಲ್ಲಿ ಪ್ರಕಟಿತವಾದ 'ಬೇಂದ್ರೆಯವರ ಕಾವ್ಯ ಮತ್ತು ವ್ಯಕ್ತಿತ್ವ' ಎಂಬ ಕೃತಿಯಲ್ಲಿ ಸೇರ್ಪಡೆಯಾಗಿದೆ.

೨೭. **೧೯೮೪., ೨೦೧೩., ಕೆ. ವಿ. ನಾರಾಯಣ., ಸಾಹಿತ್ಯ ತತ್ವ : ಬೇಂದ್ರೆ ದೃಷ್ಟಿ**

ಅಭಿನವ ಪ್ರಕಾಶನವು 'ಸರಸ್ವತಿ ನೆನಪು' ಎಂಬ ಮಾಲಿಕೆಯಲ್ಲಿ ಬೇಂದ್ರೆ ಅವರ ಸಾಹಿತ್ಯ ಕುರಿತು ಈಗಾಗಲೇ ಕ್ರೈಸ್ಟ್ ಕಾಲೇಜಿನ ಕನ್ನಡ ಸಂಘದ ಮೂಲಕ ಪ್ರಕಟಿತವಾದ ಹಾಗೂ ಇತರೆಡೆಗಳಲ್ಲಿ ಪ್ರಕಟಿಸಿದ ಪುಸ್ತಕಗಳನ್ನು ಮರುಮುದ್ರಣ ಮಾಡಿದೆ. ೧೯೮೬., ೨೦೧೩., ಕೆ. ವಿ. ನಾರಾಯಣ ಅವರು ಬೇಂದ್ರೆ ಸಾಹಿತ್ಯ ಕುರಿತು ಬರೆದ ಲೇಖನಗಳನ್ನು 'ಸಾಹಿತ್ಯ ತತ್ವ : ಬೇಂದ್ರೆ ದೃಷ್ಟಿ' ಎಂಬುದಾಗಿ ೧೯೮೬ರಲ್ಲಿ ಪ್ರಕಟಿಸಲಾಗಿತ್ತು. ಈ ಕೃತಿಯನ್ನು ಅಭಿನವ ಪ್ರಕಾಶನ ಇವರು ೨೦೧೩ರಲ್ಲಿ ಮರುಮುದ್ರಣ ಮಾಡಲಾಗಿದೆ.

ಸಾಹಿತ್ಯ ತತ್ವ : ಬೇಂದ್ರೆ ದೃಷ್ಟಿ : ಈ ಕೃತಿಯಲ್ಲಿ ಕೆ.ವಿ. ನಾರಾಯಣ ಅವರು ಜನವರಿ ೩೧, ೧೯೮೩ರಲ್ಲಿ ನೀಡಿದ ಉಪನ್ಯಾಸದ ವಿಸ್ತೃತರೂಪವಾಗಿದೆ. ಈ ಲೇಖನವು ಅತ್ಯಂತ ದೀರ್ಘವಾಗಿ ಬೇಂದ್ರೆ ಸಾಹಿತ್ಯವನ್ನು ನವೋದಯ ಕಾವ್ಯತತ್ತ್ವ ಹಾಗೂ ವಿಮರ್ಶಾತತ್ತ್ವದ ಮೂಲಕ ಪರಿಶೀಲಿಸಿದ್ದಾರೆ.

೨೮. **೧೯೮೬., ೨೦೦೯, ೨೦೧೧., ರಂ.ಶ್ರೀ.ಮುಗಳಿ., ಬೇಂದ್ರೆ ಕಾವ್ಯ**

ರಂ.ಶ್ರೀ.ಮುಗಳಿ ಅವರ ಬೇಂದ್ರೆಕಾವ್ಯ ಕೃತಿಯು ಅಭಿನವ ಪ್ರಕಾಶನದ ಮೂಲಕ ೨೦೧೧ರಲ್ಲಿ ಪ್ರಕಟಗೊಂಡಿದೆ. ಈ ಕೃತಿಯು ಬೇಂದ್ರೆ ಕಾವ್ಯ ಒಂದು ಸಹೃದಯ ಸಮೀಕ್ಷೆ ಎಂಬುದಾಗಿ ನಿರೂಪಿಸಿದ್ದಾರೆ.

ಬೇಂದ್ರೆ ಕಾವ್ಯ: ರಂ.ಶ್ರೀ.ಮುಗಳಿ ಅವರ ಈ ಕೃತಿಯಲ್ಲಿ ಎಂಟು ವಿಭಾಗಗಳಾಗಿ ವಿವಿಧ ಪರಿಕಲ್ಪನೆಗಳ ಮೂಲಕ ಅಧ್ಯಯನ ಮಾಡಿದ್ದಾರೆ. ಪ್ರಕೃತಿ, ಪ್ರೀತಿ, ತಾಯಿ, ಮಾನವೀಯ ಪರಿಸ್ಪಂದ, ವಿರಾಟ್ ದರ್ಶನ, ಆಧ್ಯಾತ್ಮ, ಅಭಿವ್ಯಕ್ತಿ, ಸಮಾಪನ ಈ ವಿಭಾಗಗಳ ಮೂಲಕ ಬೇಂದ್ರೆ ಸಾಹಿತ್ಯದ ಗ್ರಹಿಕೆಗಳ ಜೊತೆಗೆ ಇದುವರೆಗೂ ಪ್ರಮುಖವಾಗಿ ಚರ್ಚಿತವಾಗಿರುವ ವಿಮರ್ಶೆಗಳ ತೌಲನಿಕ ಅಧ್ಯಯನವನ್ನು ಅತ್ಯಂತ ಸಮರ್ಥವಾಗಿ ನೀಡಿದ್ದಾರೆ.

೨೯. ೧೯೮೬., ೨೦೧೩., ವಿಜಯಾದಬ್ಬೆ., ಬೇಂದ್ರೆ ಕಾವ್ಯದಲ್ಲಿ ಅನುಭಾವದ ಒಂದು ನಿಚ್ಚಣಿಕೆ

ಅಭಿನವ ಪ್ರಕಾಶನವು 'ಸರಸ್ವತಿ ನೆನಪು' ಎಂಬ ಮಾಲಿಕೆಯಲ್ಲಿ ಬೇಂದ್ರೆ ಅವರ ಸಾಹಿತ್ಯ ಕುರಿತು ಈಗಾಗಲೇ ಕ್ರೈಸ್ಟ್ ಕಾಲೇಜಿನ ಕನ್ನಡ ಸಂಘದ ಮೂಲಕ ಪ್ರಕಟಿತವಾದ ಹಾಗೂ ಇತರೆಡೆಗಳಲ್ಲಿ ಪ್ರಕಟಿಸಿದ ಪುಸ್ತಕಗಳನ್ನು ಮರುಮುದ್ರಣ ಮಾಡಿದೆ. ೧೯೮೬., ೨೦೧೩., ವಿಜಯಾದಬ್ಬೆ ಅವರು ಬೇಂದ್ರೆ ಸಾಹಿತ್ಯ ಕುರಿತು ಬರೆದ ಲೇಖನಗಳನ್ನು 'ಬೇಂದ್ರೆ ಕಾವ್ಯದಲ್ಲಿ ಅನುಭಾವದ ಒಂದು ನಿಚ್ಚಣಿಕೆ' ಎಂಬುದಾಗಿ ೧೯೮೬ರಲ್ಲಿ ಪ್ರಕಟಿಸಲಾಗಿತ್ತು. ಈ ಕೃತಿಯನ್ನು ಅಭಿನವ ಪ್ರಕಾಶನ ಇವರು ೨೦೧೩ರಲ್ಲಿ ಮರುಮುದ್ರಣ ಮಾಡಲಾಗಿದೆ.

ಬೇಂದ್ರೆ ಕಾವ್ಯದಲ್ಲಿ ಅನುಭಾವದ ಒಂದು ನಿಚ್ಚಣಿಕೆ: ಈ ಕೃತಿಯಲ್ಲಿ ವಿಜಯಾದಬ್ಬೆ ಅವರು ಬೇಂದ್ರೆ ಸಾಹಿತ್ಯ ಕುರಿತು ದಿನಾಂಕ ೨೪-೦೨-೧೯೮೫ರಂದು ಬಸವನಗುಡಿ ನ್ಯಾಷನಲ್ ಕಾಲೇಜಿನಲ್ಲಿ ನೀಡಿದ ಉಪನ್ಯಾಸದ ವಿಸ್ತೃತ ರೂಪವಿದು.

೩೦. ೧೯೮೬., ೨೦೧೪., ಬಸವರಾಜ ಕಲ್ಗುಡಿ., ಬೇಂದ್ರೆ ಕಾವ್ಯದಲ್ಲಿ ಪ್ರೇಮದ ಆವಿಷ್ಕಾರ ಸ್ವರೂಪಗಳು

ಅಭಿನವ ಪ್ರಕಾಶನವು 'ಸರಸ್ವತಿ ನೆನಪು' ಎಂಬ ಮಾಲಿಕೆಯಲ್ಲಿ ಬೇಂದ್ರೆ ಅವರ ಸಾಹಿತ್ಯ ಕುರಿತು ಈಗಾಗಲೇ ಕ್ರೈಸ್ಟ್ ಕಾಲೇಜಿನ ಕನ್ನಡ ಸಂಘದ ಮೂಲಕ ಪ್ರಕಟಿತವಾದ ಹಾಗೂ ಇತರೆಡೆಗಳಲ್ಲಿ ಪ್ರಕಟಿಸಿದ ಪುಸ್ತಕಗಳನ್ನು ಮರುಮುದ್ರಣ ಮಾಡಿದೆ. ೧೯೮೬., ೨೦೧೩., ಬಸವರಾಜ ಕಲ್ಗುಡಿ ಅವರು ಬೇಂದ್ರೆ ಸಾಹಿತ್ಯ ಕುರಿತು ಬರೆದ ಲೇಖನಗಳನ್ನು ಬೇಂದ್ರೆ ಕಾವ್ಯದಲ್ಲಿ ಪ್ರೇಮದ ಆವಿಷ್ಕಾರ ಸ್ವರೂಪಗಳು ಎಂಬುದಾಗಿ ೧೯೮೬ರಲ್ಲಿ ಪ್ರಕಟಿಸಲಾಗಿತ್ತು. ಈ ಕೃತಿಯನ್ನು ಅಭಿನವ ಪ್ರಕಾಶನ ಇವರು ೨೦೧೩ರಲ್ಲಿ ಮರುಮುದ್ರಣ ಮಾಡಲಾಗಿದೆ.

ಬೇಂದ್ರೆ ಕಾವ್ಯದಲ್ಲಿ ಪ್ರೇಮದ ಆವಿಷ್ಕಾರ ಸ್ವರೂಪಗಳು : ಬೇಂದ್ರೆ ಅವರ ಕವನಗಳಲ್ಲಿ ಇರುವ ಜೀವನಾನುಭವ ಹಾಗೂ ಲೋಕವನ್ನು ಅರಿಯುವ ಪ್ರಯತ್ನ ಮಾಡಿದ್ದಾರೆ. ಸಂಸ್ಕೃತಿಯಲ್ಲಿ ನವೋದಯದ ಸತ್ವಗಳು ಪ್ರಕಟಗೊಳ್ಳುವಾಗ ಸ್ಫುರಿಸುವ ಲಕ್ಷಣಗಳ ಚರ್ಚೆಯ ಹಿನ್ನೆಲೆಗಳಲ್ಲಿ ಈ ಕವನಗಳ ಬಗ್ಗೆ ವಿಚಾರವನ್ನು ಮಾಡಲಾಗಿದೆ.

೩೧. ೧೯೮೭., ೨೦೧೪., ಕೆ. ವಿ. ತಿರುಮಲೇಶ್., ಬೇಂದ್ರೆಯವರ ಕಾವ್ಯಶೈಲಿ

ಅಭಿನವ ಪ್ರಕಾಶನವು 'ಸರಸ್ವತಿ ನೆನಪು' ಎಂಬ ಮಾಲಿಕೆಯಲ್ಲಿ ಬೇಂದ್ರೆ ಅವರ ಸಾಹಿತ್ಯ ಕುರಿತು ಈಗಾಗಲೇ ಕ್ರೈಸ್ಟ್ ಕಾಲೇಜಿನ ಕನ್ನಡ ಸಂಘದ ಮೂಲಕ ಪ್ರಕಟಿತವಾದ ಹಾಗೂ ಇತರೆಡೆಗಳಲ್ಲಿ ಪ್ರಕಟಿಸಿದ ಪುಸ್ತಕಗಳನ್ನು ಮರುಮುದ್ರಣ ಮಾಡಿದೆ. ಕೆ. ವಿ. ತಿರುಮಲೇಶ್ ಅವರು ಬೇಂದ್ರೆ ಸಾಹಿತ್ಯ ಕುರಿತು ಬರೆದ ಲೇಖನಗಳನ್ನು 'ಬೇಂದ್ರೆಯವರ ಕಾವ್ಯಶೈಲಿ' ಎಂಬುದಾಗಿ ೧೯೮೭ರಲ್ಲಿ ಪ್ರಕಟಿಸಲಾಗಿತ್ತು. ಈ ಕೃತಿಯನ್ನು ಅಭಿನವ ಪ್ರಕಾಶನ ಇವರು ೨೦೧೩ರಲ್ಲಿ ಮರುಮುದ್ರಣ ಮಾಡಲಾಗಿದೆ.

ಬೇಂದ್ರೆಯವರ ಕಾವ್ಯಶೈಲಿ: ಈ ಕೃತಿಯಲ್ಲಿ ಕೆ. ವಿ. ತಿರುಮಲೇಶ್ ಅವರು ಬೇಂದ್ರೆ ಸಾಹಿತ್ಯ ಕುರಿತು ೧೯೮೬ರಲ್ಲಿ ಬಸವನಗುಡಿ ನ್ಯಾಷನಲ್ ಕಾಲೇಜಿನಲ್ಲಿ ನೀಡಿದ ಉಪನ್ಯಾಸದ ವಿಸ್ತೃತ ರೂಪವಿದು.

೩೨. ೧೯೮೭., ಶ್ರೀಧರ ಬಿ. ಎಚ್., ಪಸರಿಪ ಕನ್ನಡಕ್ಕೊಡೆಯನೀಗ ದರಾಂಕಿತ ಬೇಂದ್ರೆ

ಪಸರಿಪ ಕನ್ನಡಕ್ಕೊಡೆಯನೀಗ ದರಾಂಕಿತ ಬೇಂದ್ರೆ ಈ ಕೃತಿಯನ್ನು ಶ್ರೀಧರ ಬಿ. ಎಚ್ ಅವರು ರಚಿಸಿದ್ದಾರೆ. ವಾಮನಬೇಂದ್ರೆಯವರು ಡಾ. ದ.ರಾ. ಬೇಂದ್ರೆ ಸಾಹಿತ್ಯ - ಸಿದ್ಧಾಂತ ಲೇಖನ ಮಾಲೆ-೧ ಈ ಹೆಸರಿನಲ್ಲಿ ೩೧-೧-೧೯೮೭ರಲ್ಲಿ ಸಂಪಾದಿಸಿದ್ದಾರೆ. ಈ ಕೃತಿಯನ್ನು

ಅಂಬಿಕಾತನಯದತ್ತ ವೇದಿಕೆ, ಶ್ರೀಮಾತಾ ಪ್ರಕಾಶನ, ಧಾರವಾಡ. ಬೇಂದ್ರೆ ಸಾಹಿತ್ಯ ಸಿದ್ಧಾಂತದ ವಿವಿಧ ಮುಖಗಳ ಪ್ರತಿಪಾದನೆಗಾಗಿ ರೂಪಿತವಾದ ಯೋಜನೆಯ ಕೃತಿ ಇದು. ಇದಕ್ಕೆ ಪಾಂಡುರಂಗ ಬೇಂದ್ರೆ ಅವರ ಪ್ರಕಾಶಕರ ನುಡಿ ಇದೆ. ಮುಖಪುಟದಲ್ಲಿ ಬೇಂದ್ರೆ ಅವರ ಚಿತ್ರವಿದೆ.

ಪಸರಿಪ ಕನ್ನಡಕ್ಕೊಡೆಯನೀಗ ದರಾಂಕಿತ ಬೇಂದ್ರೆ : ಕವಿತೆಗಳ ಆಶಯದೊಂದಿಗೆ ಬೇಂದ್ರೆಯವರ ವ್ಯಕ್ತಿತ್ವವನ್ನು ಪರಿಚಯಿಸುತ್ತಾ ಬೆಳಗು, ಪಾತರಗಿತ್ತಿ ಪಕ್ಕಾ, ಮಾಯಾಕಿನ್ನರಿ ಈ ಕವಿತೆಗಳ ಹಾಗೂ ನಾಕುತಂತಿ, ಗಂಗಾವತರಣ ಸಂಕಲನಗಳ ಕೆಲವು ಕವಿತೆಗಳ ವಿಮರ್ಶೆ ಇದೆ. ಅರವಿಂದರ ಪ್ರಭಾವ, ವೇದ– ಉಪನಿಷತ್ತುಗಳ ಅಧ್ಯಯನ ಹಾಗೂ ಅಳವಡಿಕೆ ಕುರಿತು ವಿಮರ್ಶೆ ಇದೆ.

ಸಂಪಾದಕರು ಪುಸ್ತಕ ಪ್ರಕಟಣೆಯ ಉದ್ದೇಶ ತಿಳಿಸುತ್ತಾ "ಜಾತಿ, ಮತ, ಸಾಹಿತ್ಯ ರಾಜಕೀಯ ಮೊದಲಾದ ವಿವಿಧ ಶಕ್ತಿಗಳ ಒತ್ತಡಗಳ ಮೂಲಕ ನಾಡು ಹರಿದು ಹಂಚಿ ಹೋಗುವುದುಂಟು ಮತ್ತು ಕೆಲವು ಮಾನವೀಯ ಮೌಲ್ಯಗಳ ಪ್ರತಿಪಾದಕ ಹೋರಾಟಗಳ ಮೂಲಕ ನಾಡನ್ನು ಮತ್ತು ನಾಡಿಗರನ್ನು ಒಂದು ಮಾಡುವ ಸಾಧ್ಯತೆ ಉಂಟು. ಇಂದು ಭೌಗೋಳಿಕ, ದೈಹಿಕ ಮತ್ತು ರಾಜಕೀಯ ಐಕ್ಯದ ಚದುರಂಗದಾಟ ನಡೆದಿದೆ. ಇದರಿಂದ ಮಾನವೀಯತೆಯು ಕುಸಿದು ಶಿಥಿಲಗೊಳ್ಳುತ್ತಲಿದೆ. ಹೀಗಾಗಬಾರದು ಎಂಬುದೇ ಬೇಂದ್ರೆ ಸಿದ್ಧಾಂತದ ಕೇಂದ್ರ ಬಿಂದು. ನವಮಾನವತೆಯ ಉದಯವೆಂದರೆ– ವಿವಿಧ ಜ್ಞಾನಶಾಖೆಯಲ್ಲಿಯ ಮಾನವೀಯ ಐಕ್ಯವನ್ನು ಕಂಡು, ಆ ಪ್ರಜ್ಞೆಯಿಂದ ಪುಷ್ಟಗೊಂಡ ನವಸಮಾಜದ ಸೃಷ್ಟಿ. ಆದುದರಿಮದ ಇದಕ್ಕಾಗಿಯೇ ಬೇಂದ್ರೆಯವರು ತಮ್ಮ ಲೇಖನಿಯಿಂದ ಹೋರಾಡಿದರು. ಆ ಹೋರಾಟದ ಹಾಗೂ ಸಿದ್ಧಾಂತದ ಸ್ಪಷ್ಟವಾದ ಚಿತ್ರವನ್ನು ಈ ಬೇಂದ್ರೆ ಸಾಹಿತ್ಯ ಸಿದ್ಧಾಂತಮಾಲೆಯ ಪುಸ್ತಿಕೆಗಳ ಪ್ರಕಟಣೆಯ ಮೂಲಕ ರೂಪಿಸುವ ಉದ್ದೇಶ ನಮ್ಮದಾಗಿದೆ" ಎಂಬ ಸಂಪಾದಕರ ನುಡಿಯು ಬೆನ್ನುಡಿಯಲ್ಲೂ ಸೇರಿದೆ.

೩೩. ೧೯೮೮., **ಶೇಷಗಿರಿರಾವ್ ಎಲ್. ಎಸ್., ಬೇಂದ್ರೆಯವರು ಮತ್ತು ನವೋದಯ ಕಾವ್ಯ**

ಬೇಂದ್ರೆಯವರ ಜನ್ಮದಿನಾಚರಣೆಯ ನಿಮಿತ್ತ ೩೧–೦೧–೧೯೮೭ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಶೇಷಗಿರಿರಾವ್ ಎಲ್. ಎಸ್ ಅವರು ಮಾಡಿದ ೨೫ ಪುಟದ ಭಾಷಣವಿದು. ೧೯೮೮ರಲ್ಲಿ ವಿಶ್ವವಿದ್ಯಾಲಯವೇ ಕಿರುಹೊತ್ತಿಗೆಯಂತೆ ಪ್ರಕಟಿಸಿದೆ.

ಬೇಂದ್ರೆಯವರು ಮತ್ತು ನವೋದಯ ಕಾವ್ಯ : ನವೋದಯ ಯುಗದ ಕಾವ್ಯದ ಸಂದರ್ಭದಲ್ಲಿ ಬೇಂದ್ರೆಯರನ್ನು ಗಮನಿಸುವುದು ಈ ಭಾಷಣದ ಮುಖ್ಯ ಉದ್ದೇಶವಾಗಿದೆ. ಬೇಂದ್ರೆ ಅವರ ಜೊತೆಗೆ ನವೋದಯ ಕವಿಗಳಾದ ಕುವೆಂಪು, ಪು.ತಿ.ನ, ವಿ.ಸೀ, ನರಸಿಂಹಸ್ವಾಮಿ ಕೆ. ಎಸ್ ಮೊದಲಾದವರ ಕವಿಗಳನ್ನು ತೌಲನಿಕವಾಗಿ ಇಲ್ಲಿ ಅಧ್ಯಯನ ಮಾಡಲಾಗಿದೆ. ಮನದನ್ನೆ, ಸಖೀಗೀತ ಮೊದಲಾದ ಕವಿತೆಗಳ ಚಿಂತನೆ ಮಾಡಿದ್ದಾರೆ.

೩೪. ೧೯೮೯., **ಸುಮತೀಂದ್ರ ನಾಡಿಗ., ಬೇಂದ್ರೆಯವರ ಕಾವ್ಯದ ವಿಭಿನ್ನ ನೆಲೆಗಳು**

ಬೇಂದ್ರೆಯವರ ಕಾವ್ಯದ ವಿಭಿನ್ನ ನೆಲೆಗಳು ಎಂಬ ಕೃತಿಯು ಸುಮತೀಂದ್ರ ನಾಡಿಗ ಇವರ ಸಂಶೋಧನಾ ಪ್ರಬಂಧವಾಗಿದೆ. ಸುವಿದ್ಯಾ ಪ್ರಕಾಶನ ಬೆಂಗಳೂರು ಇವರು ೧೯೮೯ರಲ್ಲಿ ಪ್ರಕಟಿಸಿದ್ದಾರೆ.

ಬೇಂದ್ರೆಯವರ ಕಾವ್ಯದ ವಿಭಿನ್ನ ನೆಲೆಗಳು : ಸುಮತೀಂದ್ರ ನಾಡಿಗರ ಈ ಸಂಶೋಧನಾ ಕೃತಿಗೆ ಚೆನ್ನವೀರ ಕಣವಿ ಅವರು ಮುನ್ನುಡಿ ಬರೆದಿದ್ದಾರೆ. ಮುಖಪುಟದಲ್ಲಿ ಎಂ. ಎಸ್ ಮೂರ್ತಿ ಅವರು ರಚಿಸಿದ ಬೇಂದ್ರೆ ಅವರ ರೇಖಾಚಿತ್ರವಿದೆ. ಈ ಕೃತಿಯನ್ನು ನಾಲ್ಕು ನೆಲೆಗಳಲ್ಲಿ ಅಧ್ಯಯನಮಾಡಿದ್ದಾರೆ. ಭಾಷೀಯ ನೆಲೆ, ಪ್ರಾಯೋಗಿಕ ನೆಲೆ, ಪ್ರಸಿದ್ಧಿಯ ನೆಲೆ, ಸಿದ್ಧಿಯ ನೆಲೆ ಈ ವಿಚಾರಗಳ ಮೂಲಕ ಬೇಂದ್ರೆ ಸಾಹಿತ್ಯವನ್ನು ಸಂಶೋಧನಾ ದೃಷ್ಟಿಯಿಂದ ಅಧ್ಯಯನಮಾಡಿದ್ದಾರೆ.

೩೫. ೧೯೮೯., ಗೋಪಾಲ ಸೋಹೊನಿ., ಗರಿ ಬರೆದವನ ವಿವಿಧ ಪರಿ

ಗೋಪಾಲ ಸೋಹೊನಿ ಅವರು ಬರೆದ ಬೇಂದ್ರೆ ನಮನ ಕೃತಿ ಇದಾಗಿದೆ. ೧೯೮೯ರಲ್ಲಿ ಹುಬ್ಬಳಿಯ ವಿನಾಯಕ್ ಪ್ರಿಂಟಿಂಗ್ ಪ್ರೆಸ್ ಅವರು ಇದನ್ನು ಮುದ್ರಿಸಿದ್ದಾರೆ. ಎನ್. ಕೆ. ಕುಲಕರ್ಣಿ ಅವರು ಈ ಕೃತಿಗೆ ಮುನ್ನುಡಿಯನ್ನು ಬರೆದಿದ್ದಾರೆ. ಒಟ್ಟು ಮೂವತ್ತೆರಡು ವಿಭಾಗದಲ್ಲಿ ವ್ಯಕ್ತಿಚರಿತ್ರೆ ಹಾಗೂ ಸಾಹಿತ್ಯ ಚರ್ಚೆಯನ್ನು ನೀಡಿದ್ದಾರೆ. ತನ್ನ ಹಾಗೂ ಬೇಂದ್ರೆ ಅವರ ಒಡನಾಟದ ಕುರಿತು ನೆನಪುಗಳಿವೆ. ಬೇಂದ್ರೆ ಅವರು ಸೊಲ್ಲಾಪುರದಲ್ಲಿ ಇರುವಾಗ ಪ್ರಾರಂಭವಾದ ಇವರ ಒಡನಾಟ ಬೇಂದ್ರೆ ಅವರ ಕೊನೆಯ ತನಕ ಬೆಳೆದು ಬಂದ ಬಗೆಯಲ್ಲಿ ತಾನು ಪಡೆದುಕೊಂಡ ವಿಶ್ವಾಸ, ಅಧ್ಯಯನವನ್ನು ತಿಳಿಸಿದ್ದಾರೆ.

'ಗರಿ' ಬರೆದವನ ವಿವಿಧ ಪರಿ : ಸೊಲ್ಲಾಪುರ ಮತ್ತು ಧಾರವಾಡದಲ್ಲಿ ಬೇಂದ್ರೆ ಅವರೊಂದಿಗೆ ತನ್ನ ಒಡನಾಟವನ್ನು ಅವರ ಸಾಹಿತ್ಯ ಅಧ್ಯಯನದ ಮೂಲಕ ಅಭಿವ್ಯಕ್ತ ಪಡಿಸಿದ್ದಾರೆ. ಮುನ್ನಡಿಯಲ್ಲಿ ತಿಳಿಸುವಂತೆ "ಬಂಧು ಮಿತ್ರ ಗೋಪಾಲ ಸೋಹೊನಿ ಅವರ ವಿವಿಧ ಪರಿಗಳಲ್ಲಿ ಭಾವೈಕ್ಯ ಮೊದಲನೆಯದು., ಎಲ್ಲ ಉಳಿದ ಪರಿಗಳಲ್ಲೂ ಹಾಸು ಹೊಕ್ಕಾಗಿ ಹಬ್ಬಿರುವದು. ಇಂದು ಗೋಪಾಲ ಸೋಹೊನಿ ಅವರು ಮಾಡುತ್ತಿರುವ ಕಾರ್ಯ ಕರ್ನಾಟಕ ಮಹಾರಾಷ್ಟ್ರ ಉಭಯ ಸರ್ಕಾರಗಳಿಂದ ಪ್ರಶಸ್ತಿ ಪುರಸ್ಕಾರರ್ಹವಾಗಿದೆ. ಕರ್ನಾಟಕ ಮಹಾರಾಷ್ಟ್ರಗಳ ಸಮಸ್ಯೆಯನ್ನು ರಾಜಕೀಯ ಉದ್ದೇಶದಿಂದ ಪ್ರೇರಿತವಾದ ಸರಕಾರಗಳು ಬಗೆಹರಿಸುವುದು ಸಾಧ್ಯವಾಗದಿದ್ದಲ್ಲಿ ನಮ್ಮ ಸೋಹೊನಿ ಅವರಂತಹ ಸ್ನೇಹಜೀವಿ ಆಡಾಡುತ್ತಾ ಬಿಡಿಸಬಲ್ಲರು." ಎಂದು ಎನ್. ಕೆ. ಕುಲಕರ್ಣಿ ಅವರು ತಿಳಿಸಿದ್ದಾರೆ.

೩೬. ೧೯೯೧., ೨೦೧೩., ಗೋಪಾಲಕೃಷ್ಣ ಅಡಿಗ., ಬೇಂದ್ರೆಯವರ ಕಾವ್ಯ

ಅಭಿನವ ಪ್ರಕಾಶನವು 'ಸರಸ್ವತಿ ನೆನಪು' ಎಂಬ ಮಾಲಿಕೆಯಲ್ಲಿ ಬೇಂದ್ರೆ ಅವರ ಸಾಹಿತ್ಯ ಕುರಿತು ಈಗಾಗಲೇ ಕ್ರೈಸ್ಟ್ ಕಾಲೇಜಿನ ಕನ್ನಡ ಸಂಘದ ಮೂಲಕ ಪ್ರಕಟಿತವಾದ ಹಾಗೂ ಇತರೆಡೆಗಳಲ್ಲಿ ಪ್ರಕಟಿಸಿದ ಕೃತಿಗಳನ್ನು ಮರುಮುದ್ರಣ ಮಾಡಿದೆ. 'ಬೇಂದ್ರೆಯವರ ಕಾವ್ಯ' ಕೃತಿಯನ್ನು ೧೯೯೧ರಲ್ಲಿ ಪ್ರಟಿತವಾಗಿ, ಮರುಮುದ್ರಣವಾಗಿ ೨೦೧೩ರಲ್ಲಿ ಪ್ರಕಟಿಸಿದ್ದಾರೆ.

ಬೇಂದ್ರೆಯವರ ಕಾವ್ಯ : ಈ ಕೃತಿಯನ್ನು ಸಹಜ ಜ್ಞಾನದ ಹೊನಲು ಎಂಬ ಶೀರ್ಷಿಕೆಯೊಂದಿಗೆ ಪ್ರಕಟಿಸಿದ್ದಾರೆ. ಬೇಂದ್ರೆ ಅವರ ಸಾಹಿತ್ಯ ಕುರಿತು 'ಬೇಂದ್ರೆಯವರ ಕಾವ್ಯ' ಹಾಗೂ ೧೯೫೨ರಲ್ಲಿ ರಚಿಸಿದ 'ಬೇಂದ್ರೆಯವರ ಉಯ್ಯಾಲೆ' ಲೇಖನವು ಅತ್ಯಂತ ವಿಸ್ತಾರವಾದ ವಿಮರ್ಶೆಯನ್ನು ಒಳಗೊಂಡಿದೆ. ಈ ಎರಡೂ ವಿಮರ್ಶೆಗಳು ಈ ಕೃತಿಯಲ್ಲಿ ಸೇರಿವೆ.

೩೭. ೧೯೯೧., ೨೦೦೯., ಎನ್. ಕುಲಕರ್ಣಿ., ದ.ರಾ. ಬೇಂದ್ರೆ

ಕನ್ನಡ ಸಾಹಿತ್ಯ ಪರಿಷತ್ತು ಈಗಾಗಲೇ ಪ್ರಕಟಿತ ಕೃತಿಗಳನ್ನು ೨೦೦೯ರಲ್ಲಿ ೭೫ನೇ ಅಖಿಲ ಭಾರತ ಅಮೃತಮಹೋತ್ಸವ ಕನ್ನಡ ಸಾಹಿತ್ಯ ಸಮ್ಮೇಳನ, ಚಿತ್ರದುರ್ಗದ ಸಲುವಾಗಿ ಮರುಮುದ್ರಣಮಾಡಿದೆ. ಬೇಂದ್ರೆ ಅವರ ಜೀವನ ಹಾಗೂ ಸಾಹಿತ್ಯ ರಚನೆ ಕುರಿತು ಅನುಭವಾತ್ಮಕ ಕಥನದಂತೆ ರಚಿಸಿದ್ದಾರೆ.

ದ.ರಾ.ಬೇಂದ್ರೆ : ಬೇಂದ್ರೆ ಅವರ ಜೀವನ ಹಾಗೂ ಸಾಹಿತ್ಯವನ್ನು ಅವರ ಕಾವ್ಯದ ಮೂಲಕವೇ ಗಮನಿಸುವ ಜೊತೆಗೆ ತಮ್ಮ ಒಡನಾಟಕ್ಕೆ ದೊರಕಿದ ಎಲ್ಲಾ ಅನುಭವಾತ್ಮಕ ಕಥನಗಳನ್ನು ಚರಿತ್ರೆಯ ಮಾದರಿಯಲ್ಲಿ ಅಭಿವ್ಯಕ್ತಗೊಳಿಸಿದ್ದಾರೆ. ಬೇಂದ್ರೆ– ಜೀವನ, ಕಾವ್ಯ, ಸಾಹಿತ್ಯ., ಬೇಂದ್ರೆ ಕಾವ್ಯ – ಬದುಕು ಮತ್ತು ಕಾವ್ಯ ಯಜ್ಞ., ಬೇಂದ್ರೆ ಪ್ರತಿಮೆ– ಕಾವ್ಯ ಭಾಷೆ., ಬೇಂದ್ರೆ ನಾಟಕಗಳು ಈ ಅಧ್ಯಾಯಗಳ ಮೂಲಕ ವಿಸ್ತಾರವಾದ ಅಧ್ಯಯನ ನೀಡಿದ್ದಾರೆ.

೩೮. ೧೯೯೩., ಶ್ರೀಧರ .ಬಿ. ಎಚ್., ಬನ್ನಂಜೆ ಗೋವಿಂದಚಾರ್ಯ., ಬೇಂದ್ರೆ

ಉಡುಪಿಯ ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜಿನ ಮುದ್ದಣ ಸ್ಮಾರಕ ಸಾಹಿತ್ಯೋತ್ಸವದ ಸರಣಿಯಲ್ಲಿ ನವೋದಯ ಪ್ರಚಾರ ಪುಸ್ತಕಮಾಲೆಯನ್ನು ತರುವ ಕಾರ್ಯವನ್ನು ೧೯೫೬ರಲ್ಲಿ ಪ್ರಾರಂಭಿಸಿದರು. ಅದಕ್ಕೆ ಮರುಹುಟ್ಟು ನೀಡಿದ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ ಇವರು ೧೯೯೩ರಲ್ಲಿ ಜ್ಞಾನಪೀಠ ಪುರಸ್ಕೃತ ಐದು ಜನರ ಜೀವನ ಕಿರುಚಿತ್ರವನ್ನು ಬರಹ ರೂಪದಲ್ಲಿ ತಂದಿದ್ದಾರೆ. ಶಿವರಾಮ ಕಾರಂತರ ಕುರಿತು ವೀ ಸೀ., ದ. ರಾ. ಬೇಂದ್ರೆ ಅವರನ್ನು ಕುರಿತು ಬಿ. ಎಚ್. ಶ್ರೀಧರ., ಮಾಸ್ತಿಯವರ ಕುರಿತು ಎಲ್. ಎಸ್. ಶೇಷಗಿರಿರಾವ್., ಕುವೆಂಪು ಅವರು ಕುರಿತು ಸುಜನಾ ಹಾಗೂ ವಿ. ಕೃ. ಗೋಕಾಕ್ ಕುರಿತು ಎನ್ಕೆ ಅವರು ರಚಿಸಿದ್ದಾರೆ. ಬೇಂದ್ರೆ ಅವರನ್ನು ಕುರಿತು ಸರಣಿಯ ಎರಡನೆಯ ಪುಸ್ತಕವಾಗಿ ೧೯೯೩ರಲ್ಲಿ ಪ್ರಕಟಿಸಿದ್ದಾರೆ.

ಬೇಂದ್ರೆ : ಶ್ರೀಧರ ಬಿ. ಎಚ್ ಅವರು ಎಂಟು ವಿಭಾಗಗಳಲ್ಲಿ ಈ ಕೃತಿಯನ್ನು ರಚಿಸಿದ್ದಾರೆ. ಸ್ಫೂರ್ತಿ, ಸಂಸ್ಕಾರ ಮತ್ತು ಆವರಣ, ಛಂದೋ ವೈಶಿಷ್ಯ, ನಾದಲೀಲೆ., ಚತುರೋಕ್ತಿ ವೈಭವ, ವಿಡಂಬನ–ಸಾಮರ್ಥ್ಯ., ರಸ ದರ್ಶನ., ಲೋಕ ಸಾಮರಸ್ಯ ಎಂಬ ಶೀರ್ಷಿಕೆಗಳೊಂದಿಗೆ ರಚಿಸಿದ್ದಾರೆ. ಬೇಂದ್ರೆ ಅವರ ಕವಿತೆಗಳ ಮೂಲಕ ವ್ಯಕ್ತಿತ್ವವನ್ನು ಕಂಡುಕೊಳ್ಳುವ ವಿಧಾನವನ್ನು ಅನುಸರಿಸಿದ್ದಾರೆ. ಇಲ್ಲಿ ೬೬ ಕವಿತೆಗಳನ್ನು ಉದಾಹರಣೆಗಾಗಿ ಬಳಸಿದ್ದಾರೆ. ಅನುಬಂಧದ ರೂಪದಲ್ಲಿ ನಿ. ಶ್ರೀಶ ಬಲ್ಲಾಳ ಅವರ ಆಕಾಶವಾಣಿಯ ಭಾಷಣ 'ದ. ರಾ. ಬೇಂದ್ರೆ ಮತ್ತು ಕನ್ನಡ' ಹಾಗೂ ಬನ್ನಂಜೆ ಗೋವಿಂದಾಚಾರ್ಯರ 'ಬೇಂದ್ರೆ : ಒಂದು ಸಮೀಕ್ಷೆ' ಎಂಬ ಪ್ರಬಂಧ ಕೂಡ ಈ ಕೃತಿಯಲ್ಲಿ ಸೇರಿದೆ.

೩೯. ೧೯೯೪., ಮಂಗಳಾ ಪ್ರಿಯದರ್ಶಿನಿ., ಬೇಂದ್ರೆ

ಕರ್ನಾಟಕ ಸಾಹಿತ್ಯ ಅಕಾಡೆಮಿಯವರು 'ಜ್ಞಾನಪೀಠ ಪ್ರಶಸ್ತಿ ವಿಜೇತರು'ಮಾಲೆಯನ್ನು ಸಾಮಾನ್ಯ ಓದುಗರನ್ನು ಗಮನದಲ್ಲಿಟ್ಟುಕೊಂಡು ಸಾಹಿತ್ಯ ವಿದ್ಯಾರ್ಥಿಗಳಿಗೆ ಬೇಕಾದ ಮೂಲ ಸಾಮಗ್ರಿಯನ್ನು ಒದಗಿಸುವ ಅವರ ಅಭಿರುಚಿ ವಿಸ್ತರಣೆಗೆ ಸಹಾಯಕವಾಗುವ ನಿಟ್ಟಿನಲ್ಲಿ ಕಿರುಪುಸ್ತಕ ಪ್ರಕಟಿಸಲಾಗಿದೆ. ಮಂಗಳಾ ಪ್ರಿಯದರ್ಶಿನಿ ಅವರು ಬರೆದಿರುವ ಈ ಕೃತಿಗೆ ಬರಗೂರು ರಾಮಚಂದ್ರಪ್ಪ ಅವರ ಮುನ್ನುಡಿ ಬರೆಹವಿದೆ.

ಬೇಂದ್ರೆ : ಬೇಂದ್ರೆಯವರ ವ್ಯಕ್ತಿತ್ವ ಹಾಗು ಸಾಹಿತ್ಯವನ್ನು ಪರಿಚಯಿಸುವ ಈ ಕೃತಿಯಲ್ಲಿ ಒಟ್ಟು ಏಳು ಅಧ್ಯಾಯಗಳಲ್ಲಿ ಚರ್ಚಿಸಿದ್ದಾರೆ. 'ಜೀವನ ಮತ್ತು ಹಿನ್ನೆಲೆ, ಬೇಂದ್ರೆಯವರ ಕಾವ್ಯಕ್ಕೆ ಹಿನ್ನೆಲೆಯಾದ ಸಾಂಸ್ಕೃತಿಕ ಸಂದರ್ಭ ಹಾಗೂ ಸಾಹಿತ್ಯಿಕ ಸಂದರ್ಭ, ಕಾವ್ಯಯೋಗ, ಗದ್ಯ, ನಾಟಕ, ಹರಟೆಗಳು–ಕಥೆಗಳು, ಅನುವಾದಗಳು' ಎಂಬುದಾಗಿ ವಿಭಾಗಿಸಿದ್ದಾರೆ. ಬೇಂದ್ರೆ ಅವರ ಕಾವ್ಯರಚನೆಗೆ ಹಿನ್ನಲೆಯಾಗಿ ವಸಾಹತು ಶಾಹಿ ಸಂದರ್ಭದ ಪ್ರಮುಖ ಕಾರಣಗಳನ್ನು ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಎಂಬುದಾಗಿ ಗಮನಿಸಿದ್ದಾರೆ. "ಬೇಂದ್ರೆಯವರು ಬರೆಯುವ ಕಾಲದಲ್ಲಿ ಬ್ರಿಟೀಷರ ದಾಸ್ಯದಲ್ಲಿದ್ದ ಭಾರತ ಸ್ವತಂತ್ರದೇಶವಾಗುವ ಹೋರಾಟದಲ್ಲಿ ಮಗ್ನವಾಗಿತ್ತು. ಗಾಂಧೀಜಿಯವರನ್ನು ಅಂಹಿಂಸಾ ಚಳುವಳಿ, ರಾಷ್ಟ್ರೀಯ ಆಂದೋಲನದ ನಾಯಕರನ್ನಾಗಿ ಜನತೆ ಸ್ವೀಕರಿಸಿತ್ತು. ಒಂದು ಕಡೆ ಭಾರತದ ಸ್ವಾತಂತ್ರ್ಯಾಂದೋಳನ, ಇನ್ನೊಂದೆಡೆ ಪರಕೀಯರ ಆಳ್ವಿಕೆ, ದಾಸ್ಯದ ಒತ್ತಡ. ವಸಾಹತು ಸಂಸ್ಕೃತಿಯ ಇಂಗ್ಲೀಷ್ ವಿದ್ಯಾಭ್ಯಾಸ, ಅವರ ಬರವಣಿಗೆಗೆ ಹೊಸ ಆಯಾಮಗಳನ್ನು ಕಲ್ಪಿಸಿಕೊಡುವ ಸಂದರ್ಭದಲ್ಲಿ ಗಾಂಧೀಜಿಯವರ ಪ್ರಭಾವದಿಂದ ಪ್ರಾದೇಶಿಕ ಸಂಸ್ಕೃತಿಯನ್ನು ಅರಿತುಕೊಳ್ಳುವ ಪ್ರವೃತ್ತಿಯೂ ಉಂಟಾಯಿತು. ಪರದೇಶಿಯರ, ಪರಸಂಸ್ಕೃತಿ, ಪರಭಾಷೆಗಳ ಒತ್ತು ಬಿದ್ದಷ್ಟೂ ನಮ್ಮ ಸಂಸ್ಕೃತಿ,

ಭಾಷೆ, ಪ್ರಾದೇಶಿಕತೆಗಳನ್ನು ಕಾಪಾಡಿಕೊಳ್ಳುವ ತೀವ್ರತೆ ಉಂಟಾಯಿತು. ಹೀಗಾಗಿಯೇ ಬೇಂದ್ರೆಯವರು ರಾಷ್ಟ್ರೀಯತೆ ಹಾಗೂ ಪ್ರಾದೇಶಿಕತೆ – ಈ ಎರಡೂ ಅಂಶಗಳನ್ನು ಒಟ್ಟೊಟ್ಟಿಗೆ ಸ್ವೀಕರಿಸುವ ಪ್ರಯತ್ನಮಾಡುತ್ತಾರೆ." ಹೀಗೆ ವಸಾಹತು ಸಂದರ್ಭದ ರಾಷ್ಟ್ರೀಯ ಚಳುವಳಿಗಳ ಪ್ರಭಾವವನ್ನು ಇಲ್ಲಿ ಕೆಲವು ಕವಿತೆಗಳ ಮೂಲಕ ಅಭಿವ್ಯಕ್ತಪಡಿಸಿದ್ದಾರೆ.

೪೦. ೧೯೯೬., ದೇ. ಜವರೇಗೌಡ(ಸಂ)., ಪುಸ್ತಕ ಪ್ರಪಂಚ

ಬೇಂದ್ರೆ ಅವರಿಗೆ ನೂರುವರ್ಷ ತುಂಬುವ ಕಾರಣದಿಂದ 'ಪುಸ್ತಕ ಪ್ರಪಂಚ'ವು ವಿಶೇಷ ಸಂಚಿಕೆಯನ್ನು ೧೯೯೬ರಲ್ಲಿ (ಸಂಪುಟ ೪೬, ಸಂಚಿಕೆ ೨–೩, ನವಂಬರ್–ಡಿಸೆಂಬರ್) ಪ್ರಕಟಿಸಿತು. ಈ ಸಂಚಿಕೆಯಲ್ಲಿ ದೇ. ಜವರೇಗೌಡ ಅವರು ಪ್ರಧಾನ ಸಂಪಾದಕರಾಗಿ, ಚಂದ್ರಶೇಖರಾರಾಧ್ಯ ಅವರು ಸಂಪಾದಕರಾಗಿ ಕಾರ್ಯನಿರ್ವಹಿಸಿದ್ದಾರೆ.

ಪುಸ್ತಕ ಪ್ರಪಂಚ: ಈ ವಿಶೇಷ ಸಂಚಿಕೆಯಲ್ಲಿ ಹದಿನೆಂಟು ಲೇಖನಗಳಿವೆ. ಮೀನಾ ವಾಂಗೀಕರ ಅವರ 'ದ.ರಾ. ಬೇಂದ್ರೆ ಮರಾಠಿ ಕನ್ನಡದ ಸಂಗಮತೀರ್ಥ', ಲತಾ ರಾಜಶೇಖರ ಅವರ 'ದ.ರಾ.ಬೇಂದ್ರೆ', ಎನ್ಕೆ ಅವರ 'ಬೇಂದ್ರೆ ವ್ಯಕ್ತಿಚಿತ್ರ', ಚಂದ್ರಶೇಖರಾರಾಧ್ಯ ಅವರ 'ಬೇಂದ್ರೆ ಅವರಿಂದ ಪುಸ್ತಕ ಭಂಡಾರ ಉದ್ಘಾಟನೆ', ಆರ್. ರಾಮಕೃಷ್ಣ ಅವರ ದ.ರಾ.ಬೇಂದ್ರೆ : ಶಬ್ದಗಾರುಡಿಗ', ಎಂ. ರಾಜಗೋಪಾಲಾಚಾರ್ಯ ಅವರ 'ಬೇಂದ್ರೆ ಅವರ ಕಾವ್ಯದಲ್ಲಿ ಸಂಗೀತಪ್ರಜ್ಞೆ', ಜಿ.ಟಿ. ನಾರಾಯಣರಾವ್ ಅವರ 'ಬೇಂದ್ರೆ, ವಿಜ್ಞಾನ ಮತ್ತು ನಾನು', ಕೆ. ಮೊಹಮ್ಮದ್ ಷರೀಫ್ ಅವರ 'ದತ್ತಾತ್ರೇಯ ರಾಮಚಂದ್ರ ಬೇಂದ್ರೆ', ಕೆ. ಸಚ್ಚಿದಾನಂದಯ್ಯ ಅವರ 'ಅಂಬಿಕಾತನಯ ದತ್ತ', ಕು.ಶಿ. ಹರಿದಾಸಭಟ್ಟ ಅವರ ಕಟು ಮಧುರ ಆಖ್ಯಾನ–ವರಕವಿಯೊಡನಾಟದಲ್ಲಿ', ಎನ್.ಶ್ರೀಶ ಬಲ್ಲಾಳ ಅವರ 'ಬೇಂದ್ರೆಯವರೊಡನೆ ಕಳೆದ ಕೆಲವು ರಸನಿಮಿಷಗಳು', ಲಕ್ಷ್ಮೀನಾರಾಯಣ ಅರೋರಾ ಅವರು 'ಬೇಂದ್ರೆಯವರ ಕಾವ್ಯಭಾಷಾಂತರ', ಜಿ.ಕೃಷ್ಣಪ್ಪ ಅವರ 'ಬೇಂದ್ರೆಯವರ ಕಾವ್ಯದಲ್ಲಿ ಒಲುಮೆಯ ಕಿಚ್ಚು', ಸಿ.ಪಿ.ಕೃಷ್ಣಕುಮಾರ ಅವರ 'ಬೇಂದ್ರೆ ಅವರ ಕೆಲವು ಕವನಗಳು', ಕೆ. ಸುಬ್ರಮಣ್ಯಭಟ್ಟ ಅವರ 'ಶಾಂತಕವಿಗಳ ವಿಶ್ರಾಂತಿ', ಸೀತಾರಾಮ ಜಾಗೀರ್ ದಾರ್ 'ಬೇಂದ್ರೆಯವರ ಮೇಘದೂತ', ಎನ್. ಎಸ್. ಲಕ್ಷ್ಮೀನಾರಾಯಣಭಟ್ಟ ಅವರ 'ಕೊನೆಯ ಬಲ್ಲವರಾರು ಕಾಮಾಕ್ಷಿಯೇ?', ನಿ. ಮುರಾರಿ ಬಲ್ಲಾಳ ಅವರ 'ಬೇಂದ್ರೆಯವರ ಜೀವನದರ್ಶನ' ಈ ಎಲ್ಲಾ ಲೇಖನಗಳು ಈ ಪುಸ್ತಕ ಪ್ರಪಂಚದಲ್ಲಿ ಪ್ರಕಟಗೊಂಡಿವೆ. ಈ ಪತ್ರಿಕೆಯಲ್ಲಿ ಬೇಂದ್ರೆ ಅವರ ವೈಯಕ್ತಿಕ ಬದುಕಿನ ಕೆಲವಿ ಚಿತ್ರಗಳಿವೆ. ಮುಖಪುಟದಲ್ಲಿ ಬೇಂದ್ರೆ ಅವರ ಚಿತ್ರ, ದೇ. ಜವರೇಗೌಡರ ಸಂಪಾದೀಕ ನುಡಿಗಳ ನಂತರ ೧೯೧೯ರ ಬೇಂದ್ರೆಯವರ ವಿವಾಹ ಸಂದರ್ಭದ ಚಿತ್ರ, ೧೯೨೫ರ ಬಿ.ಎಂ.ಶ್ರೀ ಹಾಗೂ ಇತರೆ ಹಿರಿಯ ವಿದ್ವಾಂಸರೊಂದಿಗೆ ಬೇಂದ್ರೆ, ದ.ರಾ. ಬೇಂದ್ರೆ ೩೦–೩೫ರ ವಯಸ್ಸಿನ ಚಿತ್ರ, ೧೯೬೦–೬೨ರ ಸುಮಾರಿನಲ್ಲಿ ಬೇಂದ್ರೆ ಅವರು ಗೋಕರ್ಣದ ಸಮುದ್ರ ತೀರದಲ್ಲಿ ಇರುವ ಚಿತ್ರ, ೧೯೬೬ರ ಸುಮಾರಿನ ಚಿತ್ರ ಈ ಎಲ್ಲಾ ಚಿತ್ರಗಳು ಪತ್ರಿಕೆಯ ಪ್ರಾರಂಭದಲ್ಲಿ ಸೇರಿಸಲಾಗಿದೆ.

೪೧. ೧೯೯೫., ಸೈಯದ್ ಖಾನ್ ಬಾಬು., ನಿರಾಭರಣ ಸುಂದರಿ

ವರಕವಿ ಡಾ॥ ದ.ರಾ ಬೇಂದ್ರೆ ಅವರ ನಿರಾಭರಣ ಸುಂದರಿ ಒಂದು ಅವಲೋಕನ ಎಂಬ ಕೃತಿಯನ್ನು ಸೈಯದ್ ಖಾನ್ ಬಾಬು ಅವರು ರಚಿಸಿದ್ದಾರೆ. ಪ್ರಥಮ ಮುದ್ರಣ; ೧೯೯೫., ಎರಡನೇ ಮುದ್ರಣ; ೧೯೯೭., ಈ ಕೃತಿಯ ಪ್ರಕಾಶಕರು ಚೇತನ ಬುಕ್ ಹೌಸ್, ಮೈಸೂರು. ಮುಖಪುಟದಲ್ಲಿ ಬೇಂದ್ರೆ ಅವರ ಚಿತ್ರವಿದೆ.

ಡಾ|| ದ.ರಾ ಬೇಂದ್ರೆಯವರ ನಿರಾಭರಣ ಸುಂದರಿ ಒಂದು ಅವಲೋಕನ : ಮೊದಲಿಗೆ ಬೇಂದ್ರೆ ಅವರ ಗಂಗಾವತರಣ ಸಂಕಲನದ 'ನಾನು' ಎಂಬ ಕವಿತೆ ಇದೆ. ಕೃತಿಯು ಬೇಂದ್ರೆ ಒಂದು ನೆನಪು, ಕಥಾನೋಟ, ಬೇಂದ್ರೆಯ ಕಥಾಶೈಲಿ, ಬೇಂದ್ರೆ ಕನ್ನಡವಾದಾಗ ಎಂಬ ನಾಲ್ಕು ಶೀರ್ಷಿಕೆಯ ವಿಶ್ಲೇಷಣೆ ಇದೆ. ಬೇಂದ್ರೆಯವರ ಬಾಲ್ಯ ಹಾಗೂ ಸಾಹಿತ್ಯ ಜೀವನದ ಪರಿಚಯ ಬೇಂದ್ರೆ ಒಂದು ನೆನಪು ಶೀರ್ಷಿಕೆಯಲ್ಲಿದೆ. ಕಥಾನೋಟದಲ್ಲಿ ನಿರಾಭರಣ ಸುಂದರಿಯ ಎಂಟು ಕಥೆಗಳ ವಿಶ್ಲೇಷಣೆ ಇದೆ. ಬೇಂದ್ರೆ ಕನ್ನಡವಾದಾಗ ಎಂಬ ಭಾಗದಲ್ಲಿ ಬೇಂದ್ರೆಯವರಿಗೆ ಕನ್ನಡ ಭಾಷೆಯ ಮೇಲೆ ಇದ್ದ ಆಸಕ್ತಿ ಹಾಗೂ ನಾಡಪ್ರೇಮವನ್ನು ವಿಶ್ಲೇಷಣೆ ಮಾಡಿದ್ದಾರೆ.

೪೨. ೧೯೯೫., ಲೀಲಾವತಿ ಎಂ.ಎನ್., ಸಖೀಗೀತ

ಚೇತನ ಬುಕ್ ಹೌಸ್ ಅವರು ೧೯೯೫ರಲ್ಲಿ ಪ್ರಕಟಿಸಿದ ಕೃತಿ ಇದು. ಜ್ಞಾನಪೀಠ ಪುರಸ್ಕೃತರಾದ ಬೇಂದ್ರೆ ಅವರನ್ನು ಪರಿಚಯಿಸುವ ದೃಷ್ಟಿಯಿಂದ ರಚನೆಗೊಂಡಿದೆ.

ಸಖೀಗೀತ : ಸಖೀಗೀತ ಕೃತಿಯನ್ನು ಅತ್ಯಂತ ಸಂಕ್ಷಿಪ್ತವಾಗಿ ಪರಿಚಯಿಸುವ ಈ ಕೃತಿಯಲ್ಲಿ ಬೇಂದ್ರೆ ಅವರ 'ಸಖೀಗೀತ' ಕೃತಿಯ ಪರಿಚಯ, ಬರಹದ ಶೈಲಿ, ಪ್ರಕೃತಿ ಚಿತ್ರಣ, ಶ್ರಾವಣದ ವರ್ಣನೆ, ಕವಿಚಿತ್ರಣ, ಹೆಣ್ಣಿನ ಪಾತ್ರದ ವೈವಿಧ್ಯತೆ, ಹಾಗೂ ಕೃತಿಯ ವಿಶ್ಲೇಷಣೆಯನ್ನು ನೀಡಿದ್ದಾರೆ.

೪೩. ೧೯೯೫., ರಾಘವೇಂದ್ರ ರಾವ್ ಎಚ್. ಎಸ್., ಹಾಡೆ ಹಾದಿಯ ತೋರಿತು

ರಾಘವೇಂದ್ರ ರಾವ್ ಅವರ ಸಂಶೋಧನ ಗ್ರಂಥ 'ದ.ರಾ. ಬೇಂದ್ರೆ–ಕುವೆಂಪು–ಪು.ತಿ.ನ ಕವಿತೆಗಳ ವಿಶಿಷ್ಟತೆಯ ಅಧ್ಯಯನ' ಈ ವಿಷಯ ಕುರಿತು ೧೯೯೨ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಪ್ರಬಂಧ ಮಂಡಿಸಿದರು. ಇವರಿಗೆ ಮಾರ್ಗದರ್ಶನ ಮಾಡಿದವರು ಜಿ. ಎಸ್. ಶಿವರುದ್ರಪ್ಪ ಅವರು. ಈ ಕೃತಿಯನ್ನು ೧೯೯೫ರಲ್ಲಿ ಕನ್ನಡ ಸಂಘ ಕ್ರೈಸ್ಟ್ ಕಾಲೇಜ್, ಬೆಂಗಳೂರು ಇವರು ಪ್ರಕಟಿಸಿದ್ದಾರೆ. ಈ ಕೃತಿಯನ್ನು ಎಚ್. ನರಸಿಂಹಯ್ಯ ಅವರಿಗೆ ಅರ್ಪಿಸಲಾಗಿದೆ. ಈ ಕೃತಿಯ ಸಂಪಾದಕರಾಗಿ ಟಿ. ಶ್ರೀನಿವಾಸರಾಜು ಕಾರ್ಯನಿರ್ವಹಿಸಿದ್ದಾರೆ. ಈ ಕೃತಿಯ ಆರಂಭದಲ್ಲಿ ರೆ|| ಫಾ|| ಡಾ. ಆಂತೋಣಿ ಕರಿಯಲ್ ಅವರು ಕ್ರೈಸ್ಟ್ ಕಾಲೇಜಿನ ಕನ್ನಡ ಸಂಘದ ಕಾರ್ಯವನ್ನು ಸ್ಮರಿಸಿದ್ದಾರೆ. ಈ ಕನ್ನಡ ಸಂಘವು ಪ್ರಕಟಿಸುತ್ತಿರುವ ನೂರನೇ ಕೃತಿಯಾಗಿರುವ ಈ ಕಾರ್ಯವು ಸಾರ್ಥಕ ಸಾಧನೆ ಎಂದಿದ್ದಾರೆ. ಕಾಲೇಜಿನ ಬೆಳ್ಳಿಹಬ್ಬದ ಸಂಭ್ರಮಕ್ಕೆ ಕನ್ನಡ ವಿಭಾಗವು ನಿರ್ವಹಿಸಿದ ಕಾರ್ಯವನ್ನು ಮೆಚ್ಚುತ್ತಾ ಶ್ರಮಿಸಿದ ಎಲ್ಲರನ್ನು ನೆನೆದಿದ್ದಾರೆ.

ಹಾಡೆ ಹಾದಿಯ ತೋರಿತು : ಈ ಕೃತಿಯು ಸಂಶೋಧನಾ ಪ್ರಬಂಧವಾಗಿದ್ದು ಬೇಂದ್ರೆ, ಕುವೆಂಪು, ಹಾಗೂ ಪುತಿನ ಅವರ ಕಾವ್ಯತತ್ತ್ವ, ಕಾವ್ಯ ವಸ್ತು, ಕಾವ್ಯಶಿಲ್ಪ, ಹಾಗೂ ಈ ಮೂವರ ಕವಿತೆಗಳ ತೌಲನಿಕ ಅಧ್ಯಯನ ನಡೆಸಿದ್ದಾರೆ. ನವೋದಯದ ಹಿನ್ನಲೆಯಲ್ಲಿ ಈ ಕವಿಗಳ ಕಾವ್ಯ ಸಮೀಕ್ಷೆಯು ಅತ್ಯಂತ ವಿಸ್ತಾರವಾಗಿ ಗಮನಿಸಿದ್ದಾರೆ.

೪೪. ೧೯೯೫., ೨೦೦೮., ಜಿ. ಕೃಷ್ಣಪ್ಪ., ಹಾಡುಹಕ್ಕಿ ಅಂಬಿಕಾತನಯದತ್ತ

ಜಿ. ಕೃಷ್ಣಪ್ಪ ಅವರ 'ಹಾಡುಹಕ್ಕಿ ಅಂಬಿಕಾತನಯದತ್ತ' ಎಂಬ ಕೃತಿಯು ಕಾಮಧೇನು ಪುಸ್ತಕ ಭವನ, ಬೆಂಗಳೂರು ಇವರು ೧೯೯೫ರಲ್ಲಿ ಪ್ರಕಟಿಸಿದ್ದಾರೆ. ೨೦೦೮ರಲ್ಲಿ ಮರುಮುದ್ರಣಗೊಂಡಿದೆ. ಈ ಕೃತಿಗೆ ವಾಮನಬೇಂದ್ರೆ ಅವರು ಮುನ್ನುಡಿ ಬರೆದಿದ್ದಾರೆ. ಈ ಕೃತಿಯ ಆರಂಭದ ಪುಟಗಳಲ್ಲಿ

೧೯೬೬ರ ಬೇಂದ್ರೆ ಅವರ ಚಿತ್ರ, ೧೯೧೯ರಲ್ಲಿ ಬೇಂದ್ರೆ ವಿವಾಹ ಸಂದರ್ಭದ ಚಿತ್ರ(ಶ್ರೀಮತಿ ಲಕ್ಷ್ಮೀಬಾಯಿ ಅವರೊಂದಿಗೆ), ಮಾಸ್ತಿಯವರೊಡನೆ ಬೇಂದ್ರೆ ಅವರ ಚಿತ್ರ, ೧೯೨೫ರ ಸುಮಾರಿನ ಬಿ. ಎಂ. ಶ್ರೀ ಅವರೊಂದಿಗೆ ಇರುವ ಚಿತ್ರ, ೧೯೬೦-೬೨ರ ಸುಮಾರಿನ ಗೋಕರ್ಣದ ಸಮುದ್ರದ ತೀರದಲ್ಲಿನ ಚಿತ್ರ, ಬೇಂದ್ರೆ ಅವರ ಕುಟುಂಬದ ಚಿತ್ರ ಹಾಗೂ ಮಗಳು ಮಂಗಳಕುಲಕರ್ಣಿ ಅಳಿಯ ಪ್ರಭಾಕರ ಕುಲಕರ್ಣಿ ಅವರ ಚಿತ್ರ ಈ ಎಲ್ಲಾ ಚಿತ್ರಗಳು ಈ ಕೃತಿಯಲ್ಲಿ ಸೇರಿವೆ.

ಹಾಡುಹಕ್ಕಿ ಅಂಬಿಕಾತನಯದತ್ತ : ಈ ಕೃತಿಯನ್ನು ಏಳು ವಿಭಾಗಗಳ ಮೂಲಕ ಅಧ್ಯಯನ ಮಾಡಿದ್ದಾರೆ. ಸಾಹಿತ್ಯ ಸಿದ್ಧಿ ಎಂಬ ಹೆಸರಿನಲ್ಲಿ ಕಾವ್ಯ, ನಾಟಕಗಳು, ಸಾಹಿತ್ಯ ವಿಮರ್ಶೆ ಮತ್ತು ಸಂಶೋಧನೆ, ಸಣ್ಣಕಥೆಗಳು, ಮಾತೆಲ್ಲ ಜ್ಯೋತಿ, ಗಾರುಡಿಗ ಬೇಂದ್ರೆ ಈ ಅಂಶಗಳನ್ನು ಸರಳವಾಗಿ ಅರ್ಥೈಸಿದ್ದಾರೆ.

೪೫. ೧೯೯೫., ಸಿ.ಪಿ. ಕೃಷ್ಣಕುಮಾರ., ಬೇಂದ್ರೆ ನಾಲ್ಕು ನೋಟ

ಸಿ.ಪಿ. ಕೃಷ್ಣಕುಮಾರ ಅವರ 'ಬೇಂದ್ರೆ ನಾಲ್ಕು ನೋಟ' ಈ ಕೃತಿಯನ್ನು ೧೯೯೫ರಲ್ಲಿ ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು ಇವರು ಶಕ್ತಿ ಪ್ರಕಾಶನದ ಮೂಲಕ ಪ್ರಕಟಿಸಿದ್ದಾರೆ. ಈ ಕೃತಿಯು 'ಬೇಂದ್ರೆ: ಪಂಚಮುಖ' ಹಾಗೂ ಬಿಡಿ ಬಿಡಿ ಲೇಖನಗಳ ಮೂಲಕ ಪ್ರಕಟಗೊಂಡಿದೆ.

ಬೇಂದ್ರೆ ನಾಲ್ಕು ನೋಟ : ಈ ಕೃತಿಯಲ್ಲಿ ಬೇಂದ್ರೆ ಸಾಹಿತ್ಯ ಅಧ್ಯಯನ ಕುರಿತು ಸಿ.ಪಿ. ಕೃಷ್ಣಕುಮಾರ ಅವರು ಬರೆದ ವಿವಿಧ ಲೇಖನಗಳು ಇಲ್ಲಿವೆ. 'ಕೆಲವು ಕವನಗಳು'., 'ಅರಳು ಮರಳು'., 'ನಾಕುತಂತಿಯ ತೊಡಕು'., 'ಕಾವ್ಯಜಿಜ್ಞಾಸೆ ಮತ್ತು ವಿಮರ್ಶೆ'., 'ಕನ್ನಡ ಮೇಘದೂತ ಕುರಿತು' ಈ ಐದು ಲೇಖನಗಳು ಸೇರಿವೆ.

೪೬. ೧೯೯೫., ಚಂದ್ರಶೇಖರ ಪಾಟೀಲ., ಬೇಂದ್ರೆ : ನಾನು ಕಂಡಂತೆ, ನನಗೆ ಕಂಡಷ್ಟು

ಬೇಂದ್ರೆ ಅವರನ್ನು ಕುರಿತು ವಿವಿಧ ಸಂದರ್ಭಗಳಲ್ಲಿ ರಚಿಸಿದ ಕವಿತೆಗಳು ಪತ್ರಿಕೆಯಲ್ಲಿ ಪ್ರಕಟಿಸಿದ ಲೇಖನಗಳನ್ನು ಚಂದ್ರಶೇಖರ ಪಾಟೀಲ ಅವರು 'ಬೇಂದ್ರೆ : ನಾನು ಕಂಡಂತೆ, ನನಗೆ ಕಂಡಷ್ಟು' ಎಂಬ ಕೃತಿಯಾಗಿ ಪ್ರಕಟಿಸಿದ್ದಾರೆ. ಈ ಕೃತಿಯನ್ನು ತಮ್ಮ ಪತ್ರಿಕೆಯ ಪ್ರಕಾಶನವಾದ ಸಂಕ್ರಮಣ ಪ್ರಕಾಶನ, ಬೆಂಗಳೂರು ಇವರ ಮೂಲಕ ಪ್ರಕಟಿಸಿದ್ದಾರೆ.

ಬೇಂದ್ರೆ : ನಾನು ಕಂಡಂತೆ, ನನಗೆ ಕಂಡಷ್ಟು : ಫೆಬ್ರವರಿ ೧೯೫೯ರಲ್ಲಿ ರಚಿಸಿದ ಬೇಂದ್ರೆಯವರನ್ನು ಕ್ಷಮೆಕೋರಿ 'ಮುನಿಸಿನೊಳಗೊಂದು ಕನಸು' ಕವನವು ಇವರ ಮೊದಲ ಕವನ ಸಂಕಲನ ಬಾನುಲಿ(೧೯೬೦)ಯಲ್ಲಿ ಪ್ರಕಟವಾಗಿದೆ. 'ಹೋಗಿಬರ್ತೇನಜ್ಜ' ಎಂಬ ಕವನವು 'ಮಧ್ಯಬಿಂದು'(೧೯೬೪) ಈ ಕವನ ಸಂಕಲನದಲ್ಲಿ ಪ್ರಕಟವಾಗಿದೆ. 'ಬೇಂದ್ರೆ : ಅಂಬಿಕಾತನಯದತ್ತ' ಈ ಕವನವು ೧೯೬೬ರಲ್ಲಿ ಪ್ರಜಾವಾಣಿಯ ಸಾಪ್ತಾಹಿಕ ಪುರಾವಣಿಯಲ್ಲಿ ಪ್ರಕಟವಾಗಿ ನಂತರ ೧೯೬೭ರಲ್ಲಿ ಪ್ರಕಟವಾದ 'ಹತ್ತೊಂಬತ್ತು ಕವನಗಳು' ಎಂಬ ಕೃತಿಯಲ್ಲಿ ಪ್ರಕಟವಾಗಿದೆ. ಇವರ 'ಒಂದು ತಂತಿಗೆ ಹನ್ನೆರಡೂವರೆ ಸಾವಿರ !' ಎಂಬ ಲೇಖನವು 'ಆಂದೋಲನ' ಪತ್ರಿಕೆಯಲ್ಲಿ ೨೬ ಮೇ ೧೯೭೪ರಲ್ಲಿ ಪ್ರಕಟವಾಗಿದೆ. 'ಸಂಕೀರ್ಣ ವ್ಯಕ್ತಿತ್ವದ ಅಸಂಬದ್ಧ ಕವಿ' ಎಂಬ ಲೇಖನವು ೦೨ ಜೂನ್ ೧೯೭೪ರಲ್ಲಿ 'ಪ್ರಪಂಚ' ಪತ್ರಿಕೆಯಲ್ಲಿ ಪ್ರಕಟವಾಗಿದೆ. 'ಅಜ ಗಜ' ಕವಿತೆಯು ಇವರ ಗಾಂಧೀಸ್ಮರಣೆ(೧೯೭೬) ಸಂಕಲನದಲ್ಲಿ ಪ್ರಕಟವಾಗಿದೆ. 'ಅವನು, ಜೋಕು, ಅವರು' ಕವಿತೆಯು 'ಓ ನನ್ನ ದೇಶಬಾಂಧವರೇ' ಎಂಬ

ಕೃತಿಯಲ್ಲಿ ಪ್ರಕಟಿಸಿದ್ದಾರೆ. 'ಅಂಟಿದ ನಂಟು' ಎಂಬ ಲೇಖನವು ಸಂಕ್ರಮಣ (೧೯೮೧)ರಲ್ಲಿ ಪ್ರಕಟವಾಗಿದೆ. 'ಹಾರಿ ಹೋದ ಹಕ್ಕಿ' ಲೇಖನವು ಸಂಕ್ರಮಣ ಪತ್ರಿಕೆ(೧೯೮೧), ಲಂಕೇಶ ಪತ್ರಿಕೆ(೧೯೮೧) ಈ ಎರಡೂ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಈ ಎಲ್ಲಾ ಕವಿತೆಗಳು, ಲೇಖನಗಳನ್ನು 'ಬೇಂದ್ರೆ : ನಾನು ಕಂಡಂತೆ, ನನಗೆ ಕಂಡಷ್ಟು' ಕೃತಿಯಲ್ಲಿ ಒಟ್ಟಿಗೆ ಪ್ರಕಟಿಸಿದ್ದಾರೆ.

೪೭. ೧೯೯೫., ಸುರೇಶ ಕುಲಕರ್ಣಿ., ಭಾವರೇಖೆಯಲ್ಲಿ ಬೇಂದ್ರೆ

ಸುರೇಶ ಕುಲಕರ್ಣಿ ಅವರ 'ಭಾವರೇಖೆಯಲ್ಲಿ ಬೇಂದ್ರೆ' ಕೃತಿಯನ್ನು ಮನೋಹರ ಗ್ರಂಥ ಮಾಲಾ, ಧಾರವಾಡ ಇವರು ಪ್ರಕಟಿಸಿದ್ದಾರೆ. ಪ್ರಕಾಶನದ ವ್ಯವಸ್ಥಾಪಕ ಸಂಪಾದಕರಾದ ರಮಾಕಾಂತ ಜೋಶಿ ಅವರು 'ದ.ರಾ.ಬೇಂದ್ರೆಯವರ ಜನ್ಮಶತಮಾನೋತ್ಸವದ ನಿಮಿತ್ತ ಮನೋಹರ ಗ್ರಂಥಮಾಲೆಯ ೬೩ನೆಯ ವರ್ಷದ ಹುಟ್ಟು ಹಬ್ಬದ ಸಂದರ್ಭದಲ್ಲಿ ಶ್ರೀ ಸುರೇಶ ಕುಲಕರ್ಣಿಯವರ "ಭಾವ ರೇಖೆಯಲ್ಲಿ ಬೇಂದ್ರೆ" ಎಂಬ ಅಪರೂಪದ ಪುಸ್ತಕವನ್ನು ಪ್ರಕಟಿಸುವ ಅವಕಾಶ ಒದಗಿ ಬಂದದ್ದಕ್ಕೆ ಅತೀವ ಸಂತೋಷವಾಗುತ್ತದೆ. ಅವರಿಗೆ ಕೃತಜ್ಞತೆಗಳು. ಈ ಪುಸ್ತಕ ಕನ್ನಡ ಪ್ರಕಾಶನದಲ್ಲಿ ಇನ್ನೊಂದು ಮೈಲಿಗಲ್ಲಾಗುವದೆಂದು ಆಶಿಸುತ್ತೇನೆ' ಎಂದಿದ್ದಾರೆ. ಭಾವರೇಖೆಯಲ್ಲಿ ಬೇಂದ್ರೆ : ರೇಖಾಚಿತ್ರದ ಮೂಲಕ ಸುರೇಶ ಕುಲಕರ್ಣಿ ಅವರು ಬೇಂದ್ರೆ ಅವರ ಚಿತ್ರವನ್ನು ಹಾಗೂ ಆ ಚಿತ್ರಕ್ಕೆ ಹೊಂದಿಕೆಯಾಗುವ ಬೇಂದ್ರೆ ಅವರ ಕವಿತೆಯನ್ನು ನೀಡಿದ್ದಾರೆ. ಇದೊಂದು ಚಿತ್ರಕಾವ್ಯದಂತೆ ಕಂಡುಬರುತ್ತದೆ. ಈ ಕೃತಿಯಲ್ಲಿ ಕಂಡುಬರುವ ಅಕ್ಷರಗಳೂ ಕೂಡ ಕೈ ಬರಹದಲ್ಲಿರುವುದು ಕೃತಿಯ ವಿಶೇಷತೆಯಾಗಿದೆ.

೪೮. ೧೯೯೫., ಕೃಷ್ಣ ಕಟ್ಟಿ., ಬೇಂದ್ರೆ ಮತ್ತು ಕನ್ನಡ ಭಾವಗೀತದ ಸ್ವರೂಪ

ಕನ್ನಡ ವಿಶ್ವವಿದ್ಯಾಲಯದ ಮೊದಲ ಸಂಶೋಧನಾ ಪ್ರಬಂಧ 'ಬೇಂದ್ರೆ ಮತ್ತು ಕನ್ನಡ ಭಾವಗೀತದ ಸ್ವರೂಪ'. ಈ ಕೃತಿಯನ್ನು ಕೃಷ್ಣಕಟ್ಟಿ ಅವರು ಸಂಶೋಧನಾ ಪ್ರಬಂಧವಾಗಿ ರಚಿಸಿದ್ದಾರೆ. ಈ ಪ್ರಬಂಧಕ್ಕೆ ಕೀರ್ತಿನಾಥ ಕುರ್ತಕೋಟಿ ಅವರು ಮಾರ್ಗದರ್ಶನ ಮಾಡಿದ್ದಾರೆ. ಯು. ಆರ್. ಅನಂತಮೂರ್ತಿ ಮತ್ತು ಕೆ.ವಿ ಸುಬ್ಬಣ್ಣ ಅವರು ಮೌಲ್ಯಮಾಪನಮಾಡಿದ್ದಾರೆ. ಈ ಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯವು ೧೯೯೬ರಲ್ಲಿ ಪ್ರಕಟಿಸಿದೆ. ಈ ಕೃತಿಯ ಪ್ರಕಟಣೆಗೆ 'ಡಾ. ದ.ರಾ. ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್(ರಿ) ಇವರು ಆರ್ಥಿಕ ನೆರವು ನೀಡಿದ್ದಾರೆ. ಅಂದಿನ ಕುಲಪತಿಗಳಾದ ಚಂದ್ರಶೇಖರ ಕಂಬಾರ ಅವರು ನಿಮ್ಮೊಡನೆ ಎಂಬ ಕೃತಜ್ಞತೆಯ ನುಡಿಗಳನ್ನು ನುಡಿದಿದ್ದಾರೆ.

ಬೇಂದ್ರೆ ಮತ್ತು ಕನ್ನಡ ಭಾವಗೀತದ ಸ್ವರೂಪ: ಈ ಕೃತಿಯಲ್ಲಿ ಬೇಂದ್ರೆ ಸಾಹಿತ್ಯ ಕುರಿತು 'ಬೇಂದ್ರೆಯವರ ಭಾವಗೀತೆಯ ಸ್ವರೂಪ', 'ಬೇಂದ್ರೆಯವರ ದೀರ್ಘ ಕವನಗಳು', ಬೇಂದ್ರೆಯವರ ಕಾವ್ಯ', 'ಮೂರ್ತಿ ಮತ್ತು ಬಾಲಬೋಧೆ' ಈ ಅಧ್ಯಾಯಗಳ ಮೂಲಕ ಬೇಂದ್ರೆ ಅವರ ಕಾವ್ಯದಲ್ಲಿರುವ ಭಾವಗೀತೆಯ ಸ್ವರೂಪವನ್ನು ಕುರಿತು ಅಧ್ಯಯನ ಮಾಡಿದ್ದಾರೆ.

೪೯. ೧೯೯೬., ಶರ್ಮಾ ಕೆ. ಎಸ್., ವಾಮನ ಬೇಂದ್ರೆ.(ಸಂ)., ವರಕವಿ ದ. ರಾ. ಬೇಂದ್ರೆ ನವಮಾನವ ದರ್ಶನ

ನವಮಾನವ ದರ್ಶನ ಎಂಬ ಲೇಖನಗಳನ್ನು ದ. ರಾ. ಬೇಂದ್ರೆ ಅವರು ೧೯೬೭ರಲ್ಲಿ ಮಾಧವಿ ಎಂಬ ಮಾಸಿಕ ಪತ್ರಿಕೆಯಲ್ಲಿ ಬರೆದಿದ್ದರು. ಮತ್ತೆ ಬೇಂದ್ರೆಯವರ ಶತಮಾನೋತ್ಸವದ ಸವಿಸ್ಮರಣೆಯ ಕಾಣಿಕೆಯಾಗಿ 'ಗಿರಿಗರ್ಜನೆ'ಯ ವಿಶೇಷ ಪುರವಣಿಯಾಗಿ ಅಂಕೋಲೆಯಿಂದ ಪ್ರಕಟಿಸಿದರು. ಇದೇ ಸಂದರ್ಭದಲ್ಲಿ 'ಚಿಂತನ ಲೇಖನ ಮಾಲೆ'ಯ ರೂಪದಲ್ಲಿ ಶ್ರೀಮಾತಾ ಪ್ರಕಾಶನ, ಧಾರವಾಡ ಇವರು ೧೯೯೬ರಲ್ಲಿ ಈ ಕೃತಿಯನ್ನು ಪ್ರಕಟಿಸಿದ್ದಾರೆ.

ವರಕವಿ ದ. ರಾ. ಬೇಂದ್ರೆ ನವಮಾನವ ದರ್ಶನ : ಈ ಕೃತಿಯಲ್ಲಿ ಬೇಂದ್ರೆ ಅವರು ರಚಿಸಿದ ನಾಲ್ಕು ಲೇಖನಗಳಿವೆ. 'ವನಮಾನವ', 'ನವಮ ದಶಮ', 'ಕಾಲ ಮತ್ತು ಪಾಕ', 'ಏಕ ಪಾಕ' ಈ ಅಪರೂಪದ ಲೇಖನಗಳಿವೆ. ಕಾವ್ಯೋದ್ಯೋಗ ಸಿದ್ಧಾಂತದ ಸಂಪುಟ ೧೨ರಲ್ಲಿ ನವಮಾನವ ಎಂಬ ಲೇಖನವಿದ್ದರೂ ಈ ಲೇಖನಗಳು ಸೇರಿಲ್ಲ. ಈ ಕಿರುಹೊತ್ತಿಗೆಯಲ್ಲಿ ಬೇಂದ್ರೆ ಅವರ ೧೮ ಅಪೂರ್ವ ಚಿತ್ರಗಳ ದರ್ಶನವಿದೆ.

೩೦. **೧೯೯೬., ಕೆ. ಎಸ್. ನಾರಾಯಣಾಚಾರ್ಯ., ಬೇಂದ್ರೆ ಕಾವ್ಯದಲ್ಲಿ ಅಧ್ಯಾತ್ಮದ ನೆಲೆ ಮತ್ತು ಆರ್ಷದೃಷ್ಟಿ**

ಕೆ. ಎಸ್. ನಾರಾಯಣಾಚಾರ್ಯ ಅವರ 'ಬೇಂದ್ರೆ ಕಾವ್ಯದಲ್ಲಿ ಅಧ್ಯಾತ್ಮದ ನೆಲೆ ಮತ್ತು ಆರ್ಷದೃಷ್ಟಿ' ಎಂಬ ಕೃತಿಯನ್ನು 'ದಿವ್ಯಕವಿ ದ.ರಾ. ಬೇಂದ್ರೆ ಕಾವ್ಯಸಿದ್ಧಾಂತ ಮಾಲೆಯ ಮೊದಲ ಕೃತಿಯಾಗಿ ಶ್ರೀಮಾತಾ ಪ್ರಕಾಶನ, ಅಂಬಿಕಾತನಯದತ್ತ ವೇದಿಕೆ, ಧಾರವಾಡ ಇವರು ೧೯೯೬ರಲ್ಲಿ ಪ್ರಕಟಿಸಿದ್ದಾರೆ. ಈ ಕೃತಿಯನ್ನು ದ.ರಾ.ಬೇಂದ್ರೆ ಅವರ ಜನ್ಮಶತಮಾನೋತ್ಸವದ ಕೊಡುಗೆಯಾಗಿ ಪ್ರಕಟಿಸಲಾಗಿದೆ.

ಬೇಂದ್ರೆ ಕಾವ್ಯದಲ್ಲಿ ಅಧ್ಯಾತ್ಮದ ನೆಲೆ ಮತ್ತು ಆರ್ಷದೃಷ್ಟಿ : ಕೆ. ಎಸ್. ನಾರಾಯಣಾಚಾರ್ಯ ಅವರು ೩೦.೦೧.೧೯೯೫ರಲ್ಲಿ 'ಬೇಂದ್ರೆ ಕಾವ್ಯದಲ್ಲಿ ಅಧ್ಯಾತ್ಮದ ನೆಲೆ' ಎಂಬ ಶೀರ್ಷಿಕೆಯಡಿ ವಿಶೇಷ ಉಪನ್ಯಾಸ ನೀಡಿದ್ದರು. ಈ ಉಪನ್ಯಾಸವನ್ನೇ ಗ್ರಂಥಮಾಡಲು ತಿಳಿಸಿದಾಗ ಒಂದು ತಿಂಗಳ ಅವಧಿಯಲ್ಲಿ ಹತ್ತು ಪ್ರಕರಣಗಳಾಗಿ ವಿಂಗಡಿಸಿ 'ಬೇಂದ್ರೆ ಕಾವ್ಯದಲ್ಲಿ ಅಧ್ಯಾತ್ಮದ ನೆಲೆ ಮತ್ತು ಆರ್ಷದೃಷಿ' ಎಂಬ ಶೀರ್ಷಿಕೆಯೊಂದಿಗೆ ಗ್ರಂಥ ಸಿದ್ಧಪಡಿಸಿದರು.

೩೧. **೧೯೯೬., ಶ್ರೀಪಾದ ಭಟ್ಟ., ಮೇಘದೂತ–ಒಂದು ಅವಲೋಕನ**

ಚೇತನ ಬುಕ್ ಹೌಸ್ ಅವರು ೧೯೯೬ರಲ್ಲಿ ಪ್ರಕಟಿಸಿದ ಕೃತಿ ಇದು. ಬೇಂದ್ರೆ ಅವರ 'ಕನ್ನಡ ಮೇಘದೂತ' ಕುರಿತು ಶ್ರೀಪಾದ ಭಟ್ಟ ಅವರು ಮೇಘದೂತ–ಒಂದು ಅವಲೋಕನ ಎಂಬ ಈ ಕೃತಿಯನ್ನು ಅಧ್ಯಯನ ಮಾದರಿಯಲ್ಲಿ ರಚಿಸಿದ್ದಾರೆ.

ಮೇಘದೂತ–ಒಂದು ಅವಲೋಕನ : ಕನ್ನಡ – ಸಂಸ್ಕೃತ ಭಾಷೆಗಳ ನಡುವಿನ ಸಂಬಂಧವನ್ನು ಸಾಹಿತ್ಯದ ಮೂಲಕ ಚರ್ಚಿಸಿದ್ದಾರೆ. ಕನ್ನಡ ಸಾಹಿತ್ಯದಲ್ಲಿ ಕಾಳಿದಾಸನ ಸಾಹಿತ್ಯದ ಪ್ರವೇಶ ಕುರಿತು ವಸ್ತು, ಶೈಲಿ ದೃಷ್ಟಿಯಿಂದ ಗಮನಿಸಿದ್ದಾರೆ. ಅನುವಾದಕ ಬೇಂದ್ರೆಯವರು ಕನ್ನಡಿಕರಿಸಿರುವ ಬಗೆಯನ್ನು ಇಲ್ಲಿ ಅದರ ವಸ್ತು ವಿನ್ಯಾಸ, ರಚನೆ, ಶೈಲಿ ಹಾಗೂ ವೈಶಿಷ್ಟ್ಯದ ಅನುಗುಣವಾಗಿ ಚರ್ಚಿಸಿದ್ದಾರೆ.

೩೨. **೧೯೯೬., ದಾಸೇಗೌಡ ಜಿ.ವಿ., ಸಾಹಿತ್ಯದ ವಿರಾಟ್ ಸ್ವರೂಪ – ಒಂದು ಸಮೀಕ್ಷೆ**

ಚೇತನ ಬುಕ್ ಹೌಸ್ ಅವರು ೧೯೯೬ರಲ್ಲಿ ಪ್ರಕಟಿಸಿದ ಕೃತಿ ಇದು. ಬೇಂದ್ರೆ ಅವರ 'ಸಾಹಿತ್ಯದ ವಿರಾಟ್ ಸ್ವರೂಪ' ಕುರಿತು ಜಿ.ವಿ.ಡಿ. ಅವರು 'ಸಾಹಿತ್ಯದ ವಿರಾಟ್ ಸ್ವರೂಪ–ಒಂದು ಸಮೀಕ್ಷೆ' ಎಂಬ ಈ ಕೃತಿಯಲ್ಲಿ ಆಯ್ದ ಹದಿಮೂರು ಲೇಖನಗಳನ್ನು ಅಧ್ಯಯನ–ಸಮೀಕ್ಷೆ ರೂಪದಲ್ಲಿ ರಚಿಸಿದ್ದಾರೆ.

ಸಾಹಿತ್ಯದ ವಿರಾಟ್ ಸ್ವರೂಪ – ಒಂದು ಸಮೀಕ್ಷೆ : ಸಾಹಿತ್ಯದ ವಿರಾಟ್ ಸ್ವರೂಪದ ಹದಿಮೂರು ಲೇಖನಗಳು ಇಲ್ಲಿ ಜಿ.ವಿ.ಡಿ. ಅವರ ಸಮೀಕ್ಷೆಗೆ ಒಳಗಾಗಿವೆ. ಸಾಹಿತ್ಯದ ಅಧ್ಯಯನ ಮಾದರಿಯಲ್ಲಿ ಈ ಲೇಖನಗಳು ಮಂಡಿಸುವ ವಿಚಾರಗಳನ್ನು ಇಲ್ಲಿ ಗ್ರಹಿಸಿದ್ದಾರೆ. ಬೇಂದ್ರೆ ಅವರ ವ್ಯಕ್ತಿತ್ವದ ಯಾವುದೇ ಅಂಶಗಳನ್ನು ಗಮನಿಸದೆ ಲೇಖನಗಳ ವಿಚಾರವನ್ನು ಕುರಿತು ಗ್ರಹಿಸಿದ್ದಾರೆ.

೫೩. ೧೯೯೬., ರಾಮೇಗೌಡ., ಬೇಂದ್ರೆ ಸಾಹಿತ್ಯ ಸಮಾಲೋಚನೆ

ಮೈಸೂರು ವಿಶ್ವವಿದ್ಯಾಲಯದ ಕುವೆಂಪು ಕನ್ನಡ ಅಧ್ಯಯನ ಕೇಂದ್ರವು ೧೯೯೫ರ ಅಕ್ಟೋಬರ್ ೧೩ಮತ್ತು ೧೪ರಂದು ಬೇಂದ್ರೆ ಅವರ ಜನ್ಮ ಶತಮಾನೋತ್ಸನ ಆಚರಿಸಿತು. ಈ ಅಂಗವಾಗಿ ಎರಡು ದಿನಗಳ ಕಾಲ ವಿಚಾರಗೋಷ್ಠಿ ಹಮ್ಮಿಕೊಂಡ ಸಂದರ್ಭದಲ್ಲಿ ವಿವಿಧ ಬೇಂದ್ರೆ ಸಾಹಿತ್ಯ ಅಧ್ಯಯನಕಾರರು ಪ್ರಬಂಧಗಳನ್ನು ಮಂಡಿಸಿದರು. ಈ ಎಲ್ಲಾ ಪ್ರಬಂಧಗಳನ್ನು ೧೯೯೬ರಲ್ಲಿ ಮೈಸೂರು ವಿಶ್ವವಿದ್ಯಾಲಯದ ಕುವೆಂಪು ಕನ್ನಡ ಅಧ್ಯಯನ ಕೇಂದ್ರವು ರಾಮೇಗೌಡ ಅವರ ಸಂಪಾದನೆಯಲ್ಲಿ ಪ್ರಕಟಿಸಿತು.

ಬೇಂದ್ರೆ ಸಾಹಿತ್ಯ ಸಮಾಲೋಚನೆ: ಈ ಕೃತಿಯಲ್ಲಿ ಇಪ್ಪತ್ತಾಮೂರು ಲೇಖನಗಳು ಸೇರ್ಪಡೆಗೊಂಡಿವೆ. ಹನ್ನೊಂದು ಮಂಡಿಸಿದ ಪ್ರಬಂಧಗಳು, ಎಂಟು ಸಂವಾದದ ಅನಿಸಿಕೆಗಳು, ಅಧ್ಯಕ್ಷ ಭಾಷಣಗಳು, ಸಮಾರೋಪ ಭಾಷಣ ಈ ಎಲ್ಲಾ ಸೂಕ್ತ ಪ್ರಬಂಧಗಳು ಇಲ್ಲಿ ಸೇರಿವೆ.

೫೪. ೧೯೯೭., G. KRISHNAPPA., D.R. BENDRE

ಜಿ. ಕೃಷ್ಣಪ್ಪ ಅವರು ಬೇಂದ್ರೆ ಅವರನ್ನು ಕುರಿತು ರಚಿಸಿದ ಆಂಗ್ಲ ಕೃತಿ D.R. BENDRE ಕೃತಿಯನ್ನು ಮೈಸೂರು ವಿಶ್ವವಿದ್ಯಾಲಯ Kannada writers and their works series ನಲ್ಲಿ ೧೯೯೭ರಲ್ಲಿ ಪ್ರಕಟಿಸಿದೆ. ಬೇಂದ್ರೆ ಅವರ ಪರಿಚಯವನ್ನು ಅವರ ಕಾವ್ಯ ಇತರ ಸಾಹಿತ್ಯದ ಮೂಲಕ ಸರಳವಾಗಿ ಪರಿಚಯಿಸಿದ್ದಾರೆ.

೫೫. ೧೯೯೭., (ಸಂ)ಚೆನ್ನಪ್ಪ ಎಸ್., ಬೇಂದ್ರೆ ಸಾಹಿತ್ಯ ಚಿಂತನ

'ಬೇಂದ್ರೆ ಸಾಹಿತ್ಯ ಚಿಂತನ' ಕೃತಿಯು ಹದಿಮೂರು ಲೇಖನಗಳುಳ್ಳ ವಿವಿಧ ಲೇಖಕರ ಬೇಂದ್ರೆ ಸಾಹಿತ್ಯ ಅಧ್ಯಯನ ಕೃತಿಯಾಗಿದೆ. ಈ ಕೃತಿಯನ್ನು ಚೆನ್ನಪ್ಪ ಎಸ್ ಅವರು ೧೯೯೭ರಲ್ಲಿ ಎಸ್ ಬಿ ಎಸ್ ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್, ಬೆಂಗಳೂರು ಇವರ ಮೂಲಕ ಪ್ರಕಟಿಸಿದ್ದಾರೆ. ಎಂ. ಜಯಂತಿಬಾಯಿ ಅವರ 'ಬೇಂದ್ರೆ ವ್ಯಕ್ತಿತ್ವ ಮತ್ತು ಸಾಹಿತ್ಯ'., ಜಿ. ಎಸ್ ಶಿವರುದ್ರಪ್ಪ ಅವರ ಕಾವ್ಯಸೃಷ್ಟಿ – ಬೇಂದ್ರೆಯವರ ದೃಷ್ಟಿ'., ಶಂಕರ ಮೊಕಾಶಿ ಪುಣೇಕರ ಅವರ 'ಬೇಂದ್ರೆಯವರ ಕಾವ್ಯಾಭ್ಯಾಸ'., ರಾಮೇಗೌಡ(ರಾಗೌ) ಅವರ 'ಬೇಂದ್ರೆ ಮತ್ತು ಸಾಮಾಜಿಕ ಅರಿವು'., ಕೆ.ಜಿ. ನಾರಾಯಣ ಪ್ರಸಾದ ಅವರ 'ಬೇಂದ್ರೆಯವರ ಕೃತಿಗಳ ಛಂದಸ್ಸು', ಕೋದಂಡರಾಂ ಅವರ 'ಗರಿ'., ಮ. ರಾಮಕೃಷ್ಣ ಅವರ 'ನಾದಲೀಲೆ'., ಎಂ. ರಾಮಕೃಷ್ಣ ಅವರ 'ನಿರಾಭರಣ ಸುಂದರಿ', ಬೆಟ್ಟೇಗೌಡ ಸಣಬದಕೊಪ್ಪಲು ಅವರ 'ಸಾಯೋ ಆಟ', ಚೆನ್ನವೀರಕಣವಿ ಅವರ 'ಅರಳು–ಮರಳು'., ಸಿ.ಪಿ. ಕೃಷ್ಣಕುಮಾರ ಅವರ 'ಕನ್ನಡ ಮೇಘದೂತ'., ಶಿವರಾಮು ಕಾಡನಕುಪ್ಪೆ ಅವರ 'ಸಾಹಿತ್ಯ ವಿಮರ್ಶೆ' ಈ ಎಲ್ಲಾ ಲೇಖನಗಳು 'ಬೇಂದ್ರೆ ಸಾಹಿತ್ಯ ಚಿಂತನ' ಕೃತಿಯಲ್ಲಿ ಸಂಪಾದಿಸಲಾಗಿದೆ.

ಬೇಂದ್ರೆ ಸಾಹಿತ್ಯ ಚಿಂತನ : ಈ ಸಂಕಲನದಲ್ಲಿ ಹದಿಮೂರು ಲೇಖನಗಳಿದ್ದು, ಮೊದಲ ಐದು ಲೇಖನಗಳು ಬೇಂದ್ರೆಯವರ ವ್ಯಕ್ತಿತ್ವ ಮತ್ತು ಸಾಹಿತ್ಯ ಸಾಧನೆಯನ್ನು ಕುರಿತವು. ಬೇಂದ್ರೆ ಸಾಹಿತ್ಯದಲ್ಲಿ ಸಾಮಾಜಿಕ ಅರಿವು ಮತ್ತು ಅವರ ಕಾವ್ಯ ಕೃತಿಗಳ ಛಂದಸ್ಸನ್ನು ಕುರಿತ ಲೇಖನಗಳೂ ಇಲ್ಲಿವೆ. ಇನ್ನು ಉಳಿದ ಎಂಟು ಲೇಖನಗಳು ಬಿಡಿ ಕೃತಿಗಳ ಅಧ್ಯಯನಗಳು. ಒಂದೊಂದು ಕೃತಿಯನ್ನು ವಿವರವಾಗಿ ಅಧ್ಯಯನ ಮಾಡಿ ಆಯಾ ಕೃತಿಗಳ ವೈಶಿಷ್ಟ್ಯಗಳನ್ನು ವಿವರವಾಗಿ ವಿವೇಚಿಸಲಾಗಿದೆ.

೫೬. ೧೯೯೯., ಕೆ ಸಿ. ಶಿವಾರೆಡ್ಡಿ(ಸಂ)., ಶತಮಾನದ ಕವಿತೆ ಜೋಗಿ

ಕನ್ನಡ ವಿಶ್ವವಿದ್ಯಾಲಯದ ಭಾಷಾಂತರ ವಿಭಾಗದ ಮಾಲೆ ೩ನೇ ಕೃತಿಯಾಗಿ ಕೆ ಸಿ. ಶಿವಾರೆಡ್ಡಿ ಅವರು ಸಂಪಾದಿಸಿದ 'ಶತಮಾನದ ಕವಿತೆ ಜೋಗಿ' ಕೃತಿಯನ್ನು ೧೯೯೯ರಲ್ಲಿ ಪ್ರಕಟಿಸಿದೆ. ಕೆ ಸಿ. ಶಿವಾರೆಡ್ಡಿ ಅವರು ಪ್ರಾಸ್ತಾವಿಕ ನುಡಿಯಾಗಿ 'ಸಂಧಿಕಾಲದ ಆಧುನಿಕ ಪುರಾಣ' ಎಂಬ ಶೀರ್ಷಿಕೆಯಡಿ ಸಾಹಿತ್ಯ ಕಾರ್ಯವನ್ನು ಕುರಿತು ವಿಸ್ತರಿಸಿದ್ದಾರೆ.

ಶತಮಾನದ ಕವಿತೆ ಜೋಗಿ: ಈ ಕೃತಿಯಲ್ಲಿ ಬೇಂದ್ರೆ ಅವರ 'ಜೋಗಿ' ಕವಿತೆಗೆ ಇದುವರೆಗೂ ಕನ್ನಡ ಸಾಹಿತ್ಯದ ಅಧ್ಯಯನಕಾರರು ಪ್ರತಿಕ್ರಿಯೆ ನೀಡಿದ ವಿಮರ್ಶಾ ಬರೆಹಗಳನ್ನು ಗಮನಿಸಬಹುದು. ಬೇಂದ್ರೆ ಅವರ 'ಜೋಗಿ' ಕವಿತೆ ಹಾಗೂ ಈ ಕವಿತೆಗೆ ಬೇಂದ್ರೆ ಅವರು ನೀಡಿದ ಸಂದರ್ಭ ಸೂಚಿ ಬರೆಹದ ಜೊತೆಗೆ ಇಪ್ಪತ್ತೊಂಬತ್ತು ವಿಮರ್ಶಾ ಲೇಖನಗಳು ಇಲ್ಲಿವೆ.

೫೭. ೧೯೯೯., ಕೆ ಸಿ. ಶಿವಾರೆಡ್ಡಿ., ಅಂಬಿಕಾತನಯನ ನಂಬಿಕೆಯ ಹಾಡು

ಕೆ ಸಿ. ಶಿವಾರೆಡ್ಡಿ ಅವರು ಸಂಕಲನ ಮಾಡಿರುವ 'ಅಂಬಿಕಾತನಯನ ನಂಬಿಕೆಯ ಹಾಡು' ಕೃತಿಯು ಬೇಂದ್ರೆ ಅವರ ಕಾವ್ಯದ ಎಲ್ಲಾ ಸಂಕಲನಗಳ ಮೊದಲ ಚರಣಗಳ ಮತ್ತು ಶೀರ್ಷಿಕೆಗಳ ಅಕಾರಾದಿ ರೂಪದಲ್ಲಿ ದೊರೆಯುತ್ತದೆ. ಈ ಕೃತಿಯನ್ನು ೧೯೯೯ರಲ್ಲಿ ಕನ್ನಡ ವಿಶ್ವವಿದ್ಯಾಲಯವು ಭಾಷಾಂತರ ವಿಭಾಗ ಮಾಲೆಯ ನಾಲ್ಕನೇ ಕೃತಿಯಾಗಿ ಪ್ರಕಟಿಸಿದ್ದಾರೆ.

ಅಂಬಿಕಾತನಯನ ನಂಬಿಕೆಯ ಹಾಡು : ಈ ಕೃತಿಯು ಅಂಬಿಕಾತನಯದತ್ತರ ಕವನ ಸಂಕಲನಗಳ ಅಕಾರಾದಿ, ಕವನ ಸಂಕಲನಗಳ ಪ್ರಥಮ ಆವೃತ್ತಿಯ ಮುಖಪುಟಗಳು, ಮೊದಲ ಚರಣಗಳ ಅಕಾರಾದಿ, ಕವನ ಶೀರ್ಷಿಕೆಗಳ ಅಕಾರಾದಿಗಳನ್ನು ಒಳಗೊಂಡಿದೆ. ಬೇಂದ್ರೆ ಅವರ ಕವನಗಳನ್ನು ಅತ್ಯಂತ ಸುಲಭವಾಗಿ ಹುಡುಕಲು ಹಾಗೂ ಅಧ್ಯಯನಕ್ಕೆ ಮಾರ್ಗದರ್ಶಿ ಕೈಪಿಡಿಯಾಗಿದೆ.

೫೮. ೨೦೦೦., ಆಮೂರ ಜಿ. ಎಸ್., ಬೇಂದ್ರೆ ಕಾವ್ಯದ ಪ್ರತಿಮಾ ಲೋಕ

ದ.ರಾ.ಬೇಂದ್ರೆ ಅವರ ಜನ್ಮ ದಿನಾಚರಣೆಯ ನಿಮಿತ್ತ ದಿನಾಂಕ ೩೧-೦೧-೨೦೦೦ರಂದು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ನೀಡಿದ ಕವಿದಿನ ಉಪನ್ಯಾಸವನ್ನು ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗ ಇವರು ೨೦೦೦ನೇ ಸಾಲಿನಲ್ಲಿ ಪ್ರಕಟಿಸಿದ್ದಾರೆ.

ಬೇಂದ್ರೆ ಕಾವ್ಯದ ಪ್ರತಿಮಾ ಲೋಕ : ಈ ಕೃತಿಯಲ್ಲಿ ಬೇಂದ್ರೆ ಸಾಹಿತ್ಯ ಕುರಿತು 'ಸಂಕೇತ, ಪ್ರತಿಮೆ, ರೂಪಕ, ಪ್ರತೀಕ, ಸಾಂಪ್ರದಾಯಿಕ ಹಾಗೂ ಹೊಸ ಕಲ್ಪನೆಗಳು', 'ಬೇಂದ್ರೆ ಕಾವ್ಯದಲ್ಲಿ ಉಪಮೆ', 'ಬೇಂದ್ರೆ ಕಾವ್ಯದಲ್ಲಿ ಉಪಮೆ', 'ಬೇಂದ್ರೆ ಕಾವ್ಯದಲ್ಲಿ ರೂಪಕ', 'ಬೇಂದ್ರೆ ಕಾವ್ಯದಲ್ಲಿ ಪ್ರತೀಕ' ಈ ಎಲ್ಲಾ ವಿಷಯಗಳ ಕುರಿತು ಅಧ್ಯಯನವು ಈ ಹೊತ್ತಿಗೆಯ ಲೇಖನದಲ್ಲಿ ಪ್ರಕಟವಾಗಿದೆ.

೫೯. ೨೦೦೦., ಆಮೂರ ಜಿ. ಎಸ್., ದತ್ತಾತ್ರೇಯ ರಾಮಚಂದ್ರ ಬೇಂದ್ರೆ

ಭಾರತೀಯ ಸಾಹಿತ್ಯ ನಿರ್ಮಾಪಕರು ಎಂಬ ಮಾಲಿಕೆಯಲ್ಲಿ ಸಾಹಿತ್ಯ ಅಕಾಡೆಮಿಗೆ ರಚಿಸಿದ ಕೃತಿ ಇದು. ಈ ಕೃತಿಯಲ್ಲಿ ಸಾಮರಸ್ಯದ ಶೋಧ : ಕಿರು ಜೀವನಚಿತ್ರ, ಬೆಳಗು ಪ್ರಾರಂಭದ ಕವಿತೆಗಳು, ಬೇಂದ್ರೆ ದರ್ಶನದ ರೂಪುರೇಷೆಗಳು, ಹಾಡಿನ ಮೋಡಿ : ಬೇಂದ್ರೆ ಕಾವ್ಯದ ಮೊದಲ ಅರಳು, **ಯೋಗಮಾರ್ಗದ ಕಾವ್ಯ** : ಮರಳು ಅರಳು, ಗದ್ಯ ಬರೆಹಗಳು, ಅನುವಾದ ಎಂಬ ಆರು ಅಧ್ಯಾಯದಲ್ಲಿ ಬೇಂದ್ರೆ ಅವರ ಸಾಹಿತ್ಯ ವಿಮರ್ಶೆ ನೀಡಿದ್ದಾರೆ.

ದತ್ತಾತ್ರೇಯ ರಾಮಚಂದ್ರ ಬೇಂದ್ರೆ : ಇಲ್ಲಿ ಗಂಗಾವತರಣ, ನರಬಲಿ ಈ ಕವಿತೆಗಳ ವಿಮರ್ಶೆಯ ಸ್ವರೂಪವಿರುವ ಸಾಮರಸ್ಯದ ಶೋಧ: ಕಿರು ಜೀವನಚಿತ್ರ ಎಂಬ ಲೇಖನವು ೨೦೧೧ರಲ್ಲಿ ಪ್ರಕಟವಾದ ಆಮೂರರ ಸಂಭಾವಿತ ಎಂಬ ಕೃತಿಯಲ್ಲಿಯು ಸೇರ್ಪಡೆಯಾಗಿದೆ. ಉಯ್ಯಾಲೆ, ಬಾಲ್ಯಕಾಂಡ, ಗಂಗಾವತರಣ, ಗರಿ ಸಂಕಲನಗಳ ಕೆಲವು ಕವಿತೆಗಳು ಇಲ್ಲಿ ವಿಮರ್ಶೆಗೆ ಒಳಗಾಗಿವೆ. ಬೇಂದ್ರೆ ಕವಿತೆಗಳು ಪ್ರಸಿದ್ಧವಾಗುವ ಬಗೆಯಲ್ಲಿ ಕೆಲವು ಕವಿತೆಗಳ ಚರ್ಚೆಯನ್ನು ವಿಶೇಷವಾಗಿ ಗ್ರಹಿಸಿದ್ದಾರೆ.

೬೦. ೨೦೦೦., ೨೦೧೦., ಜಿ. ಕೃಷ್ಣಪ್ಪ., ನಾಕುತಂತಿ ಒಂದು ಟಿಪ್ಪಣಿ

ಜಿ. ಕೃಷ್ಣಪ್ಪ ಅವರ 'ನಾಕುತಂತಿ ಒಂದು ಟಿಪ್ಪಣಿ' ಎಂಬ ಕಿರುಹೊತ್ತಿಗೆಯನ್ನು ಕಾಮಧೇನು ಪ್ರಕಾಶನ, ಬೆಂಗಳೂರು ಇವರು ಪ್ರಕಟಿಸಿದ್ದಾರೆ. ೨೦೧೦ರಲ್ಲಿ ಮರುಮುದ್ರಣ ಮಾಡಿದ್ದಾರೆ. ನಾಕುತಂತಿ ಒಂದು ಟಿಪ್ಪಣಿ : ಬೇಂದ್ರೆ ಅವರ ನಾಕುತಂತಿ ಕವನವನ್ನು ಅತ್ಯಂತ ವಿಸ್ತಾರವಾಗಿ ಅರ್ಥೈಸಿರುವ ಟಿಪ್ಪಣಿ ರೂಪದ ಬರೆಹವಿದು. ಈ ಕೃತಿಯ ಕೊನೆಯ ಪುಟದಲ್ಲಿ ಬೇಂದ್ರೆ ಅವರು 'ಶ್ರೀ ಶಂಕರ ಮಹಾಮನನ' ಎಂಬ ಪುಸ್ತಕದಲ್ಲಿ ನಾಕುತಂತಿ ಕವನ ಕುರಿತು ನೀಡಿರುವ ವಿವರಣೆಯ ಕೈ ಬರೆಹವನ್ನು ಇಲ್ಲಿ ಪ್ರಕಟಿಸಲಾಗಿದೆ.

೬೧. ೨೦೦೧., ಕುಸುಮಾಕರ ದೇವರಗೆಣ್ಣೂರ., ಗಾಳಿಹೆಜ್ಜೆ ಹಿಡಿದ ಸುಗಂಧ

ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ೩೧-೧-೨೦೦೧ರ ಕವಿದಿನದಂದು ನೀಡಿದ ಉಪನ್ಯಾಸವು 'ನಕ್ಷೆಗೆ ಎಟುಕದ ಕಡಲು' ಎಂಬ ಕೃತಿಯಲ್ಲಿ ಪ್ರಕಟವಾಗಿದೆ. ಕುಸುಮಾಕರ ದೇವರಗೆಣ್ಣೂರ ಅವರ ಈ ಭಾಷಣವನ್ನು ೨೦೦೮ರಲ್ಲಿ ಸಂಚಯ ಪತ್ರಿಕೆಯ ಡಿ. ವಿ. ಪ್ರಹ್ಲಾದ್ ಅವರು ಗಾಳಿಹೆಜ್ಜೆ ಹಿಡಿದ ಸುಗಂಧ ಎಂಬ ಶೀರ್ಷಿಕೆಯಲ್ಲಿ ಪ್ರಕಟಿಸಿದ್ದಾರೆ.

ಗಾಳಿಹೆಜ್ಜೆ ಹಿಡಿದ ಸುಗಂಧ : ಕುಸುಮಾಕರರು ತಮ್ಮ ಭಾಷಣದ ಮೂಲಕ ಬೇಂದ್ರೆ ಅವರ ವ್ಯಕ್ತಿತ್ವವನ್ನು ನಿರೂಪಿಸಲು ಸಾಹಿತ್ಯ ಮತ್ತು ತನ್ನ ಅನುಭವದಲ್ಲಿ ಕಂಡ ಕೆಲವು ಪರಿಚಯಗಳನ್ನು ಇಲ್ಲಿ ಹಂಚಿಕೊಂಡಿದ್ದಾರೆ. 'ಪ್ರಣತಿ-ಬತ್ತಿ-ತೈಲ-ಪ್ರಭೆ', 'ಕವಿ ಹಾಗೂ ಸೃಜನ ಪ್ರಕ್ರಿಯೆ', ಸಹೃದಯ', 'ಸಮೀಕ್ಷಕ', 'ಕಲ್ಪನೆ ಮತ್ತು ಕಾಣ್ಕೆ', 'ಕವಿಯ ಮೇಲೆ ಪ್ರಭಾವಗಳು' ಎಂಬ ವಿಚಾರಗಲ ಮೂಲಕ ತಮ್ಮ ಅಭಿವ್ಯಕ್ತಿಯನ್ನು ಮಂಡಿಸಿದ್ದಾರೆ. "ನನ್ನ ಉದ್ದೇಶ ಇಲ್ಲಿ ಬೇರೆ ಬೇರೆ ಸಮೀಕ್ಷರ ಅಭಿಪ್ರಾಯಗಳನ್ನು ಸಂಗ್ರಹಿಸಿ ಅವುಗಳನ್ನು ವಿಮರ್ಶಿಸುವುದು ಅಲ್ಲ. 'ಕೊಳಲು ಊದುವ' ರಾಜಮಾರ್ಗವನ್ನೇ ಹಿಡಿಯಬೇಕೆಂದರೂ ಅದು ಸುಲಭ ಸಾಧ್ಯವಿಲ್ಲ.. ಈ ಕವಿತೆಗಳನ್ನು ಓದುವಾಗ ಒಮ್ಮೊಮ್ಮೆ ನಮ್ಮ ಕೈಯಲ್ಲಿದ್ದುದು ಕೊಳಲೆಂದೆನಿಸಿದರೂ ಅದು ಬಿದಿರಾಗಿ ಉಳಿಯುವ ಸಂದರ್ಭಗಳೇ ಹೆಚ್ಚು ಇದಕ್ಕೆ ಮುಖ್ಯ ಕಾರಣವೆಂದರೆ ಈ ಕವಿತೆಗಳ ರಚನಾ ವೈಶಿಷ್ಟ್ಯ. ಎಷ್ಟೋ ಸಲ ಕವಿತೆಯ ಒಂದೊಂದು ನುಡಿಯ ಭಾವವನ್ನು ಗ್ರಹಿಸುವುದು ಸಾಧ್ಯವಾದರೂ ಒಟ್ಟು ಪ್ರಬಂಧದ ಧ್ವನಿ ಗ್ರಹಿಕೆಯ ಹೊರಗೆಯೆ ಉಳಿದುಬಿಡುತ್ತದೆ." ಎಂದು ತಮ್ಮ ಕೃತಿ ಚರ್ಚೆಯನ್ನು ಕುರಿತು ತಿಳಿಸಿದ್ದಾರೆ.

೬೨. ೨೦೦೧., ೨೦೧೨., ಜಿ. ಕೃಷ್ಣಪ್ಪ., ಬೇಂದ್ರೆಯವರ ಸಾಹಿತ್ಯದಲ್ಲಿ ಸ್ತ್ರೀ ಒಂದು ಅಧ್ಯಯನ

ಜಿ. ಕೃಷ್ಣಪ್ಪ ಅವರ ಸಂಶೋಧನಾ ಪ್ರಬಂಧವನ್ನು 'ಬೇಂದ್ರೆಯವರ ಸಾಹಿತ್ಯದಲ್ಲಿ ಸ್ತ್ರೀ ಒಂದು ಅಧ್ಯಯನ' ಕೃತಿಯು ಮೈಸೂರು ವಿಶ್ವವಿದ್ಯಾಲಯಕ್ಕೆ ಕೆ. ಅನಂತರಾಮು ಅವರ ಮಾರ್ಗದರ್ಶನದಲ್ಲಿ ಸಲ್ಲಿಸಲಾಗಿದೆ. ಈ ಪ್ರಬಂಧವನ್ನು ಶ್ರೀರಂಗ ಪ್ರಕಾಶನ ಅವರು ೨೦೦೧ರಲ್ಲಿ ಪ್ರಕಟಿಸಿದ್ದಾರೆ. ಈ ಕೃತಿಯನ್ನು ೨೦೧೨ರಲ್ಲಿ ಕಾಮಧೇನು ಪ್ರಕಾಶನ ಇವರು ಮರುಮುದ್ರಣ ಮಾಡಿದ್ದಾರೆ.

ಬೇಂದ್ರೆಯವರ ಸಾಹಿತ್ಯದಲ್ಲಿ ಸ್ತ್ರೀ ಒಂದು ಅಧ್ಯಯನ : ಈ ಕೃತಿಯಲ್ಲಿ 'ಭಾರತೀಯ ಸಮಾಜ ಮತ್ತು ಸ್ತ್ರೀ', 'ಬೇಂದ್ರೆಯವರು ಬೆಳೆದುಬಂದ ಕೌಟುಂಬಿಕ ಪರಿಸರ ಮತ್ತು ಪರಂಪರೆಯ ಪ್ರೇರಣೆ', ನಾಲ್ಕನೇ ಅಧ್ಯಾಯವು ಆರು ವಿಭಾಗಗಳ ಮುಖಗಳನ್ನು ಹೊಂದಿದೆ. ಬೇಂದ್ರೆ ಕಾವ್ಯದಲ್ಲಿ ಅಭಿವ್ಯಕ್ತಗೊಳ್ಳುವ ಆರು ತಾಯಿಯರ ಅಭಿವ್ಯಕ್ತ ಕ್ರಮವನ್ನು ತಿಳಿಸಿದ್ದಾರೆ. 'ಬೇಂದ್ರೆಯವರ ಇತರ ಕೃತಿಗಳಲ್ಲಿ ಸ್ತ್ರೀ' ಈ ಎಲ್ಲಾ ವಿಷಯಗಳನ್ನು ಸಂಶೋಧನಾತ್ಮಕವಾಗಿ ಅಧ್ಯಯನ ಮಾಡಿದ್ದಾರೆ.

೬೩. ೨೦೦೧., ೨೦೦೮., ರಾಜೇಂದ್ರ ಚೆನ್ನಿ., ಕರುಳಬಳ್ಳಿಯ ಸೊಲ್ಲು

ರಾಜೇಂದ್ರ ಚೆನ್ನಿ ಅವರು ಬೇಂದ್ರೆ ಸಾಹಿತ್ಯ ಕುರಿತು ಈಗಾಗಲೇ ಬರೆದ ಎರಡು ಲೇಖನಗಳು ಹಾಗೂ ಭಾಷಣಗಳ ಸಂಕಲನವೇ ಕರುಳಬಳ್ಳಿಯ ಸೊಲ್ಲು ಕೃತಿಯಾಗಿದೆ. ಈ ಕೃತಿಯು ೨೦೦೧ರಲ್ಲಿ ಪ್ರಕಟವಾಗಿ ಪ್ರತಿಗಳು ಮುಗಿದ ಕಾರಣ ೨೦೦೮ರಲ್ಲಿ ಅಭಿನವ ಪ್ರಕಾಶನ, ಬೆಂಗಳೂರು ಇವರು ಮರುಮುದ್ರಣ ಮಾಡಿದ್ದಾರೆ. ಈ ಕೃತಿಯನ್ನು ದೇವನೂರ ಮಹಾದೇವ ಹಾಗೂ ರಾಮು ಇವರಿಗೆ ಅರ್ಪಿಸಲಾಗಿದೆ. ಬೆನ್ನುಡಿಯಲ್ಲಿ ಬೇಂದ್ರೆ ಅವರ ಚಿತ್ರವನ್ನು ಮುದ್ರಿಸಿ ಅಭಿನವ ಪ್ರಕಾಶನದ ಪಿ. ಚಂದ್ರಿಕಾ ಅವರು ತಮ್ಮ ಗ್ರಹಿಕೆಯ ವಿಚಾರಗಳನ್ನು ಬೆನ್ನುಡಿ ಬರಹವಾಗಿ ನೀಡಿದ್ದಾರೆ.

ಕರುಳಬಳ್ಳಿಯ ಸೊಲ್ಲು: ಈ ಕೃತಿಯಲ್ಲಿನ 'ಶಕ್ತಿಯ ಕವಿ ಬೇಂದ್ರೆ' ಎಂಬ ಲೇಖನವು ಬೆಂಗಳೂರು ವಿಶ್ವವಿದ್ಯಾಲಯ ಪ್ರಕಟಿಸುತ್ತಿದ್ದ 'ಸಾಧನೆ' ಸಂಚಿಕೆಯಲ್ಲಿ(ಸಂಚಿಕೆ ೧೪, ಸಂಪುಟ ೪, ಅಕ್ಟೋಬರ್-ಡಿಸೆಂಬರ್ ೧೯೮೫) 'ಬೇಂದ್ರೆ ಕಾವ್ಯ ಕೆಲಟಿಪ್ಪಣಿಗಳು' ಎಂಬ ಲೇಖನವಾಗಿದೆ. ಈ ಲೇಖನವು ಶಿವಮೊಗ್ಗದ ಪರಿಸರ ಸಾಹಿತ್ಯ ಪ್ರಕಾಶನವು ಹೊರತಂದಿರುವ 'ಅಧ್ಯಯನ' ಎಂಬ ವಿಮರ್ಶಾ ಗ್ರಂಥದಲ್ಲಿ ಪ್ರಕಟವಾಗಿದೆ. 'ಬೇಂದ್ರೆ ಕಾವ್ಯ: ಸಂಪ್ರದಾಯ ಮತ್ತು ಸ್ವಂತಿಕೆ' ಎಂಬ ಲೇಖನವು ಬೇಂದ್ರೆ ಅವರು ನಿಧನರಾದಾಗ ಏರ್ಪಡಿಸಿದ್ದ (ಕನ್ನಡ ಸಂಘ ಕ್ರೈಸ್ಟ್ ಕಾಲೇಜು) ಬೇಂದ್ರೆ ನಮನ (೧೯೮೮ರ ಫೆಬ್ರವರಿಯಲ್ಲಿ ಬಸವನಗುಡಿ ನ್ಯಾಷನಲ್ ಕಾಲೇಜಿನ ಕರ್ನಾಟಕ ಸಂಘದ ಆಶ್ರಯದಲ್ಲಿ) ಕಾರ್ಯಕ್ರಮದಲ್ಲಿ ನೀಡಲಾದ ಭಾಷಣದ ಪರಿಷ್ಕೃತ ರೂಪ. ಕನ್ನಡ ಸಂಘದವರು ೧೯೮೯ರಲ್ಲಿ ಪ್ರಕಟಪಡಿಸಿದ ಪುಸ್ತಕವಾಗಿದೆ. 'ಕರುಳ ಬಳ್ಳಿಯ ಸೊಲ್ಲು' ಈ ಲೇಖನವು ದಿನಾಂಕ ೧೫-೦೨-೨೦೦೦ದಂದು ಮೈಸೂರಿನ ರಂಗಾಯಣದಲ್ಲಿ ದಿ. ಗೋಪಾಲಕೃಷ್ಣ ಅಡಿಗರ ಜನ್ಮದಿನದ ಅಂಗವಾಗಿ ಏರ್ಪಡಿಸಿದ್ದ ಶತಮಾನದ ಕಾವ್ಯ ವಿಚಾರ ಸಂಕಿರಣದಲ್ಲಿ ಮಾಡಿದ ಭಾಷಣದ ಬರೆಹ ರೂಪವಾಗಿದೆ. ಈ ಎಲ್ಲಾ ಲೇಖನಗಳು 'ಕರುಳ ಬಳ್ಳಿಯ ಸೊಲ್ಲು' ಕೃತಿಯಲ್ಲಿ ಸಂಕಲನಗೊಂಡಿವೆ.

೬೪. ೨೦೦೧., ಕುಲಕರ್ಣಿ ಎನ್ಕೆ., ದ. ರಾ. ಬೇಂದ್ರೆ

ಎನ್ಕೆ ಅವರು ೧೯೯೧ರಲ್ಲಿ ದ. ರಾ. ಬೇಂದ್ರೆ ಎಂಬ ಹೆಸರಿನ ಕೃತಿ ರಚಿಸಿದ್ದಾರೆ. ಅದರ ಪರಿವರ್ತನಾರೂಪದಂತೆ ೨೦೦೧ರಲ್ಲಿ ಮತ್ತೊಂದು 'ದ. ರಾ. ಬೇಂದ್ರೆ' ಕೃತಿ ರಚಿಸಿದ್ದಾರೆ. ಈ ಕೃತಿಯನ್ನು ನವಕರ್ನಾಟಕ ಪ್ರಕಾಶನದ ಸಾಹಿತ್ಯ ಸಂಪದ ಮಾಲೆಯಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಕನ್ನಡ ಲೇಖಕರನ್ನು ಪರಿಚಯ ಮಾಡುವ ಪುಸ್ತಕವಾಗಿ ಇದನ್ನು ಎನ್ಕೆ ರಚಿಸಿದ್ದಾರೆ. ಈ ಕೃತಿಯನ್ನು ಹಾ.ಮಾ. ನಾಯಕ ಮತ್ತು ಪ್ರಧಾನ್ ಗುರುದತ್ತ ಅವರು ಸಂಪಾದಿಸಿದ್ದಾರೆ.

ದ. ರಾ. ಬೇಂದ್ರೆ : ಬೇಂದ್ರೆ ಅವರನ್ನು ಪರಿಚಯಿಸುವ ಬರೆಹವಾದರೂ ಇಲ್ಲಿ ಹಲವು ಕವಿತೆಗಳ ವಿಶ್ಲೇಷಣೆ ಇದೆ. ಬದುಕು, ಬರೆಹ, ಬೇಂದ್ರೆ ಕಾವ್ಯದ ಸೃಜನ ಕ್ರಿಯೆ, ಪ್ರಕೃತಿ, ಪ್ರೇಮತತ್ವ, ಆಧ್ಯಾತ್ಮಿಕ ಪ್ರಭಾವ, ವಿಡಂಬನೆ, ಪ್ರತಿಮೆ-ಉಪಮೆ ಈ ಅಂಶಗಳ ಚರ್ಚೆಗೆ ಕೆಲವು ಕವಿತೆಗಳನ್ನು

ಬಳಸಿಕೊಳ್ಳಲಾಗಿದೆ. ನಾಕುತಂತಿ, ಜೋಗಿ ಮೊದಲಾದ ಕವಿತೆಗಳ ಪ್ರಸಿದ್ಧಿಗೆ ಕಾರಣ ಹುಡುಕುತ್ತಾ ಅರಳು ಮರಳು ಸಂಕಲನವನ್ನು ವಿಶೇಷವಾಗಿ ವಿಶ್ಲೇಷಣೆ ಮಾಡಿದ್ದಾರೆ. ಈ ಕೃತಿಯ ಹಿನ್ನುಡಿ ಬರಹದಲ್ಲಿರುವ ಸಂಪಾದಕರ ನುಡಿಯಂತೆ "ಬೇಂದ್ರೆಯವರ ಒಡನಾಡಿಯಾಗಿ, ಸುಮಾರು ಐದು ದಶಕಗಳ ಕಾಲ ಅವರೊಡನೆ ನಿಕಟವಾದ ಸಂಬಂಧವನ್ನಿರಿಸಿಕೊಂಡಿದ್ದ ಹಿರಿಯರಾದ ಶ್ರೀ ಎನ್ಕೆ. ಕುಲಕರ್ಣಿ ಅವರು ಸಾಹಿತ್ಯದ ಅನೇಕ ಪ್ರಕಾರಗಳಲ್ಲಿ ಎಪ್ಪತ್ತೈದಕ್ಕೂ ಹೆಚ್ಚು ಪುಸ್ತಕಗಳನ್ನು ರಚಿಸಿರುವಂತ ಹಿರಿಯ ಲೇಖಕರು. 'ವೈಯಕ್ತಿಕವಾಗಿ ನನಗೆ ಹಿರಿಯ ಅಣ್ಣನಂತೆ, ಸಾಹಿತ್ಯಿಕವಾಗಿ ನನ್ನ ಗುರುವಿನಂತೆ, ಶ್ರೀ ಅರವಿಂದರಲ್ಲಿ ಆಸಕ್ತಿ ಮೂಡಿಸಿದ ದೀಕ್ಷಾ ಗುರುವಿನಂತೆ ನನ್ನನ್ನು ರೂಪಿಸಿದ್ದಾರೆ' ಎಂದು ತಮ್ಮ ಅವರ ಸಂಬಂಧವನ್ನು ವರ್ಣಿಸಿಕೊಂಡಿರುವ ಶ್ರೀ ಎನ್ಕೆ ಅವರ ಬರೆಹ ಈ ಕಾರಣದಿಂದಾಗಿಯೇ ಹೆಚ್ಚಿನ ಅಧಿಕೃತತೆಯನ್ನು ಪಡೆದುಕೊಂಡಿದೆ." ಎಂಬ ವಿಚಾರವು ಈ ಕೃತಿಯೊಳಗಿನ ಸತ್ವವನ್ನು ಸ್ಪಷ್ಟಪಡಿಸುತ್ತದೆ.

೬೫. ೨೦೦೨., ಕೃಷ್ಣಮೂರ್ತಿ .ಜಿ. ಎಂ., ದ.ರಾ. ಬೇಂದ್ರೆ

ಬೇಂದ್ರೆ ಅವರ ಬದುಕನ್ನು ಅವರ ಸಾಹಿತ್ಯದ ಮೂಲಕ ಪರಿಚಯಿಸುವ ಜಿ. ಎಂ. ಕೃಷ್ಣಮೂರ್ತಿ ಅವರ ಕೃತಿ ವರಕವಿ ದ. ರಾ. ಬೇಂದ್ರೆ, ೨೦೦೨ರಲ್ಲಿ ವಸಂತ ಪ್ರಕಾಶನ' ಇವರು ಪ್ರಕಟಿಸಿದ್ದಾರೆ. ದ.ರಾ. ಬೇಂದ್ರೆ : ಈ ಕೃತಿಯಲ್ಲಿ ಒಂಬತ್ತು ಅಂಶಗಳನ್ನು ಕುರಿತು ಪರಿಚಯಿಸಲಾಗಿದೆ. ಜೀವನ ಪರಿಚಯ, ವರಕವಿಯ ಹತ್ತು–ಹಲವು ಮುಖಗಳು, ಮಾತಿನ ಮಲ್ಲ ಬೇಂದ್ರೆ, ಬೇಂದ್ರೆ ಒಳ್ಳೆಯ ಗದ್ಯ ಲೇಖಕರೂ ಆಹುದು, ನಾಟಕಕಾರರಾಗಿ ಬೇಂದ್ರೆ, ದೇಶಾಭಿಮಾನಿ ಮತ್ತು ಪ್ರಕೃತಿ ಉಪಾಸಕ ಬೇಂದ್ರೆ, ವರಕವಿ ಬೇಂದ್ರೆ ಮೇಲಿನ ಪ್ರಭಾವ ವಲಯ, ಅರವಿಂದರ ನೆರಳಲ್ಲಿ ಬೆಳೆದ ಬೇಂದ್ರೆ ಹಾಗೂ ಬೇಂದ್ರೆ ಕಾವ್ಯ. ಇದೊಂದು ವಿಮರ್ಶಾ ಕೃತಿಯಾಗಿ ಗಮನಿಸಬಹುದು. ಬೇಂದ್ರೆಯವರ ವ್ಯಕ್ತಿತ್ವ ರೂಪುಗೊಳ್ಳುವ ಎಲ್ಲಾ ಬಗೆಗಳು ಇವರ ಕಾವ್ಯದಲ್ಲಿ ಮೂಡಿಬಂದಿವೆ. ಈ ಕಾವ್ಯದ ಸಾಲುಗಳನ್ನು ಬಳಸುತ್ತಾ ಸೂಕ್ತ ಕಾರಣಗಳನ್ನು ಕಾವ್ಯ–ಕಾರಣದಂತೆ ಗಮನಿಸಿದ್ದಾರೆ.

೬೬. ೨೦೦೨., ಕುಲಕರ್ಣಿ ಎನ್. ಕೆ., ಸಾವಿರದ ವರಕವಿ ಬೇಂದ್ರೆ

'ಕನ್ನಡ ನಾಡು ಮತ್ತು ಕನ್ನಡಿಗರ ಪರಂಪರೆ' ಎಂಬ ಉದ್ದೇಶದಿಂದ ಬೇಂದ್ರೆ ಅವರನ್ನು ಪರಿಚಯಿಸುವ ಸಾವಿರದ ವರಕವಿ ಬೇಂದ್ರೆ ಕೃತಿಯನ್ನು ೨೦೦೨ರಲ್ಲಿ ಸಪ್ನ ಬುಕ್ ಹೌಸ್ ಅವರು ಪ್ರಕಟಿಸಿದ್ದಾರೆ. ಈ ಕೃತಿಯನ್ನು ಎನ್. ಕೆ. ಕುಲಕರ್ಣಿ ಅವರು ರಚಿಸಿದ್ದಾರೆ.

ಸಾವಿರದ ವರಕವಿ ಬೇಂದ್ರೆ : ಸರಳವಾಗಿ ಬೇಂದ್ರೆ ಅವರ ಜೀವನ ಹಾಗೂ ವ್ಯಕ್ತಿತ್ವ ಅರ್ಥವಾಗುವಂತೆ ರಚಿಸಿದ ಕೃತಿ ಇದು. ಬೇಂದ್ರೆ ಅವರ ಕವಿತೆಗಳ ಮೂಲಕ ಕುಟುಂಬ, ಬಾಲ್ಯ, ಬಡತನ, ಸಾಹಿತ್ಯ ಆಸಕ್ತಿ, ಸಾಹಿತ್ಯ ರಚನೆ ಹಾಗೂ ಗೌರವಗಳನ್ನು ಅತ್ಯಂತ ಸರಳವಾಗಿ ಕಥೆಯ ಮಾದರಿಯಲ್ಲಿ ಬೇಂದ್ರೆ ಅವರ ಕವಿತೆಗಳೊಂದಿಗೆ ರಚಿಸಿದ್ದಾರೆ.

೬೭. ೨೦೦೩., ಕೆ.ಸಿ.ಶಿವಾರೆಡ್ಡಿ., ಕನ್ನಡದ ಹಾಡು ಪಾಡು (ಬೇಂದ್ರೆ, ಕುವೆಂಪು, ಅಡಿಗ, ಕಂಬಾರರ ಕಾವ್ಯದ ಅಧ್ಯಯನ)

ವಸಾಹತುಶಾಹಿ ಸಂಸ್ಕೃತಿಗೆ ಆಧುನಿಕ ಕನ್ನಡ ಕಾವ್ಯ ತೋರಿದ ಪ್ರತಿಕ್ರಿಯೆ ಎಂಬ ಶೀರ್ಷಿಕೆಯಡಿಯಲ್ಲಿ ಬೇಂದ್ರೆ, ಕುವೆಂಪು, ಅಡಿಗ, ಕಂಬಾರರ ಕಾವ್ಯದ ಅಧ್ಯಯನವನ್ನು ಕುರಿತು ಕಿ.ರಂ. ನಾಗರಾಜ ಅವರ ಮಾರ್ಗದರ್ಶನದೊಂದಿಗೆ ೨೦೦೦ದಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ ಪ್ರೌಢಪ್ರಬಂಧವನ್ನು

ಸಲ್ಲಿಸಿದರು. ಈ ಪ್ರಬಂಧವನ್ನು ೨೦೦೩ರಲ್ಲಿ ಕೃತಿ ರೂಪವಾಗಿ ಅಧ್ಯಯನ ಮಂಡಲ, ಬೆಂಗಳೂರು ಇವರು ಪ್ರಕಟಿಸಿದ್ದಾರೆ.

ಕನ್ನಡದ ಹಾಡು ಪಾಡು : ಬೇಂದ್ರೆ ಸಾಹಿತ್ಯವನ್ನು ಕುರಿತು 'ಬೇಂದ್ರೆ ಕಾವ್ಯ : ಸ್ಥಳೀಯತೆ, ವಸಾಹತುಶಾಹಿ' ಎಂಬ ಅಧ್ಯಾಯದ ಮೂಲಕ ಸ್ವಾತಂತ್ರ್ಯ-ಸ್ವಚ್ಛಂದತೆಗಳ ಬಯಕೆ, ಏಕೀಕರಣ, ಸ್ವಾತಂತ್ರ್ಯ, ಯುದ್ಧ, ಬಂಧನ, ಬಿಡುಗಡೆ., ನಾಡು-ನುಡಿ-ರಾಷ್ಟ್ರ., ನೃತ್ಯ ರೂಪಕಗಳು: ತಲ್ಲಣ, ತನ್ಮಯತೆ., ಸೃಷ್ಟಿಶೀಲತೆ : ಸಂಕೀರ್ಣತೆಗಳ ಜಿಜ್ಞಾಸೆ., ಪೂರ್ವ ಪಶ್ಚಿಮಗಳ ಅನುಸಂಧಾನ ಈ ವಿಷಯಗಳ ಮೂಲಕ ಬೇಂದ್ರೆಕಾವ್ಯವನ್ನು ಅಧ್ಯಯನಮಾಡಿದ್ದಾರೆ.

೬೮. ೨೦೦೪., ಕುಲಕರ್ಣಿ ಎನ್ಕೆ., ಬಹುಮುಖ ಪ್ರತಿಭೆಯ ಬೇಂದ್ರೆ

ಕನ್ನಡಕ್ಕೊಬ್ಬನೆ ಜಾನಪದೀಯ ಭಾವಗೀತೆ ಸಂತ ಕವಿ ಹಾಗೂ ಗದ್ಯಕಾರ ಬೇಂದ್ರೆ ಎಂಬ ಅಡಿಬರಹದೊಂದಿಗೆ ರಚನೆಗೊಂಡ ಕೃತಿ 'ಬಹುಮುಖ ಪ್ರತಿಭೆಯ ಬೇಂದ್ರೆ'. ಈ ಕೃತಿಯನ್ನು ೨೦೦೪ರಲ್ಲಿ 'ಶ್ರೀ ಪ್ರೇಮಸಾಯಿ ಪ್ರಕಾಶನ, ಬೆಂಗಳೂರು' ಇವರು ಪ್ರಕಟಿಸಿದ್ದಾರೆ. ಈ ಕೃತಿಯನ್ನು ಎನ್ಕೆ ಅವರು ೯೧ನೇ ವಯಸ್ಸಿನಲ್ಲಿ ರಚಿಸಿದ ಕಾರಣ ತಮಗೆ ತಾವೇ ಕೃತಜ್ಞತೆ ಸಲ್ಲಿಸಿದ್ದಾರೆ.

ಬಹುಮುಖ ಪ್ರತಿಭೆಯ ಬೇಂದ್ರೆ : ಜಾನಪದೀಯ ಮಾದರಿ., ಬದುಕು-ಬಾಳು., ಬೇಂದ್ರೆ ಗದ್ಯ ಬರವಣಿಗೆ., ಬೇಂದ್ರೆ ಕಾವ್ಯ(ಒಂದು ಅಧ್ಯಯನ) ಎಂಬ ನಾಲ್ಕು ವಿಭಾಗಗಳಲ್ಲಿ ಬೇಂದ್ರೆ ಅವರ ಬಹುಮುಖ ಪ್ರತಿಭೆಯನ್ನು ಅರ್ಥೈಸಲು ಪ್ರಯತ್ನಿಸಿದ್ದಾರೆ. ಬಿಡಲಾರದ ಬಿಡಿಕವನಗಳು ಎಂಬ ಶೀರ್ಷಿಕೆಯಡಿ 'ಹಕ್ಕಿಹಾರುತಿದೆ'., 'ಗರಿ' ಹಾಗೂ 'ಕನ್ನಡ ಮೇಘದೂತ'ವನ್ನು ಕುರಿತು ಚರ್ಚಿಸಿದ್ದಾರೆ. ಬೇಂದ್ರೆ ಅವರ ಕೊನೆಯ ದಿನಗಳಲ್ಲಿ ಚರ್ಚಿಸಿದ 'ಜೀವನ ಜಿಜ್ಞಾಸೆ' ಕುರಿತು ಜೆ. ಕೃಷ್ಣಮೂರ್ತಿ ಅವರ ಲೈವ್ ಅಂಡ್ ಥಿಂಕ್' ಎಂಬ ವಿಚಾರದ ಹಿನ್ನೆಲೆಯಲ್ಲಿ ನಡೆಸಿದ ಮಾತುಕತೆಯನ್ನು ನೀಡಿದ್ದಾರೆ. ಈ ಕೃತಿಯ ಬೆನ್ನುಡಿಯಲ್ಲಿ ಎನ್ಕೆ ಅವರನ್ನು ಪರಿಚಯಿಸುವ ಎಚ್. ಕೆ. ರಂಗನಾಥ ಅವರ ಕವಿತೆ ಇದೆ.

೬೯. ೨೦೦೬., ಕೆ. ಎಸ್. ಶರ್ಮಾ, ವಾಮನ ಬೇಂದ್ರೆ., ಬೇಂದ್ರೆ ಹಾಗೂ ವಿಜ್ಞಾನ

ಕೆ. ಎಸ್. ಶರ್ಮಾ ಹಾಗೂ ವಾಮನ ಬೇಂದ್ರೆ ಅವರು ೨೦೦೬ರಲ್ಲಿ ಮುಂಬೈ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಆಶ್ರಯದಲ್ಲಿ ರಜತ ಮಹೋತ್ಸವ ವರ್ಷದ ಕಾರ್ಯಕ್ರಮದಲ್ಲಿ ವರಕವಿ ಡಾ. ದ.ರಾ.ಬೇಂದ್ರೆ ದತ್ತಿ ಉಪನ್ಯಾಸಮಾಲೆಯನ್ನು ನೀಡಿದರು. ಈ ಉಪನ್ಯಾಸದ ಲೇಖನಗಳನ್ನು ಬೇಂದ್ರೆ ಸಂಶೋಧನ ಸಂಸ್ಥೆ, ಹುಬ್ಬಳಿ ಇವರು ಪ್ರಕಟಿಸಿದ್ದಾರೆ. ಈ ಕಿರುಹೊತ್ತಿಗೆಯನ್ನು ಬೇಂದ್ರೆ ಅವರ ಪತ್ನಿ ಶ್ರೀಮತಿ ಲಕ್ಷ್ಮೀಬಾಯಿ ಜನ್ಮಶತಮಾನೋತ್ಸವ ಸಮಾರಂಭದ ಅಂಗವಾಗಿ ಪ್ರಕಟಿಸಿದೆ.

ಬೇಂದ್ರೆ ಹಾಗೂ ವಿಜ್ಞಾನ : ಬೇಂದ್ರೆ ಅವರಿಗಿದ್ದ ವಿಜ್ಞಾನದ ಆಸಕ್ತಿ, ಅಧ್ಯಯನ ಹಾಗೂ ಕಾವ್ಯ, ಇತರ ಬರೆಹಗಳಲ್ಲಿ ವಿಜ್ಞಾನವನ್ನು ಬಳಸಿಕೊಂಡಿರುವ ಬಗೆಯನ್ನು ಕುರಿತು 'ಬೇಂದ್ರೆ ಮತ್ತು ವಿಜ್ಞಾನ' ಎಂಬ ಉಪನ್ಯಾಸವನ್ನು ಕೆ. ಎಸ್. ಶರ್ಮಾ ಅವರು ನೀಡಿದ್ದಾರೆ. ವಾಮನ ಬೇಂದ್ರೆ ಅವರು ಅಧ್ಯಕ್ಷೀಯ ಭಾಷಣದಲ್ಲಿ 'ಬೇಂದ್ರೆ ವಿಜ್ಞಾನ ಸಿದ್ಧಾಂತ – ಪ್ರಯೋಗ : ಜೀವ ರಸಾಯನಶಾಸ್ತ್ರ ದೃಷ್ಟಿಕೋನ' ಎಂಬ ವಿಷಯ ಕುರಿತು ಉಪನ್ಯಾಸ ನೀಡಿದ್ದಾರೆ. ಬೇಂದ್ರೆ ವಿಜ್ಞಾನ ಚಿಂತನೆಗಳ ಪ್ರಥಮ ಪರಿಚಯ ಪುಸ್ತಿಕೆ ಎಂದು ಈ ಕೃತಿಯನ್ನು ಪ್ರಕಾಶಕರು ಪ್ರಕಟಿಸಿದ್ದಾರೆ.

೭೦. ೨೦೦೮., ಜಿ.ಕೃಷ್ಣಪ್ಪ., ಬರೆಹದಲ್ಲಿ ಬೇಂದ್ರೆಯವರ ಬದುಕು

ಜಿ. ಕೃಷ್ಣಪ್ಪ ಅವರು ಬೇಂದ್ರೆ ಅವರ ಬದುಕನ್ನು ಕುರಿತು ರಚಿಸಿದ ಕೃತಿಯೇ ಬರೆಹದಲ್ಲಿ ಬೇಂದ್ರೆಯವರ ಬದುಕು. ಈ ಕೃತಿಯನ್ನು ೨೦೦೮ರಲ್ಲಿ ದ.ರಾ. ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ಇವರು ಗ್ರಂಥಮಾಲೆಯ ಮೂರನೇ ಕೃತಿಯಾಗಿ ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ ಬಾರೊ ಸಾಧನಕೇರಿಗೆ ಎಂಬ ಶೀರ್ಷಿಕೆಯಡಿ ಕಲಬುರ್ಗಿ ಅವರ ಮುನ್ನುಡಿ ಇದೆ.

ಬರೆಹದಲ್ಲಿ ಬೇಂದ್ರೆಯವರ ಬದುಕು : ಬೇಂದ್ರೆ ಅವರ ಬದುಕನ್ನು ಸಾಹಿತ್ಯದೊಂದಿಗೆ ಸಮಾಲೋಚಿಸಿ ಜಿ. ಕೃಷ್ಣಪ್ಪ ಅವರು ಈ ಕೃತಿ ರಚಿಸಿದ್ದಾರೆ. 'ಕೌಟುಂಬಿಕ ಪರಿಸರ', 'ಕ್ರೀಡೆಗಳು ರೂಪಿಸಿದ ಬದುಕು', 'ಧಾರವಾಡದ ಜನಪದ ಜೀವನ', 'ಕಾವ್ಯಲೀಲೆ', 'ತಾಯಿ ತೀರಿದ ಮೇಲೆ', 'ಬಾಲ್ಯಕಾಂಡ ಕಾವ್ಯದ ಸರಳಗದ್ಯಾನುವಾದ' ಈ ಶೀರ್ಷಿಕೆಗಳಡಿಯಲ್ಲಿ ಬೇಂದ್ರೆ ಸಾಹಿತ್ಯ ಕುರಿತು ಅಧ್ಯಯನಮಾಡಿದ್ದಾರೆ.

೭೧. ೨೦೦೮., ಶ್ರೀಶೈಲೇಶ ವಿ. ಹಿರೇಮಠ., ದ.ರಾ. ಬೇಂದ್ರೆಯವರ ಕಾವ್ಯೇತರ ಸಾಹಿತ್ಯ ಒಂದು ಅಧ್ಯಯನ

ಶ್ರೀಶೈಲೇಶ ವಿ. ಹಿರೇಮಠ ಅವರ ಸಂಶೋಧನಾ ಪ್ರಬಂಧ 'ದ.ರಾ. ಬೇಂದ್ರೆಯವರ ಕಾವ್ಯೇತರ ಸಾಹಿತ್ಯ ಒಂದು ಅಧ್ಯಯನ' ಈ ಕೃತಿಯನ್ನು ೨೦೦೮ರಲ್ಲಿ ಸಂಶೋಧನಾ ಮಾಲಿಕೆಯಡಿ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ಇವರು ಪ್ರಕಟಿಸಿದ್ದಾರೆ. ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಮೂಲಕ ವಿ. ಎಸ್. ಆರಾಧ್ಯಮಠ ಅವರ ಮಾರ್ಗದರ್ಶನದಲ್ಲಿ ಈ ಪ್ರೌಢಪ್ರಬಂಧವನ್ನು ಸಿದ್ಧಪಡಿಸಿದ್ದಾರೆ.

ದ.ರಾ. ಬೇಂದ್ರೆಯವರ ಕಾವ್ಯೇತರ ಸಾಹಿತ್ಯ ಒಂದು ಅಧ್ಯಯನ : ಈ ಕೃತಿಯು ಬೇಂದ್ರೆ ಅವರ ಕಾವ್ಯೇತರ ಸಾಹಿತ್ಯವಾದ ಕಥೆ, ನಾಟಕಗಳು, ಅನುವಾದಗಳು, ಹರಟೆಗಳು ಹಾಗೂ ಭಾಷಣಗಳನ್ನು ಕೇಂದ್ರೀಕರಿಸಿ ನಡೆಸಿದ ಅಧ್ಯಯನವಾಗಿದೆ. ಈ ಪ್ರಬಂಧದಲ್ಲಿ ಬೇಂದ್ರೆ ಅವರ ಜೀವನ, ಸಾಹಿತ್ಯ ಪರಿಚಯ, ನಾಟಕ ಸಾಹಿತ್ಯ, ಅನುವಾದ ಸಾಹಿತ್ಯ, ಸಣ್ಣ ಕಥೆಗಳು, ಹರಟೆಗಳು ಮತ್ತು ಭಾಷಣಗಳು ಈ ರೀತಿಯಲ್ಲಿ ಅಧ್ಯಾಯಗಳನ್ನು ವಿಭಾಗಿಸಿ ಸಂಶೋಧನೆ ಮಾಡಿದ್ದಾರೆ.

೭೨. ೨೦೦೯., ಗಿರಡ್ಡಿ ಗೋವಿಂದರಾಜ., ಸಾಹಿತ್ಯ ಲೋಕದ ಸುತ್ತಮುತ್ತ (ಪ್ರಸಂಗಗಳು)

ಗಿರಡ್ಡಿ ಗೋವಿಂದ ರಾಜರ 'ಸಾಹಿತ್ಯ ಲೋಕದ ಸುತ್ತಮುತ್ತ' ಈ ಕೃತಿಯು ೨೦೦೯ರಲ್ಲಿ ಪ್ರಕಟಗೊಂಡಿದೆ. ೨೦೧೨ರಲ್ಲಿ ಮರುಮುದ್ರಣಗೊಂಡಿದೆ. ಈ ಕೃತಿಯನ್ನು ಮನೋಹರ ಗ್ರಂಥ ಮಾಲಾ, ಧಾರವಾಡ ಇವರು ೨೦೦೯ನೇ ಸಾಲಿನ ನಾಲ್ಕನೇ ಕೃತಿಯಾಗಿ ಪ್ರಕಟಿಸಿದ್ದಾರೆ.

ಸಾಹಿತ್ಯ ಲೋಕದ ಸುತ್ತಮುತ್ತ (ಪ್ರಸಂಗಗಳು) : ಈ ಕೃತಿಗೆ ಮುನ್ನುಡಿ ಬರೆದ ಎಂ. ಜಿ. ಹೆಗಡೆ ಅವರು ಈ ರೀತಿ ತಿಳಿಸಿದ್ದಾರೆ. "ನವೋದಯ ಕಾಲದ ಹಿರಿಯ ಲೇಖಕರ ನಡುವಿನ ಸಂಬಂಧಗಳ ಕುರಿತು ಗಿರಿಡ್ಡಿಯವರು ಆಶ್ಚರ್ಯ ಹುಟ್ಟಿಸುವಷ್ಟು ವ್ಯವಧಾನದಿಂದ ಮಾಡಿದ ಶೋಧ ಹಾಗೂ ಆ ಶೋಧದ ಫಲಶ್ರುತಿಯನ್ನು ನಿರೂಪಿಸುವಾಗ ಅವರು ತೋರಿಸುವ ಪರಿಣಿತ ಕಥೆಗಾರನೊಬ್ಬ ತನ್ನ ಪಾತ್ರಪ್ರಪಂಚವನ್ನು ಚಿತ್ರಿಸುವಾಗಿನ ಸಹಾನುಭೂತಿ ಇವುಗಳನ್ನು ಗಮನಿಸಿದರೆ 'ಸಾಹಿತ್ಯ ಲೋಕದ ಸುತ್ತ–ಮುತ್ತ' ಮುನುಷ್ಯ ಸಂಬಂಧಗಳ ಕುರಿತು ಮೌಲಿಕ ಅಭ್ಯಾಸವಾಗಿ, ಮಾನವೀಯ ಸಂಬಂಧಗಳ ಒಳಸುಳಿಗಳ ಹುಡುಕಾಟವಾಗಿ ಕಾಣುತ್ತದೆ. ಮತ್ತೆ ಅವರು ನಿರೂಪಿಸಿರುವ ಬೇಂದ್ರೆ–ಮಾಸ್ತಿ, ಬೇಂದ್ರೆ–ಶಂಬಾ, ಬೇಂದ್ರೆ–ಕುವೆಂಪು, ಬೇಂದ್ರೆ–ಸಾಲಿ ಮೊದಲಾದ ಹತ್ತು ಹಲವು ಒಡನಾಟಗಳ ಕಥೆಗಳಲ್ಲಿ ಮನುಷ್ಯ ಸಂಬಂಧಗಳ ನಿಗೂಢತೆ ಹಾಗೂ ಅನೂಹ್ಯತೆ ಮತ್ತೆ ಮತ್ತೆ ನಮ್ಮ ಅರಿವಿಗೆ ಬಂದು ಗಿರಡ್ಡಿಯವರೊಂದಿಗೆ ನಾವೂ ಉದ್ಗರಿಸುವಂತಾಗುತ್ತದೆ."

ಈ ಕೃತಿಯಲ್ಲಿ ಧಾರವಾಡದ ಪರಿಸರವನ್ನು ಪರಿಚಯಿಸುವ ೫೬ ಲೇಖನಗಳಿವೆ. ಬೇಂದ್ರೆ ಅವರ ಕುರಿತು ಆಯಾ ಲೇಖನದ ಪ್ರಸಂಗಗಳೊಂದಿಗೆ ಮೂಡಿಬಂದಿದೆ. ನಮ್ಮ ಸಮಾಜದಲ್ಲಿ ಹಲವರ ಅಭಿಪ್ರಾಯಗಳೊಂದಿಗೆ ಬೇಂದ್ರೆಯವರ ಕುರಿತು ಉಂಟಾಗಿದ್ದ ನಿಲುವುಗಳಿಗೆ ಇಲ್ಲಿ ಕೆಲವು ಸರಿಯಾದ ಗ್ರಹಿಕೆಗಳನ್ನು ಹುಡುಕಿದ್ದಾರೆ. ಮಾಸ್ತಿ ಮತ್ತು ಬೇಂದ್ರೆಯವರ ನಡುವಿನ ಸಂಬಂಧವನ್ನು 'ಒಂದು ಸ್ನೇಹದ ಕಥೆ'ಯಲ್ಲಿ ಸಾಹಿತ್ಯ ಮತ್ತು ಬದುಕಿನ ಆಯಾಮಗಳ ಮೂಲಕ ಚರ್ಚಿಸಿದ್ದಾರೆ. ಕುವೆಂಪು ಮತ್ತು ಬೇಂದ್ರೆಯವರ ನಡುವಿನ ಆತ್ಮೀಯತೆ ಕುರಿತ ಹಲವು ತಪ್ಪು ಚರ್ಚೆಗಳಿಗೆ 'ಯುಗದ ಕವಿ, ಜಗದ ಕವಿ' ಎಂಬ ಲೇಖನದಲ್ಲಿ ಉತ್ತರ ನೀಡಿದ್ದಾರೆ. ಶಂಬಾ–ಬೇಂದ್ರೆ ಇವರ ನಡುವಿನ ಸಂಬಂಧದ ಆರಂಭ, ಗೆಳೆಯರ ಗುಂಪು ನಿರ್ವಹಿಸಿದ ಜಯಕರ್ನಾಟಕ' ಪತ್ರಿಕೆ ಹಾಗೂ ತಾತ್ವಿಕ ಭಿನ್ನಾಭಿಪ್ರಾಯಗಳನ್ನು 'ಶಂಬಾ–ಬೇಂದ್ರೆ ಪುರಾಣ' ಎಂಬುದಾಗಿ ಚರ್ಚಿಸಿದ್ದಾರೆ. ಈ ವಿಚಾರಗಳ ಜೊತೆಗೆ ಬೇಂದ್ರೆಯವರನ್ನು ಕುರಿತು ೧೪ ಕಥೆಗಳನ್ನು ಇಲ್ಲಿ ತಿಳಿಸಿದ್ದಾರೆ. 'ಬೆನ್ ರಾಮ್ ಸನ್', 'ಗೆಳೆಯರ ಗುಂಪಿನ ಆಟಗಳು', 'ಬೇಂದ್ರೆಯವರಿಗೆ ಹಮ್ಮಣಿ', 'ಸಾಧನಕೇರಿ–ಬೆಳಗಾವಿ ನಾಕಾ–ಸಾಧನಕೇರಿ...', 'ಎಷ್ಟು ಉಳಿಸಿದಂಗ ಆಯ್ತು?', 'ಇನ್ನೂ ಯಾಕ ಬರಲಿಲ್ಲವ್ವಾ ಹುಬ್ಬಳಿಯಾಂವಾ?', 'ಚಮತ್ಕಾರ', 'ಸಾಹಿತ್ಯದಲ್ಲಿ ನೀತಿ', 'ಡಿ. ಆರ್. ಬೇಂದ್ರೆ ಮತ್ತು ಡಿಆರ್ ಬೇಂದ್ರೆ', 'ಕನ್ನಡಕ್ಕೆ ಪೂರ್ತಿ ಲಕ್ಷ ಸಿಕ್ಕಂತಾಯಿತು', 'ಆಫ್ ಕೋರ್ಸ್ ಬೇಂದ್ರೆ', 'ಕಾಮನಕಟ್ಟೀ ಜಗಳ', 'ಧಾರವಾಡದಲ್ಲಿ ಕವಿಗಳು', 'ಹರ್ ಬಂಡರ್' ಅವರ 'ಒಂದೇ ಕರ್ನಾಟಕ' ಈ ಲೇಖನಗಳಲ್ಲಿ ಬೇಂದ್ರೆ ಕುರಿತು ಕಥೆಗಳಿವೆ. ಗಿರಡ್ಡಿ ಗೋವಿಂದರಾಜ ಅವರು ಈ ಕೃತಿಯ ಎಲ್ಲಾ ಲೇಖನಗಳನ್ನು 'ಪ್ರಸಂಗಗಳು' ಎಂದಿದ್ದಾರೆ.

೭೩. ೨೦೦೯., ನರಸಿಂಹಮೂರ್ತಿ ಹೂವಿನಹಳ್ಳಿ., ಬೇಂದ್ರೆ ಮತ್ತು ಕಂಬಾರರ ಕಾವ್ಯದಲ್ಲಿ ಪುರಾಣಪ್ರಜ್ಞೆ ಮತ್ತು ಸಮಕಾಲೀನತೆ

ಇದು ಸಂಶೋಧನಾ ಪ್ರೌಢಪ್ರಬಂಧವಾಗಿದೆ. ಬೇಂದ್ರೆ ಮತ್ತು ಕಂಬಾರರ ಕಾವ್ಯದಲ್ಲಿ ಪುರಾಣಪ್ರಜ್ಞೆಯನ್ನು ಅಧ್ಯಯನಮಾಡಿದ್ದಾರೆ. ಈ ಕೃತಿಯನ್ನು ಪ್ರೇರಣ ಪ್ರಕಾಶನ, ಬೆಂಗಳೂರು ಇವರು ೨೦೦೯ರಲ್ಲಿ ಪ್ರಕಟಿಸಿದ್ದಾರೆ.

ಬೇಂದ್ರೆ ಮತ್ತು ಕಂಬಾರರ ಕಾವ್ಯದಲ್ಲಿ ಪುರಾಣಪ್ರಜ್ಞೆ ಮತ್ತು ಸಮಕಾಲೀನತೆ : ಈ ಕೃತಿಯಲ್ಲಿ 'ಪುರಾಣಗಳ ವ್ಯಾಖ್ಯೆ', 'ಪ್ರಾಚೀನ ಸಾಹಿತ್ಯದಲ್ಲಿ ಪುರಾಣಗಳ ವಿಕಾಸ', 'ಆಧುನಿಕ ಕನ್ನಡ ಕಾವ್ಯದಲ್ಲಿ ಪುರಾಣ : ವ್ಯಾಪ್ತಿ ಮತ್ತು ಬೆಳವಣಿಗೆ', 'ಬೇಂದ್ರೆ ಕಾವ್ಯದಲ್ಲಿ ಪುರಾಣಪ್ರಜ್ಞೆ ಮತ್ತು ಸಮಕಾಲೀನತೆ', 'ಬೇಂದ್ರೆ ಹಾಗೂ ಕಂಬಾರರ ಕಾವ್ಯಗಳಲ್ಲಿ ಪುರಾಣಗಳ ವಸ್ತುವಿನ್ಯಾಸ : ಸಾಮ್ಯತೆ ಹಾಗೂ ಭಿನ್ನತೆ ಈ ಅಧ್ಯಾಯಗಳ ಮೂಲಕ ಬೇಂದ್ರೆ ಸಾಹಿತ್ಯವನ್ನು ಅಧ್ಯಯನಮಾಡಿದ್ದಾರೆ.

೭೪. ೨೦೦೯., ಸಿ. ಪಿ. ಕೃಷ್ಣಕುಮಾರ್., ಬೇಂದ್ರೆ ಪಂಚಮುಖ

ಸಿ. ಪಿ. ಕೃಷ್ಣಕುಮಾರ್ ಅವರು ಬೇಂದ್ರೆ ಸಾಹಿತ್ಯ ಕುರಿತು ರಚಿಸಿದ ಬಿಡಿ ಬಿಡಿ ಲೇಖನಗಳನ್ನು 'ಬೇಂದ್ರೆ ಪಂಚಮುಖ' ಎಂಬ ಹೆಸರಿನಲ್ಲಿ ತನುಮನು ಪ್ರಕಾಶನ, ಮೈಸೂರು ಇವರು ೨೦೦೯ರಲ್ಲಿ ಪ್ರಕಟಿಸಿದ್ದಾರೆ.

ಬೇಂದ್ರೆ ಪಂಚಮುಖ : ಐದು ಲೇಖನಗಳುಳ್ಳ ಕೃತಿ ಇದು. 'ಕೆಲವು ಕವನಗಳು', 'ಅರಳು ಮರಳು', 'ನಾಕು ತಂತಿಯ ತೊಡಕು', 'ಕಾವ್ಯ ಜಿಜ್ಞಾಸೆ ಮತ್ತು ವಿಮರ್ಶೆ', 'ಕನ್ನಡ ಮೇಘದೂತ' ಬೇಂದ್ರೆ ಅವರ ಸಾಹಿತ್ಯ ಕುರಿತು ಈ ಎಲ್ಲಾ ಲೇಖನಗಳು ಚರ್ಚಿಸುತ್ತವೆ.

೭೫. ೨೦೦೯., ಕೆ. ಎಸ್. ಶರ್ಮಾ., ಕುವಲಯ ಕಂಡ ಅಂದತ್ತ

ಕೆ. ಎಸ್. ಶರ್ಮಾ ಅವರು ಕುವಲಯ ಹೆಸರಿನೊಂದಿಗೆ ರಚಿಸಿದ ಕೃತಿ 'ಕುವಲಯ ಕಂಡ ಅಂದತ್ತ'. ಈ ಕೃತಿಯನ್ನು ಇವರದೇ ಪ್ರಕಾಶನ ಪುರೋಗಾಮಿ ಪ್ರಕಾಶನ, ಹುಬ್ಬಳ್ಳಿ ಮೂಲಕ ೨೦೦೯ರಲ್ಲಿ ಪ್ರಕಟಿಸಿದ್ದಾರೆ. ಬೇಂದ್ರೆ ಅವರ ಕೃತಿಗಳನ್ನು ಪ್ರಕಟಿಸುವಾಗ ಪ್ರಕಾಶಕರಾಗಿ ಬರೆದ ನುಡಿಗಳು, ಸಂಪಾದನಾ ಕಾರ್ಯದೊಂದಿಗೆ ಬರೆದ ನುಡಿಗಳು ಹಾಗೂ ಬೇಂದ್ರೆ ಸಾಹಿತ್ಯ ಅಧ್ಯಯನದಿಂದ ರಚಿಸಿದ ಇತರ ಲೇಖನಗಳು, ಭಾಷಣಗಳು ಈ ಎಲ್ಲಾ ವಿಚಾರಗಳ ಸಮಗ್ರ ಕೃತಿಯೇ 'ಕುವಲಯ ಕಂಡ ಅಂದತ್ತ'.

ಕುವಲಯ ಕಂಡ ಅಂದತ್ತ : ಬೇಂದ್ರೆ ಅವರ ಸಮಗ್ರ ಸಾಹಿತ್ಯದ ಸಮೀಕ್ಷೆ ಎಂಬ ಶಿರೋನಾಮೆಯೊಂದಿಗೆ ಪ್ರಕಟಿತವಾದ ಕೃತಿ ಇದಾಗಿದೆ. ಈ ಕೃತಿಯಲ್ಲಿ 'ಅಂದತ್ತನಿಗೆ ಕುವಲಯನ ಆದರದ ಒಳಮನದ ಕವನ–ನಮನ', 'ಬೇಂದ್ರೆಯವರ ಜೀವಿತಕಾಲದಲ್ಲಿ ಪ್ರಕಟವಾದ ಕವನಸಂಕಲನಗಳು' ಇವುಗಳಿಗೆ ಬರೆದ ಪ್ರಕಾಶಕರ ನುಡಿ, ಪ್ರಸ್ತಾವನೆ, ಸಂಪಾದನಾ ನುಡಿ ಇವೆಲ್ಲಾ ಸೇರಿವೆ. 'ಬೇಂದ್ರೆಯವರ ಮರಣೋತ್ತರ ಪ್ರಕಟವಾದ ಕವನ ಸಂಕಲನಗಳು', 'ಬೇಂದ್ರೆ ಅವರ ಆಯ್ದ ಕವನ ಸಂಕಲನಗಳು', 'ಬೇಂದ್ರೆ ಅವರ ಮರಾಠಿ ಕವನಗಳ ಭಾವಾನುವಾದ', 'ಲಕ್ಷ್ಮೀಬಾಯಿ ಬೇಂದ್ರೆ : ಶತಮಾನದ ನೆನಪು', ಬೇಂದ್ರೆ ಹಾಗೂ ವಿಜ್ಞಾನ', 'ಔದುಂಬರಗಾಥೆ' ಈ ವಿಭಾಗಗಳ ಮೂಲಕ ಕೆ.ಎಸ್ ಶರ್ಮಾ ಅವರು ಬೇಂದ್ರೆ ಅವರ ಸಾಹಿತ್ಯ ಅಧ್ಯಯನವನ್ನು ನೀಡಿದ್ದಾರೆ.

೭೬. ೨೦೧೦., ಕಿ.ರಂ. ನಾಗರಾಜ., ಅಕ್ಷತಾ .ಕೆ(ಸಂ) ಮತ್ತೆ ಮತ್ತೆ ಬೇಂದ್ರೆ

ಕಿ.ರಂ. ನಾಗರಾಜ ಅವರ ಬೇಂದ್ರೆ ಸಾಹಿತ್ಯ ಕುರಿತ ಉಪನ್ಯಾಸಗಳನ್ನು ಪುಸ್ತಕರೂಪದಲ್ಲಿ ಅಹರ್ನಿಶಿ ಪ್ರಕಾಶನದ ಮೂಲಕ ಅಕ್ಷತಾ .ಕೆ ಅವರು ಸಂಪಾದಿಸಿ ೨೦೧೦ರಲ್ಲಿ ಪ್ರಕಟಿಸಿದ್ದಾರೆ. ಈಕೃತಿಯ ಮುಖಪುಟದಲ್ಲಿ ತರುಣಬೇಂದ್ರೆ ಅವರ ಚಿತ್ರವನ್ನು ವಿನ್ಯಾಸ ಮಾಡಲಾಗಿದೆ. ಬೆನ್ನುಡಿಯಲ್ಲಿ ಕೆ.ಸಿ.ಶಿವಾರೆಡ್ಡಿ ಅವರು ತೆಗದ ಕಿ.ರಂ.ನಾಗರಾಜ ಅವರ ಚಿತ್ರವನ್ನು ವಿನ್ಯಾಸ ಮಾಡಲಾಗಿದೆ.

ಮತ್ತೆ ಮತ್ತೆ ಬೇಂದ್ರೆ : ಕಿ.ರಂ. ನಾಗರಾಜ ಅವರ ಐದು ಭಾಷಣಗಳು ಇಲ್ಲಿ ಲಿಖಿತ ರೂಪದಲ್ಲಿವೆ. ಈ ಭಾಷಣಗಳಿಗೆ ಈ ರೀತಿ ಹೆಸರು ನೀಡಲಾಗಿದೆ. ೨೦೧೦ರ ಮಾರ್ಚ್ ೧೦ ಮತ್ತು ೧೧ರಂದು ಎಂಇಎಸ್ ಕಾಲೇಜಿನಲ್ಲಿ ಏರ್ಪಡಿಸಿದ್ದ ಬೇಂದ್ರೆ ಕಾವ್ಯ ಕಮ್ಮಟದಲ್ಲಿ ನೀಡಿದ ಉಪನ್ಯಾಸ 'ಲೀಲೆಯಲಿ ಯಾವೂದೂ ವಿಫಲಮಲ್ಲ', ಹೆಗ್ಗೋಡು ನೀನಾಸಂ ಶಿಬಿರ ೨೦೦೬–೦೭ರಲ್ಲಿ ನೀಡಿದ ಉಪನ್ಯಾಸ 'ಕೋಟಿ ಕಾರ್ತಿಕೋತ್ಸವದಲ್ಲಿ ಮಿನುಗುತಿಹ ಜ್ಯೋತಿ ನಾನು', ೨೦೦೮ರ ಅಕ್ಟೋಬರ್ ೨೬ರಂದು ಬೆಂಗಳೂರಿನ ಕೆ.ವಿ.ಸುಬ್ಬಣ್ಣ ಆಪ್ತಸಮೂಹ ಏರ್ಪಡಿಸಿದ್ದ ಬೇಂದ್ರೆ ಸ್ಮರಣೆ ಕಾರ್ಯಕ್ರಮದಲ್ಲಿ ನೀಡಿದ ಉಪನ್ಯಾಸ 'ಏನು ಸವಿಯೊ ಅದನೆ ಕುಡಿ, ನಿನ್ನ ರುಚಿಯ ಹದವ ಹಿಡಿ', ನವೆಂಬರ್ ೧೯೮೧ರ 'ಶೂದ್ರ ಪತ್ರಿಕೆ'ಯಲ್ಲಿ ಬೇಂದ್ರೆ ವಿಶೇಷಾಂಕದಲ್ಲಿ 'ಬೇಂದ್ರೆ ಕಾವ್ಯ–ಕೆಲವು ಟೀಕೆ ಟಿಪ್ಪಣಿಗಳು' ಶೀರ್ಷಿಕೆಯಲ್ಲಿ ಪ್ರಕಟಿತವಾದ ಲೇಖನ 'ಮನದ ಚಿತ್ರಗಳೆ ಮೈಯ ತಾಳಿದೊಲು', ಆಗಸ್ಟ್ ೦೭ರ ೨೦೧೦ರಂದು ಬೆಂಗಳೂರಿನ 'ಸಂಚಯ' ಮತ್ತು ಸುಚಿತ್ರಾ ಕಲಾಕೇಂದ್ರ' ಏರ್ಪಡಿಸಿದ್ದ ಸಾಹಿತ್ಯ ಸಂಜೆ ಕಾರ್ಯಕ್ರಮದಲ್ಲಿ ನೀಡಿದ ಉಪನ್ಯಾಸ 'ಮರಣ ಮೂರ್ಛಿತ ದೇಹಕುಸಿರು ಹುಟ್ಟಿದ ಹಾಗೆ..' ಈ ಉಪನ್ಯಾಸ ಮುಗಿದ ಕೆಲ ಹೊತ್ತಿನಲ್ಲಿ ಕಿ.ರಂ. ನಾಗರಾಜ ಅವರು ನಮ್ಮನ್ನು ಅಗಲಿದರು. ಇವರ ಈ ಎಲ್ಲಾ ಭಾಷಣಗಳು 'ಮತ್ತೆ ಮತ್ತೆ ಬೇಂದ್ರೆ' ಕೃತಿಯಲ್ಲಿ ಬರಹ ರೂಪಗಳಾಗಿ ನಮಗೆ ಅಧ್ಯಯನಕ್ಕೆ ದೊರೆಯುತ್ತವೆ.

೭೭. ೨೦೧೦., ಜಿ.ವಿ. ಕುಲಕರ್ಣಿ., ಬೇಂದ್ರೆ ಒಳನೋಟ

ಜೀವಿ ಕುಲಕರ್ಣಿ ಅವರ ಬೇಂದ್ರೆ ಒಳನೋಟ ಕೃತಿಯನ್ನು ಪುರೋಗಾಮಿ ಪ್ರಕಾಶನ, ಹುಬ್ಬಳ್ಳಿ ಮೂಲಕ ೨೦೧೦ರಲ್ಲಿ ಪ್ರಕಟಿಸಿದ್ದಾರೆ.

ಬೇಂದ್ರೆ ಒಳನೋಟ : ಬೇಂದ್ರೆ ಅವರನ್ನು ಕುರಿತು ಸಂದರ್ಶನ, ದರ್ಶನ, ನೆನಪುಗಳ ಸಂಗ್ರಹವಾಗಿ ರಚನೆಯಾಗಿರುವ ಈ ಕೃತಿಯು 'ಬೇಂದ್ರೆ ಕುರಿತು ಸಂದರ್ಶನ', 'ಬೇಂದ್ರೆ ಕುರಿತು ದರ್ಶನ', 'ಬೇಂದ್ರೆ ನೆನಪುಗಳು' ಈ ಮೂರು ವಿಭಾಗದ ಮೂಲಕ ಬೇಂದ್ರೆ ಅವರ ಕುರಿತು ಸಮಾಜದೊಂದಿಗೆ ಮಾಹಿತಿಯನ್ನು ಒಳನೋಟವಾಗಿ ಸಂಪಾದಿಸಿದ್ದಾರೆ.

೭೮. ೨೦೧೦., ಗೀತಾ ವಸಂತ., ಬೇಂದ್ರೆಕಾವ್ಯ: ಅವಧೂತಪ್ರಜ್ಞೆ

ಗೀತಾವಸಂತ ಅವರ 'ಬೇಂದ್ರೆಕಾವ್ಯ: ಅವಧೂತಪ್ರಜ್ಞೆ' ಕೃತಿಯು ದ.ರಾ. ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ಧಾರವಾಡ ಇವರು ೨೦೦೬–೦೭ನೇ ಸಾಲಿನ ಫೆಲೋಶಿಪ್ ವತಿಯಿಂದ ರಚನೆಯಾಗಿದೆ. ಈ ಕೃತಿಯನ್ನು ೨೦೧೦ರಲ್ಲಿ ದ.ರಾ. ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ಇವರು ಗ್ರಂಥಮಾಲೆಯ ಐದನೇ ಕೃತಿಯಾಗಿ ಪ್ರಕಟಿಸಿದ್ದಾರೆ.

ಬೇಂದ್ರೆಕಾವ್ಯ: ಅವಧೂತಪ್ರಜ್ಞೆ : ಬೇಂದ್ರೆ ಸಾಹಿತ್ಯದಲ್ಲಿ ಕಾವ್ಯವನ್ನು ಕುರಿತು ಅಧ್ಯಯನ ಮಾಡಿದ ಗೀತಾವಸಂತ ಅವರು ಐದು ಅಧ್ಯಾಯಗಳಲ್ಲಿ ವಿಂಗಡಿಸಿಕೊಂಡು ಪ್ರತಿ ಅಧ್ಯಾಯಕ್ಕೂ ತಂತಿ ಎಂಬ ಹೆಸರಿನೊಂದಿಗೆ ಶೀರ್ಷಿಕೆ ನೀಡಿದ್ದಾರೆ. 'ಬೇಂದ್ರೆ ಕಾವ್ಯತಂತಿಯ ಬೆರಳು : ಅವಧೂತ ಪ್ರಜ್ಞೆ' ಎಂಬ ಶೀರ್ಷಿಕೆಯನ್ನು ಸೂತ್ರಸ್ವರವಾಗಿ ಗಮನಿಸಿ ನಾಲ್ಕು ತಂತಿಗಳಲ್ಲಿ ಅಧ್ಯಾಯ ವಿಭಾಗಿಸಿದ್ದಾರೆ. 'ಬೇಂದ್ರೆ ಕಾವ್ಯದಲ್ಲಿ ಇರುವು : ಆತ್ಮಜ್ಞಾನ', 'ಬೇಂದ್ರೆ ಕಾವ್ಯದಲ್ಲಿ ಅರಿವು– ಗುರು ಪ್ರಜ್ಞೆ', 'ಬೇಂದ್ರೆ ಕಾವ್ಯದಲ್ಲಿ ಹರಿವು – ಸೃಷ್ಟಿ ರಹಸ್ಯ', 'ಬೇಂದ್ರೆ ಕಾವ್ಯದಲ್ಲಿ ಸಮರಸ ಪ್ರಜ್ಞೆ : ವಿಶ್ವಮೈತ್ರಿ' ಈ ವಿಚಾರಗಳನ್ನು ಕುರಿತು ಅಧ್ಯಯನಮಾಡಿರುವುದನ್ನು ಗಮನಿಸಬಹುದು.

೭೯. ೨೦೧೦., ವಿಠ್ಠಲರಾವ ಗಾಯಕವಾಡ., ಬೇಂದ್ರೆಯವರ ಮರಾಠಿ ಸಾಹಿತ್ಯಕೃಷಿ

ವಿಠ್ಠಲರಾವ ಗಾಯಕವಾಡ ಅವರ 'ಬೇಂದ್ರೆಯವರ ಮರಾಠಿ ಸಾಹಿತ್ಯ ಕೃಷಿ' ಕೃತಿಯು ದ.ರಾ. ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ಧಾರವಾಡ ಇವರು ೨೦೦೬–೦೭ನೇ ಸಾಲಿನ ಫೆಲೋಶಿಪ್ ವತಿಯಿಂದ ರಚನೆಯಾಗಿದೆ. ಈ ಕೃತಿಯನ್ನು ೨೦೧೦ರಲ್ಲಿ ದ.ರಾ. ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ಇವರು ಗ್ರಂಥಮಾಲೆಯ ಆರನೇ ಕೃತಿಯಾಗಿ ಪ್ರಕಟಿಸಿದ್ದಾರೆ.

ಬೇಂದ್ರೆಯವರ ಮರಾಠಿ ಸಾಹಿತ್ಯ ಕೃಷಿ : ಬೇಂದ್ರೆ ಅವರು ಕನ್ನಡದ ಜೊತೆಗೆ ಮಹಾರಾಷ್ಟ್ರದ ಮೂಲಕ ಮರಾಠಿ ಭಾಷೆಯೊಂದುಗೆ ಹೊಂದಿದ್ದ ಸಂಬಂಧವನ್ನು ಇಲ್ಲಿ ಅವರ ಜೀವನ ಹಾಗೂ ಹಿನ್ನಲೆಯ ಮೂಲಕ ವಿವರಿಸಲಾಗಿದೆ. ಮರಾಠಿಯಲ್ಲಿ ಪದ್ಯ ಕೃಷಿ, ಮರಾಠಿಯಲ್ಲಿ ಗದ್ಯ ಕೃಷಿಯನ್ನು ಅಧ್ಯಯನದ ಮೂಲಕ ಪರಿಚಯಿಸಿದ್ದಾರೆ.

೮೦. ೨೦೧೦., ಬೆಳಗೆರೆ ಕೃಷ್ಣಶಾಸ್ತ್ರಿ., ಬೆಳೆಗೆರೆ ಕಂಡ ಬೇಂದ್ರೆ

ಡಾ. ದ. ರಾ. ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ಧಾರವಾಡ ಇವರು ಬೇಂದ್ರೆ ಅವರ ಮೂವತ್ತನೆಯ ಪುಣ್ಯ ಸ್ಮೃತಿಯ ದಿನ ಏಳನೆಯ ಕೃತಿಯಾಗಿ 'ಬೆಳಗೆರೆ ಕಂಡ ಬೇಂದ್ರೆ' ಕೃತಿಯನ್ನು ಪ್ರಕಟಿಸಿದ್ದಾರೆ. ಬೆಳಗೆರೆಯ ಕೃಷ್ಣ ಶಾಸ್ತ್ರಿಗಳು ಇಪ್ಪತ್ತು ವರ್ಷದ ಹಿಂದೆ, ಮನೋಹರ ಗ್ರಂಥ ಮಾಲೆಗಾಗಿ 'ಸಾಹಿತಿಗಳ

ಸ್ಮೃತಿ' ಎಂಬ ಪುಸ್ತಕ ಬರೆದಿದ್ದರು. ಈ ಕೃತಿಯನ್ನೇ 'ಬೆಳಗೆರೆ ಕಂಡ ಬೇಂದ್ರೆ' ಎಂದು ಮರುಮುದ್ರಣ ಮಾಡಲಾಗಿದೆ.

ಬೆಳಗೆರೆ ಕಂಡ ಬೇಂದ್ರೆ : ಈ ಕೃತಿಯಲ್ಲಿ ಬೆಳಗೆರೆ ಕೃಷ್ಣಶಾಸ್ತ್ರಿಗಳು ತಮ್ಮ ಒಡನಾಟದ ಬೇಂದ್ರೆ ಅವರನ್ನು ಹನ್ನೆರಡು ಲೇಖನಗಳಲ್ಲಿ ಕಟ್ಟಿಕೊಟ್ಟಿದ್ದಾರೆ. 'ಬಳ್ಳಾರಿಗೆ ಬಂದ ಬೇಂದ್ರೆ'., 'ನಾಟಕ ಮತ್ತು ತ.ರಾ.ಸು'., 'ಪ್ರೇಕ್ಷಕ ಪ್ರತಿಕ್ರಿಯೆ'., 'ಪೇಜಾವರ ಶ್ರೀಗಳ ಜತೆ'., 'ಧಾರವಾಡದಲ್ಲಿ ಚಂದ್ರಶೇಖರ ಶಾಸ್ತ್ರಿಗಳು'., ಪ್ರವಾಸನುಭವದ ಮೆಲುಕು'., 'ಧಾರವಾಡದ ಹಾದಿಬೀದಿಗಳಲ್ಲಿ'., 'ದಂಪತಿಗಳಿಂದ ಆತಿಥ್ಯ ಸ್ವಿಕಾರ'., 'ಶಿವಮೊಗ್ಗದಲ್ಲಿ ಕವಿತಾ ವಾಚನ'., 'ದತ್ತಾತ್ರೇಯನ ರೂಪ'., 'ನೋಡದ ತಂಗಿಯ ನೆನೆದು.....'., 'ಸ್ವಾಮೀಜಿಯವರೊಂದಿಗೆ'., ಈ ಎಲ್ಲಾ ಲೇಖನಗಳಲ್ಲಿ ಬೇಂದ್ರೆ ಅವ ಒಡನಾಟದ ಅನುಭವಗಳಿವೆ. ಕೃಷ್ಣಶಾಸ್ತ್ರಿಗಳ ತಂದೆಯಾದ ಚಂದ್ರಶೇಖರ ಶಾಸ್ತ್ರಿಗಳ ಕುರಿತು, ಸಹೋದರಿಯಾದ ಜಾನಕಮ್ಮ ಅವರನ್ನು ಕುರಿತು ಬೇಂದ್ರೆ ಅವರು ಬರೆದ 'ಓ ನಾಗರಾಜ !'., 'ತಂಗಿ ಜಾನಕಮ್ಮಾ' ಕವಿತೆಗಳನ್ನು ಈ ಕೃತಿಯ ಅನುಬಂಧದಲ್ಲಿ ನೀಡಲಾಗಿದೆ. ಸಂಚಯ ಪತ್ರಿಕೆಯ ಸಂಪಾದಕರಾದ ಡಿ.ವಿ. ಪ್ರಹ್ಲಾದ ಅವರು 'ಬೆಳಗೆರೆ ಕೃಷ್ಣಶಾಸ್ತ್ರಿ'ಗಳ ಕುರಿತು 'ಬೆಳಗೆರೆ ಬೆಳ್ಳಕ್ಕಿ' ಎಂಬ ವ್ಯಕ್ತಿತ್ವ ಚಿತ್ರಣದ ಲೇಖನ ರಚಿಸಿದ್ದಾರೆ. ಈ ಲೇಖನವನ್ನು ಅನುಬಂಧದಲ್ಲಿ ನೀಡಲಾಗಿದೆ.

೮೧. ೨೦೧೦.,ಕೃಷ್ಣಾ ಕಟ್ಟಿ., ಶ್ರಾವಣದ ಕವಿ ಬೇಂದ್ರೆ

ಕೃಷ್ಣಾಕಟ್ಟಿ ಅವರ 'ಶ್ರಾವಣದ ಕವಿ ಬೇಂದ್ರೆ' ಎಂಬ ಕಿರುಹೊತ್ತಿಗೆಯನ್ನು ಕನ್ನಡ ವಿಶ್ವವಿದ್ಯಾಲಯ, ಹಂಪಿಯು ೨೦೧೦ರಲ್ಲಿ ಮಂಟಪಮಾಲೆ ೨೨೯ರ ಕೃತಿಯಾಗಿ ಪ್ರಕಟಿಸಿದೆ. ಕನ್ನಡ ಸಾಹಿತ್ಯದಲ್ಲಿ ವಸಂತಮಾಸ, ಶ್ರಾವಣದ ಪರಿಕಲ್ಪನೆಯನ್ನು ವಿವರಿಸುತ್ತಲೇ ಬೇಂದ್ರೆ ಅವರ ಕವಿತೆಗಳಲ್ಲಿ ಮೂಡಿರುವ ಶ್ರಾವಣದ ಚಿಂತನೆಗಳನ್ನು ವಿಶ್ಲೇಷಣೆ ಮಾಡಿದ್ದಾರೆ.

೮೨. ೨೦೧೦., ಜಿ. ಕೃಷ್ಣಪ್ಪ., ಅಂತರಂಗದತ್ತ ನಯನ

ಜಿ. ಕೃಷ್ಣಪ್ಪ ಅವರ 'ಅಂತರಂಗದತ್ತ ನಯನ' ಎಂಬ ಕೃತಿಯು ಬೇಂದ್ರೆ ಸಾಹಿತ್ಯ ಕುರಿತು ವಿಮರ್ಶಾ ಲೇಖನಗಳನ್ನು ಒಳಗೊಂಡಿದೆ. ಈ ಕೃತಿಯನ್ನು ಬಸವ ಪ್ರಕಾಶನ ಮತ್ತು ಪುಸ್ತಕ ವ್ಯಾಪಾರಿಗಳು, ಗುಲಬರ್ಗಾ ಇವರು ಸಾಹಿತ್ಯ ಮಾಲಿಕೆಯ ಮೂಲಕ ಪ್ರಕಟಿಸಿದ್ದಾರೆ. ಈ ಕೃತಿಗೆ ಪಿ.ವಿ ನಾರಾಯಣ ಅವರು ಮುನ್ನುಡಿ ಬರೆದಿದ್ದಾರೆ. ಶ್ರೀಶೈಲ ನಾಗರಾಳ ಅವರು ಬೆನ್ನುಡಿ ಬರೆಹ ಬರೆದಿದ್ದಾರೆ.

ಅಂತರಂಗದತ್ತ ನಯನ: ಈ ಕೃತಿಯಲ್ಲಿ ಹತ್ತೊಂಬತ್ತು ಲೇಖನಗಳಿವೆ. ಈ ಲೇಖನಗಳಲ್ಲಿ ಕೆಲವು ಈಗಾಗಲೇ ಸಂಯುಕ್ತ ಕರ್ನಾಟಕ, ಜಾಣಗೆರೆ ಪತ್ರಿಕೆ, ಬಹುಜನ ಕನ್ನಡಿಗರು, ಅಭಿವ್ಯಕ್ತಿ ಈ ಎಲ್ಲಾ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಈ ಕೃತಿಯಲ್ಲಿ ಬೇಂದ್ರೆ ಸಾಹಿತ್ಯ ಕುರಿತು ಮೂರು ಲೇಖನಗಳು ಪ್ರಕಟಗೊಂಡಿವೆ. 'ಬೇಂದ್ರೆ ಕಾವ್ಯ : ಅನುಭವ ಮತ್ತು ಅನುಭಾವ', 'ಬೇಂದ್ರೆ ಕಾವ್ಯ : ಸ್ತ್ರೀ', 'ಬೇಂದ್ರೆ ಕಾವ್ಯ : ದೇಶ ಭಕ್ತಿ'. ಈ ಲೇಖನಗಳ ಮೂಲಕ ಜಿ. ಕೃಷ್ಣಪ್ಪ ಅವರ ಬೇಂದ್ರೆ ಸಾಹಿತ್ಯವನ್ನು ಕುರಿತು ಪರಿಚಯಿಸಿದ್ದಾರೆ.

೮೩. ೨೦೧೧., ಜಿ. ಎಸ್. ಆಮೂರ., ಸಂಭಾವಿತ

ಜಿ.ಎಸ್. ಆಮೂರ ಅವರ ಬೇಂದ್ರೆಕೇಂದ್ರಿತ ಬರೆಹಗಳ ಸಂಗ್ರಹ 'ಸಂಭಾವಿತ'. ಈ ಕೃತಿಯನ್ನು ರಾಜ್ಯೋತ್ಸವದ ೫೫ನೇ ಹೊತ್ತಿಗೆಯಾಗಿ ಸಪ್ನ ಬುಕ್ ಹೌಸ್ ಅವರು ೨೦೧೧ರಲ್ಲಿ ಪ್ರಕಟಿಸಿದ್ದಾರೆ. ಈ ಕೃತಿಯನ್ನು ವಾಮನಬೇಂದ್ರೆ ಅವರಿಗೆ ಅರ್ಪಿಸಲಾಗಿದೆ. ಈ ಕೃತಿಗೆ ಬೆನ್ನುಡಿಯನ್ನು ಗಿರಡ್ಡಿ ಗೋವಿಂದರಾಜ ಅವರು ಬರೆದಿದ್ದಾರೆ.

ಸಂಭಾವಿತ : ಸಂಭಾವಿತ ಕೃತಿಯು ಬೇಂದ್ರೆ ಸಾಹಿತ್ಯ ಕುರಿತ ಅಧ್ಯಯನಗಳಾಗಿವೆ. ಈ ಕೃತಿಯಲ್ಲಿ ೧೨ಲೇಖನಗಳಿದ್ದು ಒಂದು ಭಾಷಣವಿದೆ. 'ಬೇಂದ್ರೆ : ನಾನು ಕಂಡಂತೆ', 'ಸಾಮರಸ್ಯದ ಶೋಧ : ಒಂದು ಕಿರಿ ಜೀವಚಿತ್ರ', 'ಬೇಂದ್ರೆ ಅವರ ಜೀವನ ಪ್ರಜ್ಞೆ', 'ಬೇಂದ್ರೆಯವರ ಕಾವ್ಯಾನುಸಂಧಾನ', 'ಅಲ್ಲಮಪ್ರಭು : ಬೇಂದ್ರೆಯವರ ದೃಷ್ಟಿಯಲ್ಲಿ', ;ಬೇಂದ್ರೆಯವರ ಕಾವ್ಯಧರ್ಮ', 'ಬೇಂದ್ರೆ ಕಾವ್ಯದ ವಿಮರ್ಶಾ ಪರಂಪರೆ', 'ಬೇಂದ್ರೆ ಕಾವ್ಯದಲ್ಲಿ ಪ್ರಜ್ಞೆ ಮತ್ತು ಪರಿಸರ', 'ಬೇಂದ್ರೆಯವರ ಎರಡು ಶ್ರಾವಣಗೀತಗಳು', ಬೇಂದ್ರೆ ಕಾವ್ಯದ ಪ್ರತಿಮಾಲೋಕ', 'ಬೇಂದ್ರೆಯವರ ಕವಿತೆಗಳಲ್ಲಿ ಅನುಭಾವ', 'ಮಾರ್ಕ್ಸ್ ಮತ್ತು ಬೇಂದ್ರೆ' ಈ ಎಲ್ಲಾ ಲೇಖನಗಳ ಜೊತೆಗೆ 'ಜೀವಿಯವರ ಬೇಂದ್ರೆ ಸಮಗ್ರ ಕಾವ್ಯ ದರ್ಶನ' ಎಂಬ ಶೀರ್ಷಿಕೆಯೊಂದಿಗೆ ಜೀವಿ ಕುಲಕರ್ಣಿ ಅವರ ಬೇಂದ್ರೆ ಸಾಹಿತ್ಯ ಕುರಿತ ಅಧ್ಯಯನವನ್ನು ಪರಮಾರ್ಶನ ಮಾಡಿದ್ದಾರೆ.

೮೪. ೨೦೧೧., ಜಿ. ಕೃಷ್ಣಪ್ಪ., ಹೂತದ ಹುಣಸಿ (ದ.ರಾ.ಬೇಂದ್ರೆ ಕಾವ್ಯ ವಿಮರ್ಶೆ)

ಜಿ. ಕೃಷ್ಣಪ್ಪ ಅವರ 'ಹೂತದ ಹುಣಸಿ' (ದ.ರಾ.ಬೇಂದ್ರೆ ಕಾವ್ಯ ವಿಮರ್ಶೆ) ಕೃತಿಯನ್ನು ಕಾಮಧೇನು ಪ್ರಕಾಶನ, ಬೆಂಗಳೂರು ಇವರು ೨೦೧೧ರಲ್ಲಿ ಪ್ರಕಟಿಸಿದ್ದಾರೆ.

ಹೂತದ ಹುಣಸಿ: ಈ ಕೃತಿಯಲ್ಲಿ ಬೇಂದ್ರೆ ಅವರ ಹದಿಮೂರು ಕವಿತೆಗಳಿಗೆ ವಿಮರ್ಶೆ ನೀಡಿದ್ದಾರೆ. ಈ ಕೃತಿಗೆ ಶಂಕರ ಮೊಕಾಶಿ ಪುಣೇಕರ ಅವರು ಮುನ್ನುಡಿ ರಚಿಸಿದ್ದಾರೆ. ತಮ್ಮ ಮುನ್ನುಡಿ ಬರೆಹದಲ್ಲಿ ಈ ರೀತಿ ತಿಳಿಸಿದ್ದಾರೆ. "ಇಂಥ ಗ್ರಂಥಕ್ಕಾಗಿ ಕಳೆದ ಐವತ್ತು ವರ್ಷಗಳವರೆಗೆ ನಾನು ಕಾದಿದ್ದೇನೆ. ನನ್ನ ಹಸಿವನ್ನು ಜಿ. ಕೃಷ್ಣಪ್ಪ ಹಿಂಗಿಸಿದ್ದಾರೆ. ಅದಕ್ಕಾಗಿ ಈ ಸಂಕಲನವನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. 'ಹೂತದ ಹುಣಸಿ', 'ಜೋಗಿ', 'ಸಣ್ಣ ಸೋಮವಾರ', 'ನಾಕುತಂತಿ', 'ಶ್ರೀ ವಿವೇಕಾನಂದ ಶಿಖರ –ಪ್ರಗಾಥಾ', 'ಬ್ಯಾಬೆಲ್', 'ಹೆಟರ –ಡಾಕ್ಸೀ', 'ಶ್ರೀ ಗುರುವರೇಣ್ಯ', 'ಮತ್ತೆ ಬಂತು ಶ್ರಾವಣ', 'ಪರಾಕಿ', 'ಮಾತೃವಂದನ', 'ನಾಳಿನ ಕನಸು', 'ಸರ್ವಮಂಗಲೆ' ಈ ಎಲ್ಲಾ ಕವಿತೆಗಳಿಗೆ ಸಂಕ್ಷಿಪ್ತವಾದ ವಿಮರ್ಶೆ ನೀಡಿದ್ದಾರೆ.

೮೫. ೨೦೧೧., ಟಿ.ಸಿ ಭಾರತಿ., ಬೇಂದ್ರೆಯವರ ಕಾವ್ಯದಲ್ಲಿ ಮಾತೃತ್ವದ ಪರಿಕಲ್ಪನೆ

'ಬೇಂದ್ರೆಯವರ ಕಾವ್ಯದಲ್ಲಿ ಮಾತೃತ್ವದ ಪರಿಕಲ್ಪನೆ' ಈ ಕೃತಿಯು ಸಂಶೋಧನಾ ಮಹಾ ಪ್ರಬಂಧವಾಗಿದೆ. ಟಿ. ಸಿ. ಭಾರತಿ ಅವರ ಸಂಶೋಧನೆಗೆ ಶ್ರೀಕಂಠ ಕೂಡಿಗೆ ಅವರು ಮಾರ್ಗದರ್ಶನ ನೀಡಿ ಈ ಕೃತಿಗೆ ಮುನ್ನುಡಿಯನ್ನು ರಚಿಸಿದ್ದಾರೆ. ೨೦೧೧ರಲ್ಲಿ ನಿರಂತರ ಪ್ರಕಾಶನ ಬೆಂಗಳೂರು ಇವರು ಪ್ರಕಟಗೊಳಿಸಿದ್ದಾರೆ.

ಬೇಂದ್ರೆಯವರ ಕಾವ್ಯದಲ್ಲಿ ಮಾತೃತ್ವದ ಪರಿಕಲ್ಪನೆ: ಎಂಟು ಅಧ್ಯಾಯಗಳಲ್ಲಿ ಬೇಂದ್ರೆ ಅವರ ಸಾಹಿತ್ಯದಲ್ಲಿ ಮಾತೃತ್ವದ ಪರಿಕಲ್ಪನೆಯನ್ನು ಅಧ್ಯಯನಮಾಡಿದ್ದಾರೆ. ಬೇಂದ್ರೆಯವರಲ್ಲಿ ಮಾತೃತ್ವದ ಪರಿಕಲ್ಪನೆ ಬೆಳೆದು ಬಂದ ಬಗೆ, ಮುಖ್ಯ ನೆಲೆಗಳು, ಕಾವ್ಯದಲ್ಲಿ ಮಾತೃ ವಾತ್ಸಲ್ಯ, ಅನುಭಾವ, ಪ್ರಭಾವಗಳು ಹಾಗೂ ಕೆಲವು ಮಹತ್ವದ ಕವಿತೆಗಳ ವಿಶ್ಲೇಷಣೆಯನ್ನು ಈ ಕೃತಿಯಲ್ಲಿ ಅಧ್ಯಯನ ಮಾಡಬಹುದು. ಶ್ರೀಕಂಠ ಕೂಡಿಗೆ ಅವರು ಮುನ್ನುಡಿ ಬರೆಹದಲ್ಲಿ ಈ ರೀತಿ ಕೃತಿ ಕುರಿತು ಸ್ಪಷ್ಟಪಡಿಸಿದ್ದಾರೆ "ಈ ಕೃತಿಯಲ್ಲಿ ಎಂಟು ವಿಭಿನ್ನ ಅಧ್ಯಯನ ವಿನ್ಯಾಸಗಳಿದ್ದು, ಬೇಂದ್ರೆಯವರ ವೈಯಕ್ತಿಕ ಬದುಕಿನ ವಿವರ ಹಾಗೂ ಸೃಜನಶೀಲ ಮನೋಧರ್ಮದ ನೆಲೆಗಳನ್ನು ವಿಸ್ತೃತವಾಗಿ ಚರ್ಚಿಸಲಾಗಿದೆ." ಈ ಗ್ರಹಿಕೆಯ ಅಧ್ಯಯನವೂ ಹೊಸ ಪ್ರವೇಶಿಕೆ ನೀಡುತ್ತದೆ.

೮೬. ೨೦೧೧., ಸುರೇಶ ವೆಂ. ಕುಲಕರ್ಣಿ., ಬೇಂದ್ರೆ ಬೆಳಕು

ಸುರೇಶ ವೆಂ. ಕುಲಕರ್ಣಿ ಅವರ 'ಬೇಂದ್ರೆ ಬೆಳಕು' ಕೃತಿಯನ್ನು ೨೦೧೧ರಲ್ಲಿ ದ.ರಾ.ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ಗ್ರಂಥಮಾಲೆಯ ಒಂಬತ್ತನೇ ಕೃತಿಯಾಗಿ ಪ್ರಕಟಿಸಿದ್ದಾರೆ.

ಬೇಂದ್ರೆ ಬೆಳಕು : ಕೋಟಿ ಕಾರ್ತಿಕೋತ್ಸವದಲ್ಲಿ ಮಿನುಗುತಿಹ ಜ್ಯೋತಿ ಎಂಬುದಾಗಿ ಅಡಿ ಶೀರ್ಷಿಕೆ ಹೊಂದಿರುವ ಈ ಕೃತಿಯು ಐವತ್ತೈದು ಪ್ರಬಂಧಗಳ ಸಂಗ್ರಹವಾಗಿದೆ. ಈ ಎಲ್ಲಾ ಪ್ರಬಂಧಗಳು ಬೇಂದ್ರೆ ಅವರ ಬದುಕು, ವ್ಯಕ್ತಿತ್ವ, ಸಾಹಿತ್ಯದ ಜೀವನವನ್ನು ಪರಿಚಯಿಸುವ ಕಥಾ ಮಾದರಿಗಳಾಗಿವೆ.

೮೭. ೨೦೧೨., ಎಚ್.ಬಿ. ಪೂಜಾರ(ಸಂ)., ಬೇಂದ್ರೆ ಅಂದದ್ದು ಆಡಿದ್ದು

ಎಚ್.ಬಿ. ಪೂಜಾರ ಅವರು ಸಂಪಾದಿಸಿರುವ 'ಬೇಂದ್ರೆ ಅಂದದ್ದು ಆಡಿದ್ದು' ಎಂಬ ಕೃತಿಯನ್ನು ೨೦೧೨ರಲ್ಲಿ ದ.ರಾ. ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ಧಾರವಾಡ ಇವರು ಬೇಂದ್ರೆ ಅವರ ಮೂವತ್ತೆರಡನೆಯ ಪುಣ್ಯಸ್ಮೃತಿಯ ದಿನ ಪ್ರಕಟಿಸಿದ್ದಾರೆ.

ಬೇಂದ್ರೆ ಅಂದದ್ದು ಆಡಿದ್ದು : ವಿವಿಧ ಪತ್ರಿಕೆಗಳಲ್ಲಿ ವಿವಿಧ ಲೇಖಕರು ಬೇರೆ ಬೇರೆ ಸಮಯದಲ್ಲಿ ಬರೆದ ಬೇಂದ್ರೆ ಅವರ ಒಡನಾಟದ ಲೇಖನಗಳನ್ನು ತೊಂಬತ್ತಾರು ಪುಟಗಳ ಕೃತಿಯಾಗಿ ಎಚ್.ಬಿ. ಪೂಜಾರ ಅವರು ಸಂಪಾದಿಸಿದ್ದಾರೆ. ಇದರಲ್ಲಿ ಒಟ್ಟು ಮೂವತ್ತೆರಡು ಲೇಖಕರ ಲೇಖನಗಳಿವೆ.

೮೮. ೨೦೧೨., ಚೆನ್ನವೀರ ಕಣವಿ., ಬೇಂದ್ರೆ ಕಾವ್ಯದ ಕುಹು ಕ್ಕುಹೂ

ಚೆನ್ನವೀರ ಕಣವಿ ಅವರ 'ಬೇಂದ್ರೆ ಕಾವ್ಯದ ಕುಹು ಕ್ಕುಹೂ' ಕೃತಿಯನ್ನು ೨೦೧೨ರಲ್ಲಿ ದ.ರಾ. ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ಧಾರವಾಡ ಇವರು ಬೇಂದ್ರೆ ಅವರ ಮೂವತ್ತೆರಡನೆಯ ಪುಣ್ಯಸ್ಮೃತಿಯ ದಿನ ಪ್ರಕಟಿಸಿದ್ದಾರೆ.

ಬೇಂದ್ರೆ ಕಾವ್ಯದ ಕುಹು ಕ್ಕುಹೂ : ಈ ಕೃತಿಯಲ್ಲಿ ಚೆನ್ನವೀರ ಕಣವಿ ಅವರು ವಿವಿಧ ಸಂದರ್ಭಗಳಲ್ಲಿ ರಚಿಸಿದ ಹನ್ನೆರಡು ಲೇಖನಗಳು ಪ್ರಕಟಗೊಂಡಿವೆ. ೧೯೬೬ರಲ್ಲಿ ರಚಿಸಿದ 'ಎಪ್ಪತ್ತರ ಬೇಂದ್ರೆ' ಕವನ, ೧೯೫೬ರಲ್ಲಿ ರಚನೆಯಾದ 'ಬೇಂದ್ರೆ ಕಾವ್ಯದ ಭಾವ ಸಂಪದ' ಲೇಖನ, ೧೯೬೦ರಲ್ಲಿ ರಚನೆಯಾದ 'ಅರಳು ಮರಳು' ಲೇಖನ, ೧೯೭೫ರಲ್ಲಿ ರಚನೆಯಾದ 'ಎದೆಯ ಒಕ್ಕಲಿಗನ ಹಾಡು', ೧೯೮೩ರಲ್ಲಿ ರಚನೆಯಾದ 'ಬೇಂದ್ರೆ ನಾ.ದ. ಸಂವಾದ', ೧೯೮೯ರಲ್ಲಿ ರಚಿಸಿದ 'ಬೇಂದ್ರೆ ಕಾವ್ಯದ ವಿಭಿನ್ನ ನೆಲೆಗಳು', ೧೯೯೬ರಲ್ಲಿ ರಚಿಸಿದ 'ಬೇಂದ್ರೆ : ಕಾವ್ಯ ಭಾಷೆ ಮತ್ತು ಪ್ರತಿಮಾ ಯೋಜನೆ', ೧೯೯೭ರಲ್ಲಿ ರಚಿಸಿದ 'ನಾ ಕಂಡ ಬೇಂದ್ರೆ : ಜೀವನ ಮತ್ತು ಸಾಹಿತ್ಯ', ೨೦೦೫ರಲ್ಲಿ ರಚಿಸಿದ 'ವರಕವಿಯೊಂದಿಗೆ ಒಡನಾಟ', ೨೦೦೬ರಲ್ಲಿ ರಚಿಸಿದ 'ಬೇಂದ್ರೆ ಕಾವ್ಯ ಪದ್ಧತಿ', ೨೦೧೯ರಲ್ಲಿ ರಚನೆಯಾದ 'ವರಕವಿ ಬೇಂದ್ರೆ ಮತ್ತು ನಾವು : ಸೃಜನಶೀಲ ಪ್ರತಿಕ್ರಿಯೆ' ಹಾಗೂ ೧೯೮೬ರಲ್ಲಿ ರಚಿಸಿದ 'ಬೇಂದ್ರೆ ಪ್ರತಿಮೆ' ಎಂಬ ಕವಿತೆ ಈ ಕೃತಿಯಲ್ಲಿ ಪ್ರಕಟಗೊಂಡಿವೆ.

೮೯. ೨೦೧೨., ಕೀರ್ತಿನಾಥ ಕುರ್ತಕೋಟಿ., ಗಿರಡ್ಡಿ ಗೋವಿಂದರಾಜ(ಸಂ)., ಬೇಂದ್ರೆ ಕಾವ್ಯವಿಮರ್ಶೆ

ಕೀರ್ತಿನಾಥ ಕುರ್ತಕೋಟಿ ಅವರು ಬೇಂದ್ರೆ ಸಾಹಿತ್ಯ ಕುರಿತು ರಚಿಸಿದ ಎಲ್ಲಾ ವಿಮರ್ಶಾ ಕೃತಿಗಳು, ಲೇಖನಗಳನ್ನು ಗಿರಡ್ಡಿ ಗೋವಿಂದರಾಜ ಅವರು ಸಮಗ್ರ ಸಾಹಿತ್ಯವನ್ನು ಸಂಪಾದಿಸಿದ್ದಾರೆ. ಈ ಕೃತಿಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಇವರು ಪ್ರಕಟಿಸಿದ್ದಾರೆ.

ಬೇಂದ್ರೆ ಕಾವ್ಯವಿಮರ್ಶೆ: ಈ ಕೃತಿಯಲ್ಲಿ ಕೀರ್ತಿನಾಥ ಕುರ್ತಕೋಟಿ ಅವರ ಏಳು ಕೃತಿಗಳು ಇಲ್ಲಿ ಸಂಪಾದನೆಗೊಂಡಿವೆ. 'ದ. ರಾ. ಬೇಂದ್ರೆ', 'ಬೇಂದ್ರೆ ಹಾಗೂ ಕನ್ನಡ ಕಾವ್ಯದ ಸ್ವರೂಪ', 'ಭೃಂಗದ

ಬೆನ್ನೇರಿ', 'ಬೇಂದ್ರೆಯವರ ಕಾವ್ಯದಲ್ಲಿ ಶ್ರುತಿ ಮತ್ತು ಕೃತಿ', 'ಕೆಲವು ಬಿಡಿ ಲೇಖನಗಳು', 'ಬೇಂದ್ರೆಯವರ ಕೆಲವು ಕವನಸಂಕಲನಗಳು', 'ಶ್ರಾವಣ ಪ್ರತಿಭೆ' ಈ ಎಲ್ಲಾ ಕೃತಿಗಳು ಸೇರ್ಪಡಿಗೊಂಡಿವೆ. ಶ್ರಾವಣ ಪ್ರತಿಭೆ ಕೃತಿಯಲ್ಲಿ ಅರವತ್ತೊಂದು ಕವನಗಳಿಗೆ ವಿಮರ್ಶೆ ನೀಡಿದ್ದಾರೆ. ಈ ಸಂಪಾದನಾ ಕಾರ್ಯ ಕುರಿತು ಗಿರಡ್ಡಿ ಗೋವಿಂದರಾಜ ಅವರು ಈ ರೀತಿ ಸ್ಪಷ್ಟಪಡಿಸಿದ್ದಾರೆ. ಬೇಂದ್ರೆ ಅವರ ಕಾವ್ಯವನ್ನು ಕುರಿತು ಕೀರ್ತಿನಾಥ ಕುತುಕೋಟಿಯವರು ಬರೆದ ಎಲ್ಲಾ ಬರವಣಿಗೆಯನ್ನು ಒಂದೆಡೆ ತರುವ ಉದ್ದೇಶದಿಂದ ಈ ಸಂಪುಟವನ್ನು ಸಿದ್ಧಪಡಿಸಲಾಗಿದೆ. ಆದರೆ ಕೆಲವು ಅನಿವಾರ್ಯ ಕಾರಣಗಳಿಂದಾಗಿ ಅಂತಹ ಎಲ್ಲಾ ಬರವಣಿಗೆಯನ್ನು ಇಲ್ಲಿ ಸೇರಿಸಲು ಸಾಧ್ಯವಾಗಲಿಲ್ಲ. ಕುರ್ತಕೋಟೊಯವರು ಬೇಂದ್ರೆ ಅವರ ಕಾವ್ಯದ ಬಗ್ಗೆ ಮೊದಲು ಬರೆದದ್ದು 'ನಡೆದು ಬಂದ ದಾರಿ'ಯ ಮೊದಲ ಸಂಪುಟದಲ್ಲಿ(೧೯೫೫) ಆ ಎಂಟು ಪುಟದ ಬರವಣಿಗೆ ಯುಗಧರ್ಮ ಹಾಗೂ ಸಾಹಿತ್ಯ ದರ್ಶನ'(೧೯೬೨) ಎಂಬ ಕೃತಿಯಲ್ಲಿ ನಂತರ ಪ್ರಕಟವಾಯಿತು. ಆ ಇಡಿಯ ಕೃತಿ ಕೀರ್ತಿನಾಥ ಕುರ್ತಕೋಟಿ ಸಮಗ್ರ ಸಾಹಿತ್ಯದ ಎರಡನೇ ಸಂಪುಟದಲ್ಲಿ ಸೇರಿರುವುದರಿಂದ(೨೦೧೦), ಆ ಭಾಗವನ್ನು ಪ್ರಸ್ತುತ ಸಂಪುಟದಲ್ಲಿ ಸೇರಿಸಿಲ್ಲ. 'ನೂರು ಮರ, ನೂರು ಸ್ವರ'(೧೯೯೮) ಎಂಬ ಗ್ರಂಥದಲ್ಲಿ ದ.ರಾ.ಬೇಂದ್ರೆ ಮತ್ತು ಬೇಂದ್ರೆ ಅವರ ಕಾವ್ಯದಲ್ಲಿ ಸೂರ್ಯ ಮತ್ತು ಚಂದ್ರ' ಎಂಬ ಕುರ್ತಕೋಟಿಯವರ ಎರಡು ಲೇಖನಗಳಿದ್ದು, ಆ ಗ್ರಂಥವೇ ಒಂದು ಸ್ವತಂತ್ರ ಸಂಪುಟವಾಗಿ ಪ್ರಕಟವಾಗಲಿರುವುದರಿಂದ ಮತ್ತು ಆ ಲೇಖನಗಳು ಆ ಗ್ರಂಥದ ಯೋಜನೆಗೆ ಅಲ್ಲಿ ಅಗತ್ಯವಾಗಿರುವುದರಿಂದ ಇಲ್ಲಿ ಅವುಗಳನ್ನು ಸೇರಿಸಲಿಲ್ಲ. ಅಲ್ಲದೇ ಆ ಲೇಖನಗಳಲ್ಲಿಯ ಬಹು ಅಂಶ ಪ್ರಸ್ತುತ ಸಂಪುಟದ ಲೇಖನಗಳಲ್ಲಿ ಸೇರಿಕೊಂಡಿರುವುದು. ಅವುಗಳನ್ನು ಇಲ್ಲಿ ಬಿಟ್ಟಿರುವುದಕ್ಕೆ ಒಂದು ಕಾರಣ. ನನ್ನ ಗಮನಕ್ಕೆ ಬಾರದ, ಬಂದಿದ್ದರೂ ನನ್ನ ಕೈಗೆ ಸಿಗದ ಇನ್ನೂ ಕೆಲವು ಲೇಖನಗಳು ಉಳಿದುಕೊಂಡಿವೆ. ಬೇಂದ್ರೆ ಅವರಿಗೆ ಜ್ಞಾನಪೀಠ ಪ್ರಶಸ್ತಿ ಬಂದಾಗ ಕುರ್ತಕೋಟಿಯವರು ಪ್ರಜಾವಾಣಿಗೆ ಧಾರವಾಡದ ಕವಿಗಾರ ಬೇಂದ್ರೆ ಎಂಬ ಲೇಖನವನ್ನು ಬರೆದಿದ್ದರೆಂದೂ, ನಾಕುತಂತಿಯನ್ನು ಕುರಿತು ಅವರದೊಂದು ದೀರ್ಘ ಲೇಖನವಿತ್ತೆಂದು ಜಿ.ಎಂ.ಹೆಗಡೆಯವರು ಹೇಳುತ್ತಾರೆ. ಆ ಲೇಖನಗಳು ನನಗೆ ಸಿಗಲಿಲ್ಲ. ಇನ್ನು ಮೇಲೆಯಾದರೂ ಸಿಕ್ಕರೆ ಮುಂದಿನ ಯಾವುದಾದರೂ ಸಂಪುಟದಲ್ಲಿ ಸೇರಿಸಲು ಯತ್ನಿಸುತ್ತೇನೆ. ಇದರ ಹೊರೆತಾಗಿ ಕುರ್ತಕೋಟಿಯವರು 'ಃಜಟಜಡಿಜ : ಖ್ರಜ ಕಠಜಣ ಚಿಟಜ ಊಖ ಕಠ- ಜಣಡಿಥಿ' ಎಂಬುದೊಂದು ಪುಸ್ತಕವನ್ನು ಇಂಗ್ಲಿಷ್ನಲ್ಲಿಯೂ ಬರೆದಿದ್ದಾರೆ. ಕನ್ನಡ ಬರೆಹಗಳಲ್ಲಿ ಇಲ್ಲದ ಹೊಸ ವಿಷಯವೇನೂ ಅದರಲ್ಲಿ ಇಲ್ಲ. ಅದನ್ನು ಈ ಸಂಪುಟದಲ್ಲಿ ಸೇರಿಸಿಲ್ಲ." ಈ ವಚಾರಗಳ ಮೂಲಕ ಬೇಂದ್ರೆ ಸಾಹಿತ್ಯ ಕುರಿತು ಕೀರ್ತಿನಾಥ ಕುರ್ತಕೋಟಿ ಅವರ ಸಮಗ್ರ ಬರೆಹ ಸಂಪಾದನೆ ಕುರಿತು ಪೂರ್ಣ ಮಾಹಿತಿ ಗಮನಿಸಬಹುದು.

೯೦. ೨೦೧೩., ಬಸು ಬೇವಿನ ಗಿಡದ., ಬೆಳಕಿನ ಹಕ್ಕಿ ಬೇಂದ್ರೆ ನಿಸರ್ಗ ಕಾವ್ಯ : ಅನುಭೂತಿ ಹಾಗೂ ಅಭಿವ್ಯಕ್ತಿ

ಬಸು ಬೇವಿನ ಗಿಡದ ಅವರು ಕನ್ನಡ ವಿಶ್ವವಿದ್ಯಾಲಯದ ಮೂಲಕ ಬೇಂದ್ರೆ ಸಾಹಿತ್ಯ ಕುರಿತು ಮೊದಲ ಸಂಶೋಧನಾ ಪ್ರಬಂಧವಾಗಿ ಮಂಡಿಸಿದರು. ಈ ಪ್ರಬಂಧವು 'ಬೆಳಕಿನ ಹಕ್ಕಿ ಬೇಂದ್ರೆ ನಿಸರ್ಗ ಕಾವ್ಯ' ಹೆಸರಿನಲ್ಲಿ ೨೦೧೩ರಲ್ಲಿ ಸುಂದರ ಪುಸ್ತಕ ಪ್ರಕಾಶನ, ಧಾರವಾಡ ಇವರು ಕೃತಿರೂಪದಲ್ಲಿ ಪ್ರಕಟಿಸಿದ್ದಾರೆ. ಈ ಕೃತಿಗೆ ಗುರುಲಿಂಗ ಕಾಪಾಸೆ ಅವರ ಮುನ್ನುಡಿ ಬರೆಹವಿದೆ.

ಬೆಳಕಿನ ಹಕ್ಕಿ ಬೇಂದ್ರೆ ನಿಸರ್ಗ ಕಾವ್ಯ : ಅನುಭೂತಿ ಹಾಗೂ ಅಭಿವ್ಯಕ್ತಿ : ಈ ಪ್ರಬಂಧವು ಎಂಟು ಅಧ್ಯಾಯಗಳನ್ನು ಒಳಗೊಂಡಿದ್ದು ಮುಖ್ಯವಾಗಿ ಜೀವನ ಮತ್ತು ವ್ಯಕ್ತಿತ್ವ ಕುರಿತು 'ಆ ದಿನ ನೆನೆದು', 'ಕನ್ನಡ ಕಾವ್ಯದಲ್ಲಿ ನಿಸರ್ಗದ ಅನುಭೂತಿ', 'ಬೇಂದ್ರೆ ನಿಸರ್ಗಕಾವ್ಯ : ಪ್ರೇರಣೆಗಳು., 'ಬೇಂದ್ರೆ ಹಾಗೂ ಸಮಕಾಲೀನರಲ್ಲಿ ನಿಸರ್ಗ ಮನೋಧರ್ಮ', 'ಬೇಂದ್ರೆ ಕಾವ್ಯದಲ್ಲಿ ನಿಸರ್ಗದ ಅನುಭೂತಿ', 'ಮೇರು ಅಭಿವ್ಯಕ್ತಿಯ ಕೌಶಲ', ಈ ವಿಷಯಗಳೊಂದಿಗೆ ಸಂಶೋಧನೆಯ ಅಧ್ಯಯನ ಗಮನಿಸಬಹುದು. ಈ ಕೃತಿಯ ಬೆನ್ನುಡಿಯಲ್ಲಿ ಪ್ರಬಂಧದ ಮೌಲ್ಯಮಾಪಕರಾದ ಎಂ. ಉಷಾ ಅವರು ಹಾಗೂ ಜಿ. ಕೃಷ್ಣಪ್ಪ ಅವರ ನುಡಿಗಳಿವೆ.

೯೧. **೨೦೧೩., ಶಂಕರಲಿಂಗ .ಜಿ. ಹೆಂಬಾಡಿ, ಗೀತಾ ಎಸ್. ಹೆಂಬಾಡಿ., ಗಾರುಡಿಗ ಕವಿ ದ.ರಾ.ಬೇಂದ್ರೆ**

ಶಂಕರಲಿಂಗ .ಜಿ. ಹೆಂಬಾಡಿ ಹಾಗೂ ಗೀತಾ ಎಸ್. ಹೆಂಬಾಡಿ ಅವರು ರಚಿಸಿರುವ 'ಗಾರುಡಿಗ ಕವಿ ದ.ರಾ.ಬೇಂದ್ರೆ' ಎಂಬ ಕೃತಿಯನ್ನು ಶ್ರೀ ಶರಣ ಪ್ರಕಾಶನ, ಗುಲಬರ್ಗಾ ಇವರು ೨೦೧೩ರಲ್ಲಿ ಪ್ರಕಟಿಸಿದ್ದಾರೆ.

ಗಾರುಡಿಗ ಕವಿ ದ.ರಾ.ಬೇಂದ್ರೆ : ಬೇಂದ್ರೆ ಅವರನ್ನು ಪರಿಚಯಿಸುವ ಕೃತಿಯಾಗಿದ್ದು ಇಲ್ಲಿ ಯಾವುದೇ ವಿಮರ್ಶೆ ಕಂಡುಬರುವುದಿಲ್ಲ. ಇದು ಮಾಹಿತಿ ಪುಸ್ತಕವಾಗಿ ಅನುಕೂಲವಾಗುತ್ತದೆ. ಲೇಖಕರೇ ತಿಳಿಸುವಂತೆ ರಾಷ್ಟ್ರದ ಎಲ್ಲಾ ಪ್ರಾಥಮಿಕ, ಪ್ರೌಢ, ಪದವಿಪೂರ್ವ, ಡಿ.ಇಡಿ., ಬಿ. ಇಡಿ., ಪದವಿ ಹಾಗೂ ಜನಸಾಮನ್ಯರೂ ಸಹ ಇದರ ಉಪಯೋಗವನ್ನು ಪಡೆಯಬಹುದಾಗಿದೆ" ಎಂದಿದ್ದಾರೆ.

೯೨. **೨೦೧೩., ವಸಂತ ಅ. ಕುಲಕರ್ಣಿ., ನಂದನದ ನೋಟ-ಸಾಧನಕೇರಿ**

ವಸಂತ ಅ. ಕುಲಕರ್ಣಿ ಅವರ 'ನಂದನದ ನೋಟ-ಸಾಧನಕೇರಿ' ಎಂಬ ಕೃತಿಯನ್ನು ೨೦೧೩ರಲ್ಲಿ ವಿಕ್ರಂ ಪ್ರಕಾಶನ, ಬೆಂಗಳೂರು ಇವರು ಪ್ರಕಟಿಸಿದ್ದಾರೆ. ಈ ಕೃತಿಯನ್ನು ಅರವಿಂದರಿಗೆ ಅರ್ಪಿಸಲಾಗಿದೆ. ಲಕ್ಷ್ಮಣ ಕೊಡಸೆ ಅವರು ಈ ಕೃತಿ ಕುರಿತು 'ಬೇಂದ್ರೆ ಅಧ್ಯಯನಕ್ಕೆ ಕೀಲಿ ಕೈ' ಎಂಬ ಬರೆಹವನ್ನು ನೀಡಿದ್ದಾರೆ.

ನಂದನದ ನೋಟ-ಸಾಧನಕೇರಿ: ಈ ಕೃತಿಯಲ್ಲಿ ಒಟ್ಟು ಹನ್ನೊಂದು ಲೇಖನಗಳಿವೆ. ಈ ಎಲ್ಲಾ ಲೇಖನಗಳು ಬೇಂದ್ರೆ ಅವರು ರಮ್ಯತಾಣವೆಂದು ಭಾವಿಸಿದ್ದ ಧಾರವಾಡವನ್ನು ಕುರಿತವುಗಳಾಗಿವೆ. ಧಾರವಾಡದ ಪರಿಸರವು ಇವರ ಕಾವ್ಯಕ್ಕೆ ನೀಡಿದ ಪ್ರೇರಣೆಯನ್ನು ಸಂಗ್ರಹಿಸಿದ್ದಾರೆ.

೯೩. **೨೦೧೩., ಬೆ.ಗೋ. ರಮೇಶ್., ದ.ರಾ. ಬೇಂದ್ರೆ ಸೂತ್ರಗಳು-ಸೂಕ್ತಿಗಳು**

ಬೆ.ಗೋ. ರಮೇಶ್ 'ನಂದನದ ನೋಟ-ಸಾಧನಕೇರಿ' 'ದ.ರಾ. ಬೇಂದ್ರೆ ಸೂತ್ರಗಳು-ಸೂಕ್ತಿಗಳು' ಎಂಬ ಕೃತಿಯನ್ನು ಸಾಧನಾ ಪಬ್ಲಿಕೇಶನ್, ಬೆಂಗಳೂರು ಇವರು ೨೦೧೩ರಲ್ಲಿ ಪ್ರಕಟಿಸಿದ್ದಾರೆ. ಈ ಕೃತಿಯು ಬೇಂದ್ರೆ ಅವರ ಕವಿತೆ ಹಾಗೂ ಜೀವನದಲ್ಲಿ ಘಟಿಸಿದ ಹಲವು ಪ್ರಸಂಗಗಳನ್ನು ಸೇರಿಸಿ ಸೂತ್ರಗಳು ಹಾಗೂ ಸೂಕ್ತಿಗಳಾಗಿ ಇಲ್ಲಿ ರಚಿಸಿದ್ದಾರೆ.

೯೪. **೨೦೧೩., ಕೃಷ್ಣಕಟ್ಟಿ., ನಾದದ ನವನೀತ**

ಬೇಂದ್ರೆ ಅವರ ಭಾವಗೀತೆಗಳ ಕುರಿತು ಕೃಷ್ಣಕಟ್ಟಿ ಅವರು ರಚಿಸಿದ ಲೇಖನಗಳ ಸಂಕಲನವೇ 'ನಾದದ ನವನೀತ'. ಈ ಕೃತಿಯನ್ನು 'ಯಾಜಿ ಪ್ರಕಾಶನ' ಹೊಸಪೇಟೆ ಅವರು ಪ್ರಕಟಿಸಿದ್ದಾರೆ. ಈ ಕೃತಿಯನ್ನು ಕೀರ್ತಿನಾಥ ಕುರ್ತಕೋಟಿ ಹಾಗೂ ಸರಸ್ವತಿ ಕುರ್ತಕೋಟಿ ಅವರಿಗೆ ಅರ್ಪಿಸಲಾಗಿದೆ.

ನಾದದ ನವನೀತ : ಈ ಕೃತಿಯಲ್ಲಿ ಬೇಂದ್ರೆ ಅವರ ಭಾವಗೀತೆಗಳನ್ನು ಕುರಿತು ವಿಮರ್ಶಾ ಲೇಖನಗಳನ್ನು ಕೆಲವು ಪರಿಕಲ್ಪನೆಗಳ ಆಧಾರದ ಮೇಲೆ ರಚಿಸಿದ್ದಾರೆ. 'ಅಸ್ತಿತ್ವ ಮತ್ತು ಭಾವ',

'ಬರಿಯ ಭಾವಗೀತ', 'ನಾದದ ನವನೀತ', 'ಹೃದಯ ವಿವೇಕ', 'ಸತ್ಯ-ಸತ್ವ' ಎಂಬ ವಿಚಾರಗಳ ಕುರಿತು ಪರಿಕಲ್ಪನೆಗಳ ಆಧಾರದ ಮೇಲೆ ಭಾವಗೀತೆಗಳ ಅಧ್ಯಯನವನ್ನು ಇಲ್ಲಿ ಗಮನಿಸಬಹುದು.

೯೫. ೨೦೧೪., ಆನಂದ ಝುಂಜರವಾಡ., ದೂರ್ವಾಂಕುರ

ಆನಂದ ಝುಂಜರವಾಡ ಅವರ 'ದೂರ್ವಾಂಕುರ' ಕೃತಿಯು ದ.ರಾ. ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ಧಾರವಾಡ ಇವರು ೨೦೦೬-೦೭ನೇ ಸಾಲಿನಲ್ಲಿ ಪ್ರಾರಂಭವಾದ ಫೆಲೋಶಿಪ್ ವತಿಯಿಂದ ರಚನೆಯಾಗಿದೆ. ಈ ಕೃತಿಯನ್ನು ೨೦೧೪ರಲ್ಲಿ ದ.ರಾ. ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ಇವರು ಗ್ರಂಥಮಾಲೆಯ ಆರನೇ ಕೃತಿಯಾಗಿ ಪ್ರಕಟಿಸಿದ್ದಾರೆ.

ದೂರ್ವಾಂಕುರ: ಬೇಂದ್ರೆ ಅವರಿಗಿದ್ದ ಮರಾಠಿ ಭಾಷೆಯ, ಜಗತ್ತಿನ ಒಡನಾಟ, ಸಾಂಸ್ಕೃತಿಕ ಅರಿವು ಹಾಗೂ ಸ್ಪಂದನೆ ಕುರಿತು ಈಗಾಗಲೇ ಮರಾಠಿ ಭಾಷೆಯಲ್ಲಿ ಬರೆದಿರುವ ೨೫ ಲೇಖನಗಳನ್ನು ಆನಂದ ಝುಂಜರವಾಡ ಅವರು ಅನುವಾದಿಸಿದ್ದಾರೆ. ಈ ಅನುವಾದಗಳು ಮರಾಠಿ ಲೇಖಕರಿಗಿದ್ದ ಬೇಂದ್ರೆ ಕುರಿತ ಅಧ್ಯಯನ ಶಿಸ್ತು, ಅಭಿಮಾನವನ್ನು ಸೂಚಿಸುತ್ತವೆ.

೯೬. ೨೦೧೪., ಜಗದೀಶ್ ಕೊಪ್ಪ ಎನ್., ಉತ್ತರ-ದಕ್ಷಿಣ ಬೇಂದ್ರೆ-ಕುವೆಂಪು ವ್ಯಕ್ತಿತ್ವ ಮತ್ತು ಕವಿತೆಗಳ ತೌಲನಿಕ ಅಧ್ಯಯನ

ಡಾ. ದ. ರಾ. ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ಧಾರವಾಡ ಇವರು ೨೦೦೬ರಲ್ಲಿ 'ಪ್ರಸಾರಾಂಗ'ವನ್ನು ಸ್ಥಾಪಿಸಿ ಬೇಂದ್ರೆ ಕುರಿತು ಅಧ್ಯಯನಶೀಲ ಕೃತಿಗಳನ್ನು ಪ್ರಕಟಿಸುತ್ತಿದ್ದಾರೆ. ಹದಿನಾಲ್ಕನೆಯ ಕೃತಿಯಾಗಿ 'ಉತ್ತರ-ದಕ್ಷಿಣ' ಕೃತಿಯನ್ನು ಪ್ರಕಟಿಸಿದ್ದಾರೆ. ಈ ಕೃತಿ ಈಗಾಗಲೇ ೨೦೦೯ರಲ್ಲಿ ಪಲ್ಲವ ಪ್ರಕಾಶನದ ಮೂಲಕ ಪ್ರಕಟಿಸಲಾಗಿತ್ತು. ೨೦೦೬ರಲ್ಲಿ ಡಾ. ದ. ರಾ. ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್‌ನ ಫೆಲೋಶಿಪ್ ಯೋಜನೆಯಡಿ ಅಧ್ಯಯನ ಮಾಡಲಾಗಿದೆ.

ಉತ್ತರ-ದಕ್ಷಿಣ, ಬೇಂದ್ರೆ-ಕುವೆಂಪು ವ್ಯಕ್ತಿತ್ವ ಮತ್ತು ಕವಿತೆಗಳ ತೌಲನಿಕ ಅಧ್ಯಯನ : ಇಪ್ಪತ್ತನೆಯ ಶತಮಾನದ ದ.ರಾ ಬೇಂದ್ರೆ ಮತ್ತು ಕುವೆಂಪು ಅವರ ಸಾಹಿತ್ಯವನ್ನು ತೌಲನಿಕವಾಗಿ ಅಧ್ಯಯನ ಮಾಡುವ ಈ ಕೃತಿಯು ಪರಿಚಯಾತ್ಮಕವಾದ ಶೋಧನೆಯನ್ನು ನೀಡುತ್ತದೆ. ಈ ಕವಿಗಳು ಹೊಂದಿರುವ ಸಮಾನ ವ್ಯಕ್ತಿತ್ವದ ಪರಿಚಯ, ಪ್ರೇರಣೆ, ಕಾವ್ಯಮೀಮಾಂಸೆಯ ಚಿಂತನೆ, ಪ್ರಕೃತಿ, ಸಾಮಾಜಿಕ ಕವಿತೆಗಳು, ಪ್ರೀತಿ, ಪ್ರೇಮ ಹಾಗೂ ಕುಟುಂಬ ಕುರಿತು ಅಭಿವ್ಯಕ್ತಗೊಂಡಿರುವ ಕವಿತೆಗಳ ತೌಲನಿಕ ಅಧ್ಯಯನವನ್ನು ಆರು ಅಧ್ಯಾಯಗಳಲ್ಲಿ ಚರ್ಚಿಸಿದ್ದಾರೆ. ಈ ಕೃತಿಯ ಅನುಬಂಧದಲ್ಲಿ ಎಂ. ಅಕಬರಅಲಿ ಅವರ 'ಪಂಥ ಪ್ರೇಮಿಗಳಿಗೆ'. ಎಂಬ ಕವಿತೆ., ಯು. ಆರ್. ಅನಂತ ಮೂರ್ತಿ ಅವರ ಕುವೆಂಪು-ಬೇಂದ್ರೆ ಅವರನ್ನು ಕುರಿತು ಲೇಖನ., ಬೇಂದ್ರೆ ಅವರು ಬರೆದ ಕುವೆಂಪು ಅವರನ್ನು ಕುರಿತ 'ಯುಗದ ಕವಿಗೆ' ಕವಿತೆ., ಬೇಂದ್ರೆ ಅವರು ನಿಧನರಾದಾಗ ಕುವೆಂಪು ಪತ್ರಿಕೆಗೆ ನೀಡಿದ ಶೋಕಸೂಚಕ ಪತ್ರ ಇವುಗಳನ್ನು ನೀಡಲಾಗಿದೆ.

೯೭. ೨೦೧೪., ಕೆ.ವಿ. ನಾರಾಯಣ., ಸಾಹಿತ್ಯ ತತ್ವ ಬೇಂದ್ರೆ ದೃಷ್ಟಿ

ಅಭಿನವ ಪ್ರಕಾಶನವು 'ಸರಸ್ವತಿ ನೆನಪು' ಎಂಬ ಮಾಲಿಕೆಯಲ್ಲಿ ಬೇಂದ್ರೆ ಅವರ ಸಾಹಿತ್ಯ ಕುರಿತು ಈಗಾಗಲೇ ಕ್ರೈಸ್ಟ್ ಕಾಲೇಜಿನ ಕನ್ನಡ ಸಂಘದ ಮೂಲಕ ಪ್ರಕಟಿತವಾದ ಹಾಗೂ ಇತರೆಡೆಗಳಲ್ಲಿ ಪ್ರಕಟಿಸಿದ ಪುಸ್ತಕಗಳನ್ನು ೨೦೧೪ರಲ್ಲಿ ಮರುಮುದ್ರಣ ಮಾಡಿದೆ.

೯೮. ೨೦೧೪., ಯು. ಆರ್. ಅನಂತಮೂರ್ತಿ., ಯುಗದಕವಿ ಬೇಂದ್ರೆ

ಅಭಿನವ ಪ್ರಕಾಶನವು 'ಸರಸ್ವತಿ ನೆನಪು' ಎಂಬ ಮಾಲಿಕೆಯಲ್ಲಿ ಬೇಂದ್ರೆ ಅವರ ಸಾಹಿತ್ಯ ಕುರಿತು ಈಗಾಗಲೇ ಕ್ರೈಸ್ಟ್ ಕಾಲೇಜಿನ ಕನ್ನಡ ಸಂಘದ ಮೂಲಕ ಪ್ರಕಟಿತವಾದ ಹಾಗೂ ಇತರೆಡೆಗಳಲ್ಲಿ ಪ್ರಕಟಿಸಿದ ಪುಸ್ತಕಗಳನ್ನು ೨೦೧೪ರಲ್ಲಿ ಮರುಮುದ್ರಣ ಮಾಡಿದೆ.

ಯುಗದಕವಿ ಬೇಂದ್ರೆ: ಬೇಂದ್ರೆ ಅವರ ಸಾಹಿತ್ಯ ಕುರಿತು ತನ್ನ ಒಡನಾಟ ಹಾಗೂ ಗ್ರಹಿಕೆಗೆ ದೊರೆತಂತೆ ಲೇಖನಗಳನ್ನು ರಚಿಸಿದ್ದಾರೆ. ಬೇಂದ್ರೆ ಅವರ ವ್ಯಕ್ತಿತ್ವವನ್ನು ಅದರೊಳಗಿನ ಬಿಗಿ ಹಾಗೂ ಹಿಡಿತಗಳ ಚಿಂತನೆಯನ್ನು ಚರ್ಚಿಸಿದ್ದಾರೆ. ಈ ಕೃತಿಯ ಲೇಖನಗಳು ವಿವಿಧ ಪತ್ರಿಕೆ, ಭಾಷಣಗಳ ಸಂಗ್ರಹವಾಗಿದೆ. 'ಯುಗದಕವಿ ಬೇಂದ್ರೆ' ಲೇಖನವು ರುಜುವಾತು ಪತ್ರಿಕೆಯಲ್ಲಿ ೫-೧-೯೮೨ರಲ್ಲಿ ಪ್ರಕಟವಾಗಿದೆ. 'ಬೇಂದ್ರೆ : ಅರ್ಥಕ್ಕಿಂತ ಮಿಗಿಲಾದ ಅರ್ಥ' ಎಂಬ ಲೇಖನವು ಧಾರವಾಡ ಮತ್ತು ಮೈಸೂರುಗಳಲ್ಲಿ ಬೇಂದ್ರೆ ಸಾಹಿತ್ಯ ಕುರಿತು ಯು. ಆರ್. ಅನಂತಮೂರ್ತಿ ಅವರು ಮಾಡಿದ ಭಾಷಣಗಳನ್ನು ಕೆ. ಅಕ್ಷತಾ ಅವರು ಬರಹರೂಪಕ್ಕೆ ತಂದಿದ್ದಾರೆ.

೯೯. ೨೦೧೪., ಸತ್ಯಕಾಮ., ಬೇಂದ್ರೆಯವರ ಕಾವ್ಯದಲ್ಲಿ ರಸ-ಸಿದ್ಧಿ

ಅಭಿನವ ಪ್ರಕಾಶನವು 'ಸರಸ್ವತಿ ನೆನಪು' ಎಂಬ ಮಾಲಿಕೆಯಲ್ಲಿ ಬೇಂದ್ರೆ ಅವರ ಸಾಹಿತ್ಯ ಕುರಿತು ಈಗಾಗಲೇ ಕ್ರೈಸ್ಟ್ ಕಾಲೇಜಿನ ಕನ್ನಡ ಸಂಘದ ಮೂಲಕ ಪ್ರಕಟಿತವಾದ ಹಾಗೂ ಇತರೆಡೆಗಳಲ್ಲಿ ಪ್ರಕಟಿಸಿದ ಪುಸ್ತಕಗಳನ್ನು ೨೦೧೪ರಲ್ಲಿ ಮರುಮುದ್ರಣ ಮಾಡಿದೆ.

ಬೇಂದ್ರೆಯವರ ಕಾವ್ಯದಲ್ಲಿ ರಸ-ಸಿದ್ಧಿ: ಬೇಂದ್ರೆ ಅವರಿಗೂ ಸತ್ಯ ಕಾಮರಿಗೂ ಅನನ್ಯವಾದ ಆತ್ಮೀಯತೆ ಇತ್ತು. ಗಲಗಲಿ ಗೆಳೆಯರೆಲ್ಲ ಸೇರಿ ಬೇಂದ್ರೆಯವರಿಗೆ ಐವತ್ತು ವರ್ಷ ತುಂಬಿದಾಗ ಎಚ್. ಜಿ. ಜೋಶಿ ಅವು ಸಂಪಾದಿಸಿದ 'ಬೇಂದ್ರೆ ಸಾಹಿತ್ಯ ವಾಙ್ಮಯ ದರ್ಶನ' ಎಂಬ ಕೃತಿಯನ್ನು ಹೊರತಂದರು. ಆ ಕೃತಿಯಲ್ಲಿ ಸತ್ಯಕಾಮರು ಶಾಂತಾ ಗಲಗಲಿ ಎಂಬ ಹೆಸರಿನಲ್ಲಿ ಎರಡು ಲೇಖನ ಮತ್ತು ಒಂದು ಕವನವನ್ನು ಪ್ರಕಟಿಸಿದ್ದಾರೆ. ಅವುಗಳ ಸಂಗ್ರಹ ರೂಪವೇ ಈ ಕೃತಿಯಾಗಿದೆ. 'ರಸಸಿದ್ಧಿ', 'ನಾದಲೀಲೆ' ಈ ಎರಡು ಲೇಖನಗಳ ಜೊತೆಗೆ 'ಬೇಂದ್ರೆ' ಎಂಬ ಕವಿತೆ ಇದೆ.

೧೦೦. ೨೦೧೪., ಶೇಷನವರತ್ನ., ಬೇಂದ್ರೆ ಅವರ ಕಾವ್ಯದಲ್ಲಿ ಪ್ರತಿಮಾ ಸೃಷ್ಟಿ

ಅಭಿನವ ಪ್ರಕಾಶನವು 'ಸರಸ್ವತಿ ನೆನಪು' ಎಂಬ ಮಾಲಿಕೆಯಲ್ಲಿ ಬೇಂದ್ರೆ ಅವರ ಸಾಹಿತ್ಯ ಕುರಿತು ಈಗಾಗಲೇ ಕ್ರೈಸ್ಟ್ ಕಾಲೇಜಿನ ಕನ್ನಡ ಸಂಘದ ಮೂಲಕ ಪ್ರಕಟಿತವಾದ ಹಾಗೂ ಇತರೆಡೆಗಳಲ್ಲಿ ಪ್ರಕಟಿಸಿದ ಪುಸ್ತಕಗಳನ್ನು ೨೦೧೪ರಲ್ಲಿ ಮರುಮುದ್ರಣ ಮಾಡಿದೆ.

ಬೇಂದ್ರೆ ಅವರ ಕಾವ್ಯದಲ್ಲಿ ಪ್ರತಿಮಾ ಸೃಷ್ಟಿ: ಶೇಷನವರತ್ನ ಅವರು ಬೇಂದ್ರೆ ಸಾಹಿತ್ಯವನ್ನು ಕುರಿತು ವಿವಿಧ ಸಂದರ್ಭದಲ್ಲಿ ಬರೆದ ಮೂರು ಲೇಖನಗಳು ಈ ಕೃತಿಯಲ್ಲಿ ಪ್ರಕಟವಾಗಿವೆ. 'ಬೇಂದ್ರೆ ಕಾವ್ಯದಲ್ಲಿ ಸ್ತ್ರೀ' ಎಂಬ ಲೇಖನವು ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗವು ೨೦೦೧ರಲ್ಲಿ ಪ್ರಕಟಿಸಿದೆ. 'ದಾರ್ಶನಿಕ ಕವಿ ಬೇಂದ್ರೆ', 'ಬೇಂದ್ರೆ ಕಾವ್ಯದ ಪ್ರತಿಮಾಸೃಷ್ಟಿ' ಈ ಎರಡು ಲೇಖನಗಳು ಬುದ್ದಣ್ಣ ಹಿಂಗಮಿರೆ ಅವರು ಸಂಪಾದಿಸಿದ 'ಇಳಿದು ಬಾ ತಾಯಿ' ಬೇಂದ್ರೆ ಅವರ ಅಭಿನಂದನಾ ಗ್ರಂಥದಲ್ಲಿ ಪ್ರಕಟವಾಗಿವೆ. ಈ ಎಲ್ಲಾ ಲೇಖನಗಳನ್ನು ಸೇರಿಸಿ ಕೃತಿರೂಪದಲ್ಲಿ ಪ್ರಕಟಿಸಲಾಗಿದೆ.

೧೦೧. ೨೦೧೪., ಎಲ್. ಎಸ್. ಶೇಷಗಿರಿರಾವ್., ನವೋದಯ ಕಾವ್ಯ ಮತ್ತು ಬೇಂದ್ರೆ

ಅಭಿನವ ಪ್ರಕಾಶನವು 'ಸರಸ್ವತಿ ನೆನಪು' ಎಂಬ ಮಾಲಿಕೆಯಲ್ಲಿ ಬೇಂದ್ರೆ ಅವರ ಸಾಹಿತ್ಯ ಕುರಿತು ಈಗಾಗಲೇ ಕ್ರೈಸ್ಟ್ ಕಾಲೇಜಿನ ಕನ್ನಡ ಸಂಘದ ಮೂಲಕ ಪ್ರಕಟಿತವಾದ ಹಾಗೂ ಇತರೆಡೆಗಳಲ್ಲಿ ಪ್ರಕಟಿಸಿದ ಪುಸ್ತಕಗಳನ್ನು ೨೦೧೪ರಲ್ಲಿ ಮರುಮುದ್ರಣ ಮಾಡಿದೆ.

ನವೋದಯ ಕಾವ್ಯ ಮತ್ತು ಬೇಂದ್ರೆ : ಎಲ್. ಎಸ್. ಶೇಷಗಿರಿರಾವ್ ಅವರು ಬೇಂದ್ರೆ ಸಾಹಿತ್ಯ ಕುರಿತು ವಿವಿಧ ಸಂದರ್ಭದಲ್ಲಿ ನೀಡಿದ ಭಾಷಣ, ಪ್ರಬಂಧ ಹಾಗೂ ಲೇಖನಗಳು ಇಲ್ಲಿವೆ. 'ಬೇಂದ್ರೆಯವರು ಮತ್ತು ನವೋದಯ ಕಾವ್ಯ' ಎಂಬ ಲೇಖನವು ೩೧-೦೧-೧೯೮೭ರಂದು ಬೇಂದ್ರೆ ಜನ್ಮದಿನದ ಅಂಗವಾಗಿ ಕರ್ನಾಟಕ ವಿಶ್ವವಿದ್ಯಾಲಯವು ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ನೀಡಿದ ಭಾಷಣವಿದು. ೧೯೮೮ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗದಿಂದ ಪುಸ್ತಕರೂಪದಲ್ಲಿ ಪ್ರಕಟವಾಗಿದೆ. 'ಸಖೀಗೀತದ ವಸ್ತು' ಎಂಬ ಲೇಖನವು ೨೦೧೦ರಲ್ಲಿ ಸಮಗ್ರ ಸಂಪುಟದ ಎರಡನೇ ಭಾಗದಲ್ಲಿ ಪ್ರಕಟವಾಗಿದೆ. 'ನಾಕುತಂತಿಯ ವೈಣಿಕ, ಗಂಗಾವತರಣದ ಭಗೀರಥ' ಎಂಬ ಲೇಖನವು ಬುದ್ದಣ್ಣ ಹಿಂಗಮಿರೆ ಅವರು ಸಂಪಾದಿಸಿದ 'ಇಳಿದು ಬಾ ತಾಯಿ' ಬೇಂದ್ರೆ ಅವರ ಅಭಿನಂದನಾ ಗ್ರಂಥದಲ್ಲಿ ಪ್ರಕಟವಾಗಿದೆ. ಈ ಎಲ್ಲಾ ಲೇಖನಗಳನ್ನು ಸೇರಿಸಿ ಕೃತಿರೂಪದಲ್ಲಿ ಪ್ರಕಟಿಸಲಾಗಿದೆ.

೧೦೨. ೨೦೧೪., ಜಿ.ಎಚ್ ನಾಯಕ., ಬೇಂದ್ರೆ: ನಾದ ನಾಡು ಒಲವು

ಅಭಿನವ ಪ್ರಕಾಶನವು 'ಸರಸ್ವತಿ ನೆನಪು' ಎಂಬ ಮಾಲಿಕೆಯಲ್ಲಿ ಬೇಂದ್ರೆ ಅವರ ಸಾಹಿತ್ಯ ಕುರಿತು ಈಗಾಗಲೇ ಕ್ರೈಸ್ಟ್ ಕಾಲೇಜಿನ ಕನ್ನಡ ಸಂಘದ ಮೂಲಕ ಪ್ರಕಟಿತವಾದ ಹಾಗೂ ಇತರೆಡೆಗಳಲ್ಲಿ ಪ್ರಕಟಿಸಿದ ಪುಸ್ತಕಗಳನ್ನು ೨೦೧೪ರಲ್ಲಿ ಮರುಮುದ್ರಣ ಮಾಡಿದೆ.

ಬೇಂದ್ರೆ: ನಾದ ನಾಡು ಒಲವು : ಬೇಂದ್ರೆ ಸಾಹಿತ್ಯ ಕುರಿತು ವಿವಿಧ ಸಂದರ್ಭಗಳಲ್ಲಿ ಜಿ.ಎಚ್. ನಾಯಕರು ಮಂಡಿಸಿದ ಭಾಷಣಗಳ ಲೇಖನ ರೂಪಗಳಿವು. ಮಂಡ್ಯದ ಸರ್ಕಾರಿ ಮಹಿಳಾ ಕಾಲೇಜಿನಲ್ಲಿ ಫೆಬ್ರವರಿ ೨೩, ೨೦೦೧ರಲ್ಲಿ ಭಾಷಣ ಮಾಡಿದ ಲಿಖಿತ ರೂಪವೇ 'ಬೇಂದ್ರೆಯವರ ಕವನ : ನಾದಲೀಲೆ' ಆಗಿದೆ. ೨೦೧೦ರಲ್ಲಿ ದೇಶಕಾಲ ಪತ್ರಿಕೆಯ ಜುಲೈ-ಸೆಪ್ಟಂಬರ್ ಅವಧಿಗೆ ಬರೆದ ಲೇಖನವೇ 'ಬೇಂದ್ರೆಯವರ 'ಕನಸಿನೊಳಗೊಂದು ಕಣಸು', ಜಿ. ಎಚ್ ನಾಯಕರ ಸಮಗ್ರ ಸಾಹಿತ್ಯ ಸಂಪುಟ 'ಮೌಲ್ಯಮಾರ್ಗ' ಕೃತಿಯಲ್ಲಿ ಸೇರ್ಪಡೆಗೊಂಡಿರುವ ಲೇಖನ 'ಬೇಂದ್ರೆಯವರ 'ಒಲವೆ ನಮ್ಮ ಬದುಕು', 'ಬೇಂದ್ರೆಯವರ ಅಲ್ಲಮಪ್ರಭು', 'ಬೇಂದ್ರೆಯವರ ಕಾವ್ಯ' ಈ ಎಲ್ಲಾ ಲೇಖನಗಳು ಈ ಕೃತಿಯಲ್ಲಿ ಸೇರಿವೆ.

೧೦೩. ೨೦೧೪., ವಿ.ಕೃ.ಗೋಕಾಕ್., ಬೇಂದ್ರೆ ಅವರ ಕಾವ್ಯ ಮತ್ತು ವ್ಯಕ್ತಿತ್ವ

ಅಭಿನವ ಪ್ರಕಾಶನವು 'ಸರಸ್ವತಿ ನೆನಪು' ಎಂಬ ಮಾಲಿಕೆಯಲ್ಲಿ ಬೇಂದ್ರೆ ಅವರ ಸಾಹಿತ್ಯ ಕುರಿತು ಈಗಾಗಲೇ ಕ್ರೈಸ್ಟ್ ಕಾಲೇಜಿನ ಕನ್ನಡ ಸಂಘದ ಮೂಲಕ ಪ್ರಕಟಿತವಾದ ಹಾಗೂ ಇತರೆಡೆಗಳಲ್ಲಿ ಪ್ರಕಟಿಸಿದ ಪುಸ್ತಕಗಳನ್ನು ೨೦೧೪ರಲ್ಲಿ ಮರುಮುದ್ರಣ ಮಾಡಿದೆ.

ಬೇಂದ್ರೆ ಅವರ ಕಾವ್ಯ ಮತ್ತು ವ್ಯಕ್ತಿತ್ವ : ವಿ.ಕೃ.ಗೋಕಾಕ್ ಅವರು ವಿವಿಧ ಸಂದರ್ಭಗಳಲ್ಲಿ ಬೇಂದ್ರೆ ಅವರ ಸಾಹಿತ್ಯ ಕುರಿತು ನೀಡಿದ ಭಾಷಣ, ಮುನ್ನುಡಿ ಬರೆಹಗಳ ಸಂಕಲನವಿದು. 'ಬೇಂದ್ರೆಯವರ ಕಾವ್ಯಗುಣ ಹಾಗೂ ಪ್ರಯೋಗಶೀಲತೆ' ಎಂಬ ಲೇಖನವು ೩೧-೦೧-೧೯೮೩ರಂದು ಬೇಂದ್ರೆ

ಜನ್ಮದಿನದ ಅಂಗವಾಗಿ ಕರ್ನಾಟಕ ವಿಶ್ವವಿದ್ಯಾಲಯವು ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ನೀಡಿದ ಭಾಷಣವಿದು. ಬೇಂದ್ರೆ ಅವರನ್ನು ಕುರಿತು ವಿ.ಕೃ.ಗೋಕಾಕರು 'ಕಾವ್ಯಗುರು' ಎಂಬ ಕವಿತೆ ರಚಿಸಿದ್ದಾರೆ. ಈ ಕವನವು 'ಬಾಳದೇಗುಲದಲ್ಲಿ' ಎಂಬ ಸಂಕಲನದಲ್ಲಿ ಪ್ರಕಟಿಸಿದ್ದಾರೆ. ಈ ಕವಿತೆಯ ಕೆಲವು ಪದ್ಯಗಳನ್ನು ಅನುಬಂಧ ರೂಪದಲ್ಲಿ ನೀಡಲಾಗಿದೆ. 'ಬೇಂದ್ರೆಯವರ ಕಾವ್ಯ ಹಾಗೂ ವ್ಯಕ್ತಿತ್ವದ ಕೆಲವು ಮುಖಗಳು' ಹಾಗೂ 'ಬೇಂದ್ರೆಯವರ ಅರಳು-ಮರಳು' ಎಂಬ ಲೇಖನಗಳು ಬುದ್ದಣ್ಣ ಹಿಂಗಮಿರೆ ಅವರು ಸಂಪಾದಿಸಿದ 'ಇಳಿದು ಬಾ ತಾಯಿ' ಬೇಂದ್ರೆ ಅವರ ಅಭಿನಂದನಾ ಗ್ರಂಥದಲ್ಲಿ ಪ್ರಕಟವಾಗಿವೆ. 'ಬೇಂದ್ರೆಯವರ ಅರಳು-ಮರಳು' ಈ ಲೇಖನವು ಬೇಂದ್ರೆ ಅವರ 'ಅರಳು-ಮರಳು' ಕೃತಿಗೆ ಮರುಮುದ್ರಣದ ಸಂದರ್ಭಕ್ಕೆ ಬರೆದ ಮುನ್ನುಡಿಯಾಗಿದೆ. ಈ ಎಲ್ಲಾ ಲೇಖನಗಳನ್ನು ಸೇರಿಸಿ ಕೃತಿರೂಪದಲ್ಲಿ ಪ್ರಕಟಿಸಲಾಗಿದೆ.

೧೦೪. ೨೦೧೪., ಬನ್ನಂಜೆ ಗೋವಿಂದಾಚಾರ್ಯ., ಪ್ರಯೋಗಶೀಲ ಕವಿ ಬೇಂದ್ರೆ

ಅಭಿನವ ಪ್ರಕಾಶನವು 'ಸರಸ್ವತಿ ನೆನಪು' ಎಂಬ ಮಾಲಿಕೆಯಲ್ಲಿ ಬೇಂದ್ರೆ ಅವರ ಸಾಹಿತ್ಯ ಕುರಿತು ಈಗಾಗಲೇ ಕ್ರೈಸ್ಟ್ ಕಾಲೇಜಿನ ಕನ್ನಡ ಸಂಘದ ಮೂಲಕ ಪ್ರಕಟಿತವಾದ ಹಾಗೂ ಇತರೆಡೆಗಳಲ್ಲಿ ಪ್ರಕಟಿಸಿದ ಪುಸ್ತಕಗಳನ್ನು ೨೦೧೪ರಲ್ಲಿ ಮರುಮುದ್ರಣ ಮಾಡಿದೆ.

ಪ್ರಯೋಗಶೀಲ ಕವಿ ಬೇಂದ್ರೆ : ಈ ಕೃತಿಯಲ್ಲಿ ಸೇರ್ಪಡೆಗೊಂಡಿರುವ ಮೂರು ಲೇಖನಗಳು ಬನ್ನಂಜೆ ಗೋವಿಂದಾಚಾರ್ಯರು ವಿವಿಧ ಸಂದರ್ಭಗಳಲ್ಲಿ ಬೇಂದ್ರೆ ಸಾಹಿತ್ಯ ಕುರಿತು ಮಂಡಿಸಿದ ಪ್ರಬಂಧಗಳಾಗಿವೆ. 'ಪ್ರಯೋಗಶೀಲ ಕವಿ ಬೇಂದ್ರೆ' ಎಂಬ ಲೇಖನವು ೨೦೧೦ರ ಬಿ.ಇ.ಎಸ್ ಕಾಲೇಜಿನಲ್ಲಿ ಬೇಂದ್ರೆ ಕುರಿತ ವಿಚಾರ ಸಂಕಿರಣದಲ್ಲಿ ಮಾಡಿದ ಆಶಯ ಭಾಷಣದ ಲೇಖನರೂಪ ವಾಗಿದೆ. 'ಒಲವೇ ನಮ್ಮ ಬದುಕು' ಲೇಖನವು ೧೯೮೫ರಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಪ್ರಕಟಿಸಿದ ಬೇಂದ್ರೆ ಅವರ ಒಲವಿನ ಕವಿತೆಗಳ ಸಂಕಲನ 'ಒಲವೇ ನಮ್ಮ ಬದುಕು' ಕೃತಿಗೆ ಬರೆದ ಪೀಠಿಕೆಯಾಗಿದೆ. 'ಸಾಕು ಭ್ರಾಂತಿಯ ಕಾವ್ಯ ಬರಲಿ ಸಂಕ್ರಾಂತಿ' ಎಂಬ ಲೇಖನವು ಎಲ್. ಎಸ್ ಶೇಷಗಿರಿರಾವ್ ಅವರು ೧೯೮೪ರಲ್ಲಿ ಸಂಪಾದಿಸಿದ 'ಕನ್ನಡ ಭಾರತಿ' ಎಂಬ ಕೃತಿಯಲ್ಲಿ ಸೇರ್ಪಡೆಗೊಂಡಿರುವ ಲೇಖನವಾಗಿದೆ. ಈ ಎಲ್ಲಾ ಲೇಖನಗಳು ಪ್ರಬುದ್ಧ ವಿಮರ್ಶೆಗಳಾಗಿದ್ದು ಉತ್ತಮ ಅಧ್ಯಯನದಿಂದ ಕೂಡಿವೆ.

೧೦೫. ೨೦೧೪., ಜಿ. ಎಸ್. ಶಿವರುದ್ರಪ್ಪ., ಬೇಂದ್ರೆ ಅವರ ಕಾವ್ಯಸೃಷ್ಟಿಯ ಸ್ವರೂಪ

ಅಭಿನವ ಪ್ರಕಾಶನವು 'ಸರಸ್ವತಿ ನೆನಪು' ಎಂಬ ಮಾಲಿಕೆಯಲ್ಲಿ ಬೇಂದ್ರೆ ಅವರ ಸಾಹಿತ್ಯ ಕುರಿತು ಈಗಾಗಲೇ ಕ್ರೈಸ್ಟ್ ಕಾಲೇಜಿನ ಕನ್ನಡ ಸಂಘದ ಮೂಲಕ ಪ್ರಕಟಿತವಾದ ಹಾಗೂ ಇತರೆಡೆಗಳಲ್ಲಿ ಪ್ರಕಟಿಸಿದ ಪುಸ್ತಕಗಳನ್ನು ೨೦೧೪ರಲ್ಲಿ ಮರುಮುದ್ರಣ ಮಾಡಿದೆ.

ಬೇಂದ್ರೆ ಅವರ ಕಾವ್ಯಸೃಷ್ಟಿಯ ಸ್ವರೂಪ : ಜಿ. ಎಸ್. ಶಿವರುದ್ರಪ್ಪ ಅವರ 'ಬೇಂದ್ರೆ ಅವರ ಕಾವ್ಯಸೃಷ್ಟಿಯ ಸ್ವರೂಪ' ಎಂಬ ಕೃತಿಯಲ್ಲಿ ಎರಡು ಲೇಖನಗಳಿವೆ. 'ಕಾವ್ಯಸೃಷ್ಟಿ-ಬೇಂದ್ರೆಯವರ ದೃಷ್ಟಿ' ಲೇಖನವು ಬೇಂದ್ರೆ ಅವರಿಗೆ ಸಲ್ಲಿಸಿದ ಅಭಿನಂದನಾ ಗ್ರಂಥ 'ಇಳಿದು ಬಾ ತಾಯಿ'ಯಲ್ಲಿ ೧೯೭೭ರಲ್ಲಿ ಮೊದಲಿಗೆ ಪ್ರಕಟವಾಗಿದೆ. 'ದೇಸೀಯತೆಯಲ್ಲಿ ಬೇರೂರಿ ಅರಳಿದ ದತ್ತ ಪ್ರತಿಭೆ' ಈ ಲೇಖನವು ೧೯೯೯ರಲ್ಲಿ ರಚನೆಯಾದ ಲೇಖನವಾಗಿದೆ.

೧೦೬. ೨೦೧೪., ವಸಂತ ಅ. ಕುಲಕರ್ಣಿ., ಬೇಂದ್ರೆ ಅವರ ಕಾವ್ಯ ಮತ್ತು ಶರೀರಶಾಸ್ತ್ರ

ಅಭಿನವ ಪ್ರಕಾಶನವು 'ಸರಸ್ವತಿ ನೆನಪು' ಎಂಬ ಮಾಲಿಕೆಯಲ್ಲಿ ಬೇಂದ್ರೆ ಅವರ ಸಾಹಿತ್ಯ ಕುರಿತು ಈಗಾಗಲೇ ಕ್ರೈಸ್ಟ್ ಕಾಲೇಜಿನ ಕನ್ನಡ ಸಂಘದ ಮೂಲಕ ಪ್ರಕಟಿತವಾದ ಹಾಗೂ ಇತರೆಡೆಗಳಲ್ಲಿ ಪ್ರಕಟಿಸಿದ ಪುಸ್ತಕಗಳನ್ನು ೨೦೧೪ರಲ್ಲಿ ಮರುಮುದ್ರಣ ಮಾಡಿದೆ.

ಬೇಂದ್ರೆ ಅವರ ಕಾವ್ಯ ಮತ್ತು ಶರೀರಶಾಸ್ತ್ರ: ಈ ಕೃತಿಯಲ್ಲಿ ವಸಂತ ಅನಂತ ಕುಲಕರ್ಣಿ ಅವರ ಹತ್ತು ಲೇಖನಗಳಿವೆ. 'ಬೇಂದ್ರೆಯವರು ಕಂಡ ಜೀವನಧರ್ಮ', 'ಶರೀರ ಕ್ರಿಯಾಧರ್ಮ', 'ದೇಹ ಧರ್ಮದ ವಿವಿಧ ಮುಖಗಳು', 'ಸ್ನೇಹಭಾವ', 'ಪಂಚೇಂದ್ರಿಯಗಳ ಸಂವೇದನೆ', ಬೇಂದ್ರೆಯವರ ಕಾವ್ಯದಲ್ಲಿ ಯೋಗದ ಪರಿಕಲ್ಪನೆಗಳು', 'ಪ್ರೇಮ ಪ್ರೀತಿ', 'ಸೌಂದರ್ಯ ಪ್ರಜ್ಞೆ', 'ಜೀವೋತ್ಪತ್ತಿ', 'ಬೇಂದ್ರೆ ಮತ್ತು ಆಧ್ಯಾತ್ಮ' ಈ ಎಲ್ಲಾ ವಿಚಾರಗಳ ಕುರಿತು ಅನುಭವ, ಚಿಂತನೆ ಹಾಗೂ ಅಧ್ಯಯನಗಳು ಮೂಡಿಬಂದಿವೆ.

೧೦೭. ೨೦೧೪., ಆಹಿತಾನಲ(ನಾಗ ಐತಾಳ), ನಳಿನಿ ಮೈಯ., ಬೇಂದ್ರೆ ಅಂದ್ರೆ (ಬೇಂದ್ರೆ ಸಾಹಿತ್ಯದ ವಿರಾಟ್ ಸ್ವರೂಪ)

ಆಹಿತಾನಲ(ನಾಗ ಐತಾಳ), ನಳಿನಿ ಮೈಯ ಅವರು ಸಂಪಾದಿಸಿರುವ 'ಬೇಂದ್ರೆ ಅಂದ್ರೆ'(ಬೇಂದ್ರೆ ಸಾಹಿತ್ಯದ ವಿರಾಟ್ ಸ್ವರೂಪ) ಎಂಬ ಕೃತಿಯನ್ನು ೨೦೧೪ರಲ್ಲಿ ಅಭಿನವ ಪ್ರಕಾಶನ, ಬೆಂಗಳೂರು ಇವರು ಪ್ರಕಟಿಸಿದ್ದಾರೆ. ಈ ಕೃತಿಯನ್ನು ಪ್ರಕಟಿಸುವ ಕಾಲದಲ್ಲಿಯೇ ಅಗಲಿದ ಜಿ.ಎಸ್. ಶಿವರುದ್ರಪ್ಪ ಅವರಿಗೆ ಅರ್ಪಿಸಿದ್ದಾರೆ.

ಬೇಂದ್ರೆ ಅಂದ್ರೆ (ಬೇಂದ್ರೆ ಸಾಹಿತ್ಯದ ವಿರಾಟ್ ಸ್ವರೂಪ) : ಈ ಕೃತಿಯ ಪ್ರಾರಂಭದಲ್ಲಿ ಎಚ್.ಎಸ್. ವೆಂಕಟೇಶಮೂರ್ತಿ ಅವರ 'ಬೇಂದ್ರೆ' ಎಂಬ ಕವಿತೆ ಇದೆ. ಈ ಕೃತಿಯಲ್ಲಿ ಒಟ್ಟು ಮೂವತ್ತೈದು ಲೇಖನಗಳಿವೆ. ಈ ಲೇಖನಗಳು ಕನ್ನಡ ಸಾಹಿತ್ಯದ ವಿವಿಧ ಸಂದರ್ಭಗಳಲ್ಲಿ ಮೂಡಿಬಂದ ಲೇಖನಗಳಾಗಿವೆ. ಇಲ್ಲಿರುವ ಲೇಖನಗಳು ಬೇರೆ ಬೇರೆ ಕೃತಿ, ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಬೇಂದ್ರೆ ಅವರನ್ನು ಪರಿಚಯಿಸುವ ನಿಟ್ಟಿನಲ್ಲಿ ಅವರ ಸಾಹಿತ್ಯ ಹಾಗೂ ವ್ಯಕ್ತಿತ್ವದ ವಿಮರ್ಶೆಯನ್ನು ಈ ಲೇಖನಗಳು ಸ್ಪಷ್ಟಪಡಿಸುತ್ತವೆ.

೧೦೮. ೨೦೧೪., ಸದಾಶಿವ ದೊಡಮನಿ., ಧಾರವಾಡ ಮತ್ತು ಹಲಸಂಗಿ ಗೆಳೆಯರ ಗುಂಪು : ಒಂದು ಸಾಂಸ್ಕೃತಿಕ ಅಧ್ಯಯನ

ಸದಾಶಿವ ದೊಡಮನಿ ಅವರ ಸಂಶೋಧನಾ ಮಹಾಪ್ರಬಂಧ 'ಧಾರವಾಡ ಮತ್ತು ಹಲಸಂಗಿ ಗೆಳೆಯರ ಗುಂಪು : ಒಂದು ಸಾಂಸ್ಕೃತಿಕ ಅಧ್ಯಯನ' ಈ ಕೃತಿಯನ್ನು ೨೦೧೪ರಲ್ಲಿ ಚಂದ್ರಭಾಗ ಪ್ರಕಾಶನ, ಹುಲಕೋಟಿ, ಗದಗ ಇವರು ಪ್ರಕಟಿಸಿದ್ದಾರೆ. ಈ ಸಂಶೋಧನೆ ಅಧ್ಯಯನಕ್ಕೆ ಮಾರ್ಗದರ್ಶನ ನೀಡಿದವರು ಶ್ಯಾಮಸುಂದರ ಬಿದರಕುಂದಿ ಅವರು. ಈ ಕೃತಿಗೆ ಗುರಲಿಂಗ ಕಾಪಾಸೆ ಅವರು ಮುನ್ನುಡಿ ಬರೆದಿದ್ದಾರೆ.

ಧಾರವಾಡ ಮತ್ತು ಹಲಸಂಗಿ ಗೆಳೆಯರ ಗುಂಪು : ಒಂದು ಸಾಂಸ್ಕೃತಿಕ ಅಧ್ಯಯನ :– ಈ ಕೃತಿಯು ಗೆಳೆಯರ ಗುಂಪು ಹಾಗೂ ಅದರ ಕಾರ್ಯಗಳನ್ನು ಸಾಂಸ್ಕೃತಿಕವಾಗಿ ಅಧ್ಯಯನ ಮಾಡಿದೆ. ಗೆಳೆಯರ ಗುಂಪಿನ ಪರಿಚಯ, ಹಲಸಂಗಿ ಗೆಳೆಯರು, ಜಯಕರ್ನಾಟಕ ಹಾಗೂ ಗೆಳೆಯರ ಗುಂಪು, ಗೆಳೆಯರ ಗುಂಪಿನ ವಿಸರ್ಜನೆಯ ನಂತರದ ಸಾಧನೆಗಳು, ಪ್ರಭಾವಗಳು ಎಂಬುದಾಗಿ ಒಟ್ಟು ಎಂಟು ಅಧ್ಯಾಯಗಳಲ್ಲಿ ಅಧ್ಯಯನಮಾಡಿದ್ದಾರೆ.

೧೦೯. ೨೦೧೪., ಜಿ. ಕೃಷ್ಣಪ್ಪ., ಕಾವ್ಯಶೋಧಕ

ಬೇಂದ್ರೆ ಅವರ ಸಾಹಿತ್ಯವನ್ನು ಅಧ್ಯಯನ ಮಾಡುತ್ತಾ ಹತ್ತಕ್ಕೂ ಹೆಚ್ಚು ಬೇಂದ್ರೆ ಸಾಹಿತ್ಯ ವಿಮರ್ಶಾ ಕೃತಿಗಳನ್ನು ರಚಿಸಿದ ಜಿ. ಕೃಷ್ಣಪ್ಪ ಅವರ ಸಾಹಿತ್ಯ ಮಂಥನವಾಗಿ 'ಕಾವ್ಯಶೋಧಕ' ಎಂಬ ಕೃತಿಯನ್ನು ವಿಚಾರ ಸಂಕಿರಣ ಏರ್ಪಡಿಸಿ 'ಉದಯಭಾನು ಕಲಾ ಸಂಘ(ರಿ), ಬೆಂಗಳೂರು ಇವರು ೨೦೧೪ರಲ್ಲಿ ಪ್ರಕಟಿಸಿದ್ದಾರೆ.

ಕಾವ್ಯಶೋಧಕ : ಈ ಕೃತಿಯಲ್ಲಿ ಕೆ. ಸಿ. ಶಿವಾರೆಡ್ಡಿ ಅವರ 'ಬೇಂದ್ರೆ ಕಾವ್ಯ ಸುಹೃದ ವಿಮರ್ಶಕ'., ಜಿ. ಬಿ. ಹರೀಶ ಅವರ 'ಡಾ. ಜಿ. ಕೃಷ್ಣಪ್ಪನವರ ಬೇಂದ್ರೆ ಅಧ್ಯಯನಗಳು'., ಗೀತಾ ವಸಂತ ಅವರ 'ಬೇಂದ್ರೆ ಸಾಹಿತ್ಯದಲ್ಲಿ ಸ್ತ್ರೀ– ಒಂದು ಅಧ್ಯಯನ' ಈ ಎಲ್ಲಾ ಲೇಖನಗಳು ಬೇಂದ್ರೆ ಸಾಹಿತ್ಯ ಕುರಿತ ಅಧ್ಯಯನಗಳಾಗಿವೆ.

೧೧೦. ೨೦೧೪., ಯು. ಎನ್. ಸಂಗನಾಳ ಮಠ(ಸಂ)., ಕಾವ್ಯಲೋಕದ ಗಾರುಡಿಗ

ಪತ್ರಿಕೆಗಳಲ್ಲಿ ಬೇಂದ್ರೆ ಸಾಹಿತ್ಯ ಕುರಿತು ಪ್ರಕಟವಾದ ಮುಖ್ಯ ಲೇಖನಗಳನ್ನು ಯು.ಎನ್. ಸಂಗನಾಳಮಠ ಇವರು ಸಂಪಾದಿಸಿರುವ 'ಕಾವ್ಯಲೋಕದ ಗಾರುಡಿಗ'(ದ.ರಾ.ಬೇಂದ್ರೆ ವಾಙ್ಮಯ ದರ್ಶನ) ಕೃತಿಯನ್ನು ಗಾಯತ್ರಿ ಎಂಟರ್ ಪ್ರೈಸಸ್, ಬೆಂಗಳೂರು ೨೦೧೪ರಲ್ಲಿ ಇವರು ಪ್ರಕಟಿಸಿದ್ದಾರೆ.

ಕಾವ್ಯಲೋಕದ ಗಾರುಡಿಗ : ೨೦೧೪ರ ತನಕ ಪತ್ರಿಕೆಗಳಲ್ಲಿ ಪ್ರಕಟಿತವಾಗಿರುವ ಬೇಂದ್ರೆ ಸಾಹಿತ್ಯ ಕುರಿತ ಲೇಖನಗಳನ್ನು ಐದು ವಿಭಾಗಗಳಲ್ಲಿ ವಿಂಗಡಿಸಿ ಎಪ್ಪತ್ತಕ್ಕೂ ಹೆಚ್ಚು ಲೇಖನಗಳನ್ನು ಸಂಪಾದಿಸಿದ್ದಾರೆ. 'ಜೀವನ ದರ್ಶನ', 'ಕಾವ್ಯ ಸಾಹಿತ್ಯ', 'ಕೃತಿ ಪರಿಚಯ', 'ಹಲವರು ಕಂಡಂತೆ ಬೇಂದ್ರೆ', 'ಸಾಧನಕೇರಿಯತ್ತ' ಈ ವಿಭಾಗಗಳ ಮೂಲಕ ಲೇಖನಗಳನ್ನು ವಿಂಗಡಿಸಿದ್ದಾರೆ.

೧೧೧. ೨೦೧೫., ಜಿ. ಕೃಷ್ಣಪ್ಪ., ಬೇಂದ್ರೆಯವರ ಸಾಹಿತ್ಯದಲ್ಲಿ ಶರಣ ಚಿಂತನೆ

ಬೇಂದ್ರೆ ಅವರ ಸಾಹಿತ್ಯದಲ್ಲಿ ೧೨ನೇಶತಮಾನದ ಶರಣರ ಪ್ರಭಾವ. ಪ್ರೇರಣೆ ಕುರಿತು ಜಿ. ಕೃಷ್ಣಪ್ಪ ಅವರು 'ಬೇಂದ್ರೆಯವರ ಸಾಹಿತ್ಯದಲ್ಲಿ ಶರಣ ಚಿಂತನೆ' ಎಂಬ ಕೃತಿಯನ್ನು ರಚಿಸಿದ್ದಾರೆ. ಈ ಕೃತಿಯನ್ನು ವಂಶಿ ಪಬ್ಲಿಕೇಷನ್ಸ್, ಬೆಂಗಳೂರು ಇವರು ಪ್ರಕಟಿಸಿದ್ದಾರೆ.

೧೧೨. ೨೦೧೫., ಜಿ. ಕೃಷ್ಣಪ್ಪ., ತಿರು ತಿರುಗಿಯು ಹೊಸತಾಗಿರಿ (ಬೇಂದ್ರೆಯವರ ನಾದಲೀಲೆಯ ಅಧ್ಯಯನ)

ಜಿ. ಕೃಷ್ಣಪ್ಪ ಅವರು ಬೇಂದ್ರೆ ಅವರ ನಾದಲೀಲೆ ಕವನ ಸಂಕಲನ ಕುರಿತು ರಚಿಸಿರುವ ವಿಮರ್ಶಾ ಕೃತಿಯೇ 'ತಿರು ತಿರುಗಿಯು ಹೊಸತಾಗಿರಿ'. ಈ ಕೃತಿಯನ್ನು ೨೧೫ರಲ್ಲಿ ವಂಶಿ ಪಬ್ಲಿಕೇಷನ್ಸ್, ಬೆಂಗಳೂರು ಇವರು ಪ್ರಕಟಿಸಿದ್ದಾರೆ.

ತಿರು ತಿರುಗಿಯು ಹೊಸತಾಗಿರಿ(ಬೇಂದ್ರೆಯವರ ನಾದಲೀಲೆಯ ಅಧ್ಯಯನ): ಈ ಕೃತಿಯಲ್ಲಿ ನಾದಲೀಲೆ ಸಂಕಲನವನ್ನು ಅಧ್ಯಯನ ದೃಷ್ಟಿಯಿಂದ ಪ್ರಕೃತಿಗೀತೆಗಳು, ಪ್ರೇಮಗೀತೆಗಳು, ಸಾಮಾಜಿಕ ಪ್ರಜ್ಞೆಯ ಕವನಗಳು, ಬುದ್ಧಿಯ ಅಥವಾ ಆತ್ಮದ ಅರಿವಿನ ಗೀತಗಳು ಎಂದು ವಿಂಗಡಿಸಿ ಅಧ್ಯಯನಮಾಡಿದ್ದಾರೆ.

೧೧೩. ೨೦೧೫., ಜಿ.ವಿ. ಕುಲಕರ್ಣಿ., ಮಂಗಳ ಲೋಕದ ಅಂಗಳಕೇರಿ

ಜಿ.ವಿ. ಕುಲಕರ್ಣಿ ಅವರ ಮಂಗಳ ಲೋಕದ ಅಂಗಳಕೇರಿ ಕೃತಿಯನ್ನು ೨೦೧೫ರಲ್ಲಿ ಪುರೋಗಾಮಿ ಸಾಹಿತ್ಯ ಪ್ರಕಾಶನ, ಹುಬ್ಬಳಿ ಇವರು ಪ್ರಕಟಿಸಿದ್ದಾರೆ. ಈ ಕೃತಿಗೆ ಪ್ರಧಾನ ಸಂಪಾದಕರಾಗಿ ಕೆ. ಎಸ್ ಶರ್ಮಾ ಹಾಗೂ ಸಮಪಾದಕರಾಗಿ ಜಿ. ಎನ್. ಉಪಾಧ್ಯ ಅವರು ಕಾರ್ಯನಿರ್ವಹಿಸಿದ್ದಾರೆ.

ಮಂಗಳ ಲೋಕದ ಅಂಗಳಕೇರಿ : ಈ ಕೃತಿಯಲ್ಲಿ ಬೇಂದ್ರೆ ಕಾವ್ಯವನ್ನು ಹನ್ನೆರಡು ಲೇಖನಗಳಿವೆ. ಹಾಗೂ ವಾಮನ ಬೇಂದ್ರೆ ಕುರಿತು 'ಸಂವಾದ ಕಂಡ ಅಂದತ್ತ', ಕೆ. ಎಸ್. ಶರ್ಮಾ ಅವರ ಕುರಿತು 'ಕುವಲಯ ಕಂಡ ಅಂದತ್ತ' ಎಂಬ ಎರಡು ಲೇಖನಗಳು ಕೂಡ ಈ ಕೃತಿಯಲ್ಲಿ ಸೇರಿವೆ.

ಬೇಂದ್ರೆ ಸಾಹಿತ್ಯ ಕುರಿತು ಗಂಗಾವತರಣ ಒಂದು ವಿಶ್ಲೇಷಣೆ, ಇದು ಬರಿ ಬೆಳಗಲ್ಲೋ ಅಣ್ಣಾ, ತುತ್ತಿನ ಚೀಲ, ಕನ್ನಡ ಮೇಘದೂತ, ಸಖೀಗೀತ, ಹೀಗೆ ಒಲವು ಹಾಗೂ ಸಾಮಾಜಿಕ ಕಳಕಳಿಯುಳ್ಳ ಕೃತಿ, ಕವಿತೆಗಳ ವಿಶ್ಲೇಷಣೆಯನ್ನು ಜಿ.ವಿ. ಕುಲಕರ್ಣಿ ಅವರು ನೀಡಿದ್ದಾರೆ.

೧೧೪. **೨೦೧೬., ಎಂ. ಎನ್. ಸುಂದರ್ ರಾಜ್., ಕುಂತ್ರೆ ನಿಂತ್ರೆ ಬೇಂದ್ರೆ**

ಕನ್ನಡ ಪ್ರಭ ಪತ್ರಿಕೆಯಲ್ಲಿ ಬೇಂದ್ರೆ ಅವರ ಕುರಿತು ಬರೆದ ಕೆಲವು ಪ್ರಸಂಗಗಳನ್ನು ಜೊತೆಗೆ ಇನ್ನೂ ಕೆಲವು ಸೇರಿಸಿ ಎಂ. ಎನ್. ಸುಂದರ್ ರಾಜ್ ಅವರು 'ಕುಂತ್ರೆ ನಿಂತ್ರೆ ಬೇಂದ್ರೆ' ಎಂಬ ಕೃತಿ ರಚಿಸಿದ್ದಾರೆ. ಈ ಕೃತಿಯನ್ನು ಸ್ನೇಹ ಬುಕ್ ಹೌಸ್, ಬೆಂಗಳೂರು ಇವರು ೨೦೧೬ರಲ್ಲಿ ಪ್ರಕಟಿಸಿದ್ದಾರೆ.

ಕುಂತ್ರೆ ನಿಂತ್ರೆ ಬೇಂದ್ರೆ: ಈ ಕೃತಿಯಲ್ಲಿ ಬೇಂದ್ರೆ ಕುರಿತು ನಲವತ್ತ ನಾಲ್ಕು ಲೇಖನಗಳಿವೆ. ಈ ಎಲ್ಲಾ ಪ್ರಸಂಗಗಳು ಬೇಂದ್ರೆ ಅವರ ಬದುಕನ್ನು ಕುರಿತು ತಿಳಿಸುವ ಪ್ರಸಂಗಗಳಾಗಿ ಕಂಡುಬರುತ್ತವೆ. ಈ ಕೃತಿಗೆ ಶ್ಯಾಮಸುಂದರ ಬಿದರಕುಂದಿ ಅವರು ಮುನ್ನುಡಿ ರಚಿಸಿದ್ದಾರೆ. ಬೆನ್ನುಡಿ ಬರೆಹವಾಗಿ ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ ಅವರು ರಚಿಸಿದ್ದಾರೆ.

೧೧೫. **೨೦೧೬., ಜಿ. ಎಸ್. ಆಮೂರ., ಒಮ್ಮುಖ (ಬೇಂದ್ರೆ ವಾಙ್ಮಯದಲ್ಲಿ ತತ್ವ ಮತ್ತು ಕಾವ್ಯ ಹಾಗೂ ಅನುವಾದ)**

ಜಿ. ಎಸ್. ಆಮೂರ ಅವರ ಒಮ್ಮುಖ(ಬೇಂದ್ರೆ ವಾಙ್ಮಯದಲ್ಲಿ ತತ್ವ ಮತ್ತು ಕಾವ್ಯ ಹಾಗೂ ಅನುವಾದ) ಕೃತಿಯು ೨೦೧೬ರಲ್ಲಿ ಸಾಹಿತ್ಯ ಪ್ರಕಾಶನ, ಹುಬ್ಬಳಿ ಇವರ ಮೂಲಕ ಪ್ರಕಟಗೊಂಡಿದೆ. ಈ ಕೃತಿಯನ್ನು ಯಶವಂತ ಚಿತ್ತಾಲರಿಗೆ ಅರ್ಪಿಸಲಾಗಿದೆ. ಈ ಕೃತಿಗೆ ಶ್ರೀರಾಮ ಭಟ್ಟ ಅವರ ಮುನ್ನುಡಿ ಬರೆಹವಿದೆ.

ಒಮ್ಮುಖ (ಬೇಂದ್ರೆ ವಾಙ್ಮಯದಲ್ಲಿ ತತ್ವ ಮತ್ತು ಕಾವ್ಯ ಹಾಗೂ ಅನುವಾದ) : ಈ ಕೃತಿಯಲ್ಲಿ ಎರಡು ವಿಭಾಗದಲ್ಲಿ ಇಪ್ಪತ್ತಾರು ವಿಷಯಗಳ ಕುರಿತು ಚರ್ಚಿಸಿದ್ದಾರೆ. ಬೇಂದ್ರೆ ಅವರ ಕಾವ್ಯ ಹಾಗೂ ಗದ್ಯ ಸಾಹಿತ್ಯದೊಂದಿಗೆ ಬೇಂದ್ರೆ ಸಾಹಿತ್ಯ ಕುರಿತು ರಚನೆಗೊಂಡಿರುವ ಬರಹಗಳನ್ನು ಅಧ್ಯಯನದಲ್ಲಿ ಬಳಸಿದ್ದಾರೆ. ಸತ್ಯ, ನಿಷ್ಠೆ, ಯೋಗ, ವಿವೇಕ ಇಂತಹ ವಿಷಯಗಳ ಕುರಿತು ಬೇಂದ್ರೆ ಸಾಹಿತ್ಯವು ಸ್ಪಂದಿಸುವ ಬಗೆಯನ್ನು ಅಧ್ಯಯನಮಾಡಿದ್ದಾರೆ. ಮೊದಲ ಭಾಗವು ತತ್ವ ಮತ್ತು ಕಾವ್ಯ ಹಾಗೂ ಎರಡನೇ ಭಾಗವು ಅನುವಾದ. ಮೊದಲ ಭಾಗವು ಬೇಂದ್ರೆ ಅವರ ಸಾಹಿತ್ಯ ಕುರಿತು ಅಧ್ಯಯನವಿದೆ. ಅನುವಾದ ಭಾಗದಲ್ಲಿ ಬೇಂದ್ರೆ ಅವರು ಅನುವಾದಿಸಿರುವ ಸಾಹಿತ್ಯದೊಂದಿಗೆ ಅಧ್ಯಯನಮಾಡಲಾಗಿದೆ.

೧೧೬. **೨೦೧೬., ಗೀತಾ ವಸಂತ., ಬೀಜದೊಳಗಣ ವೃಕ್ಷ**

ಗೀತಾ ವಸಂತ ಅವರು ಬೇಂದ್ರೆ ಕಾವ್ಯದ ವಿರಾಟ್ ಸ್ವರೂಪದ ಬಗ್ಗೆ 'ಬೀಜದೊಳಗಣ ವೃಕ್ಷ' ಕೃತಿಯನ್ನು ರಚಿಸಿ ತುಮಕೂರು ವಿಶ್ವವಿದ್ಯಾಲಯಕ್ಕೆ ೨೦೧೩ರಲ್ಲಿ ಸಲ್ಲಿಸಿ ಡಿ.ಲಿಟ್ ಪದವಿ

ಪಡೆದಿದ್ದಾರೆ. ಈ ಪ್ರಬಂಧವನ್ನು ಕೃತಿ ರೂಪದಲ್ಲಿ ೨೦೧೬ರಲ್ಲಿ ಮನೋಹರ ಗ್ರಂಥಮಾಲಾ, ಧಾರವಾಡ ಇವರು ಪ್ರಕಟಿಸಿದ್ದಾರೆ. ಈ ಕೃತಿಗೆ ಎಸ್. ಆರ್. ವಿಜಯಶಂಕರ ಅವರು ಮುನ್ನುಡಿ ರಚಿಸಿದ್ದಾರೆ.

ಬೀಜದೊಳಗಣ ವೃಕ್ಷ: ಈ ಕೃತಿಯಲ್ಲಿ ಆರು ಅಧ್ಯಾಯಗಳ ಮೂಲಕ ಬೇಂದ್ರೆ ಅವರ ಕಾವ್ಯವನ್ನು ಅಧ್ಯಯನ ಮಾಡಲಾಗಿದೆ. 'ಬೇಂದ್ರೆ ಕಾವ್ಯದಲ್ಲಿ ಮಾತೃತತ್ವ', 'ಅಂತಃಪ್ರಜ್ಞೆಯ ಬೆಳಕು : ಗುರು', 'ಬೇಂದ್ರೆ ಕಾವ್ಯದಲ್ಲಿ ಅನುಭಾವದ ಹರಿವು', 'ಬೇಂದ್ರೆಕಾವ್ಯದಲ್ಲಿ ನಾನು–ಸೃಷ್ಟಿ–ದೇವ : ತ್ರಿಕೋನ ವಿನ್ಯಾಸ', 'ಬದುಕು–ಭಾವದ ಭಿತ್ತಿ', 'ಬೇಂದ್ರೆಕಾವ್ಯದ ಒಳದನಿ–ಸಮರಸ ಸೂತ್ರ' ಈ ಎಲ್ಲಾ ಲೇಖನಗಳು ಬೇಂದ್ರೆ ಕಾವ್ಯವನ್ನು ಪರಿಕಲ್ಪನೆಗಳ ಆಧಾರವಾಗಿ ಅಧ್ಯಯನಮಾಡಿರುವುದನ್ನು ಗಮನಿಸಬಹುದು.

೧೧೭. **೨೦೧೬., ಆನಂದ ಝುಂಜರವಾಡ., ಬಂಧವಿರದೆ ಬಂಧುರ**

ಆನಂದ ಝುಂಜರವಾಡ ಅವರು ಅನುವಾದಿಸಿದ ಮರಾಠಿ ಲೇಖನಗಳ ಸಂಗ್ರಹವೇ 'ಬಂಧವಿರದೆ ಬಂಧುರ'. ಈ ಕೃತಿಯನ್ನು ೨೦೧೬ ಕ್ರೈಸ್ಟ್ ಯೂನಿವರ್ಸಿಟಿ ಕನ್ನಡ ಸಂಘ, ಬೆಂಗಳೂರು ಇವರು ಪ್ರಕಟಿಸಿದ್ದಾರೆ.

ಬಂಧವಿರದೆ ಬಂಧುರ : ಈ ಕೃತಿಯಲ್ಲಿ ಹತ್ತೊಂಬತ್ತು ಲೇಖನಗಳಿವೆ. ಈ ಎಲ್ಲಾ ಲೇಖನಗಳು ಮರಾಠಿಯಲ್ಲಿ ವಿವಿಧ ಪತ್ರಿಕೆಗಳಲ್ಲಿ ಪ್ರಕಟಗೊಂಡಂತಹ ಲೇಖನಗಳು. ಬೇಂದ್ರೆ ಅವರ ವ್ಯಕ್ತಿತ್ವ, ಒಡನಾಟ ಹಾಗೂ ಸಾಹಿತ್ಯವನ್ನು ಮರಾಠಿಯ ವಿವಿಧ ಲೇಖಕರು ಗ್ರಹಿಸಿದ ಬಗೆಯನ್ನು ಗಮನಿಸಬಹುದು. 'ಸನ್ಮತಿ', 'ನವಭಾರತಿ' ಮೊದಲಾದ ಮರಾಠಿ ಪತ್ರಿಕೆಗಳಲ್ಲಿ ಹಾಗೂ ವಿವಿಧ ಸ್ಮರಣ ಸಂಚಿಕೆಗಳಲ್ಲಿ ಜೊತೆಗೆ ಅಪ್ರಕಟಿತ ಲೇಖನಗಳೂ ಸೇರಿವೆ.

೧೧೮. **೨೦೧೮., ಜಿ. ಕೃಷ್ಣಪ್ಪ., ಬೇಂದ್ರೆಕಾವ್ಯ : ಪದನಿರುಕ್ತ**

ಬೇಂದ್ರೆ ಕಾವ್ಯದಲ್ಲಿ ಕಂಡುಬರುವ ದೇಸಿಯ ಪದಗಳ ಅರ್ಥವನ್ನು ನಿರುಕ್ತದಂತೆ ಜಿ. ಕೃಷ್ಣಪ್ಪ ಅವರು ವ್ಯಾಖ್ಯಾನಿಸಿದ್ದಾರೆ. ಈ ಕೃತಿಯನ್ನು ವಂಶಿ ಪಬ್ಲಿಕೇಷನ್ಸ್, ಬೆಂಗಳೂರು ಇವರು ೨೦೧೮ರಲ್ಲಿ ಪ್ರಕಟಿಸಿದ್ದಾರೆ.

ಬೇಂದ್ರೆಕಾವ್ಯ : ಪದನಿರುಕ್ತ :– ಬೇಂದ್ರೆ ಕಾವ್ಯವನ್ನು ಕುರಿತು ರಚಿಸಿದ ಶಬ್ದಕೋಶವಲ್ಲ, ವಿಶ್ವಕೋಶವಲ್ಲ, ಇದೊಂದು ನಿರುಕ್ತಮಾದರಿಯಲ್ಲಿ ವ್ಯಾಖ್ಯಾನಿಸಿರುವ ಗ್ರಂಥವಿದು. ಇಲ್ಲಿ ಹಲವು ಪದಗಳಿಗೆ ಆಯಾ ಪ್ರದೇಶಕ್ಕೆ ಭೇಟಿ ನೀಡಿ ಆಯಾ ಪದಗಳಿಗೆ ಅರ್ಥಹುಡುಕಿದ್ದಾರೆ. ಪದಗಳನ್ನು ಇಲ್ಲಿ ಅಕಾರಾದಿ ನೀಡಿಲ್ಲ. ಕವನಸಂಕಲನಗಳು ಪ್ರಕಟವಾದ ವರ್ಷಗಳ ಆಧಾರದ ಮೇಲೆ ಪದಗಳನ್ನು ಅರ್ಥೈಸಿದ್ದಾರೆ.

೧೧೯. **೨೦೧೭., ಕೆ.ಸಿ.ಶಿವಾರೆಡ್ಡಿ., ಬೇಂದ್ರೆ ಕುವೆಂಪು ವಿರಾಟ್ ದರ್ಶನ**

ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಕುವೆಂಪು ಅವರ ಬರೆಹಗಳನ್ನು ಕುರಿತು ಅಧ್ಯಯನ ಮಾಡಲು ನೆರವಾಗುವ ಫೆಲೋಶಿಫ್ ಪಡೆದ ಅಧ್ಯಯನ ಪ್ರಬಂಧಗಳು ಸಾರ್ವಜನಿಕರ ಅವಗಾಹನೆ ಒಳಗಾಗಬೇಕೆಂಬ ಉದ್ದೇಶದಿಂದ ಅವುಗಳನ್ನು ಅಚ್ಚುಮಾಡಲು ಪ್ರಾಧಿಕಾರ ನಿರ್ಧರಿಸಿದೆ. ಈ ಯೋಜನೆಯಲ್ಲಿ 'ಬೇಂದ್ರೆ ಕುವೆಂಪು ವಿರಾಟ್ ದರ್ಶನ' ಎಂಬ ಕೃತಿಯನ್ನು ಕೆ.ಸಿ.ಶಿವಾರೆಡ್ಡಿ ಅವರು ೨೦೧೭ರಲ್ಲಿ ರಚಿಸಿದ್ದಾರೆ. ಈ ಕೃತಿಯನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಪ್ರಕಟಿಸಿದೆ.

ಬೇಂದ್ರೆ ಕುವೆಂಪು ವಿರಾಟ್ ದರ್ಶನ : ಈ ಕೃತಿಯು ಕುವೆಂಪು ಹಾಗೂ ಬೇಂದ್ರೆ ಅವರ ಸಾಹಿತ್ಯ ಕುರಿತು ಹೊಸ ಸಂಶೋಧನೆಯ ವಿಚಾರಗಳನ್ನು ನೀಡುವ ಜೊತೆಗೆ ಈ ಇಬ್ಬರೂ ಕವಿಗಳ ತೌಲನಿಕ ಅಧ್ಯಯನದ ಮೂಲಕ ಚರ್ಚಿಸಲಾಗಿದೆ. ಕೃತಿ ಕುರಿತು "ಕುವೆಂಪು ಮತ್ತು ಬೇಂದ್ರೆ ಎಂಬ ಈ ಎರಡೂ ಪ್ರತಿಭೆಗಳು ಸೃಷ್ಟಿಸಿರುವ ಸಾವಿರಾರು ಪುಟಗಳ ಬರೆಹಗಳಲ್ಲಿ ಅವರ ಆಲೋಚನೆಯ ಕ್ರಮ, ಚಿಂತನೆಗಳು, ತಾವು ನಡೆಸಿದ ಸಂಘರ್ಷ, ಅನುಸಂಧಾನ, ಪ್ರತಿರೋಧ ಮತ್ತು ಅಭಿವ್ಯಕ್ತಿಯ ಸಾಧ್ಯತೆ ಮತ್ತು ಸವಾಲುಗಳು ಇವೆ. ಇದರೊಂದಿಗೆ ಸ್ಥಳೀಯ ಭಾಷೆ, ಸಾಹಿತ್ಯ, ಧರ್ಮ, ರಾಜಕೀಯ, ಸಾಮಾಜಿಕ ಮತ್ತು ವ್ಯಕ್ತಿನಿಷ್ಠ ಬದುಕಿನ ಜೊತೆ ಜೊತೆಯಲ್ಲಿಯೇ ಜೀವಕೇಂದ್ರಿತ ನೆಲೆಯ ಶೋಧವೂ ಈ ಎರಡು ಸಂವೇದನೆಗಳು ಸೃಷ್ಟಿಸಿದ ಸಾಹಿತ್ಯ ಕಥನಗಳಲ್ಲಿ ಮುಖ್ಯ ಆಯಾಮವಾಗಿ ವಿಕಾಸ ಹೊಂದಿರುವುದು ವಿಶೇಷ." ಈ ವಿಚಾರಗಳನ್ನು ಅಧ್ಯಯನ ಮಾಡಲಾಗಿದೆ.

೧೨೦. **೨೦೧೭., ಟಿ. ಎನ್. ವಾಸುದೇವಮೂರ್ತಿ.,** ರಮಣ ಹೃದಯ ಬೇಂದ್ರೆ ಅನುಭಾವ ಮೀಮಾಂಸೆ

ಟಿ. ಎನ್. ವಾಸುದೇವಮೂರ್ತಿ ಅವರ 'ರಮಣ ಹೃದಯ' ಬೇಂದ್ರೆ ಅನುಭಾವ ಮೀಮಾಂಸೆ ಕೃತಿಯನ್ನು ೨೦೧೭ರಲ್ಲಿ ವಂಶಿ ಪಬ್ಲಿಕೇಷನ್ಸ್ ಬೆಂಗಳೂರು ಇವರು ಪ್ರಕಟಿಸಿದ್ದಾರೆ. ಈ ಕೃತಿಗೆ ಜಿ. ಕೃಷ್ಣಪ್ಪ ಅವರ ಮುನ್ನುಡಿ ಬರೆಹವಿದೆ. ಬೇಂದ್ರೆ ಅವರು ಸಂಸ್ಕೃತದಿಂದ ಕನ್ನಡಕ್ಕೆ ತಂದಿರುವ ಕೃತಿ ಕಾವ್ಯ ಕಂಠ ಗಣಪತಿ ಮುನಿಗಳ 'ಸತ್ ದರ್ಶನಂ' ಕೃತಿಯ ಆಧಾರವಾಗಿ ಟಿ. ಎನ್. ವಾಸುದೇವಮೂರ್ತಿ ಅವರು ಮಹರ್ಷಿ ರಮಣರ ಸಮಗ್ರ ವಾಙ್ಮಯವನ್ನು ಅಧ್ಯಯನಮಾಡಿ 'ರಮಣ ಹೃದಯ' ಕೃತಿಯಾಗಿ ನೀಡಿದ್ದಾರೆ.

೧೨೧. **೨೦೧೮., ಜಿ. ಕೃಷ್ಣಪ್ಪ., ಬೇಂದ್ರೆ ಕಾವ್ಯ**

ಮೈಸೂರು ವಿಶ್ವವಿದ್ಯಾಲಯವು ಪ್ರಕಟಿಸುವ 'ಪ್ರಚಾರ ಪುಸ್ತಕ ಮಾಲೆ' ಅಡಿಯಲ್ಲಿ ೩೩೧ನೇ ಕೃತಿಯಾಗಿ ಜಿ. ಕೃಷ್ಣಪ್ಪ ಅವರು 'ಬೇಂದ್ರೆಕಾವ್ಯ' ಎಂಬ ಕಿರುಹೊತ್ತಿಗೆ ರಚಿಸಿದ್ದಾರೆ. ಈ ಕೃತಿಯನ್ನು ಮೈಸೂರು ವಿಶ್ವವಿದ್ಯಾಲಯದ ಪ್ರಸಾರಾಂಗವು ೨೦೧೮ರಲ್ಲಿ ಪ್ರಕಟಿಸಿದೆ.

ಬೇಂದ್ರೆ ಕಾವ್ಯ : ಬೇಂದ್ರೆ ಅವರ ಸಾಹಿತ್ಯವನ್ನು ಸರಳವಾಗಿ ಪರಿಚಯಿಸುವ ಈ ಕೃತಿಯು ಹದಿಮೂರು ಅಧ್ಯಾಯಗಳಲ್ಲಿ ಬೇಂದ್ರೆಕಾವ್ಯವನ್ನು ಅರ್ಥೈಸಿದೆ. ಜೀವನ ಪರಿಚಯ, ಮೊದಲಕೃತಿ: ಕೃಷ್ಣಾಕುಮಾರಿ, ಮೊದಲ ಕವನ ಸಂಕಲನ : ಗರಿ, ಮಾತೃ ಭಕ್ತ 'ಅಂಬಿಕಾತನಯದತ್ತ', ಪ್ರೇಮಗೀತೆಗಳು, ಸಖೀಗೀತ, ಬಾಲ್ಯಕಾಂಡ, ಪ್ರಕೃತಿ ಗೀತೆಗಳು, ಸಾಮಾಜಿಕ ಪ್ರಜ್ಞೆಯ ಕವನಗಳು, ಆತ್ಮದ ಅರಿವಿನ ಗೀತೆಗಳು, ವ್ಯಕ್ತಿ ವಿಶಿಷ್ಟ ಕವನಗಳು, ಗದ್ಯ ಬರಹಗಳು, ನಾಲ್ಕು ಕವಿತೆಗಳ ಅರಿವು ಈ ಎಲ್ಲಾ ವಿಭಾಗಗಳ ಮೂಲಕ ಬೇಂದ್ರೆಕಾವ್ಯವನ್ನು ಅಧ್ಯಯನಮಾಡಿ ಈ ಕೃತಿ ರಚಿಸಿದ್ದಾರೆ.

೧೨೨. **೨೦೧೯., ಜಿ. ಕೃಷ್ಣಪ್ಪ., ಹಸಿರು ಹಚ್ಚಿ ಚುಚ್ಚಿ (ದ.ರಾ.ಬೇಂದ್ರೆ ಕಾವ್ಯ ವಿಮರ್ಶೆ)**

ಜಿ. ಕೃಷ್ಣಪ್ಪ ಅವರ 'ಹಸಿರು ಹಚ್ಚಿ ಚುಚ್ಚಿ' ಕೃತಿಯು ದ.ರಾ.ಬೇಂದ್ರೆ ಅವರ ಕಾವ್ಯ ವಿಮರ್ಶೆಯನ್ನು ಒಳಗೊಂಡ ಕೃತಿಯಾಗಿದೆ. ಈ ಕೃತಿಯನ್ನು ವಂಶಿ ಪಬ್ಲಿಕೇಷನ್ಸ್, ಬೆಂಗಳೂರು ಅವರು ಪ್ರಕಟಿಸಿದ್ದಾರೆ. ಈ ಕೃತಿಗೆ ಮೊಗಳ್ಳಿ ಗಣೇಶ್ ಅವರ ಮುನ್ನುಡಿ ಬರೆಹವಿದೆ. ಈ ಕೃತಿಯನ್ನು ಬೇಂದ್ರೆ ಅವರ ಮಗಳು, ಸೊಸೆ ಹಾಗೂ ಮೊಮ್ಮಗಳಿಗೆ ಅರ್ಪಿಸಿದ್ದಾರೆ.

ಹಸಿರು ಹಚ್ಚ ಚುಚ್ಚಿ (ದ.ರಾ.ಬೇಂದ್ರೆ ಕಾವ್ಯ ವಿಮರ್ಶೆ) : ಈ ಕೃತಿಯಲ್ಲಿ ಒಟ್ಟು ಎಂಟು ಭಾಗಗಳಲ್ಲಿ ನಲವತ್ತನಾಲ್ಕು ಲೇಖನಗಳು ಸೇರಿವೆ. ಜಿ. ಕೃಷ್ಣಪ್ಪ ಅವರು ವಿವಿಧ ಸಂದರ್ಭಗಳಲ್ಲಿ ಪ್ರಜಾವಾಣಿ, ವಿಜಯ ಕರ್ನಾಟಕ, ಸಂಯುಕ್ತ ಕರ್ನಾಟಕ, ಔಟ್ ಲುಕ್ ಆಂಗ್ಲ ಮಾಸಿಕ, ಸಿಹಿಗಾಳಿ ಈ ಎಲ್ಲಾ ಪತ್ರಿಕೆಗಳಲ್ಲಿ ಪ್ರಕಟಿತ ಲೇಖನಗಳ ಸಂಕಲನವಾಗಿ ಪ್ರಕಟವಾಗಿದೆ. ಈ ಕೃತಿಯ ವಿಶೇಷವೆಂದರೆ ಬೇಂದ್ರೆ ಸಾಹಿತ್ಯದಲ್ಲಿ ಇದುವರೆಗೂ ಅಧ್ಯಯನ ಮಾಡದೇ ಇರುವ ಹೊಸ ಪರಿಕಲ್ಪನೆಗಳೊಂದಿಗೆ ಅಧ್ಯಯನ ಮಾಡಿದ್ದಾರೆ.

೧೨೩. **೨೦೧೯., ಮಂಜುನಾಥ್ ಡಿ.ಎಸ್., ರವಿಶಂಕರ ಎ.ಕೆ., ಅನಿತ ಕೆ.ವಿ., ಬೇರು ತೇರು**
ಬೇಂದ್ರೆ ಕುವೆಂಪು ಗದ್ಯ ಸಾಹಿತ್ಯ ಕುರಿತ ಸಂಶೋಧನಾ ಲೇಖನಗಳನ್ನು ಒಳಗೊಂಡ 'ಬೇರು ತೇರು' ಕೃತಿಯನ್ನು ಮಂಜುನಾಥ್ ಡಿ.ಎಸ್, ರವಿಶಂಕರ ಎ.ಕೆ, ಅನಿತ ಕೆ.ವಿ ಇವರು ಸಂಪಾದಿಸಿದ್ದಾರೆ. ಈ ಕೃತಿಯನ್ನು ಸಾಧನಕೇರಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ(ರಿ), ಬೆಂಗಳೂರು ಇವರು ಪ್ರಕಟಿಸಿದ್ದಾರೆ. ಈ ಕೃತಿಯ ಮುಖಪುಟದಲ್ಲಿ ಬೇಂದ್ರೆ ಕುವೆಂಪು ಅವರು ಮೈಸೂರಿನ ಗೊಮ್ಮಟಗಿರಿಯಲ್ಲಿ ನಿಂತು ಮಾತಾನಾಡುತ್ತಿರುವ ಅಪರೂಪದ ಚಿತ್ರವನ್ನು ಕುವೆಂಪು.ಕಾಂ ಕೃಪೆಯಿಂದ ಪ್ರಕಟಿಸಿದ್ದಾರೆ.

ಬೇರು ತೇರು : ಈ ಕೃತಿಯಲ್ಲಿ ಬೇಂದ್ರೆ ಅವರ ಗದ್ಯ ಸಾಹಿತ್ಯವನ್ನು ಕುರಿತು ಹದಿನೆಂಟು ಲೇಖನಗಳು ಪ್ರಕಟವಾಗಿವೆ. ಉಳಿದ ಮೂವತ್ತು ಲೇಖನಗಳು ಕುವೆಂಪು ಅವರ ಗದ್ಯ ಸಾಹಿತ್ಯ ಕುರಿತ ಅಧ್ಯಯನಗಳಾಗಿವೆ. ಈ ಕೃತಿಯು ಗದ್ಯ ಸಾಹಿತ್ಯವನ್ನು ಮಾತ್ರ ಕೇಂದ್ರೀಕರಿಸಿ ಅಧ್ಯಯನ ಮಾಡಿರುವುದು ವಿಶೇಷವಾಗಿದೆ.

* * * * *

ಲೇಖನಗಳು

೧. **೧೯೫೫., ಕಸ್ತೂರಿ., ಫೆಬ್ರವರಿ, ಸಂಚಿಕೆ ೬., ವ್ಯಾಖ್ಯೆಯ ಕಟ್ಟಿಗೆ ಸಿಲುಕಿದ ಬೇಂದ್ರೆ**

ಕಸ್ತೂರಿ ಮಾಸಿಕ ಪತ್ರಿಕೆಯು ೧೯೫೫ರಲ್ಲಿ ಪ್ರತಿ ತಿಂಗಳ ಒಂದನೇ ತಾರೀಖು 'ಕಸ್ತೂರಿ ಕನ್ನಡ ಡೈಜೆಸ್ಟ್' ಎಂಬುದಾಗಿ ಪ್ರಕಟವಾಗುತ್ತಿತ್ತು. ಫೆಬ್ರವರಿ, ಸಂಚಿಕೆ ೬ರ ಮುಖ್ಯ ಸಂಪಾದಕರಾಗಿ ರಂಗನಾಥ ದಿವಾಕರ ಅವರು ಕಾರ್ಯನಿರ್ವಹಿಸಿದ್ದಾರೆ. ಈ ಪತ್ರಿಕೆಯನ್ನು ಲೋಕ ಶಿಕ್ಷಣ ಟ್ರಸ್ಟ್ , ಹುಬ್ಬಳ್ಳಿ ಇವರು ಪ್ರಕಟಿಸಿದ್ದಾರೆ. ಈ ಪತ್ರಿಕೆಯಲ್ಲಿ ಬೇಂದ್ರೆ ಸಾಹಿತ್ಯ ಕುರಿತು ದ.ಲ. ಕೆರೂರ ಅವರ 'ವ್ಯಾಖ್ಯೆಯ ಕಟ್ಟಿಗೆ ಸಿಲುಕಿದ ಬೇಂದ್ರೆ' ಎಂಬ ವಿಮರ್ಶಾ ಲೇಖನ ಪ್ರಕಟವಾಗಿದೆ. ವಿಮರ್ಶೆ ಎಂಬುದಕ್ಕಿಂತ ಸಹೃದಯ ಅಧ್ಯಯನವಾಗಿ ಗಮನಿಸಬಹುದು.

೨. **೧೯೬೬., ನಾಯಕ ಹಾ.ಮಾ., ಸಂಕೀರ್ಣ., ಬೇಂದ್ರೆ**

ಹಾ.ಮಾ. ನಾಯಕ್ ಅವರ 'ಬೇಂದ್ರೆ' ಲೇಖನವು ೧೯೫೨ರಲ್ಲಿ ರಚನೆಯಾಗಿದೆ. ಇವರ ೧೯೬೬ರಲ್ಲಿ ಪ್ರಕಟವಾದ 'ಸಂಕೀರ್ಣ' ಎಂಬ ಕೃತಿಯಲ್ಲಿ ಈ ಲೇಖನ ಪ್ರಕಟವಾಗಿದೆ. 'ಸಂಕೀರ್ಣ' ಕೃತಿಯು ವ್ಯಕ್ತಿ–ವಿಚಾರ–ವಿಮರ್ಶೆ ಎಂಬ ಮೂರು ಭಾಗಗಳ ಮೂಲಕ ಕೃತಿಯನ್ನು ವಿಭಾಗಿಸಲಾಗಿದೆ. ಈ ಕೃತಿಯನ್ನು ಸುರುಚಿ ಪ್ರಕಾಶನ, ಮೈಸೂರು ಇವರು ಪ್ರಕಟಿಸಿದ್ದಾರೆ. ಬೇಂದ್ರೆ ಅವರಿಗೆ ಐವತ್ತೇಳು ವರ್ಷ ತುಂಬಿದ ಶುಭ ಸಂದರ್ಭಕ್ಕಾಗಿ ಹಾ.ಮಾ. ನಾಯಕ್ ಅವರು ಬೇಂದ್ರೆ ಅವರು ತಮ್ಮ ಪರಿಸರಕ್ಕೆ ಬಂದು ತಮ್ಮ ಮನೆಗೆ ಆಗಮಿಸಿದ ನೆನಪುಗಳೊಂಧಿಗೆ ಒಬ್ಬ ಕವಿಯಲ್ಲಿ ಅಡಗಿರುವ ಗುಣವನ್ನು ಅಭಿವ್ಯಕ್ತಪಡಿಸಿದ್ದಾರೆ.

೩. **೧೯೬೭., ಪ್ರಬುದ್ಧ ಕರ್ಣಾಟಕ., ಸಂಪುಟ ೪೮– ಸಂಚಿಕೆ ೪**

ಮೈಸೂರು ವಿಶ್ವವಿದ್ಯಾಲಯದ ಪ್ರಬುದ್ಧ ಕರ್ಣಾಟಕವು ಸಂಪುಟ ೪೮– ಸಂಚಿಕೆ ೪ರ ಪರಾಭವ ಸಂವತ್ಸರದ ಪುಷ್ಯ ಸಂಚಿಕೆಯಲ್ಲಿ ಬೇಂದ್ರೆ ಕುರಿತು ಒಂದು ಕವಿತೆ ಹಾಗೂ ಅಭಿನಂದನಾ ಗೌರವದ ನುಡಿಗಳು ಸೇರಿವೆ. ಅಕ್ಕರೆಯ ತಮ್ಮಯ್ಯ ಅವರು ರಚಿಸಿರುವ 'ಅಂಬಿಕಾತನಯ ದತ್ತರಿಗೆ' ಎಂಬ ಕವಿತೆ ಹಾಗೂ ಶ್ರೀ ದ.ರಾ. ಬೇಂದ್ರೆ ಅವರಿಗೆ ಗೌರವ ಡಿ.ಲಿಟ್ ಪ್ರಶಸ್ತಿ ದೊರೆತಾಗ ಪತ್ರಿಕೆಯು ತಮ್ಮ ಸಂಪಾದಕೀಯದಲ್ಲಿ ಸಲ್ಲಿಸಿರುವ ಗೌರವ ನುಡಿಗಳಿವೆ.

೪. **೧೯೬೭., ಪ್ರಬುದ್ಧ ಕರ್ಣಾಟಕ., ಸಂಪುಟ ೪೮– ಸಂಚಿಕೆ ೪**

ಮೈಸೂರು ವಿಶ್ವವಿದ್ಯಾಲಯದ ಪ್ರಬುದ್ಧ ಕರ್ಣಾಟಕವು ಸಂಪುಟ ೪೮– ಸಂಚಿಕೆ ೪ರ ಪರಾಭವ ಸಂವತ್ಸರದ ಪುಷ್ಯ ಸಂಚಿಕೆಯಲ್ಲಿ ಬೇಂದ್ರೆ ಕುರಿತು ಒಂದು ಕವಿತೆ ಹಾಗೂ ಅಭಿನಂದನಾ ಗೌರವದ ನುಡಿಗಳು ಸೇರಿವೆ. ಅಕ್ಕರೆಯ ತಮ್ಮಯ್ಯ ಅವರು ರಚಿಸಿರುವ 'ಅಂಬಿಕಾತನಯ ದತ್ತರಿಗೆ' ಎಂಬ ಕವಿತೆ ಹಾಗೂ ಶ್ರೀ ದ.ರಾ. ಬೇಂದ್ರೆ ಅವರಿಗೆ ಗೌರವ ಡಿ.ಲಿಟ್ ಪ್ರಶಸ್ತಿ ದೊರೆತಾಗ ಪತ್ರಿಕೆಯು ತಮ್ಮ ಸಂಪಾದಕೀಯದಲ್ಲಿ ಸಲ್ಲಿಸಿರುವ ಗೌರವ ನುಡಿಗಳಿವೆ.

೫. **೧೯೭೦., ಸ.ಸ ಮಾಳವಾಡ., ಸಾಹಿತ್ಯ ಸಂಗಮ**

ಸ.ಸ ಮಾಳವಾಡ ಅವರ 'ಸಾಹಿತ್ಯ ಸಂಗಮ' ಕೃತಿಯು ೧೯೭೦ರಲ್ಲಿ ಜಯ ಪ್ರಕಾಶನ, ಧಾರವಾಡದ ಮೂಲಕ ಪ್ರಕಟವಾಗಿದೆ. ಈ ಕೃತಿಯನ್ನು ಮಾಳವಾಡ ಅವರಿಗೆ ಅರವತ್ತು ವರ್ಷ ತುಂಬಿದಾಗ ಅವರು ನಲವತ್ತು ವರ್ಷ ಸಾಹಿತ್ಯ ರಚನೆಯಲ್ಲಿ ತೊಡಗಿದ ಅವರ ಅರವತ್ತು ಲೇಖನಗಳನ್ನು ಜಯ ಪ್ರಕಾಶನದ ಸಂಚಾಲಿಕೆಯಾಗಿ ಶ್ರೀಮತಿ ಶಾಂತದೇವಿ ಮಾಳವಾಡ ಅವರು ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ ಬೇಂದ್ರೆ ಕುರಿತು ಸ.ಸ ಮಾಳವಾಡರು ರಚಿಸಿದ 'ಬೇಂದ್ರೆಯವರ ಕತೆ-ಹರಟೆ' ಎಂಬ ಲೇಖನವಿದೆ. ಬೇಂದ್ರೆ ಅವರು ಬರೆದ 'ನಿರಾಭರಣ ಸುಂದರಿ' ಎಂಬ ಕಥಾ ಸಂಕಲನದಲ್ಲಿರುವ ಸಣ್ಣ ಕಥೆಗಳು ಹಾಗೂ ಹರಟೆಗಳ ಕುರಿತು ವಿಮರ್ಶೆಯನ್ನು ಗಮನಿಸಬಹುದು.

೬. **೧೯೭೪., ಕರ್ಕಿ ಡಿ.ಎಸ್., ಸಾಹಿತ್ಯ-ಸಂಸ್ಕೃತಿ- ಶ್ರುತಿ., ಬೇಂದ್ರೆ ಗೀತ ಶ್ರುತಿ**

ಡಿ.ಎಸ್. ಕರ್ಕಿ ಅವರ ಮೂರನೇ ಕೃತಿ 'ಸಾಹಿತ್ಯ-ಸಂಸ್ಕೃತಿ-ಶ್ರುತಿ' ಎಂಬ ಕೃತಿಯನ್ನು ೧೯೭೪ರಲ್ಲಿ ಐ ಬಿ ಎಚ್ ಪ್ರಕಾಶನ, ಬೆಂಗಳೂರು ಪ್ರಕಟಗೊಂಡಿದೆ. ಈ ಕೃತಿಯಲ್ಲಿ ಪುಟ ಸಂಖ್ಯೆ ೭ರಿಂದ ೮೫ರವರೆಗೆ ಬೇಂದ್ರೆ ಅವರ ಕಾವ್ಯ ಗೇಯತೆ ಕುರಿತು 'ಬೇಂದ್ರೆ ಗೀತಶ್ರುತಿ' ಎಂಬ ಲೇಖನವಿದೆ. ಜಾನಪದಗತಿಗಳು, ಜಾನಪದದ ನೈಜನಾಡಿ, ಲಾವಣಿಬಂಧ, ನಯದ ನೆಯ್ಗೆಯಲ್ಲಿ ಒಲವು, ಮಾತ್ರಛಂದದಲ್ಲಿ ರಚನೆ, ಸೀಸ ಪದ್ಯದ ಕೊಡುಗೆ, ಬೇಂದ್ರೆ ಅವರ ಅಷ್ಟಷಟ್ಪದಿ, ಷಟ್ಪದಿಯಲ್ಲಿ ಕವನ ಸೃಷ್ಟಿ, ವೈದಿಕ ಛಂದಸ್ಸಿನಲ್ಲಿ ಪ್ರಯೋಗ ಎಂಬ ವಿಭಾಗಗಳ ಮೂಲಕ ಬೇಂದ್ರೆ ಗೇಯತೆಯನ್ನು ಚರ್ಚಿಸಿದ್ದಾರೆ.

೭. **೧೯೭೪., ಶಿವರುದ್ರಪ್ಪ ಜಿ. ಎಸ್(ಸಂ)., ಸಾಹಿತ್ಯ ವಾರ್ಷಿಕ-೧೯೭೩**

ಬೆಂಗಳೂರು ವಿಶ್ವವಿದ್ಯಾಲಯ ಪ್ರಕಟಿಸಿದ 'ಸಾಹಿತ್ಯ ವಾರ್ಷಿಕ'ವು ಒಂದು ವರ್ಷದ ಸಾಹಿತ್ಯ ಸಮೀಕ್ಷೆಯನ್ನು ಅತ್ಯಂತ ವ್ಯವಸ್ಥಿತವಾಗಿ ನಿರೂಪಿಸುವ ಕಾರ್ಯ ಮಾಡಿದೆ. ಆಯಾ ವರ್ಷದಲ್ಲಿ ಪ್ರಕಟವಾದ ಕೃತಿಗಳ ಪರಿಚಯಕಾರ್ಯವೂ ನಡೆದಿದೆ. ೧೯೭೩ರಲ್ಲಿ ಪ್ರಕಟವಾದ ಬೇಂದ್ರೆ ಅವರ 'ಶ್ರಾವಣ ಬಂತು' ಕೃತಿಯನ್ನು ಲಕ್ಷ್ಮೀನಾರಾಯಣ ಭಟ್ಟರು ಪರಿಚಯಿಸಿದ್ದಾರೆ. ಈ ಕೃತಿಯನ್ನು ಜಿ.ಎಸ್. ಶಿವರುದ್ರಪ್ಪ ಅವರು ಸಂಪಾದಿಸಿದ್ದಾರೆ.

೮. **೧೯೭೫., ಮಂಗಳ ಚಿ.ನ., ಕಾವ್ಯ ಕಲ್ಪನೆ., ಬೇಂದ್ರೆಯವರ ಕಾವ್ಯದಲ್ಲಿ ಅರವಿಂದ ದರ್ಶನ., ಬೆಂಗಳೂರು**

ಮಂಗಳ ಚಿ.ನ. ಅವರ 'ಬೇಂದ್ರೆಯವರ ಕಾವ್ಯದಲ್ಲಿ ಅರವಿಂದ ದರ್ಶನ' ಎಂಬ ಲೇಖನವು ೧೯೭೫ರಲ್ಲಿ 'ಕಾವ್ಯ ಕಲ್ಪನೆ' ಎಂಬ ಕೃತಿಯಲ್ಲಿ ಪುಟ ಸಂಖ್ಯೆ ೩೮ರಿಂದ ೪೯ರವರೆಗೆ ಪ್ರಕಟವಾಗಿದೆ. ಶ್ರೀ ಅರವಿಂದರ ಜೀವನಸ್ಫೂರ್ತಿ, ಶಕ್ತಿ ಸಂಚಾರ, ಬಾನಿನ ಕಣ್ಣು, ತನ್ಮಯ ಮೂರ್ತಿ, ನಂಬಿಗೆಯ ಅಂಬಿಗ, ಕಾರಣ ಪುರುಷರು, ಪ್ರಸ್ಥಾನ-ಉತ್ಥಾನ, ಕೀರ್ತಿ ಬಯಲ ತುಂಬಿತು, ಎಂತು ಬಂತೋ ಜಡದಿಂದ ಪ್ರಾಣ?, ಸ್ವರ್ಣ ಗರುಡ ಎಂಬ ವಿಭಾಗದ ಮೂಲಕ ಅರವಿಂದರ ಪ್ರಭಾವವನ್ನು ಚರ್ಚಿಸಿದ್ದಾರೆ.

೯. **೧೯೭೫., ರಾಮಚಂದ್ರ ಶರ್ಮ., ಪ್ರತಿಭಾ ಸಂದರ್ಶನ., ಗಾರುಡಿಗನ ಚೀಲ ಬೇಂದ್ರೆಯವರ ಕಾವ್ಯ**

ರಾಮಚಂದ್ರ ಶರ್ಮ ಅವರ ಪ್ರತಿಭಾ ಸಂದರ್ಶನ ಎಂಬ ಕೃತಿಯನ್ನು ಸುಮತಿ ಪ್ರಕಾಶನ, ಬೆಂಗಳೂರು ಇವರು ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ ಕನ್ನಡ ಸಾಹಿತ್ಯದ ಪ್ರಮುಖ ಕವಿಗಳನ್ನು ಕುರಿತು ಹತ್ತು ಲೇಖನಗಳನ್ನು ರಾಮಚಂದ್ರ ಶರ್ಮ ಅವರು ರಚಿಸಿದ್ದಾರೆ. ಇವುಗಳಲ್ಲಿ ಬೇಂದ್ರೆ ಸಾಹಿತ್ಯ ಅಧ್ಯಯನ

ಕುರಿತು 'ಗಾರುಡಿಗನ ಚೀಲ ಬೇಂದ್ರೆಯವರ ಕಾವ್ಯ' ಎಂಬ ಲೇಖನ ರಚಿಸಿದ್ದಾರೆ. ಈ ಲೇಖನದ ಮೂಲಕ ಬೇಂದ್ರೆ ಅವರ ಕವಿತ್ವದ ಶಕ್ತಿಯನ್ನು ವಿಮರ್ಶೆಯ ಕಣ್ಣಿನಿಂದ ಅಧ್ಯಯನಮಾಡಿದ್ದಾರೆ.

೧೦. ೧೯೮೦., ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ., ಸಂಪುಟ ೬೫, ಸಂಚಿಕೆ ೧–೨ ಜೂನ್, ಡಿಸೆಂಬರ್

ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸುವ ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆಯ ಸಂಪುಟ ೬೫, ಸಂಚಿಕೆ ೧–೨ ಜೂನ್, ಡಿಸೆಂಬರ್ ೧೯೮೦ರ ಸಂಚಿಕೆಯಲ್ಲಿ ಬೇಂದ್ರೆ ಸಾಹಿತ್ಯ ಕುರಿತು ಲೇಖನ ಪ್ರಕಟವಾಗಿದೆ. ವಿವಿಧ ವಿಚಾರಗಳಿಗೆ ಸಂಬಂಧಿಸಿದಂತೆ ಒಟ್ಟು ಹದಿಮೂರು ಲೇಖನಗಳಿದ್ದು ಅವುಗಳಲ್ಲಿ ಚಿದಂಬರ ದೀಕ್ಷಿತ ಅವರ 'ಬೇಂದ್ರೆ ಅವರ ಕವಿತೆಗಳಲ್ಲಿ ಸಾಮಾಜಿಕ ಜೀವನ' ಎಂಬ ಲೇಖನವಿದೆ. ಈ ಲೇಖನದಲ್ಲಿ ಸಮಾಜದ ವಿಚಾರಗಳನ್ನು ಪ್ರತಿನಿಧಿಸುವ ಕುಟುಂಬ ಜೀವನ, ಸಮಾಜದ ಮೂಲ ಸಮಸ್ಯೆಗಳನ್ನು ಕುರಿತು ಕವಿತೆಗಳ ಮೂಲಕ ವಿಮರ್ಶಿಸಿದ್ದಾರೆ.

೧೧. ೧೯೮೦., ಜಾಲೀಹಾಳ ಗೋವಿಂದ., ಕಾವ್ಯ ಮಂಥನ

ಜಾ.ಗೋ ಹೆಸರಿನೊಂದಿಗೆ 'ಕಾವ್ಯಮಂಥನ' ಕೃತಿಯನ್ನು ರಚಿಸಿರುವ ಜಾಲೀಹಾಳ ಗೋವಿಂದ ಅವರು ಆಧುನಿಕ ಕನ್ನಡದ ಹತ್ತು ಪ್ರಮುಖ ಕವಿಗಳ, ಹತ್ತು ಮಹತ್ವದ ಕವಿತೆಗಳ ವಿಶ್ಲೇಷಣಾತ್ಮಕ ಪರಿಶೀಲನೆಯೊಂದಿಗೆ ಪ್ರಾಯೋಗಿಕ ವಿಮರ್ಶೆಯನ್ನು ರಚಿಸಿದ್ದಾರೆ. ಈ ಕೃತಿಯನ್ನು ೧೯೮೦ರಲ್ಲಿ ಸಮಾಜ ಪುಸ್ತಕಾಲಯ, ಧಾರವಾಡ ಇವರು ಪ್ರಕಟಿಸಿದ್ದಾರೆ.

ಕಾವ್ಯ ಮಂಥನ : ಈ ಕೃತಿಯಲ್ಲಿ ಬೇಂದ್ರೆ ಸಾಹಿತ್ಯ ಅಧ್ಯಯನ ಕುರಿತು 'ಬೆಳಗು' ಕವಿತೆಯ ವಿಮರ್ಶೆ ನೀಡಿದ್ದಾರೆ. ಈ ಕೃತಿಗೆ ವಿ. ಕೃ. ಗೋಕಾರರು ಮುನ್ನುಡಿ ಬರೆದಿದ್ದಾರೆ. ಮಾಸ್ತಿ ಅವರ 'ಕೊಂಬು', ಬೇಂದ್ರೆ ಅವರ 'ಬೆಳಗು', ವಿ. ಸೀತಾರಾಮಯ್ಯ ಅವರ 'ಅಭೀಃ', ಕುವೆಂಪು ಅವರ 'ಸಾಮಾನ್ಯ ಬೀದಿ', ಪು.ತಿ.ನ ಅವರ 'ಕವಿ', ವಿ. ಕೃ. ಗೋಕಾಕರ 'ಚೈತನ್ಯಕ್ಕೆ', ಕೆ. ಎಸ್. ನರಸಿಂಹಸ್ವಾಮಿ ಅವರ 'ಕವಿತೆ ಹುಟ್ಟಿತು', ಗೋಪಾಲಕೃಷ್ಣ ಅಡಿಗರ 'ಶ್ರೀ ರಾಮನವಮಿಯ ದಿವಸ', ಜಿ.ಎಸ್ ಶಿವರುದ್ರಪ್ಪ ಅವರ 'ಮುಂಬೈ ಜಾತಕ', ಚೆನ್ನವೀರ ಕಣವಿ ಅವರ 'ನಂಬಿಕೆ' ಈ ಎಲ್ಲಾ ಕವಿಗಳ ಒಂದು ಕವಿತೆಗಳ ವಿಮರ್ಶೆಯು ಈ ಕೃತಿಯಲ್ಲಿ ಸೇರಿವೆ.

೧೨. ೧೯೮೦., ಕೆ. ಎಸ್. ನಿಸಾರ್ ಅಹಮದ್., ಇದು ಬರಿ ಬೆಡಗಲ್ಲೋ ಅಣ್ಣ

ಕೆ. ಎಸ್. ನಿಸಾರ್ ಅಹಮದ್ ಅವರು ಹಲವು ವರ್ಷಗಳಿಂದ ಆಗಾಗ್ಗೆ ಬರೆದ, ಭಾಷಣ ಮಾಡಿದ ಲೇಖನಗಳಿಗೆ ಕೃತಿ ರೂಪ ನೀಡಿದ್ದಾರೆ. ಇದು ಬರಿ ಬೆಡಗಲ್ಲೋ ಅಣ್ಣ' ಎಂಬ ಕೃತಿಯು ೧೯೮೦ರಲ್ಲಿ ಜ್ಯೋತಿ ಪ್ರಕಾಶನ, ಬೆಂಗಳೂರು ಇವರು ಪ್ರಕಟಿಸಿದ್ದಾರೆ. ಈ ಕೃತಿಯ ಲೇಖನಗಳು ೧೯೭೮ ದೆಹಲಿಯಲ್ಲಿ ನಡೆದ ಐವತ್ತನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮಂಡಿಸಿದ ಪ್ರಬಂಧ, ೧೯೭೯ರಲ್ಲಿ ಆಕಾಶವಾಣಿ, ಬೆಂಗಳೂರು ಇಲ್ಲಿ ನೀಡಿದ ಭಾಷಣ, ಪಂಜೆ, ರಾಜರತ್ನಂ, ಕುವೆಂಪು, ಬೇಂದ್ರೆ ಅವರ ಕೃತಿಗಳ ಬಗೆಗಿನ ಬರಹಗಳು ಈ ಲೇಖಕರ ಕುರಿತು ವಿಶಿಷ್ಟ ಸಂದರ್ಭದಲ್ಲಿ ಮಾಡಿದ ಭಾಷಣಗಳಾಗಿವೆ. ಇಲ್ಲಿನ ಬಹುತೇಕ ಲೇಖನಗಳು ಸಹ್ಯಾದ್ರಿ, ಇಳಿದು ಬಾ ತಾಯಿ, ಮುನ್ನೋಟ ಗ್ರಂಥಗಳಲ್ಲಿ ಕನ್ನಡ ನುಡಿ, ಪ್ರಬುದ್ಧ ಕರ್ಣಾಟಕ, ಕಸ್ತೂರಿ, ಪಾಂಚಾಲಿ, ಕ್ಷಿತಿಜ, ಮಲ್ಲಿಗೆ, ಕಾದಂಬರಿ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಈ ಕೃತಿಯನ್ನು ನಾಲ್ಕು ವಿಭಾಗದಲ್ಲಿ ನೀಡಲಾಗಿದೆ. ಸ್ವಕೀಯ, ಮಂಥನ, ಅವಲೋಕನ, ವಿವೇಚನೆ. ಮಂಥನ ಭಾಗದಲ್ಲಿ ಬೇಂದ್ರೆ ಸಾಹಿತ್ಯ ಕುರಿತು 'ಬೇಂದ್ರೆ ಕಾವ್ಯದಲ್ಲಿ ವೈಚಾರಿಕತೆ' ಎಂಬ ಲೇಖನವಿದೆ. ಈ ಲೇಖನವು ವಿಚಾರ ಸಾಹಿತ್ಯದ ಮೂಲಕ ಬೇಂದ್ರೆ ಕಾವ್ಯದಲ್ಲಿ ಕಂಡುಬರುವ ವಿಚಾರಗಳು, ಅಧ್ಯಯನ ಕ್ರಮ ಈ ಎಲ್ಲಾ ಅಂಶಗಳನ್ನು ಚರ್ಚಿಸಿದ್ದಾರೆ.

೧೩. ೧೯೮೨., ಅಂಕಣ., ಸೆಪ್ಟೆಂಬರ್, ಸಂಪುಟ ೩, ಸಂಚಿಕೆ ೧

ಅಂಕಣ ದ್ವೈಮಾಸಿಕ ಪತ್ರಿಕೆಯ ೧೯೮೨, ಸೆಪ್ಟೆಂಬರ್, ಸಂಪುಟ ೩, ಸಂಚಿಕೆ ೧ ಈ ಪತ್ರಿಕೆಯನ್ನು ಪಿ.ಪಿ ಬಳಗದ ಗೆಳೆಯರು ಪ್ರಕಟಿಸಿದ್ದಾರೆ. ಬೇಂದ್ರೆ ಸಾಹಿತ್ಯವನ್ನು ಕುರಿತು ಸಿ.ವಿಶ್ವೇಶ್ವರ ಅವರ 'ಬೇಂದ್ರೆಯವರ ಕೆಲವು ಕವನಗಳನ್ನು ಕುರಿತು' ಎಂಬ ಲೇಖನ ಪ್ರಕಟವಾಗಿದೆ. ಈ ಪತ್ರಿಕೆಯ ಬೆನ್ನುಡಿಯಲ್ಲಿ ಅಂಕಣ ಪ್ರಕಾಶನದ ಪ್ರಕಟಣೆ ಇದೆ. ಈ ಪ್ರಕಟಣೆಯಲ್ಲಿ ಇವರು ಅಂಕಣ ಪ್ರಕಾಶನ ಪ್ರಾರಂಭಿಸಿ ಪ್ರಕಟಿಸಿದ ಟಿ. ಆರ್. ಚಂದ್ರಶೇಖ್ ಅವರ ಅಸಾಮ ಸಮಸ್ಯೆ ಒಂದು ಪರಿಶೀಲನೆ ಎಂಬ ಕೃತಿಯನ್ನು ಪ್ರಕಟಿಸಿದ್ದಾರೆ. ಈ ಪತ್ರಿಕೆಯನ್ನು ಚಿ. ಶ್ರೀನಿವಾಸ ರಾಜು ಅವರು ಪ್ರಕಾಶಕರಾಗಿ ಕಾರ್ಯನಿರ್ವಹಿಸಿದ್ದಾರೆ.

೧೪. ೧೯೮೩., ವೆಂಕಟೇಶಮೂರ್ತಿ ಎಚ್. ಎಸ್., ನೂರು ಮರ ನೂರು ಸ್ವರ., ಬೇಂದ್ರೆ ಕಾವ್ಯದ ಕೆಲವು ಅಭೀಪ್ಸೆಗಳು

ವೆಂಕಟೇಶಮೂರ್ತಿ ಎಚ್. ಎಸ್ ಅವರ 'ನೂರು ಮರ ನೂರು ಸ್ವರ' ಎಂಬ ವಿಮರ್ಶಾ ಕೃತಿಯನ್ನು ೧೯೮೩ರಲ್ಲಿ ಕೃತಿ ಪ್ರಕಾಶನ, ಬೆಂಗಳೂರು ಇವರು ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ 'ಬೇಂದ್ರೆ ಕಾವ್ಯದ ಕೆಲವು ಅಭೀಪ್ಸೆಗಳು' ಎಂಬ ಲೇಖನವಿದೆ. ಈ ಲೇಖನದಲ್ಲಿ ಬೇಂದ್ರೆ ಅವರ ಕಾವ್ಯವನ್ನು ಅಭ್ಯಾಸಮಾಡುವಾಗ ಮತ್ತೆ ಮತ್ತೆ ಕಾಣುವ ಕೆಲವು ಅಭೀಪ್ಸೆಗಳನ್ನು ಪದಪ್ರಯೋಗದಿಂದ ಹಿಡಿದು, ನುಡಿಗಟ್ಟುಗಳ ಬಳಕೆ, ಲಯ ವಿನ್ಯಾಸ, ಪ್ರತಿಮಾ ಸೃಷ್ಟಿ ಮತ್ತು ವಸ್ತು ಪ್ರಪಂಚದವರೆಗೆ ವ್ಯಕ್ತವಾಗು ಅಭೀಪ್ಸೆಗಳ ಕುರಿತು ಈ ಲೇಖನದಲ್ಲಿ ಅಧ್ಯಯನಮಾಡಿದ್ದಾರೆ. ಈ ಲೇಖನವು ಪುಟ ಸಂಖ್ಯೆ ೧ರಿಂದ ೯ರವರೆಗೆ ಇದೆ.

೧೫. ೧೯೮೪., ಆರ್ಕೆ, ಮಣಿಪಾಲ., ವಾಸ್ತವ

ಆರ್ಕೆ ಮಣಿಪಾಲ ಇವರ ವಾಸ್ತವ ಕೃತಿಯು ೧೯೮೪ರಲ್ಲಿ ಯುವಕರ ಸಂಘ (ರಿ) ರಾಮನಗರ, ಹಗರಿಬೊಮ್ಮನಹಳ್ಳಿ ಇವರು ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ ಇರುವ ಲೇಖನಗಳು ಲೇಖಕರೇ ಹೇಳುವಂತೆ 'ಹೆಚ್ಚಿನವು ಬಂಡಾಯ ಸಾಹಿತ್ಯ ಸಂಘಟನೆ ರೂಪಗೊಂಡು ಹೊಸದರಲ್ಲಿ ಬರೆದ ಅಥವಾ ವಿವಿಧ ವೇದಿಕೆಗಳಲ್ಲಿ ಮಾಡಿದ ಭಾಷಣಗಳ ಲಿಖಿತ ರೂಪಗಳು. ಮೂರು ಭಾಗಗಳಲ್ಲಿ ಒಟ್ಟು ಒಂಬತ್ತು ಲೇಖನಗಳಿವೆ. ಎರಡನೇ ಭಾಗದಲ್ಲಿ ಬೇಂದ್ರೆ ಸಾಹಿತ್ಯ ಕುರಿತು 'ಬೇಂದ್ರೆ ಮತ್ತು ಅನ್ನ' ಎಂಬ ವಿಮರ್ಶಾ ಲೇಖನವಿದೆ. ಈ ಲೇಖನದಲ್ಲಿ 'ಭೂಮಿತಾಯಿಯ ಚೊಚ್ಚಲ ಮಗ', 'ಮನುವಿನ ಮಕ್ಕಳು', ಅನ್ನಾವತಾರ', 'ಕುರುಡು ಕಾಂಚಾಣ', 'ತುತ್ತಿನ ಚೀಲ' ಈ ಮೊದಲಾದ ಹಸಿವು, ಅನ್ನ ಹಾಗೂ ಸಾಮಾಜಿಕ ಸಮಸ್ಯೆಗಳನ್ನು ಅಭಿವ್ಯಕ್ತಪಡಿಸುವ ಬೇಂದ್ರೆ ಅವರ ಕವಿತೆಗಳೊಂದಿಗೆ ವಿಮರ್ಶೆ ನೀಡಿದ್ದಾರೆ. ಈ ಲೇಖನದಲ್ಲಿ ವಾಸ್ತವದ ವಿಚಾರಗಳು ಕವಿತೆಯ ಕಲ್ಪನೆಯಂತೆ ಕೂಡಿದ ಅಂಶಗಳಲ್ಲ ಎಂಬುದನ್ನು ಕೆಲವು ಉದಾಹರಣೆಗಳ ಮೂಲಕ ಚರ್ಚಿಸಿದ್ದಾರೆ.

೧೬. ೧೯೮೫., ದೇ. ಜವರೇಗೌಡ(ಸಂ)., ಕನ್ನಡ ಪ್ರತಿಭೆ., ಬಿ.ನಂ. ಚಂದ್ರಯ್ಯ., ದತ್ತಾತ್ರೇಯ ರಾಮಚಂದ್ರ ಬೇಂದ್ರೆ

ಮೈಸೂರಿನಲ್ಲಿ ನಡೆದ ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನಕ್ಕಾಗಿ ಕರ್ನಾಟಕ ರಾಜ್ಯದ ವಯಸ್ಕರ ಶಿಕ್ಷಣ ಸಮಿತಿಯು ಸಿದ್ಧಪಡಿಸಿದ ಕೃತಿಯೇ 'ಕನ್ನಡ ಪ್ರತಿಭೆ'. ೧೯೮೫ರಲ್ಲಿ ಪ್ರಕಟಗೊಂಡಿದೆ. ಈ ಕೃತಿಯಲ್ಲಿ ಒಟ್ಟು ಅರವತ್ತೈದು ಬಾಳಿನ ಕಥೆಗಳಿವೆ. ಹನ್ನೆರಡು ಸಾಹಿತಿಗಳು, ಹತ್ತು ಸಂಗೀತಗಾರರು, ಒಬ್ಬ

ನರ್ತಕಿ, ನಾಲ್ಕು ಜನ ನಾಟಕಕಾರರು, ಇಬ್ಬರು ಚಿತ್ರರಂಗ ನಟರು, ಇಬ್ಬರು ಶಿಲ್ಪಿಗಳು, ಇಬ್ಬರು ವರ್ಣಚಿತ್ರಕಾರರು, ಮೂರು ಗಮಕಿಗಳು, ಇಬ್ಬರೂ ಛಾಯಾಗ್ರಾಹಕರಿಗೆ, ಐದು ಜನ ಮೈಸೂರು ರಾಜ್ಯ ನಿರ್ಮಾಪಕರಿಗೆ, ಇಬ್ಬರು ವಿಜ್ಞಾನಿಗಳು, ಇಬ್ಬರು ಸೇನಾನಿಗಳು, ಇಬ್ಬರು ಶಿಕ್ಷಕರು, ಐದು ಜನ ಸ್ವಾತಂತ್ರ್ಯ ಹೋರಾಟಗಾರರು, ಇಬ್ಬರು ವೈದ್ಯರು, ಇಬ್ಬರು ಸಂಶೋಧಕರು, ಒಬ್ಬರು ಸಮಾಜ ಸೇವಕರು, ಇಬ್ಬರು ಪತ್ರಿಕಾ ಕ್ಷೇತ್ರದವರು, ಮೂರು ಜನ ಕ್ರೀಡಾಪಟುಗಳು ಇಷ್ಟು ಜನರನ್ನು ಆಯ್ಕೆ ಮಾಡಿಕೊಂಡು ಲೇಖನಗಳನ್ನು ರಚಿಸಲಾಗಿದೆ. ಈ ಕೃತಿಯಲ್ಲಿ ಸಾಹಿತಿಗಳ ವಿಭಾಗದಲ್ಲಿ 'ದತ್ತಾತ್ರೇಯ ರಾಮಚಂದ್ರ ಬೇಂದ್ರೆ' ಎಂಬ ಲೇಖನವನ್ನು ಬಿ.ನಂ. ಚಂದ್ರಯ್ಯ ಅವರು ರಚಿಸಿದ್ದಾರೆ. ಬೇಂದ್ರೆ ಅವರ ವ್ಯಕ್ತಿತ್ವವನ್ನು ಅವರ ಸಾಹಿತ್ಯದ ಮೂಲಕ ಪರಿಚಯಿಸಿದ್ದಾರೆ.

೧೭. ೧೯೮೭., ರಾಜೇಂದ್ರ ಚೆನ್ನಿ., ಅಧ್ಯಯನ., ಬೇಂದ್ರೆ ಕಾವ್ಯ : ಕೆಲವು ಟಿಪ್ಪಣಿಗಳು

ರಾಜೇಂದ್ರ ಚೆನ್ನಿ ಇವರ 'ಅಧ್ಯಯನ' ಕೃತಿಯು ೧೯೮೭ರಲ್ಲಿ 'ಪರಿಸರ ಸಾಹಿತ್ಯ ಪ್ರಕಾಶನ, ಶಿವಮೊಗ್ಗ ಇವರ ಮೂಲಕ ಪ್ರಕಟಗೊಂಡಿದೆ. ಈ ಕೃತಿಯಲ್ಲಿ ಬೇಂದ್ರೆ ಸಾಹಿತ್ಯ ಕುರಿತು 'ಬೇಂದ್ರೆ ಕಾವ್ಯ : ಕೆಲವು ಟಿಪ್ಪಣಿಗಳು' ಎಂಬ ಲೇಖನವು ಪುಟ ಸಂಖ್ಯೆ ೧೩ರಿಂದ ೩೩ರವರೆಗೆ ಇದೆ. ಈ ಲೇಖನವು ಬೇಂದ್ರೆ ಅವರ 'ಚಿಗರಿಯಂಗಳ ಚೆಲುವಿ', 'ಗಂಗಾವತರಣ' ಕವನಗಳನ್ನು ರಾಚನಿಕ ವಿಮರ್ಶಾ ದೃಷ್ಟಿಕೋನದಿಂದ ವಿಮರ್ಶೆ ಮಾಡಿದ್ದಾರೆ.

೧೮. ೧೯೮೯., ತಿರುಮಲೇಶ್., ಸಮ್ಮುಖ., ಬೇಂದ್ರೆಯವರ ಕಾವ್ಯ ಶೈಲಿ

ಕೆ. ವಿ. ತಿರುಮಲೇಶ್ ಅವರ 'ಸಮ್ಮುಖ' ಕೃತಿಯು ೧೯೮೯ರಲ್ಲಿ ಅಕ್ಷರ ಪ್ರಕಾಶನ, ಹೆಗ್ಗೋಡು ಇವರ ಪ್ರಕಾಶನದ ಮೂಲಕ ಪ್ರಕಟಗೊಂಡಿತು. ಈ ಕೃತಿಯಲ್ಲಿ 'ಬೇಂದ್ರೆ ಕಾವ್ಯ ಶೈಲಿ'ಯನ್ನು ಕುರಿತು ಪುಟ ಸಂಖ್ಯೆ ೧ರಿಂದ ೩೫ರವರೆಗೆ ಲೇಖನವಿದೆ. ಈ ಲೇಖನವು ಭಾಷಾ ದೃಷ್ಟಿಕೋನ, ಪರಿಸರ ಸಮನ್ವಯತೆ, ಸ್ಥಳೀಯ ಜ್ಞಾನ ಚಿಂತನೆ, ಪಾಶ್ಚಾತ್ಯ ಪ್ರಭಾವ ಹೀಗೆ ಹಲವು ಆಯಾಮಗಳೊಂದಿಗೆ ಚರ್ಚಿಸಿದ ವಿಶಿಷ್ಟ ಲೇಖನವಾಗಿದೆ.

೧೯. ೧೯೯೨., ತಿಪ್ಪೇರುದ್ರಸ್ವಾಮಿ ಎಚ್., ಸಹೃದಯಿ., ಕುವೆಂಪು ಅವರ 'ಪಕ್ಷಿ' ಹಾಗೂ ಬೇಂದ್ರೆಯವರ 'ಕುರುಡು ಕಾಂಚಾಣ' : ಒಂದುರೂಪನಿಷ್ಠವಿಮರ್ಶೆ

'ಸಹೃದಯಿ' ಗ್ರಂಥವು ಎಸ್. ಎಂ. ವೃಷಭೇಂದ್ರಸ್ವಾಮಿ ಅವರ ಕುರಿತ ಅಭಿನಂದನ ಗ್ರಂಥ. ಈ ಕೃತಿಯನ್ನು ಪ್ರಧಾನ ಸಂಪಾದಕರಾಗಿ ಎಚ್. ತಿಪ್ಪೇರುದ್ರಸ್ವಾಮಿ ಅವರು, ಸಂಪಾದಕರಾಗಿ ಎಚ್. ಎಂ. ಮಹೇಶ್ವರಯ್ಯ, ಡಿ.ಕೆ. ಜೋಶಿ, ಸಿ.ಕೆ. ನಾವಲಗಿ ಇವರು ಕಾರ್ಯನಿರ್ವಹಿಸಿದ್ದಾರೆ. ಈ ಕೃತಿಯನ್ನು ಶ್ರೀ ಅನ್ನದಾನ ವಿಜಯ ವಿದ್ಯಾ ಪ್ರಸಾರಕ ಸಮಿತಿ, ನರೇಗಲ್ಲ ಇವರು ಪ್ರಕಟಪಡಿಸಿದ್ದಾರೆ. 'ಸಹೃದಯಿ' ಕೃತಿಯಲ್ಲಿ ಬೇಂದ್ರೆ ಹಾಗೂ ಕುವೆಂಪು ಕುರಿತು ಲೇಖನವಿದೆ. 'ಕುವೆಂಪು ಅವರ 'ಪಕ್ಷಿ' ಹಾಗೂ ಬೇಂದ್ರೆಯವರ 'ಕುರುಡು ಕಾಂಚಾಣ' : ಒಂದು ರೂಪನಿಷ್ಠವಿಮರ್ಶೆ' ಈ ಲೇಖನವು ಪುಟಸಂಖ್ಯೆ ೧೪೪ರಿಂದ ೧೫೩ರಲ್ಲಿ ಕಂಡುಬರುತ್ತದೆ. ಈ ಲೇಖನವು ನವೋದಯ ಕಾಲದ ಆಂತರಿಕ ಅನುರಣದ ಚೈತನ್ಯವನ್ನು ಸೂಕ್ಷ್ಮಗೊಳಿಸುವ ಲೇಖನವು ಕುವೆಂಪು ಅವರಲ್ಲಿ ಪಕ್ಷಿಯ ಪರಿಕಲ್ಪನೆಯ ಚೈತನ್ಯವನ್ನು ಗುರ್ತಿಸಿದರೆ, ಬೇಂದ್ರೆ ಅವರಲ್ಲಿ ಆರ್ಥಿಕ ವಿಷಮತೆಯಿಂದ ಉಂಟಾದ ನೋವಿನ ವಿಷಾದಸ್ವರವನ್ನು ಆಂತರಿಕ ಶಕ್ತಿಯಾಗಿ ಅಧ್ಯಯನ ಮಾಡಲಾಗಿದೆ. ಈ ಲೇಖನವನ್ನು ಎಚ್. ತಿಪ್ಪೇರುದ್ರಸ್ವಾಮಿ ಅವರು ರಚಿಸಿದ್ದಾರೆ.

೨೦. ೧೯೫೫., ಕೃಷ್ಣರಾಯ. ಅ. ನ., ಕನ್ನಡ ಕುಲ ರಸಿಕರು., ದ. ರಾ ಬೇಂದ್ರೆ

ಅ. ನ. ಕೃಷ್ಣರಾಯರ ೧೯೫೧ರ ೨೦ ಮೇರಲ್ಲಿ 'ಚಿತ್ರಗುಪ್ತ' ಎಂಬ ಪತ್ರಿಕೆಯಲ್ಲಿ ಪ್ರಕಟವಾದ ಲೇಖನ 'ದ.ರಾ ಬೇಂದ್ರೆ'ಯು 'ಕನ್ನಡ ಕುಲರಸಿಕರು' ಎಂಬ ಕೃತಿಯಲ್ಲಿ ೧೯೫೫ರಲ್ಲಿ ಪ್ರಕಟವಾಗಿದೆ. ಈ ಕೃತಿಯನ್ನು ಕರ್ನಾಟಕ ಬುಕ್ ಏಜನ್ಸಿ, ಬೆಂಗಳೂರು ಇವರು ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ ಪುಟ ಸಂಖ್ಯೆ ೭೫–೮೨ರವರೆಗೆ ಕಂಡುಬರುತ್ತದೆ. ಈ ಲೇಖನದಲ್ಲಿ ಬೇಂದ್ರೆ ಅವರೊಂದಿಗೆ ಒಡನಾಡಿದ ಅನುಭವಗಳ ಜೊತೆಗೆ ಕವಿಯನ್ನು ಇನ್ನೊಬ್ಬ ಕವಿಯೊಂದಿಗೆ ಹೋಲಿಸುವ ಕ್ರಮವನ್ನು ಖಂಡಿಸಿದ್ದಾರೆ. 'ಗರಿ' ಸಂಕಲನ ಕುರಿತ ವಿಮರ್ಶೆ ಇಲ್ಲಿದೆ.

೨೧. ೧೯೯೬., ಮಲ್ಲೇಪುರಂ ಜಿ. ವೆಂಕಟೇಶ., ತಿಳಿವ ತೇಜದ ಮುಂದೆ., ಬೇಂದ್ರೆ ಕಾವ್ಯದ ಮೂಲ ನೆಲೆಗಳು : ಒಂದು ಟಿಪ್ಪಣಿ

ಮಲ್ಲೇಪುರಂ ಜಿ. ವೆಂಕಟೇಶ ಅವರ ಸಂಸ್ಕೃತಿ ಚಿಂತನ ವಿಮರ್ಶಾಲೇಖನಗಳ ಸಂಪುಟ 'ತಿಳಿವ ತೇಜದ ಮುಂದೆ' ಎಂಬ ಕೃತಿಯನ್ನು ಸಾಹಿತ್ಯ ಪ್ರಕಾಶನ, ಹುಬ್ಬಳಿ ಇವರು ಐವತ್ತನಾಲ್ಕನೆಯ ಪ್ರಕಟಣೆಯಾಗಿ ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ 'ಬೇಂದ್ರೆ ಕಾವ್ಯದ ಮೂಲನೆಲೆಗಳು : ಒಂದು ಟಿಪ್ಪಣಿ' ಎಂಬ ಬೇಂದ್ರೆ ಸಾಹಿತ್ಯ ಕುರಿತ ಲೇಖನವಿದೆ. ಈ ಲೇಖನದಲ್ಲಿ ಬೇಂದ್ರೆ ಕಾವ್ಯದ ಪ್ರವೇಶಕ್ಕೆ ಇರುವ ಕವಿತೆಗಳೊಂದಿಗೆ ಮೂಲನೆಲೆಗಳನ್ನು ಚರ್ಚಿಸಿದ್ದಾರೆ. ಈ ಲೇಖನವು 'ತಿಳಿವ ತೇಜದ ಮುಂದೆ' ಕೃತಿಯ ಪುಟ ೧೪ರಿಂದ ೧೯ರಲ್ಲಿ ಕಂಡುಬರುತ್ತದೆ.

೨೨. ೧೯೯೭., ಸುಮಿತ್ರಾ ಎಲ್.ಸಿ., ವಿಭಾವ., ಬೇಂದ್ರೆಯವರ ಕಾವ್ಯದಲ್ಲಿ ದಾಂಪತ್ಯದ ಸ್ವರೂಪ

ಸುಮಿತ್ರಾ ಎಲ್. ಸಿ. ಅವರ 'ವಿಭಾವ' ಕೃತಿಯು ೧೯೯೭ರಲ್ಲಿ ಅಕ್ಷರ ಪ್ರಕಾಶನ, ಹೆಗ್ಗೋಡು ಮೂಲಕ ಪ್ರಕಟವಾಗಿದೆ. ಈ ಕೃತಿಯಲ್ಲಿ ಬೇಂದ್ರೆ ಅವರ ಸಾಹಿತ್ಯ ಕುರಿತು 'ಬೇಂದ್ರೆಯವರ ಕಾವ್ಯದಲ್ಲಿ ದಾಂಪತ್ಯದ ಸ್ವರೂಪ' ಎಂಬ ಲೇಖನವು ಪುಟ ಸಂಖ್ಯೆ ೯ರಿಂದ ೧೭ರವರೆಗೆ ಕಂಡುಬರುತ್ತದೆ. ಈ ಲೇಖನವು ಬೇಂದ್ರೆ ಅವರ ಗಂಡು–ಹೆಣ್ಣು ಕುರಿತಾದ ಕವಿತೆಗಳ ಮೂಲಕ ದಾಂಪತ್ಯದ ನೆಲೆಗಳನ್ನು ವಿಸ್ತರಿಸಿರುವ ಕಾವ್ಯದ ಹೊಸಬಗೆಗಳನ್ನು ಕುರಿತು ಚರ್ಚಿಸಿದ್ದಾರೆ.

೨೩. ೧೯೯೭., ತಾಳ್ತಜೆ ವಸಂತಕುಮಾರ., ಲೋಕದೃಷ್ಟಿಯ ಗ್ರಹಿಕೆ : ಅಂಬಿಕಾತನಯ ದತ್ತರ ಕಾವ್ಯ

ತಾಳ್ತಜೆ ವಸಂತಕುಮಾರ ಅವರ 'ಲೋಕದೃಷ್ಟಿಯ ಗ್ರಹಿಕೆ : ಅಂಬಿಕಾತನಯ ದತ್ತರ ಕಾವ್ಯ' ಎಂಬ ಲೇಖನವು ಸಂಕ್ರಮಣ ೩೦೦ರ ಅಗಸ್ಟ್ ೧೯೯೭ರ ಸಂಚಿಕೆಯಲ್ಲಿ ಪ್ರಕಟವಾಗಿದೆ. ಈ ಲೇಖನದಲ್ಲಿ ಬೇಂದ್ರೆ ಸಾಹಿತ್ಯವು ಲೋಕದೃಷ್ಟಿಯೊಂದಿಗೆ ಹೊಂದಿರುವ ಅವಿನಾಭಾವ ಸಂಬಂಧವನ್ನು ಗ್ರಹಿಸಿದ್ದಾರೆ.

೨೪. ೧೯೯೮., ಉಮಾಪತಿ ಕೆ.ಎಸ್ (ಸಂ)., ಚಿಂತಾಮಣಿ ಕೂಡ್ಲೆಕೆರೆ., ನಾ ಮೆಚ್ಚಿದ ಪುಸ್ತಕ., ಗರಿ

ಉಮಾಪತಿ ಕೆ.ಎಸ್ ಅವರು ಸಂಪಾದಿಸಿರುವ 'ನಾ ಮೆಚ್ಚಿದ ಪುಸ್ತಕ' ಎಂಬ ಕೃತಿಯು ೧೯೯೮ರಲ್ಲಿ ಅಂಕಿತ ಪುಸ್ತಕ, ಬೆಂಗಳೂರು ಇವರ ಪ್ರಕಾಶನದೊಂದಿಗೆ ಪ್ರಕಟವಾಯಿತು. ಈ ಕೃತಿಯಲ್ಲಿ ಚಿಂತಾಮಣಿ ಕೂಡ್ಲೆಕೆರೆ ಅವರು ಬೇಂದ್ರೆ ಅವರ 'ಗರಿ' ಕವನ ಸಂಕಲನ ಕುರಿತು ಲೇಖನ ರಚಿಸಿದ್ದಾರೆ. ಈ ಲೇಖನವು 'ನಾ ಮೆಚ್ಚಿದ ಪುಸ್ತಕ' ಎಂಬ ಕೃತಿಯಲ್ಲಿ ಪುಟ ಸಂಖ್ಯೆ ೧೪–೨೧ರವರೆಗೆ ಕಂಡು ಬರುತ್ತದೆ. 'ಬೇಂದ್ರೆ ಅಮರ ಕವಿ. 'ಗರಿ' ಒಂದು ಅಮರಕೃತಿ' ಎಂಬುದಾಗಿ ಈ ಲೇಖನದ ಮೂಲಕ ಅಧ್ಯಯನಮಾಡಿದ್ದಾರೆ.

೨೫. ೧೯೯೮., ಡಿ.ವಿ.ಪ್ರಹ್ಲಾದ್, ರವಿಕುಮಾರ ಕಾಶಿ(ಸಂ)., ಸಂಚಯ

ಡಿ.ವಿ.ಪ್ರಹ್ಲಾದ್ ಅವರ ಸಂಪಾದಕತ್ವದಲ್ಲಿ ದ್ವೈಮಾಸಿಕ 'ಸಂಚಯ' ಪತ್ರಿಕೆ(ಸಂಪುಟ ೯., ಸಂಚಿಕೆ ೨, ಮಾರ್ಚ್-ಏಪ್ರಿಲ್ ೧೯೯೮) ಮೂಡಿಬಂದಿದೆ. ಈ ಪತ್ರಿಕೆಯಲ್ಲಿ ಬೇಂದ್ರೆ ಸಾಹಿತ್ಯ ಕುರಿತು ಎಚ್. ಎಸ್ ರಾಘವೇಂದ್ರರಾವ್ ಅವರ ಸಂಶೋಧನಾ ಕೃತಿ 'ಹಾಡೇ ಹಾದಿಯ ತೋರಿತು ಕೆಲವು ಅನಿಸಿಕೆಗಳು' ಎಂಬ ವಿಮರ್ಶಾ ಲೇಖನವನ್ನು ಎನ್.ಎಸ್.ಶ್ರೀಧರಮೂರ್ತಿ ಅವರು ರಚಿಸಿದ್ದಾರೆ. ಈ ಲೇಖನದಲ್ಲಿ ಬೇಂದ್ರೆ ಅವರ ಸಾಹಿತ್ಯವನ್ನು ಕಾವ್ಯದ ದೃಷ್ಟಿಯಿಂದ ಗ್ರಹಿಸಿರುವ ಕ್ರಮಗಳನ್ನು ಚರ್ಚಿಸಲಾಗಿದೆ.

೨೬. ೨೦೦೧., ಕೀರ್ತಿನಾಥ ಕುರ್ತಕೋಟಿ., ಪಂಡಿತರ ತಪ್ಪು

ಕೀರ್ತಿನಾಥ ಕುರ್ತಕೋಟಿ ಅವರು ಪ್ರಜಾವಾಣಿಯ ರವಿವಾರ ಅಂಕಣ ರೂಪದಲ್ಲಿ ಬರೆಯುತ್ತಿದ್ದ ಪ್ರಬಂಧಗಳ ಸಂಗ್ರಹದ ಮೂರನೇ ಸಂಪುಟವಾಗಿ 'ಪಂಡಿತರ ತಪ್ಪು' ಕೃತಿಯು ರಚನೆಗೊಂಡಿದೆ. ಈ ಕೃತಿಯು ಮನೋಹರ ಗ್ರಂಥಮಾಲೆಯ ೨೦೦೧-೨೦೦೨ ವರ್ಷದ ಮೂರನೇ ಗ್ರಂಥವಾಗಿ ೨೦೦೧ರಲ್ಲಿ ಪ್ರಕಟವಾಗಿದೆ. ಈ ಕೃತಿಯಲ್ಲಿ ಹದಿನೇಳು ಲೇಖನಗಳಿವೆ. ಹದಿನೈದು ಹಾಗೂ ಹದಿನಾರನೇ ಲೇಖನಗಳಾಗಿ 'ಗೆಳೆಯರ ಗುಂಪು', 'ಬೇಂದ್ರೆ ನೆನಪುಗಳು' ಈ ಎರಡು ಪ್ರಬಂಧಗಳಲ್ಲಿ ಬೇಂದ್ರೆ ಅವರನ್ನು ಕುರಿತು ಕೀರ್ತಿನಾಥ ಕುರ್ತಕೋಟಿ ಅವರ ಚಿಂತನೆಗಳಿವೆ.

೨೭. ೨೦೦೧., ಮರುಳಯ್ಯ ಸಾ. ಶಿ., ಸಾಶಿಮ : ವಿಮರ್ಶೆ., ಬೇಂದ್ರೆಯವರ ಕಾವ್ಯದಲ್ಲಿ ದೈವೋಪಾಸನೆ

ಸಾ. ಶಿ. ಮರುಳಯ್ಯ ಅವರ ವಿಮರ್ಶೆಗಳ ಸಂಕಲನವೇ 'ಸಾಶಿಮ : ವಿಮರ್ಶೆ'. ಈ ಕೃತಿಯನ್ನು ಸಪ್ನ ಬುಕ್ ಹೌಸ್, ಬೆಂಗಳೂರು ಇವರು ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ ಬೇಂದ್ರೆ ಸಾಹಿತ್ಯ ಕುರಿತು 'ಬೇಂದ್ರೆಯವರ ಕಾವ್ಯದಲ್ಲಿ ದೈವೋಪಾಸನೆ' ಎಂಬ ಲೇಖನವಿದೆ. ಈ ಲೇಖನದಲ್ಲಿ ದೈವಾವತಾರದ ಅಥವಾ ಆವಿರ್ಭಾವದ ಬಗೆಗೆ ಕಿಂಚಿತ್ ವಿವೇಚನೆ ನಡೆಯುವ ಅಗತ್ಯವೇ ಈ ಲೇಖನದ ಉದ್ದೇಶವಾಗಿದೆ. ಈ ಲೇಖನದ ಮುನ್ನುಡಿಯಲ್ಲಿ ಸಾ.ಶಿ. ಮರುಳಯ್ಯ ಅವರು 'ಶ್ರೇಷ್ಠ ವಿಮರ್ಶೆ ಶ್ರೇಷ್ಠಕಾವ್ಯದಂತೆಯೆ ಒಂದು ಸೃಜನಾತ್ಮಕ ಕಲೆ; ಕಾವ್ಯದ ಬೆಲೆ ಕಟ್ಟುವ ಕಲೆ. ಅದರಿಂದ ಅನೇಕ ಕಾವ್ಯಗಳು, ಕವಿಗಳು ಬೆಳಕು ಕಂಡಿರುವುದುಂಟು. ಗಯಟೆಯಿಂದ ಕಾಳಿದಾಸ ವಿಶ್ವ ಜಗತ್ತಿನ ಕಾವ್ಯಕ್ಷೇತ್ರಕ್ಕೆ ಪರಿಚಿತನಾದ; ಎ.ಸಿ. ಬ್ರಾಡ್ಲೆಯಿಂದ ಶೇಕ್ಸ್‌ಪಿಯರ್ ಶ್ರೇಷ್ಠ ಟ್ರಾಜಡಿ ರಚಕನೆಂಬ ಗೌರವಕ್ಕೆ ಪಾತ್ರನಾದ. ಇಂಥವೆನಿತೋ ನಿದರ್ಶಗಳಿವೆ ಕಾವ್ಯ ಲೋಕದಲ್ಲಿ. ಅಂತೆಯೇ ಕೆಟ್ಟ ವಿಮರ್ಶೆ ಕೆಟ್ಟ ಕಾವ್ಯಕ್ಕಿಂತಲೂ ಅಪಾಯಕಾರಿ ಎಂಬ ಅನುಭವವೂ ಇಲ್ಲದಿಲ್ಲ. ಆದರೆ ರಸವತ್ಕಾವ್ಯದಷ್ಟೇ ಸಹೃದಯ ವೃಂದವನ್ನು ಚೇತೋಹಾರಿಯನ್ನಾಗಿಸುತ್ತದೆ ರಾಷ್ಟ್ರಕವಿ ಕುವೆಂಪುರವರಂತಹ ರಸವಿಮರ್ಶೆಗಳು. ಅಂತಹ ಸೃಜನಾತ್ಮಕ ವಿಮರ್ಶೆಗೆ ಸದಾ ಸ್ವಾಗತ ಕೋರುತ್ತಾ, ನನ್ನವೇ ಹಲವು ಸಾಹಿತ್ಯ ವಿಮರ್ಶಾ ಲೇಖನಗಳನ್ನು ಇಲ್ಲಿ ಸಂಕಲಿಸಿದ್ದೇನೆ. ಇವು ನನ್ನ ಸೋಪಜ್ಞ ಸೃಷ್ಟಿಗಳು ಎಂದು ಬೇರೆ ಹೇಳಬೇಕಾಗಿಲ್ಲ." ಈ ವಿಚಾರಗಳು ವಿಮರ್ಶೆಯ ಒಳನೋಟಗಳನ್ನು ಸ್ಪಷ್ಟಪಡಿಸುತ್ತವೆ.

೨೮. ೨೦೦೧., ಕೆ. ಸಿ. ಶಿವಾರೆಡ್ಡಿ., ಸಂಧಿಕಾಲದ ಅನುಸಂಧಾನ

ಕೆ. ಸಿ. ಶಿವಾರೆಡ್ಡಿ ಅವರ ವಿವಿಧ ವಿಮರ್ಶೆಗಳ ಸಂಕಲನವೇ 'ಸಂಧಿಕಾಲದ ಅನುಸಂಧಾನ'. ಈ ಕೃತಿಯನ್ನು ಸಿ.ವಿ.ಜಿ ಪಬ್ಲಿಕೇಷನ್ಸ್ ಇವರು ಪ್ರಕಟಿಸಿದ್ದಾರೆ. ಈ ಕೃತಿಯನ್ನು ಚಂದ್ರಶೇಖರ ಕಂಬಾರ ಇವರಿಗೆ ಅರ್ಪಿಸಲಾಗಿದೆ. ಈ ಕೃತಿಯ ಮುಖಪುಟದಲ್ಲಿ ಬೇಂದ್ರೆ ಅವರ 'ಚಿಗರಿಗಂಗಳ ಚೆಲುವಿ'

ಕವಿತೆ ಪ್ರಕಟಿಸಲಾಗಿದೆ. ಇದೇ ಕವಿತೆಯ ವಿಮರ್ಶಾ ಲೇಖನವನ್ನು ಈ ಕೃತಿಯಲ್ಲಿ ಅಧ್ಯಯನ ಮಾಡಬಹುದು.

೨೯. **೨೦೦೧., ವೆಂಕಟೇಶಮೂರ್ತಿ ಎಚ್. ಎಸ್., ಆಕಾಶದ ಹಕ್ಕು., ಮೇಘದೂತ** : ಅಂಬಿಕಾತನಯದತ್ತ
ವೆಂಕಟೇಶಮೂರ್ತಿ ಎಚ್. ಎಸ್ ಅವರ 'ಆಕಾಶದ ಹಕ್ಕು' ಎಂಬ ಕೃತಿಯು ೨೦೦೧ರಲ್ಲಿ ಸಿ.ವಿ.ಜಿ ಪಬ್ಲಿಕೇಶನ್ ಮೂಲಕ ಪ್ರಕಟವಾಯಿತು. ಈ ಕೃತಿಯಲ್ಲಿ ಬೇಂದ್ರೆ ಅವರು ಕನ್ನಡೀಕರಿಸಿದ ಮೇಘದೂತ ಕೃತಿಯ ಕುರಿತು 'ಮೇಘದೂತ : ಅಂಬಿಕಾತನಯದತ್ತ' ಎಂಬ ವಿಮರ್ಶಾ ಲೇಖನವಿದೆ. ಕಾಳಿದಾಸನ ಮೂಲ ಮೇಘದೂತವು ಕನ್ನಡಕ್ಕೆ ಬಂದಿರುವ ಹೊಸಬಗೆಯನ್ನು, ಓದುವಾಗ ಎರಡೂ ಕೃತಿಗಳಲ್ಲಿ ಲಭ್ಯವಾಗುವ ಸಹೃದಯ ಆನಂದವನ್ನು ಅಭಿವ್ಯಕ್ತಪಡಿಸಿದ್ದಾರೆ.

೩೦. **೨೦೦೨., ಚಂದ್ರ ಶೇಖರ ನಂಗಲಿ., ತಿಟ್ಹತ್ತಿ ತಿರುಗಿ., ಬೇಂದ್ರೆ ಕಾವ್ಯದ ದ್ವಂದ್ವ ವಸ್ತು ವಿನ್ಯಾಸ ಒಂದು ಟಿಪ್ಪಣಿ**
ಚಂದ್ರ ಶೇಖರ ನಂಗಲಿ ಅವರ 'ತಿಟ್ಹತ್ತಿ ತಿರುಗಿ' ಕೃತಿಯು ೨೦೦೨ರಲ್ಲಿ ಸಿ.ವಿ.ಜಿ ಪಬ್ಲಿಕೇಷನ್ಸ್., ಬೆಂಗಳೂರು ಈ ಪ್ರಕಾಶನದ ಮೂಲಕ ಪ್ರಕಟವಾಯಿತು. ಈ ಕೃತಿಯಲ್ಲಿ ಬೇಂದ್ರೆ ಅವರ ಸಾಹಿತ್ಯ ಕುರಿತು 'ಬೇಂದ್ರೆಕಾವ್ಯದ ದ್ವಂದ್ವ ವಸ್ತು ವಿನ್ಯಾಸ– ಒಂದು ಟಿಪ್ಪಣಿ', 'ಕುರುಡು ಕಾಂಚಾಣಾ– ಒಂದು ಮರುಚಿಂತನೆ', 'ಬರಿಬೆಳಗಲ್ಲೋ ಅಣ್ಣಾ', 'ಕಾವ್ಯಮೀಮಾಂಸೆಯ ಬೆಳಕಿನಲ್ಲಿ ಬೇಂದ್ರೆಯವರ 'ತುತ್ತಿನ ಚೀಲ' ಕವಿತೆಯ ವಿಶ್ಲೇಷಣೆ', 'ನೃತ್ಯ ಯಜ್ಞ– ಕವಿತೆಯ ವಿಶ್ಲೇಷಣೆ' ಎಂಬ ಐದು ಲೇಖನಗಳ ಮೂಲಕ ವಿಸ್ತಾರವಾಗಿ ಅಧ್ಯಯನ ಮಾಡಿದ್ದಾರೆ.

೩೧. **೨೦೦೩., ಸುಮತೀಂದ್ರ ನಾಡಿಗ., ಮತ್ತೊಂದು ಸಾಹಿತ್ಯ ಚರಿತ್ರೆ., ಬೇಂದ್ರೆಯವರ ಕಾಲ್ಪನಿಕ ಸಂದರ್ಶನ., ಬೇಂದ್ರೆಯವರ 'ಹಾಡಿ'ನ ಸ್ವರೂಪ**
ಸಮತೀಂದ್ರ ನಾಡಿಗರ 'ಬೇಂದ್ರೆಯವರ ಕಾಲ್ಪನಿಕ ಸಂದರ್ಶನ', 'ಬೇಂದ್ರೆಯವರ 'ಹಾಡಿ'ನ ಸ್ವರೂಪ'., ಈ ಎರಡು ಲೇಖನಗಳು ೧೯೭೦ರಲ್ಲಿ ರಚನೆಗೊಂಡಿವೆ. ಈ ಲೇಖನಗಳು ೨೦೦೩ರಲ್ಲಿ 'ಮತ್ತೊಂದು ಸಾಹಿತ್ಯ ಚರಿತ್ರೆ' ಎಂಬ ಕೃತಿಯಲ್ಲಿ ಪ್ರಕಟವಾಗಿವೆ. ಈ ಲೇಖನಗಳು ಬೇಂದ್ರೆ ಅವರನ್ನು ಕಲ್ಪನೆಯ ಆಧಾರವಾಗಿ ಸಂದರ್ಶನಮಾಡಿದಂತೆ ರಚಿಸಿದ ಲೇಖನಗಳಾಗಿವೆ. ಕಾವ್ಯದ ಓದುವಿನಿಂದ, ಜೊತೆಗೆ ಹಿಂದಿನ ಒಡನಾಟಗಳಲ್ಲಿ ದಕ್ಕಿದ ಚಿಂತನೆಗಳನ್ನು ಇಲ್ಲಿ ಗ್ರಹಿಸಲಾಗಿದೆ.

೩೨. **೨೦೦೪., ಗೋಪಾಲಕೃಷ್ಣ ಅಡಿಗ., ಸಾಕ್ಷಿಪ್ರಜ್ಞೆ., ಬೇಂದ್ರೆಯವರ ಕಾವ್ಯ, ಉಯ್ಯಾಲೆ**
'ಸಾಕ್ಷಿಪ್ರಜ್ಞೆ' ಕೃತಿಯು ಗೋಪಾಲಕೃಷ್ಣ ಅಡಿಗರ ಗದ್ಯಬರಹಗಳ ಸಮಗ್ರಕೃತಿಯಾಗಿದೆ. ಈ ಸಂಪುಟವನ್ನು ೨೦೦೪ರಲ್ಲಿ ಸಪ್ನ ಬುಕ್ ಹೌಸ್ ಇವರು ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ 'ಬೇಂದ್ರೆಯವರ ಕಾವ್ಯ', 'ಉಯ್ಯಾಲೆ' ಈ ಎರಡು ಲೇಖನಗಳು ಬೇಂದ್ರೆ ಅವರ ಸಾಹಿತ್ಯ ಅಧ್ಯಯನ ಕುರಿತಾಗಿವೆ. 'ಬೇಂದ್ರೆ ಕಾವ್ಯ' ಎಂಬ ಲೇಖನವು ಮಹಾರಾಷ್ಟ್ರದ 'ತಾಯಿನುಡಿ' ಎಂಬ ಪತ್ರಿಕೆಯಲ್ಲಿ ೧೯೮೨ರಲ್ಲಿ 'ನಂ ನಮಸ್ಕಾರ ನಿಮಗ' ಎಂಬ ವಿಶೇಷ ಸಂಚಿಕೆಯಲ್ಲಿ ಪ್ರಕಟವಾಯಿತು. ಈ ತಾಯಿನುಡಿ ಪತ್ರಿಕೆಯು ಬಾಂಬೆಯಿಂದ ೧೯೩೬ರಲ್ಲಿ ದತ್ತಾತ್ರಯ ಕೆ ಮೆಂಡನ್ ಅವರು ಮೊದಲಿಗೆ ದಿನಪತ್ರಿಕೆಯಾಗಿ ಹೊರತಂದರು. 'ಬೇಂದ್ರೆಯವರ ಕಾವ್ಯ' ಲೇಖನದ ಪ್ರಾರಂಭದಲ್ಲಿ ವಿಮರ್ಶೆ ಕುರಿತು ಸುದೀರ್ಘವಾದ ಚರ್ಚೆ ಇದೆ. ನಂತರ ತಮ್ಮ ಸಮಕಾಲೀನ ಕವಿಯಾದ ಬೇಂದ್ರೆ ಅವರು ತಮಗೆ ಕಾವ್ಯಸ್ಫೂರ್ತಿಯಾದ ಬಗೆಯನ್ನು ಈ ಕವಿಯನ್ನು ಇಪ್ಪತ್ತನೇ ಶತಮಾನ ನೋಡಿದ ಶೈಲಿ, ವ್ಯಕ್ತಿತ್ವದ ಅಧ್ಯಯನವಿಲ್ಲಿದೆ.

ಮುಖ್ಯವಾಗಿ ಈ ಲೇಖನವು ನವೋದಯ ಸಾಹಿತ್ಯದ ಕಾರ್ಯವನ್ನು ವಿಶೇಷವಾಗಿ ಅಧ್ಯಯನ ನಡೆಸಿದೆ. ನವ್ಯಸಾಹಿತ್ಯ ಪ್ರವರ್ತಕರಾದ ಅಡಿಗರು ನವೋದಯ ಕುರಿತು ಹೊಂದಿದ್ದ ಧೋರಣೆ ಇಲ್ಲಿ ಬದಲಾಗಿರುವುದನ್ನು ಕಾಣಬಹುದು. 'ಉಯ್ಯಾಲೆ' ಕೃತಿಯು ಬಿಡುಗಡೆಯಾಗಿ ಹದಿನಾಲ್ಕು ವರ್ಷಗಳ ನಂತರ ಈ ಕೃತಿಯ ಮರುಮುದ್ರಣಕ್ಕೆ ಮುನ್ನುಡಿಯ ರಚನೆಯಿದೆ. ಇದು ಮುನ್ನುಡಿ ಎಂಬುದಕ್ಕಿಂತ ಒಂದು ವಿಶಾಲವಾದ ಅಧ್ಯಯನ, ವಿಮರ್ಶೆ ಎನ್ನಬಹುದು. ಅತ್ಯಂತ ವಿಸ್ತಾರವಾಗಿ ಕೃತಿಯ ನಾಲ್ಕು ವಿಭಾಗಗಳ ಚರ್ಚೆ ಇದೆ. ಹೊಸ ಛಂದಸ್ಸಿನ ಪ್ರಯೋಗವನ್ನು ಗುರ್ತಿಸುತ್ತಲೇ ಕೃತಿಯನ್ನು ವಿಮರ್ಶೆಗೆ ಒಳಪಡಿಸಿದ್ದಾರೆ.

೩೩. ೨೦೦೪., ದೊಡ್ಡರಂಗೇಗೌಡ., ಕನ್ನಡ ನವೋದಯ ಕಾವ್ಯ, ದೇಸಿ ಸೊಗಡನ್ನು ದಟ್ಟವಾಗಿ ದುಡಿಸಿಕೊಂಡ ದಿಟ್ಟ ಕವಿ : ದತ್ತಾತ್ರೇಯ ರಾಮಚಂದ್ರ ಬೇಂದ್ರೆ

ದೊಡ್ಡರಂಗೇಗೌಡ ಅವರ 'ಕನ್ನಡ ನವೋದಯ ಕಾವ್ಯ' ಎಂಬ ಕೃತಿಯು ೨೦೦೪ರಲ್ಲಿ ಸುಮುಖ ಪ್ರಕಾಶನ, ಬೆಂಗಳೂರು ಮೂಲಕ ಪ್ರಕಟಗೊಂಡಿದೆ. ಈ ಕೃತಿಯಲ್ಲಿ 'ದೇಸಿ ಸೊಗಡನ್ನು ದಟ್ಟವಾಗಿ ದುಡಿಸಿಕೊಂಡ ದಿಟ್ಟ ಕವಿ : ದತ್ತಾತ್ರೇಯ ರಾಮಚಂದ್ರ ಬೇಂದ್ರೆ' ಎಂಬ ಲೇಖನವು ಪುಟ ಸಂಖ್ಯೆ ೨೦೧ರಿಂದ ೨೪೩ರವರೆಗೆ ರಚನೆಗೊಂಡಿದೆ. ಈ ಲೇಖನವು ಬೇಂದ್ರೆ ಅವರ ಸಾಹಿತ್ಯ ದರ್ಶನದ ಜೊತೆಗೆ ವ್ಯಕ್ತಿತ್ವದ ಆದರ್ಶವನ್ನು ವ್ಯವಸ್ಥಿತವಾಗಿ ಅಧ್ಯಯನ ಮಾಡಿದೆ.

೩೪. ೨೦೦೪., ಲಕ್ಷ್ಮೀ ನಾರಾಯಣ ಭಟ್ಟ., ಸಾಹಿತ್ಯ ರತ್ನ ಸಂಪುಟ., ಕಾವ್ಯ ಲೋಕದ ಗಾರುಡಿಗ ದ. ರಾ. ಬೇಂದ್ರೆ

ಲಕ್ಷ್ಮೀ ನಾರಾಯಣ ಭಟ್ಟ ಅವರ 'ಸಾಹಿತ್ಯ ರತ್ನ ಸಂಪುಟ' ಎಂಬ ಕೃತಿಯಿಂದ 'ಕಾವ್ಯ ಲೋಕದ ಗಾರುಡಿಗ ದ. ರಾ. ಬೇಂದ್ರೆ' ಎಂಬ ಲೇಖನವು ವಸಂತ ಪ್ರಕಾಶನ, ಬೆಂಗಳೂರು ಪ್ರಕಾಶನದಲ್ಲಿ ಪ್ರಕಟವಾಗಿದೆ. ಈ ಲೇಖನವು ಪುಟ ಸಂಖ್ಯೆ ೬೭ರಿಂದ ೭೫ರವರೆಗೆ ಮೂಡಿಬಂದಿದೆ. ಈ ಲೇಖನವು ಬೇಂದ್ರೆ ಅವರ ಜೀವನ, ಕಾವ್ಯ ಸ್ಫೂರ್ತಿ, ಕಾವ್ಯದ ಧ್ವನಿ ಸಾಂದ್ರಿಕೆ ಶಕ್ತಿ, ಬೇಂದ್ರೆ ಕಾವ್ಯ ಶಕ್ತಿಯಲ್ಲಿ ಅವಧೂತರಾಗಿ ಪರಿಚಿತವಾದ ಬಗೆಯನ್ನು ವಿಮರ್ಶಿಸಿದ್ದಾರೆ.

೩೫. ೨೦೦೪., ಡಿ.ವಿ.ಪ್ರಹ್ಲಾದ್(ಸಂ)., ಸಂಚಯ

ಡಿ.ವಿ.ಪ್ರಹ್ಲಾದ್ ಅವರ ಸಂಪಾದಕತ್ವದಲ್ಲಿ ತ್ರೈಮಾಸಿಕ 'ಸಂಚಯ' ಪತ್ರಿಕೆ(ಸಂಪುಟ ೧೩, ಸಂಚಿಕೆ ೩, ಜುಲೈ–ಆಗಸ್ಟ್ ೨೦೦೪) ಮೂಡಿಬಂದಿದೆ. ಈ ಪತ್ರಿಕೆಯಲ್ಲಿ ಬೇಂದ್ರೆ ಸಾಹಿತ್ಯ ಕುರಿತು ಹಿನ್ನಲೆಯಾಗಿ ಚರ್ಚಿಸಲಾಗಿದೆ. ಜಿ.ಬಿ. ಹರೀಶ ಅವರು 'ಶಂಕರಮೊಕಾಶಿ ಪುಣೇಕರರ ಸಾಂಸ್ಕೃತಿಕ ಮಹತ್ವ' ಎಂಬ ಲೇಖನ ರಚಿಸಿದ್ದಾರೆ. ಈ ಲೇಖನದಲ್ಲಿ ಬೇಂದ್ರೆ ಸಾಹಿತ್ಯವು ಮೊಕಾಶಿ ಅವರಲ್ಲಿ ಪ್ರಭಾವಿಸಿದ ಬಗೆಯನ್ನು, ವಿಶ್ಲೇಷಣೆಯನ್ನು ಚರ್ಚಿಸಿದ್ದಾರೆ.

೩೬. ೨೦೦೫., ಬಾಕಿನ., ಗಾಂಧಿಬಜಾರ್., ಕೆ.ಸಿ. ಶಿವಾರೆಡ್ಡಿ, ಗರಿಯ ಮರು ಓದು

ಬಾಕಿನ ಅವರ ಸಂಪಾದಕತ್ವದಲ್ಲಿ ಬಂದಿರುವ ಗಾಂಧಿಬಾಜಾರ್ ಸಾಹಿತ್ಯದ ಮಾಸಿಕ ಪತ್ರಿಕೆಯಲ್ಲಿ (ಸಂಪುಟ ೧೯, ಸಂಚಿಕೆ ೨., ಫೆಬ್ರವರಿ ೨೦೦೫) ಈ ಕೆ.ಸಿ. ಶಿವಾರೆಡ್ಡಿ ಅವರು ಬೇಂದ್ರೆ ಸಾಹಿತ್ಯ ಕುರಿತು ಅಧ್ಯಯನ ಮಾಡಿ ರಚಿಸಿದ 'ಗರಿಯ ಮರು ಓದು' ಲೇಖನ ಪ್ರಕಟವಾಗಿದೆ. ಈ ಲೇಖನವು 'ವಸಾಹತೀಕರಣ, ಜಾಗತೀಕರಣ, ಅಭಿವೃದ್ಧಿಯ ಪರಿಕಲ್ಪನೆ, ಸಮಕಾಲೀನ ಪ್ರಶ್ನೆಗಳು ಹಾಗೂ ಬೇಂದ್ರೆಯವರ ಗರಿಯ ಮರು ಓದು' ತನ್ನ ಶೀರ್ಷಿಕೆಯಲ್ಲಿಯೇ ತನ್ನ ಅಧ್ಯಯನದ ವ್ಯಾಪ್ತಿ ಹಾಗೂ ಚಿಂತನೆಯನ್ನು ಸ್ಪಷ್ಟಪಡಿಸಿದೆ.

೩೭. **೨೦೦೫., ಉಪಾಧ್ಯ ಜಿ. ಎನ್., ವಿಚಾರದ ಬೆಳಕು., ಕಾವ್ಯ ಮೀಮಾಂಸೆ–ವಿಮರ್ಶೆ–ಬೇಂದ್ರೆ ಒಲವು–ನಿಲುವು**

ಉಪಾಧ್ಯ ಜಿ. ಎನ್ ಅವರ 'ವಿಚಾರದ ಬೆಳಕು' ಎಂಬ ಕೃತಿಯು ಸಾಹಿತ್ಯದ ವಿವಿಧ ವಿಚಾರಗಳ ಕುರಿತು ಲೇಖನಗಳ ಸಂಗ್ರಹ. ಈ ಕೃತಿಯನ್ನು ಅಭಿಜಿತ್ ಪ್ರಕಾಶನ, ಮುಂಬಯಿ ಇವರು ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ ಬೇಂದ್ರೆ ಅವರ ಕಾವ್ಯ ಮೀಮಾಂಸೆ ಕುರಿತು 'ಕಾವ್ಯಮೀಮಾಂಸೆ–ವಿಮರ್ಶೆ–ಬೇಂದ್ರೆ ಒಲವು–ನಿಲುವು' ಎಂಬ ಲೇಖನವಿದೆ. ಈ ಲೇಖನದಲ್ಲಿ 'ಬೇಂದ್ರೆ ಅವರ ಕಾವ್ಯ ಮೀಮಾಂಸೆ', 'ಕವಿ–ಸೃಷ್ಟಿ ದರ್ಶನ ರಸಭಾವ ವಿಚಾರ', 'ಕನ್ನಡ ವಿಮರ್ಶೆಗೆ ಬೇಂದ್ರೆ ಅವರ ಕೊಡುಗೆ' ಈ ಕುರಿತು ಚಿಂತನೆಗಳಿವೆ. ಈ ಲೇಖನವು ಪುಟ ಸಂಖ್ಯೆ ೫೭ರಿಂದ ೭೫ರ ತನಕ ಮೂಡಿಬಂದಿದೆ.

೩೮. **೨೦೦೫., ರಹಮತ್ ತರೀಕೆರೆ., ಇಲ್ಲಿ ಯಾರೂ ಮುಖ್ಯರಲ್ಲ., ಬೇಂದ್ರೆ : ಲೀಲಾ ಪ್ರಜ್ಞೆ ಹಾಗೂ ಕಾವ್ಯತತ್ವ**

ರಹಮತ್ ತರೀಕೆರೆ ಅವರ 'ಇಲ್ಲಿ ಯಾರೂ ಮುಖ್ಯರಲ್ಲ' ಎಂಬ ಕೃತಿಯು ೨೦೦೫ರಲ್ಲಿ ಕನ್ನಡ ವಿಶ್ವವಿದ್ಯಾಲಯ ಮೂಲಕ ಪ್ರಕಟಗೊಂಡಿದೆ. ಈ ಕೃತಿಯಲ್ಲಿ ಬೇಂದ್ರೆ ಸಾಹಿತ್ಯ ಕುರಿತು 'ಬೇಂದ್ರೆ : ಲೀಲಾ ಪ್ರಜ್ಞೆ ಹಾಗೂ ಕಾವ್ಯತತ್ವ' ಕುರಿತು ಲೇಖನವಿದೆ. ಈ ಲೇಖನವು ಕೃತಿಯ ಪುಟ ಸಂಖ್ಯೆ ೧೯೪ರಿಂದ ೧೯೭ರವರೆಗೆ ಇದೆ. ಈ ಲೇಖನವು ಬೇಂದ್ರೆ ಕಾವ್ಯದಲ್ಲಿ ಇರುವ ಲೀಲೆಯ ಕವಿತೆಗಳು, ಕಾವ್ಯತತ್ತ್ವದ ಕವಿತೆಗಳ ಚರ್ಚೆ ನಡೆಸಿದ್ದಾರೆ.

೩೯. **೨೦೦೫., ವಿದ್ಯಾಧರ ಮುತಾಲಿಕ ದೇಸಾಯಿ., ಕನ್ನಡ ಸಪ್ತ ಶೃಂಗಗಳು., ಬೇಂದ್ರೆ ಅಂದ್ರೆ**

'ಬೇಂದ್ರೆ ಅಂದ್ರೆ' ಎಂಬ ಲೇಖನವು 'ಕನ್ನಡ ಸಪ್ತ ಶೃಂಗಗಳು' ಎಂಬ ಕೃತಿಯಲ್ಲಿ ಪುಟಸಂಖ್ಯೆ ೧೭ರಿಂದ ೪೯ರಲ್ಲಿ ಪ್ರಕಟವಾಗಿದೆ. ಈ ಕೃತಿಯನ್ನು ವಿದ್ಯಾಧರ ಮುತಾಲಿಕ ದೇಸಾಯಿ ಅವರು ೨೦೦೫ರಲ್ಲಿ ಮುಂಬೆಳಕು ಕನ್ನಡ ಬಳಗ, ಥಾಣ ಜಿಲ್ಲೆ ಈ ಪ್ರಕಾಶನದ ಮೂಲಕ ಪ್ರಕಟಿಸಿದ್ದಾರೆ. ಬೇಂದ್ರೆ ಅವರು ಮಹತ್ವದ ಕವಿಯಾಗಲು ದರ್ಶನವಾಗುವ ಅವರ ಸಾಹಿತ್ಯದ ಕೆಲವು ಸೂಕ್ಷ್ಮ ಕುತೂಹಲ ಕವನಗಳ ವಿಮರ್ಶೆಯ ಮೂಲಕ ಅಧ್ಯಯನಮಾಡಿದ್ದಾರೆ. ನಾಕುತಂತಿ, ಗರಿ, ಸಖೀಗೀತ ಈ ಸಂಕಲನಗಳಲ್ಲಿ ಅಡಗಿರುವ ತತ್ತ್ವ, ಜಾನಪದ ಶೈಲಿ, ದರ್ಶನ ಈ ಮೊದಲಾದ ವಿಚಾರಗಳ ಅಧ್ಯಯನವಿದೆ.

೪೦. **೨೦೦೫., ಸುಮತೀಂದ್ರ ನಾಡಿಗ., ನಾಲ್ಕನೆಯ ಸಾಹಿತ್ಯ ಚರಿತ್ರೆ., ಬೇಂದ್ರೆ ಕುರಿತು ಕಥೆಗಳು**

'ನಾಲ್ಕನೆಯ ಸಾಹಿತ್ಯ ಚರಿತ್ರೆ' ಎಂಬ ಕೃತಿಯು ೨೦೦೫ರಲ್ಲಿ ಸುಮತೀಂದ್ರ ನಾಡಿಗರು ಸಪ್ನ ಬುಕ್ ಹೌಸ್ ಮೂಲಕ ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ 'ಬೇಂದ್ರೆ ಕುರಿತ ಕತೆಗಳು' ಎಂಬ ಲೇಖನವಿದೆ. ಈ ಲೇಖನವು ಬೇಂದ್ರೆ ಅವರ ಕುರಿತು ಇರುವ ಕಥೆಗಳನ್ನು ಇಲ್ಲಿ ನೀಡಿದ್ದಾರೆ. ಈ ಲೇಖನವು ಪುಟ ಸಂಖ್ಯೆ ೨೭ರಿಂದ ೩೬ರವರೆಗೆ ಕಂಡುಬರುತ್ತದೆ.

೪೧. **೨೦೦೫., ವಿಜಯಾ ಸುಬ್ಬರಾಜ್., ಸಮಾಲೋಚನೆ., ಬೇಂದ್ರೆಯವರ 'ಸಾಯೋ ಆಟ' ಒಂದು ಅನಿಸಿಕೆ**

ವಿಜಯಾ ಸುಬ್ಬರಾಜ್ ಅವರ 'ಸಮಾಲೋಚನೆ' ಕೃತಿಯು ೨೦೦೫ರಲ್ಲಿ ಶಕ್ತಿ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಬೆಂಗಳೂರು ಇವರ ಮೂಲಕ ಪ್ರಕಟಗೊಂಡಿದೆ. ಈ ಕೃತಿಯಲ್ಲಿ ಬೇಂದ್ರೆ ಅವರ ಸಾಹಿತ್ಯ ಕುರಿತು 'ಬೇಂದ್ರೆಯವರ 'ಸಾಯೋ ಆಟ' ಒಂದು ಅನಿಸಿಕೆ' ಎಂಬ ಲೇಖನವು 'ಸಾಯೋ ಆಟ' ನಾಟಕ ಅಧ್ಯಯನವಾಗಿ ಮೂಡಿಬಂದಿದೆ.

೪೨. ೨೦೦೫., ವಿನೀತಾ ಕುಲಕರ್ಣಿ., ನನ್ನ ದಾಂಪತ್ಯ ವಲಯ., ಕವಿ ಬೇಂದ್ರೆಯವರ ಮೇಲೆ ಶ್ರೀ ಅರವಿಂದರ ಪ್ರಭಾವ : ನವ್ಯ ಆಧ್ಯಾತ್ಮಿಕತೆಯ ಸ್ರೋತ ಗಂಗೋತ್ರಿ

ವಿನೀತಾ ಕುಲಕರ್ಣಿ ಅವರು ತಮ್ಮ 'ದಾಂಪತ್ಯ ವಲಯ' ಕೃತಿಯನ್ನು ೨೦೦೫ರಲ್ಲಿ ಶ್ರೀ ಅರವಿಂದ ಶತಾಬ್ಧಿ ಗ್ರಂಥಮಾಲೆ, ಪಾಂಡಿಚೆರಿ ಇವರು ಪ್ರಕಟಿಸಿದರು. ಈ ಕೃತಿಯಲ್ಲಿ ಅನುಬಂಧ-೨ರ ಒಂದು ಭಾಗವಾಗಿ ಎಸ್. ಎಸ್. ಕುಲಕರಣಿ ಅವರ 'ಕವಿ ಬೇಂದ್ರೆಯವರ ಮೇಲೆ ಶ್ರೀ ಅರವಿಂದರ ಪ್ರಭಾವ : ನವ್ಯ ಆಧ್ಯಾತ್ಮಿಕತೆಯ ಸ್ರೋತ ಗಂಗೋತ್ರಿ' ಎಂಬ ಲೇಖನ ಪ್ರಕಟಿಸಿದ್ದಾರೆ. ಅರವಿಂದರ ಆಧ್ಯಾತ್ಮಿಕ ಜೀವನ, ಸಾಹಿತ್ಯ ಪ್ರಭಾವವು ಯಾವ ಯಾವ ಮಾದರಿಯಲ್ಲಿ ಪ್ರಭಾವಿಸಿದೆ ಎಂಬ ವಿಚಾರವನ್ನು ಹಲವು ಕವಿತೆಗಳ ಮೂಲಕ ಅಧ್ಯಯನಮಾಡಿದ್ದಾರೆ.

೪೩. ೨೦೦೬., ಭಗವಾನ್ ಕೆ.ಎನ್., ಕನ್ನಡದ ಜ್ಞಾನ ಕಲಶಗಳು., 'ವರಕವಿ' – ಬೇಂದ್ರೆ

'ಕನ್ನಡದ ಜ್ಞಾನ ಕಲಸಗಳು' ಎಂಬ ಕೃತಿಯು ಕೆ. ಎನ್ ಭಗವಾನ್ ಅವರು ರಚಿಸಿದ್ದಾರೆ. ಈ ಕೃತಿಯನ್ನು ಸುಮುಖ ಪ್ರಕಾಶನ, ಬೆಂಗಳೂರು ಇವರು ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ ಬೇಂದ್ರೆ ಅವರ ಸಾಹಿತ್ಯ ಕುರಿತ ರೂಪಕ ರಚನೆಯಾಗಿ 'ವರಕವಿ' –ಬೇಂದ್ರೆ ಎಂಬ ಬರಹ ಮೂಡಿಬಂದಿದೆ. ಬೇಂದ್ರೆ ಅವರ ಕವಿತೆಗಳನ್ನು ಬಾನುಲಿ ರೂಪಕದಂತೆ ರಚಿಸಿದ್ದಾರೆ. ಇದು ಕಾವ್ಯದ ಪರಿಚಯಾತ್ಮಕ ಬರಹವಾಗಿ ಮೂಡಿಬಂದಿದೆ.

೪೪. ಚನ್ನಪ್ಪ., ೨೦೦೭., ಪುಣೇಕರರ ಆಯ್ದ ಲೇಖನಗಳು., ಬೇಂದ್ರೆಯವರ ಕಾವ್ಯಾಭ್ಯಾಸ

ಚನ್ನಪ್ಪ ಅವರು ೨೦೦೭ರಲ್ಲಿ ಸಂಪಾದಿಸಿದ ಕೃತಿ 'ಪುಣೇಕರರ ಆಯ್ದ ಲೇಖನಗಳು'. ಈ ಕೃತಿಯಲ್ಲಿ 'ಬೇಂದ್ರೆಯವರ ಕಾವ್ಯಾಭ್ಯಾಸ' ಎಂಬ ಪುಣೇಕರರ ಲೇಖನವನ್ನು ಅಧ್ಯಯನ ಮಾಡಬಹುದು. ಈ ಕೃತಿಯನ್ನು ಸಾಹಿತ್ಯ ನಿಧಿ, ಮೈಸೂರು ಇವರು ಪ್ರಕಟಿಸಿದ್ದಾರೆ. ಬೇಂದ್ರೆ ಅವರ ಕಾವ್ಯವು ರಚನೆಗೊಳ್ಳುತ್ತಲೇ ಸಹೃದಯರಲ್ಲಿ ಅಧ್ಯಯನಕ್ಕೆ ಒಳಪಡುತ್ತಾ ತನ್ನ ಶಕ್ತಿಯ ವಿಸ್ತಾರದ ಹರವನ್ನು ವಿಸ್ತರಿಸಿಕೊಂಡ ಬಗೆಯನ್ನು ಇಲ್ಲಿ ಅಧ್ಯಯನಮಾಡಲಾಗಿದೆ. ಈ ಲೇಖನವನ್ನು 'ಒಂದಿಲ್ಲೊಂದು ದಿನ ಇಡೀ ಕರ್ನಾಟಕವೇ ಈ ಬಗೆಯ ಅಭ್ಯಾಸದಲ್ಲಿ ತೊಡಗಬೇಕಾದೀತೆಂಬ ಬಲವಾದ ವಿಶ್ವಾಸದಿಂದ ಅದೇ ವಿಶ್ವಾಸವುಳ್ಳ ಇತರರಿಗಾಗಿ ಈ ಲೇಖನವನ್ನು ಬರೆಯಲಾಗಿದೆ' ಎಂಬ ಪ್ರವೇಶಿಕೆ ನೀಡಿದ್ದಾರೆ.

೪೫. ೨೦೦೭., ರಾಮಚಂದ್ರ ಎಂ., ಸಮುಚ್ಚಯ., ಬೇಂದ್ರೆ ಕಾವ್ಯದಲ್ಲಿ ಹಾಸ್ಯ

ರಾಮಚಂದ್ರ ಎಂ ಅವರ 'ಸಮುಚ್ಚಯ' ಎಂಬ ಕೃತಿಯು ಕನ್ನಡ ವಿಶ್ವವಿದ್ಯಾಲಯದಿಂದ ೨೦೦೭ರಲ್ಲಿ ಪ್ರಕಟಗೊಂಡಿದೆ. ಈ ಕೃತಿಯಲ್ಲಿ 'ಬೇಂದ್ರೆ ಕಾವ್ಯದಲ್ಲಿ ಹಾಸ್ಯ' ಎಂಬ ಲೇಖನದ ಮೂಲಕ ಬೇಂದ್ರೆ ಅವರು ಕವಿತೆಗಳಲ್ಲಿ ಮೂಡಿಸಿರುವ ಹಾಸ್ಯದ ಚೈತನ್ಯವನ್ನು ಕುರಿತು ವಿಮರ್ಶಿಸಿದ್ದಾರೆ.

೪೬. ೨೦೦೭., ಲಿಂಗಣ್ಣ ಗೋನಾಲ., ಸಮಕ್ಷ., ಪುಟ್ಟ ವಿಧವೆ : ಧರ್ಮದ ಕುರುಡುತನದಲ್ಲಿ ಕಮರಿದ ಕಂದಮ್ಮನ ಬಾಳು

ಲಿಂಗಣ್ಣ ಗೋನಾಲ ಅವರ ವಿಮರ್ಶಾ ಕೃತಿ 'ಸಮಕ್ಷ' ಎಂಬುದು ೨೦೦೭ರಲ್ಲಿ 'ಶರಣು ಪ್ರಕಾಶನ'ದ ಮೂಲಕ ಪ್ರಕಟವಾಗಿದೆ. ಈ ಕೃತಿಯಲ್ಲಿ ಬೇಂದ್ರೆ ಅವರ ಸಾಹಿತ್ಯ ಕುರಿತು 'ಪುಟ್ಟ ವಿಧವೆ : ಧರ್ಮದ ಕುರುಡುತನದಲ್ಲಿ ಕಮರಿದ ಕಂದಮ್ಮಗಳ ಬಾಳು' ಎಂಬ ಲೇಖನವಿದೆ. ಈ ಲೇಖನವು ನಾಲ್ಕು ಪುಟದಲ್ಲಿ ಸ್ಫುಟಗೊಂಡಿದ್ದರೂ ಬೇಂದ್ರೆ ಅವರ 'ಪುಟ್ಟ ವಿಧವೆ' ಕವಿತೆಯನ್ನು ವ್ಯವಸ್ಥಿತವಾಗಿ

ಅರ್ಥೈಸಿದೆ. ಈ ಕವಿತೆಯನ್ನು ವಿಮರ್ಶಿಸುತ್ತಾ ಸಾಧ್ಯತೆಗಳನ್ನು ಕುರಿತು ಈ ರೀತಿಯಲ್ಲಿ ಚರ್ಚಿಸಿದ್ದಾರೆ. 'ಕವನದಲ್ಲಿ ವಿಧವೆಯ ಕಷ್ಟದ ಬದುಕಿನ ವಿವರಗಳಿವೆ. ಅದಕ್ಕೆ ಕಳಕಳಿಯ ಅಂತಕರಣವಿದೆ. ಆದರೆ, ಅದು ಕೇವಲ ಕರಣದ ಕಳಕಳಿಯೇ ಹೊರೆತು ಕರುಳಿನ ಕಳಕಳಿಯಾಗಿ ಹೊರಹೊಮ್ಮಿಲ್ಲ. ವಿಧವೆಯನ್ನು ಧರ್ಮ, ಸಂಪ್ರದಾಯ, ಶಾಸ್ತ್ರ, ಆಚಾರಗಳಿಂದ ಹೊರತರುವ ಪ್ರಯತ್ನವಿಲ್ಲ. ಏನಿದ್ದರೂ ಅವುಗಳ ಚೌಕಟ್ಟಿನಲ್ಲಿ ಅವಳಿಗೆ ಒದಗಿದ ಸ್ಥಿತಿಯ ಚಿತ್ರಣ ಮಾತ್ರವಿದೆ. ಧರ್ಮದ ಹೆಸರಿನಲ್ಲಿ ಕಮುರಿದ ಕಂದಮ್ಮನ ಬಾಳಿನ ಬದುಕು 'ಪುಟ್ಟ ವಿಧವೆ'. ಎಂಬ ಈ ವಿಮರ್ಶೆಯು ವಿವಿಧ ವಿಮರ್ಶೆಗಳ ತೌಲನಿಕ ಅಧ್ಯಯನಕ್ಕೆ ದಾರಿಮಾಡಿಕೊಟ್ಟಿದೆ.

೪೭. ೨೦೦೭., ಪ್ರೀತಿ ಶುಭಚಂದ್ರ., ಕನ್ನಡಿ ಕೈದೀವಿಗೆ., ಶ್ರೀ ದ. ರಾ ಬೇಂದ್ರೆ

ಪ್ರೀತಿ ಶುಭಚಂದ್ರ ಅವರ 'ಕನ್ನಡಿ ಕೈದೀವಿಗೆ' ಎಂಬ ಕೃತಿಯು ೨೦೦೭ರಲ್ಲಿ ವಿವೇಕ ಪ್ರಕಾಶನ, ಮೈಸೂರು ಮೂಲಕ ಪ್ರಕಟವಾಗಿದೆ. 'ಶ್ರೀ ದ. ರಾ ಬೇಂದ್ರೆ', 'ಎ. ಆರ್. ಕೃ., ಬೇಂದ್ರೆ, ಕುವೆಂಪುರವರ ವಿಮರ್ಶಾ ಸ್ವರೂಪ ಮತ್ತು ಕನ್ನಡ ನವೋದಯ ವಿಮರ್ಶೆಗೆ ಈ ಮೂವರ ಕಾಣಿಕೆ' ಈ ಲೇಖನಗಳು ಪುಟ ಸಂಖ್ಯೆ ೫೧ರಿಂದ ೧೫೫ರವರೆಗೆ ಕಂಡುಬರುತ್ತದೆ.

೪೮. ೨೦೦೭., ನಾಯಕ್ ಜಿ ಎಚ್., ಸ್ಥಿತಿ ಪ್ರಜ್ಞೆ., ಬೇಂದ್ರೆಯವರ ಕವನ: ನಾದಲೀಲೆ

'ಬೇಂದ್ರೆಯವರ ಕವನ : 'ನಾದಲೀಲೆ' ' ಈ ಲೇಖನವು ಮಂಡ್ಯದ ಸರ್ಕಾರಿ ಮಹಿಳಾ ಕಾಲೇಜಿನಲ್ಲಿ ಫೆಬ್ರವರಿ ೨೩, ೨೦೦೧ರಲ್ಲಿ 'ಬೇಂದ್ರೆ ಕಾವ್ಯ : ನಾದ, ಅರ್ಥ, ಅರಿವು' ಎಂಬ ಭಾಷಣದ ಒಂದು ಭಾಗದ ಲಿಖಿತ ರೂಪವಿದು. ಈ ಲೇಖನವು ೨೦೦೭ರಲ್ಲಿ ಪ್ರಕಟವಾದ 'ಸ್ಥಿತಿಪ್ರಜ್ಞೆ' ಎಂಬ ಕೃತಿಯಲ್ಲಿ ಪ್ರಕಟವಾಗಿದೆ. ನಾದಲೀಲೆ ಸಂಕಲನದ ವಿಶಿಷ್ಟತೆಯನ್ನು ಈ ಲೇಖನದಲ್ಲಿ ಚರ್ಚಿಸಲಾಗಿದೆ.

೪೯. ೨೦೦೮., ಬಾಕಿನ., ಗಾಂಧಿಬಜಾರ್

ಬಾಕಿನ ಅವರ ಸಂಪಾದಕತ್ವದಲ್ಲಿ ಬಂದಿರುವ 'ಗಾಂಧಿ ಬಜಾರ್' ಪತ್ರಿಕೆಯ ಏಪ್ರಿಲ್ ೨೦೦೮ರ ಸಂಪುಟ ೨೨ರ, ಸಂಚಿಕೆ ೪ರಲ್ಲಿ ಬೇಂದ್ರೆ ಸಾಹಿತ್ಯ ಕುರಿತು ಲೇಖನವಿದೆ. ಜಯದೇವಪ್ಪ ಜೈನಕೇರಿ ಅವರು 'ಒಂದು ಚಿಂತನೆ ಪಾತರಗಿತ್ತಿ ಪಕ್ಕ ನೋಡಿದೇನೆ ಅಕ್ಕ!' ಎಂಬ ಲೇಖನ ರಚಿಸಿದ್ದಾರೆ. ಈ ಲೇಖನವು ಕವಿಗೋಷ್ಟಿಯ ನಿಜವಾದ ಕಾರ್ಯ, ಬದ್ಧತೆಗಳನ್ನು ಚರ್ಚಿಸುತ್ತದೆ.

೫೦. ೨೦೦೮., ಮೊಗಳ್ಳಿ ಗಣೇಶ್., ತಕರಾರು., ಬೇಂದ್ರೆ ಕುವೆಂಪು ಕಾವ್ಯದ ನೆಲೆಗಳು

ಮೊಗಳ್ಳಿ ಗಣೇಶ ಅವರ 'ತಕರಾರು' ಕೃತಿಯು ೨೦೦೮ರಲ್ಲಿ ಪಲ್ಲವ ಪ್ರಕಾಶನ, ಚೆನ್ನಪಟ್ಟಣ ಇವರ ಮೂಲಕ ಪ್ರಕಟವಾಗಿದೆ. ಈ ಕೃತಿಯಲ್ಲಿ 'ಬೇಂದ್ರೆ ಕುವೆಂಪು ಕಾವ್ಯದ ನೆಲೆಗಳು' ಎಂಬ ಲೇಖನವು ಪುಟ ಸಂಖ್ಯೆ ೦೮ರಿಂದ ೧೭ರವರೆಗೆ ಕಂಡುಬರುತ್ತದೆ. ಬೇಂದ್ರೆ, ಕುವೆಂಪು ಅವರ ಕಾವ್ಯದ ನೆಲೆಗಳನ್ನು ಕಾವ್ಯದ ಮೂಲಪ್ರೇರಣೆಗಳ ಅಧ್ಯಯನದೊಂದಿಗೆ ಗಮನಿಸಿದ್ದಾರೆ.

೫೧. ೨೦೦೯., ಮೊಗಸಾಲೆ ನಾ.(ಸಂ)., ಮಾಧವ ಕುಲಕರ್ಣಿ(ಲೇ)., ನುಡಿಹಾರ–೧., ದ. ರಾ. ಬೇಂದ್ರೆಯವರ ನಾಟಕಗಳು

ಮಾಧವ ಕುಲಕರ್ಣಿ ಅವರ 'ದ. ರಾ. ಬೇಂದ್ರೆಯವರ ನಾಟಕಗಳು' ಲೇಖನವು ನಾ. ಮೊಗಸಾಲೆ ಅವರು ಸಂಪಾದಿಸಿರುವ 'ನುಡಿಹಾರ–೧' ಕೃತಿಯಲ್ಲಿ ಪುಟ ಸಂಖ್ಯೆ ೧೧೨ರಿಂದ ೧೨೧ರವರೆಗೂ ಮೂಡಿಬಂದಿದೆ. ಈ ಕೃತಿಯನ್ನು ಕಾಂತಾವರ ಕನ್ನಡ ಸಂಘ., ಕಾರ್ಕಳ ಇವರು ಪ್ರಕಟಿಸಿದ್ದಾರೆ. 'ದ. ರಾ. ಬೇಂದ್ರೆಯವರ ನಾಟಕಗಳು' ಎಂಬ ಲೇಖನದಲ್ಲಿ ಹದಿನಾಲ್ಕು ನಾಟಕಗಳ ಪೂರ್ಣಾವಲೋಕನ ವಿಮರ್ಶೆ ನೀಡಿದ್ದಾರೆ.

೫೨. ೨೦೦೯., ಗಣೇಶ್ ಆರ್., ಹಾಸು ಬೀಸು., ಬೇಂದ್ರೆ : ಅಧ್ಯಾರೋಪ ಮತ್ತು ಅಪವಾದ

ಶತಾವಧಾನಿ ಆರ್. ಗಣೇಶ್ ಎಂದೇ ಪರಿಚಿತರಾದ ಇವರ 'ಹಾಸು ಬೀಸು' ಕೃತಿಯು ವಸಂತ ಪ್ರಕಾಶನ, ಬೆಂಗಳೂರು ಇವರ ಮೂಲಕ ಪ್ರಕಟವಾಗಿದೆ. ಈ ಕೃತಿಯು ಕನ್ನಡ ಸಾಹಿತ್ಯದ ಕಲೆ, ಸಾಹಿತ್ಯ, ಸಂಸ್ಕೃತಿ ಕುರಿತು ವಿವೇಚನೆಗಳನ್ನು ಒಳಗೊಂಡಿದೆ. ಈ ಕೃತಿಯಲ್ಲಿ ಬೇಂದ್ರೆ ಅವರ ಸಾಹಿತ್ಯ ಕುರಿತು ವಿವೇಚಿಸುವ 'ಬೇಂದ್ರೆ : ಅಧ್ಯಾರೋಪ ಮತ್ತು ಅಪವಾದ' ಲೇಖನವಿದೆ. ಈ ಲೇಖನವು ಪುಟ ಸಂಖ್ಯೆ ೬೭ರಿಂದ ೭೨ರ ತನಕ ರಚನೆಗೊಂಡಿದೆ. ಈ ಲೇಖನವು ಪ್ರಮುಖವಾಗಿ 'ಸಾಮಾನ್ಯವಾಗಿ ಬೇಂದ್ರೆ ಎಂದೊಡನೆಯೇ ಜಾನಪದ, ಅನುಭಾವ, ನಾದಶೀಲತೆ, ಗಾರುಡಿ ಮುಂತಾದ ಮಾತುಗಳು ತಾವೇ ತಾವಾಗಿ ನುಗ್ಗಿ ಬಿಡುತ್ತವೆ. ಆದರೆ ಇವಿಷ್ಟೇ ಬೇಂದ್ರೆ ಕಾವ್ಯದ ಲಕ್ಷಣವಾದರೆ ಅದರ ರಸ ನಿಷ್ಠತೆಗಾಗಲಿ, ಧ್ವನಿದೀಪ್ತಿಗಾಗಲಿ, ಪೂರ್ಣವಾದ ನ್ಯಾಯ ಒದಗಲಾರದು. ಅಷ್ಟೇ ಅಲ್ಲ. ಇವೇ ಗುಣಗಳು ಅವರ ಕಾವ್ಯದ ಕಾವ್ಯತ್ವವನ್ನೂ ಕೆಲವೊಮ್ಮೆ ಕುಗ್ಗಿಸಬಹುದು." ಈ ಅವಲೋಕನೆಯೊಂದಿಗೆ ಬೇಂದ್ರೆ ಕವಿತೆಗಳ ವಿಮರ್ಶೆಯೊಂದಿಗೆ ವ್ಯಕ್ತಿತ್ವ ನಿರೂಪಿಸಿದ್ದಾರೆ.

೫೩. ೨೦೦೯., ಬಸವರಾಜ ಸಾದರ., ಅನುಮಿತಿ., ಬೇಂದ್ರೆಯವರ ಅದಕು ಇದಕು ಎದಕು

ಬಸವರಾಜ ಸಾದರ ಅವರ 'ಅನುಮಿತಿ' ಕೃತಿಯನ್ನು ೨೦೦೯ರಲ್ಲಿ ಕಿರಣ್ ಬುಕ್ ಡಿಸ್ಟ್ರಿಬ್ಯುಟರ್ಸ್., ಬೆಂಗಳೂರು ಇವರು ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿಪುಟ ಸಂಖ್ಯೆ ೧ರಿಂದ ೬ರವರೆಗೆ 'ಬೇಂದ್ರೆಯವರ ಅದಕು ಇದಕು ಎದಕು' ಎಂಬ ಲೇಖನವಿದೆ. ಈ ಲೇಖನ ಧಾರವಾಡದ ಸ್ಥಳೀಯ ಭಾಷೆಯೊಂದಿಗೆ ಪರಿಸರದ ಮಾತುಗಳಲ್ಲಿ ಅಭಿವ್ಯಕ್ತಪಡಿಸಿದ್ದಾರೆ. 'ನಾನು ಬಡವಿ' ಕವಿತೆಯ ಮೂಲಕ ಬದುಕನ್ನು ವಿಶ್ಲೇಷಣೆ ಮಾಡುವ ಈ ಲೇಖನವು ಗಂಡು ಹೆಣ್ಣಿನ ನಡುವೆ ಇರುವ ಬದುಕಿನ ಒಲವಿನ ಮೂಲಕ ವಿಮರ್ಶಿಸುತ್ತದೆ.

೫೪. ೨೦೦೯., ಡಿ.ವಿ.ಪ್ರಹ್ಲಾದ್(ಸಂ)., ಸಂಚಯ

ಡಿ.ವಿ.ಪ್ರಹ್ಲಾದ್ ಅವರ ಸಂಪಾದಕತ್ವದಲ್ಲಿ ದ್ವೈಮಾಸಿಕ 'ಸಂಚಯ' ಪತ್ರಿಕೆ(ಸಂಪುಟ ೧೮, ಸಂಚಿಕೆ ೫, ಸೆಪ್ಟಂಬರ್-ಅಕ್ಟೋಬರ್ ೨೦೦೯) ಮೂಡಿಬಂದಿದೆ. ಈ ಪತ್ರಿಕೆಯಲ್ಲಿ ಬೇಂದ್ರೆ ಸಾಹಿತ್ಯ ಕುರಿತು ಡಿ.ಆರ್ ಚಂದ್ರಮಾಗಡಿ ಅವರ 'ಹುಬ್ಬಳ್ಳಿಯಾಂವನ ಬೆನ್ನ ಹಿಡಿದು...' ಲೇಖನ ಪ್ರಕಟವಾಗಿದೆ. ಈ ಲೇಖನದಲ್ಲಿ ಬೇಂದ್ರೆ ಅವರ ಕವಿತೆಗಳು ಕೇಳುಗರಲ್ಲಿ ಉಂಟುಮಾಡುವ ರಸಾನಂದವನ್ನು ಕುರಿತು ತಿಳಿಸಿದ್ದಾರೆ.

೫೫. ೨೦೧೦., ನಾರಾಯಣಸ್ವಾಮಿ ಕೆ. ವೈ., ನೆನೆವ ಪರಿ., ತುಂಬಿತ್ತು ಹಾಲಗೇರಿ: ಕೆಲವು ಅನಿಸಿಕೆಗಳು., 'ಶ್ರೇಷ್ಠ ಕಾವ್ಯ' ಎಂಬ ಸಾಂಸ್ಕೃತಿಕ ಹುನ್ನಾರವೂ ಬೇಂದ್ರೆ, ಕುವೆಂಪು ಕಾವ್ಯವೂ...,

ನಾರಾಯಣ ಸ್ವಾಮಿ ಕೆ.ವೈ ಅವರ 'ನೆನೆವ ಪರಿ' ಕೃತಿಯು ೨೦೧೦ರಲ್ಲಿ ಬರಹ ಪಬ್ಲಿಷಿಂಗ್ ಹೌಸ್ ಮೂಲಕ ಪ್ರಕಟವಾಯಿತು. ಈ ಕೃತಿಯಲ್ಲಿ ಬೇಂದ್ರೆ ಅವರ ಸಾಹಿತ್ಯ ಅಧ್ಯಯನ ಕುರಿತು 'ತುಂಬಿತ್ತು ಹಾಲಗೇರಿ : ಕೆಲವು ಅನಿಸಿಕೆಗಳು', 'ಶ್ರೇಷ್ಠ ಕಾವ್ಯ ಎಂಬ ಸಾಂಸ್ಕೃತಿಕ ಹುನ್ನಾರವೂ ಬೇಂದ್ರೆ, ಕುವೆಂಪು ಕಾವ್ಯವೂ' ಎಂಬ ಲೇಖನಗಳು ಪುಟ ಸಂಖ್ಯೆ ೮೯ರಿಂದ ೧೦೦ರವರೆಗೆ ಪ್ರಕಟವಾಗಿವೆ. ಈ ಲೇಖನಗಳಲ್ಲಿ 'ತುಂಬಿತ್ತು ಹಾಲಗೇರಿ : ಕೆಲವು ಅನಿಸಿಕೆಗಳು' ಲೇಖನವು ಜೀವ ಪ್ರವಾಹಕ್ಕೆ ಸಿಕ್ಕಿದ ಕೊನೆ ಸಾರ್ಥಕ ಕವನವಾಗಿ 'ಅಂದ ತುಂಬಿದ ಹಾಲಗೇರಿ' ಕಂಡುಬರುತ್ತದೆ. ಇದು 'ಅನುಭಾವ'ದ ಕವಿತೆ ಎಂಬುದಾಗಿ ಅಧ್ಯಯನಮಾಡಿದ್ದಾರೆ. 'ಶ್ರೇಷ್ಠ ಕಾವ್ಯ ಎಂಬ ಸಾಂಸ್ಕೃತಿಕ ಹುನ್ನಾರವೂ ಬೇಂದ್ರೆ, ಕುವೆಂಪು ಕಾವ್ಯವೂ' ಎಂಬ ಲೇಖನವು ಕುವೆಂಪು-ಬೇಂದ್ರೆ ಕಾವ್ಯಗಳ ಅಧ್ಯಯನದಲ್ಲಿ ನಾವು ಈವರೆಗೆ ಈ ನಿರೂಪಣೆಗಳನ್ನು ರೂಪಿಸಿ ನಿಯಂತ್ರಿಸುತ್ತಿರುವ

ಪ್ರಜ್ಞಾವಲಯಗಳನ್ನು ಶೋಧಿಸಿ ಅವುಗಳ ಹಿನ್ನಲೆಯಲ್ಲಿ ಚರ್ಚಿಸಿಲ್ಲದಿರುವುದು ಮುಖ್ಯವಾದ ಕೊರತೆ ಎಂದು ಪರಸ್ಪರ ಭಿನ್ನ ದೃಷ್ಟಿಕೋನದಲ್ಲಿ ವಿಮುಖವಾಗುವ ಈ ಕವಿಗಳು ಮನೋಲೋಕದಿಂದ ಲೋಕದೃಷ್ಟಿಯ ಕಡೆಗೆ ಚಲಿಸುವುದಿಲ್ಲವೆಂದು ಸ್ಪಷ್ಟಪಡಿಸಿದ್ದಾರೆ.

೫೬. ೨೦೧೦., ಹೆಗಡೆ ಜಿ. ಎಂ., ವಿಮರ್ಶಾ ವಿವೇಕ., ಬೇಂದ್ರೆ ಮರಾಠಿ ಸಾಂಸ್ಕೃತಿಕ ಸಂಬಂಧ

'ವಿಮರ್ಶಾ ವಿವೇಕ' ಕೃತಿಯು ಹೆಗಡೆ ಜಿ.ಎಂ ಅವರ ವಿವಿಧ ವಿಮರ್ಶೆಗಳ ಸಂಕಲನ. ಈ ಕೃತಿಯು ರಂಜನಾ ಪ್ರಕಾಶನ, ಧಾರವಾಡ ಇವರ ಮೂಲಕ ಪ್ರಕಟಗೊಂಡಿದೆ. ಈ ಕೃತಿಯಲ್ಲಿ ಬೇಂದ್ರೆ ಸಾಹಿತ್ಯ ಅಧ್ಯಯನ ಕುರಿತು 'ಬೇಂದ್ರೆ ಮರಾಠಿ ಸಾಂಸ್ಕೃತಿಕ ಸಂಬಂಧ' ಎಂಬ ಲೇಖನವು ಪುಟಸಂಖ್ಯೆ ೩೫ರಿಂದ ೪೩ರವರೆಗೂ ಈ ಲೇಖನವು ನಾಲ್ಕು ನೆಲೆಯಲ್ಲಿ ಬೇಂದ್ರೆ ಅವರಿಗೆ ಮರಾಠಿ ಭಾಷೆಯ ಸಾಂಸ್ಕೃತಿಕ ಸಂಬಂಧ ಗುರ್ತಿಸಿದ್ದಾರೆ. ೧. ಅವರು ಕವಿತೆಗಳ ಮೂಲಕ ತಮ್ಮ ಸೃಜನಾತ್ಮಕ ಸಂವೇದನೆಯನ್ನು ಪ್ರಕಟಿಸಿದರು ೨. ಕನ್ನಡ ಮರಾಠಿ ಸಾಹಿತ್ಯದ ತೌಲನಿಕ ಅಧ್ಯಯನಕ್ಕೆ ನೆಲೆ ಕಲ್ಪಿಸಿದರು ೩. ಕನ್ನಡ ಮರಾಠಿ ಸಾಂಸ್ಕೃತಿಕ ಬಾಂಧವ್ಯವನ್ನು ಅಭಿವೃದ್ಧಿ ಪಡಿಸಿದರು. ೪. ಕನ್ನಡ ಮರಾಠಿ ಭಾಷಿಕ ಸಂಬಂಧವನ್ನು, ಸ್ನೇಹ ಪರಂಪರೆ ಅಭಿವೃದ್ಧಿ ಪಡಿಸಲು ಶ್ರಮಿಸಿದರು ಈ ನಾಲ್ಕು ಆಯಾಮದಲ್ಲಿ ಲೇಖನವನ್ನು ಚರ್ಚಿಸಿದ್ದಾರೆ.

೫೭. ೨೦೧೧., ಆಶಾದೇವಿ. ಎಂ. ಎಸ್., ನಡುವೆ ಸುಳಿವ ಆತ್ಮ., ಸಖೀಗೀತ : ಮೃಣ್ಮಯ ದಾಂಪತ್ಯ-ಚಿನ್ಮಯ ಸಖ್ಯ

'ನಡುವೆ ಸುಳಿವ ಆತ್ಮ' ಕೃತಿಯು ೨೦೧೧ರಲ್ಲಿ ಅಹರ್ನಿಶಿ ಪ್ರಕಾಶನದ ಮೂಲಕ ಪ್ರಕಟವಾಗಿದೆ. ಈ ಕೃತಿಯಲ್ಲಿ ಎಂ. ಎಸ್. ಆಶಾದೇವಿ ಅವರು ಬೇಂದ್ರೆ ಅವರ 'ಸಖೀಗೀತ' ಕುರಿತು ಸ್ತ್ರೀ ಚಿಂತನೆಗಳನ್ನು ಅಭಿವ್ಯಕ್ತಪಡಿಸಿದ್ದಾರೆ. ಇಲ್ಲಿ ಬೇಂದ್ರೆ ಅವರ ಸಂವೇದನೆಯ ವಿಚಾರ ಕುರಿತು ಈಗಾಗಲೇ ನಡೆದಿರುವ ಚರ್ಚೆಗಳನ್ನು ಸ್ತ್ರೀವಾದಿ ನೆಲೆಯ ದೃಷ್ಟಿಕೋನದಿಂದ ಮುಂದುವರೆಸಿದ್ದಾರೆ. ಈ ಲೇಖನವು ದಿನಾಂಕ ೧೨-೦೪-೨೦೦೬ರಲ್ಲಿ ದ.ರಾ ಬೇಂದ್ರೆ ರಾಷ್ಟ್ರೀಯ ಟ್ರಸ್ಟ್, ಧಾರವಾಡ ಇವರು ಆಯೋಜಿಸಿದ ಲಕ್ಷ್ಮೀಬಾಯಿ ದತ್ತಾತ್ರೇಯ ಬೇಂದ್ರೆ ಜನ್ಮ ಶತಮಾನೋತ್ಸವ ಸ್ಮರಣೆ ಕಾರ್ಯಕ್ರಮದಲ್ಲಿ ನೀಡಿದ ಉಪನ್ಯಾಸವಾಗಿದೆ. 'ನಡುವೆ ಸುಳಿವ ಆತ್ಮ' ಕೃತಿಯಲ್ಲಿ ಪುಟ ೩೧ರಿಂದ ೩೮ರವರೆಗೆ ಈ ಲೇಖನ ಕಂಡುಬರುತ್ತದೆ.

೫೮. ೨೦೧೨., ಡಿ.ವಿ.ಪ್ರಹ್ಲಾದ್(ಸಂ)., ಸಂಚಯ

ಡಿ.ವಿ.ಪ್ರಹ್ಲಾದ್ ಅವರ ಸಂಪಾದಕತ್ವದಲ್ಲಿ ಬರುವ ದ್ವೈಮಾಸಿಕ 'ಸಂಚಯ' ಪತ್ರಿಕೆಯ ಸಂಚಿಕೆ ೯೭ರ ಮಾರ್ಚ್-ಎಪ್ರಿಲ್ ೨೦೧೨ರಲ್ಲಿ ಕೆ.ಸಿ. ಶಿವಾರೆಡ್ಡಿ ಅವರ 'ನಾಟಕ ತತ್ತ್ವ : ಬೇಂದ್ರೆ ಚಿಂತನೆ' ಲೇಖನ ಪ್ರಕಟವಾಗಿದೆ. ಬೇಂದ್ರೆ ಅವರ ಸಾಹಿತ್ಯದ ವಿರಾಟ್ ಸ್ವರೂಪದಲ್ಲಿ ನಾಟಕ ಸಾಹಿತ್ಯ ಕುರಿತು ಇರುವ ೧೫ಲೇಖನಗಳನ್ನು ಆಕರವಾಗಿ ಬಳಸಿಕೊಂಡು ಬೇಂದ್ರೆ ಅವರ ನಾಟಕ ಸಾಹಿತ್ಯದ ಚಿಂತನೆಯನ್ನು ಈ ಲೇಖನದಲ್ಲಿ ನಿರೂಪಿಸಿದ್ದಾರೆ.

೫೯. ೨೦೧೪., ಶ್ವೇತಾ ಎಂ.ಬಿ., ಪಥ್ಯ ಪ್ರೀತಿ., ಬೆಳಗು 'ಟಿಪ್ಪಣಿ', ಬೇಂದ್ರೆ ಬದುಕಿನ ಭಾವಗೀತ : ಸಖೀಗೀತ

ಶ್ವೇತಾ ಎಂ.ಬಿ ಅವರ 'ಪಥ್ಯ ಪ್ರೀತಿ' ಕೃತಿಯನ್ನು ಅವಿರತ ಪುಸ್ತಕ, ಬೆಂಗಳೂರು ಇವರು ಪ್ರಕಟಿಸಿದ್ದಾರೆ. ಈ ಕೃತಿಗೆ ಕೆ.ಎಸ್. ಮಧುಸೂದನ್ ಅವರು ಮುನ್ನುಡಿ ರಚಿಸಿದ್ದಾರೆ. ಈ ಕೃತಿಯನ್ನು ಕಿ.ರಂ.ನಾಗರಾಜ ಇವರಿಗೆ ಅರ್ಪಿಸಲಾಗಿದೆ. ಈ ಕೃತಿಯಲ್ಲಿ ಹದಿನೈದು ಲೇಖನಗಳಿವೆ. ಹನ್ನೆರಡು ಶಿಷ್ಟ ಸಾಹಿತ್ಯದ

ವಿವಿಧ ಪ್ರಕಾರಗಳಿಗೆ ಸಂಬಂಧಿಸಿವೆ. ಉಳಿದ ಮೂರು ಲೇಖನಗಳು ಜಾನಪದ ವಿಷಯಗಳಿಗೆ ಸಂಬಂಧಿಸಿವೆ. ಬೇಂದ್ರೆ ಅವರ ಸಾಹಿತ್ಯ ಕುರಿತು ಎರಡು ಲೇಖನಗಳಿವೆ. 'ಬೆಳಗು ಟಿಪ್ಪಣಿ', 'ಬೇಂದ್ರೆ ಬದುಕಿನ ಭಾವಗೀತ : ಸಖೀಗೀತ' ಈ ಎರಡೂ ಲೇಖನಗಳ ಮೂಲಕ ಸೂಕ್ಷ್ಮ ಅವಲೋಕನೆಯ ವಿಮರ್ಶೆ ನೀಡಿದ್ದಾರೆ.

೬೦. ೨೦೧೪., ಪ್ರತಿಸ್ಪಂದ., ರವಿಶಂಕರ ಎ.ಕೆ., ಬೇಂದ್ರೆ ಕಾವ್ಯದಲ್ಲಿ ಒಲವಿನ ಚೆಲುವು, ಚೈತನ್ಯ

ಪ್ರತಿಸ್ಪಂದ ಪತ್ರಿಕೆಯು ಸಾಹಿತ್ಯ-ಸಂಸ್ಕೃತಿಯ ಮಾಸಿಕ ಪತ್ರಿಕೆಯಾಗಿ(ಸಂಪುಟ ೨, ಸಂಚಿಕೆ ೧, ಜನವರಿ ೨೦೧೪) ಕೆ.ಆರ್. ಬಸವರಾಜು ಇವರ ಸಂಪಾದಕತ್ವದಲ್ಲಿ ಪ್ರಕಟವಾಗಿದೆ. ಈ ಪತ್ರಿಕೆಯಲ್ಲಿ ಬೇಂದ್ರೆ ಸಾಹಿತ್ಯ ಅಧ್ಯಯನ ಕುರಿತು 'ಬೇಂದ್ರೆ ಕಾವ್ಯದಲ್ಲಿ ಒಲವಿನ ಚೆಲುವು, ಚೈತನ್ಯ' ಎಂಬ ಲೇಖನವನ್ನು ರವಿಶಂಕರ ಎ.ಕೆ ಅವರು ರಚಿಸಿದ್ದಾರೆ. ಈ ಲೇಖನವು ಬೇಂದ್ರೆ ಅವರ ಕಾವ್ಯದಲ್ಲಿ ಒಲವಿನ ಕವಿತೆಗಳು ಚೆಲುವಿನ ಅನಾವರಣ ಹಾಗೂ ಚೈತನ್ಯ ತುಂಬುವ ಬಗೆಯನ್ನು ಪರಿಶೀಲಿಸಲಾಗಿದೆ.

೬೧. ೨೦೧೫., ಡಿ.ವಿ.ಪ್ರಹ್ಲಾದ್(ಸಂ)., ಸಂಚಯ., ಅಂತಃಸ್ಫುರಣದಿಂದ ಬಂದ ಕವಿತೆಗಳು., ಬೇಂದ್ರೆ ಅವರ ಜೋಗಿ ಮತ್ತು ಕುರುಡು ಕಾಂಚಾಣ., ಬೇಂದ್ರೆಯವರ ಅನಂತ ಪ್ರಣಯ

ಡಿ.ವಿ.ಪ್ರಹ್ಲಾದ್ ಅವರ ಸಂಪಾದಕತ್ವದಲ್ಲಿ ತ್ರೈಮಾಸಿಕ 'ಸಂಚಯ' ಪತ್ರಿಕೆ(ಸಂಚಿಕೆ ೧೦೬, ಜನವರಿ-ಮಾರ್ಚ್ ೨೦೧೫) ಮೂಡಿಬಂದಿದೆ. ಈ ಪತ್ರಿಕೆಯಲ್ಲಿ ಬೇಂದ್ರೆ ಸಾಹಿತ್ಯ ಕುರಿತು ಕುಸುಮಾಕರ ದೇವರಗೆಣ್ಣೂರ ಅವರ 'ಅಂತಃಸ್ಫುರಣದಿಂದ ಬಂದ ಕವಿತೆಗಳು', 'ಬೇಂದ್ರೆ ಅವರ ಜೋಗಿ ಮತ್ತು ಕುರುಡು ಕಾಂಚಾಣ' ಹಾಗೂ ವಿಶ್ವ ಸ್ಯಾನ್‌ರಮೋನ್, ಕ್ಯಾಲಿಫೋರ್ನಿಯಾ ಅವರ 'ಬೇಂದ್ರೆಯವರ 'ಅನಂತ ಪ್ರಣಯ' ಈ ಮೂರು ಲೇಖನಗಳು ಸೇರಿವೆ.

೬೨. ೨೦೧೬., ಕರ್ಮವೀರ., ಬೇಂದ್ರೆ ೧೨೦ ವರಕವಿಯ ದಿವ್ಯ ಸ್ಮರಣೆ ಅವರಿಗೆ ನಾಡು ಕೊಟ್ಟಿದ್ದೇನು?

ಕರ್ಮವೀರ ಪತ್ರಿಕೆಯ ಸಂಪುಟ ೭೫, ಸಂಚಿಕೆ ೧೬, ೨೪-೦೧-೨೦೧೬ರ ಪತ್ರಿಕೆಯಲ್ಲಿ ಬೇಂದ್ರೆ ಕುರಿತು ಸಂಗಮೇಶ ತಮ್ಮನಗೌಡ್ರ ಇವರು 'ಬೇಂದ್ರೆ ೧೨೦ ವರಕವಿಯ ದಿವ್ಯ ಸ್ಮರಣೆ ಅವರಿಗೆ ನಾಡು ಕೊಟ್ಟಿದ್ದೇನು?' ಎಂಬ ಲೇಖನ ರಚಿಸಿದ್ದಾರೆ. ಬೇಂದ್ರೆ ಸಾಹಿತ್ಯವು ಪ್ರಸ್ತುತ ನಮ್ಮ ಸಮಾಜದಲ್ಲಿ ವಿಸ್ತರಿಸಿಕೊಂಡಿರುವ ಬಗೆಯನ್ನು ತಿಳಿಸಿದ್ದಾರೆ.

೬೩. ೨೦೧೯., ಪ್ರಜಾವಾಣಿ., ಜ.ನಾ. ತೇಜಶ್ರೀ ನೂರು ವರ್ಷದ 'ಬೆಳಗು'

ಪ್ರಜಾವಾಣಿ ಭಾನುವಾರ ೦೭, ಜುಲೈ ೨೦೧೯ರ ಭಾನುವಾರ ಪುರವಣಿಯಲ್ಲಿ ಬೇಂದ್ರೆ ಸಾಹಿತ್ಯವನ್ನು ಕುರಿತು ಜ.ನಾ. ತೇಜಶ್ರೀ ಅವರ ಲೇಖನ 'ನೂರು ವರ್ಷದ 'ಬೆಳಗು'' ಪ್ರಕಟವಾಗಿದೆ. ಬೇಂದ್ರೆ ಅವರು ರಚಿಸಿದ 'ಬೆಳಗು' ಕವಿತೆಗೆ ನೂರು ವರ್ಷಗಳು ತುಂಬಿದ ಹಿನ್ನಲೆಯಲ್ಲಿ ಈ ಲೇಖನದ ಮೂಲಕ ಕವಿತೆಯ ಹೊಸ ಆಯಾಮಗಳನ್ನು ಕುರಿತು ಚರ್ಚಿಸಿದ್ದಾರೆ.

* * * * *